ಮೈಸೂರು ಜಿಲ್ಲಾ ಅಮೆಚೂರ್ ಆರ್ಟಿಸ್ಟ್ಸ್ ಅಸೋಸಿಯೇಷನ್ನಿನ ಸಾಂಸ್ಕೃತಿಕ ಶಾಖೆಯ ಆಶ್ರಯದಲ್ಲಿ ಇದೇ ೧೯ ರಿಂದ ೨೧ ರ ವರೆಗೆ ಕ್ರಾಫರ್ಡ್ ಹಾಲಿನಲ್ಲಿ ಕಲಾ ಮೇಳವೊಂದನ್ನು ಏರ್ಪಡಿಸಲಾಗಿದೆ. ಈ ಉತ್ಸವಗಳಲ್ಲಿ ಚಿತ್ರ ಸಂಗೀತ ಭಾರತ ನಾಟ್ಯ, ವಾದ್ಯ ಸಂಗೀತ ಮತ್ತು ಶರೀರ ಪ್ರದರ್ಶನಗಳು ನಡೆಯುವುವು. ಈ ಉತ್ಸವಗಳಿಗೆ ಪ್ರವೇಶವನ್ನು ಟಿಕೆಟ್ ಮೂಲಕ ವ್ಯವಸ್ಥೆ ಮಾಡಲಾಗಿದೆ.

ಹರಿಶ್ಚಂದ್ರ ಕಾವ್ಯ ವಾಚನ

ಮೈಸೂರಿನ ಗಮಕ ಸೋದರರಾದ ಶ್ರೀ ಬಿ ಎಸ್ ಎಸ್ ಕೌಶಿಕ್ ಮತ್ತು [illegible] ವೆಂಕಟಸುಬ್ಬಯ್ಯನವರು ದ ಅಭಿನವ ಶಂಕರಾಲಯದಲ್ಲಿ [illegible] ತಿಂಗಳಿಂದಲೂ ಮಹಾಜನಗಳ ಪ್ರೋತ್ಸಾಹದಿಂದ ನಡೆಸಲ್ಪಡುತ್ತಿರುವ ಭಾರತ ವಾಚನದ ಸಂದರ್ಭದಲ್ಲಿ ಈಗ ಹರಿಶ್ಚಂದ್ರ ಕಾವ್ಯ ವಾಚನವು ನಡೆಯುತ್ತಿದೆ. ಬೆಸ್ತಾದಿಗಳು [illegible] ಯ ಮಾಡಬೇಕಾಗಿ ಕೋರಿದೆ.

SRI GAYATHRI TALKIES

From 16-2-54 For 3 Days

Paramount's

ADVENTURE JAMAICA REEF

(In Technicolor)

Starring —Ray Milland

Arlene Dahl

Edited, Printed and Published by A R Nagarajan at Sadhvi Press, D Subbiah Road, Mysore

ಮಿರ್ಜಾರವರೊಡನೆ ಐವರು ಅಮೆರಿಕಾ ರಾಯಭಾರಿಗಳ ಭೇಟಿ

ಕೊಲಂಬೋದಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಭಾಗವಹಿಸಿ ಹಿಂತಿರುಗಿದ ಐದು ಜನ ಅಮೆರಿಕಾ ರಾಯಭಾರಿಗಳು ನೆನ್ನೆ ಬೆಂಗಳೂರಿನಲ್ಲಿ ಸರ್ ಮಿರ್ಜಾ ಇಸ್ಮಾಯಿಲರನ್ನು ಭೇಟಿ ಮಾಡಿ ದೆಹಲಿಗೆ ಪ್ರಯಾಣ ಬೆಳೆಸಿದರು.

ಪಕ್ಷಗಳ ವೈರದಿಂದ ಕಾಲು ಕತ್ತರಿಸಿದ ಪ್ರಸಂಗ

ಭದ್ರಾವತಿಯ ಹಳೇ ಊರಿನಲ್ಲಿ ಎರಡು ಪಕ್ಷಗಳಿಗೆ ಉಂಟಾದ ವೈರದ ಪರಿಣಾಮವಾಗಿ ಒಂದು ಪಕ್ಷಕ್ಕೆ ಸೇರಿದ ನಾಗೇಂದ್ರಪ್ಪನ್ ಎಂಬಾತನು ತನ್ನ ದೇಗುಲ? ಜನ್ನಗಿರಿ ಹತ್ತಿರ [illegible] ಹೋಗುತ್ತಿದ್ದಾಗ ಮತ್ತೊಂದು ಪಕ್ಷದವರು ಭಾರಿ ಕಲ್ಲನ್ನು ಎತ್ತಿ ಹಾಕಿ ಅವರ ಕಾಲನ್ನು ಕತ್ತರಿಸಿದರೆಂದು ವರದಿಯಾಗಿದೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ಪೈ
ತೊಗರಿಕಾಳು	[illegible]	[illegible]
ಎಳ್ಳು	[illegible]	[illegible]
ತೊಗರಿಬೇಳೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಕಡಲೆಬೇಳೆ	[illegible]	[illegible]
ಹುರುಳಿಬೇಳೆ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಉದ್ದು	[illegible]	
ಹಲಸಂದೆ	[illegible]	[illegible]
ಧನಿಯ	[illegible]	[illegible]
ಹೆಸರಿನ ಬೇಳೆ	[illegible]	[illegible]
ಕಡಲೆ	[illegible]	[illegible]
ಕಡಲೆ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible]
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ ೧೦೦೦	[illegible]	[illegible]

In Aid of

BLIND, DEAF & DUMB

ARTS' FESTIVAL

AT

CRAWFORD HALL Mysore

On 19th, 20th & 21st Feb 1954

Daily at 5-30 P. M

TICKETS -

Season Rs 2.8.0 1.8.0 1.0.0

Daily - 1.8 0 0 12.0 0.8.0

ನಗರಾಭಿವೃದ್ಧಿ ಸಮಿತಿ, ಮೈಸೂರು

ಟೆಂಡರು ನೋಟೀಸು

ನಂ DB. C 101/53-54

ತಾ|| 8-2-1954

ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಅಂಡರ್ ಗ್ರೌಂಡ್ ಸೂಯರ್ ಕೆಲಸಗಳನ್ನು ರೂ 6,00,000 ಅಂದಾಜು ವೆಚ್ಚದಲ್ಲಿ (ಆರು ಲಕ್ಷ ರೂ ಗಳು ಮಾತ್ರ ಕಾಂಗಾರಿ ವಿಭಾಗಕ್ಕಾಗಿ ರೂ 67,225) ನಡೆಸಲು ಇದೇ 1954 ನೇ ಫೆಬ್ರವರಿ 22ನೇ ತಾರೀಖು ಸೋಮವಾರ ಮಧ್ಯಾಹ್ನ 3 ಘಂಟೆ ವರೆಗೆ ಮೈಸೂರು ನಗರಾಭಿವೃದ್ಧಿ ಸಮಿತಿ ಇಂಜನಿಯರವರು ಮೊಹರಾದ ಟೆಂಡರುಗಳನ್ನು ಸ್ವೀಕರಿಸುವರು. ಪ್ರತಿಯೊಂದು ಟೆಂಡರಿನೊಡನೆಯೂ, ಟ್ರಾನ್ಸ್‌ಫರ್ ಮಾಡಬಹುದಾದ 500 ರೂ ಡಿಪಾಜಿಟ್ ಮಾಡಿದ ಬಗ್ಗೆ ಚಲನ್ನನ್ನು ಲಗತ್ತಿಸಿ ಕಳುಹಿಸಬೇಕು. ಅಂದಾಜು ಮತ್ತು ಪ್ಲಾನುಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಲಸದ ದಿನ ಮತ್ತು ವೇಳೆಗಳಲ್ಲಿ ನಗರಾಭಿವೃದ್ಧಿ ಸಮಿತಿ ಕಛೇರಿಯಲ್ಲಾಗಲೀ, ಅಥವಾ 1954 ನೇ ಫೆಬ್ರವರಿ 11 ಮತ್ತು 18ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಾಗಲೀ ನೋಡಬಹುದು.

(ರುಜು) ಎಸ್ ರಂಗಯ್ಯ

ಅಧ್ಯಕ್ಷರು

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಬಿಡಿಪ್ರತಿ ಪತ್ರಿಕೆ 3 ಕಾಸು

ಲಗ್ನದ ಜವಳಿಗಳು
ಮೈಸೂರು ಗವರ್ನಮೆಂಟ್ ಸಿಲ್ಕ್ ಸೀರೆಗಳು, ಧರ್ಮಾವರಂ, ಪೂನಾ, ನಾಗಪುರ ... ವಗೈರೆ ...
M. V. ಭೋಜಯ್ಯ
ಬಿನ್ ...
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ ...

ಸಾಧ್ವಿ

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೬೨] MYSORE WEDNESDAY 17 2-1954 : ಮೈಸೂರು : ಬುಧವಾರ ೧೭ ೨-೧೯೫೪ [ಸಂಚಿಕೆ ೧೮೮

ಕಲ್ಕತ್ತದಲ್ಲಿ ಗಲಭೆಕಾರರ ಮೇಲೆ ಗುಂಡು; ೩ ಮರಣ

ಕಲ್ಕತ್ತಾ ಗಲಭೆಕಾರರ ಮೇಲೆ ಲಾಠಿ, ಅಶ್ರುವಾಯು, ಗುಂಡು

೩ ಜನರ ಮರಣ, ೬೦ ಜನರಿಗೆ ಗಾಯ ಮತ್ತು ೩೩೦ ಜನರ ದಸ್ತಗಿರಿ

ಕಲ್ಕತ್ತೆಯಲ್ಲಿ ನೆನ್ನೆ ನಡೆದ ಗಲಭೆಗಳನ್ನು ಅಡಗಿಸಲು ಪ್ರದರ್ಶನಕಾರರ ಮೇಲೆ ಧಾಳಿಗಳನ್ನು ಮಾಡಿ, ಅಶ್ರುವಾಯು ಷೆಲ್‌ಗಳನ್ನು ಪ್ರಯೋಗಿಸಿದನಂತರ ಗುಂಡನ್ನು ಹಾರಿಸಲಾಯಿತೆಂದೂ, ಇದರ ಪರಿಣಾಮವಾಗಿ ೩ ಜನರು ಮಡಿದು, ೬೦ ಮಂದಿಗೆ ಗಾಯಗಳಾದವೆಂದೂ ವರದಿಯಾಗಿದೆ. ಬಂಗಾಳದ ಉಪಾಧ್ಯಾಯರುಗಳ ಮುಷ್ಕರದ ಏಳನೇ ದಿನವಾದ ನೆನ್ನೆ ಕಲ್ಕತ್ತದಲ್ಲಿ ಗಲಭೆಯಾಗಿ ಪರಿಸ್ಥಿತಿಯು ಹತೋಟಿ ಮೀರಿದುದರಿಂದ ಸರ್ಕಾರದವರು ಮಿಲಿಟರಿ ಸಹಾಯವನ್ನು ಕೋರಿದರು. ಕಲ್ಕತ್ತಾದಲ್ಲೆಲ್ಲಾ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ.

ಮಿಲಿಟರಿಯವರ ಸಹಾಯ ಬಂದಮೇಲೆ ನೆನ್ನೆ ಮಧ್ಯರಾತ್ರಿ ಪರಿಸ್ಥಿತಿಯು ಹತೋಟಿಗೆ ಬಂತೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ.

ಸರ್ಕಾರದ ಸುಮಾರು ೧೩ ಬಸ್ಸುಗಳು ೬ ಟ್ರಾಂ ಗಾಡಿಗಳಿಗೆ ಬೆಂಕಿ ಹಚ್ಚಲಾಯಿತು. ಒಂದು ಟ್ರಾಂ ಗಾಡಿಯು ಪೂರ್ತಿಯಾಗಿ ಸುಟ್ಟಿದೆ. ಅನೇಕ ಪೊಲೀಸು ವ್ಯಾನುಗಳು ನಷ್ಟ ಹೊಂದಿದುವು. ಒಂದಕ್ಕೆ ಬೆಂಕಿ ಹತ್ತಿಸಲಾಗಿದ್ದಿತು. ಒಬ್ಬ ಪೊಲೀಸು ಅಧಿಕಾರಿಯ ಮೇಲೆ ಜನರ ಗುಂಪು ಬಿದ್ದು ಅವರನ್ನು ಹೊಡೆದುದಾಗಿ ಹೇಳಲಾಗಿದೆ.

ಊರಿನಲ್ಲಿ ದೀಪವಿರಲಿಲ್ಲ

ಪ್ರದರ್ಶನಕಾರರು ವಿದ್ಯುಚ್ಛಕ್ತಿ ತಂತಿಗಳನ್ನು ಕತ್ತರಿಸಿ, ಊರಿನ ಅನೇಕ ಭಾಗಗಳಲ್ಲಿ ದೀಪವಿಲ್ಲದಂತೆ ಮಾಡಿದ್ದರೆಂದೂ ಹೇಳಲಾಗಿದೆ.

ಪೊಲೀಸರಿಗೂ ಜನರಿಗೂ ತಿಕ್ಕಾಟ

ರಾಜಭವನದ ಎಡ ಬಗಡೆಯಿಂದ ೩೦೦೦೦ ಜನರ ಭಾರಿ ಗುಂಪು ಅಸೆಂಬ್ಲಿ ಭವನದ ಕಡೆ ಹೋಗುತ್ತಿದ್ದಾಗ, ಪೊಲೀಸರು ತಡೆದು ಅನೇಕ ಅಶ್ರುವಾಯು ಷೆಲ್ಲುಗಳನ್ನು ಎಸೆದರೆಂದೂ ಪೊಲೀಸರ ಮೇಲೆ ಹಲವರು ಕಲ್ಲುಗಳನ್ನು ಬೀರಿದರೆಂದೂ ವರದಿಯಾಗಿದೆ. ಶಾಸನ ಸಭೆಯ ಮುಂದೆ ಮುಷ್ಕರ ನಡೆಸುತ್ತಿರುವ ಉಪಾಧ್ಯಾಯರ ಪರವಾಗಿ ಪ್ರದರ್ಶನ ನಡೆಸುತ್ತಿರುವುದಾಗಿ ಜನರು ಘೋಷಿಸಿದ್ದರು.

ಅರ್ಧ ಗಂಟೆಕಾಲ ಎರಡು ಕಡೆಯವರಿಗೂ ಹೋರಾಟಗಳು ನಡೆದುವು. ಅಶ್ರುವಾಯು ಷೆಲ್ ಧಾಳಿಯಿಂದ ಉಂಟಾದ ಹೊಗೆ ಮತ್ತು ಜನರ ಕಲ್ಲೇಟುಗಳನ್ನು ತಾಳಲಾರದೆ, ಪೊಲೀಸರ ಕುದುರೆಗಳು ಹತೋಟಿ ಮೀರುತ್ತಿದ್ದುವೆಂದು ಹೇಳಲಾಗಿದೆ.

ಪೊಲೀಸರ ಮೇಲೂ ಅಶ್ರುವಾಯು

ಜನ ಸಮೂಹದ ಮೇಲೆ ಎಸೆದು, ಸಿಡಿಯದಿದ್ದ ಅಶ್ರುವಾಯು ಬಾಂಬುಗಳನ್ನು ಜನರು ವಾಪಸು ಪೊಲೀಸರ ಮೇಲೆ ಎಸೆದು ಅಶ್ರು ಸುರಿಸಿದ ಪ್ರಕರಣಗಳೂ ನಡೆದುವು.

೩೦೦೦ ನಿರಾಶ್ರಿತರ ಬಳಿ ಸರ್ಕಾರಿ ಬಸ್ಸೊಂದರ ಮೇಲೆ ಜನರು ಧಾಳಿ ನಡೆಸಿದಾಗ ಪೊಲೀ

ವಿಶೇಷ ಚೀಫ್ ಇಂಜನಿಯರ ನಿವೃತ್ತಿ

ಸ್ವಂ ಸು ಫೋ] ಬೆಂಗಳೂರು, ೧೬

ತುಂಗಭದ್ರಾ ಯೋಜನೆಯ ಸಂಬಂಧವಾಗಿ ವಿಶೇಷ ಚೀಫ್ ಇಂಜನಿಯರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಕೆ. ಆರ್. ಬ್ರಹ್ಮಣ್ಯನವರು ವಯಸ್ಸು ಮೀರಿದ ನಿಮಿತ್ತ ಈ ತಿಂಗಳು ೨೦ನೇ ತಾರೀಖಿನಿಂದ ನಿವೃತ್ತಿಗೊಳಿಸಲಾಗುವುದು.

ದೆಹಲಿಯ ಕೇಂದ್ರ ಸರ್ಕಾರದ ಕಛೇರಿ ಭವನದಲ್ಲಿ ಬೆಂಕಿ

ದೆಹಲಿಯಲ್ಲಿರುವ ಕೇಂದ್ರ ಸರ್ಕಾರದ ಕಛೇರಿಯ ಭವನದಲ್ಲಿ ನೆನ್ನೆ ಬೆಂಕಿ ಅನಾಹುತವುಂಟಾಗಿ ಹಣಕಾಸಿನ ಇಲಾಖೆಯ ಅನೇಕ ಮುಖ್ಯ ಕಾಗದಪತ್ರಗಳ ಕಡತಗಳು ಸುಟ್ಟುವು. ಬೇರೆ ವಸ್ತುಗಳೂ ಸುಟ್ಟು ಹಾನಿ ಉಂಟಾಯಿತೆಂದು ತಿಳಿದುಬಂದಿದೆ. ಮಧ್ಯರಾತ್ರಿಯಲ್ಲಿ ವಿದ್ಯುಚ್ಛಕ್ತಿ ಷಾರ್ಟ್ ಸರ್ಕ್ಯೂಟ್ ಆಗಿ ಬೆಂಕಿಗೆ ಕಾರಣವಾಯಿತೆಂದು ಹೇಳಲಾಗಿದೆ. ... ಅಗ್ನಿ ... ಹೋರಾಟದಿಂದ ಬೆಂಕಿಯನ್ನು ... ಯಿತು. ಎಷ್ಟು ಹಾನಿಯಾಗಿದೆಯೆಂದು ಇನ್ನೂ ವ್ಯಕ್ತವಾಗಿಲ್ಲ.

ನಮ್ಮ ಲರಿ ಪ್ರತಿನಿಧಿವರು

ಶಾಂತಿಯುತ ಸತ್ಯಾಗ್ರಹ

ಉಪಾಧ್ಯಾಯರುಗಳ ಸಭೆಯ ಹೇಳಿಕೆಯೊಂದರಲ್ಲಿ ದಸ್ತಗಿರಿಯಾದ ಉಪಾಧ್ಯಾಯರ ಬಿಡುಗಡೆಯಾಗಿ ತಮ್ಮಗಳ ಬೇಡಿಕೆಯು ಪೂರೈಸುವವರೆಗೆ ಶಾಂತಿಯುತ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಿರುತ್ತದೆ.

ಕಲ್ಕತ್ತದ ಸರ್ಕಾರಿ ಕಛೇರಿಯ ಮುಂದೆ ಕಳೆದ ಏಳು ದಿನಗಳಿಂದ ಮುಷ್ಕರ ಹೂಡಿ ಕುಳಿತಿದ್ದ ಉಪಾಧ್ಯಾಯರುಗಳನ್ನೆಲ್ಲಾ ನೆನ್ನೆ ಪೊಲೀಸರು ದಸ್ತಗಿರಿ ಮಾಡಿ ಜೇಲೊಂದು ಕಡೆಗೆ ಸಾಗಿಸಿದರು. ಬಂಧಿತರಾದವರಲ್ಲಿ ೫೦ ಮಂದಿ ಸ್ತ್ರೀಯರೂ ಇರುವರು. ಒಟ್ಟು ೩೩೦ ಜನರ ದಸ್ತಗಿರಿಯಾಗಿದೆ. ಬಂಗಾಳ ಶಾಸನ ಸಭೆಯ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆಯನ್ನು ಪೊಲೀಸರು ಜಾರಿ ಮಾಡಿದ ತರುಣದಲ್ಲೇ, ಮುಷ್ಕರಕಾರರ ಮೇಲೆ ಹಠಾತ್ತನೆ ಧಾಳಿ ನಡೆಸಿ ಎಲ್ಲರನ್ನೂ ಬಂಧಿಸಿ, ಅಲ್ಲಿ ಪ್ರದರ್ಶನದ ಚಿಹ್ನೆಯೇ ಇಲ್ಲದಂತೆ ಮಾಡಿದರು. ೫ ದಿನಗಳಿಂದ ಅವರುಗಳು ಕ್ರೂತೆಡೆ ಬಿದ್ದಿದ್ದ ಕಸ್ಮಲಗಳನ್ನು ತೆಗೆಯಲು ವಿಶೇಷ ಚಾಡಮಾಲಿಗಳನ್ನು ನೇಮಿಸಲಾಗಿತ್ತು. ತಿಂದೆಸೆದಿದ್ದ ಕಿತ್ತಳೆ ಸಿಪ್ಪೆ, ಬಾಳೆ ಎಲೆ, ಮಡಕೆ ಕುಡಿಕೆ, ಗಾಜಿನ ಲೋಟ ಮುಂತಾದ ಪದಾರ್ಥಗಳು ರಾಶಿಯಾಗಿ ಬಿದ್ದಿದ್ದುವು. ೧೫ ನಿಮಿಷಗಳಲ್ಲಿ ಮಹಾ ಮುಷ್ಕರದ ಯಾವ ಗುರುತೂ ಇಲ್ಲದಂತೆ ಮಾಡಲಾಯಿತು.

ಪ್ರಾಂತಾದ್ಯಂತ ಮುಷ್ಕರವು ಇನ್ನೂ ನಿಂತಿಲ್ಲ. ಮುಂದೆ ಯಾವ ರೀತಿ ನಡೆಯಬೇಕೆಂಬ ವಿಷಯವನ್ನು ಉಪಾಧ್ಯಾಯರುಗಳ ಮುಖಂಡರು ಆಲೋಚಿಸುತ್ತಿರುವರು.

ಕಲ್ಕತ್ತಾ ಮತ್ತು ಹೊರಗಡೆ ಅನೇಕ ರಾಜಕೀಯ ಮುಖಂಡರುಗಳ ದಸ್ತಗಿರಿಗಳಾಗಿವೆ. ಆ ಪೈಕಿ ೩ ಜನ ಶಾಸನ ಸಭಾಸದಸ್ಯರೂ ಇರುವರು. ಅನೇಕ ಪ್ರಮುಖರ ಮನೆಗಳ ಶೋಧನೆಯಾಗಿದೆ.

ಸಂಸ್ಥಾನದ ಅಭಾವ ಪ್ರದೇಶಗಳಿಗಾಗಿ ಈ ವರ್ಷ ೩ ಕೋಟಿ ರೂ.

ಸ್ವಂ ಸು ಫೋ] ಬೆಂಗಳೂರು ೧೬

ಅಭಾವ ಪ್ರದೇಶಗಳಿಗೆ ಸಹಾಯ ನೀಡಲು ಕೇಂದ್ರ ಸರ್ಕಾರದವರು ತೆಗೆದಿಟ್ಟಿರುವ ೪೦ ಕೋಟಿ ರೂ ಗಳ ಪೈಕಿ ಮೈಸೂರು ಸರ್ಕಾರಕ್ಕೆ ಈ ವರ್ಷ ೩ ಕೋಟಿ ೫ ಲಕ್ಷ ರೂ ಗಳನ್ನು ಕೊಡಲಿರುವರೆಂದು ತಿಳಿದುಬಂದಿದೆ.

ಬಟ್ಟೆ ರಫ್ತಾರಿ ಸುಂಕದಲ್ಲಿ ಕಡಿತ

ಬಟ್ಟೆ ರಫ್ತಾರಿ ಸುಂಕವನ್ನು ಸರ್ಕಾರದವರು ಕಡಿಮೆ ಮಾಡಿ ಚಿಲ್ಲರೆ ವ್ಯಾಪಾರಕ್ಕೆ ವರ್ಷಕ್ಕೆ ೧೧೦ ರೂ ಬಟ್ಟೆ ವ್ಯಾಪಾರಕ್ಕೆ ೫೦ ರೂ. ಗಳಂತೆ ನಿಗದಿ ಮಾಡಿರುತ್ತಾರೆ.

ಉತ್ತರ ಆಸ್ಟ್ರೇಲಿಯದಲ್ಲಿ ಪ್ರವಾಹದ ಹಾವಳಿ

ಆಸ್ಟ್ರೇಲಿಯಾದ ಕ್ವೀನ್ಸ್‌ಲೆಂಡ್ ಪ್ರಾಂತದ ಉತ್ತರ ಭಾಗದಲ್ಲಿ ಪ್ರವಾಹವು ಹೆಚ್ಚಾಗಿ ರಾಕ್‌ಹ್ಯಾಂಪ್ಟನ್ ನಗರದಿಂದ ಅನೇಕ ಸಂಸಾರಗಳು ಮನೆಮಠಗಳನ್ನು ಬಿಟ್ಟುಹೋಗಿವೆ. ೭ ಜನರು ಮಡಿದರು. ಈ ನಗರದ ಸುತ್ತಲೂ ಪ್ರವಾಹದ ನೀರು ಆವರಿಸಿದೆ. ಮೊನ್ನೆ ಅಲ್ಲಿಗೆ ಬ್ರಿಟನ್ನಿನ ರಾಣಿಯವರು ಭೇಟಿಕೊಡುವ ಏರ್ಪಾಟು ಇದ್ದಿತು.

೪ ನಿಮಿಷ ಹೃದಯ ಚಲನೆ ನಿಂತ ಬಾಲಕನಿಗೆ ಪುನಃ ಜೀವ

ನಾಲ್ಕು ನಿಮಿಷಗಳ ಕಾಲ ಹೃದಯ ಚಲನೆಯು ನಿಂತಿದ್ದರೂ ಆಫ್ರಿಕದ ಒಂದು ಮಗುವು ಬದುಕಿರುವ ವಿಷಯವು ಡರ್ಬಾನಿನಿಂದ ವರದಿಯಾಗಿದೆ. ಮರಣೋನ್ಮುಖನಾಗಿದ್ದ ಬಾಲಕನ ಹೃದಯವನ್ನು ವೈದ್ಯರು ಉಜ್ಜಿ ಅದರಲ್ಲಿ ಚೈತನ್ಯವನ್ನುಂಟುಮಾಡಿದರು. ರಕ್ತವನ್ನು ಕೊಡುತ್ತಿದ್ದ ಕೊಳವೆಯನ್ನು ತೆಗೆಯಲೆತ್ನಿಸಿದಾಗ ಹೃದಯವು ಮತ್ತೆ ಆಡತೊಡಗಿತು.

ನಗರದಲ್ಲಿ ಮಕ್ಕಳ ಅಪಹಾರದ ಭೀತಿ

ಯಾವುದೋ ಒಂದು ಅಣೆಕಟ್ಟನ್ನು ಕಟ್ಟುವ ಸಂಬಂಧವಾಗಿ ನರಬಲಿ ಕೊಡಲು ಮಕ್ಕಳನ್ನು ಅಪಹರಿಸಲಾಗುತ್ತಿರುವುದೆಂದು ರಾಜಧಾನಿಯಲ್ಲಿ ಎರಡು ಮೂರು ದಿನಗಳಿಂದ ವದಂತಿಗಳು, ಟೆಲಿಫೋನ್ ದೂರುಗಳ ಕೇಳಿ ಬರುತ್ತಿವೆ. ನೆನ್ನೆ ಹುಟ್ಟಿನಂತಿದ್ದ ಒಬ್ಬ ಹಳ್ಳಿಯವನನ್ನು ಕಂಡ ಮಗುವೊಂದು ಹೆದರಿ ಕೂಗಿಕೊಳ್ಳಲು ಇವನ ಮಗುವನ್ನು ಅಪಹರಿಸಲು ಬಂದಿರುವನೆಂದು ಭಾವಿಸಿ ಪೊಲೀಸರ ವಶಪಡಿಸಲಾಯಿತು. ಅವನನ್ನು ನಂತರ ಬಿಟ್ಟುಬಿಡಲಾಯಿತು. ಅಪಹರಣದ ವಿಷಯವು ನಿಜವಲ್ಲವೆಂದು ಪೊಲೀಸರು ನಗರದಲ್ಲಿ ಟಾಂಟಾಂ ಮೂಲಕ ತಿಳಿಸಿ, ಜನರಿಗೆ ಧೈರ್ಯ ಹೇಳುತ್ತಾರೆ.

ಆಕಾಶವಾಣಿಯಲ್ಲಿ ಮುಡುಕುತೊರೆ ಜಾತ್ರೆ ಬಗ್ಗೆ ಪ್ರಸಾರ

ಟಿ. ನರಸೀಪುರದ ಬಳಿ ಮುಡುಕುತೊರೆಯಲ್ಲಿ ನಡೆಯುತ ಜಾತ್ರೆಯ ಬಗ್ಗೆ ವಿಶೇಷ ಪ್ರಸಾರ ಕಾರ್ಯಕ್ರಮವೊಂದನ್ನು ನಾಳೆ ರಾತ್ರಿ ೯ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ನ ... ಗಿದೆ.

ಬಂಗಾಳಾ ಶಾಸನ ಸಭೆಯಲ್ಲಿ ಸದಸ್ಯರಿಗೆ ಆಶ್ರಯ

ಬಂಗಾಳಾ ಶಾಸನ ಸಭೆಯ ಇಬ್ಬರು ಕಮ್ಯೂನಿಸ್ಟ್ ಸದಸ್ಯರಾದ ಜ್ಯೋತಿ ಬಸು ಮತ್ತು ರಣೆನ್ ಸೇನರವರು ಶಾಸನ ಸಭಾಧ್ಯಕ್ಷರಿಗೆ ಮನವಿಯೊಂದನ್ನು ಮಾಡಿಕೊಂಡು, ಸಭೆಯ ಆಯವ್ಯಯ ಅಧಿವೇಶನವು ಪೂರೈಸುವವರೆಗೆ ಸಭಾ ಭವನದಲ್ಲಿಯೇ ತಾವು ವಾಸಿಸಲು ಅವಕಾಶ ಕಲ್ಪಿಸಬೇಕೆಂದು ಕೋರಿರುತ್ತಾರೆ. ಪೊಲೀಸರು ತಮ್ಮನ್ನು ದಸ್ತಗಿರಿ ಮಾಡಬಹುದಾದ ಸಂದರ್ಭವನ್ನು ನಿವಾರಿಸಿ, ಸಭೆಯಲ್ಲಿ ಭಾಗವಹಿಸುವಂತೆ ಅವಕಾಶ ಕಲ್ಪಿಸಿಕೊಡಲು ಅವರು ಅಧ್ಯಕ್ಷರನ್ನು ಬೇಡಿರುವರು.

ಬಂಗಾಳಾ ಉಪಾಧ್ಯಾಯರಿಗೆ ಹೆಚ್ಚಿನ ತುಟ್ಟಿ ಭತ್ಯ

ಬರುವ ವರ್ಷದಿಂದ ಬಂಗಾಳದ ಎಡೆಡ್ ಶಾಲೆಗಳ ಉಪಾಧ್ಯಾಯರುಗಳಿಗೆ ತಿಂಗಳಿಗೆ ೧೭॥ ರೂ ನಂತೆ ತುಟ್ಟಿ ಭತ್ಯ ಕೊಡಲು ನಿರ್ಧರಿಸಲಾಗಿದೆ. ೫೦ ರೂ ಗಳನ್ನು ಕೊಡಬೇಕೆಂದು ಅವರು ಕೇಳುತ್ತಿರುವರು.

ಮೈಸೂರಿನಲ್ಲಿ ರಾತ್ರಿಯೂ ಅಂಚೆ ಕಛೇರಿ ಕೆಲಸ

ಇದೇ ಏಪ್ರಿಲ್ ೧ರಿಂದ ಮೈಸೂರು ನಗರ ಮತ್ತು ಪಾಸನಗಳಲ್ಲಿ ರಾತ್ರಿ ಹೊತ್ತು ಅಂಚೆ ಕಛೇರಿಗಳು ಪ್ರಾಯೋಗಿಕವಾಗಿ ಕೆಲಸ ಮಾಡುವುವೆಂದು ವರದಿಯಾಗಿದೆ. ಸಂಜೆ ೪ ರಿಂದ ರಾತ್ರಿ ೮ ಗಂಟೆ ವರೆಗೂ ರಿಜಿಸ್ಟರ್ಡ್ ಕಾಗದಗಳು ಮನಿಯಾರ್ಡರುಗಳನ್ನು ತೆಗೆದುಕೊಳ್ಳಲಾಗುವುದು.

ಪ್ರಥಮ ದರ್ಜೆ ಕಾಲೇಜಿನ ಸಹಕಾರ ಸಂಘ

ರಾಜಧಾನಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿನ ಸಹಕಾರ ಸಂಘಕ್ಕೆ ಡಾ॥ ಎಲ್ ಸಿ ಬಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎಂ ಟಿ ರಂಗಸ್ವಾಮಯ್ಯಂಗಾರ್ಯರು ಉಪಾಧ್ಯಕ್ಷರಾಗಿಯೂ ಶ್ರೀ ಟಿ ಎಸ್ ರಾಮರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುತ್ತಾರೆ. ವಿದ್ಯಾರ್ಥಿಗಳ ಪರವಾಗಿ ಶ್ರೀಗಳಾದ ಕೆ. ಸಿ ಶಿವಪ್ಪ, ಟಿ ಎಸ್ ಗೋಪಾಲರಾವ್, ವರದರಾಜಶೆಟ್ಟಿ, ಎಂ ವಿ ಲಕ್ಷ್ಮೀನರಸಿಂಹಯ್ಯ ಮತ್ತು ಪಿ ಎಸ್ ಚನ್ನಕೇಶವರವರೂ ಉಪಾಧ್ಯಾಯರುಗಳ ಪರವಾಗಿ ಶ್ರೀಗಳಾದ ಎಂ ಹ ಚಕ್ರಸ್ವಾಮಿ, ಎಂ ಆರ್ ಶ್ರೀನಿವಾಸರಾವ್ ಎಂ ಎಸ್ ನರಸಿಂಹಯ್ಯಂಗಾರ್ ಮತ್ತು ಸಿ ವೆಂಕಟೇಶ್‌ರವರೂ ಡೈರೆಕ್ಟರುಗಳಾಗಿ ಚುನಾಯಿತರಾಗಿರುವರು.

ಶಯನೋತ್ಸವಾಲಂಕಾರ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಪಾತಾಳೇಶ್ವರ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶಯನೋತ್ಸವ ಅಲಂಕಾರವನ್ನು ಮಾಡಲಾಗುವುದು.

○ ಸರ್ಕಾರದ ಹಣದ ದುರುಪಯೋಗ ಮತ್ತು ರಾಷ್ಟ್ರೀಯ ಭದ್ರತಾ ಕಾನೂನುಗಳ ಉಲ್ಲಂಘನೆ ಸಂಬಂಧದಲ್ಲಿ ದಕ್ಷಿಣ ಕೊರಿಯದ ಮಾಜಿ ಗೃಹ ಮಂತ್ರಿ ... ರವರಿಗೆ ೧೮ ತಿಂಗಳ ... ವಿಧಿಸಲಾಗಿದೆ

ಕರ್ನಾಟಕ ಏಕೀಕರಣದಿಂದ ಆಗುವ ಅನುಕೂಲ

ಸಮಿತಿಯ ರಚನೆ ಸೂಚನೆ ಸಲ್ಲಿಸಲು ಗುಂಡಪ್ಪಗೌಡರ ಕೋರಿಕೆ

ಬೆಂಗಳೂರು ೧೬

ಕರ್ನಾಟಕ ಏಕೀಕರಣದಿಂದ ಆಗುವ ಪರಿಣಾಮವನ್ನು ಕುರಿತು ಸಮಿತಿ ರಚನೆ ಮಾಡಿ ಆ ಸಮಿತಿಯು ವಿಚಾರಿಸಿ ವರದಿ ಮಾಡುವವರೆಗೆ ಏಕೀಕರಣವನ್ನು ಮುಂದೂಡಬೇಕೆಂದು ವಿಧಾನ ಸಭೆಯ ಸದಸ್ಯರಾದ ಶ್ರೀ ಗುಂಡಪ್ಪಗೌಡರು ಹಾಸನದ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡುತ್ತಾ ಸೂಚಿಸಿದರು

ಈಗ ಭಾಷಾ ಪ್ರಾಂತಗಳ ರಚನೆಯ ವಿಷಯವು ಬೊಬ್ಬೆ ಗಲಾಟೆ ಎದ್ದಿರುವುದರಿಂದ ಕರ್ನಾಟಕ ಏಕೀಕರಣದಿಂದ ಅನುಕೂಲವಾಗುವುದಿದ್ದರೆ ಸ್ವಾಗತಿಸಲು ಎಲ್ಲರೂ ಸಿದ್ಧರಾಗಿದ್ದೇವೆಂದೂ, ಇಲ್ಲದಿದ್ದರೆ ಎಲ್ಲ ರೀತಿಯ ಬೇರೆ ವಿಚಾರ ಮಾಡಬೇಕೆಂದೂ ಹೇಳಿದರು. ಈಗ ಮೈಸೂರಿನಲ್ಲಿ ಜಿಲ್ಲೆಗಳು ಹೆಚ್ಚಾಗಿ ಸೇರಿ ಜನಸಂಖ್ಯೆಯು ಹೆಚ್ಚಾಗಿ ಆರ್ಥಿಕ ದೃಷ್ಟಿಯಿಂದ ಅನನುಕೂಲವಾಗುವುದೆಂದೂ ಹೇಳಿ ... ವ್ಯಕ್ತಪಡಿಸಿದರು ... ಭಾಷಾವಾರು ಪ್ರಾಂತ ರಚನೆಯ ... ಕರ್ನಾಟಕ ಏಕೀಕರಣ ... ಹೊಸ ಪ್ರಶ್ನೆ ...

ಕುಡಿತದ ಅಮಲಿನಲ್ಲಿ ಐದು ಜನರಿಗೆ ಇರಿತ, ಒಬ್ಬನ ಕೊಲೆ

ಸಿರಾಂಪುರ ... ಹಳ್ಳಿಯೊಂದರಲ್ಲಿ ... ಎಂಬ ... ಕುಡಿದ ಅಮಲಿನಲ್ಲಿ ದಾರಿಯಲ್ಲಿ ಎದುರುಗಡೆ ಬಂದ ಐದು ಜನರನ್ನು ಇರಿದುದರಿಂದ ಒಬ್ಬನು ಸತ್ತಿರುವನು ... ನಾಲ್ವರು ಆಸ್ಪತ್ರೆಯಲ್ಲಿ ... ಯುವಕನು ಇಂದು ... ತನ್ನ ಊರಿಗೆ ಹೋಗುತ್ತಿದ್ದ ದಾರಿಯಲ್ಲಿ ಸಿಕ್ಕಿದ ... ಕೊಡದಿದ್ದುದರಿಂದ ಅವನನ್ನು ಇರಿದನು ... ಪೊಲೀಸರು ... ತನಿಖೆ ನಡೆಸುತ್ತಿದ್ದಾರೆ

ಟೌನ್ ಪೌರಸಭೆಗಳ ಹಣಕಾಸಿನ ಸ್ಥಿತಿ ತೃಪ್ತಿಕರವಾಗಿಲ್ಲ

ಸ್ಥಳೀಯ ಸಂಸ್ಥೆಗಳ ಇಲಾಖೆಯ ವರದಿ

ಬೆಂಗಳೂರು ೧೬

ಸರ್ಕಾರದವರು ಪ್ರಕಟಿಸಿರುವ ಸ್ಥಳೀಯ ಸಂಸ್ಥೆಗಳ ಇಲಾಖೆಯ ೧೯೫೨-೫೩ ನೇ ಸಾಲಿನ ವರದಿಯ ಪ್ರಕಾರ ಅನೇಕ ಟೌನ್ ಪೌರಸಭೆಗಳ ಹಣಕಾಸಿನ ಪರಿಸ್ಥಿತಿಯು ತೃಪ್ತಿಕರವಾಗಿಲ್ಲವೆಂದೂ, ಕೆಲವು ಪಟ್ಟಣಗಳಲ್ಲಿ ಪುನರ್ವಿಮರ್ಶೆಯಾದ ಕಂದಾಯವನ್ನು ಜಾರಿಗೆ ಕೊಟ್ಟಿರುವುದಿಲ್ಲವೆಂದೂ ತಿಳಿದುಬರುತ್ತದೆ. ಮೈಸೂರು ತುಮಕೂರು ಚಿತ್ರದುರ್ಗ, ಮಂಡ್ಯ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿನಹ ಇತರ ಕಡೆಗಳಲ್ಲಿ ಕಂದಾಯಗಳ ವಸೂಲಾತಿ ತೃಪ್ತಿಕರವಾಗಿಲ್ಲವೆಂದೂ, ಮಳವಳ್ಳಿ ಮತ್ತು ಮಂಚೇನಹಳ್ಳಿ ಟೌನ್ ಮುನಿಸಿಪಾಲಿಟಿಗಳಲ್ಲಿ ಹಣದ ದುರುಪಯೋಗದ ಪ್ರಕರಣಗಳು ನಡೆದಿರುವುದಾಗಿಯೂ ವ್ಯಕ್ತವಾಗಿದೆ. ಟೌನ್ ಪೌರಸಭೆಗಳ ಹಣಕಾಸಿನ ಒಟ್ಟು ಸ್ವಾವಲಂಬಿಗಳಾಗಬೇಕೆಂದು ಸೂಚಿಸಲಾಗಿದೆ ... ನಂತೆ ಕಂದಾಯವು ಬಿದ್ದುಹೋಗುವುದಾಗಿ ಗೊತ್ತಾಗಿದೆ

ಕಸದ ಡಬ್ಬಿಯಲ್ಲಿ ಮಗು

ಚನ್ನಪಟ್ಟಣದ ... ಕಸದ ಡಬ್ಬಿಯೊಂದರಲ್ಲಿ ಎಳೆಯ ಮಗುವೊಂದು ಸಿಕ್ಕಿರುತ್ತದೆ. ಅದು ಯಾರದೆಂಬುದು ಪತ್ತೆಯಾಗಿಲ್ಲ

ಆಕಾಶವಾಣಿ ನಾಳೆ ಕಾರ್ಯಕ್ರಮ

... ಸಂಗೀತ ... ಸಂಗೀತ ... ಭಜನೆ ... ಗೀತೆಗಳು

ಪಾಕಿಸ್ತಾನ ಮತ್ತು ತುರ್ಕಿಗಳಿಗೆ ರಕ್ಷಣೆ ಒಪ್ಪಂದ

ಪಾಕಿಸ್ತಾನ ಮತ್ತು ತುರ್ಕಿಗಳಿಗೆ ರಕ್ಷಣಾ ಒಪ್ಪಂದವು ಅಖೈರಾಗಿ ತಯಾರಾಗಿರುವುದೆಂದು ವರದಿಯಾಗಿದೆ. ಪಾಕಿಸ್ತಾನದ ... ಯು ... ಯ ... ದಿರುವುದರಿಂದ ... ಲ್ಲಿಯೇ ಒಪ್ಪಂದಕ್ಕೆ ... ಬೀಳಲಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೧೮ ೧೨ ೦	೨೫ ೮ ೦
ಎಳ್ಳು	೫೮ ೮ ೦	೬೫ ೬ ೦
ಹರಳುಬೀಜ	೨೭ ೦ ೦	೩೨ ೦ ೦
ಹುಚ್ಚೆಳ್ಳು	೩೦ ೦ ೦	೪೧ ೬ ೦
ಹೊಂಗೇಬೀಜ	೨೨ ೧೨ ೦	೨೩ ೧೪ ೦
ಹುಣಸೇಬೀಜ	೧೩ ೦ ೦	೧೩ ೨ ೦
ಹುರುಳಿ	೨೫ ೦ ೦	೩೦ ೮ ೦
ಹೆಸರು	೩೭ ೩ ೦	೪೨ ೦ ೦
ಅವರೆ	೨೫ ೧೪ ೦	೩೩ ೧೪ ೦
ಕಾಳುಮೆಣಸು	೩೨ ೦ ೦	೪೬ ೨ ೦
ಧನಿಯ	೩೦ ೦ ೦	೬೨ ೮ ೦
ಕಡಲೆ	೫೧ ೨ ೦	
ಹತ್ತಿಬೀಜ	೧೬ ೬ ೦	೨೭ ೦ ೦
ತೊಗರಿ	೨೨ ೪ ೦	೨೫ ೧೦ ೦
ಹುಣಸೇಹಣ್ಣು	೨ ೬ ೦	೯ ೧೪ ೦
ಸೀಗೇಕಾಯಿ	೩ ೪ ೦	೪ ೭ ೦
ಮೆಣಸಿನಕಾಯಿ	೨೮ ೦ ೦	೨೯ ೦ ೦
ಗಸಗಸೆ ೧೧೦೦	೧೪೦ ೦ ೦	೨೯೫ ೦ ೦

SRI GANESHA

TALKIES

LAST TWO DAYS

SALOME

From 19-2-54

ROCKET SHIP

EXPEDITION MOON

Featuring— Lloyd Bridges

ಎಮ್ಮೆಗೆ ಎರಡು ಕರುಗಳು

ಚನ್ನಪಟ್ಟಣದ ತಾಲ್ಲೂಕು ದೊಡ್ಡ ಮಳೂರು ಗ್ರಾಮದ ಕೋಟೆ ಲೈನ್ ಶ್ರೀ ... ರವರ ಮನೆಯಲ್ಲಿ ಒಂದು ಎಮ್ಮೆಯು ಎರಡು ಹೆಣ್ಣು ಕರುಗಳನ್ನು ಈಯಿತು. ಅರ್ಧ ಗಂಟೆಯ ಅಂತರದಲ್ಲಿ ಎರಡೂ ಹುಟ್ಟಿವೆ.

ಪುಸ್ತಕ ಭಂಡಾರದ ದಿನಾಚರಣೆ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಮೊನ್ನೆಯಿಂದ ಎರಡು ವಾರಗಳ ಪರ್ಯಂತ ಪುಸ್ತಕ ಭಂಡಾರದ ದಿನಗಳನ್ನು ಆಚರಿಸಲಾಗುವುದು. ಕಳೆದ ವರ್ಷ ನಡೆದ ಇದೇ ಸಮಾರಂಭದಲ್ಲಿ ಸಾರ್ವಜನಿಕರು, ಪ್ರಕಾಶಕರುಗಳು ಮತ್ತು ಗ್ರಂಥಕರ್ತರು ಅನೇಕ ಪುಸ್ತಕಗಳನ್ನು ಸಂಘಕ್ಕೆ ದಾನ ಮಾಡಿದ್ದರು. ಈ ರೀತಿ ದಾನವಾಗಿ ಬಂದಿರುವ ಮುನ್ನೂರು ಕನ್ನಡ ಪುಸ್ತಕಗಳು ಮತ್ತು ಅಮೆರಿಕದ ಸಮಾಚಾರದ ಕಛೇರಿಯವರು ಕಳುಹಿಸಿರುವ ೧೦೦ ಇಂಗ್ಲಿಷ್ ಪುಸ್ತಕಗಳು ಸಂಘದಲ್ಲಿವೆ. ಈ ವರ್ಷವೂ ಈ ರೀತಿ ಪುಸ್ತಕಗಳನ್ನು ಕೊಟ್ಟು ಸಾಹಿತ್ಯ ಮತ್ತು ಜ್ಞಾನ ಪ್ರಚಾರಕ್ಕೆ ನೆರವಾಗುವಂತೆ ಮಹಾ ಜನರನ್ನು ಸಂಘದ ಕಾರ್ಯದರ್ಶಿ ಶ್ರೀ ಎಂ ಕೃಷ್ಣಯ್ಯನವರು ಕೋರಿರುತ್ತಾರೆ

ಗೃಹಕೃತ್ಯದ ನೋಟೀಸು

ನಂಜನಗೂಡು ತಾಲ್ಲೂಕು ಕಸಬಾ ಹೋಬಳಿ ನವಲೂರು ಗ್ರಾಮದಲ್ಲಿರುವ ಮರಪ್ಪನವರ ಮಕ್ಕಳು ಪಟೇಲ್ ಲಿಂಗಣ್ಣನವರ ಕುಟುಂಬ ಚಿನ್ನಪ್ಪನ ಈ ಮೂಲಕ ಸಕಲ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ನನ್ನ ಗಂಡ ಲಿಂಗಣ್ಣನವರು ಈಗ್ಗೆ ಸುಮಾರು ಒಂದೂವರೆ ವರ್ಷದಲ್ಲಿ ಮೃತಪಟ್ಟಿರುವರು. ಅವರಿಗೆ ಈ ಕೆಳಗೆ ಕಂಡ ಜಮೀನು ಮತ್ತು ಮನೆ ಸಹ ಇದ್ದು ಅವು ಈಗ ನನ್ನ ಸ್ವಾಧೀನದಲ್ಲಿ ಇರುತ್ತವೆ. ಮೃತ ಲಿಂಗಣ್ಣನವರಿಗೆ ನಾನು ಒಂದು, ೫ ವರ್ಷದ ನಾಗಣ್ಣನೆಂಬ ಮಗನೂ, ೮ ವರ್ಷ ವಯಸ್ಸಿನ ನಾಗಮ್ಮನೆಂಬ ಮಗಳೂ ವಾರಸುದಾರರಾಗಿರುತ್ತೇವೆ. ಸ್ವತ್ತುಗಳು ಇವರ ಸ್ವಾಧೀನದಲ್ಲೇ ಇರುತ್ತೆ. ಮೃತಿಯವರ ತಂದೆ ಮರಪ್ಪನವರು ಸ್ವತ್ತುಗಳನ್ನು ಸ್ವಾಧೀನ ಮಾಡಲು ಉದ್ದೇಶಿಸಿರುತ್ತಾರೆ. ಮೃತಿಯವರ ಸ್ವತ್ತಿನಲ್ಲಿ ೮೦ ವರುಷದ ವಯಸ್ಸಿನ ಅರಳು ಮರಳು ಸಂಭವಿಸಿರುವ ತಂದೆ ಮರಪ್ಪನವರಿಗೆ ಯಾವ ಹಕ್ಕೂ ಇಲ್ಲ. ಈ ಸ್ವತ್ತುಗಳನ್ನು ಯಾರೂ ಕ್ರಯ ವಗೈರೆ ಕರಾರಿನಲ್ಲಿಯಿಂದ ಪಡೆಯಕೂಡದು. ಹಾಗೆ ಪಡೆದದ್ದಾದರೆ ಅವರಿಗೆ ಸ್ವತ್ತುಗಳಲ್ಲಿ ಯಾವ ಹಕ್ಕೂ ಉಂಟಾಗುವುದಿಲ್ಲ

— ಸ್ವತ್ತಿನ ತಪಶೀಲು —

ನಂಜನಗೂಡು ತಾಲ್ಲೂಕು ನವಲೂರು ಗ್ರಾಮಕ್ಕೆ ಸೇರಿದ್ದು

(1) ಸರ್ವೆ 43/1, ೭ ಎಕರೆ 23 ಗುಂಟೆ 2 ರೂ ಆಕಾರ ಉಳ್ಳದ್ದು. ಇದಕ್ಕೆ ಉತ್ತರಕ್ಕೆ 44 ನೇ 1ನೇ ಫೋಡು ನಂಬರಿನ ಜಮೀನು ಲಿಂಗಣ್ಣನ ತಮ್ಮ ಮರಿಸ್ವಾಮಿ ಹಿಸ್ಸೆಗೆ ಸೇರುತ್ತೆ

(2) 103 ನೇ ನಂಬರಿನಲ್ಲಿ ಉತ್ತರದ ಕಡೆ ೪ ಎಕರೆ ೩೩ ಗುಂಟೆಯಲ್ಲಿ, ದಕ್ಷಿಣದ ಕಡೆ ಅರ್ಧ, ಲಿಂಗಣ್ಣನ ತಮ್ಮ ಮರಿಸ್ವಾಮಿ ಹಿಸ್ಸೆ ಖಾತಾ ಉತ್ತರದ ಕಡೆ ಅರ್ಧ

(3) 104/1 ರಲ್ಲಿ ಹಿಸ್ಸೆಯಾಗದೆ ಇರುವ ಅರ್ಧ

ನಂಜನಗೂಡು ತಾಲ್ಲೂಕು ನವಲೂರು ದಾಖಲೆ ಹೊಸಪುರದಲ್ಲಿರುವುದು—ಪೂರ್ವಕ್ಕೆ ಕಾರಿ ರಸ್ತೆ, ಪಶ್ಚಿಮಕ್ಕೆ ಸಿದ್ದಪ್ಪನ ಮನೆ, ದಕ್ಷಿಣಕ್ಕೆ ಕಾಳಪ್ಪನ ಮನೆ, ಉತ್ತರಕ್ಕೆ ದೊಡ್ಡ ಗಂಡಯ್ಯನ ಮಾದಪ್ಪನ ಖಾಲಿ ಜಾಗ. ಈ ಮಧ್ಯೆ ಇರುವ ೫ ಅಂಕಣ ಮನೆ ಮೈಕ ಉತ್ತರದ ಕಡೆ ಅರ್ಧ ಮನೆ

○ ಈ ಎಡಗೈ ಹೆಬ್ಬೆಟ್ಟಿನ ಗುರುತು ... ಚನ್ನಮ್ಮ ದಾಖಲಿದ್ದಕ್ಕೆ, ನವಲೂರು ಗ್ರಾಮದ ಪಟೇಲ್ ಎಚ್ ಪಿ ಕೆಂಪಣ್ಣನ ಬರಹ

Silver Jubilee Celebrations Of D. BANDMIAH'S EDUCATIONAL INSTITUTION

D Bandmiah's High School, Mysore

The Silver Jubilee Celebration is arranged to be inaugurated by His Highness the Maharaja Sri Jayachamaraja Wadiyar Bahadur, the Rajpramukh of Mysore, on 13th March 1954 The old boys of the institution are requested to kindly send their generous contribution and contact the Secretary of the institution or the Head Master for further information

In Aid of Blind, Deaf & Dumb
ARTS' FESTIVAL
AT
CRAWFORD HALL, MYSORE

On 19th 20th & 21st February 1954

Daily at 5-30 P M

- TICKETS -

Season Rs 2 8 0 1.8.0 1.0.0 Daily Rs 1.8.0 0.12.0 0.8.0

ಒಲಂಪಿಯಾ

ಮ್ಯೂಸಿಕಲ್ ಪಿಕ್ಚರ್ಸ್‌ರವರ

17-2-54 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಆಟಗಳು

* ಜೀವನ್ ಜ್ಯೋತಿ *

ಸಂಗೀತ, ಪ್ರೇಮ ... ಗಳಿಂದ ಕೂಡಿದ ... ಬಾಳು ... ಭಾವಗಳನ್ನು ಹೃದಯಂಗಮವಾಗಿ ಚಿತ್ರಿಸಿರುವ ಹಿಂದಿ ಕಲಾಕೃತಿ

ತಾರೆ — ಚಾಂದ್ ಉಸ್ಮಾನಿ, ಶಮ್ಮಿಕಪೂರ್ ...

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸು ಮೈಸೂರು

ಟೆಂಡರು ನೋಟೀಸು

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ವಗೈರೆಗಳಿಗೆ 1-4-1954 ರಿಂದ 31-3-1955 ರ ವರೆಗೆ ರೋಗಿಗಳಿಗೆ ಬೇಕಾಗುವ ... ಸಾಮಾನುಗಳನ್ನು ಸರಬರಾಜು ಮಾಡಲು ಟೆಂಡರನ್ನು ... ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ 1954ನೇ ಇಸವಿ ಫೆಬ್ರವರಿ ಮಾಹೆ ತಾರೀಖು 22ನೇ ಸೋಮವಾರ (22-2-54) ಮಧ್ಯಾಹ್ನ 10 ಗಂಟೆಗೆ ಸರಿಯಾಗಿ ತೆಗೆಯಲಾಗುವುದು. ... ವಿಷಯಗಳಿಗೆ ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ... ನೋಟಿಫಿಕೇಷನ್ ಮತ್ತು ಇತರ ವಿಷಯಗಳನ್ನು ಪಡೆಯಬಹುದು

ಮೈಸೂರು 11-2-954 | ಎಲ್ ಕಲ್ಲಯ್ಯ, ಸೆಕ್ರೆಟರಿ

Edited Printed and Published by V R Narayan at Sadhvi Press D Subbiah Road Mysore

ರಿಜಿಸ್ಟರ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾದರ — ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ — ಅಂಚೆ ಮೂಲಕ ತಿಂಗಳಿಗೆ ಒಂದು ರೂ. — ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩] MYSORE : THURSDAY 18-2-1954 : ಮೈಸೂರು : ಗುರುವಾರ ೧೮-೨-೧೯೫೪ [ಸಂಚಿಕೆ೧೮೯

ಆಂಧ್ರದಲ್ಲಿ ಪಾನ ನಿರೋಧದ ರದ್ದಿಗಾಗಿ ಸತ್ಯಾಗ್ರಹ!

ಪ್ರದರ್ಶನದಲ್ಲಿ ಮಹಾರಾಜರ ನಾಯಿಗೆ ಬಹುಮಾನ

ಕಳೆದ ಭಾನುವಾರ ಬೆಂಗಳೂರಿನಲ್ಲಿ ನಡೆದ ನಾಯಿಗಳ ಪ್ರದರ್ಶನದಲ್ಲಿ ಶ್ರೀಮನ್ಮಹಾರಾಜರ ಕೆನ್ನೆಲ್ಸ್‌ದಿಂದ ಫೋರ್ಸ್ಟ್ ಎಂಬ ನಾಯಿಯು ೧ ದೊಡ್ಡ ಮತ್ತು ಬಲಯುತವಾದ ನಾಯಿ ಯೆಂದು ಪರಿಗಣಿಸಲ್ಪಟ್ಟು ಅದಕ್ಕೆ ಬಟ್ಟಲು ಒಡುವೂ ದೆ ಕೊಡಲಾಗಿದೆ

ಧ್ವಜಾರೋಹಣದ ಬಗ್ಗೆ ಕಾಂ|| ಮತ್ತು ಸಮಾಜವಾದಿಗಳ ಘರ್ಷಣೆ

ಗ್ವಾಲಿಯರ್ ನಗರಕ್ಕೆ ಸ್ವಲ್ಪ ದೂರವಿರುವ ಮೊರೀನಾ ಎಂಬಲ್ಲಿ ಮೊನ್ನೆ ಕಾಂಗ್ರೆಸ್ ಮತ್ತು ಸಮಾಜವಾದಿ ಬೆಂಬಲಿಗರಿಗೆ ಧ್ವಜಾರೋಹಣದ ಸಂಬಂಧವಾಗಿ ಘರ್ಷಣೆ ನಡೆದು ೬ ಜನರಿಗೆ ಗಾಯಗಳಾದವು ಲಾಠಿ ಮತ್ತು ಕಲ್ಲುಗಳ ಪ್ರಯೋಗವಾಯಿತು ಸ್ಥಳೀಯ ಕಾಂಗ್ರೆಸ್ಸಿನವರೊಬ್ಬರು ತಮ್ಮ ಪೆಟ್ಟಿದಿಂದ ಸಾರ್ವಜನಿಕ ಸ್ಥಳದಲ್ಲಿ ಧ್ವಜ ಸ್ತಂಭವನ್ನು ನೆಡಿಸಿದ್ದರೆಂದೂ, ಅದರ ಮೇಲೆ ಸಮಾಜವಾದಿಗಳು ತಮ್ಮ ಧ್ವಜವನ್ನು ಹಾರಿಸಿದರೆಂದೂ, ಇದೇ ಘರ್ಷಣೆಗೆ ಕಾರಣವಾಯಿತೆಂದೂ ಹೇಳಲಾಗಿದೆ

ಓಟು ಕೊಡಲು ಹೋಗುತ್ತಾ ದಾರಿಯಲ್ಲೇ ಮರಣ

ತಿರುವಾಂಕೂರು ಕೊಚ್ಚಿಯಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ನೆನ್ನೆ ಓಟು ಕೊಡಲು ಮೋಟಾರಿನಲ್ಲಿ ಹೋಗುತ್ತಿದ್ದ ಒಬ್ಬ ಪತ್ರಿಕಾಕರ್ತರು ದಾರಿಯಲ್ಲೇ ಹೃದಯ ಕ್ರಿಯೆ ನಿಂತು ಮೃತಪಟ್ಟರೆಂದು ವರದಿಯಾಗಿದೆ

ಬಾಲಕನನ್ನು ಕಾರಿನಲ್ಲಿ ಕೊಂಡೊಯ್ಯುವ ಪ್ರಯತ್ನ

ಈ ದಿನ ಬೆಳಗ್ಗೆ ೯ ಗಂಟೆ ೫ ನಿಮಿಷದಲ್ಲಿ ಯಾರೋ ಒಬ್ಬನು ಹಳೇ ಫೋರ್ಡ್ ಟೂರರ್ ಕಾರಿನಲ್ಲಿ ಬಂದು ಚಾಮರಾಜಪುರಂ ಸೊಸೈಟಿ ಹೋಟಲ್ ಬಳಿ ಹನ್ನೆರಡು ವರ್ಷ ವಯಸ್ಸಿನ ಒಬ್ಬ ಕೊಪ್ಪಲಿನ ಹುಡುಗನನ್ನು ಕರೆದಾಗ ಆ ಹುಡುಗನು "ಅಪ್ಪಾ" ಎಂದು ಕಿರುಚಿಕೊಂಡನು. ತಕ್ಷಣವೇ ಅತನನ್ನು ಕಾರಿನಲ್ಲಿ ಹಾಕಿಕೊಳ್ಳಲು ಪ್ರಯತ್ನಿಸಿದಾಗ ಈಶ್ವರ ದೇವಸ್ಥಾನದ ಅರ್ಚಕರು ಗಲಾಟೆ ಮಾಡಿದರು ಜನರ ಗುಂಪು ಬಂದು ಸೇರುವುದರಲ್ಲಿತ್ತು ಕಾರಿನವನು ಹುಡುಗನನ್ನು ಬಿಟ್ಟು ಕಾರನ್ನು ವೇಗವಾಗಿ ಓಡಿಸಿಕೊಂಡು ಹೊರಟುಹೋದನು ಕಾರಿನಲ್ಲಿ ಒಬ್ಬ ಚಿಕ್ಕ ಹುಡುಗನೂ ಸಹ ಇದ್ದನು ಅದರಲ್ಲಿ ಇದ್ದವರು ಮೂರು ಜನರು ಈ ಸನ್ನಿವೇಶವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಮತ್ತು ಸುಮಾರು ಇಪ್ಪತ್ತು ಜನರು ಇದನ್ನು ನೋಡಿರುತ್ತಾರೆ. ನಗರದಲ್ಲಿ ಇತ್ತೀಚೆಗೆ ಉಂಟಾಗಿರುವ ವದಂತಿಗಳಿಗೂ, ಈ ಪ್ರಸಂಗಕ್ಕೂ ಸಂಬಂಧವಿದೆಯೋ, ಇಲ್ಲವೋ ಹೇಳಲು ಸಾಧ್ಯವಿಲ್ಲ. ಆದರೂ ಇಂತಹ ಪ್ರಸಂಗಗಳ ಬಗ್ಗೆ ಅಧಿಕಾರಿಗಳು ಹೆಚ್ಚು ಬಂದೋಬಸ್ತು ಮಾಡಬೇಕೆಂದು ಕೋರುತ್ತೇನೆ.

ಕೆ ವೆಂಕಟೇಶಯ್ಯ,
1158 ತ ಬಿಲ್ಲಪ್ಪನ ಛತ್ರ,
ಚಾಮರಾಜಪುರಂ, ಮೈಸೂರು

ಪಾನ ನಿರೋಧದ ರದ್ದಿಗಾಗಿ ಆಂಧ್ರ ಈಡಿಗರ ಸತ್ಯಾಗ್ರಹ

ಆಂಧ್ರದಲ್ಲಿ ಹೆಂಡ ಶೇಂದಿ ಇಳಿಸುತ್ತಿದ್ದವರ ಸಮ್ಮೇಳನವು ಮಚಲೀಪಟ್ಟಣದಲ್ಲಿ ಮೊನ್ನೆ ಸೇರಿ ಆ ಸಂಸ್ಥಾನದಲ್ಲಿ ಪಾನ ನಿರೋಧವನ್ನು ರದ್ದು ಮಾಡಬೇಕೆಂದೂ, ಇಲ್ಲವಾದಲ್ಲಿ ಬಹಿರಂಗವಾಗಿ ಮರಗಳಿಂದ ಹೆಂಡವನ್ನು ಇಳಿಸುವ ಕಾರ್ಯದಲ್ಲಿ ತೊಡಗಿ, ಪಾನ ನಿರೋಧ ಶಾಸನವನ್ನು ಉಲ್ಲಂಘಿಸಿ ಸತ್ಯಾಗ್ರಹ ಹೂಡತಕ್ಕದ್ದೆಂದೂ ಸರ್ವಾನುಮತದಿಂದ ನಿರ್ಣಯ ಮಾಡಿತು ಈ ಸಂಬಂಧವಾಗಿ ಆರು ಜನರಿಂದ ಕೂಡಿದ ಕ್ರಿಯಾ ಸಮಿತಿಯೊಂದನ್ನು ರಚಿಸಿ ಅದಕ್ಕೆ ಶ್ರೀ ... ವೆಂಕಟಪತಿಯವರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಶ್ರೀ ... ನಾರಾಯಣರನ್ನು ಕಾರ್ಯದರ್ಶಿಯಾಗಿಯೂ ಆರಿಸಲಾಯಿತು ಆಂಧ್ರದ ಮಾಜಿ ಸಚಿವರೂ ಮತ್ತು ಕೃಷಿಕಾರ ಲೋಕ ಪಕ್ಷದ ಉಪಾಧ್ಯಕ್ಷರೂ ಆದ ಶ್ರೀ ಜಿ ಲಚ್ಚಣ್ಣನವರು ಸಮ್ಮೇಳನದಲ್ಲಿ ಮಾತನಾಡುತ್ತಾ ಸರ್ಕಾರದವರು ಪಾನ ನಿರೋಧವನ್ನು ಒತ್ತಾಯವಾಗಿ ಜಾರಿಗೆ ತಂದು ಹೆಂಡ ಇಳಿಸುತ್ತಿದ್ದವರಿಗೆ ಜೀವನೋಪಾಯದ ಮಾರ್ಗವನ್ನು ತೋರಿಸಲು ಅಸಮರ್ಥರಾಗಿದ್ದಾರೆಂದು ಆಕ್ಷೇಪಿಸಿ ... ಹೆಂಡ ಇಳಿಸುವವರು ... ಕೂಡಿ ಪಾನ ನಿರೋಧ ಶಾಸನವನ್ನು ರದ್ದು ಮಾಡುವಂತೆ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ, ಇಲ್ಲವಾದಲ್ಲಿ ಸತ್ಯಾಗ್ರಹವನ್ನು ಹೂಡಬೇಕೆಂದೂ ಶ್ರೀ ಲಚ್ಚಣ್ಣನವರು ತಿಳಿಸಿದರು

ವಕೀಲರಾದ ಶ್ರೀ ಎ. ಭಕ್ತವತ್ಸಲಂರವರು ಮೇಲ್ಕಂಡ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುತ್ತಾ ಹೆಂಡ ಇಳಿಸುವವರ ಬೇಡಿಕೆಗೆ ಪ್ರಜಾ ಸಮಾಜವಾದಿಗಳ ಪೂರ್ಣ ಬೆಂಬಲದ ಭರವಸೆಯನ್ನಿತ್ತರು ಸಮ್ಮೇಳನಕ್ಕೆ ೪೦೦ ಜನ ಪ್ರತಿನಿಧಿಗಳು ಬಂದಿದ್ದರು

ನೇಣು ಹಾಕಿಕೊಂಡು ವಿದ್ಯಾರ್ಥಿನಿಯು ಆತ್ಮಹತ್ಯೆ

ಮೈಸೂರು ೧೮

ರಾಜಧಾನಿಯ ಚಾಮರಾಜಪುರಂ ಮನುವನ ಪಾರ್ಕಿನ ಬಳಿ ಶ್ರೀ ಕಾಶಿ ಶಾಸ್ತ್ರಿಗಳವರ ಮನೆಯ ಒಂದು ಭಾಗದಲ್ಲಿ ಬಾಡಿಗೆಗಿರುವ ಶ್ರೀ ಆರ್ ಎಸ್ ಪಾಳ್ಯರವರ ಮಗಳು, ಸುಮಾರು ೨೨ ವರ್ಷ ವಯಸ್ಸಿನ ಪಾರ್ವತಿ ಎಂಬ ಎಂ. ಎ ತರಗತಿ ವಿದ್ಯಾರ್ಥಿನಿಯು ಸ್ನಾನಗೃಹದಲ್ಲಿ ಈ ಬೆಳಗ್ಗೆ ಸುಮಾರು ೧೧ ಗಂಟೆ ಸಮಯದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳೆಂದು ತಿಳಿದುಬಂದಿದೆ ಕಾಲೇಜಿಗೆ ಹೋಗಿ ಬರುವುದಾಗಿ ಮನೆಯಿಂದ ಹೊರಟು ಸ್ವಲ್ಪ ಹೊತ್ತಿನಲ್ಲೇ ಹಿಂದಿರುಗಿ ಒಬ್ಬಳು ಮನೆಯಲ್ಲಿ ಸ್ನಾನದ ಬಾಗಿಲು ಹಾಕಿಕೊಂಡು ಬಹಳ ಹೊತ್ತಾದರೂ ಆಕೆಯು ಹೊರಗೆ ಬರದಿರಲು, ಬಾಗಿಲನ್ನು ತೆರೆದು ನೋಡಲಾಗಿ ಆಕೆಯ ಶರೀರವು ಹಗ್ಗದಿಂದ ನೇಣು ಹಾಕಲ್ಪಟ್ಟು ನೇತಾಡುತ್ತಿದ್ದುದು ಕಂಡುಬಂದಿತು.

○ ಹಾಲೆಂಡಿನಲ್ಲಿ ಇದೇ ಮೊಟ್ಟಮೊದಲಾಗಿ ಅಮೇರಿಕದ ವಿಮಾನಗಳು ರಾಜ್ಯ ಮಾಡಿರುವುವೆಂದು ಹಾಲೆಂಡಿನ ರಕ್ಷಣಾ ಮಂತ್ರಿ ಕಾರ್ನೆಲಸ್ ... ರವರು ತಿಳಿಸಿರುತ್ತಾರೆ

ಅರಮನೆ ಮುಂದೆ ಹರಿಜನರ ಕುಸ್ತಿ ನಿಂತ ಪ್ರಕರಣ

ಹೈಕೋರ್ಟಿನಲ್ಲಿ ರಿಟ್ ಅರ್ಜಿಯ ವಜಾ

ಸ್ವಂ ಸು ಫೋ] ಬೆಂಗಳೂರು ೧೮

ಅರಮನೆ ಮುಂದೆ ಕಳೆದ ನವರಾತ್ರಿಯಲ್ಲಿ ನಡೆಯಬೇಕಾಗಿದ್ದ ಕುಸ್ತಿಯನ್ನು ನಿಲ್ಲಿಸಿದ ಸಂಬಂಧವಾಗಿ ಹೈಕೋರ್ಟಿಗೆ ಶ್ರೀ ರಂಗಯ್ಯ ಶ್ರೀ ಹೂವಯ್ಯ ಎಂಬ ಹರಿಜನ ಪೈಲ್ವಾನರು ಹೂಡಿದ್ದ ರಿಟ್ ಅರ್ಜಿಯನ್ನು ಈ ದಿನ ಶ್ರೇಷ್ಠ ನ್ಯಾಯಾಧೀಶರು ಮತ್ತು ಶ್ರೀ ಬಿ ವಾಸುದೇವಮೂರ್ತಿಯವರು ವಜಾ ಮಾಡಿದರು ಪ್ರಿಜಲ್ ಮೂಲಕ ... ಕೃಗಳನ್ನು ಕಡೆಗಣಿಸಿ ಕುಸ್ತಿಯನ್ನು ನಿಲ್ಲಿಸಲ್ಪಟ್ಟಿತೆಂದೂ, ಆ ದಿನ ವಿಪರೀತ ಗಲಾಟೆಯುಂಟಾಗಿ ಮತ್ತು ಶಿಸ್ತನ್ನು ಕಾಪಾಡುವುದು ದುಸ್ತರವಾಗಿ ಸರ್ಕಾರದವರು ಕುಸ್ತಿಯನ್ನು ನಿಲ್ಲಿಸಬೇಕಾಯಿತೆಂದೂ ನ್ಯಾಯಾಧೀಶರು ತಿಳಿಸಿದರು ಅರ್ಜಿದಾರರ ಪರವಾಗಿ ಶ್ರೀ ಬಸವಲಿಂಗಪ್ಪನವರು ವಕಾಲತ್ತು ವಹಿಸಿದ್ದರು

ಮುಖ್ಯ ಮಂತ್ರಿಯವರ ಮೇಲೆ ಕೈ ಮಾಡಿದ ಮೊಕದ್ದಮೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರನ್ನು ವಿಧಾನ ಸೌಧದ ಪ್ರದೇಶದಲ್ಲಿ ಹೊಡೆದನೆಂದು ಮಾಧು ಅಲಿಯಾಸ್ ಮಹದೇವ್ ಎಂಬಾತನ ಮೇಲೆ ಹೂಡಲಾಗಿರುವ ಮೊಕದ್ದಮೆಯು ಈ ದಿನ ವಿಚಾರಣೆಗೆ ಬಂದಿತ್ತು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಕೆ ಎಸ್ ನರಸಿಂಹಮೂರ್ತಿಯವರು ಈ ಎರಡು ಪೋಲೀಸು ಅಧಿಕಾರಿಗಳ ಸಾಕ್ಷ್ಯಗಳಾಗಬೇಕೆಂದು ಕೋರಿದರು ಅವರಿಗೆ ಸಮನ್ಸ್ ಕಳಿಸಲು ಅಪ್ಪಣೆಯಾಯಿತು ತನ್ನ ವಿಚಾರಣೆಯನ್ನು ಬೇರೆ ಒಂದು ಕೋರ್ಟಿಗೆ ವರ್ಗಾಯಿಸುವಂತೆ ಅಪ್ಪಣೆಯಾಗಬೇಕೆಂದು ಆಪಾದಿತನು ಹಾಕಿಕೊಂಡಿರುವ ಅರ್ಜಿಯನ್ನು ಸೆಷನ್ಸ್ ಜಡ್ಜರ ... ಕೋರ್ಟಿಗೆ ಕಳುಹಲಾಗಿದೆಯೆಂದು ನ್ಯಾಯಾಧೀಶರು ತಿಳಿಸಿದರು ಮೊಕದ್ದಮೆಯು ಮಾರ್ಚಿ ೪ ನೇ ತಾರೀಖಿಗೆ ಮುಂದೆ ಹೋಯಿತು

ಕಲ್ಕತ್ತೆಯಲ್ಲಿ ನೆನ್ನೆಯೂ ಗುಂಡಿನೇಟು

ಸತ್ತವರ ಸಂಖ್ಯೆ ೬ ಕ್ಕೇರಿತು, ನೂರು ಜನರ ದಸ್ತಗಿರಿ

ಕಲ್ಕತ್ತೆಯಲ್ಲಿ ಮುಖ್ಯ ಮಂತ್ರಿಯವರ ಭವನದ ಎದುರು ಜನರ ಗುಂಪು ಹಿಂಸಾಕೃತ್ಯದಲ್ಲಿ ತೊಡಗಿದ್ದುದರಿಂದ, ವಿದ್ಯಾರ್ಥಿಗಳು ಪೋಲೀಸರೊಡನೆ ಸೇರಿ ೧ ಗಂಟೆ ಕಾಲ ಹೋರಾಟ ನಡೆಸಿದರೆಂದು ವರದಿಯಾಗಿದೆ ಅಶ್ರುವಾಯು ಮತ್ತು ಗುಂಡುಗಳ ಪ್ರಯೋಗಗಳಾದುವು ಪೋಲೀಸರು ಮನೆಮನೆಗೂ ನುಗ್ಗಿ ೧೦೦ ಜನರ ದಸ್ತಗಿರಿ ಮಾಡಿರುವರು ಮೊನ್ನೆಯ ಗುಂಡಿನ ಪ್ರಕರಣದಲ್ಲಿ ಒಟ್ಟು ೬ ಜನರು ಮೃತಪಟ್ಟಿರುವರು

ವಿಯಟ್‌ಮಿನ್ ಸೈನ್ಯಗಳ ಮೇಲೆ ನಾಪಾಂ ಬಾಂಬುಗಳು

ಇಂಡೋಚೀಣಾದಲ್ಲಿ ವಿಯಟ್‌ಮಿನ್ ಸೈನ್ಯಗಳ ಮೇಲೂ, ಬಂದೂಕಗಳ ನೆಲೆಗಳ ಮೇಲೂ ಫ್ರೆಂಚ್ ವಿಮಾನಗಳು ಮೊನ್ನೆ ಅಗ್ನಿಯನ್ನುಂಟುಮಾಡುವ ನಾಪಾಂ ಬಾಂಬುಗಳನ್ನು ಹಾಕಿದುವಲ್ಲದೆ, ಗುಂಡು ಹಾರಿಸಿದರೆಂದೂ ವರದಿಯಾಗಿದೆ ಲಾವೋಸ್ ರಾಜಧಾನಿಗೆ ವಾಯವ್ಯದಲ್ಲಿ ೬೦ ಮೈಲಿ ದೂರವಿರುವ ಮೌಂಗ್‌ಸೈ ಎಂಬ ಫ್ರೆಂಚರ ಬಲವಾದ ಪ್ರದೇಶದ ಬಳಿ ವಿಯಟ್‌ಮಿನ್ ಸೈನ್ಯಗಳು ಶೇಖರಣೆಯಾಗಿದ್ದುವೆಂದು ಹೇಳಲಾಗಿದೆ

ಈಗಿನ ಜಿಲ್ಲಾ ಬೋರ್ಡಿನಿಂದಲೇ ಆಯವ್ಯಯದ ಪಟ್ಟಿ ತಯಾರಿಕೆ

ಮೈಸೂರು ೧೮

ಮೈಸೂರು ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಈ ಮಧ್ಯಾಹ್ನ ಶ್ರೀ ಎಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು

ಬೋರ್ಡಿನ ಸದಸ್ಯರು ಕಳೆದ ಆರೂ ಮುಕ್ಕಾಲು ವರ್ಷಗಳಿಂದ ತೃಪ್ತಿಕರವಾಗಿ ಸೇವೆ ಸಲ್ಲಿಸಿರುವ ಬಗ್ಗೆ ಪ್ರಶಂಸಿಸಿ ಸರ್ಕಾರದವರು ಬರೆದಿದ್ದ ಪತ್ರವನ್ನು ಅಧ್ಯಕ್ಷರು ಓದಿದರು ಅವರು ಮಾತನಾಡಿ, ಈಗ ಬೋರ್ಡಿನ ಕಾಲಾವಧಿ ಆರು ತಿಂಗಳುಗಳು ಅರ್ಧ ಮುಗಿದು, ಇನ್ನೂ ಪೂರ್ತಿಗೊಳಿಸಬೇಕಾದ ಅನೇಕ ಕೆಲಸಗಳು ಇರುವುದರಿಂದ ಹೊಸ ಆಯವ್ಯಯದ ಅಂದಾಜನ್ನು ತಯಾರಿಸಿ ಮುಂದೆ ಬರುವವರಿಗೆ ಅಧಿಕಾರ ವಹಿಸತಕ್ಕದ್ದೇ ಎಂಬ ವಿಷಯವಾಗಿ ಸದಸ್ಯರ ಸಲಹೆಯನ್ನು ಕೋರಿದರು ಶ್ರೀಗಳಾದ ಪುಟ್ಟಸ್ವಾಮಪ್ಪ, ವೆಂಕಟಸುಬ್ಬಯ್ಯ, ಹೆಚ್ ಲಿಂಗಪ್ಪ ಮತ್ತು ಎಂ ಸಿ ಶಿವಾನಂದ ಶರ್ಮರು ಭಾಷಣ ಮಾಡಿದನಂತರ ಬಜೆಟ್ಟನ್ನು ಈಗಿನ ಸಮಿತಿಯವರೇ ತಯಾರಿಸಬೇಕೆಂದು ತೀರ್ಮಾನವಾಯಿತು ಇದಕ್ಕಾಗಿ ಇದೇ ೨೮ ನೇ ತಾ|| ಪುನಃ ಸಭೆ ಸೇರಬೇಕೆಂದೂ ತೀರ್ಮಾನಿಸಲಾಯಿತು

ಕಿಡಿ ಪತ್ರಿಕೆ ಸಂಪಾದಕರ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಸ್ವಂ ಸು.ಫೋ] ಬೆಂಗಳೂರು ೧೮

ಕಿಡಿ ಪತ್ರಿಕೆಯ ಮೇಲೆ, ಆಕ್ಷೇಪಣೀಯ ಶಾಸನದ ಪ್ರಕಾರ ಇಲ್ಲಿನ ಸೆಷನ್ಸ್ ಕೋರ್ಟಿನಲ್ಲಿ ಹೂಡಲಾಗಿರುವ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪತ್ರಿಕೆಯು ಒಂದು ಸಂಚಿಕೆಯಲ್ಲಿ "ಕಿಡಿಯ ಮೇಲೆ ಸರ್ಕಾರದ ದ್ವಿತೀಯ ಧಾಳಿ" ಎಂಬ ವಿಷಯವಾಗಿ ಪ್ರಕಟಿಸಿದ ಲೇಖನವೊಂದು ವಿಚಾರಣೆಗೆ ಅಡ್ಡಿಪಡಿಸಿದೆ ಯೆಂದು ನ್ಯಾಯಾಧೀಶರು ಹೈಕೋರ್ಟಿಗೆ ತಿಳಿಸಲಾಗಿ, ಹೈಕೋರ್ಟಿನಲ್ಲಿ ಈ ದಿನ ಶ್ರೇಷ್ಠ ನ್ಯಾಯಾಧೀಶರು ಮತ್ತು ಶ್ರೀ ವಾಸುದೇವ ಮೂರ್ತಿಯವರು ಪತ್ರಿಕೆಯ ಸಂಪಾದಕ ಶ್ರೀ ಪಿ ಲಂಕೇಶಪ್ಪ ಮತ್ತು ಪ್ರಕಟಣಕಾರ ಶ್ರೀ ಎಂ ಎಸ್ ಚಿಂತಾಮಣಿಯವರಿಗೆ ನೋಟೀಸು ಕೊಡುವಂತೆ ಆಜ್ಞೆ ಮಾಡಿದರು

ಬಾಣಾವರದಲ್ಲಿ ಭೂತ ಚೇಷ್ಟೆ

ಬಾಣಾವರದ ಬಸ್ ಸ್ಟ್ಯಾಂಡ್ ರಸ್ತೆಯಲ್ಲಿ ಕಳೆದ ಶುಕ್ರವಾರ ರಾತ್ರಿ ೮ ಗಂಟೆ ಹೊತ್ತಿನಲ್ಲಿ ಹೋಗುತ್ತಿದ್ದ ಕ್ರಮಣಬೆಳಗೊಳದ ಇಬ್ಬರು ಬಾಲಕರ ಮೇಲೆ ಮನುಷ್ಯಾಕೃತಿಯೊಂದು ಕಲ್ಲನ್ನು ಎಸೆಯಿತೆಂದೂ, ಅವರು ಚೀರಿ ಕೂಗಿಕೊಂಡರೆಂದೂ ಬಸ್ ಸ್ಟ್ಯಾಂಡ್ ಹೋಟೆಲಿನಲ್ಲಿದ್ದವರು ಅಲ್ಲಿಗೆ ಹೋಗಿ ನೋಡಲಾಗಿ ಅವರಿಗೂ ಈ ದೃಶ್ಯವು ಕಾಣಿಸಿಕೊಂಡು ಅದೃಶ್ಯವಾಯಿತೆಂದೂ ಹೇಳಲಾಗಿದೆ

○ ಕಲ್ಕತ್ತಾದಲ್ಲಿ ನಡೆದ ಘಟನೆಗಳನ್ನು ಕುರಿತು ಚರ್ಚೆ ನಡೆಸಲು ಅವಕಾಶ ದೊರೆಯದಿದ್ದುದಕ್ಕಾಗಿ ಪ್ರತಿಭಟನೆ ಸೂಚಿಸಲು ಪಾರ್ಲಿಮೆಂಟಿನ ಕಮ್ಯೂನಿಸ್ಟ್ ಮತ್ತು ಸಂಯುಕ್ತ ಸಮಾಜವಾದಿ ಪಕ್ಷದವರು ನೆನ್ನೆ ಸಭಾತ್ಯಾಗ ಮಾಡಿದರು

೩ ಲಕ್ಷ ರೂ ಚಿನ್ನದ ವಶ

ಭಾರತಕ್ಕೆ ಗೋವಾ ಸರ್ಕಾರದ ತೀರದ ಮ ೧ ಲಕ ಅಕ್ರಮವಾಗಿ ಸಾಗಿಸಿಕೊಂಡು ಬಂದ ೩ ಲಕ್ಷ ರೂ ಗಳ ಚಿನ್ನವನ್ನು ಸುಂಕದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಕಾರ್ವಾರದಿಂದ ಹುಬ್ಬಳ್ಳಿಗೆ ಕಾಡುಗಳ ಮೂಲಕ ಹೋಗುತ್ತಿದ್ದ ಟ್ರ್ಯಾಕ್ಟರೊಂದನ್ನು ಜೀಪು ಕಾರಿನಲ್ಲಿ ಅರಸಿಕೊಂಡುಹೋಗಿ ಅದರಲ್ಲಿದ್ದ ೩ ಲಕ್ಷಕ್ಕೂ ಹೆಚ್ಚು ಬೆಲೆಯಾಗುವ ಕಳ್ಳ ರವಾನೆಯ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ

ಭಾವೆಯವರ ಸ್ವಚ್ಛ ಭಾರತದ ಚಳುವಳಿ

ಭಾರತ ಸೇವಕ ಸಮಾಜದವರ ಸ್ವಚ್ಛ ಭಾರತದ ಚಳುವಳಿಯನ್ನು ನಡೆಸುವ ತಿ ಆಚಾರ್ಯ ವಿನೋಬಾ ಭಾವೆಯವರು ಸಲಹೆ ಮಾಡಿದ್ದಾರೆ

ಅಬ್ದುಲ್ ಗಫಾರ್ ಖಾನರ ನಿರ್ಬಂಧ ಕಡಿಮೆ

ಪಾಕಿಸ್ತಾನ ಪಂಜಾಬಿನ ಎಲ್ಲೆಯಲ್ಲಿ ಖಾನ್ ಅಬ್ದುಲ್ ಗಫಾರ್ ಖಾನರ ಮೇಲೆ ಯಾವ ನಿರ್ಬಂಧವೂ ಇರಕೂಡದೆಂದು ಪಾಕಿಸ್ತಾನ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಜಾಲಹಳ್ಳಿ ಕಾರ್ಖಾನೆಗೆ ವಿದೇಶೀ ಪ್ರವೀಣರು

ಬೆಂಗಳೂರು ಬಳಿ ಜಾಲಹಳ್ಳಿಯಲ್ಲಿ ನಿರ್ಮಾಣವಾಗಲಿರುವ ಯಂತ್ರ ಸಾಮಗ್ರಿಗಳ ಕಾರ್ಖಾನೆಗಾಗಿ ವಿದೇಶಗಳ ಪ್ರವೀಣರನ್ನು ಕರೆತರಹೋಗಿದ್ದ ಕಾರ್ಖಾನೆಯ ಜನರಲ್ ಮ್ಯಾನೇಜರ್ ಎಸ್ ಎಸ್ ಅಯ್ಯಂಗಾರ್ಯರು ಭಾರತಕ್ಕೆ ಹಿಂದಿರುಗಿರುವರು ಇವರ ೮೫ ಜನ ಐರೋಪ್ಯ ಮತ್ತು ೧೫ ಜನ ಭಾರತೀಯ ಪ್ರವೀಣರನ್ನು ಆರಿಸಿರುತ್ತಾರೆ ಈ ಪೈಕಿ ಈಗಾಗಲೇ ೩೦ ಜನ ಭಾರತಕ್ಕೆ ಬಂದಿರುವರು ಜುಲೈ ೧೦ ರಿಂದ ಕಾರ್ಖಾನೆಯಲ್ಲಿ ಕೆಲಸವು ಆರಂಭವಾಗುವುದು

ಪತ್ರಿಕೆಗಳ ಪ್ರದರ್ಶನ

ಮೈಸೂರು ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದವರು ಮಾರ್ಚಿಯ ಮೊದಲನೇ ವಾರದಲ್ಲಿ ವರ್ತಮಾನ ಪತ್ರಿಕೆಗಳ ಪ್ರದರ್ಶನವನ್ನು ನಡೆಸಲು ನಿರ್ಧರಿಸಿದ್ದಾರೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸುವರು

ಹರಿಕಥಾ ಕಾಲಕ್ಷೇಪ

ರಾಜಧಾನಿಯ ಚಾಮುಂಡಿಪುರದ ನಿರಂಜನರಾಜ ಅರಸರ ತೋಟದಲ್ಲಿರುವ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಗುರ್ರ ರಕೊಟೆ ಶ್ರೀಪಾದರಾಯರಿಂದ ಲಕ್ಷ್ಮಣ ಸಂಜೀವಿನಿ ಎಂಬ ಹರಿಕಥೆಯು ನಡೆಯುವುದು

ಆಕಾಶವಾಣಿ ಸಾಯಂಕಾಲದ ಕಾರ್ಯಕ್ರಮ

ದೆಹಲಿ ೬-೫ ಹಿಂದಿ ೬-೪೦ ವಾರ್ತೆ ಸಂ ... [illegible]

ಹಾಸನದ ಕಾಲೇಜಿಗೆ ೧॥ ಲಕ್ಷ ರೂ. ಸಹಾಯ

ಹಾಸನದ ಇಂಟರ್‌ಮೀಡಿಯೆಟ್ ಕಾಲೇಜಿಗೆ ೧॥ ಲಕ್ಷ ರೂ ಗಳನ್ನು ಗ್ರ್ಯಾಂಟಾಗಿ ಕೊಡಲು ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ನಿರ್ಧರಿಸಿರುವರೆಂದು ವರದಿಯಾಗಿದೆ ತತ್ವಶಾಸ್ತ್ರ ಕ ವಿಷಯಗಳಿಗೆ ರಸಾಯನ ಶಾಸ್ತ್ರ ಶಾಸ್ತ್ರ ಮತ್ತು ಪ್ರಾಣಿ ಶಾಸ್ತ್ರಗಳನ್ನು (...) ಹೊಸ ವರ್ಷ ದಿಂದ ಇಡಲಾಗುವು

ಅಶ್ಲೀಲ ಪುಸ್ತಕಗಳ ರಾಶಿ ಮದ್ರಾಸು ಪೋಲೀಸರಿಂದ ಬೆಂಕಿ

ಮದ್ರಾಸಿನ ಮೂರು ಪ್ರದೇಶಗಳಲ್ಲಿ ... ಡಿಸೆಂಬರ ತಿಂಗಳ ಸಂಬಂಧದ ... ದ ೧೨,೬೦೦ ಅಶ್ಲೀಲವಾದ ಪುಸ್ತಕಗಳನ್ನು ಪೋಲೀಸರು ಸುಟ್ಟುಹಾಕಿದ್ದಾರೆ. ಕಾಮಶಾಸ್ತ್ರ ಮತ್ತು ಸಿನಿಮಾ ಲೀಲೆ ಎಂಬ ... ಭಿದಾನಗಳಲ್ಲಿ ಪುಸ್ತಕಗಳನ್ನು ಮುದ್ರಿಸಲಾಗಿದ್ದಿತು

ರಷ್ಯದಲ್ಲಿ ೪೭॥ ಲಕ್ಷ ಸೈನ್ಯ

ರಷ್ಯವು ಕಳೆದ ೫೧ ನೇ ಸಾಲಿನಿಂದ ತನ್ನ ಸೈನ್ಯವನ್ನು ೧॥ ಲಕ್ಷದಷ್ಟು ಹೆಚ್ಚಿಸಿಕೊಂಡಿರುವುದಾಗಿಯೂ, ಅಲ್ಲಿ ಈಗ ೪೭॥ ಲಕ್ಷ ಸೈನಿಕರು ಇರುವರೆಂದೂ ತಿಳಿದುಬಂದಿದೆ

೩೦ ಅಂಗುಲ ಉದ್ದದ ಹೆಜ್ಜೆ

೩೦ ಅಂಗುಲ ಉದ್ದ ಮತ್ತು ೧೦ ಅಂಗುಲ ಅಗಲವಿರುವ ಹೆಜ್ಜೆಯ ಗುರುತುಗಳು ಇಂಗ್ಲೆಂಡಿಗೆ ದಕ್ಷಿಣದಲ್ಲಿ ಕಡಲ್ಗಾಲುವೆಯಲ್ಲಿರುವ ವೈಟ್ ದ್ವೀಪದಲ್ಲಿ ಕಾಣಬಂದಿವೆ ಹಿಮಾಲಯ ಪರ್ವತದಲ್ಲಿರುವ ಹಿಮ ಮಾನವನ ಹೆಜ್ಜೆಗಿಂತಲೂ ಇವು ದೊಡ್ಡವು ಈ ಹೆಜ್ಜೆಗಳಲ್ಲಿ ಐದು ಬೆರಳುಗಳೂ ಕಾಣಿಸುವುವು

ಪ್ರೇಮ ಪತ್ರಗಳ ಬರಹದ ಸ್ಪರ್ಧೆ ಸರಿಯಲ್ಲ

ಬೆಂಗಳೂರು ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದ ದಿನಾಚರಣೆಯಲ್ಲಿ ಕಳೆದ ೧ ನೆ ವಾರ ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ ಅಧ್ಯಕ್ಷರಾದ ಶ್ರೀ ಹೆಚ್ ಬಿ ಗುಂಡಪ್ಪ ಗೌಡರು ಭಾಷಣ ಮಾಡಿ, ಪ್ರೇಮ ಪತ್ರ ಸ್ಪರ್ಧೆಯನ್ನು ಏರ್ಪಡಿಸುವುದು ಸರಿಯಲ್ಲವೆಂದು ತಿಳಿಸಿದರು ದಿನಾಚರಣೆಯ ಅಂಗವಾಗಿ ಇಂತಹ ಸ್ಪರ್ಧೆಯೊಂದು ಇದ್ದಿತು ವಿದ್ಯಾರ್ಥಿಯೇ ಪ್ರೇಮ ಪತ್ರಗಳನ್ನು ಬರೆಯುತ್ತಿರುವಾಗ ಈ ಬಗ್ಗೆ ಸ್ಪರ್ಧೆ ಬೇಕೇಕೆಂದು ಅವರು ಪ್ರಶ್ನಿಸಿದರು ನಾವು ವಿದ್ಯಾರ್ಥಿಗಳಾಗಿದ್ದಾಗ ಈ ರೀತಿಯ ಯೋಚನೆಗಳೇ ಬರುತ್ತಿರಲಿಲ್ಲವೆಂದೂ, ಈಗಿನ ಕಾಲದಲ್ಲಿ ಇಂತಹ ಸ್ಪರ್ಧೆಗಳ ನಡೆಯಲೇಬೇಕಾಗುತ್ತಿರುವುದು ಆಶ್ಚರ್ಯಕರವೆಂದೂ ಅವರು ಹೇಳಿ, ವಿದ್ಯಾರ್ಥಿಗಳು ಕಾಲಹರಣ ಮಾಡದೆ ವ್ಯಾಸಂಗಕ್ಕೆ ಹೆಚ್ಚು ಗಮನವೀಯಬೇಕೆಂದು ತಿಳಿಸಿದರು

ಶಿಶು ಸಾಹಿತ್ಯ ಸಂಘ, ಜಯನಗರ ಮೈಸೂರು

ಕ್ರೀಡಾ ಕೇಂದ್ರ ನಾಯಕರ ಶಿಕ್ಷಣ ಶಿಬಿರ

ತಾ॥ 16 ೨-54 ರಲ್ಲಿ ನಡೆದ ಕ್ರೀಡಾ ಕೇಂದ್ರ ಸಮಿತಿಯು ಮುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಫೆಬ್ರವರಿ 20ನೆಯ ಭಾನುವಾರದಿಂದ ಒಂದುವಾರ ಕಾಲ ಶಿಶು ಸಾಹಿತ್ಯ ಸಂಘದ ಆಶ್ರಯದಲ್ಲಿ ಈ ಶಿಬಿರವು ಕೃಷ್ಣಮೂರ್ತಿಪುರಂನಲ್ಲಿರುವ ಕ್ರೀಡಾ ಕೇಂದ್ರದಲ್ಲಿ ನಡೆಯಬೇಕೆಂದೂ, 16 ವರ್ಷಕ್ಕೆ ಮೇಲ್ಪಟ್ಟ ವಯಸ್ಕರಿಗೆ ಈ ಶಿಬಿರಕ್ಕೆ ಸೇರಲು ಅವಕಾಶವುಂಟೆಂದೂ ತೀರ್ಮಾನಿಸಲಾಯಿತು ಶಿಕ್ಷಣ ಪಡೆಯಲು ಅಪೇಕ್ಷಿಸುವವರು ಶಿಶು ಸಾಹಿತ್ಯ ಸಂಘದ ಕಾರ್ಯದರ್ಶಿಯವರಿಂದ ವಿವರಗಳನ್ನು ತಿಳಿದು ತಮ್ಮ ಅರ್ಜಿಯನ್ನು 20 ನೇ ತಾರೀಖಿನ ಒಳಗೆ ಸಲ್ಲಿಸಬೇಕೆಂದು ಕೋರಿದೆ

ಎಸ್ ನಾಗೇಶರಾವ್
ಜನರಲ್ ಸೆಕ್ರೆಟರಿ

ಅಣು ಧಾಳಿಯಿಂದ ರಕ್ಷಣೆ

ಅಮೆರಿಕದ ಮಿಲಿಟರಿ ಮುಖ್ಯಸ್ಥರುಗಳಿಗಾಗಿ ಅಣು ಧಾಳಿಯ ರಕ್ಷಣಾ ಸ್ಥಾನವನ್ನು ವಾಷಿಂಗ್ಟನ್ನಿಗೆ ೬೫ ಮೈಲಿ ದೂರವಿರುವ ಬೆಟ್ಟದ ಪ್ರದೇಶದಲ್ಲಿ ೩॥ ಕೋಟಿ ಡಾಲರ್ ವೆಚ್ಚದಿಂದ ಕಲ್ಪಿಸಲಾಗಿದೆ ಅಣುಬಾಂಬು ... ಬಾಂಬುಗಳು ಈ ಸ್ಥಳವನ್ನು ಭೇದಿಸದಂತೆ ... ಬಂಡೆಯನ್ನು ಕೊರೆದು ... ಭಾರಿ ಕೋಟೆಯೊಂದನ್ನು ರಚಿಸಲಾಗಿದೆ

ಪ್ರಸಂಗ ಕಾಡು ಪ್ರಾಣಿಗಳ ಮಧ್ಯೆ ತೋಳ ಬಾಲಕನ ವಾಸ

... ಸ್ಪತ್ರೆಯಲ್ಲಿ ಚಿಕಿತ್ಸೆ ಕೊಂಡುತ್ತಿರುವ ತೋಳ ಬಾಲಕನ ಮೇಲೆ ಹೊಸ ಪ್ರಯೋಗವೊಂದನ್ನು ನಡೆಸುವ ಆಲೋಚನೆ ಇದೆ ತೋಳಗಳು ಮತ್ತು ಕಾಡು ಪ್ರಾಣಿಗಳ ನಡುವೆ ಬಾಲಕನನ್ನು ಬಿಟ್ಟು, ತೋಳಗಳು ನಿಜವಾಗಿಯೂ ಹುಡುಗನನ್ನು ಸಾಕಬಲ್ಲವೇ ಎಂಬುದನ್ನು ಪರೀಕ್ಷಿಸುವ ವಿಚಾರವು ಮೂಡಲಾಗುತ್ತಿದೆ. ಹುಡುಗನು ಈಗ ಬಲಾಢ್ಯನಾಗುತ್ತಿರುವನು.

ಬಂಗಾಳಾ ಶಾಸನ ಸಭಾ ಸದಸ್ಯರ ಸಭಾತ್ಯಾಗ

ಬಂಗಾಳಾ ಶಾಸನ ಸಭೆಯು ಹೊರಗಡೆ ಪೋಲೀಸರು ಆಕ್ರಮವಾಗಿಯ ಮತ್ತು ಲಂಚ ಪ್ರಯೋಗ ಮಾಡುತ್ತಿರುವಾಗ ಸಭೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂದು ಹೇಳಿ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ, ೪ ಜನ ಬಿಟ್ಟು, ಮಿಕ್ಕ ಸ್ವತಂತ್ರರೂ ಮೊನ್ನೆ ಸಭಾತ್ಯಾಗ ಮಾಡಿದರು

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೇಕಾಯಿ	೨೭ ೦ ೦	೨೨ ೮ ೦
ಹರಳೂಬೀಜ	೨೮ ೨ ೦	೨೯ ೮ ೦
ಹುಚ್ಚೆಳ್ಳು	೪೮ ೨ ೦	೫೨ ೦ ೦
ಹೊಂಗೇಬೀಜ	೨೨ ೦ ೦	೨೪ ೧೨ ೦
ಹ ಸೇಬೀಜ	೧೨ ೮ ೦	೭ ೨ ೨
ಜ ೦ ೩	೮ ೦ ೦	೩ ೮
ಹುರುಳಿ	೯೩ ೮ ೨	೮೧ ೩ ೦
ಜಲಸಂದು	೩೦ ೨ ೦	೮೩ ೨ ೦
ಮು	೨೯ ೪ ೦	೩೦ ೦ ೦
ರವ	೪೫ ೮ ೦	೫೭ ೮ ೦
ಸ ... ಡಿ	೧೫ ೨ ೦	೨೭ ೧೦ ೦
ಧ	೧೬ ೨ ೦	೨ ೮ ೦
ಹ ಡಸೆ	೩ ೯ ೦	೮ ೦ ೦
ಸೀಗೆಕಾಯಿ	೩ ೧೧ ೦	೪ ೧೦ ೦
ಮೆಣಸಿನಕಾಯಿ	೩೦ ೦ ೦	೨೧ ೨ ೦
ತೆಂಗಿನಕಾಯಿ ೧೦೦೦	೧೩೨ ೦ ೦	೩೧೨ ೦ ೦

ಮದ್ರಾಸಿನಲ್ಲಿ ಮಧ್ವ ನವಮಿ ಉತ್ಸವ

ಮದ್ರಾಸಿನ ಮಾಧ್ವ ಸಂಘದವರು ಶ್ರೀ ಸಂಘದ ಈ ಸಾರಿಯೂ ಮಧ್ವ ನವಮಿ ಉತ್ಸವವನ್ನು ಮಾರ್ಚ್ ರಸ್ತೆಯ ಮೌಲೀಶ್ವರಾ ಶ್ರೀ ಕೆ ಸೀತಾರಾಮರಾಯರ ವಾಸಸ್ಥಾನ ಭವನದಲ್ಲಿ ಕಳೆದ ೧೧ ಮತ್ತು ೧೨ ನೇ ತಾ ನೆರವೇರಿಸಿದರು ೧೧ ನೇ ತಾ॥ ಪೂಜೆ, ಸಂತರ್ಪಣೆಗಳು ನಡೆದಬಳಿಕ, ಉಡುಪಿಯ ಅಂಬಲಪಾಡಿ ಪಾಠಶಾಲೆಯ ಪ್ರಧಾನಾಧ್ಯಾಪಕರಾದ ವೇದಾಂತ ರತ್ನಂ ಶ್ರೀ ಕಟ್ಟೆ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಸಂಸ್ಕೃತ ಪಂಡಿತರಾದ ಶ್ರೀ ಕೆ ಎಲ್. ವಿ ಶಾಸ್ತ್ರಿಯವರಿಂದ ಸ್ವಾಗತ ಭಾಷಣವಾದನಂತರ ವಿದ್ಯಾರ್ಥಿಗಳಿಗೂ, ಮತತ್ರಯ ವಿದ್ವಾಂಸರುಗಳಿಗೂ ಯಥೋಚಿತ ಸಂಭಾವನೆಗಳನ್ನು ಅಧ್ಯಕ್ಷರು ವಿನಿಯೋಗ ಮಾಡಿದರು. ಬೆಂಗಳೂರಿನ ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಶ್ರೀಪಾದಾಚಾರ್ಯರು ಪರತತ್ವ ಸ್ವರೂಪ ಎಂಬ ವಿಷಯವಾಗಿ ಭಾಷಣ ಮಾಡಿ ಬ್ರಹ್ಮನು ಗುಣಪೂರ್ಣನೆಂದು ಸಿದ್ಧಾಂತವಾಗಿರುವುದೆಂದು ಶೃತಿ ಮತ್ತು ಶಾಸ್ತ್ರಗಳಿಂದ ಉಪಪಾದಿಸಿದರು

ಸಂಜೆ ಶ್ರೀ ಸೀತಾರಾಮರಾಯರು ಮತ್ತು ಅವರ ಸಹೋದರರು ಗೀತ ಮತ್ತು ನೃತ್ಯಗಳೊಡನೆ ಮಧ್ವಾಚಾರ್ಯರ ಭಾವಚಿತ್ರದ ಮೆರವಣಿಗೆಯನ್ನು ನಡೆಸಿದರು ಮದ್ರಾಸಿನ ಮತ ಸಂಬಂಧದ ಪುದುವಟ್ಟುಗಳ ಮಂತ್ರಿ ಶ್ರೀ ವೆಂಕಟಸ್ವಾಮಿ ನಾಯ್ಡುರವರು ಭಾಗವಹಿಸಿದ್ದರು. ಆ ದಿನ ಮತ್ತು ಮಾರನೇ ದಿನ ಸಹಸ್ರಾರು ಜನರಿಗೆ ಸಂತರ್ಪಣೆ ಮಾಡುದಲ್ಲದೆ, ೧೪ನೇ ತಾ॥ ಸಹಸ್ರಾರು ಬಡಬಗ್ಗರಿಗೆ ಅನ್ನ ದಾನವು ವಿಪ್ಪಾಡಾಗಿದ್ದಿತು.

ಸರಿಸಾಮ ಸೂಲೆಗೆ ಖಾತರಿಯಾದ ಔಷಧಿ

(Whooping Cough Remedy)

ನಾಯಿಕೆಮ್ಮಿಗೆ ಖಾತರಿಯಾದ ಔಷಧಿ ಇದಾಗಿರುತ್ತದೆ

ಬೆಲೆ ರೂ. 2-8-0

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ಅಗ್ರಹಾರ, ಮೈಸೂರು

Edited, Printed and Published by A R Nagarajan at Sadhvi Press D.Subbiah Road, Mysore

In Aid of Blind, Deaf & Dumb
ARTS' FESTIVAL
AT
CRAWFORD HALL, MYSORE
On 19th, 20th & 21st February 1954
Daily at 5 30 P M
- TICKETS -
Season Rs 2.8.0 1.8 0 1.0.0 Daily Rs 1.8 0 0.12.0 0.8.0

ಮನೆಗಳು ಕ್ರಯಕ್ಕಿವೆ

ಮೈಸೂರು ಸಿಟಿ ಡಿ ಸುಬ್ಬಯ್ಯ ರೋಡ್ ಹೋಟೆಲ್ ಬೀದಿ ಕೃಷ್ಣಮೂರ್ತಿಪುರಂ ಚಾಮುಂಡಿ ಬಡಾವಣೆ, ವಾಣೀವಿಲಾಸಪುರ ಮತ್ತು ಸರಸ್ವತಿಪುರಗಳಲ್ಲಿ ಉತ್ತಮವಾದ ಮನೆಗಳು ನಮ್ಮಲ್ಲಿ ಕ್ರಯಕ್ಕೆ ಮತ್ತು ಭೋಗ್ಯಕ್ಕೆ ಇವೆ ಕೂಡಲೇ ವಿಚಾರಿಸಿ —

ಜಯ ಲ್ಯಾಂಡ್ ಕಂಪೆನಿ,

ಸ್ಥಿರ ಸ್ವತ್ತುಗಳ ವ್ಯವಹಾರದ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್
ಮೈಸೂರು ಫೋನ್ 520

ಟೆಲಿಫೋನ್ ನಂ 792

ಲಗ್ನದ ಜವಳಿಗಳು
ಮೈ॥ ಗೌ॥ ಸಿಲ್ಕ್ ಸೀರೆ,
ಧರ್ಮಾವರಂ, ಸೂರತ್, ನಾಗಪುರ
ಸೀರೆ ಮತ್ತು ನೂಲಿನ ಸೀರೆಗಳಿಗೆ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

॥ ವಂದೇ ಮಾತರಂ ॥

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE FRIDAY 19-2-1954 : ಮೈಸೂರು : ಶುಕ್ರವಾರ ೧೯-೨-೧೯೫೪ [ಸಂಚಿಕೆ

ನೆಹರೂ ಸರ್ಕಾರದ ಖಂಡನಾ ನಿರ್ಣಯಕ್ಕೆ ಭಾರಿ ಸೋಲು

ಚಾಮರಾಜನಗರದ ಬಳಿ ಸುವರ್ಣಾವತಿ ನದಿಗೆ ಸೇತುವೆ

ಜಿಲ್ಲಾ ಬೋರ್ಡಿನಲ್ಲಿ ನಿರ್ಣಯ

ಮೈಸೂರು ೧೮

ನೆನ್ನೆ ನಡೆದ ಜಿಲ್ಲಾಬೋರ್ಡಿನ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಹೆಚ್. ಎಂ ಚನ್ನಬಸಪ್ಪನವರು ಬೋರ್ಡುಗಳ ರದ್ದಿಯಾತಿಯ ಬಗ್ಗೆ ಸರ್ಕಾರವು ಅನುಸರಿಸಿದ ವಿಧಾನವನ್ನು ಟೀಕಿಸುತ್ತಾ, ಅದು ಹಿಂದಿನ ಸರ್ಕಾರದ ಮತ್ತು ಶಾಸನ ಸಭೆಗಳ ಪ್ರತಿಷ್ಠೆಗೆ ಕಳಂಕ ತರುವಂತಿದೆಯೆಂದೂ ಮತ್ತು ಪರಿಸ್ಥಿತಿಯನ್ನು ತ್ರಿಶಂಕು ಸ್ವರ್ಗದಂತೆ ಅನಿಶ್ಚಿತತೆಕ್ಕಿಟ್ಟು ಜನಗಳ ಪಾಲ ಭೃಕ್ಷೆ ಧಕ್ಕೆಯುಂಟುಮಾಡುವುದೆಂದೂ ನುಡಿದರು

ಪ್ರಸ್ತುತ ಅಡಳಿತದಲಿರಬಹುದಾದ ಲೋಪದೋಷಗಳನ್ನು ತಿದ್ದಿ ಉತ್ತಮ ಸೂ... ಜನರು ಅಭಿವೃದ್ಧಿ ... ಗಳಿಗೆ ಧನಸಹಾಯ ಮಾಡಲು ... ಬಗ್ಗೆ ... ರಿ ಪರಿಶೀಲನಾ ಸಮಿತಿಯವರು ... ಯುವವರೆಗೆ ಕೆಲಸ ... ಗ ... ಅನಾನುಕೂಲವು ... ಸರ್ಕಾರವೂ ಮತ್ತು ಸಮಿತಿಯು ... ಜನಾಭಿಪ್ರಾಯವನ್ನು ... ಬೇಕೆಂದು ಪ್ರಾರ್ಥಿಸುತ್ತೇನೆ — ಎಂದು ನುಡಿದ

ಅನಂತರ ಕೆಳಗೆ ಕಂಡ ವಿಷಯಗಳನ್ನು ತೀರ್ಮಾನಿಸಲಾಯಿತು —

೧) ಚಾಮರಾಜನಗರ ತಾಲ್ಲೂಕು ಆಲೂರಿನ ಬಳಿ ಸುವರ್ಣಾವತಿ ನದಿಗೆ ೧,೧೩,೦೦೦ ರೂಗಳ ವೆಚ್ಚದ ಅಂದಾಜನ್ನು ಬೋರ್ಡು ಅರ್ಧ ಭಾಗ ಕೊಟ್ಟು, ಸೇತುವೆ ಕಟ್ಟಿಸುವುದು

೨) ಮೈಸೂರು ತಾಲ್ಲೂಕು ದೇವಲಾಪುರದಲ್ಲಿ ಆಯುರ್ವೇದ ಆಸ್ಪತ್ರೆಯನ್ನೂ ಟಿ ನರಸೀಪುರ ತಾಲ್ಲೂಕು ಮೂಗೂರಿನಲ್ಲಿ ಒಂದು ಪಶುವೈದ್ಯ ಶಾಲೆಯನ್ನೂ, ಯಳಂದೂರು ತಾಲ್ಲೂಕು ಮಲಾರಪಾಳ್ಯದಲ್ಲಿ ಒಂದು ನ್ಯೂಟೈಪ್ ಆಸ್ಪತ್ರೆಯನ್ನೂ ಕಟ್ಟಿಸಿಕೊಡುವುದು

೩) ನಂಜನಗೂಡು ತಾಲ್ಲೂಕ ದೇವನೂರು ಜಿಲ್ಲಾ ಬೋರ್ಡ್ ಹೈಸ್ಕೂಲು ಕಟ್ಟಡಕ್ಕೆ ೧೦ ಸಾವಿರ ರೂಗಳ ಮತ್ತು ಬನ್ನೂರಿನ ಹೈಸ್ಕೂಲು ಕಟ್ಟಡಕ್ಕೆ ೧೨ ಸಾವಿರ ರೂಗಳ ಸಹಾಯ ದ್ರವ್ಯವನ್ನು ಕೊಡುವುದು

ಜಿಲ್ಲಾದ್ಯಂತ ಹೊಸದಾಗಿ ರಚಿಸಲಾದ ಸುಮಾರು ೧೭೩ ಮೈಲಿ ರಸ್ತೆಗಳನ್ನು ವಹಿಸಿಕೊಳ್ಳಲು ಒಪ್ಪಲಾಯಿತು

ಸಭೆಯ ಪ್ರಾರಂಭದಲ್ಲಿ, ಚೀಫ್ ಆಫೀಸರಾಗಿದ್ದು ಮೃತಪಟ್ಟ ಶ್ರೀ ಟಿ ಬಿ ನಂಜರಾಜೆ ಅರಸಿನವರ ಬಗ್ಗೆ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಲಾಯಿತು

ಸಂಸ್ಥಾನದ ಹೊರಗೆ ಸಾಗುತ್ತಿದ್ದ ೪೫ ಮೂಟೆ ಅಕ್ಕಿ ಪತ್ತೆ

ಸಂಸ್ಥಾನದ ಹೊರಗಡೆಗಾಗಿ ಲಾರಿಯೊಂದರಲ್ಲಿ ಹೋಗುತ್ತಿದ್ದ ೪೫ ಮೂಟೆ ಅಕ್ಕಿಯನ್ನು ರಾಜಧಾನಿಯ ಕ್ರೈಂ ಬ್ರಾಂಚ್ ಇನ್ಸ್ಪೆಕ್ಟರ್ ಶ್ರೀ ಹೆಚ್ ಎಸ್ ಎ ಗೌಡರು ಸಿಬ್ಬಂದಿಯೊಡನೆ ಹೆಗ್ಗಡದೇವನಕೋಟೆ ತಾಲ್ಲೂಕು ಬಾವಲಿ ಗೇಟು ಬಳಿ ಪತ್ತೆ ಹಚ್ಚಿರುವರು ಮುಂದಿನ ಕ್ರಮ ನಡೆಯುತ್ತಿದೆ

ಮಗನ ರಕ್ಷಣೆಗಾಗಿ ಚಿರತೆಯೊಡನೆ ಹೋರಾಟ

ನಾಗಪುರದ ಬಳಿ ಒಂದು ಕಾಡಿನಲ್ಲಿ ಶ್ಯಾಮರಾವ್ ಎಂಬ ರೈತನ ಹುಡುಗನ ಮೇಲೆ ಚಿರತೆಯೊಂದು ಬಿದ್ದಾಗ, ಹುಡುಗನ ತಂದೆ ಬಾಜಿರಾವ್ ಎಂಬಾತನು ಆ ಕಾಡು ಮೃಗದೊಡನೆ ಹೋರಾಡಿ ಮಗನನ್ನು ರಕ್ಷಿಸಿದ ವಾರ್ತೆಯು ಬಂದಿದೆ ಆತನ ತನ್ನ ಎಡಗೈಯನ್ನು ಚಿರತೆಯ ಬಾಯಲ್ಲಿ ಇಟ್ಟು ವಿತ್ತೊಂದು ಕೈಯಲ್ಲಿದ್ದ ಕೊಡಲಿಯಿಂದ ಅದರ ತಲೆಯ ಮೇಲೆ ಹೊಡೆದು ಕಾದಾಡಿದನೆಂದೂ ಅಷ್ಟು ಹೊತ್ತಿಗೆ ಹತ್ತಿರದಲ್ಲೇ ಇದ್ದ ಜನರ ಬಂದು ಚಿರತೆಯನ್ನು ಕೊಂದರೆಂದೂ ಕೇಳಲಾಗಿದೆ ಅವರಿಬ್ಬರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ

ಕಳಪಾತ್ರಿ ಸ್ವಾಮಿಯವರ ಬಂಧನ

... ಸ್ವಾಮಿ ಕರಪಾತ್ರಿಜಿ ... ಇಬ್ಬರು ಸ್ತ್ರೀ ... ಜನ ... ಸಾಹೇಯಲ್ಲಿ ... ಅಡ್ಡಿ ಪಡಿಸಿದ ... ರಕ್ಕಾಗಿ ... ದಸ್ತಗಿರಿ ಮಾಡಲಾಗಿದೆ

ಚರ್ಚಿಲರ ನಿವೃತ್ತಿ

... ಮುಗಿಸಿಕೊಂಡು ಬ್ರಿಟನ್ನಿನ ರಾಣಿ ಎಲಿಜಬೆತ್ತರು ಲಂಡನ್ನಿಗೆ ಹಿಂದಿರುಗುವಾಗ ... ಅವರಿಗೆ ಕೊಡಲಾಗುವ ವೈಭವದ ಸ್ವಾಗತ ಸಮಾರಂಭದಲ್ಲಿ ಮುಖ್ಯ ಪಾತ್ರವನ್ನು ವಹಿಸಿದನಂತರ ಪ್ರಧಾನಿ ಚರ್ಚಿಲ್ಲರು ನಿವೃತ್ತರಾಗಿ ವರೆಂದು ವರದಿಯಾಗಿದೆ ಅವರ ಸ್ಥಾನವನ್ನು ವಿದೇಶಾಂಗ ಮಂತ್ರಿ ಆಂತೊನಿ ಈಡನ್ನರು ವಹಿಸಿಕೊಳ್ಳುವರೆಂದು ಹೇಳಲಾಗಿದೆ

ಮಲಗಿದ್ದಾಗ ತಲೆ ಮೇಲೆ ಕಲ್ಲು ಹಾಕಿ ಸ್ತ್ರೀಯ ಕೊಲೆ

ಕಣೂರು ಬಳಿ ಲಕ್ಷ್ಮೀಪುರ ಎಂಬ ಹಳ್ಳಿಯಲ್ಲಿ ದಾಸಾ ಬೋವಿ ಎಂಬುವನ ಪತ್ನಿ ೨೦ ವರ್ಷದ ತಿಮ್ಮಮ್ಮ ಎಂಬಾಕೆಯು ಮನೆಯಲ್ಲಿ ಕಳೆದ ಭಾನುವಾರ ರಾತ್ರಿ ಮಲಗಿದ್ದಾಗ ಯಾರೋ ದೊಡ್ಡ ಕಲ್ಲೊಂದನ್ನು ಆಕೆಯ ತಲೆಯ ಮೇಲೆ ಎತ್ತಿಹಾಕಿದರೆಂದೂ, ಅದರಿಂದ ಅವಳು ಪ್ರಾಣ ಬಿಟ್ಟಳೆಂದೂ ವರದಿಯಾಗಿದೆ ಆಕೆಯ ಗಂಡ ಮತ್ತು ಇತರರ ಕಣಕ್ಕೆ ಹೋಗಿ ಮಲಗಿದ್ದರೆಂದೂ ಮನೆಯಲ್ಲಿದ್ದ ಸಾಮಾನುಗಳನ್ನು ದೋಚಲಾಗಿದೆಯೆಂದೂ ವರದಿಯಾಗಿದೆ

ಹಿಂದಿ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ, ವಿಶಾರದ ಮತ್ತು ಪ್ರವೀಣ ಪರೀಕ್ಷೆಗಳು ನಂಕೆಯಿಂದ ... ಬನುಮಯ್ಯನವರ ಹೈಸ್ಕೂಲಿನಲ್ಲಿಯೂ ಮತ್ತು ನಾಳಿದ್ದಿನಿಂದ ಪ್ರಾಥಮಿಕ, ಮಧ್ಯಮ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳು ಶಾರದಾ ವಿಲಾಸ ಹೈಸ್ಕೂಲಿನಲ್ಲಿಯೂ ಪ್ರಾರಂಭವಾಗುತ್ತವೆ ವಿದ್ಯಾರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಮತ್ತು ಹೆಚ್ಚಿನ ವಿವರಗಳನ್ನು ಚಾಮರಾಜ ರಸ್ತೆಯಲ್ಲಿರುವ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಪಡೆಯಬಹುದು

ಶ್ರೀಮನ್ಮಹಾರಾಜರಿಂದ ಚಂಡಿ ಯಾಗದ ಆರಂಭ

ಮೈಸೂರು ೧೮

ಕೋಟೀಶ್ವರದ ಶ್ರೀ ಶ್ರೀನಿವಾಸರಾಯರು ಚಾಮುಂಡಿ ಬೆಟ್ಟದಲ್ಲಿ ಬರುವ ತಿಂಗಳು ನಡೆಸಲಿರುವ ಸಹಸ್ರ ಚಂಡಿ ಯಾಗದ ಆರಂಭೋತ್ಸವವನ್ನು ನೆರವೇರಿಸಲು ಶ್ರೀಮನ್ಮಹಾರಾಜರವರು ಒಪ್ಪಿಕೊಂಡಿರುವರೆಂದು ಗೊತ್ತಾಗಿದೆ ಶ್ರೀಗಳಾದ ಪರಕಾಲ ಮಠದ ಏಜೆಂಟ್ ಕಸ್ತೂರಿ ರಂಗಾಚಾರ್, ಕೋಟೀಶ್ವರ ಶ್ರೀನಿವಾಸರಾವ್, ಶ್ರೀ ಎ ಕೃಷ್ಣಮೂರ್ತಿರಾವ್, ರಾವ್ ಬಹದ್ದೂರ್ ರಾಮಸ್ವಾಮಿ, ಎಂ ಆರ್ ಸಿ ಬಸಪ್ಪ, ಮತ್ತು ಎಂ ಎಚ್ ನಾಗಣ್ಣನವರು ಶ್ರೀಮನ್ಮಹಾರಾಜರನ್ನು ನೆನ್ನೆ ಬೆಳಿಗ್ಗೆ ವಸಂತ ಮಹಲಿನಲ್ಲಿ ಭೇಟಿ ಮಾಡಿ ಈ ಬಗ್ಗೆ ಪ್ರಾರ್ಥಿಸಿರು

ಮಕ್ಕಳ ಅಪಹರಣದ ಸುದ್ದಿ ಶುದ್ಧ ಸುಳ್ಳು

ನಗರದಲ್ಲಿ ಮಕ್ಕಳನ್ನು ಅಪಹರಿಸುತ್ತಿರುವ ರೆಂಬದಾಗಿ ಹರಡಿರುವ ಸುದ್ದಿಯು ಕೇವಲ ನಿರಾಧಾರವೆಂದು ಖಚಿತವಾಗಿ ತಿಳಿದುಬಂದಿದೆ

ರಾಜಧಾನಿಯ ಒಂದು ಮಗುವೂ ಸಹ ಇದುವರೆಗೆ ಗೈರುಹಾಜರಾಗಿಲ್ಲವೆಂದು ಗೊತ್ತಾಗಿದೆ ಹಾಗೆ ಯಾವುದಾದರೂ ಮಕ್ಕಳು ತಪ್ಪಿಸಿಕೊಂಡಿದ್ದಲ್ಲಿ ಅಥವಾ ಪತ್ತೆಯಿಲ್ಲದಿದ್ದಲ್ಲಿ ಅವರ ಹೆಸರು ಮತ್ತು ವಿಳಾಸಗಳನ್ನು ದಯವಿಟ್ಟು ತಿಳಿಸಬೇಕಾಗಿ ಕೋರುತ್ತೇವೆ

ಆಗುಂಬೆ ಬಳಿ ಗುಂಡಿಗೆ ಹಾರಿ ಆತ್ಮಹತ್ಯೆ

ನಿವೃತ್ತ ಅರಣ್ಯ ಇಲಾಖಾ ರೇಂಜರಾದ ಗಿತ್ತ ನಾಯಕ ಎಂಬುವರು ೧ ವಾರದಿಂದಲೂ ಪತ್ತೆಯಿಲ್ಲವಾಗಿದ್ದರೆಂದೂ, ಈಗ ಅವರ ಶವವು ಆಗುಂಬೆ ಬಳಿ ಬ್ರಹ್ಮನಗುಂಡಿಯಲ್ಲಿ ಬಿದ್ದಿರುವುದಾಗಿಯೂ ವರದಿಯಾಗಿದೆ ಅವರ ೧೨ ನೇ ತಾ॥ ಗುಂಡಿಗೆ ಹಾರಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವರೆಂದು ಹೇಳಲಾಗಿದೆ

ಆಸ್ಪತ್ರೆ ಮತ್ತು ಪ್ರಾಥಮಿಕ ಶಾಲಾ ಕಟ್ಟಡದ ಪ್ರಾರಂಭೋತ್ಸವ

ಮೈಸೂರ ತಾಲ್ಲೂಕು ಕಡಕೊಳ ಗ್ರಾಮದಲ್ಲಿ ಹೊಸರೀತಿಯ ಆಸ್ಪತ್ರೆಯ ಆರಂಭೋತ್ಸವವನ್ನು ನಾಳಿದ್ದು ಬೆಳಿಗ್ಗೆ ೧೧ ಗಂಟೆಗೆ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ನೆರವೇರಿಸುವರು

ಟಿ ನರಸೀಪುರದ ತಾಲ್ಲೂಕು ಕೇತುಪುರದಲ್ಲಿ ಶ್ರೀ ಜಿ ಪುಟ್ಟೇಗೌಡರ ಪ್ರಾಥಮಿಕ ಪಾಠಶಾಲೆಯ ಕಟ್ಟಡದ ಪ್ರಾರಂಭೋತ್ಸವವನ್ನು ನಾಳಿದ್ದು ಮಧ್ಯಾಹ್ನ ೨ ಗಂಟೆಗೆ ಶ್ರೀ ಹೆಚ್ ಎಂ ಚನ್ನಬಸಪ್ಪನವರು ನೆರವೇರಿಸುವರು ತಾಲ್ಲೂಕು ಅಮಲ್ದಾರರಾದ ಶ್ರೀ ಕೆ. ಸಿದ್ದೇಗೌಡರವರು ಅಧ್ಯಕ್ಷತೆ ವಹಿಸುವರು

○ ರಂಗೂನಿಗೆ ನೂರು ಮೈಲಿ ದೂರದಲ್ಲಿರುವ ಪ್ಯಾಲ್ಯೂನ್‌ನಲ್ಲಿ ಮೊನ್ನೆ ರಾತ್ರಿ ಬೆಂಕಿ ಅನಾಹುತವು ನಡೆದ ೩ ಸಾವಿರ ಮನೆಗಳು ಸುಟ್ಟುಹೋಗಿ ನ ೨೦ ಸಾವಿರ ಜನರು ನಿರಾಶ್ರಿತರಾಗಿದೆ

ನೆಹರೂ ಮಂತ್ರಿಮಂಡಲದ ಖಂಡನಾ ನಿರ್ಣಯ

ಲೋಕ ಸಭೆಯಲ್ಲಿ ವಿರೋಧ ಪಕ್ಷಕ್ಕೆ ಭಾರಿ ಸೋಲು

ಭಾರತವು ಸ್ವಾತಂತ್ರ್ಯವಾದಂದಿನಿಂದ ಇದೇ ಮೊಟ್ಟಮೊದಲಾಗಿ ನೆಹರೂರವರ ಮಂತ್ರಿಮಂಡಲವನ್ನು ಖಂಡಿಸುವ ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಸ್ವತಂತ್ರ ಸದಸ್ಯರಾದ ಡಾ॥ ಲಂಕಾಸುಂದರಂರವರು ನೆನ್ನೆ ಮಂಡಿಸಲಾಗಿ ಅದು ೩೭೮-೬೩ ಓಟುಗಳಿಂದ ತಿರಸ್ಕೃತವಾಯಿತು ಯಾವ ಮುಖ್ಯ ಸಮಸ್ಯೆಯ ನಿರ್ಣಯವು ಸಂಬಂಧ ಪಡದೆ, ಕಲ್ಕತ್ತಾ ಘಟನೆಗಳ ಬಗ್ಗೆ ಸಭೆಯಲ್ಲಿ ತುರ್ತಾದ ನಿಲುವಳಿ ನಿರ್ಣಯವು ತಳ್ಳಲ್ಪಟ್ಟು, ಮೇಲ್ಮನೆಯಲ್ಲಿ ಅಂತಹ ನಿರ್ಣಯಕ್ಕೆ ಅವಕಾಶ ಕಲ್ಪಿಸಲಾಯಿತೆಂಬುದೇ ಈ ನಿರ್ಣಯಕ್ಕೆ ಕಾರಣವಾಗಿತ್ತು. ಅದನ್ನು ಸಭೆಯಲ್ಲಿ ಚರ್ಚಿಸಲು ಅವಕಾಶ ಕೊಡುವ ಸಂಬಂಧವಾಗಿ ನೆಹರೂರವರಿಗೂ ಕಮ್ಯೂನಿಸ್ಟ್ ಪಕ್ಷದ ಉಪನಾಯಕರಾದ ಪ್ರೊ॥ ಹಿರೇನ್ ಮುಖರ್ಜಿಯವರಿಗೂ ವಾಗ್ಯುದ್ಧವೇ ನಡೆಯಿತು

ಕಲ್ಕತ್ತದಲ್ಲಿ ಪುನಃ ಎರಡು ಬಾರಿ ಗುಂಡಿನ ಪ್ರಕರಣ

ಉತ್ತರ ಕಲ್ಕತ್ತದಲ್ಲಿ ಪೋಲೀಸು ಕಾವಲುಗಾರರ ಮೇಲೆ ನೆನ್ನೆ ಹಲವು ಪುಂಡರು ಕಲ್ಲುಗಳನ್ನು ಬೀರಿದುದಕ್ಕಾಗಿ ಪೋಲೀಸರು ಎರಡು ಸಾರಿ ಗುಂಡು ಹಾರಿಸಿದರೆಂದು ವರದಿಯಾಗಿದೆ ಪೋಲೀಸರ ಮೇಲೆ ದ್ರಾವಕ ತುಂಬಿದ ಬಲ್ಬುಗಳನ್ನೂ, ಪಟಾಕಿಗಳನ್ನೂ ಎಸೆಯಲಾಯಿತೆಂದೂ ಹೇಳಲಾಗಿದೆ ಸಾವುನೋವುಗಳೇನೂ ಆಗಲಿಲ್ಲ ದಕ್ಷಿಣ ಕಲ್ಕತ್ತದಲ್ಲಿ ಸರ್ಕಾರಿ ಬಸ್ಸುಗಳಿಗೆ ಬೆಂಕಿ ಹತ್ತಿಸುವ ಪ್ರಯತ್ನ ನಡೆಯಿತು.

ಹೋಟೇಲು ಕಾರ್ಮಿಕರ ಸಂಘದ ವಾರ್ಷಿಕೋತ್ಸವ

ಮೈಸೂರು ೧೮

ನಗರದ ಹೋಟೇಲು ಕೆಲಸಗಾರರ ಸಂಘದ ೬ನೇ ವಾರ್ಷಿಕೋತ್ಸವವು ನೆನ್ನೆ ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು

ಬೆಳಿಗ್ಗೆ ಧ್ವಜಾರೋಹಣ ಮತ್ತು ಮೆರವಣಿಗೆ ನಡೆದವು ಮಧ್ಯಾಹ್ನ ಸಭೆಯು ಆರಂಭವಾಗಿ ಸಂಘದ ಅಧ್ಯಕ್ಷರಿಂದ ಸ್ವಾಗತ ಭಾಷಣವಾದನಂತರ ಪುರಸಭಾ ಸದಸ್ಯರಾದ ಶ್ರೀ ಎನ್ ಲಕ್ಷ್ಮಣರಾಯರು ಆರಂಭೋತ್ಸವವನ್ನು ನೆರವೇರಿಸಿ ಕಾರ್ಮಿಕರು ತಮ್ಮ ಮಾಲೀಕರೊಡನೆ ವ್ಯಾಜ್ಯಗಳನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಬೇಕೆಂದೂ, ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಎಲ್ಲ ಕಾರ್ಮಿಕರೂ ದುಡಿಯಬೇಕೆಂದೂ ತಿಳಿಸಿದರು

ಕಾರ್ಯದರ್ಶಿಗಳು ವರದಿಯನ್ನು ಒಪ್ಪಿಸಿದನಂತರ, ಹೈಗ್ರಾಡಿಕಾ ನ್ಯಾಯಾಲಯದ ತೀರ್ಮಾನಗಳನ್ನು ಜಾರಿಗೆ ಕೊಡುವುದರಲ್ಲಿ ಸಂಬಂಧಪಟ್ಟವರು ತಡಮಾಡುತ್ತಿರುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಇನ್ನು ಮುಂದಾದರೂ ಶೀಘ್ರತೆಯಾಗಿ ಜಾರಿಗೆ ಕೊಡುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು ಅಧ್ಯಕ್ಷರು ಭಾಷಣ ಮಾಡಿ ಕಾರ್ಮಿಕರು ಸುಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಸೌಹಾರ್ದಯುತವಾಗಿ ಪಡೆಯಬೇಕೆಂದು ತಿಳಿಸಿದರು

○ ಸಿಂಹಳದ ಟ್ರಿಂಕೋಮಲಿ ... ಬಳಿ ... ಟವೊಂದು ... ಬೀಸಿದ ... ಜನರು ಮೃತಪಟ್ಟರು.

ರೈತನ ಮೇಲೆ ದೌರ್ಜನ್ಯಕ್ಕಾಗಿ ಜಮೀನುದಾರರ ದಸ್ತಗಿರಿ

ಸಾಗರದ ಬಳಿ ಒಂದು ಹಳ್ಳಿಯಲ್ಲಿ ಗದ್ದಪ್ಪ ಹಬ್ಬಪ್ಪ ಎಂಬ ರೈತನನ್ನು ಜಮೀನುದಾರರಾದ ಶ್ರೀ ಹರಿಯಪ್ಪ ಮತ್ತು ಶ್ರೀ ವಿಶ್ವನಾಥಪ್ಪ ಎಂಬ ಸಹೋದರರು ಠಾಣೆಗೆ ಕರೆಸಿಕೊಂಡು ಹೊಡೆದು ಒಳಿ (ದ್ವೇಷದಿಂದ) ನಾಲ್ಕು ಖಾಲಿ ಕಾಗದಗಳಿಗೆ ಅವನ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡು ನಡುರಾತ್ರಿಯಲ್ಲಿ ಅವನ ಸಂಸಾರದವರನ್ನೆಲ್ಲಾ ಮನೆ ಬಿಟ್ಟು ಓಡಿಸಿದರೆಂದು ವರದಿಯಾಗಿದೆ ಅವನು ಪೊಲೀಸಿಗೆ ದೂರು ಕೊಡಲಾಗಿ, ಅವರು ಜಮೀನುದಾರರ ಮನೆಯನ್ನು ಶೋಧಿಸಿ, ಅಲ್ಲಿ ಪುಟ್ಟಪ್ಪನಿಗೆ ಸೇರಿದ ಹಲವು ವ್ಯವಸಾಯೋಪಕರಣಗಳ ಮತ್ತು ಒಂದು ಜೊತೆ ಎತ್ತುಗಳನ್ನು ವಶಪಡಿಸಿಕೊಂಡು ಅವರನ್ನು ಬಂಧಿಸಿದರೆಂದೂ ಹೇಳಲಾಗಿದೆ ರೈತನ ಕೋಳಿಗಳು ಪತ್ತೆಯಿಲ್ಲವೆಂದೂ ಅವನ ಜಮೀನಿನಲ್ಲಿ ಬೆಳೆದಿದ್ದ ಭತ್ತವನ್ನು ಅಕ್ರಮವಾಗಿ ಒಕ್ಕಣೆ ಮಾಡಿಕೊಂಡು ೧,೫೦೦ ಕಬ್ಬನ್ನೂ ಗಾಣವಾಡಿಸಿ ಬೆಲ್ಲ ಮಾಡಲಾಗಿತ್ತೆಂದೂ ವರದಿಯಾಗಿದೆ ರೈತನಿಗೆ ಕಿರುಕುಳ ಕೊಟ್ಟ ಮೇಲ್ಕಂಡ ಜಮೀನುದಾರರಲ್ಲದೆ ಅವರಿಗೆ ... ಇತರ ಆರು ಮಂದಿಯನ್ನೂ ...

... ಜಾಮೀನಿನ ಮೇಲೆ ಬಿಡಲಾಗಿ... ದಿದೆ

ಬದರೀನಾಥ ದೇವಾಲಯವು ನೆಂ ೮ ಕ್ಕೆ ತೆರೆಯುವುದು

... ಪ್ರದೇಶದ ... ಬದರೀನಾಥ ದೇವಾಲಯದ ... ಶ್ರೀ ... ಪತ್ರವೊಂದನ್ನು ಬರೆದು ಬದರೀನಾಥ ದೇವಾಲಯವು ಮೇ ತಿಂಗಳು ೮ ನೇ ತಾ|| ತೆರೆಯುವುದೆಂದು ತಿಳಿಸಿರುತ್ತಾರೆ ಅಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ಸಕಲ ಸೌಲಭ್ಯಗಳನ್ನೂ ಕಲ್ಪಿಸಿಕೊಡುವುದಾಗಿ ಅವರು ಸೂಚಿಸಿರುವರು

ಕಲ್ಕತ್ತಾ ಗುಂಡಿನ ಪ್ರಕರಣದಲ್ಲಿ ಮಡಿದವರಿಗಾಗಿ ವಿದ್ಯಾರ್ಥಿಗಳ ಸಂತಾಪ

... ಕಾಲೇಜಿನ ವಿದ್ಯಾರ್ಥಿಗಳ ಸಭೆಯು ನೆನ್ನೆ ಕಾಲೇಜಿನಲ್ಲಿ ನಡೆದು, ಬಂಗಾಳದ ಉಪಾಧ್ಯಾಯರುಗಳು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಹೂಡಿದ ಸತ್ಯಾಗ್ರಹದ ವಿರುದ್ಧವಾಗಿ ಅಲ್ಲಿನ ಸರ್ಕಾರದವರು ಕೈಗೊಂಡ ಕಾರ್ಯಕ್ರಮವನ್ನು ... ಘಟನೆಗಳಲ್ಲಿ ಹುತಾತ್ಮರಾದವರಿಗೆ ಸಂತಾಪ ಸೂಚಿಸಲಾಯಿತು ಸರ್ಕಾರದ ದಬ್ಬಾಳಿಕೆಯ ವಿರುದ್ಧ ಹೋರಾಡುವ ಶಿಕ್ಷಕರಿಗೆ ಸಭೆಯು ತನ್ನ ಬೆಂಬಲವನ್ನು ಸೂಚಿಸಿತು.

ಮೈಸೂರು ಕಾರ್ಖಾನೆಗಳ ಫೋರ್ಡ್ ಸಂಸ್ಥೆಯ ಪ್ರವೀಣರು

ಹಳ್ಳಿಗಳಲ್ಲಿ ವಿವಿಧೋದ್ದೇಶಗಳಿಂದ ಕೂಡಿರುವ ... ಶಾಲೆ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ಸಲಹೆ ನೀಡುವುದಕ್ಕಾಗಿ ಮೈಸೂರು ಮತ್ತು ... ಫೋರ್ಡ್ ಸಂಸ್ಥೆಯ ... ಯೋಜನಾ ... ಆಗಮಿಸಿದ್ದಾರೆ ... ಈಗಾಗಲೇ ... ಗಳಲ್ಲಿ ಕೆಲಸ ಮಾಡುತ್ತಿರುವ ...

ಸಸಿಗಳು ಕ್ರಯಕ್ಕಿವೆ

... ಸುಬ್ಬಯ್ಯ ರೋಡ್ ... ಕೃಷ್ಣಮೂರ್ತಿಪುರಂ ... ಬಡಾವಣೆ ... ಪುರಗಳಲ್ಲಿ ಉತ್ತಮವಾದ ... ಸಸ್ಯ ಮತ್ತು ಹೂಗಿಡಗಳು ... ದಲೇ ವಿಚಾರಿಸಿರಿ —

... ಅಂಡ್ ಕಂಪೆನಿ,

... ಗಳ ಪ್ರಸಿದ್ಧ ಏಜೆಂಟರು, ... ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್ ... ಫೋನ್ 520

ಆಂಧ್ರದಲ್ಲಿ ಮಾದಕ ದ್ರವ್ಯಗಳ ಪಡಿತರಕ್ಕೆ ಸಲಹೆ

ಆಂಧ್ರ ಸಂಸ್ಥಾನದ ಸರ್ಕಾರದವರು ಪಾನನಿರೋಧ ನೀತಿಯ ಬಗ್ಗೆ ಪರಿಶೀಲನೆ ನಡೆಸಲು ನೇಮಿಸಿರುವ ಸಮಿತಿಯವರು ಈ ಕಾರ್ಯವು ಯಶಸ್ವಿಯಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ ಸೇಂದಿ ಮತ್ತು ಸಾರಾಯಿಗಳನ್ನು ನಿರ್ಬಂಧಿತ ರೀತಿಯಲ್ಲಿ ಬಹಿರಂಗವಾಗಿ ಮಾರಾಟ ಮಾಡುವ ಏರ್ಪಾಡಿಗೆ ಅವರು ಸಲಹೆ ಮಾಡಿರುತ್ತಾರೆ ಅವುಗಳನ್ನು ಒಂದು ವಿಧದ ಪಡಿತರದ ಮೂಲಕ ಒದಗಿಸುವಂತೆ ... ಅವುಗಳನ್ನು ಮಾರಾಟ ಮಾಡುವ ... ಗಳನ್ನು ನಿರ್ದಿಷ್ಟ ಕಾಲಗಳಲ್ಲಿ ಮಾತ್ರ ತೆರೆಯುವಂತೆಯೂ ಸಮಿತಿಯವರು ಸಲಹೆ ಮಾಡಿರುವರೆಂದು ಹೇಳಲಾಗಿದೆ

ಪ್ರಜಾ ಸಮಾಜವಾದಿ ಪಕ್ಷಕ್ಕೆ ಕೇರಳ ಎಂ ಪಿ ಗಳ ರಾಜೀನಾಮೆ

ಪ್ರಜಾ ಸಮಾಜವಾದಿ ಪಕ್ಷದ ಸದಸ್ಯತ್ವಕ್ಕೆ ಪಿ ಟಿ ಪಿ ಟಿಯ ಕೇರಳದ ಇಬ್ಬರು ಸದಸ್ಯರಾದ ದಾಮೋದರ ಮೆನನ್ ಮತ್ತು ಟ್ರೈವರ್ ದಾಮೋದರನ್‌ರವರು ರಾಜೀನಾಮೆ ಸಲ್ಲಿಸಿರುತ್ತಾರೆ ಐಕ್ಯ ಕೇರಳದ ಸ್ಥಾಪನೆ ಬಗ್ಗೆ ಸ್ಥಳೀಯ ಪ್ರಜಾ ಸಮಾಜವಾದಿ ಪಕ್ಷದ ಶಾಖೆಗೂ ತಮಗೂ ಬಂದ ಭಿನ್ನಾಭಿಪ್ರಾಯದಿಂದ ಅವರು ಈ ರೀತಿ ಮಾಡಿರುವರು ... ಮಲಬಾರಿನ ಪ್ರಜಾ ಸಮಾಜವಾದಿ ಪಕ್ಷದ ಶಾಖೆಯು ತಿರುಕೊಚಿ ಸಂಸ್ಥಾನ ರಚನೆಗೆ ಒತ್ತಾಯ ಮಾಡಿರುವುದು ಐಕ್ಯ ಕೇರಳ ರಾಜ್ಯಸ್ಥಾಪನೆಗೆ ದ್ರೋಹ ಮಾಡಿದಂತಾಗಿದೆಯೆಂದು ಅವರಿಬ್ಬರ ಅಭಿಪ್ರಾಯವಾಗಿತ್ತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಗಂಟೆ ... ದೇವರನಾಮಗಳು ... ಮಧ್ಯಾಹ್ನ ... ಸಂಗೀತ ... ಕೊಳಲು ... ಕಾರ್ಯಕ್ರಮ ಸಂಜೆ ... ಸಂಗೀತ ... ಕನ್ನಡ ಗೀತೆಗಳು ... ಕನ್ನಡದಲ್ಲಿ ಪುಸ್ತಕ ವಿಮರ್ಶೆ ... ಹರಿಕಥೆ ... ಕಾರ್ಯಕ್ರಮ

ನಗರಾಭಿವೃದ್ಧಿ ಸಮಿತಿ ಮೈಸೂರು

ಟೆಂಡರು ನೋಟೀಸು

ನಂ D & C 101/53-54

ತಾ|| 8 2 1954

ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್ ಲೈನುಗಳನ್ನು ರೂ 6,00 000 ಅಂದಾಜು ವೆಚ್ಚದಲ್ಲಿ (ಆರು ಲಕ್ಷ ರೂಪಾಯಿಗಳು ಮಾತ್ರ ಕಾಂಗಾರಿ ವಿಭಾಗಕ್ಕಾಗಿ ರೂ 67 275) ಹಾಕಲು ಇದೇ 1954 ನೇ ಫೆಬ್ರವರಿ 22ನೇ ತಾರೀಕು ಸೋಮವಾರ ಮಧ್ಯಾಹ್ನ 3 ಘಂಟೆ ವರೆಗೆ ಮೈಸೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು ಮೊಹರಾದ ಟೆಂಡರುಗಳನ್ನು ಸ್ವೀಕರಿಸುವರು ಪ್ರತಿಯೊಂದು ಟೆಂಡರಿನೊಡನೆಯೂ ಟ್ರೆಷರಿ ಚಲನ್ ಮೂಲಕ 500 ರೂ ಠೇವಣಿ ಹಣವನ್ನು ... ಬಗ್ಗೆ ಚಲನ್ನನ್ನು ಲಗತ್ತಿಸಿ ಕಳುಹಿಸಬೇಕು ಅಂದಾಜು ಮತ್ತು ಪ್ಲಾನುಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಲಸದ ದಿನ ಮತ್ತು ವೇಳೆಗಳಲ್ಲಿ ನಗರಾಭಿವೃದ್ಧಿ ಸಮಿತಿ ಕಛೇರಿಯಲ್ಲಾಗಲೀ, ಅಥವಾ 1954 ನೇ ಫೆಬ್ರವರಿ 11 ಮತ್ತು 18ನೇ ತಾರೀಖುಗಳ ಮೈಸೂರು ಗೆಜೆಟ್ಟುಗಳಲ್ಲಾಗಲೀ ನೋಡಬಹುದು

(ರುಜು) ಎಸ್ ... ಅಧ್ಯಕ್ಷರು

Edited Printed and Published by A R Nagarajan at Sadhvi Press D Subbiah Road Mysore

ಭೂಪಾಲ್ ಸಂಸ್ಥಾನದಲ್ಲಿ ಗೋಹತ್ಯ ನಿರೋಧ ಶಾಸನ

ಭೂಪಾಲ್ ಸಂಸ್ಥಾನದಲ್ಲಿ ಗೋಹತ್ಯವನ್ನು ನಿರೋಧಿಸುವ ಶಾಸನವೊಂದನ್ನು ... ನ ಸಭೆಯು ಅಂಗೀಕರಿಸಿದೆ

೫೦ ಮೈಲಿ ದೂರದ ಗುರಿಗೆ ಹೊಡೆಯಬಲ್ಲ ಅಸ್ತ್ರ

೫೦ ಮೈಲಿಗೂ ಹೆಚ್ಚಿನ ದೂರದವರೆಗೆ ಹೋಗಬಲ್ಲ ಹೊಸ ಅಸ್ತ್ರವೊಂದನ್ನು ಅಮೆರಿಕದಲ್ಲಿ ತಯಾರಿಸಲಾಗಿದೆ ಶತ್ರುವಿನ ನಾಡಿನಲ್ಲಿ ೧೭ ಮೈಲಿ ಹಿಂದುಗಡೆ ಇರುವ ಗುರಿಗಳನ್ನು ಭೇದಿಸುವ ರಾಕೆಟ್ಟನ್ನೂ ನಿರ್ಮಿಸಲಾಗಿದೆಯೆಂದೂ ಗೊತ್ತಾಗಿದೆ

ಮಾರಾಟ ತೆರಿಗೆ ಸಂಬಂಧವಾದ ರಿಟ್ ಅರ್ಜಿಯು ವಜಾ

ಶ್ರೀ ಕಗಡೂರು ರಾಮಚಂದ್ರರಾವ್ ಮತ್ತು ಶ್ರೀ ಎ ಎಸ್ ರಾಮಯ್ಯನವರು, ಇಂಡಿಯಾ ಕಾಫಿ ಬೋರ್ಡಿನ ಬೆಂಗಳೂರು ಚೀಫ್ ಮಾರ್ಕೆಟಿಂಗ್ ಅಧಿಕಾರಿ ಮತ್ತು ಮೈಸೂರು ನಗರದ ಶಾಖಾ ಮ್ಯಾನೇಜರ್ ಅವರುಗಳು ರೂಪಾಯಿನ ಭಿನ್ನಾಂಶದ ಮಾರಾಟ ಗಳಿಗೆ ತೆರಿಗೆ ವಸೂಲು ಮಾಡುತ್ತಿರುವುದು ಸರಿಯಲ್ಲವೆಂದು ಹೂಡಿದ್ದ ರಿಟ್ ಅರ್ಜಿಯನ್ನು ಜಸ್ಟಿಸ್ ಶ್ರೀ ಆರ್ ವೆಂಕಟರಾಮಯ್ಯ ಮತ್ತು ಶ್ರೀ ಎನ್ ಬಾಲಕೃಷ್ಣಯ್ಯನವರು ವಜಾ ಮಾಡಿರುತ್ತಾರೆ ಒಂದು ಮತ್ತು ಎರಡನೆ ಪ್ರತಿವಾದಿಗಳಿಂದ ... ಅರ್ಜಿದಾರರು ... ಲ್ಲವೆಂದು ನ್ಯಾಯಾಧಿಪರ ...

ಅಹಿಂಸಾ ಧ್ಯೇಯ ಸಾಧನೆಗಾಗಿ ಹಿಂಸಾ ಕೃತ್ಯ

ಅಹಮದಾಬಾದಿನಲ್ಲಿ ಪೌರಸಭೆಯವರು ಬೀದಿಯ ನಾಯಿಗಳಿಗೆ ವಿಷ ಹಾಕಿ ಸಾಯಿಸುತ್ತಿದ್ದುದನ್ನು ಕಂಡು ರೇಗಿದ ... ಬೀದಿನಾಯಿಗಳ ಮೇಲಿನ ಕರುಣೆಯಿಂದ ... ಪ್ರಾಣಿಗಳನ್ನು ಕೊಂದೊಯ್ಯುತ್ತಿದ್ದ ... ಗಳನ್ನು ಹೊಡೆದರೆಂದು ಅವರಿಬ್ಬರನ್ನು ಬಂಧಿಸಲಾಗಿದೆ ಅವರ ಮೇಲೆ ಮೊಕದ್ದಮೆ ಹೂಡಲಾಗುವುದು

ಸಹಾಯಾರ್ಥ ಕಲಾ ಪ್ರದರ್ಶನ

ರಾಜಧಾನಿಯ ಕುರುಡ ಮೂಗರ ಶಾಲೆಯ ಸಹಾಯಾರ್ಥವಾಗಿ ಮೈಸೂರು ಜಿಲ್ಲಾ ಅಮೆಚೂರ್ ಆರ್ಟಿಸ್ಟ್ ಸಂಘದವರ ಆಶ್ರಯದಲ್ಲಿ ಈ ದಿನ ನಾಳೆ ಮತ್ತು ನಾಳಿದ್ದು ಸಂಜೆ ೫|| ಗಂಟೆಗೆ ಕಲಾ ಪ್ರದರ್ಶನವನ್ನು ಟೌನ್‌ಹಾಲ್ ಭವನದಲ್ಲಿ ಏರ್ಪಡಿಸಲಾಗಿದೆ ಚಿತ್ರ ಸಾಮಗ್ರಿ ಮತ್ತು ವಾದ್ಯ ಸಂಗೀತ ಸೌಂದರ್ಯ ಸಾಧನದ ಪ್ರದರ್ಶನ, ನೃತ್ಯ, ಭಾವಗೀತೆ, ನಾಟಕ ಮತ್ತು ಭಾರತ ವಾಚನಗಳು ನಡೆಯುವುವು ನಗರದಲ್ಲಿರುವ ಕಾಲೇಜುಗಳು ಮತ್ತು ಹೈಸ್ಕೂಲ ಮುಂತಾದ ಸಂಸ್ಥೆಗಳಿಗೆ ಮಾತ್ರ ಪ್ರವೇಶಾವಕಾಶವಿದೆ

ಭಗವದ್ಗೀತಾ ಉಪನ್ಯಾಸ

ವೇ|| ಬ್ರಹ್ಮಶ್ರೀ ಜಯತೀರ್ಥಾಚಾರ್ಯರಿಂದ ರಾಜಾರಾಮ ಅಗ್ರಹಾರದಲ್ಲಿ ನಡೆಯುತ್ತಿರುವ ಶ್ರೀ ಭಗವದ್ಗೀತಾ ಉಪನ್ಯಾಸ ಮಾಲೆಯಲ್ಲಿ ನಾಳೆ ರಾತ್ರಿ ವಿಶ್ವರೂಪ ದರ್ಶನ ಯೋಗ ಎಂಬ ವಿಷಯವಾಗಿ ಭಾಷಣ ನಡೆಯುವುದು

ಜೀವ ವಿಮೆ

ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ ಸೇವೆ ಸಹಕಾರ ಸಲ್ಲಿಸಿದೆ
ಪೂರ್ಣ ಭದ್ರತೆ—ಕಡಿಮೆ ವೆಚ್ಚ ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು ! ಅತ್ಯಂತ ಕಡಿಮೆ ಪ್ರೀಮಿಯಂ ದರ ಸುಲಭ ಸಾಲ
ಸೌಕರ್ಯ ತಡೆಯಿಲ್ಲದ ವಿಮಾ ಪಾಲಿಸಿ
ಮಾದರಿ ಪತ್ರಗಳ ಸಹಾಯದಿಂದ ವಿಮೆ
ಮಾಡಲು ಇಂದೇ ನಿರ್ಧರಿಸಿರಿ

ಮೈಸೂರು ಸರ್ಕಾರದ ವಿಮಾ ಇಲಾಖೆ

ಬೆಂಗಳೂರು

ಪ್ರಭುದೇವಾ ಥಿಯೇಟರ್
(ಸಿದ್ದಾ ಟಾಕೀಸ್)

20—2—54 ನೇ ಶನಿವಾರದಿಂದ ★ ಅಮೋಘವಾದ 2 ನೆಯ ವಾರ

ಪ್ರತಿ ದಿನ ಮೂರು ಆಟಗಳು

ಟೆಲಿಫೋನ್ ನಂ. 792 || ವಂದೇ ಮಾತರಂ || ಬಿಡಿಪ್ರತಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨] MYSORE SATURDAY 20-2-1954 : ಮೈಸೂರು : ಶನಿವಾರ ೨೦-೨-೧೯೫೪ [ಸಂಚಿಕೆ ೭೫೧

ತುರ್ಕಿ ಮತ್ತು ಪಾಕಿಸ್ತಾನಗಳಿಗೆ ರಕ್ಷಣಾ ಒಪ್ಪಂದಕ್ಕೆ ರುಜು

ಮಾರ್ಚಿ ೧ ನೇ ತಾರೀಖಿನಿಂದ ಬಸ್ ಕೆಲಸಗಾರರ ಮುಷ್ಕರ

ಕೈಗಾರಿಕಾ ಕೋರ್ಟಿನ ತೀರ್ಮಾನ ಜಾರಿಗೆ ಬರದಿದ್ದರೆ

ಮೈಸೂರು ೨೦

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಕಲ ಸದಸ್ಯರ ಸಭೆಯಲ್ಲಿ ಕಳೆದ ೧೩ ನೇ ತಾ|| ತೀರ್ಮಾನವಾದಂತೆ ಇದೇ ೨೮ನೇ ತಾ|| ನೊಳಗೆ ಕೈಗಾರಿಕಾ ಕೋರ್ಟಿನ ತೀರ್ಪನ್ನು ಮಾಲೀಕರು ಜಾರಿಗೆ ತರದಿದ್ದರೆ ಮಾರ್ಚಿ ೧ ನೇ ದಿನದಿಂದ ಮುಷ್ಕರ ಹೂಡುವಂತೆ ನಿರ್ಧರಿಸಿದ್ದ ಪ್ರಕಾರ, ಕ್ರಮವನ್ನು ಕೈಗೊಳ್ಳಲು ಏರ್ಪಾಡಾಗಿದೆ ಈ ಸಂಬಂಧದಲ್ಲಿ ಸಂಘದ ಅಧ್ಯಕ್ಷ ಶ್ರೀ ದೌಲತ್‌ರಾವ್ ಮತ್ತು ಕಾರ್ಯದರ್ಶಿ ಶ್ರೀ ಟಿ. ಎಸ್ ಸುಬ್ಬಣ್ಣನವರುಗಳು ಮನವಿಯೊಂದನ್ನು ಹೊರಡಿಸಿ ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆಯಾಗುವುದೆಂಬ ಅರಿವು ಸಂಘದವರಿಗೆ ಇರುವುದಾಗಿಯೂ ಅನಿವಾರ್ಯದಿಂದ ಅದನ್ನು ಹೂಡಬೇಕಾಗಿಬರಬಹುದಾದುದರಿಂದ ಸಾರ್ವಜನಿಕರ ಕೆಲಸಗಾರರಿಗೆ ಬೆಂಬಲನೀಯಬೇಕೆಂದೂ ಕೋರಿರುತ್ತಾರೆ ಕೆಲಸಗಾರರು ಶಾಂತಿಯುತವಾದ ಮುಷ್ಕರದಲ್ಲಿ ಶಿಸ್ತಿನಿಂದ ವರ್ತಿಸಿ ಯಾವ ಕೋಪತಾಪಗಳಿಗೂ ಅವಕಾಶವಿಲ್ಲದ ಹೆ ನಡೆದುಕೊಳ್ಳಬೇಕೆಂದೂ ಕೋರಲಾಗಿದೆ

ಅಂಬಳೆ ಸುಬ್ರಹ್ಮಣ್ಯಯ್ಯರಿಗೆ ಸತ್ಕಾರ

ಮೈಸೂರು ದೇಶದ ವಿದ್ಯಾಶಾಲಾ ಪಂಡಿತ ಮಂಡಳಿಯ ಮೈಸೂರು ಶಾಖೆಯ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೨-೩೦ ಘಂಟೆಗೆ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮಂಡಳಿಯ ಅಧ್ಯಕ್ಷರಾದ ನಿವೃತ್ತ ಡಿಸ್ಟ್ರಿಕ್ಟ್ ಜಡ್ಜ್ ಶ್ರೀ ಬಿ ಕೆ ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಮಂಡಳಿಯ ನಿವೃತ್ತ ಅಧ್ಯಕ್ಷರಾದ ರಾಜಸೇವಾ ಪ್ರಸಕ್ತ ಅಂಬಳೆ ಸುಬ್ರಹ್ಮಣ್ಯಯ್ಯರ್ ಅವರಿಗೆ ಸತ್ಕಾರ ಸಮಾರಂಭವನ್ನು ನಡೆಸಲು ಏರ್ಪಾಡು ಮಾಡಲಾಗಿದೆ ಅದಕ್ಕೆ ಮಂಡಳಿಯ ಸದಸ್ಯರೂ ಮತ್ತು ಅಭಿಮಾನಿಗಳೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಸಹಸ್ರ ಶಂಖ ಕ್ಷೀರಾಭಿಷೇಕ

ರಾಜಧಾನಿಯ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಕಳೆದ ಬುಧವಾರ ಶ್ರೀ ವ್ಯಾಸ ಪೂರ್ಣಿಮೆಯ ಪ್ರಯುಕ್ತ ಶ್ರೀ ಶ್ರೀನಿವಾಸದೇವರಿಗೆ ವೇ|| ಮಾ|| ಬ್ರಹ್ಮಶ್ರೀ ರಘುನಾಥ ಜ್ಯೋತಿರ್ವಾಚಾರ್ಯರು ಸಹಸ್ರ ಶಂಖ ಕ್ಷೀರಾಭಿಷೇಕವನ್ನು ನಡೆಸಿದರು. ಸಹಸ್ರಾರು ಜನರು ಸೇರಿದ್ದರು ಅಭಿಷೇಕಕ್ಕಾಗಿ ೩೦೦ ಸೇರಿನಷ್ಟು ಹಾಲು ಒಂದಿತ್ತು

ಕೇಂದ್ರ ರೇಷ್ಮೆ ಬೋರ್ಡಿನ ಉಪಾಧ್ಯಕ್ಷರು

ಮೈಸೂರು ಸಂಸ್ಥಾನದ ರೇಷ್ಮೆ ಇಲಾಖೆ ಡೈರೆಕ್ಟರಾದ ಶ್ರೀ ಹಂಸುದ್ದೀನ್ ಖಾನರನ್ನು ಕೇಂದ್ರ ರೇಷ್ಮೆ ಬೋರ್ಡಿನ ಉಪಾಧ್ಯಕ್ಷರಾಗಿ ನೇಮಿಸಲಾಗಿದೆ ಬೆಂಗಳೂರಿನ ಶ್ರೀ ಟಿ ಎಲ್ ಗಂಗಾಧರರಾವ್‌ರವರು ವ್ಯಾಪಾರಸ್ಥರ ಪರವಾಗಿ ಸದಸ್ಯರಾಗಿ ಚುನಾಯಿತರಾಗಿರುವರು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎ. ಗಾಡಯ್ಯನವರೂ ಸಹ ಸದಸ್ಯರಾಗಿರುವರು

ನಾಗರ ಹಾವಿನ ಉಪವಾಸವು ಅನುಕರಣಾಂಶವಾದುದಲ್ಲ

ರಾಜಧಾನಿಯ ಪ್ರೆಸ್ ಬಂಗಲೆಯ ನಾಗರಹಾವಿನ ಉಪವಾಸದ ಬಗ್ಗೆ ಬೆಂಗಳೂರಿನಲ್ಲಿರುವ ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರಾದ ಡಾ|| ಮರಿಗೌಡರು ಹೇಳಿಕೆಯೊಂದನ್ನಿತ್ತು ಆ ಸರ್ಪವು ಬೇಕಾದಷ್ಟು ನೀರು ಕುಡಿಯುತ್ತಿದೆಯೆಂದೂ ಅದ ಒಂದು ಬಾರಿ ಆಹಾರ ಸೇವಿಸಿದರೆ ತಿಂಗಳುಗಟ್ಟಲೆ ನಿರಾಹಾರಿಯಾಗಿರಬಹುದೆಂದೂ ತಿಳಿಸಿರುವರು ಹಾವು ಅನುಕರಣಾಂಶ ಉಪವಾಸ ಕೈಗೊಂಡಿದೆಯೆಂದು ಭಾವಿಸುವುದು ತಪ್ಪೆಂದೂ ಅದರ ಬಗ್ಗೆ ಕಳವಳವೇನೂ ಇಲ್ಲವೆಂದೂ ಅವರು ಹೇಳಿರುವರು

ಬರುವ ವರ್ಷದಿಂದ ಬೊಂಬಾಯಿ ಕಾಲೇಜುಗಳಲ್ಲಿ ಹಿಂದಿ ಮಾಧ್ಯಮ

ಬರುವ ವರ್ಷ ಜೂನ್ ತಿಂಗಳಿಂದ ಕಾಲೇಜುಗಳಲ್ಲೂ ಹಿಂದಿ ಮಾಧ್ಯಮ ಪಠ್ಯಕ್ರಮವಾಗುವಂತೆ ಏರ್ಪಡಿಸಲು ಬೊಂಬಾಯಿ ಸರ್ಕಾರದವರು ಆಲೋಚಿಸಿರುತ್ತಾರೆ ಈ ಸಂಬಂಧವಾಗಿ ಅಧ್ಯಾಪಕರುಗಳು ಈಗಿನಿಂದಲೇ ಹಿಂದಿಯಲ್ಲಿ ಪಾಠ ಹೇಳಲು ಸೂಕ್ತವಾದ ಏರ್ಪಾಡುಗಳನ್ನು ಮಾಡಿಕೊಳ್ಳುವ ಬಗ್ಗೆ ಅವರಿಗೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಲಾಗುವುದೆಂದು ಹೇಳಲಾಗಿದೆ

ರೈಲ್ವೆ ಆಯವ್ಯಯದಲ್ಲಿ ೫ ಕೋಟಿ ರೂ. ಉಳಿತಾಯ

ಕೇಂದ್ರ ರೈಲ್ವೆ ಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ನೆನ್ನೆ ರೈಲ್ವೆ ಆಯವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸಿ ಹೊಸ ವರ್ಷದಲ್ಲಿ ೨೭೩ ಕೋಟಿ ೫೫ ಲಕ್ಷ ರೂ ವರಮಾನ ೨೩೨ ಕೋಟಿ ೬೧ ಲಕ್ಷ ರೂ ವೆಚ್ಚ ಮತ್ತು ೩೫ ಕೋಟಿ ೫೦ ಲಕ್ಷ ರೂ ಜನರಲ್ ರೆವಿನ್ಯೂ ಖರ್ಚುಗಳಾಗುವುವೆಂದು ತಿಳಿಸಿ, ೫ ಕೋಟಿ ೧೮ ಲಕ್ಷ ರೂ ಉಳಿತಾಯವಾಗುವುದೆಂದು ಹೇಳಿರುತ್ತಾರೆ ಹೊಸ ವರ್ಷದಲ್ಲಿ ೯೫ ಕೋಟಿ ರೂ ಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗುವುದು ನಾಲ್ಕು ವಿಧದ ಪ್ರಯಾಣದ ರಿಯಾಯಿತಿಯನ್ನು ಏರ್ಪಡಿಸಲಾಗುವುದೆಂದು ಅವರು ತಿಳಿಸಿರುತ್ತಾರೆ

ಅಂಗಡಿ ಶಾಸನ ಉಲ್ಲಂಘನೆಗೆ ಶಿಕ್ಷೆ

ರಾಜಧಾನಿಯ ವಾಣಿವಿಲಾಸ ಮಾರ್ಕೆಟ್ ಕಟ್ಟಡದಲ್ಲಿರುವ ಜಿ ಆರ್ ವಿ ಕಾಫಿ ವರ್ಕ್ಸ್‌ನ ಮಾಲೀಕರಾದ ಶ್ರೀ ಜಿ ಆರ್ ವರದರಾಜ ಶೆಟ್ಟಿಯವರು ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ಸ್ ಶಾಸನವನ್ನು ಉಲ್ಲಂಘಿಸಿದರೆಂದು ಇನ್ಸ್‌ಪೆಕ್ಟರ್ ಶ್ರೀ ನಾಗಪ್ಪನವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪಾದಿತರಿಗೆ ೧೦ ರೂ ಜುಲ್ಮಾನೆಯನ್ನು ವಿಧಿಸಿರುತ್ತಾರೆ

○ ಮೈಸೂರ ಜಿಲ್ಲೆಯ ಎಲ್ಲಾ ತಾಲ್ಲೂಕ ಕಾಂಗ್ರೆಸ್ ಸಮಿತಿಗಳೂ, ಹಾಗೂ ಕಾಂಗ್ರೆಸ್ ಕಾರ್ಯಕರ್ತರೂ ಪಡೆದಿರುವ ಕಾಂಗ್ರೆಸ್ ಸದಸ್ಯತ್ವದ ಪುಸ್ತಕಗಳನ್ನು ಇದೇ ೨೮ನೇ ತಾರೀಖಿನೊಳಗೆ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ತಲುಪಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿ ಮಹರು ಕೋರಿರುವರು

ಮಹಾರಾಜರಿಂದ ಮದ್ರಾಸಿನ ಮೈಸೂರು ಬ್ಯಾಂಕ್ ಶಾಖೆಯ ಶಂಕು ಸ್ಥಾಪನೆ

ಮದ್ರಾಸು ೨೦

ಮೈಸೂರಿನ ಶ್ರೀಮನ್ಮಹಾರಾಜರು ಈ ದಿನ ಇಲ್ಲಿಂದ ಬೊಂಬಾಯಿಗೆ ತೆರಳುವರು ದೆಹಲಿಯನ್ನು ೨೨ನೇ ತಾ|| ಅವರು ತಲುಪಿ ಮಾರ್ಚಿ ೧ ಮತ್ತು ೭ನೇ ತಾ|| ನಡೆಯುವ ರಾಜಪ್ರಮುಖರ ಸಮ್ಮೇಳನದಲ್ಲಿ ಭಾಗವಹಿಸಿ ೬ನೇ ತಾ|| ಬೆಂಗಳೂರಿಗೆ ಹಿಂದಿರುಗುವರು

ಈ ದಿನ ಇಲ್ಲಿ ಅವರು ಮೈಸೂರು ಬ್ಯಾಂಕ್ ಶಾಖೆಯ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿ, ವ್ಯಾಪಾರ ವೃತ್ತಗಳಲ್ಲಿ ಮೈಸೂರು ಬ್ಯಾಂಕು ಹೆಸರುವಾಸಿಯಾಗಿದೆಯೆಂದು ಹೇಳಿದರು ದೇಶದಲ್ಲಿ ಬ್ಯಾಂಕುಗಳ ವ್ಯವಹಾರವು ಬೆಳೆಯಬೇಕೆಂದ ತಿಳಿಸಿದರು

ಮಹದೇಶ್ವರ ಬೆಟ್ಟದ ಯಾತ್ರಿಕರಿಗೆ ಎಚ್ಚರಿಕೆ

ಈ ತಿಂಗಳು ೨೮ನೇ ತಾ|| ಕೊಳ್ಳೇಗಾಲ ತಾಲ್ಲೂಕು ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ನಡೆಯುವ ಜಾತ್ರೆಯ ಸಂಬಂಧವಾಗಿ ಮಂಡ್ಯದ ಜಿಲ್ಲಾಧಿಕಾರಿಗಳು ಪ್ರಕಟಣೆಯೊಂದನ್ನು ಹೊರಡಿಸಿ ತಿರುಕನ ಏದ್ರ ಸ್ಟೇಷನ್ ಮೂಲಕ ಬೆಟ್ಟಕ್ಕೆ ಹೋಗುವ ಪ್ರದೇಶ ಮತ್ತು ಏನು ಮೈಲಿ ಘಾಸಲೆಯಲ್ಲಿ ಕಾಲರಾ ಹರಡುವ ಸಂಭವವಿರುವುದೆಂದೂ, ಯಾತ್ರಿಕರು ಕಾಲರಾ ನಿರೋಧ ಇಂಜಕ್ಷನ್ ಮಾಡಿಸಿಕೊಂಡು ಆ ಬಗ್ಗೆ ಸರ್ಟಿಫಿಕೇಟನ್ನು ಹೊಂದಿದ್ದರೆ ಹಿಂದಕ್ಕೆ ಕಳುಹಿಸಲಾಗುವುದೆಂದೂ ತಿಳಿಸಿರುತ್ತಾರೆ

ಕನ್ನಡದಲ್ಲಿ ವಿಶ್ವ ಕೋಶ ತಯಾರಿಕೆಗೆ ೧೨ ಲಕ್ಷ ರೂ.

ಮೈಸೂರು ೨೦

೧೨ ಲಕ್ಷ ರೂ ವೆಚ್ಚದಿಂದ ಕನ್ನಡದಲ್ಲಿ ವಿಶ್ವ ಕೋಶವನ್ನು ತಯಾರಿಸಲು ವಿಶ್ವವಿದ್ಯಾಲಯದವರು ಆಲೋಚಿಸಿ ಈ ಸಂಬಂಧವಾಗಿ ಶ್ರೀ ಕೆ ವಿ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ ಪ್ರೊ|| ವಿ ಎಲ್ ಡಿಸೋಜಾ, ಜೆ ಬಿ ಮಲ್ಲಾರಾಧ್ಯ, ಎಂ ವಿ ಎಲ್ ಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಅದರ ಸದಸ್ಯರಾಗಿರುವರು. ಶ್ರೀ ಹಂ ಕೆ ಸುಬ್ಬರಾಯಾಚಾರ್ಯರು ಕಾರ್ಯದರ್ಶಿಯಾಗಿರುವರು

ಹಿರಿಯ ಶಾಸನ ಸಭೆಗೆ ಚುನಾವಣಾ ವೇಳಾ ಪಟ್ಟಿ

ಬೆಂಗಳೂರ ೨೦

ಸಂಸ್ಥಾನದ ಹಿರಿಯ ಶಾಸನ ಸಭೆಯ ೧೪ ಸ್ಥಾನಗಳು ಖಾಲಿಯಾಗುವ ಸಂದರ್ಭದಲ್ಲಿ ಕಿರಿಯ ಸಭೆಯಿಂದ ಮೇಲ್ಮನೆಗೆ ಆರಿಸಿಬಂದಿರುವವರ ಪೈಕಿ ೫ ಜನ ಸದಸ್ಯರ ಸ್ಥಾನಗಳನ್ನು ಭರ್ತಿಮಾಡಲು ಚುನಾವಣಾ ವೇಳಾ ಪಟ್ಟಿಯನ್ನು ಹೊರಡಿಸಲಾಗಿದೆ ಅದರ ಪ್ರಕಾರ ಮಾರ್ಚಿ ೫ ನಾಮಪತ್ರ ಸ್ವೀಕಾರ ೯ ಪರಿಶೀಲನೆ ೧೨ ವಾಪಸಾತಿ ಮತ್ತು ೨೨ ಅವಶ್ಯ ಬಿದ್ದರೆ ಚುನಾವಣೆ ಇತರ ಒಂಭತ್ತು ಸ್ಥಾನಗಳ ಚುನಾವಣಾ ವೇಳಾಪಟ್ಟಿಯನ್ನು ಸಧ್ಯದಲ್ಲೇ ಪ್ರಕಟಿಸಲಾಗುವುದು

ಪಾಕಿಸ್ತಾನ ಮತ್ತು ತುರ್ಕಿಗಳಿಗೆ ರಕ್ಷಣಾ ಒಪ್ಪಂದ

ತುರ್ಕಿ ಮತ್ತು ಪಾಕಿಸ್ತಾನಗಳ ನಡುವೆ ಶಾಂತಿ ಮತ್ತು ಭದ್ರತೆಯನ್ನು ಇನ್ನೂ ಬಲಪಡಿಸುವ ಬಗ್ಗೆ ನೆನ್ನೆ ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಿ ರುಜು ಬಿದ್ದಿರುತ್ತದೆ ಆ ರಾಷ್ಟ್ರಗಳಿಗೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ನಿಕಟವಾದ ಸಹಕಾರವನ್ನು ಏರ್ಪಡಿಸಲಾಗುವುದು ಎರಡು ರಾಷ್ಟ್ರಗಳ ಒಪ್ಪಂದದಿಂದ ಮುಸ್ಲಿಮ್ ಪ್ರಪಂಚವನ್ನು ಹೆಚ್ಚು ಬಲಗೊಳಿಸಲು ಇದು ಮೊದಲನೆಯ ಹೆಜ್ಜೆಯೆಂದು ಪಾಕಿಸ್ತಾನದ ಪ್ರಧಾನಿಯವರು ಹೇಳಿರುತ್ತಾರೆ. ಇದರಿಂದ, ಅಮೇರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವೊದಗಿಸಲು ಸಹಾಯವಾಗುವುದೆಂದು ಇತ್ತೀಚಿನ ಅಮೇರಿಕಾ ಪತ್ರಿಕೆಗಳ ವರದಿಗಳು ಹೇಳಿವೆ

೮೩ ಗ್ರಾಮ ಮುನ್ಸೀಫ್ ಕೋರ್ಟುಗಳ ರದ್ದು

ಸ್ಪೇ ಸು ಪ್ರೋ] ಬೆಂಗಳೂರು ೨೦

ಸಂಸ್ಥಾನದ ೨ ಜಿಲ್ಲೆಗಳನ್ನು ಬಿಟ್ಟು ಮಿಕ್ಕ ಕಡೆ ಒಟ್ಟು ೮೩ ಗ್ರಾಮ ಮುನ್ಸೀಫ್ ಕೋರ್ಟುಗಳನ್ನು ಹೊಸ ವರ್ಷದಿಂದ ರದ್ದುಗೊಳಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ

ಇನಾಂ ಸಮಿತಿಯ ಸಭೆ

ಇನಾಂಗಳ ರದ್ದಿಯಾತಿ ಸಂಬಂಧವಾಗಿ ಪರಿಶೀಲನಾ ಸಮಿತಿಯ ಸಭೆಯು ಈ ದಿನ ನಡೆಯಿತು ವೈಯುಕ್ತಿಕ ಇನಾಮುಗಳ ರದ್ದಿಗಾಗಿ ಶಾಸನವನ್ನು ತರುವ ಬಗ್ಗೆ ಒಪ್ಪಿಗೆಯು ದೊರೆಯಿತು. ಶೃಂಗೇರಿ ಮಠದ ಗೌರವಕ್ಕೆ ಚ್ಯುತಿ ಬಾರದಂತೆಯೂ ಮತ್ತು ರೈತರುಗಳ ಹಿತವು ಕಾಪಾಡಲ್ಪಡುವಂತೆಯೂ ಮಸೂದೆ ತರುವ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಲಾಯಿತೆಂದು ಹೇಳಲಾಗಿದೆ

ಬರೋಡದ ಮಾಜಿ ರಾಜರಿಗೆ ೮೫ ಲಕ್ಷ ರೂ ವಿಶ್ರಾಂತಿವೇತನ

ಬರೋಡದ ಮಾಜಿ ಅರಸರಾದ ಪ್ರತಾಪಸಿಂಗರಿಗೆ ೧೯೫೧ನೇ ಇಸವಿಯಲ್ಲಿ ಅವರು ಪದಚ್ಯುತರಾದಂದಿನಿಂದ ವರ್ಷಕ್ಕೆ ೮ ಲಕ್ಷ ೫೪ ಸಾವಿರ ರೂ ನಂತೆ ಭತ್ಯವನ್ನು ಕೊಡಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಅವರಿಗೆ ಇದುವರೆಗೆ ೧೩,೧೧,೦೦೦ ರೂ ಭತ್ಯದ ಬಾಕಿಯನ್ನು ಕೊಡಬೇಕಾಗುವುದು

ಬೆಂಕಿ ಅಪಘಾತ

ಬಿಡಾರಂ ಕೃಷ್ಣಪ್ಪನವರ ಬೀದಿಯಲ್ಲಿರುವ ಶ್ರೀ ಡಿ ರಾಮು ಎಂಬವರ ಅಂಗಡಿಯಲ್ಲಿ ಈ ದಿನ ಬೆಳಗಿನ ಜಾವ ೩|| ಘಂಟೆಯಲ್ಲಿ ಆಕಸ್ಮಾತ್ ಬೆಂಕಿ ಅನಾಹುತವು ಸಂಭವಿಸಿ ಒಂದು ಮೂಟೆ ಸಕ್ಕರೆ, ೧|| ಮೂಟೆ ಹಲಸಂದೆ, ೨ ಮೂಟೆ ಮೆಣಸಿನಕಾಯಿ, ಅರ್ಧ ಮಣ ಕೊಬ್ಬರಿ ಒಟ್ಟು ೩೦೦ ರೂ ನಷ್ಟು ಬೆಲೆಯ ಸಾಮಾನುಗಳು ನಷ್ಟವಾದುವೆಂದೂ, ಫೈರ್ ಬ್ರಿಗೇಡಿನವರು ಬಂದು ಬಹಳ ಸಾಹಸದಿಂದ ಮೆಣಸಿನಕಾಯಿಯ ಹೊಗೆಯನ್ನೂ ಸಹಾ ಲಕ್ಷಿಸದೆ ಬೆಂಕಿಯನ್ನು ಆರಿಸಿ ಇತರ ಕಟ್ಟಡಗಳಿಗೆ ಅದು ವ್ಯಾಪಿಸದಂತೆ ತಡೆಗಟ್ಟಿದರೆಂದ ತಿಳಿದಿದೆ

ದೆಹಲಿಯಲ್ಲಿ ಸಂಗೀತದ ಹಬ್ಬ

ಇದೇ ಮಾರ್ಚಿ ತಿಂಗಳು ೨೦ ರಿಂದ ೩೧ರ ವರೆಗೆ ದೆಹಲಿಯಲ್ಲಿ ರಾಷ್ಟ್ರೀಯ ಸಂಗೀತದ ಹಬ್ಬವು ನಡೆಯಲಿರುವುದಾಗಿದೆ. ಭಾರತದ ನಾನಾ ಭಾಗಗಳಿಂದ ೬೦ ಜನ ಕಲಾವಿದರು ಅದರ ಭಾಗವಹಿಸಲಿರುವರು. ಭಾರತ ಸರ್ಕಾರದವರ ಸ್ಥಾಪಿಸಿರುವ ಸಂಗೀತ ನಾಟಕ ಪರಿಷತ್ತಿನವರು ಹಬ್ಬವನ್ನು ಏರ್ಪಡಿಸುವರು. ಕಡೆಯ ದಿನ ರಾಷ್ಟ್ರಾಧ್ಯಕ್ಷರು ವರ್ಷದ ನಾಲ್ವರು ಸಂಗೀತ ವಿದ್ವಾಂಸರಿಗೆ ಬಹುಮಾನಗಳನ್ನು ಹಂಚುವರು. ಶಾಸ್ತ್ರೀಯ ಸಂಗೀತವೂ ಸೇರಿ ಎಲ್ಲ ವಿಧವಾದ ಸಂಗೀತಗಳಿಗೂ ಅಲ್ಲಿ ಅವಕಾಶವಿದೆ. ಕರ್ನಾಟಕ ಸಂಗೀತದ ಪರವಾಗಿ ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ಪಾಪಾ ವೆಂಕಟರಾಮಯ್ಯರ್, ಟಿ. ಚೌಡಪ್ಪ, ಪಾಲ್‌ಘಾಟ್ ಮಣಿ [illegible] ಮೊದಲಾದವರು ಭಾಗವಹಿಸುವರು. ಪ್ರತಿ ವರ್ಷವೂ ಇಂತಹ ಹಬ್ಬವನ್ನು ಏರ್ಪಡಿಸಲಾಗುವುದು.

ಪೊಲೀಸು ಠಾಣೆ ನಾಶ ಪಡಿಸಲು ಹೋದ ೩೫ ಜನರ ಮರಣ

ಕೆನ್ಯದ ರಾಜಧಾನಿ ನೈರೋಬಿಗೆ ೩೦ ಮೈಲಿ ದೂರದಲ್ಲಿರುವ [illegible] ಪೊಲೀಸ್ ಠಾಣೆಯೊಂದನ್ನು ನಾಶಪಡಿಸಲು [illegible] ಜನ ಮಾವುಮಾವು [illegible] ಪೊಲೀಸರು ಗುಂಡು [illegible] ರುತ್ತಾರೆ.

ಸಂಸ್ಥಾನದಲ್ಲಿ ಭೂದಾನದ ಅಂಕಿಅಂಶ

ಇದೇ ಜನವರಿ ತಿಂಗಳ ಕಡೆಯ ವಾರಕ್ಕೆ ಮೈಸೂರು ಪ್ರಾಂತದಲ್ಲಿ [illegible] ಎಕರೆ ಜಮೀನು [illegible] ಗಳೂರಿನಲ್ಲಿ ೧೨೫, ಕೋಲಾರದಲ್ಲಿ [illegible] ತುಮಕೂರಿನಲ್ಲಿ ೧,೭೫೫ ಚಿಕ್ಕಮಗಳೂರಿನಲ್ಲಿ ೨೬೦ ಮಂಡ್ಯದಲ್ಲಿ [illegible] ಚಿತ್ರದುರ್ಗದಲ್ಲಿ ೧೧೯, ಹಾಸನದಲ್ಲಿ ೧೫೦ ಶಿವಮೊಗ್ಗದಲ್ಲಿ ೧೧೮೧, ಮೈಸೂರಿನಲ್ಲಿ ೪೯ ಮತ್ತು ಒಟ್ಟು [illegible] ಎಕರೆ ಈ ರೀತಿ ಜಮೀನನ್ನು [illegible] ಭೂದಾನ ಪಂದಯಾತ್ರಿಗಳು [illegible] ದಿರುವ ದಾನ ಪತ್ರಗಳ ಸಂಖ್ಯೆಯು ಈ ಪಟ್ಟಿಯಲ್ಲಿ ಸೇರಿಲ್ಲ.

ಮೈಸೂರು ಪೇಟೆ ಧಾರಣೆ

ವಸ್ತು	[illegible]	[illegible]
ಕಡಲೇಬೀಜ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	[illegible]
ಹೊಂಗೆಬೀಜ	[illegible]	[illegible]
ಹುಣಸೇಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆಕಾಳು	[illegible]	[illegible]
ಅವರೆ	[illegible]	[illegible]
ಧನಿಯ	[illegible]	[illegible]
ತೊಗರಿ	[illegible]	[illegible]
ಕಡಲೆ	[illegible]	[illegible]
ಸಿಹಿಕುಂಬಳ ಬೀಜ	[illegible]	[illegible]
ಹುಣಸೇ [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಕೊಬ್ಬರಿ [illegible]	[illegible]	[illegible]
ಬೆಲ್ಲ	[illegible]	[illegible]

೩೬ ವರ್ಷಗಳಾದನಂತರ ಕಾವಿರ್ಣನ ವಾಪಸು

ಪೊಲೀಸುರದ ಕೋಣನೂರು ಸಿದ್ದಲಿಂಗಪ್ಪ ಎಂಬ ವರಿಗೆ ಶಿವಮೊಗ್ಗೆಯ ವ್ಯಾಪಾರಿ ಶ್ರೀ ಎ. ಪಿ. ಬಸಪ್ಪನವರ ೧೯೧೭ನೇ ಸಪ್ಟೆಂಬರ್ ೧೪ ನೇ ತಾ|| ಬರೆದ ಕಾಗದ ಒಂದು ವಾರದ ನಂತರ ಪೋಸ್ಟಾಫೀಸಿಗೆ ತಲುಪಿ ವಿಳಾಸದಾರರು ಸಿಗಲಿಲ್ಲವೆಂದು ೩೬|| ವರ್ಷಗಳ ಕಾಲ ಸುತ್ತಿ ತಿರುಗಾಡಿ ಕಳೆದ ೬ನೇ ತಾ|| ಶಿವಮೊಗ್ಗೆಗೆ ವಾಪಸ್ಸು ಬಂದಿರುತ್ತದೆ.

ಜ್ವಾಲಾಮುಖಿ ಬೆಳೆಯುತ್ತಿದೆ

ಮಧ್ಯ ಮೆಕ್ಸಿಕೋದಲ್ಲಿರುವ ಭಯಂಕರವಾದ ಪರಿಕುಟಿನ್ ಜ್ವಾಲಾಮುಖಿಯು ಇನ್ನೂ ಹೊಗೆಯಾಡುತ್ತಿರುವುದೆಂದೂ, ಎರಡು ವರ್ಷಗಳ ಹಿಂದೆ ೭೦೦ ಅಡಿ ಇದ್ದ ಅದು ಈಗ ೧೦೦೦ ಅಡಿ ಎತ್ತರವಾಗಿರುವುದೆಂದೂ ವರದಿಯಾಗಿದೆ. ಜ್ವಾಲಾಮುಖಿಯ ಬಾಯಿ ದ್ವಾರವು ದಿನದಿನಕ್ಕೂ ವಿಸ್ತಾರವಾಗುತ್ತಿದ್ದು, [illegible] ಹಿಡಿಯ [illegible] ಗಿದೆ.

ಸಿಂಹಳದ ಭಿಕ್ಷುಗಳಿಂದ ಧರ್ಮಯುದ್ಧವೇ ?

[illegible]

ಸಾರ್ವಜನಿಕ ಆರೋಗ್ಯ ಸಮಿತಿಯ ಪುನರ್ರಚನೆ

ಸಂಸ್ಥಾನದ ಸಾರ್ವಜನಿಕ ಆರೋಗ್ಯ ಸಮಿತಿಯನ್ನು ಪುನರ್ರಚಿಸಲಾಗಿದೆ. ಆರೋಗ್ಯ ಮಂತ್ರಿಗಳು ಅದರ ಅಧ್ಯಕ್ಷರಾಗಿ [illegible] ಡಾಕ್ಟರ್ [illegible] ಶ್ರೀಗಳಾದ ಪೈ, ಮೈಸೂರಿನ [illegible] ಚಿಕ್ಕಕರಿ ಟಿ. ವೀರಣ್ಣ, ಕನಕಪುರದ [illegible] ಚಿಕ್ಕನಾಯಕನಹಳ್ಳಿಯ [illegible] ಸದಸ್ಯರಾಗಿರುವರು.

ಆಲ್ಬಕರ್ಕಿಯಲ್ಲಿ ನಡೆದ ಗಲಭೆಗೆ ಸಂಬಂಧಪಟ್ಟ ವಿಚಾರಣೆಯನ್ನು ಪ್ರತಿಬಂಧಿಸಿ ಪೊಲೀಸು ಕಮಿಷನರರು ಆಜ್ಞೆ ಹೊರಡಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಕೊರಿಯಾ ಮತ್ತು ಇಂಡೋಚೀಣ ಬಗ್ಗೆ ಪಂಚ ರಾಷ್ಟ್ರ ಸಮ್ಮೇಳನ

ಕೊರಿಯಾಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚೀಣದೊಡನೆ ಜಿನೀವಾ ನಗರದಲ್ಲಿ ಏಪ್ರಿಲ್ ೨೬ರಂದು ಸಮಾಲೋಚಿಸಲು ಚತುರ್ರಾಷ್ಟ್ರ ಸಭೆಗಳು ಒಪ್ಪಿರುತ್ತವೆ. ಅದೇ ಸಮಯದಲ್ಲಿ ಇಂಡೋಚೀಣದಲ್ಲಿ ಶಾಂತಿ ಸ್ಥಾಪನೆಯ ವಿಷಯವನ್ನು ಕುರಿತು ಪರಿಶೀಲನೆ ನಡೆಸಲಾಗುವುದು.

ಬಂಗಾಳದ ಆಯವ್ಯಯದಲ್ಲಿ ೧೨|| ಕೋಟಿ ರೂ ಖೋತಾ

ಪಶ್ಚಿಮ ಬಂಗಾಳದ ಹೊಸ ವರ್ಷದ ಆಯವ್ಯಯದಲ್ಲಿ ೧೨ ಕೋಟಿ ೪೩ ಲಕ್ಷ ರೂ ಖೋತಾ ಬರುವ ನಿರೀಕ್ಷೆಯಿದೆ. ಆದಾಯವು ಸುಮಾರು ೪೦ ಕೋಟಿಯಿದ್ದು ವೆಚ್ಚವು ೫೨ ಕೋಟಿಗಳಾಗುವುದೆಂದು ಹೇಳಲಾಗಿದೆ.

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯಲ್ಲಿರುವ ಶ್ರೀ ಮಂಗಳೂರು ಗಣೇಶ್ ಬೀಡಿ ವರ್ಕ್ಸನವರು ನಮಗೆ ಕಳುಹಿಸಿರುವ ಹೊಸವರ್ಷದ ಕ್ಯಾಲೆಂಡರನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ರಿಟ್ ಅರ್ಜಿ ರುಸುಂ ಹೆಚ್ಚಿಸಿರುವ ಬಗ್ಗೆ ಅಜಿ

ಹೈಕೋರ್ಟಿನಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಕೊಡಬೇಕಾದ ಸ್ಟಾಂಪು ರುಸುಂ [illegible] ರೂ [illegible] ಗಳಿಂದ ೫೦ಕ್ಕೆ ಹೆಚ್ಚಿಸಿರುವ ಸಂಬಂಧ [illegible] ಶ್ರೀ ತಗಡೂರು ರಾಮಚಂದ್ರರಾಯರು [illegible] ಶ್ರೀ ಎ. ಎಸ್. ರಾಮಯ್ಯನವರು ಕೂಡಿರುವ ರಿಟ್ ಅಜಿಯ ಬಗ್ಗೆ ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ. ಮೇದಪ್ಪ ಮತ್ತು [illegible] ವಾದಗಳಾದುವು. ಶ್ರೀ ತಗಡೂರು ರಾಮಚಂದ್ರರಾಯರೇ ವಾದಮಾಡಿ ಅರ್ಜಿಗಳ ರುಸುಂ ಹೆಚ್ಚಿಸುವುದು ಸರಿಯಲ್ಲವೆಂದು ಹೇಳಿದರು. ಶ್ರೀ ಬಿ. ವಾಸುದೇವ ಮೂರ್ತಿಯವರು ಉತ್ತರವಿತ್ತು ಕೋರ್ಟು ಖರ್ಚು ಹೆಚ್ಚಿರುವುದೆಂದು ಹೇಳಿದರು. ಈ ಬಗ್ಗೆ ತೀರ್ಪಿಗೆ ಕಾದಿಡಲಾಗಿದೆ.

ಮನೆಗಳು ಕ್ರಯಕ್ಕಿವೆ

ಮೈಸೂರು ಸಿಟಿ ಡಿ. ಸುಬ್ಬಯ್ಯ ರೋಡ್, ಸೋಮವಾರ್ ಪೇಟೆ, ಕೃಷ್ಣಮೂರ್ತಿಪುರಂ, ಚಾಮುಂಡಿ ಒಡಾವಣೆ ವಾಣೀವಿಲಾಸಪುರ ಮತ್ತು ಸರಸ್ವತಿಪುರಗಳಲ್ಲಿ ಉತ್ತಮವಾದ ಮನೆಗಳು ನಮ್ಮಲ್ಲಿ ಕ್ರಯಕ್ಕೆ ಮತ್ತು ಭೋಗ್ಯಕ್ಕೆ ಇವೆ. ಕೂಡಲೇ ವಿಚಾರಿಸಿರಿ —

ಜಯ ಅಂಡ್ ಕಂಪೆನಿ,

ಸ್ಥಿರ ಸ್ವತ್ತುಗಳ ವ್ಯವಹಾರದ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,
ಮೈಸೂರು · ಫೋನ್ 520

Edited Printed and Published by A. R. Nagarajan at Sadhvi Press D. Subbiah Road, Mysore

೧೧ ವರ್ಷ ಕಾಲ ಸಂಬಳ ಪಡೆಯದ ನೌಕರ

ಆಸ್ಟ್ರೇಲಿಯಾದ ಸಿಡ್ನಿ ನಗರದ ಅಂಚೆ ಕಛೇರಿಯಲ್ಲಿ ಒಬ್ಬನು ೧೧ ವರ್ಷ ಕಾಲ ಸಂಬಳ ಪಡೆಯದೆ ಕೆಲಸ ಮಾಡಿ ಈಚೆಗೆ ನಿವೃತ್ತನಾಗಿರುವನು. ೧೯೪೨ರಲ್ಲಿ ಅಲ್ಲಿ "ಸಂಪಾದಿಸುವಾಗಲೇ ತೆರು" ಎಂಬ ತೆರಿಗೆಗಾಗಿ ಸಂಬಳವನ್ನು [illegible] ಯಿಸುತ್ತಿತ್ತು. ತನ್ನ ಸಂಬಳವನ್ನು ಪೂರ್ತಿಯಾಗಿ ಪಾವತಿ ಮಾಡಬೇಕೆಂದೂ, ಬೇಕಾದರೆ ತಾನೇ ತೆರಿಗೆಯನ್ನು ಕೊಡುವುದಾಗಿಯೂ ಅವನು ಅರಿಕೆ ಮಾಡಿಕೊಂಡಿದ್ದು ಅದನ್ನು ತಿರಸ್ಕರಿಸಲಾಗಿತ್ತು. ಅದೇ ಕಾರಣಕ್ಕಾಗಿ ಅವನು ಸಂಬಳವನ್ನೇ ಪಡೆಯಲಿಲ್ಲ. ಬೇರೆ ವಿಧದ ವರಮಾನವಿದ್ದುದರಿಂದ ಅವನು ಅಷ್ಟು ಕಷ್ಟವಿಲ್ಲದೆ ಜೀವನ ನಡೆಸುವುದರಲ್ಲಿ ಯಶಸ್ವಿಯಾದನು.

ರೇಡಿಯೋವಿನಲ್ಲಿ ನಾಟಕಗಳ ಹಬ್ಬ

ಮೈಸೂರು ಆಕಾಶವಾಣಿಯವರು ನಾಳೆಯಿಂದ ೨೬ ನೇ ತಾ|| ಶುಕ್ರವಾರದ ವರೆಗೆ ದಿನ ರಾತ್ರಿ ನಾಟಕಗಳ ಹಬ್ಬವನ್ನು ಏರ್ಪಡಿಸಿರುವರು. ಕನ್ನಡ ನಾಟಕಗಳು, ತೆಲುಗು, ತಮಿಳು ಮತ್ತು ಹಿಂದಿ ನಾಟಕಗಳ ಕನ್ನಡದ ಭಾಷಾಂತರಗಳನ್ನು ಅಭಿನಯಿಸಲಾಗುವುದು. [illegible] ರಾತ್ರಿ ೮ ರಿಂದ ೯ ರ ವರೆಗೆ ಶ್ರೀರಂಗಪಟ್ಟಣ ಎಂಬ ಚರಿತ್ರಾರ್ಹ ನಾಟಕವು ಇದೆ. [illegible] ತಾ|| ೮ ರಿಂದ ೯|| ಮಂಕುತಿಮ್ಮ ಎಂಬ [illegible] ಭಾಷಾಂತರದ ಹಿಂದಿ ನಾಟಕ, ೮|| ರಿಂದ ೯|| ರ ವರೆಗೆ ಪರಿವರ್ತನಂ ಎಂಬ ನಾಟಕದ ಕನ್ನಡ ಭಾಷಾಂತರದ ನಾಟಕ, ೮|| ರಿಂದ ೯ರ ವರೆಗೆ ತಿಯಾನ ತಲವುಲು ಎಂಬ ತೆಲುಗು ನಾಟಕದ ಕನ್ನಡ ಭಾಷಾಂತರವೂ ಆದ ಸಂಸ್ಕೃತ ನಾಟಕ ಇರುವುವು. ೨೫ನೇ ತಾ|| ೮ ರಿಂದ ೯|| ರ ವರೆಗೆ ಟೆಲಿಫೋನ್, ೮|| ರಿಂದ ೯ ರ ವರೆಗೆ ಹಿಂದಿ ಭೂತ ಎಂಬ ನಾಟಕಗಳು, ೨೬ ನೇ ತಾ|| ೮ ರಿಂದ ೯|| ರ ವರೆಗೆ ಬಾಹುಬಲಿ [illegible] ರುವುವು. ೮-೫೦ ರಿಂದ ೯ರವರೆಗೆ ೬ ಎಂ. [illegible] ನಾಟಕಗಳಿವೆ. ೨೫ನೇ ತಾ|| ೮ ರಿಂದ ೯ ರ [illegible] ರವರಿಗೆ ಸಂಚವಟಿ ಯಕ್ಷಗಾನ ಇವೆ.

ಹೊಸ ಲೈಸೆನ್ಸುಗಳಲ್ಲಿ ೩೦ ಸರ್ಕಾರಿ ಬಸ್ಸುಗಳ ಸಂಚಾರ

ಸಂಸ್ಥಾನದ ನಾನಾ ಭಾಗಗಳಲ್ಲಿ ೩೦ ಸರ್ಕಾರಿ ಬಸ್ಸುಗಳನ್ನು ಓಡಿಸಲು ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ.

SRI GANESHA TALKIES

From 21-2-54 For 3 d[ays]
Columbia Pictures Present
Stanley Cramer Production

MY SIX CONVIC[TS]

(The Private lives of public enemies)
Starring - Gilbert Rolland, Marshall Thompson

ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿಮಿಟೆಡ್,

1129, ವಾಣೀವಿಲಾಸ ರಸ್ತೆ,
ಪೋಸ್ಟ್ ಬಾಕ್ಸ್ ನಂ 8 ಮೈಸೂರು

ಟೆಂಡರು ನೋಟೀಸು

ತಾ 17-2-1954

ಸ್ರ 1954ನೇ ಇಸವಿ ಏಪ್ರಿಲ್ ಒಂದನೇ ತಾರೀಖಿನಿಂದ ಸ್ರ 1955 ನೇ ಮಾರ್ಚಿ 31 ನೇ ತಾರೀಖು [illegible] ಕಾರ್ಖಾನೆಯ [illegible] ಗಳಲ್ಲಿ [illegible] "ಸಿಂಗಲ್ ಸೂಪರ್ [illegible]" ಯನ್ನು [illegible] ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಠೇವಣಿ 50 ರೂ ನಗದು ಹಣದೊಡನೆ ಟೆಂಡರನ್ನು ಕಳಿಸಬೇಕಾದ ಕಡೆಯ ತಾ 1 ಘಂಟೆ 3-3-54

ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ

ಸ. ಕ್ರ. ಶೆ. ರಿ.,
ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್

ಚಾಮುಂಡೇಶ್ವರಿ ಟಾಕೀಸ್

21—2—54 ರಿಂದ

ಅಮೋಘ 3 ನೇ ವಾರ

ಪ್ರತಿದಿನ 3 ಪ್ರದರ್ಶನಗಳು

ವಿಠಲ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ

ರಾಜಲಕ್ಷ್ಮಿ

ಪಾತ್ರ – ರೇವತಿ, ಸಂಪತ್,
ಸಂಭಾಷಣೆ [illegible]
ನಿರ್ದೇಶಕ — ಬಿ. ವಿಠಲಾಚಾರ್

ಕಾಂಗ್ರೆಸ್ ವಸ್ತುಪ್ರದರ್ಶನ 1954

ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಮಾರ್ಚಿ ಎರಡನೆಯ ವಾರದಲ್ಲಿ ಪ್ರಾರಂಭವಾಗುವುದು

' ಸುಭಾಷ್ ನಗರದಲ್ಲಿ ' ನಡೆಯುವುದು

ಅನೇಕ ಪ್ರಾಂತೀಯ ಸರ್ಕಾರಗಳೂ, ಮೈಸೂರು ಸರ್ಕಾರವೂ ಅಲ್ಲದೆ ಭಾರತದ ನಾನಾ ಮೂಲೆಗಳಿಂದ ಪ್ರದರ್ಶಕಕಾರರು ಈ ವಸ್ತು ಪ್ರದರ್ಶನದಲ್ಲಿ ಭಾಗವಹಿಸುತ್ತಾರೆ

ವಸ್ತು ಪ್ರದರ್ಶನದ ಆವರಣದಲ್ಲಿ ಕಟ್ಟಲಾಗುವ ಸ್ಟಾಲುಗಳಿಗಾಗಿ ಅರ್ಜಿ ಸಲ್ಲಿಸಲು ಕಡೇ ದಿನ 20-2-1954.

ಕೆಲವೇ ಸ್ಟಾಲುಗಳು ಉಳಿದಿವೆ
ಕೂಡಲೇ ನಿಮ್ಮ ಸ್ಟಾಲುಗಳನ್ನು ಕಾದಿರಿಸಿಕೊಳ್ಳಿ
ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ -

ಕಾರ್ಯದರ್ಶಿ, ಕಾಂಗ್ರೆಸ್ ವಸ್ತು ಪ್ರದರ್ಶನ,

ನಂ. 142 ಅರಳೇಪೇಟೆ, ಬೆಂಗಳೂರು, 2

ರಿಜಿಸ್ಟರ್ ನಂ. 794

॥ ವಂದೇ ಮಾತರಂ ॥

ಇಂದಿನ ಪತ್ರಿಕೆ 6 ಕಾಸು

ಲಗ್ನದ ಜವಳಿಗಳು
ಮೈ॥ ಗೌ॥ ಸಿಲ್ಕ್ ಸೀರೆ,
ಧರ್ಮಾವರಂ, ಪೂನಾ, ನಾಗಪುರ
ರೇಷ್ಮೆ ಮತ್ತು ನೂಲಿನ ಸೀರೆಗಳಿಗೆ
M. V. ಭೋಜಯ್ಯ
ಬ್ರ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORF : SUNDAY 21-2-1954 : ಮೈಸೂರು : ಭಾನುವಾರ ೨೧-೨-೧೯೫೪ [ಸಂಚಿಕೆ ೧೯೨

ಖುಲಾಸೆ ಮಾಡದಿದ್ದುದಕ್ಕೆ ಖಾಸಿಂ ರಜ್ವಿ ಉಪವಾಸ

ನಗರದ ಉತ್ತರದಲ್ಲಿ ದೊಡ್ಡ ಚರಂಡಿ ವ್ಯವಸ್ಥೆಗೆ ೬ ಲಕ್ಷ ರೂ.

ಮೈಸೂರು ೨೧

ನಗರದ ಉತ್ತರ ಭಾಗದಲ್ಲಿ ದೊಡ್ಡ ಚರಂಡಿ ವ್ಯವಸ್ಥೆ ಏರ್ಪಡಿಸಲು ೬ ಲಕ್ಷ ರೂ. ಗಳ ಅಂದಾಜನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ ಪೌರಸಭೆಯವರು ಈ ಸಂಬಂಧವಾಗಿ ತೆಗೆದಿಟ್ಟಿರುವ ಹಣದಿಂದ ಕೆಲಸವನ್ನು ಆರಂಭಿಸುವಂತೆಯೂ, ಪೌರಸಭೆಯ ಭಾಗದ ೩ ಲಕ್ಷ ರೂ ಗಳನ್ನು ವೆಚ್ಚ ಮಾಡಿ ಕೆಲಸ ನಡೆದನಂತರ ಸರ್ಕಾರದವರು ತಮ್ಮ ಭಾಗವನ್ನು ಕೊಡಲಿರುವುದಾಗಿಯೂ ತಿಳಿಸಿರುವರು

ಮೈಸೂರು ನಗರದಲ್ಲಿ ವಸೂಲಾಗುವ ಆರೋಗ್ಯ ಸೆಸ್ಸನ್ನು ಲೋಕಲ್ ಫಂಡ್ ಆಸ್ಪತ್ರೆಗಳಿಗೆ ಕೊಡುವುದಕ್ಕೆ ವಿನಾಯಿತಿಯು ಬೇಕೆಂದು ಪೌರಸಭೆಯು ಮಾಡಿರುವ ಪ್ರಾರ್ಥನೆಯನ್ನು ಸರ್ಕಾರದವರು ನಿರಾಕರಿಸಿರುತ್ತಾರೆ

ಪೌರಸಭಾ ಇಂಜನಿಯರರನ್ನು ಆಗ್ನೇಯ ಏಷ್ಯದ ಪ್ರಾದೇಶಿಕ ಗೃಹ ನಿರ್ಮಾಣ ಮತ್ತು ಯೋಜನಾ ಸಮ್ಮೇಳನಕ್ಕೆ ಕಳುಹಿಸುವ ಅಗತ್ಯವಿಲ್ಲವೆಂದು ಸರ್ಕಾರದವರು ತಿಳಿಸಿರುವರು

ಹೋಟೇಲು ಕೆಲಸಗಾರರು ಸಮ ವಸ್ತ್ರ ಮತ್ತು ಶಿರೋಭೂಷಣಗಳನ್ನು ಹಾಕುವ ಬಗ್ಗೆ ಕಡ್ಡಾಯಪಡಿಸುವ ನಿಬಂಧನೆಯನ್ನು ಸರ್ಕಾರದವರು ಅನುಮೋದಿಸಿರುತ್ತಾರೆ ಧೋತಿ, ಸ್ವೆಟ್ಟರ್ ಮೇಲೆ ಅರ್ಧ ತೋಳಿನ ಬನಿಯನ್ ಅಥವಾ ಬನಿಯನ್ ಮತ್ತು ಬಿಳಿಯ ಖಾದಿ ಅಥವಾ ಡ್ರಿಲ್ ಬಟ್ಟೆಯ ಟೋಪಿಗಳನ್ನು ಹಾಕಬೇಕೆಂದು ನಿಬಂಧನೆಯಲ್ಲಿ ಕಾಣಿಸಲಾಗಿದೆ

ನಗರದಲ್ಲಿ ಬಡಜನರು ವಾಸ ಮಾಡುವ ಕೊಳಕು ಪ್ರದೇಶಗಳಿಗೆ ಶ್ರೀ ಯುವರಾಜರು ಭೇಟಿ ಕೊಡುವಂತೆ ಪ್ರಾರ್ಥಿಸುವ ನಿರ್ಣಯವನ್ನು ಬರುವ ಪೌರಸಭೆಯ ಅಧಿವೇಶನದಲ್ಲಿ ಜ॥ ಮಿರ್ ನೂರ್ ಹುಸೇನರು ಮಂಡಿಸಲಿರುವರು ಯೋಗಾಭ್ಯಾಸದ ಮೂಲಕ ಜನರ ಆರೋಗ್ಯವನ್ನು ಕಾಪಾಡಲು ಜನರಿಗೆ ಶಿಕ್ಷಣ ಕೊಡಲು ಪೌರಸಭೆಯು ಯೋಗಶಾಲೆಯೊಂದನ್ನು ತೆರೆಯುವಂತೆ ಶ್ರೀ ಬಿ ಜಿ ದಾಸರು ನಿರ್ಣಯವನ್ನು ಸೂಚಿಸಲಿರುವರು

ಕೈ ಮಗ್ಗದ ಸಪ್ತಾಹ

ಅಖಿಲ ಭಾರತ ಕೈ ಮಗ್ಗದ ಸಲಹಾ ಸಮಿತಿಯ ನಿರ್ದೇಶನಕ್ಕನುಸಾರವಾಗಿ ಸಂಸ್ಥಾನದಲ್ಲಿ ಕೈ ಮಗ್ಗದ ಸಪ್ತಾಹವನ್ನು ಬರುವ ತಿಂಗಳು ೭ ನೇ ತಾ॥ ನಿಂದ ೧೪ ರ ವರೆಗೆ ಆಚರಿಸಲಾಗುವುದು ಈ ಸಂಬಂಧವಾಗಿ ಮೈಸೂರು ನಗರದಲ್ಲಿ ಮೆರವಣಿಗೆ, ಕೈ ಮಗ್ಗದ ಸರಕುಗಳ ಪ್ರದರ್ಶನ, ಭಾಷಣ ಮುಂತಾದುವು ನಡೆಯುವುವು ಮಹಾಜನರು ಈ ಸಮಾರಂಭದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಮರದಿಂದ ಬಿದ್ದು ಮರಣ

ಚನ್ನಪಟ್ಟಣದಲ್ಲಿ ೨೫ ವರ್ಷ ವಯಸ್ಸಿನ ನಾರಾಯಣ ಎಂಬ ಒಬ್ಬ ಯುವಕನು ಕಳೆದ ಗುರುವಾರ ಮರವನ್ನು ಹತ್ತಿ, ಸೌದೆ ಕಡಿಯುತ್ತಿದ್ದಾಗ ಆಕಸ್ಮಾತ್ ಕೆಳಗೆ ಬಿದ್ದು, ಮೆದುಳಿಗೆ ಪೆಟ್ಟಾಗಿ ಆಸ್ಪತ್ರೆಯಲ್ಲಿ ಮಡಿದನೆಂದು ವರದಿಯಾಗಿದೆ

ನಗರಕ್ಕೆ ರಷ್ಯದ ಕಲಾವಿದರ ಆಗಮನ

ಮೈಸೂರು ೨೧

ರಷ್ಯದ ೩೮ ಜನ ಕಲಾವಿದರ ನಿಯೋಗವು ಈ ದಿನ ಮಧ್ಯಾಹ್ನ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿತು ನಿಯೋಗದವರೊಡನೆ ಸಂಸ್ಥಾನದ ವಿದ್ಯಾ ಇಲಾಖಾಧಿಕಾರಿಗಳೂ ಮತ್ತು ನಿಯೋಗದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಶ್ರೀ ಜಿ. ಬಿ ಮಲ್ಲಾರಾಧ್ಯರು ಆಗಮಿಸಿದರು ರಷ್ಯಾ ಸಂಸ್ಕೃತಿಯ ಉಪಮಂತ್ರಿ ಎಂ ಟೆಸ್ಲಾಲಾವ್ ರವರು ನಿಯೋಗದ ನಾಯಕರಾಗಿರುವರು ಅವರು ಲಲಿತಮಹಲಿನಲ್ಲಿ ಸರ್ಕಾರಿ ಅತಿಥಿಗಳಾಗಿ ತಂಗಿರುವರು. ಜಗನ್ಮೋಹನ ಬಂಗಲೆಯ ಕಲಾ ಶಾಲೆಗೆ ಅವರು ಭೇಟಿ ಕೊಟ್ಟರು ಈ ಸಂಜೆ ಅವರ ಗೌರವಾರ್ಥವಾಗಿ ಪೌರಸಭೆಯವರು ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು ನಿಯೋಗದವರು ಈ ರಾತ್ರಿ ಬೃಂದಾವನಕ್ಕೆ ತೆರಳಿ ಅಲ್ಲಿಂದ ಬೆಂಗಳೂರಿಗೆ ಹಿಂತಿರುಗುವರು ನಿಯೋಗದಲ್ಲಿ ರಷ್ಯದ ಸುಪ್ರಸಿದ್ಧ ನರ್ತಕಿ ಮಯಾ ಪ್ಲಿಸೆಟ್ಸ್ಕಯಾರವರೂ ಇರುವರು

ಹೋಟೇಲು ಕೆಲಸಗಾರರ ಸಂಘದ ಅಧಿಕಾರ ವರ್ಗ

ಕಳೆದ ಗುರುವಾರ ನಗರದ ಹೋಟೇಲುಗಳ ಕೆಲಸಗಾರರ ಸಂಘದ ಸದಸ್ಯರ ಸಭೆಯಲ್ಲಿ ಅಧಿಕಾರ ವರ್ಗ ಮತ್ತು ಕಾರ್ಯಕಾರಿ ಸಮಿತಿ ಚುನಾವಣೆಯು ನಡೆದು ಶ್ರೀ ಕೆ ಸುಬ್ಬರಾವ್ ಅಧ್ಯಕ್ಷರಾಗಿಯೂ, ಶ್ರೀ ಡಿ ಎಂ ಸೀತಾರಾಮರಾವ್ ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಆರ್ ಶಾಸ್ತ್ರಿಯವರು ಗೌ॥ ಕಾರ್ಯದರ್ಶಿಯಾಗಿಯೂ, ಶ್ರೀ ಎಸ್ ನಾರಾಯಣ ಸಹಾಯಕ ಕಾರ್ಯದರ್ಶಿ ಮತ್ತು ಶ್ರೀ ಮೋಹನ್ ಪ್ರಭುರವರು ಖಜಾಂಚಿಯಾಗಿಯೂ, ಆರಿಸಲ್ಪಟ್ಟರು. ಶ್ರೀಗಳಾದ ಕೆ. ಗಣಪತಿಭಟ್ಟ, ಎಂ. ರಂಗಪ್ಪ, ಕೆ ವಿಷ್ಣು ಪಿ ಮಾಧವ ಜಿ ಎಸ್ ಸುಬ್ಬರಾಯಭಟ್ಟ, ಎ ರಾಮ ಮತ್ತು ಶ್ರೀ ಬಿ ವೆಂಕಟಪ್ಪಶೆಟ್ಟಿ ಇವರುಗಳು ಸಮಿತಿ ಸದಸ್ಯರಾಗಿ ಚುನಾಯಿತರಾದರು

ಮೈಸೂರು ಸಂಸ್ಥಾನದ ಹೋಟೇಲು ನೌಕರರ ಹಿತರಕ್ಷಣೆಗಾಗಿ ಇಡೀ ಸಂಸ್ಥಾನದ ಸಂಘವೊಂದನ್ನು ಸ್ಥಾಪಿಸುವಂತೆ ಕೆಲಸಗಾರರನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು ಕೈಗಾರಿಕಾ ನ್ಯಾಯಸ್ಥಾನದವರು ವ್ಯಾಜ್ಯಗಳನ್ನು ಕಾಲ ಮತ್ತು ಹಣವು ವ್ಯಯವಾಗದಂತೆ ಬೇಗನೆ ಇತ್ಯರ್ಥಗೊಳಿಸಲು ಅವರಿಗೆ ಸೂಕ್ತ ಸೂಚನೆ ಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಪ್ರಾರ್ಥಿಸಲಾಯಿತು ಜಂಗಿ ಸಿಬ್ಬಂದಿ ಕಾನೂನಿನ ಆರನೇ ನಿಬಂಧನೆಯ ಒಂದನೇ ವಿಭಾಗವನ್ನು ತೆಗೆಯುವಂತೆ ಮೈಸೂರ ಸರ್ಕಾರವನ್ನು ಕೋರಲಾಯಿತು

ಕಲ್ಕತ್ತಾದಲ್ಲಿ ಮಿಲಿಟರಿ ಗಸ್ತು ಮುಕ್ತಾಯ

ಕಳೆದ ಹಲವು ದಿನಗಳಲ್ಲಿ ಕಲ್ಕತ್ತದಲ್ಲಿ ಆದ ಗಲಭೆಗಳನ್ನು ಹತೋಟಿಗೆ ತರಲು ಕರೆಸಲಾಗಿದ್ದ ಮಿಲಿಟರಿಯವರನ್ನು ವಾಪಸು ಕಳುಹಿಸಲಾಗಿದೆ ಅಲ್ಲಿ ಪರಿಸ್ಥಿತಿಯು ಈಗ ಶಾಂತವಾಗಿದೆ

ಹಾಸನ ಮತ್ತು ಮಂಗಳೂರಿಗೆ ರೈಲ್ವೆ ಸರ್ವೆ ಮಾರ್ಚಿಯಲ್ಲಿ

ಮುಂದಿನ ತಿಂಗಳು ಮಧ್ಯ ಭಾಗದಲ್ಲಿ ಹಾಸನ ಮತ್ತು ಮಂಗಳೂರುಗಳ ನಡುವೆ ರೈಲು ಮಾರ್ಗ ಹಾಕಲು ಪೂರ್ವಭಾವಿ ಇಂಜನಿಯರಿಂಗ್ ಸರ್ವೆಯು ಆರಂಭವಾಗುವುದೆಂದು ಗೊತ್ತಾಗಿದೆ ಹಾಸನ, ಸಕಲೇಶಪುರ, ಮಾರನಹಳ್ಳಿ ಮತ್ತು ಮಂಗಳೂರುಗಳಲ್ಲಿ ಇಂಜನಿಯರುಗಳು ತಮ್ಮ ಶಿಬಿರಗಳನ್ನು ಏರ್ಪಡಿಸಿಕೊಂಡು ಕೆಲಸವನ್ನು ಮುಂದುವರಿಸುವರು ಅವರ ಕೇಂದ್ರ ಕಛೇರಿಯು ಹಾಸನದಲ್ಲಿ ೧ ನೇ ತಾ॥ ನಿಂದ ತೆರೆಯಲ್ಪಡುವುದು ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರಾದ ಶ್ರೀ ಎಂ ಎಸ್ ಕೃಷ್ಣಸ್ವಾಮಿಯವರು ಕಛೇರಿಯ ಮುಖ್ಯಾಧಿಕಾರಿಗಳಾಗುವರು

ಮಕ್ಕಳಾಟವು ಮರಣಕ್ಕೆ ಕಾರಣವಾದ ಪ್ರಸಂಗ

ಸಕಲೇಶಪುರದ ಪೌರಸಭಾ ಜಾಡಮಾಲಿಯೊಬ್ಬನ ೮ ವರ್ಷದ ಮಗನು ಹುಡುಗಾಟಿಕೆಯ ಪರಿಣಾಮವಾಗಿ ಮರಳು ತುಂಬಿದ ಲಾರಿಯೊಂದರ ಅಡಿಯಲ್ಲಿ ಸಿಕ್ಕಿ ಮೃತಪಟ್ಟ ಪ್ರಸಂಗವೊಂದು ನಡೆದಿರುತ್ತದೆ ಹುಡುಗನೂ ಅವನ ಸ್ನೇಹಿತನೂ ರಸ್ತೆಯಲ್ಲಿ ಆಟವಾಡುತ್ತಿದ್ದಾಗ ಸ್ನೇಹಿತನು ಬಾಲಕನನ್ನು ಮಧ್ಯಕ್ಕೆ ತಳ್ಳಿದನೆಂದೂ ಅದೇ ಸಮಯಕ್ಕೆ ಲಾರಿಯು ಅಲ್ಲಿ ಹೋಯಿತೆಂದೂ ಹೇಳಲಾಗಿದೆ

ವಿಯಟ್ಮಿನ್ ಸೈನಿಕರಿಂದ ೫೦೦ ಜನ ರೈತರ ಸಾಮೂಹಿಕ ಕೊಲೆ

ಇಂಡೋಚೀನದಲ್ಲಿ ಹಾನಾಯ್ ನಗರಕ್ಕೆ ೮೦ ಮೈಲಿ ದೂರವಿರುವ ಒಂದು ಹಳ್ಳಿಯಲ್ಲಿ ಸಂತೆಯು ಸೇರಿದ್ದಾಗ, ಇಪ್ಪತ್ತು ಜನ ವಿಯಟ್ಮಿನ್ ಸೈನಿಕರು ಮತ್ತು ಸ್ತ್ರೀ ವೇಷಧಾರಿ ಯುವಕರು ಅಲ್ಲಿಗೆ ಹೋಗಿ ಮೆಷಿನ್ ಗನ್ ಫಯರ್ ನಡೆಸಿದರೆಂದೂ, ಸುಮಾರು ೫೦೦ ಜನ ರೈತರು ಮಡಿದಿರಬಹುದೆಂದೂ ವರದಿಯಾಗಿದೆ. ಈ ಸಾಮೂಹಿಕ ಕೊಲೆಯಾದುದಲ್ಲದೆ, ಅವರಿಂದ ಒಂದು ಕ್ರಿಸ್ತ ದೇವಾಲಯವೂ ನಾಶಪಡಿಸಲ್ಪಟ್ಟಿತೆಂದೂ ಹೇಳಲಾಗಿದೆ ೩ ಶಾಲೆಗಳು, ಒಂದು ಅನಾಥಾಶ್ರಮಗಳನ್ನೂ ಸುಡಲಾಗಿದೆ

ಹೈದರಾಬಾದು ಹೈಕೋರ್ಟು ನೌಕರರ ವಸ್ತ್ರಾಲಂಕಾರ

ಹೈದರಾಬಾದು ಹೈಕೋರ್ಟು ಮತ್ತು ಕೆಳಗಿನ ಕೋರ್ಟುಗಳ ನೌಕರರು, ಜವಾನರನ್ನು ಬಿಟ್ಟು, ಹಾಕಬೇಕಾದ ವಸ್ತ್ರಗಳ ಮಾದರಿಯನ್ನು ಗೊತ್ತುಪಡಿಸಲಾಗಿದೆ ಬಿಳಿಯ ಪೈಜಾಮ ಮತ್ತು ಕೆರಡಂದ ಕಪ್ಪು ಅಂಗಿ, ಅಥವಾ ಕಪ್ಪು ಷರ್ವಾನಿ ಮತ್ತು ಪೈಜಾಮ, ಅಥವಾ ತೆರೆದ ಕಾಲರಿನ ಕರಿಯ ಅಂಗಿ, ಕಪ್ಪಾದ ಕತ್ತುಪಟ್ಟಿ ಮತ್ತು ಬಿಳಿಯ ಪೈಜಾಮ – ಈ ರೀತಿ ವಸ್ತ್ರಾಲಂಕಾರವನ್ನು ಮಾಡಿಕೊಳ್ಳುವಂತೆ ಸೂಚಿಸಲಾಗಿದೆ ಚಪ್ಪಲಿಗಳನ್ನು ಹೊರತು ಬೇರೆ ಪಾದರಕ್ಷೆಗಳನ್ನು ಹಾಕಬೇಕು ತಲೆಗೆ ಯಾವುದಾದರೂ ಭೂಷಣ ಹಾಕಿಕೊಳ್ಳಬಹುದು ಪೇಟವನ್ನು ಉಪಯೋಗಿಸುವುದಾದರೆ ಬಿಳಿಯ ಬಟ್ಟೆಯನ್ನು ಮಾತ್ರ ಹಾಕಿಕೊಳ್ಳಬೇಕು.

ಖಾಸಿಂ ರಜ್ವಿಯ ಉಪವಾಸ

ಹೈದರಾಬಾದ. ಜೈಲಿನಲ್ಲಿ ೭ ವರ್ಷ ಸಜಾ ಶಿಕ್ಷೆ ಅನುಭವಿಸುತ್ತಿರುವ ಮಾಜಿ ರಜಾಕರ್ ನಾಯಕ ಖಾಸಿಂ ರಜ್ವಿಯು ಕಳೆದ ೧೮ ನೇ ತಾ॥ ನಿಂದ ಆಹಾರವನ್ನು ಸ್ವೀಕರಿಸುತ್ತಿಲ್ಲವೆಂದು ಹೇಳಲಾಗಿದೆ. ಅವರಂತೆ ಇನ್ನೂ ನಾಲ್ಕರು ಉಪವಾಸ ಮಾಡುತ್ತಿರುವರೆಂದೂ, ಅವರನ್ನು ಕೂಡಲೇ ಬಂಧಮುಕ್ತರನ್ನಾಗಿ ಮಾಡಲು ಅವರುಗಳು ಮಂಡಿಸಿದ ಬೇಡಿಕೆಯನ್ನು ಜೈಲು ಅಧಿಕಾರಿಗಳು ನಿರಾಕರಿಸಿದ್ದರಿಂದ ಈ ಕ್ರಮ ಕೈಗೊಂಡರೆಂದೂ ಹೇಳಲಾಗಿದೆ

ಮುಂದಿನ ತಿಂಗಳು ಅಮೆರಿಕಾ ಪಾಕಿಸ್ತಾನಗಳಿಗೆ ಒಪ್ಪಂದ

ಮುಂದಿನ ತಿಂಗಳು ಆದಿಭಾಗದಲ್ಲಿ ಅಮೆರಿಕಾ ಮತ್ತು ಪಾಕಿಸ್ತಾನಗಳಿಗೆ ಒಪ್ಪಂದವಾಗುವ ಸೂಚನೆಗಳಿವೆ ಒಪ್ಪಂದದಂತೆ ಕೊಡಲಾಗುವ ಸಹಾಯವನ್ನು ಆಕ್ರಮಣಕಾರಿ ಉದ್ದೇಶಗಳಿಗೆ ಉಪಯೋಗಿಸದಂತೆ ಷರತ್ತು ಹಾಕಲಾಗುವುದೆಂದೂ ಹೇಳಲಾಗಿದೆ

ಚುನಾವಣೆಯಲ್ಲಿ ಸ್ಪರ್ಧಿಸಲು ದಾಂಪತ್ಯ ವಿಚ್ಛೇದನ

ಬರೋಡಾ ಪೌರಸಭೆಯ ಚುನಾವಣೆಯು ಕಳೆದ ೧೭ ನೇ ತಾ॥ ನಡೆದಾಗ ಮಚೆಭಾಯ್ ಸೋಲಂಕಿ ಎಂಬ ಪಿ. ಎಸ್ ಪಿ ಉಮೇದುವಾರನೊಬ್ಬನು ತನ್ನ ಪತ್ನಿಯೊಡನೆ ವಿಚ್ಛೇದನ ಮಾಡಿಕೊಂಡನೆಂದು ವರದಿಯಾಗಿದೆ ಆತನ ಪತ್ನಿಯು ಪೌರಸಭೆಯಲ್ಲಿ ನೌಕರಳಾಗಿದ್ದಳು ಅದರಿಂದ ಆತನು ಚುನಾವಣೆಗೆ ನಿಲ್ಲುವಂತಿರಲಿಲ್ಲ ಚುನಾವಣೆಯಲ್ಲಿ ಆತನು ಜಯಗಳಿಸಿರುತ್ತಾನೆ

ಭಾರತಕ್ಕಾಗಿ ಎರಡು ಎಣ್ಣೆ ಹಡಗುಗಳ ಕ್ರಯ

ಎರಡು ಎಣ್ಣೆ ಹಡಗುಗಳನ್ನು ಕೊಳ್ಳಲು ಭಾರತ ಸರ್ಕಾರದವರು ನಿರ್ಧರಿಸಿರುವುದಾಗಿ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುವರು ಭಾರತಕ್ಕೂ ಮತ್ತು ಅಲ್ಲಿಂದ ಹೊರಗೂ ಎಣ್ಣೆಯನ್ನು ಸಾಗಿಸಲು ಭಾರತದ ಹಡಗು ಸಂಸ್ಥೆಗಳು ಏರ್ಪಾಡು ಮಾಡಿದರೆ ಅದನ್ನು ಕೇಂದ್ರ ಸರ್ಕಾರದವರು ಸ್ವಾಗತಿಸುವರೆಂದೂ ಅವರು ಹೇಳಿರುವರು

ಮೈಸೂರು ವಿದ್ಯಾ ಪ್ರವೀಣರಿಗೆ ಕೇಂದ್ರ ಸಮಿತಿಗಳಲ್ಲಿ ಸ್ಥಾನ

ಮೈಸೂರು ವಿಶ್ವವಿದ್ಯಾಲಯದ ಡಾ॥ ಹೆಚ್. ಎಲ್ ಹರಿಯಪ್ಪನವರನ್ನು ಕೇಂದ್ರದ ಸಾಮಾಜಿಕ ವಿಜ್ಞಾನದ ಪ್ರವೀಣರ ಸಮಿತಿಯ ಸದಸ್ಯರಾಗಿಯೂ, ಸಂಸ್ಕೃತ ಪ್ರೊಫೆಸರಾದ ಶ್ರೀ ಎ ಶಿವರಾಮ ಶಾಸ್ತ್ರಿಯವರನ್ನು ಸಾಂಸ್ಕೃತಿಕ ಸಂಬಂಧವಾದ ಭಾರತೀಯ ಮಂಡಲದ ಸದಸ್ಯರಾಗಿಯೂ ಮತ್ತು ಹಿಂದಿಯ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಎ ನಾಗಪ್ಪನವರನ್ನು ಅಖಿಲ ಭಾರತ ಹಿಂದಿ ಪರೀಕ್ಷಾ ಸಮಿತಿಯೊಂದರ ಸದಸ್ಯರಾಗಿಯೂ ಭಾರತ ಸರ್ಕಾರದವರು ನೇಮಿಸಿರುತ್ತಾರೆ

○ ಈಜಿಪ್ಟಿನ ಅಧ್ಯಕ್ಷರಾದ ಜನರಲ್ ನಗೀಬ್ ರವರು ಪಾಕಿಸ್ತಾನಕ್ಕೆ ಭೇಟಿ ಕೊಡುವುದಾಗಿ ವರದಿಯಾಗಿದೆ

ವಾ ರ ಭ ವಿ ಷ್ಯ

೨೧—೨—೫೪ ರಿಂದ ೨೮—೨—೫೪ ರ ವರೆಗೆ

ಮೇಷ — ಆರೋಗ್ಯದ ಕಡೆ ಲಕ್ಷ್ಯವಿರಲಿ, ರಕ್ತದ ಒತ್ತಡ, ಮಾನಸಿಕ ಸ್ಥಿತಿ ತಾಪಕರ, ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ತೊಂದರೆ ಪ್ರವಾಸದಲ್ಲಿ ವಿಘ್ನ ತಾ|| ೨೧, ೨೫ ಅಶುಭ ವಾರ್ತೆ, ಪತ್ನಿಗೆ ಅಪಘಾತ

ವೃಷಭ — ಆರೋಗ್ಯ ಉತ್ತಮ ಮನಸ್ಸಿಗೆ ಚಿಂತೆ, ಆರ್ಥಿಕ ಮುಗ್ಗಟ್ಟು, ಸಾಲಕ್ಕಾಗಿ ಅಲೆದಾಟ, ವ್ಯಾಪಾರ ಉದ್ಯೋಗ, ನೌಕರಿಯಲ್ಲಿ ಹಾನಿ, ಪ್ರವಾಸದಲ್ಲಿ ಜಯ, ದಾನ ಧರ್ಮಕ್ಕೆ ವಿಘ್ನ ತಾ|| ೨೨, ೨೫ ಪ್ರಿಯಜನರ ವಿಯೋಗ ವ್ಯಥಾಪವಾದ

ಮಿಥುನ — ಮನಸ್ಸಿನ ವಿಚಾರಗಳ ಸಿದ್ಧಿ ಯ ಕಾಲ, ಆರೋಗ್ಯ ಮತ್ತು ಸಾಂಪತ್ತಿಕ ಸ್ಥಿತಿ ಉತ್ತಮ, ಶತ್ರುಗಳ ಶರಣಾಗತಿ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಪ್ರಗತಿ ಸ್ವೀಕೃತ ಕಾರ್ಯ ಯಶ, ಪ್ರವಾಸ ಸುಗಮ ತಾ|| ೨೫ ೨೬ ಬಂಧುಗಳಾಗಮನ, ಹೆಚ್ಚು ಖರ್ಚು

ಕರ್ಕ — ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಭಯ ಕಡಿಮೆ ಪ್ರಗತಿ ಚಿಹ್ನೆ ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ ಪ್ರವಾಸ ನಿರ್ವಿಘ್ನ ತಾ|| ೨೩, ೨೪ ಖರ್ಚು ಹೆಚ್ಚು, ಮನಶ್ಶಾಂತಿ

ಸಿಂಹ—ಆರೋಗ್ಯಕ್ಕೆ ಕ್ಲೇಶ ಆರ್ಥಿಕ ಮುಗ್ಗಟ್ಟು, ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಘಟನೆಗಳು ಭಯಂಕರ, ಪ್ರವಾಸದಲ್ಲಿ ವಿಘ್ನ ತಾ|| ೨೫ ೨೬ ಮಹತ್ವದ ಪತ್ರ, ಮನೋವ್ಯಥೆ

ಕನ್ಯಾ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ಮನಸ್ಸಿಗೆ ಆತಂಕ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರಗತಿ ಮತ್ತು ಲಾಭ ಪ್ರವಾಸ ಸುಖಕರ. ತಾ|| ೨೫, ೨೬ ಮಹತ್ವದ ಪತ್ರಾಗಮನ, ಧನ ಲಾಭ

ತುಲಾ — ಆರ್ಥಿಕ ಮುಗ್ಗಟ್ಟು ಆರೋಗ್ಯ ಸಾಧಾರಣ ಮನಸ್ಸಿಗೆ ತಾಪ ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಭಯ, ಪ್ರವಾಸದಲ್ಲಿ ವಿಘ್ನ ತಾ|| ೨೧, ೨೨ ಅಮೂಲ್ಯ ವಸ್ತುವಿನ ನಾಶ, ಪತ್ನಿಯ ವಿರೋಧ

ವೃಶ್ಚಿಕ — ಮನಸ್ಸಿಗೆ ಚಿಂತೆ ಆರೋಗ್ಯ ಆರ್ಥಿಕ ಸ್ಥಿತಿ ಕ್ಲೇಶಕರ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಹಾನಿ, ಪ್ರವಾಸದಲ್ಲಿ ಅಪಘಾತ ತಾ|| ೨೨ ೨೩ ಕ್ಲೇಶ ಖರ್ಚು ಭಯ

ಧನು — ಆರೋಗ್ಯ, ಆರ್ಥಿಕ ಸ್ಥಿತಿಗತಿ ತೃಪ್ತಿಯಿಲ್ಲ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಶತ್ರುಕೈ ಮೇಲು, ಪ್ರವಾಸ ಬೇಡ ತಾ|| ೨೫, ೨೬ ಅಶುಭ ವಾರ್ತೆ, ಮನೋವ್ಯಥೆ

ಮಕರ — ಆರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರ ಸ್ವೀಕೃತ ಕಾರ್ಯದಲ್ಲಿ ಜಯ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಪ್ರಗತಿ, ಪ್ರವಾಸದಲ್ಲಿ ಯಶ ತಾ|| ೨೫, ೨೬ ಆಕಸ್ಮಿಕ ಲಾಭ, ಸ್ತ್ರೀ ಸೌಖ್ಯ

ಕುಂಭ — ಆರೋಗ್ಯ ಉತ್ತಮ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಸಮಾಧಾನ ತಾ|| ೨೧, ೨೨ ಮಹತ್ವದ ಸಂಭಾಷಣೆ ಶುಭವಾರ್ತೆ.

ಮೀನ—ಆರೋಗ್ಯ, ಆರ್ಥಿಕ ಮತ್ತು ಮಾನಸಿಕ ಸ್ಥಿತಿ ಉತ್ತಮ, ಸ್ವೀಕೃತ ಕಾರ್ಯದಲ್ಲಿ ಯಶ, ಪ್ರವಾಸದಲ್ಲಿ ಲಾಭ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳು ಮಿತ್ರರಾಗುವರು ತಾ|| ೨೫, ೨೬ ಇಷ್ಟಪ್ರಾಪ್ತಿ, ಮೃಷ್ಟಾನ್ನ ಭೋಜನ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ಕ್ಕೆ ಸಂಗೀತ ೬ ೩೦ ಎ ಐ ಆರ್ ಸಾಮೂಹಿಕ ವಾದ್ಯ, ನಂಗಸ್ವರ ವಾದ್ಯವೃಂದ ೧೨ ೩೦ ರಿಂದ ಕರ್ನಾಟಕ ಸಂಗೀತ ... [illegible]

ಭಾರತ ಸೈನ್ಯಗಳಿಗೆ ದಕ್ಷಿಣ ಕೊರಿಯದಿಂದ ಅಪಾಯವೇ

ಕೊರಿಯದಿಂದ ವಾಪಸು ಬರಲಿರುವ ಭಾರತೀಯ ಸೈನ್ಯಗಳ ವಶದಲ್ಲಿರುವ ೮೭ ಜನ ಖೈದಿಗಳನ್ನು ದಕ್ಷಿಣ ಕೊರಿಯಾಗೆ ಒಪ್ಪಿಸದಿದ್ದರೆ, ದುಷ್ಪರಿಣಾಮಗಳಾಗುವುವೆಂದು ದಕ್ಷಿಣ ಕೊರಿಯದ ರಕ್ಷಣಾ ಮಂತ್ರಿ ಸೋನ್ ವೋನ್ ಎಲ್ ರವರು ಬೆದರಿಸಿದ್ದಾರೆ ಭಾರತೀಯ ಸೈನಿಕರು ಸ್ವದೇಶಕ್ಕೆ ಹಿಂತಿರುಗಲು ಬಲಾತ್ಕಾರದಿಂದ ತಡೆ ಪಡಿಸುವಿರಾ ಎಂದು ಅವರನ್ನು ಕೇಳಿದುದಕ್ಕೆ ಪ್ರಸಂಗ ಬಂದರೆ ಎಲ್ಲಾ ಸಾಧ್ಯವೆಂದೂ ಅವರ ಹೇಳಿದರು. ಭಾರತದ ಸೈನ್ಯಗಳ ಸ್ವದೇಶಕ್ಕೆ ಹಿಂತಿರುಗುವಾಗ ಅವುಗಳಿಗೆ ತಡೆಯನ್ನು ತಂದೊಡ್ಡಿದರೆ ಅದನ್ನು ... [illegible] ಜನರಲ್ ಮ್ಯಾಕ್ಸ್‌ವೆಲ್ ಟೇಲರ್‌ರವರ ತಿಳಿಸಿದ್ದಾರೆ

ಚರ್ಚಿಲ್ ಪ್ರತಿಮೆ ಭಂಗ

ಲಂಡನ್ನಿನಲ್ಲಿ ಪಾರ್ಲಿಮೆಂಟ್ ಕಟ್ಟಡದ ಪ್ರಾಂಗಣದಲ್ಲಿ ಇಡಲಾಗಿದ್ದ ಬ್ರಿಟನ್ನಿನ ಪ್ರಧಾನಿ ಸರ್ ವಿನ್‌ಸ್ಟನ್ ಚರ್ಚಿಲ್ ಮತ್ತು ಅವರ ಮಂತ್ರಿಮಂಡಲದ ನಾಲ್ಕು ಮಂದಿ ಸದಸ್ಯರ ಪೂರ್ಣಾಕೃತಿಯ ಪ್ರತಿಮೆಗಳನ್ನು ಮೊನ್ನೆ ಒಬ್ಬ ಯುವಕನು ಸುತ್ತಿಗೆಯಿಂದ ಹೊಡೆದು ಭಿನ್ನ ಮಾಡಿದನೆಂದು ವರದಿಯಾಗಿದೆ

ಪ್ಯಾಡರ್ ಟೆನಿಸ್ ಕ್ಲಬ್

ರಾಜಧಾನಿಯ ಕೃಷ್ಣಮೂರ್ತಿ ಪುರದಲ್ಲಿರುವ ಪ್ಯಾಡರ್ ಟೆನಿಸ್ ಕ್ಲಬ್ಬಿನ ಅಧಿಕಾರ ವರ್ಗದ ಚುನಾವಣೆ ನಡೆದು ಶ್ರೀ ಡಿ ಎಸ್ ಶಿವಕುಮಾರ್ ರವರು ಅಧ್ಯಕ್ಷರಾಗಿಯೂ, ಶ್ರೀ ಎಲ್ ರಾಮಮೂರ್ತಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ ಎಲ್ ಸತ್ಯನಾರಾಯಣರವರು ಕಾರ್ಯದರ್ಶಿಯಾಗಿಯೂ ಶ್ರೀ ಶಂಕರ್‌ರವರು ಕ್ಯಾಪ್ಟನ್ ಮತ್ತು ಶ್ರೀ ಟಿ. ಬಿ ಶ್ರೀನಿವಾಸರವರು ವ್ಯವಸ್ಥಾಪಕ ಸಮಿತಿ ಸದಸ್ಯರಾಗಿಯೂ ಆರಿಸಲ್ಪಟ್ಟಿದ್ದಾರೆ

ಬೆಂಗಳೂರು ಪೌರಸಭಾ ಸದಸ್ಯರ ಮೊಕದ್ದಮೆ

ಬೆಂಗಳೂರು ಕಾರ್ಪೊರೇಷನ್ನಿನ ಶ್ರೀ ಕೆ ಆರ್ ಶ್ರೀಧರನ್ ... [illegible] ಮೊನ್ನೆ ... [illegible] ... ಅವರನ್ನು ಜಾಮೀನಿನ ಮೇಲೆ ಬಿಡಲಾಗಿದೆ

ಪದವೀಧರರ ಪಾಠ ಕ್ರಮಕ್ಕೆ ನಾಟಕದ ವಿಷಯ

ವಿಶ್ವವಿದ್ಯಾಲಯದ ಅಕೇಡಮಿಕ್ ಕೌನ್ಸಿಲ್ ಸಭೆಯು ಮೊನ್ನೆ ನಡೆದು, ಬಿ ಎ ಪ್ರಶಸ್ತಿ ತರಗತಿಯ ೩ ನೇ ಭಾಗಕ್ಕೆ ನಾಟಕವನ್ನು ಓದುವ ವಿಷಯವಾಗಿ ಸೇರಿಸುವಂತೆ ಶಿಫಾರಸು ಮಾಡುವ ನಿರ್ಣಯವನ್ನು ಅಂಗೀಕರಿಸಲಾಯಿತು

ಮೈಸೂರು ಪೇಟೆ ಧಾರಣೆ

ವಸ್ತು	ರೂ ಇಂದ			ರೂ ಗೆ		
ಕಡಲೆಕಾಯಿ	೨೦	೦	೦	೨೩	೮	೦
ಕಡಲೆಬೇಳೆ	೨೫	೦	೦	೩೬	೦	೦
ಹುಚ್ಚೆಳ್ಳು	೩೯	೧೨	೦	೪೩	೨	೦
ತೊಗರಿಬೇಳೆ	೨೧	೦	೦	೨೫	೧೪	೦
ಉದ್ದಿನಬೇಳೆ	೧೨	೪	೦			
ಹುರುಳಿ	೨೫	೦	೦	೨೯	೨	೦
ಹೆಸರು	೩೬	೧೨	೦	೩೮	೦	೦
ಹಲಸಂದೆ	೨೩	೨	೦	೩೬	೧೨	೦
ಅವರೆ	೨೬	೨	೦	೩೩	೦	೦
ಧನಿಯ	೨೬	೪	೦	೨೯	೧೨	೦
ರಾಗಿ	೨೨	೦	೦	೨೬	೨	೦
ಸಕ್ಕರೆ	೪೫	೮	೦	೪೯	೦	೦
ಹೆಸರಿನ ಬೇಳೆ	೨೭	೪	೦	೩೮	೮	೦
ಹ. ಮೆಣಸಿನಕಾಯಿ	೪	೦	೦	೮	೯	೦
ಹುಣಸೆ ಹ.	೪	೨	೦	೪	೧೦	೦
ಮೆಣಸಿನಕಾಯಿ	೨೩	೪	೦	೩೩	೪	೦
ತೆಂಗಿನಕಾಯಿ ೧೦೦ಕ್ಕೆ	೧೭೪	೦	೦	೩೧೫	೦	೦
ಬೆಲ್ಲ	೪	೮	೦	೫	೦	೦

ರೈಲ್ವೆ ಪ್ರಯಾಣದ ನಾಲ್ಕು ರಿಯಾಯಿತಿಗಳು

ರೈಲ್ವೆಯ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ಆಯವ್ಯಯ ಪಟ್ಟಿಯನ್ನು ಮೊನ್ನೆ ಮಂಡಿಸಿದಾಗ ೧೯೫೪ನೇ ಸಾಲಿನಿಂದ ಈ ರೀತಿಯ ಪ್ರಯಾಣದ ರಿಯಾಯಿತಿಗಳನ್ನು ಏರ್ಪಡಿಸಲಾಗುವುದೆಂದು ತಿಳಿಸಿರುತ್ತಾರೆ ಎಲ್ಲಾ ವರ್ಗಗಳ ಜನರೂ ಉಪಯೋಗಿಸಬಹುದಾದ ಮುಕ್ಕಾಲು ಭಾಗ ದರದ ೧,೫೦೦ ಮೈಲಿ ಪ್ರದಕ್ಷಿಣ ಪ್ರವಾಸದ ವ್ಯವಸ್ಥೆ, ನಾಲ್ಕು ಜನ ವಿದ್ಯಾರ್ಥಿಗಳಿಗೆ ಕಡಿಮೆ ಇದ್ದಂತೆ ವಿದ್ಯಾರ್ಥಿಗಳ ಸಮೂಹ ಪ್ರವಾಸಗಳಿಗೆ ಈಗ ಕೊಡುವ ರಿಯಾಯಿತಿ ... ದಿನಗಳ ಪ್ರಯಾಣ ... ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ೩೦ ಮೈಲಿ ದೂರ ಪ್ರದೇಶಗಳಿಂದ ನಿತ್ಯವೂ, ೧೨ ದಿನಗಳ ಒಂದು ಮಾಗುವ ಪ್ರಯಾಣದ ದರವನು ಕೊಟ್ಟು ಹೋಗಿಬರುವ ಸವಲತ್ತು ೧೫೦ ಅಡಿಗಳಿಗೂ ಹೆಚ್ಚು ಎತ್ತರದ ಆರೋಗ್ಯಕರವಾದ ಪರ್ವತ ಪ್ರದೇಶಗಳಿಗೆ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ ೧|| ರಿಯಾಯಿತಿ ದರದಲ್ಲಿ ರಿಟರ್ನ್ ಪ್ರಯಾಣ—ಹೀಗೆ ನಾಲ್ಕು ರೀತಿಯ ರಿಯಾಯಿತಿ ಪ್ರಯಾಣಗಳನ್ನು ಏರ್ಪಡಿಸಲಾಗುವುದೆಂದು ರೈಲ್ವೆ ಮಂತ್ರಿಯವರು ತಿಳಿಸಿರುವರು

ಆಂಧ್ರಕ್ಕೆ ಜೋಗ್ ವಿದ್ಯುಚ್ಛಕ್ತಿ

ಜೋಗಿನ ವಿದ್ಯುತ್ ಕೇಂದ್ರದಿಂದ ೫|| ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಆಂಧ್ರದ ಕಡಪಾ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಿಗೆ ೩ ವರ್ಷಗಳ ವರೆಗೆ ಒದಗಿಸುವಂತೆ ಆಂಧ್ರ ಸರ್ಕಾರದವರು ಮೈಸೂರು ಸರ್ಕಾರದವರನ್ನು ಕೋರಿರುತ್ತಾರೆ ತುಂಗಭದ್ರಾ ಯೋಜನೆಯು ೧೯೫೭ರಲ್ಲಿ ಮುಗಿಯುವುದೆಂದೂ, ಅಲ್ಲಿಯವರೆಗೆ ಮೈಸೂರು ವಿದ್ಯುಚ್ಛಕ್ತಿಯನ್ನು ಬಳಸಲಾಗುವುದೆಂದೂ ಹೇಳಲಾಗಿದೆ

ಜಾಡಮಾಲಿ ವೃತ್ತಿ ಹೋಗಬೇಕೆಂದು ಜಗಜೀವನರಾಂ ಹೇಳಿಕೆ

ಭಾರತ ಸರ್ಕಾರದ ಮಾರ್ಗಾನುಕೂಲ ಮಂತ್ರಿ ಜಗಜೀವನರಾಂರವರು ಜಾಡಮಾಲಿಗಳ ವೃತ್ತಿಯು ರದ್ದಾಗಬೇಕೆಂದು ಹೇಳಿದ್ದಾರೆ ... ಮತ್ತು ಹೇಸಿಗೆ ತೆಗೆಯುವುದು ... ಮಾಡುವ ಕರ್ತವ್ಯವಲ್ಲವೆಂದು ... ಅವಮಾನ ಕರ್ತವ್ಯ ಮಾಡುವುದು ತಪ್ಪು ಆದಷ್ಟು ಬೇಗನೆ ಬೇರೊಂದು ವಿಧಾನವು ಏರ್ಪಡದ ಹೊರತು ಇದು ಒಳ್ಳೆಯದೆಂದೂ ಅವರು ಅಭಿಪ್ರಾಯ ಪಟ್ಟಿರುತ್ತಾರೆ

ಲಕ್ಕವಳ್ಳಿಯಲ್ಲಿ ಕಾಲರಾದಿಂದ ೫೩ ಮರಣ

ಭದ್ರಾ ಅಣೆಕಟ್ಟಿನ ಪ್ರದೇಶ ಮತ್ತು ಲಕ್ಕವಳ್ಳಿಯಲ್ಲಿ ಕಾಲರಾ ಹರಡಿ ೭೧ ಜನ ರೋಗಿಗಳ ಪೈಕಿ ೫೩ ಮಂದಿ ಮೃತಪಟ್ಟಿರುತ್ತಾರೆ ೧೩ ಸಾವಿರ ಜನರಿಗೆ ಇನಾಕ್ಯುಲೇಷನ್ ಮಾಡಲಾಗಿದೆ ಶಿವನಿ ಮತ್ತು ಅಜ್ಜಂಪುರಗಳಲ್ಲಿ ರೋಗಹರಡಿದ್ದುದನ್ನು ತಡೆಗಟ್ಟಲಾಗಿದೆ

ಅಣು ಶಕ್ತಿಯಿಂದ ಚಲಿಸುವ ರೈಲು ಇಂಜಿನ್

ಅಣು ಶಕ್ತಿಯಿಂದ ಚಲಿಸಬಲ್ಲ ರೈಲು ಇಂಜನ್ನನ್ನು ತಯಾರಿಸುವ ಪ್ರಯತ್ನವು ನಡೆಯುತ್ತಿದೆ. ಅಮೇರಿಕದ ಉಟಾ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಂತಹ ಇಂಜನ್ನಿನ ಮಾದರಿಯೊಂದನ್ನು ಸಿದ್ಧಗೊಳಿಸಿರುತ್ತಾರೆ ಯುರೇನಿಯಂ ಲೋಹದ ಸೀರೇ ಇಂಜನ್ನಿಗೆ ಆಧಾರ ಅದರಿಂದ ಉತ್ಪನ್ನವಾಗುವ ಆವಿಯಿಂದ ವಿದ್ಯುತ್ ಶಕ್ತಿಯುಂಟಾಗಿ ಗಾಡಿಯು ಚಲಿಸಬಲ್ಲದೆಂದು ಹೇಳಲಾಗಿದೆ

ಮೈಸೂರು ವೈದ್ಯಾಧಿಕಾರಿಣಿಯ ವರ್ಗ

ರಾಜಧಾನಿಯಲ್ಲಿರುವ ಶ್ರೀ ಚೆಲುವಾಂಬಾ ... ಆಸ್ಪತ್ರೆಯಲ್ಲಿ ಸರ್ಜನ್ ಆಗಿರುವ ಶ್ರೀಮತಿ ಎ. ಗೌರಮ್ಮನವರನ್ನು ಚನ್ನಪಟ್ಟಣದ ಹೆರಿಗೆ ಆಸ್ಪತ್ರೆಗೆ ವರ್ಗಾಯಿಸಲಾಗಿದೆ. ಅಲ್ಲಿದ್ದ ಡಾ|| ಎಲ್. ಮನೋಹರಾ ... ಗೆ ವರ್ಗಾಯಿಸಲಾಗಿರುತ್ತಾರೆ

ಅಮೇರಿಕದಲ್ಲಿ ಇನ್ನೂ ಪ್ರಬಲವಾದ ಜಲಜನಕ ಬಾಂಬ್

ಪ್ರಯೋಗಾರ್ಥವಾಗಿ ಉಪಯೋಗಿಸಲಾದ ಜಲಜನಕ ಬಾಂಬಿಗಿಂತಲೂ ಬಹು ಪ್ರಬಲವಾದ ಬಾಂಬು ಅಮೇರಿಕದಲ್ಲಿರಬಹುದೆಂದು ಅಮೆರಿಕದ ಅಣುಶಕ್ತಿ ಸಮಿತಿಯ ಅಧ್ಯಕ್ಷ ಸ್ಟ್ರಾಂಗ್ ಕೋಲ್ ರವರು ಹೇಳಿದ್ದಾರೆ ೨ ವರ್ಷಗಳ ಹಿಂದೆ ಪರೀಕ್ಷಿಸಲ್ಪಟ್ಟ ಬಾಂಬು ನೆಲವನ್ನು ೧ ಮೈಲಿ ಅಗಲ ಮತ್ತು ೧೭೫ ಅಡಿ ಆಳವಾಗಿ ಕೊರೆದಿತ್ತು

ಪಾದ್ರಿಗಳು ಮತಾಂತರದಲ್ಲಿ ತೊಡಗಬಾರದೆಂದು ಸೂಚನೆ

ಕ್ರೈಸ್ತ ಪಾದ್ರಿಗಳು ತಮ್ಮ ಮತ ಪ್ರಚಾರ ಮಾಡಲು ಅವರಿಗೆ ಪೂರ್ಣ ಸ್ವಾತಂತ್ರ್ಯವಿರುವುದೆಂದೂ, ಆದರೆ ಅವರು ಆ ಕೆಲಸ ಮಾಡುವಾಗಲಾಗಲಿ, ಇತರ ಸಾಮಾಜಿಕ ಸೇವಾ ಕಾರ್ಯದಲ್ಲಿ ತೊಡಗಿದಾಗಲಾಗಲಿ ಜನರನ್ನು ಮತಾಂತರಗೊಳಿಸುವ ಆಸೆಯಿಂದ ತೊಡಗಬಾರದೆಂದೂ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ

೧೦ ಮಕ್ಕಳ ತಾಯಿಗೆ ಏಕ ಕಾಲದಲ್ಲಿ ೩ ಮಕ್ಕಳ ಜನನ

ಬಳ್ಳಾರಿ ಜಿಲ್ಲೆಯ ಚೇಳ್ಳಗುರಿಕೆ ಎಂಬ ಗ್ರಾಮದ ವಡ್ಡರ ಯಲ್ಲಪ್ಪ ಎಂಬುವರ ಪತ್ನಿ ಬಿಡರವ್ವ ಎಂಬ ಹತ್ತು ಮಕ್ಕಳ ತಾಯಿಯು ... ತ್ತೀಚೆಗೆ ಏಕ ಕಾಲದಲ್ಲಿ ಮೂರು ಮಕ್ಕಳನ್ನು ಪ್ರಸವಿಸಿದ ಸುದ್ದಿಯು ವರದಿಯಾಗಿದೆ ಮೊದಲು ಒಂದು ಗಂಡು ಹುಟ್ಟಿ ಆರು ಗಂಟೆಗಳ ನಂತರ ಎರಡು ಹೆಣ್ಣು ಮಕ್ಕಳು ಜನಿಸಿದುವೆಂದು ಗೊತ್ತಾಗಿದೆ ಮಕ್ಕಳೂ ಮತ್ತು ತಾಯಿಯೂ ಸೌಖ್ಯದಿಂದಿರುವರು

ಭದ್ರಾಚಲದ ಬಳಿ ದೋಣಿ ಅಪಘಾತದಿಂದ ೨೫ ಮರಣ

ಭದ್ರಾಚಲ ಮತ್ತು ಗೊಮ್ಮೂರುಗಳ ನಡುವೆ ಗೋದಾವರಿ ನದಿಯಲ್ಲಿ ಪ್ರಯಾಣ ಮಾಡುತ್ತಿದ್ದ ದೋಣಿಯೊಂದು ತಲೆಕೆಳಗಾಗಿ ಅದರಲ್ಲಿದ್ದವರ ಪೈಕಿ ೨೫ ಜನರು ಮುಳುಗಿಹೋಗಿರುತ್ತಾರೆ ಹಲವರು ಈಜಿ ದಡ ಸೇರಿರುವರು ಕೆಲವು ಸ್ತ್ರೀಯರನ್ನು ಅ ಬೆಸ್ತರು ರಕ್ಷಿಸಿರುತ್ತಾರೆ

ವಿಮಾನ ಕಾರ್ಖಾನೆಯ ಸ್ಥಾಪಕರ ಸೇವಾ ಪ್ರಶಂಸೆ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಸಂಸ್ಥಾಪಕರ ದಿನಾಚರಣೆಯು ಮೊನ್ನೆ ನೆರವೇರಿತು ಶ್ರೀ ಮಹಾರಾಜರು ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡಿ, ಕಾರ್ಖಾನೆಯ ಸ್ಥಾಪಕರಾದ ವಾಲ್‌ಚಂದ್ ಹೀರಾಚಂದ್‌ರವರ ಗುಣಗಾನ ಮಾಡಿದರು ಈ ಕಾರ್ಖಾನೆಯಲ್ಲಿ ವಿಮಾನಗಳ ರಿಪೇರಿ ಕಾರ್ಯದ ಜೊತೆಗೆ ನಿರ್ಮಾಣ ಕೆಲಸವು ಸಾಧ್ಯವಾಗುತ್ತಿರುವುದಕ್ಕಾಗಿ ಅವರು ಮೆಚ್ಚಿಗೆ ಸೂಚಿಸಿದರು ವ್ಯಾಂಪೈರ್ ಜೆಟ್ ವಿಮಾನಗಳು, ರೈಲ್ವೆ ಗಾಡಿಗಳು ಮತ್ತು ಬಸ್ಸುಗಳ ನಿರ್ಮಾಣವಾಗುತ್ತಿರುವುದಕ್ಕಾಗಿಯೂ ಅವರು ಸಂತೋಷಪಟ್ಟರು

ಬೆಂಕಿಯಿಂದ ಜೋಳದ ಮೆಳೆಯ ನಾಶ

ರಾಜಧಾನಿಯ ಶಿಲ್ಲೆ ಮೊಹಲ್ಲಾ ಶ್ರೀ ... ಪ್ಪಾ ಬೀದಿಯಲ್ಲಿ ನೆನ್ನೆ ಒಬ್ಬರ ಮನೆಗೆ ಬೆಂಕಿ ಬಿದ್ದು, ಜೋಳದ ಕಡ್ಡಿ ರಾಶಿಯು ಸುಟ್ಟುಹೋಯಿತು ಸುಮಾರು ೫೦ ರೂ.ಗಳ ನಷ್ಟವಾಗಿದೆ

ರಾ ಜ ಕ ಮ ಲ್,

ಮೈ ಸೂ ರು

18-2-54 ರಿಂದ ಅಶೋಕ 6ನೇ ವಾರ

ವಿಜಯಾರವರ ಮಹತ್ವಾದ ತಮಿಳು ಚಿತ್ರ

ಚಂ ದ್ರ ಹಾ ರ

ಪಾತ್ರ — ಎನ್ ಟಿ ರಾಮರಾವ್, ಶ್ರೀರಂಜಿನಿ, ಸಾವಿತ್ರಿ, ರಂಗರಾವ್ ಮುಂತಾದವರು

Edited, Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ. 792 || ವಂದೇ ಮಾತರಂ || ಬಿಡಿಪ್ರತಿ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ **ಸಾಧ್ವಿ ದಿನ ಪತ್ರಿಕೆಗೆ** ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

SADHVI . LEADING NATIONALIST DAILY OF MYSORE

ಸಂಪುಟ ೧೨] MYSORE · MONDAY 22-2-1954 : ಮೈಸೂರು : ಸೋಮವಾರ ೨೨-೨-೧೯೫೪ [ಸಂಚಿಕೆ ೦೯೩

ಬಂಗಾಳಾ ಉಪಾಧ್ಯಾಯರ ಮುಷ್ಕರದ ಮುಕ್ತಾಯ

ಪಶ್ಚಿಮ ಬಂಗಾಳದ ಉಪಾಧ್ಯಾಯರ ಮುಷ್ಕರ ಮುಕ್ತಾಯ

ಕಳೆದ ೧೨ ದಿವಸಗಳಿಂದ ನಡೆಯುತ್ತಿದ್ದ ಪಶ್ಚಿಮ ಬಂಗಾಳದ ಉಪಾಧ್ಯಾಯರುಗಳ ಮುಷ್ಕರವು ಇಂದು ಮುಕ್ತಾಯಗೊಳ್ಳುವುದೆಂದು ತಿಳಿದುಬಂದಿದೆ. ಉಪಾಧ್ಯಾಯರ ಸಂಘದ ಪ್ರತಿನಿಧಿಗಳಿಗೂ ಮತ್ತು ಮುಖ್ಯ ಮಂತ್ರಿ ಬಿ. ಸಿ. ರಾಯರಿಗೂ ನಡೆದ ಸಂಧಾನದ ಪರಿಣಾಮವಾಗಿ ಈ ನಿರ್ಧಾರಕ್ಕೆ ಬರಲಾಗಿದೆ. ಮುಂದಿನ ದೇಶದ ಹೊರೆಯನ್ನು ಹೊರಲಿರುವ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ಕೊಡುವ ಕಾರ್ಯದಲ್ಲಿ ಅಧ್ಯಾಪಕರುಗಳು ನಿರತರಾಗಬೇಕೆಂದೂ, ಮುಷ್ಕರ ಮುಂತಾದ ಕೃತ್ಯಗಳಲ್ಲಿ ತೊಡಗಬಾರದೆಂದೂ ಮುಖ್ಯ ಮಂತ್ರಿಗಳು ತಿಳಿಸಿ, ಗಲಭೆಗಳಲ್ಲಿ ಬಂಧಿಸಲ್ಪಟ್ಟಿರುವ ಉಪಾಧ್ಯಾಯರುಗಳೆಲ್ಲರನ್ನೂ ಬಿಡುಗಡೆ ಮಾಡಿ, ಅವರುಗಳ ಮೇಲೆ ಹೂಡಲಾಗಿರುವ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರೆಂದು ಗೊತ್ತಾಗಿದೆ. ಕಲ್ಕತ್ತದಲ್ಲಿ ಈಗ ಪರಿಸ್ಥಿತಿಯು ಶಾಂತವಾಗಿದೆ.

ಪಾಕಿಸ್ತಾನ ಟರ್ಕಿಗಳ ರಕ್ಷಣಾ ವಲಯಗಳ ಸ್ಥಾಪನೆ

ಪಾಕಿಸ್ತಾನ ಮತ್ತು ಟರ್ಕಿಗಳ ನಡುವೆ ಆಗಿರುವ ರಾಜಕೀಯ ಮತ್ತು ಆರ್ಥಿಕ ಒಪ್ಪಂದದ ಪರಿಣಾಮವಾಗಿ ಹಲವು ವಲಯಗಳನ್ನು ನಿರ್ಮಿಸಿ ಅಲ್ಲಿ ರಕ್ಷಣಾ ಕೇಂದ್ರಗಳನ್ನು ಸ್ಥಾಪಿಸುವ ಸಂಭವವಿರುವುದಾಗಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಾಖಾನರು ತಿಳಿಸಿರುವರು. ಮಿಲಿಟರಿ ಸಹಾಯಕ್ಕಾಗಿ ಪಾಕಿಸ್ತಾನವು ಅಮೆರಿಕಕ್ಕೆ ಇನ್ನೂ ಮನವಿಯನ್ನು ಸಲ್ಲಿಸಿಲ್ಲವೆಂದೂ ಅವರು ನುಡಿದರು

ಕೊರಿಯದಿಂದ ಭಾರತ ಸೇನೆಯ ವಾಪಸು

ಕೊರಿಯಾ ಯುದ್ಧ ಖೈದಿಗಳ ರಕ್ಷಣೆಯ ಕಾರ್ಯಕ್ಕಾಗಿ ಅಲ್ಲಿಗೆ ತೆರಳಿದ್ದ ಭಾರತ ಸೇನೆಯ ಪ್ರಥಮ ತಂಡದವರು ನೆನ್ನೆ ಮದ್ರಾಸಿಗೆ ಆಗಮಿಸಿದರು. ಮದ್ರಾಸು ಬಂದರಿನಲ್ಲಿ ಅಲ್ಲಿನ ಗೌರ್ನರ್ ಶ್ರೀ ಶ್ರೀಪ್ರಕಾಶ್, ಸೈನ್ಯಾಧಿಕಾರಿಗಳು ಮತ್ತು ಇತರ ಪ್ರಮುಖರುಗಳು ಅವರನ್ನು ಸ್ವಾಗತಿಸಿದರು.

ಬೊಂಬಾಯಿನ ಅತ್ಯಂತ ವೃದ್ಧ ದಂಪತಿಗಳು

ಬೊಂಬಾಯಿ ಪ್ರಾಂತ್ಯದ ಸತಾರಾ ಜಿಲ್ಲೆಯ ವಾಥೋಲಿ ಎಂಬಲ್ಲಿ ಶ್ರೀ ರಾಮರಾವ್ ಗಣಪತಿರಾವ್ ಭೋಯಿಟೆ ಎಂಬ ೧೧೯ ವರ್ಷ ವಯಸ್ಸಿನ ವೃದ್ಧರು ತಮ್ಮ ೯೯ ವರ್ಷ ವಯಸ್ಸಿನ ಪತ್ನಿಯೊಡನೆ ಆರೋಗ್ಯ ದೃಢಕಾಯರಾಗಿ ಇನ್ನೂ ಜೀವಿಸಿರುವರು. ಅವರ ಕಣ್ಣು, ಕೈಕಾಲುಗಳೂ ಮತ್ತು ಹಲ್ಲೂ ಚೆನ್ನಾಗಿರುವುವೆಂದೂ, ಪ್ರತಿದಿನ ಅವರು ಹೊಲಕ್ಕೆ ಹೋಗಿ ಸಾಗುವಳಿ ಕಾರ್ಯದಲ್ಲಿ ಇತರರಿಗೆ ನೆರವು ನೀಡುವರೆಂದೂ ಹೇಳಲಾಗಿದೆ. ಹಸಿಯ ತರಕಾರಿ ಮತ್ತು ಹಣ್ಣುಗಳನ್ನು ಅವರು ಪ್ರತಿದಿನ ಸೇವಿಸುವರೆಂದು ಗೊತ್ತಾಗಿದೆ. ಶ್ರೀ ಗಣಪತಿರಾವ್ ಭೋಯಿಟೆಯವರು ಇಡೀ ಭಾರತದಲ್ಲೇ ಅತ್ಯಂತ ವೃದ್ಧರೆಂದೂ ಹೇಳಲಾಗುತ್ತಿದೆ

ಅಗರ್ತಲಾ ಪ್ರದರ್ಶನಕಾರರ ಮೇಲೆ ಲಾಠಿ ಮತ್ತು ಅಶ್ರುವಾಯು

ಪಶ್ಚಿಮ ಬಂಗಾಳದ ಬಳಿ ಇರುವ ತ್ರಿಪುರಾ ಸಂಸ್ಥಾನದ ಅಗರ್ತಲಾ ಎಂಬಲ್ಲಿ ಜನರು ಕಲ್ಕತ್ತಾ ಉಪಾಧ್ಯಾಯರ ಮುಷ್ಕರದ ಬಗ್ಗೆ ಬೆಂಬಲ ನೀಡಿ ಸ್ಥಳೀಯ ಶಾಲೆಯೊಂದರ ಬಳಿ ಮೊನ್ನೆ ಪಿಕೆಟಿಂಗ್ ನಡೆಸುತ್ತಿದ್ದಾಗ ಪೊಲೀಸರಿಗೂ, ಅವರಿಗೂ ಘರ್ಷಣೆಯಾಗಿ, ೮ ಮಂದಿ ಪೊಲೀಸರೂ ಸೇರಿ ೪೦ ಜನರು ಗಾಯಗೊಂಡರೆಂದು ವರದಿಯಾಗಿದೆ. ಪೊಲೀಸರು ಲಾಠಿ ಮತ್ತು ಅಶ್ರುವಾಯುಗಳನ್ನು ಪ್ರಯೋಗಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ೨೦ ಜನರನ್ನು ಬಂಧಿಸಲಾಗಿದೆ

ಬೊಂಬಾಯಿಯಲ್ಲಿ ಮೈಸೂರಿನ ಮಹಾರಾಣಿಯವರು

ಮೈಸೂರಿನ ಶ್ರೀಮನ್ಮಹಾರಾಣಿಯವರು ರಾಜಕುಮಾರರು ಮತ್ತು ಕುಮಾರಿಯವರೊಡನೆ ಮೊನ್ನೆ ಬೊಂಬಾಯಿಯನ್ನು ತಲಪಿದರು. ಶ್ರೀಮನ್ಮಹಾರಾಜರು ಈ ದಿನ ಬೊಂಬಾಯಿಯನ್ನು ತಲಪುವರು

ನೃತ್ಯ ಕೂಟದಲ್ಲಿ ಬಾಂಬಿನ ಆಸ್ಫೋಟನೆಯಿಂದ ೩ ಮರಣ

ನ್ಯೂರೆಂಬರ್ಗ್‌ನಲ್ಲಿ ನೃತ್ಯಕೂಟವೊಂದು ನಡೆಯುತ್ತಿದ್ದಾಗ ಯಾರೋ ಬಾಂಬೊಂದನ್ನು ಎಸೆದು, ಅದರ ಆಸ್ಫೋಟನೆಯ ಪರಿಣಾಮವಾಗಿ ೩ ಜನರ ಮರಣ ೩೦ ಜನಗಳಿಗೆ ಗಾಯಗಳಾಗಿವೆಯೆಂದು ವರದಿಯಾಗಿದೆ. ನೃತ್ಯ ಭವನದ ಒಳಗಡೆ ಇಬ್ಬರು ಮಹಿಳೆಯರು ಸತ್ತುಬಿದ್ದಿದ್ದರೆಂದೂ, ಹೊರಗೆ ಬಿದ್ದಿದ್ದವನ ಶವವು ಬಾಂಬೆಸೆದವನದಾಗಿರಬಹುದೆಂದೂ ಹೇಳಲಾಗಿದೆ

೬೦೦ ಜನರನ್ನು ಗಲ್ಲಿಗೆ ಹಾಕಿದ ಅಧಿಕಾರಿ

ಇಂಗ್ಲೆಂಡಿನ ಗಲ್ಲಿಗೇರಿಸುವ ಅಧಿಕಾರಿ ಆಲ್ಬರ್ಟ್ ಪೀರ್‌ಪಾಯಿಂಟ್ ಎಂಬಾತನು ತನ್ನ ೪೯ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿವೃತ್ತನಾಗಿ ೧೯೩೨ರಲ್ಲಿ ಕೆಲಸದಿಂದ ನಿವೃತ್ತನಾಗುವವರೆಗೆ ಈತನು ೬೦೦ ಜನರನ್ನು ಗಲ್ಲಿಗೆ ಹಾಕಿದ್ದನೆಂದು ಗೊತ್ತಾಗಿದೆ

೨½ ಲಕ್ಷ ಪೌಂಡುಗಳಿಗೆ ಕುದುರೆಯ ವಿಮೆ

ಚಲಚ್ಚಿತ್ರ ನಟ ರಾಯ್ ರೋಜರ್ಸ್‌ರವರ ಟ್ರಿಗ್ಗರ್ ಎಂಬ ಕುದುರೆಯನ್ನು ಅಮೆರಿಕದಿಂದ ಲಂಡನ್ನಿಗೆ ಕರೆದೊಯ್ದಾಗ ಅದನ್ನು ೨½ ಲಕ್ಷ ಪೌಂಡುಗಳಿಗೆ ವಿಮೆ ಮಾಡಲಾಗಿತ್ತೆಂದು ವರದಿಯಾಗಿದೆ

ಹಲ್ಲು ನೋವು ಸಹಿಸಲಾರದೆ ಆತ್ಮಹತ್ಯೆ ಪ್ರಯತ್ನ

ಸಿಂಹಳದ ಗಂಪಾಹಾಲು ಎಂಬ ೬೦ ವರ್ಷದವನೊಬ್ಬನು ಹಲ್ಲು ನೋವನ್ನು ಸಹಿಸಲಾರದೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲೆತ್ನಿಸಿದನೆಂದು ವರದಿಯಾಗಿದೆ. ಮುಂದೆ ಒಳ್ಳೆಯ ನಡತೆಯಿಂದಿರುವಂತೆ ಆತನಿಂದ ೧೦೦ ರೂ. ಗಳ ಮುಚ್ಚಳಿಕೆಯನ್ನು ನ್ಯಾಯಾಧೀಶರ ಪಡೆದಿರುತ್ತಾರೆ

ರಾಜ್ಯ ಪರಿಷತ್ ಚುನಾವಣೆಗೆ ರೆಡ್ಡಿ ಮತ್ತು ದಾಸಪ್ಪನವರು

ಕೇಂದ್ರದ ರಾಜ್ಯ ಪರಿಷತ್ತಿನಲ್ಲಿ ಇದೇ ಏಪ್ರಿಲ್‌ನಲ್ಲಿ ಖಾಲಿಯಾಗುವ ೩ ಸ್ಥಾನಗಳಿಗೆ ಮೈಸೂರಿನಿಂದ ಶ್ರೀಗಳಾದ ಕೆ. ಸಿ. ರೆಡ್ಡಿ ಮತ್ತು ಹೆಚ್. ಸಿ. ದಾಸಪ್ಪನವರುಗಳನ್ನು ಉಮೇದುವಾರರಾಗಿ ನಿಲ್ಲಿಸಲು ಭಾರತ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿಯು ಒಪ್ಪಿಗೆಯನ್ನು ಇತ್ತಿದೆ

ಚಿನ್ನದ ಗಣಿ ಪ್ರದೇಶದಲ್ಲಿ ಕಮ್ಯೂನಿಸ್ಟ್ ವಿರೋಧ ರಂಗ

ಕೋಲಾರದ ಚಿನ್ನದ ಗಣಿ ಪ್ರದೇಶದ ವಿವಿಧ ಗಣಿಗಳ ಕಾರ್ಮಿಕ ಸಂಘಗಳ ಹಾಗೂ ಜಿಂಡ್ ಪವರ್ ಕೆಲಸಗಾರರ ಸಂಘ, ನಮ್ಮ ವರ್ಗದ ಪರಿಷತ್ತು, ಸಮಾಜವಾದಿ ಪಕ್ಷ ಮತ್ತು ದ್ರಾವಿಡ ಮುನ್ನೇತ್ರ ಸಂಘದ ಪ್ರತಿನಿಧಿಗಳ ಸಭೆಯು ಕಳೆದ ೧೨ನೇ ತಾರೀಖು ಸೇರಿ ಕಮ್ಯೂನಿಸ್ಟ್ ಪಕ್ಷದ ವಿರುದ್ಧವಾಗಿ ಸಂಯುಕ್ತ ರಂಗವೊಂದನ್ನು ರಚಿಸಲು ತೀರ್ಮಾನವಾಯಿತು

ಆಂಧ್ರದ ಜಮೀನಿಲ್ಲದ ಪ್ರತಿ ರೈತ ಸಂಸಾರಕ್ಕೆ ೫ ಎಕರೆ

ಆಂಧ್ರ ಪ್ರಾಂತದಲ್ಲಿ ಜಮೀನನ್ನು ಹೊಂದದೇ ಇರುವ ೩ ಲಕ್ಷ ರೈತರಿಗೆ, ಸಂಸಾರವೊಂದಕ್ಕೆ ೫ ಎಕರೆಯಂತೆ ೧೫ ಲಕ್ಷ ಎಕರೆ ಬಂಜರು ಭೂಮಿಯನ್ನು ಹಂಚಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುವರು

ಕಾಸಿಂ ರಜ್ವಿಯ ಉಪವಾಸ ಮುಕ್ತಾಯ

ಕಳೆದ ೧೮ನೇ ತಾರೀಖಿನಿಂದ ಹೈದರಾಬಾದು ಜೈಲಿನಲ್ಲಿ ಉಪವಾಸ ಮಾಡುತ್ತಿದ್ದ ರಜಾಕರ ನಾಯಕ ಕಾಸಿಂ ರಜ್ವಿಯವರು ನೆನ್ನೆ ಉಪವಾಸವನ್ನು ಮುಕ್ತಾಯ ಮಾಡಿ ನಿಂಬೆ ಹಣ್ಣಿನ ರಸ ಮತ್ತು ಆಹಾರವನ್ನು ಸೇವಿಸಿದರೆಂದು ವರದಿಯಾಗಿದೆ

ಆಂಧ್ರದಲ್ಲಿ ಪಾನ ನಿರೋಧದ ರದ್ದಿಗೆ ಸಲಹೆ

ಆಂಧ್ರ ಪ್ರಾಂತದಲ್ಲಿ ಪಾನನಿರೋಧ ಕ್ರಮವು ಯಶಸ್ವಿಯಾಗಿ ಕೆಲಸ ಮಾಡಿಲ್ಲವೆಂದೂ, ಅದನ್ನು ರದ್ದು ಮಾಡಬೇಕೆಂದೂ ಪಾನನಿರೋಧ ನೀತಿಯ ವಿಮರ್ಶೆಗಾಗಿ ಅಲ್ಲಿನ ಸರ್ಕಾರದಿಂದ ನೇಮಕವಾಗಿದ್ದ ರಾಮಮೂರ್ತಿಯವರ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿದೆ

ಹೆಂಗಸಿಗೆ ಪ್ರಜ್ಞೆ ತಪ್ಪಿಸಿ ತಾಳಿ ಮತ್ತು ಗುಂಡುಗಳ ಅಪಹಾರ

ತುಮಕೂರು ಬಳಿ ಕ್ಯಾತ್ಸಂದ್ರದ ಸಿದ್ದಮ್ಮ ಎಂಬುವಳು ಊರಿಗೆ ೩ ಮೈಲಿ ದೂರವಿರುವ ರಾಮದೇವರ ಗುಡ್ಡದ ಹತ್ತಿರ ಹೋಗಿದ್ದಾಗ ಹಿಂದೂಪುರದ ಗಂಗ ಎಂಬುವನು ಆಕೆಯ ತಲೆಗೆ ಮಚ್ಚು ಕಲ್ಲಿನಿಂದ ಹೊಡೆದು ಪ್ರಜ್ಞೆ ತಪ್ಪಿಸಿ ಆಕೆಯ ಕತ್ತಿನಲ್ಲಿದ್ದ ತಾಳಿ ಮತ್ತು ಗುಂಡುಗಳನ್ನು ಅಪಹರಿಸಿದನೆಂದೂ, ಹತ್ತಿರದಲ್ಲಿದ್ದ ಹುಡುಗರು ಕ್ಯಾತ್ಸಂದ್ರದವರಿಗೆ ಕೊಟ್ಟ ವರ್ತಮಾನದ ಮೇಲೆ ಊರಿನವರು ಬಂದು ಗಂಗನನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದರೆಂದೂ ವರದಿಯಾಗಿದೆ.

ಕಳ್ಳತನದಲ್ಲಿ ಸಾಗುತ್ತಿದ್ದ ಸಾರಾಯಿ ಪತ್ತೆ

ಸ್ವಂ ವ] ಚಾಮರಾಜನಗರ ೨೦

ಗುಂಡ್ಲುಪೇಟೆ ಕಡೆಯಿಂದ ಮಲಬಾರಿಗೆ ಮದರಾಸಿನ ಒಂದು ಮೋಟಾರು ಕಾರಿನಲ್ಲಿ ಅಕ್ರಮವಾಗಿ ಸಾಗುತ್ತಿದ್ದ ಹತ್ತು ಟಿನ್ನು ಸಾರಾಯಿ ಮತ್ತು ೪೦ ಸೀಸೆ ಬ್ರಾಂದಿಯನ್ನು ಪೊಲೀಸ್ ಕಾನ್‌ಸ್ಟೇಬಲ್ಲುಗಳಾದ ಶ್ರೀಗಳು ಮಹದೇವಯ್ಯ ಮತ್ತು ಸುಬ್ಬಯ್ಯ ಎಂಬುವರು ಗಡಿ ಪ್ರದೇಶದಲ್ಲಿ ಪತ್ತೆ ಹಚ್ಚಿ, ಕಾರಿನಲ್ಲಿದ್ದ ಐದು ಜನರ ಪೈಕಿ ಐವರನ್ನು ಗುಂಡ್ಲುಪೇಟೆಗೆ ಮಾಲು ಸಮೇತ ಕರೆದುಕೊಂಡುಹೋಗಿ ತನಿಖೆ ಬಗ್ಗೆ ಪೊಲೀಸ್ ಸ್ಟೇಷನ್ನಿಗೆ ಒಪ್ಪಿಸಿದರೆಂದು ಗೊತ್ತಾಗಿದೆ. ಕಾರಿನಲ್ಲಿದ್ದ ಇನ್ನಿಬ್ಬರು ಪರಾರಿಯಾಗಿರುವರೆಂದು ತಿಳಿದುಬಂದಿದೆ

ಆಸ್ಟ್ರೇಲಿಯದ ನಗರದ ಮುಕ್ತ ಪ್ರವಾಹ

ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸಿನ ರಿಚ್‌ಮಂಡ್ ನದಿಯಲ್ಲಿ ವಿಪರೀತ ಪ್ರವಾಹ ಬಂದು ಲಿಸ್ಮೋರ್ ಎಂಬ ನಗರವು ಪೂರ್ಣವಾಗಿ ಮುಕ್ತವಾಗಿಯಲ್ಪಟ್ಟಿದೆಯೆಂದು ವರದಿಯಾಗಿದೆ. ಅಲ್ಲಿನ ನಿರಾಶ್ರಿತರಿಗೆ ಪರಿಹಾರ ನೀಡಲು ಹೋದ ದೋಣಿಯೊಂದು ಮುಳುಗಿಹೋಯಿತೆಂದು ಗೊತ್ತಾಗಿದೆ

ಪೊಲೀಸರೊಡನೆ ಡಕಾಯಿತರ ಕದನದಲ್ಲಿ ಇಬ್ಬರ ಮರಣ

ರಾಜಸ್ಥಾನದಲ್ಲಿ ಅನೇಕ ಡಕಾಯಿತಿಗಳನ್ನು ನಡೆಸಿ ಪೊಲೀಸರಿಗೆ ಸಿಕ್ಕದೇ ಇದ್ದ ಇಬ್ಬರು ದರೋಡೆಕಾರರು ನೆನ್ನೆ ಕಲ್ಕತ್ತಾ ಬಳಿ ಹೌರಾ ಜಿಲ್ಲಾದಲ್ಲಿ ಬಂದಿಳಿದಾಗ ಅವರ ದಸ್ತಗಿರಿಗಾಗಿ ಪೊಲೀಸರು ಹೋಗಲು ಅವರುಗಳು ಸುಮಾರು ೧೫ ನಿಮಿಷಗಳಕಾಲ ಪಿಸ್ತೂಲು ಮತ್ತು ಸ್ಟೆನ್ ಗನ್ನುಗಳನ್ನು ಉಪಯೋಗಿಸಿ ಕದನ ನಡೆಸಿದರೆಂದು ತಿಳಿದುಬಂದಿದೆ. ಗುಂಡಿನ ಸುರಿಮಳೆಗೆ ಸಿಕ್ಕಿ ಇಬ್ಬರು ವೃದ್ಧ ಮಹಿಳಾ ಪ್ರಯಾಣಿಕರು ಮೃತರಾದಲ್ಲದೆ ಇಬ್ಬರು ಪೊಲೀಸರಿಗೆ ಗಾಯಗಳಾದುವೆಂದು ವರದಿಯಾಗಿದೆ. ಒಬ್ಬನು ಪೊಲೀಸರ ವಶವಾದ ಮೇಲೆ ಮತ್ತೊಬ್ಬನು ಏಕಾಂಗಿಯಾಗಿ ಹೋರಾಡಿ ನಂತರ ಹೂಗ್ಲಿನದಿಗೆ ಬಿದ್ದು ಪೊಲೀಸರ ವಶನಾದನೆಂದು ಗೊತ್ತಾಗಿದೆ

ಚನ್ನಪಟ್ಟಣದಲ್ಲಿ ಸಂಸ್ಥಾನದ ಪ್ರಜಾ ಸಮಾಜವಾದಿ ಸಮ್ಮೇಳನ

ಸಂಸ್ಥಾನದ ಪ್ರಜಾ ಸಮಾಜವಾದಿಗಳ ಸಮ್ಮೇಳನವು ಬರುವ ತಿಂಗಳು ೬ ಮತ್ತು ೭ನೇ ತಾರೀಖುಗಳಲ್ಲಿ ಚನ್ನಪಟ್ಟಣದಲ್ಲಿ ನಡೆಯುವುದು. ಸುಮಾರು ೭೦೦ ಪ್ರತಿನಿಧಿಗಳು ಭಾಗವಹಿಸುವರು. ರಾಜ್ಯ ಪಾರ್ಟಿಯ ಉಪಾಧ್ಯಕ್ಷರಾದ ಶ್ರೀ ಬಿ. ಟಿ. ರಾಮಯ್ಯನವರನ್ನೂ, ಹಿರಿಯ ಶಾಸನ ಸಭೆಗೆ ಶ್ರೀಗಳಾದ ಜಿ. ಸದಾಶಿವರಾವ್, ಕೆ. ವೀರಭದ್ರಪ್ಪ, ಕೆ. ಚಿಕ್ಕಲಿಂಗಯ್ಯ, ಆರ್. ಪಿ. ರೇವಣ್ಣ ಮತ್ತು ಆರ್. ವಿಶ್ವನಾಥ ಸಾಗರ್ ರವರನ್ನೂ ನಿಲ್ಲಿಸಬೇಕೆಂದು ತೀರ್ಮಾನವಾಗಿದೆ

ಭಾರತ ಮತ್ತು [illegible] ಸಂಸ್ಕೃತಿಗಳ ವಿಚಾರ [illegible]

ಪೌರ ಸತ್ಕಾರಕೂಟದಲ್ಲಿ ರಷ್ಯದ ನಾಯಕರ ಸೂಚನೆ

[illegible]

ರಷ್ಯಾ ದೇಶದಿಂದ [illegible] ನಿಯೋಗದವರ ಗೌರವ [illegible] ಸಭೆಗುಳ್ಳಿ ಒಂದು [illegible] ಸಮಾರಂಭ [illegible] ನಿಯೋಗದ [illegible] ಸದಸ್ಯರೂ ಒಂದಿದ್ದರು [illegible] ಗಣ್ಯ ಮಹನೀಯರುಗಳೂ [illegible]

ಉಪಾಹಾರಾನಂತರ [illegible] ಶ್ರೀ ಕೆ ಪುಟ್ಟಸ್ವಾಮಿಯವರ ಭಾಷಣವಾದ ನಿಯೋಗದವರಿಗೆ ನಗರದ [illegible] ತಕ್ಕ [illegible] ಸ್ವಾಗತವನ್ನು ಕೋರಿದರು [illegible] ದ ರಾಜಕೀಯ [illegible] ವಿಷಯ [illegible] ಹಲವು ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯವಿದ್ದ [illegible] ದರೂ ಅದನ್ನು ಭಾರತವು ವಿಶಾಲ ದೃಷ್ಟಿಯಿಂದಲೇ ವೀಕ್ಷಿಸುತ್ತಿದೆಯೆಂದ [illegible] ರು ಒಂದು ರೀತಿಯಲ್ಲಿ ನೋಡಿದರೆ ಮಹಾತ್ಮ ಗಾಂಧಿಯವರೂ ಸಹ [illegible] ಮಹೋನ್ನತರೇ ಆಗಿದ್ದರೆ [illegible] ಸಾತ್ವಿಕ ರಾಜಕೀಯ [illegible] ವಾಗಿ ಇಂದು ಭಾರತದ ಪ್ರಧಾನಿ [illegible] ವನ್ನು ನಡೆಸುತ್ತಿದೆಯೆಂದ [illegible] ಸಹ [illegible] ಸಂಸ್ಕೃತಿ [illegible] ಭಾರತವು [illegible] ಗಳ ಸಂಸ್ಕೃತಿಗಳ [illegible] ಗಳವನ್ನು [illegible] ನಾಗರಿಕತೆಗಳ [illegible] ಮಾಡಿಕೊಳ್ಳಲು [illegible] ತಿಳಿಸಿದರು ಪರಸ್ಪರ [illegible] ದ ಒಂಭತ್ತು ರಾಷ್ಟ್ರಗಳ [illegible] ಅವರು ಹಾರೈಸಿದರು

ನಿಯೋಗದ ನಾಯಕರಾದ [illegible] ದೇಶದ ಸಂಸ್ಕೃತಿ ಪ್ರಚಾರದ [illegible] ದ ಎಂ ಬೆಸ್ಪಲೋವ ರವರು [illegible] ರ ಸಮಾರಂಭಕ್ಕಾಗಿ [illegible] ಧನ್ಯವಾದಗಳನ್ನು ಸಲ್ಲಿಸಿ [illegible] ಅತ್ಯಂತ ಪುರಾತನವೂ ಮತ್ತು [illegible] ಸಂಸ್ಕೃತಿಯನ್ನು ಹೊಂದಿರುವುದೂ [illegible] ಭಾರತ ದೇಶಕ್ಕೆ ತಾವುಗಳು ಬಂದಿದ್ದ [illegible] ಗಿರುವ ಅಪಾರವಾದ ಆನಂದವನ್ನು [illegible] ವ್ಯಕ್ತಪಡಿಸಿದರು ಭಾರತದ ಸಂಸ್ಕೃತಿ ಮತ್ತು ಕಲಾ ಕೌಶಲ್ಯಗಳಿಂದ ತಾವು [illegible] ಗಳು ಬಹಳವಾಗಿರುವುದ [illegible] ರು ತಮ್ಮ ನಿಯೋಗದಿಂದ ಎರಡು ರಾಷ್ಟ್ರಗಳ ಸಂಸ್ಕೃತಿಯ ಪರಸ್ಪರ ಪರಿಚಯವು ಮಾತ್ರವೇ ಅಲ್ಲದೆ ಶರ್ವತ [illegible] ಶ್ಯಾಸಗಳು ಬೆಳೆದು ಜಗತ್ತಿನ ಶಾಂತಿ ಸಾಧನೆಗೆ ಸಹಕಾರಿಯಾಗುವುದೆಂದು ಅವರು ನುಡಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಇಂಡೋಚೀನಾ ಕದನ ವಿರಾಮಕ್ಕಾಗಿ ಭಾರತದ ಮನವಿ

ಕಳೆದ ಎಂಟು ವರ್ಷಗಳಿಂದಲ [illegible] ತ್ತಿರುವ ಇಂಡೋಚೀನ [illegible] ಗಿ ಭಾರತದ ಪ್ರಧಾನಿ ನೆಹರೂರವರ ಶೀಘ್ರದಲ್ಲಿಯೇ [illegible] ದು ವರದಿಯಾಗಿದೆ

ಅಕಾಲಿಕವಾದ ನಾಳಿನ [illegible] ಕ್ರಮ

[illegible]

[illegible] ಭಾಗಗಳನ್ನು [illegible] ಮಧ್ಯ ಭಾಗದಿಂದ [illegible] ಗುಪ್ತದೆಂದು ವರದಿ [illegible]

ಗ್ರಾಮಾಭಿವೃದ್ಧಿ ಯೋಜನೆಯ ವಿಸ್ತರಣೆ

ಬೆಂಗಳೂರು [illegible]

ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲೂ ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲು ಆಯವ್ಯಯ ಪಟ್ಟಿಯಲ್ಲಿ [illegible] ಸೇರಿಸಲಾಗಿರುವುದೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ ಗೃಹ ಮತ್ತು ಚಿಕ್ಕಚಿಕ್ಕ ಕೈಗಾರಿಕೆಗಳನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸಲು ಯೋಜನೆಯು ಸೂಕ್ತ ವಾತಾವರಣವನ್ನು ಕಲ್ಪಿಸುವುದೆಂದು ಅವರು ಅಭಿಪ್ರಾಯಪಟ್ಟಿರುವರ

ಚುನಾವಣೆ ಸಭೆಗಳಲ್ಲಿ ಪ್ರಶ್ನೆ ಮಾಡುವುದಕ್ಕೆ ಪ್ರತಿಬಂಧಕ

ಚುನಾವಣೆಗೆ ಸಂಬಂಧಿಸಿದ ಸಭೆಗಳಲ್ಲಿ ಪ್ರಶ್ನೆ ಮುಂತಾದುವುಗಳ ಮೂಲಕ ಅಡ್ಡಿ ಪಡಿಸುವುದನ್ನು ಪೂರ್ವ ಬಂಗಾಳಾ ಸರ್ಕಾರದವರು ನಿಷೇಧಿಸಿರುತ್ತಾರೆ ಹಾಗೆ ಮಾಡುವವರನ್ನು [illegible] ಮಾಡಲ [illegible] ತಿಂಗಳ [illegible] ಮತ್ತು ೫೦೦ ರೂ ದಂಡವನ್ನೂ ವಿಧಿಸಲಾಗುವುದು

ಕಾಶ್ಮೀರದ ರಾಜರೊಬ್ಬರಿಗೆ ಮಾಸಾಶನ

ಈ ತಿಂಗಳ ೧ನೇ ತಾ॥ ನಿಂದ ಮೂರು ವರ್ಷಗಳ ವರೆಗೆ ಕಾಶ್ಮೀರದ ಪೂಂಚ್ ಪ್ರದೇಶದ ರಾಜ [illegible] ಗೆ ೧,೨೦೦ ರೂ ನಂತೆ ಮಾಸಾಶನ [illegible] ಭಾರತ ಸರ್ಕಾರದವರು ಕೊಡಲಿರುವರು

ವೈದ್ಯರ ಮೇಲೆ ರೋಗಿಯು ಕೈ ಮಾಡಿದ ಪ್ರಸಂಗ

[illegible] ಜನರಲ್ ಆಸ್ಪತ್ರೆಯಲ್ಲಿರುವ ವೈದ್ಯನೊಬ್ಬನ [illegible] ಚಾಕ [illegible] ವೈದ್ಯರನ್ನು ಹೊಡೆದನೆ [illegible] ಅವನ್ನು ತಿತ್ತುಕೊಳ್ಳಲ ವೈದ್ಯರು ಪ್ರಯತ್ನಿಸಿದಾಗ [illegible] ತೆಂದೂ ಹೇಳಲಾಗಿದೆ ಅವನನ್ನೂ ಆಯುಧವನ್ನೂ ಪೋಲೀಸರ ವಶಕ್ಕೊಪ್ಪಿಸಲಾಗಿದೆ ಆಸ್ಪತ್ರೆಯ ಅಧಿಕಾರಿಗಳು ತೋರುತ್ತಿರ [illegible] ಉದಾಸೀನಕ್ಕಾಗಿ ಅವನು ಕೋಪಗೊಂಡು ಜವರನ್ನು ಹೊಡೆದನೆಂದು ಹೇಳಲಾಗಿದೆ ವಿಷಪೂರಿತ ಆಹಾರ ಸೇವನೆಗಾಗಿ ಅವನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು

ಚತುರ್ರಾಷ್ಟ್ರ ಸಭೆ ವಿಫಲಗೊಂಡುದಕ್ಕಾಗಿ ಪ್ರದರ್ಶನ

ಆಸ್ಟ್ರಿಯಾ ರಾಜ್ಯದ [illegible] ಒಪ್ಪಂದವನ್ನು ತಯಾರಿಸುವುದಕ್ಕೆ ಸಾಧ್ಯವಾಗದೆ ಚತುರ್ರಾಷ್ಟ್ರ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ವಿಫಲಗೊಂಡುದಕ್ಕಾಗಿ ವಿಯನ್ನಾ ನಗರದಲ್ಲಿ ಮೊನ್ನೆ [illegible] ಸಾವಿರ ಜನರು ಪ್ರದರ್ಶನ ನಡೆಸಿದರ ಅನೇಕ ಪತ್ರಿಕೆಗಳು ಕಪ್ಪು ಅಂಚುಗಳನ್ನು ಮುದ್ರಿಸಿ ಪ್ರಕಟವಾದುವು

ಆರ್ಯ ಯುವಜನ ಸಂಘದ ಹಿಂದಿ ಶಾಲೆಗಳು

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ಆರ್ಯ ಯುವಜನ ಸಂಘದ ಆಶ್ರಯದಲ್ಲಿ ನಾಲ್ಕು ವರ್ಷಗಳಿಂದಲೂ ಹಿಂದಿ ಶಾಲೆಗಳನ್ನು ನಡೆಸಲಾಗುತ್ತಿದೆ ಪ್ರಾಥಮಿಕ ತರಗತಿ ವಿದ್ಯಾರ್ಥಿಗೆ ಕೇವಲ [illegible] ಮಾಧ್ಯಮಿಕ ವಿದ್ಯಾರ್ಥಿಗೆ [illegible] ಮತ್ತು ಪ್ರೌಢಶಾಲೆ ವಿದ್ಯಾರ್ಥಿಗೆ ೧ ರೂ ನಂತೆ ರುಸುಂ ನಿರ್ಧರಿಸಲಾಗಿದೆ ಹೀಗೆ ವಸೂಲಾಗುವ ಹಣವನ್ನು ಉಪಾಧ್ಯಾಯರಿಗಾಗಲಿ, ಇತರರಿಗಾಗಲಿ ಕೊಡದೆ ಸಂಘದ ಧನೋದ್ದೇಶ ಪ್ರಸಾರ ಮತ್ತು ಪುಸ್ತಕ ಭಂಡಾರಕ್ಕಾಗಿ ವಿನಿಯೋಗಿಸಲಾಗುತ್ತಿದೆ ಪ್ರತಿ ಸಂಜೆಯೂ ೬ ರಿಂದ ೯ರ ವರೆಗೆ ಪಾಠಗಳಾಗುತ್ತಿವೆ ಉಪಾಧ್ಯಾಯರೂ ಸಹ ಚಂದಾ ಕೊಡುತ್ತಿರುವರು ಸಂಘವು ಯಾವುದೇ ರಾಜಕೀಯಕ್ಕಾಗಲಿ ಪ್ರವೇಶಿಸುತ್ತಿಲ್ಲ ಸಾಮಾಜಿಕ ಸೇವೆಯೇ ಅದರ ಗುರಿ ಅದಕ್ಕಾಗಿ ಮಹಾಜನರು ಸಹಾಯ ಮಾಡುವಂತೆ ಕೋರಲಾಗಿದೆ ಈ ಸಂಘದೊಡನೆ ವ್ಯವಹಾರವನ್ನು [illegible] ಆಸ್ಪತ್ರೆ ರಸ್ತೆ, [illegible] ನಂಬರು ಮನೆಯಲ್ಲಿರುವ ಶ್ರೀ ಜಿ ಶಿವರಾಂರವರೊಡನೆ ಬೆಳೆಸಬಹುದು

ಗರ್ಭಿಣಿ ಮತ್ತು ಶಿಶು ರಕ್ಷಣೆ ಬಗ್ಗೆ ಭಾರತದ ಹೊಸ ಯೋಜನೆ

ಭಾರತದ ಆದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಗರ್ಭಿಣಿಯರ ಆಸ್ಪತ್ರೆ ಮತ್ತು ಶಿಶು ಸಂರಕ್ಷಣೆ ಕೇಂದ್ರಗಳ [illegible] ಗಳನ್ನು ತೆರೆಯುವ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ತಯಾರಿಸಿ ಅದಕ್ಕೆ ಸಂಸ್ಥಾನಗಳ ಅಭಿಪ್ರಾಯವನ್ನು ಕೇಳಿರುವರೆಂದು ತಿಳಿದು ಬಂದಿದೆ ಈ ಯೋಜನೆಗಾಗಿ ಕೇಂದ್ರ ಸರ್ಕಾರದವರು ಬರುವ ಎರಡು ವರ್ಷಗಳಲ್ಲಿ ೫೦ ಲಕ್ಷ ರೂಗಳನ್ನು ವೆಚ್ಚ ಮಾಡುವರೆಂದು ಹೇಳಲಾಗಿದೆ ಯೋಜನೆಯ ಪ್ರಕಾರ [illegible] ಸಾವಿರ ಪ್ರಜೆಗಳಿಗೆ ಒಂದರಂತೆ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಕೇಂದ್ರಗಳನ್ನು ತೆರೆದು ಹಳ್ಳಿ ಬಸುರಿ ಬಾಣಂತಿಯರ ಶುಶ್ರೂಷೆ ನಡೆಸುವುದಲ್ಲದೆ ಸಾಧ್ಯವಾದ ಮಟ್ಟಿಗೂ ಬಾಣಂತಿಯರನ್ನು ಕೇಂದ್ರಗಳಲ್ಲೇ ಇಟ್ಟುಕೊಂಡು ಉಪಚರಿಸಲು ಆಲೋಚಿಸಲಾಗಿದೆ

ನಿರಾಶ್ರಿತರಿಗೆ ಚಿಕ್ಕಮಗಳೂರು ಕಾಫಿ ತೋಟ

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಬೆಳಗೋಡು [illegible] ತೋಟವನ್ನು ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರಿಗೆ ಕೊಡಲಾಗುವುದು ಪಾಕಿಸ್ತಾನದಲ್ಲಿ ಆಸ್ತಿಯನ್ನು ಬಿಟ್ಟು ಬಂದಿರುವವರು ಸೂಕ್ತ ರುಜುವಾತು ಕೊಟ್ಟರೆ ತೋಟವನ್ನು ಅವರಿಗೆ ಕೊಡಲಾಗುವುದು ಮಾರ್ಚಿ [illegible] ರೊಳಗೆ ಈ ಬಗ್ಗೆ ಟೆಂಡರನ್ನು ಕರೆಯಲಾಗಿದೆ

ರಷ್ಯಕ್ಕೆ ಭಾರತದ ಸಾಂಸ್ಕೃತಿಕ ನಿಯೋಗ

ಭಾರತದಲ್ಲಿ [illegible] ಚರಿಸುತ್ತಲಿರುವ ರಷ್ಯದ ಕಲಾವಿದರ ನಿಯೋಗದ ನಾಯಕರಾದ ಎ ಬೆಸ್ಪಲೋವ ರವರು ಬೆಂಗಳೂರಿನಲ್ಲಿ ಮಾತನಾಡಿ ತಾವು ಸ್ವದೇಶಕ್ಕೆ ಹಿಂತಿರುಗಿದನಂತರ ಭಾರತ ಮತ್ತು ರಷ್ಯಗಳ ನಡುವೆ ಸಾಂಸ್ಕೃತಿಕ ಸಂಬಂಧವನ್ನು ಬಲಗೊಳಿಸಲು ಭಾರತದ ಸಾಂಸ್ಕೃತಿಕ ನಿಯೋಗವನ್ನು ಕರೆಸುವಂತೆ ತಮ್ಮ ಸರ್ಕಾರಕ್ಕೆ ಅರಿಕೆ ಮಾಡುವುದಾಗಿ ಸೂಚನೆ ಕೊಟ್ಟಿರುತ್ತಾರೆ

ಭಾರತದ ರೈಲ್ವೆ ಸ್ಲೀಪರುಗಳು ಪ್ರವಾಹದಲ್ಲಿ ಪಾಕಿಸ್ತಾನಕ್ಕೆ

ಕಾಶ್ಮೀರದಲ್ಲಿ ಜಮ್ಮುವಿಗೆ ೩೦ ಮೈಲಿ ದೂರದ ಅಖ್ನೂರ್ ಎಂಬಲ್ಲಿ ಚೀನಾಬ್ ನದಿ ದಡದಲ್ಲಿ ಭಾರತ ಸರ್ಕಾರದವರು ಕೂಡಿಸಿಟ್ಟಿದ್ದ ಸುಮಾರು ಎರಡು ಲಕ್ಷ ರೈಲ್ವೆ ಸ್ಲೀಪರುಗಳು ವಿಪರೀತ ಮಳೆಯ ಪರಿಣಾಮವಾಗಿ ನದಿಯಲ್ಲಿ ಪ್ರವಾಹ ಬಂದ, ಕಳೆದ ಶುಕ್ರವಾರ ಪಾಕಿಸ್ತಾನಕ್ಕೆ ಒಯ್ಯಲ್ಪಟ್ಟವೆಂದು ವರದಿಯಾಗಿದೆ [illegible] ವಕ್ಕೆ ಕೆಲವು ದಿನಗಳು ಮುಂಚೆ ಇದೇ ರೀತಿ ಒಂದು ಲಕ್ಷ ಸ್ಲೀಪರುಗಳ ಒಯ್ಯಲ್ಪಟ್ಟಿದ್ದುವೆಂದೂ ಗೊತ್ತಾಗಿದೆ

ಪಶ್ಚಿಮ ಜರ್ಮನಿಗೆ ರಷ್ಯದ ಸೈನ್ಯಾಧಿಕಾರಿಯು ಪರಾರಿ

ಪೂರ್ವ ಜರ್ಮನಿಯಲ್ಲಿದ್ದ ರಷ್ಯದ ಸೈನ್ಯಾಧಿಕಾರಿಯೊಬ್ಬನು ಪಶ್ಚಿಮ ಬರ್ಲಿನ್ನಿಗೆ ತಪ್ಪಿಸಿಕೊಂಡು ಹೋಗಲು ಹವಣಿಸಿ ಆ ಬಗ್ಗೆ ಕೆಲವು ದಿನಗಳಿಂದಲೂ ಒಬ್ಬ ಮಹಿಳೆಯೊಡನೆ ಸಮಾಲೋಚನೆ ನಡೆಸುತ್ತಿದ್ದ ಮೊನ್ನೆ ಆಕೆ ಮತ್ತು [illegible] ನೊಬ್ಬ ಸ್ನೇಹಿತನೊಡನೆ ರೈಲಿನಲ್ಲಿ ಪೂರ್ವ [illegible] ಬರ್ಲಿನ್ನಿನ ಗಡಿ ನಗರವೊಂದರಿಂದ ಪಶ್ಚಿಮ [illegible] ಬರ್ಲಿನ್ನಿಗೆ ಪರಾರಿಯಾದನೆಂದು ವರದಿಯಾಗಿದೆ ಅಲ್ಲಿ ಅವನು ಪಶ್ಚಿಮ ಜರ್ಮನಿ ಸರ್ಕಾರವನ್ನು ರಾಜಕೀಯ ರಕ್ಷಣೆ ಕೊಡಬೇಕೆಂದು ಕೋರಿರುವನೆಂದು ತಿಳಿದುಬಂದಿದೆ

SRI GANESHA
TALKIES
[illegible] —54 For 2 days
[illegible]
WILLIE & JOE
BACK AT THE FRONT
[illegible] Blanchard
NEXT CHANGE —
GUN-SMOKE
(Techn color)

Edited Printed and Published by A R Nagarajan at Sadhvi Press D Subbaiah Road, Mysore

26—2—54 ರಿಂದ : ಅಮೋಘ ಪ್ರಾರಂಭ
ಪ್ರಭಾ ಪಿಕ್ಚರ್ ಹೌಸಿನಲ್ಲಿ
ಪ್ರತಿದಿನ ಮೂರು ಆಟಗಳು
ಮಹಾತ್ಮಾ ಥಿಯೇಟರ್ಸ್‌ರವರ ಜನಪ್ರಿಯ ಪೌರಾಣಿಕ ಕನ್ನಡ ಚಿತ್ರ
• ದೇವಕನ್ನಿಕಾ •
[illegible]
ರಮಾದೇವಿ, ಇಂದಿರಾ, [illegible]
ಕಥೆ, ಸಂಭಾಷಣೆ, ಹಾಡುಗಳು — ಹುಣಸೂರು ಕೃಷ್ಣಮೂರ್ತಿ
ನಿರ್ದೇಶನ — ಬಿ ಆರ್ ರಾವ್
ಸಂಗೀತ — ಜಿ ರಾಮನಾಥನ್
A RAJSHRI RELEASE

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE TUESDAY 23-2-1954 ಮೈಸೂರು : ಮಂಗಳವಾರ ೨೩-೨-೧೯೫೪ [ಸಂಚಿಕೆ ೧೮೪

ಸೂಯೆಜ್ ಪ್ರದೇಶದಲ್ಲಿ ಈಜಿಪ್ಟಿನ ಅಸಹಕಾರ ಚಳುವಳಿ

ಬ್ರಿಟನ್ನಿನ ವಿರುದ್ಧವಾಗಿ ಈಜಿಪ್ಟಿನ ಅಸಹಕಾರ ಚಳುವಳಿ

ಈಜಿಪ್ಟು ಬ್ರಿಟನ್ನಿನ ವಿರುದ್ಧವಾಗಿ ಅಸಹಕಾರ ಚಳುವಳಿಯನ್ನು ಸದ್ಯದಲ್ಲಿಯೇ ಆರಂಭಿಸಲಿದೆಯೆಂದು ಈಜಿಪ್ಟಿನ ಯುದ್ಧ ಖಾತೆಯ ಮಂತ್ರಿ ಅಬ್ದೆಲ್ ಲತೀಫ್ ಬೋಗ್ದಾದಿಯವರು ಹೇಳಿರುವರು. ಈಜಿಪ್ಟಿನ ವಿಮೋಚನೆಯ ಹೋರಾಟದ ಸಿದ್ಧತೆಯ ಅಂಗವಾಗಿ ಅಸಹಕಾರ ಚಳುವಳಿಯನ್ನು ನಡೆಸಲಾಗುವುದೆಂದೂ ಇದರಿಂದ ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟನ್ನಿನ ಪ್ರಾಬಲ್ಯವು ಕಡಿಮೆಯಾಗುವುದೆಂದೂ ಅವರು ಹೇಳಿರುವರು. ತನ್ನ ರಾಷ್ಟ್ರವು ಪೂರ್ಣ ಸ್ವಾತಂತ್ರ್ಯವನ್ನು ಗಳಿಸುವ ವರೆಗೂ ಈಜಿಪ್ಟು ಯಾವ ಸಂಸ್ಥಾನ ಅಥವಾ ಇನ್ಯಾವುದೇ ರಾಷ್ಟ್ರಗಳ ಸಮೂಹಕ್ಕೆ ಸೇರುವುದು ಒಪ್ಪಿಯದಿಲ್ಲವೆಂದೂ ಅವರು ತಿಳಿಸಿರುವರು.

ಪಾಕಿಸ್ತಾನದ ಒಪ್ಪಂದಗಳಿಗೆ ಅರಬ್ಬರ ವಿರೋಧ

ಈಜಿಪ್ಟಿನಲ್ಲಿ ಅಧಿಕ ಪ್ರಚಾರ ಪಡೆದಿರುವ ಮುಖಂಡರ ಪತ್ರಿಕೆ ಅಲ್‌ಗುಮ್‌ಹುರಿಯಾ ಎಂಬುದರ ಅಗ್ರಲೇಖನವೊಂದರಲ್ಲಿ ಪಾಕಿಸ್ತಾನವು ಟರ್ಕಿ ಮತ್ತು ಅಮೆರಿಕದೊಡನೆ ಒಪ್ಪಂದ ಮಾಡಿಕೊಂಡರೆ ಅದಕ್ಕೂ ಅರಬ್ ರಾಷ್ಟ್ರಗಳಿಗೂ ಇರುವ ಸಂಪರ್ಕವು ಕಡಿದು ಹೋಗುವುದೆಂದ ತಿಳಿಸಲಾಗಿದೆ. ಈ ಲೇಖನವನ್ನು ಈಜಿಪ್ಟಿನ ಮಂತ್ರಿ ಸಲೀಂರವರು ಬರೆದಿರುವರೆಂದು ಪ್ರತೀತಿ ಇದೆ. ರಷ್ಯದ ವಿರೋಧವಾಗಿಯೂ, ತನ್ನ ಹಿತರಕ್ಷಣೆಗಾಗಿಯೂ ಪಶ್ಚಿಮ ರಾಷ್ಟ್ರವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರವನ್ನು ಕೊಟ್ಟು ಪಾಕಿಸ್ತಾನವನ್ನು ಆ ರೀತಿ ಉಪಯೋಗಿಸಿಕೊಳ್ಳುವುದೆಂದು ಪತ್ರಿಕೆಯು ಹೇಳುತ್ತದೆ.

ಇಂಡೋಚೀಣದಲ್ಲಿ ಸೀಸ್‌ಫೈರ್‌ಗಾಗಿ ನೆಹರೂರವರ ಮನವಿ

ಇಂಡೋಚೀಣದಲ್ಲಿ ಯುದ್ಧವನ್ನು ನಿಲ್ಲಿಸಿ ಪೂರ್ವಭಾವಿಯಾದ ಸೀಸ್‌ಫೈರ್‌ಅನ್ನು ಜಾರಿಗೆ ತರುವಂತೆ ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ, ಎಲ್ಲಾ ಸರ್ಕಾರಗಳು ಮತ್ತು ಪಕ್ಷಗಳಿಗೂ ಮನವಿ ಮಾಡಿಕೊಂಡರು. ಅಲ್ಲಿಯ ಯುದ್ಧವನ್ನು ಕೊನೆಗಾಣಿಸಲು ಪ್ರಯತ್ನವನ್ನು ನಡೆಸುತ್ತಿರುವಾಗಲೇ ಭಯಂಕರ ಕದನಗಳು ಜರುಗುತ್ತಿರುವುದಕ್ಕಾಗಿ ಅವರು ವ್ಯಥೆಪಟ್ಟು, ಇನ್ನೆರಡು ತಿಂಗಳುಗಳಲ್ಲಿ ಜಿನೀವಾ ನಗರದಲ್ಲಿ ಇಂಡೋಚೀಣದ ಪರಿಸ್ಥಿತಿಯನ್ನು ಕುರಿತು ಜರುಗುವ ಚರ್ಚೆಯ ಪೂರ್ವ ಭಾವಿಯಾಗಿ ಅಲ್ಲಿ ಸೀಸ್‌ಫೈರ್ ಸಹಾ ಆಗಬೇಕೆಂದು ಅವರು ಹೇಳಿದರು. ಈ ಸಂಬಂಧವಾಗಿ ಭಾರತವು ಯಾವ ಜವಾಬ್ದಾರಿಯನ್ನೂ ಹೊರುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದರು.

ಬಂಗಾಳದ ಅಧ್ಯಾಪಕರುಗಳ ಬಿಡುಗಡೆ

ಬಂಗಾಳದಲ್ಲಿ ನಡೆದ ಉಪಾಧ್ಯಾಯರುಗಳ ಮುಷ್ಕರದ ಸಂಬಂಧವಾಗಿ ದಸ್ತಗಿರಿಯಾಗಿದ್ದ ೮೪ ಜನ ಸ್ತ್ರೀಯರೂ ಸೇರಿ ಒಟ್ಟು ೩೨೧ ಜನ ಉಪಾಧ್ಯಾಯರುಗಳನ್ನು ನೆನ್ನೆ ಬಿಡುಗಡೆ ಮಾಡಲಾಯಿತು.

ಏಷ್ಯಾ ರಾಷ್ಟ್ರಗಳ ಸಭೆ ಕರೆಯಲು ನೆಹರೂರಿಗೆ ಚೀಣಾ ಸಲಹೆ

ಈಜಿಪ್ಟಿನಿಂದ ಕೊರಿಯಾದ ನಡುವೆ ಇರುವ ಏಷ್ಯದ ರಾಷ್ಟ್ರಗಳ ಸಮಸ್ಯೆಗಳ ಚರ್ಚೆಗಾಗಿ ಸಮ್ಮೇಳನವೊಂದನ್ನು ಕರೆಯುವಂತೆ ನೆಹರೂರವರಿಗೆ ಚೀಣವು ಸದ್ಯದಲ್ಲೇ ಸೂಚಿಸಲಿದೆಯೆಂದು ವರದಿಯಾಗಿದೆ. ಈ ರಾಷ್ಟ್ರಗಳ ಮೇಲೆ ಪಶ್ಚಿಮ ರಾಷ್ಟ್ರಗಳ ಪ್ರಭಾವದ ವಿರುದ್ಧವಾಗಿ ಏಷ್ಯದ ಮತ್ತು ಮಧ್ಯ ಪೂರ್ವ ರಾಷ್ಟ್ರಗಳನ್ನು ಐಕ್ಯಗೊಳಿಸುವುದೇ ಈ ಸಮ್ಮೇಳನದ ಉದ್ದಿಷ್ಟವೆಂದು ಹೇಳಲಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ಬಳುವಳಿಯಾಗಿ ಜಿಂಕೆ ಮರಿಗಳು

ಅಸ್ಸಾಮಿನ ಗಾರೋ ಪರ್ವತ ಪ್ರದೇಶದ ಇಬ್ಬರು ವೃದ್ಧ ಸ್ತ್ರೀಯರು ರಾಷ್ಟ್ರಾಧ್ಯಕ್ಷರಿಗೆ ಎರಡು ಜಿಂಕೆ ಮರಿಗಳನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಅವುಗಳನ್ನು ಅಧ್ಯಕ್ಷರು ನೋಡಿದಾಗಲೆಲ್ಲಾ ಅಸ್ಸಾಮಿನ ನೆನಪು ಅವರಿಗೆ ಆಗಲೆಂದು ಆ ಹೆಂಗಸರು ಆಶಿಸಿರುವರು.

ಮೈಸೂರು ರೈಲ್ವೆ ಅಪಘಾತಗಳಿಗೆ ಅನುಭವವಿಲ್ಲದ ಡ್ರೈವರು ಕಾರಣ

ಮೈಸೂರು ಸಂಸ್ಥಾನದಲ್ಲಿ ಆಗಾಗ್ಗೆ ಸಂಭವಿಸುತ್ತಿರುವ ರೈಲ್ವೆ ಅಪಘಾತಗಳಿಗೆ ಅನುಭವವಿಲ್ಲದ ಹೊರಗಿನ ಡ್ರೈವರುಗಳೇ ಕಾರಣವೆಂದು ದಕ್ಷಿಣ ರೈಲ್ವೆ ನೌಕರರ ಸಂಘದ ಪ್ರಾದೇಶಿಕ ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ. ಹಿಂದೆ ಮೈಸೂರು ರೈಲ್ವೆಯ ನೌಕರಿಯಲ್ಲಿದ್ದ ಡ್ರೈವರ್‌ಗಳ ಹಕ್ಕುಗಳನ್ನು ನಿರ್ಲಕ್ಷಿಸಿ ಹೊರಗಿನವರನ್ನು ತಂದು ನೇಮಿಸಿರುವ ಬಗ್ಗೆ ಸಮಿತಿಯು ತನ್ನ ತೀವ್ರವಾದ ಖಂಡನೆಯನ್ನು ವ್ಯಕ್ತಪಡಿಸಿರುತ್ತದೆ.

ಸಂಸ್ಥಾನದಲ್ಲೇ ಅತ್ಯಂತ ಭಾರಿಯಾದ ಸ್ಟೇಡಿಯಂ

ಭದ್ರಾವತಿಯಲ್ಲಿ ರಜತ ಮಹೋತ್ಸವದ ಕ್ರೀಡಾಂಗಣವನ್ನು ಕಳೆದ ಶನಿವಾರ ಕಬ್ಬಿಣದ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಎಸ್ ಮುನಿನಂಜಪ್ಪನವರು ಆರಂಭಿಸಿದರು. ಕಬ್ಬಿಣದ ತಯಾರಿಕೆ ಸಂಬಂಧದಲ್ಲಿ ಹೊರಬರುವ ಕೀಟ ಮಣ್ಣಿನಿಂದ ಸ್ಟೇಡಿಯಮ್ಮನ್ನು ನಿರ್ಮಿಸಲಾಗಿರುವುದರಿಂದ, ೩ ಲಕ್ಷ ರೂ ವೆಚ್ಚವಾಗಬೇಕಾದ ಕಟ್ಟಡಕ್ಕೆ ೧೨ ಸಾವಿರ ರೂ ಮಾತ್ರ ಖರ್ಚಾಯಿತೆಂದೂ ವರದಿಯಾಗಿದೆ.

ಲೈಬೀರಿಯಕ್ಕೆ ಮೈಸೂರಿನ ವಯಸ್ಕರ ಶಿಕ್ಷಣ ಪ್ರವೀಣರು

ವಿಶ್ವ ಸಂಸ್ಥೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಮಿತಿಯ ಅಧಿಕಾರಿಯಾಗಿ ಸಿಂಹಳಕ್ಕೆ ತೆರಳಿರುವ ಮೈಸೂರಿನ ವಯಸ್ಕರ ಶಿಕ್ಷಣ ಪ್ರವೀಣರಾದ ಶ್ರೀ ಎಸ್ ವಿ ಶ್ರೀನಿವಾಸರಾಯರನ್ನು ಆಫ್ರಿಕದಲ್ಲಿರುವ ಲೈಬೀರಿಯಾದ ಮೂಲ ಶಿಕ್ಷಣ ಕೇಂದ್ರದ ಮುಖ್ಯಾಧಿಕಾರಿಯಾಗಿ ವರ್ಗಾಯಿಸಲಾಗಿದೆ. ಶ್ರೀ ಶ್ರೀನಿವಾಸರಾಯರು ಮಾರ್ಚಿ ೪ನೇ ತಾ॥ ಪ್ಯಾರಿಸ್ಸಿಗೆ ಪ್ರಯಾಣ ಮಾಡಿ ಆಫ್ರಿಕಕ್ಕೆ ಹೋಗಲಿರುವರು. ಅವರು ಈಗ ರಾಜಧಾನಿಗೆ ಬಂದಿರುವರು.

ಹೊಸ ಬಸ್ ಲೈಸೆನ್ಸುಗಳನ್ನು ಕೊಡುವುದರಲ್ಲಿ ಅಕ್ರಮ

ಜಿಲ್ಲಾ ಬಸ್ಸು ಮಾಲೀಕರುಗಳ ಸಭೆಯಲ್ಲಿ ನಿರ್ಣಯ

ಮೈಸೂರು ೨೨

ಮೈಸೂರು ಜಿಲ್ಲೆಯ ಬಸ್ಸು ಮಾಲೀಕರ ಸಂಘದ ೨೫ ನೇ ವಾರ್ಷಿಕ ಸಾಧಾರಣ ಸಭೆಯು ನೆನ್ನೆ ಶ್ರೀ ಜಿ ಆರ್ ಜೋಗೇಶ್ವರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹೊಸ ಬಸ್ಸು ಲೈಸೆನ್ಸುಗಳನ್ನು ಕೊಡುವ ವಿಧಾನ ಮತ್ತು ಕಾಲ ವಿಳಂಬಗಳಲ್ಲಿ ಅಕ್ರಮಗಳು ನಡೆಯುತ್ತಿರುವ ವಿಷಯವು ಚರ್ಚಿಸಲ್ಪಟ್ಟು ಇದನ್ನು ಪ್ರಾದೇಶಿಕ ಮತ್ತು ಸಂಸ್ಥಾನ ಸಂಚಾರ ಸಮಿತಿಗಳ ಗಮನಕ್ಕೆ ತಂದು ಸೂಕ್ತ ಪರಿಹಾರ ದೊರೆಯಬೇಕೆಂದು ಸೂಚಿಸುವ ನಿರ್ಣಯವನ್ನು ಮಾಡಲಾಯಿತು.

ಸಂಘದ ಅಧಿಕಾರ ವರ್ಗದ ಚುನಾವಣೆಯು ನಡೆದು ಶ್ರೀ ಜಿ ಆರ್ ಜೋಗೇಶ್ವರ್‌ರವರ ಅಧ್ಯಕ್ಷರಾಗಿಯೂ ಶ್ರೀ ಸಿ ಪಿ ನಂಜುಂಡಶೆಟ್ಟರು ಉಪಾಧ್ಯಕ್ಷರಾಗಿಯೂ ಪುನರಾಯ್ಕೆಗೊಂಡರು. ಶ್ರೀ ಎಸ್ ಸಂಗಪ್ಪನವರು ಗೌ॥ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ ಶ್ರೀ ಜಿ ಆರ್ ರಾಮಯ್ಯನವರ ಸಹ ಕಾರ್ಯದರ್ಶಿಯಾಗಿಯೂ ಚುನಾಯಿತರಾದರು.

ಕಿತ್ತಲೆ ಹಣ್ಣನ್ನು ಕೆಡದಂತೆ ಇಡಲು ಆಹಾರ ಸಂಶೋಧನಾಲಯದ ವಿಧಾನ

ಕಿತ್ತಲೆ ಹಣ್ಣುಗಳನ್ನು ಬಹಳಕಾಲ ಕೆಡದಂತೆ ಇಡಲು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದವರು ಒಂದು ಹೊಸ ವಿಧಾನವನ್ನು ಕಂಡುಹಿಡಿದಿರುತ್ತಾರೆ. ಇದರಿಂದ ಅಸ್ಸಾಂ, ನಾಗಪುರ, ಕೊಡಗು ಮತ್ತು ಮೈಸೂರುಗಳಲ್ಲಿ ಬೆಳೆಯುವ ಕಿತ್ತಲೆ ಹಣ್ಣುಗಳು ಹೆಚ್ಚು ಕಾಲ ಉಪಯೋಗಕ್ಕೆ ಬರುವುವೆಂದು ಹೇಳಲಾಗಿದೆ.

ಶಿವರಾಂ ಕಾರಂತರ ಭಾಷಣ

ರಾಜಧಾನಿಯ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತರು ಭಾಷಣ ಮಾಡುವರು. ಪ್ರೊಫೆಸರ್ ಶ್ರೀ ಎಲ್ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು.

ಖುಲಾಸೆಗಾಗಿ ಕೇಂದ್ರ ಸರ್ಕಾರಕ್ಕೆ ಷೇಕ್ ಅಬ್ದುಲ್ಲಾರವರ ಪತ್ರ

ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ಭಾರತ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ತಮ್ಮನ್ನು ಬಂಧನದಿಂದ ಮುಕ್ತರನ್ನಾಗಿ ಮಾಡಬೇಕೆಂದು ಕೋರಿರುವರೆಂದು ವರದಿಯಾಗಿದೆ. ಈ ಪತ್ರವನ್ನು ಅಬ್ದುಲ್ಲಾರವರ ಮಗ ದೆಹಲಿಗೆ ತಂದಿರುವರೆಂದು ಹೇಳಲಾಗಿದೆ. ಪಾಕಿಸ್ತಾನ ಮತ್ತು ಅಮೆರಿಕಗಳಿಗೆ ಮಿಲಿಟರಿ ಒಪ್ಪಂದವಾಗುವ ಬಗ್ಗೆ ವರದಿಗಳನ್ನು ಕೇಳಿ ಅವರ ಆತಂಕಗೊಂಡಿರುವುದಾಗಿಯೂ, ಕಾಶ್ಮೀರ ಮತ್ತು ಭಾರತಗಳ ಹಿತರಕ್ಷಣೆಗಾಗಿ ತಾವು ತಮ್ಮ ಕೈಲಾದುದೆಲ್ಲವನ್ನೂ ಮಾಡುವುದಾಗಿ ಅವರು ಹೇಳಿರುವರೆಂದೂ ವರದಿಯಾಗಿದೆ.

ಪ್ರಪಂಚದ ಶಾಂತಿಗಾಗಿ ಶ್ರಮಿಸುವುದೇ ರಷ್ಯದ ಗುರಿ

ಪೌರಸಭಾ ಸತ್ಕಾರದಲ್ಲಿ ಸಾಂಸ್ಕೃತಿಕ ನಿಯೋಗದ ನಾಯಕರ ಭಾಷಣ

ಸ್ವಂ. ಟ. ಫೋ.] ಬೆಂಗಳೂರು ೨೨

ಈ ದಿನ ಇಲ್ಲಿನ ಪೌರಸಭೆಯವರು ರಷ್ಯದ ಸಾಂಸ್ಕೃತಿಕ ನಿಯೋಗದವರಿಗೆ ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದ್ದರು. ನಿಯೋಗದ ಮುಖಂಡರಾದ ಎಂ ನಿಕೋಲಾಯ್ ಟಿಖೊನೋವ್‌ರವರು ಮಾತನಾಡಿ, ತಾವು ಭಾರತಕ್ಕೆ ಸೌಹಾರ್ದ ಸೂಚಕ ರಾಯಭಾರಿಗಳಾಗಿ ಬಂದಿರುವುದಾಗಿ ತಿಳಿಸಿದರು. ಭಾರತ ಮತ್ತು ರಷ್ಯಗಳಿಗೆ ಸಾಂಸ್ಕೃತಿಕ ಸಂಬಂಧವು ಬೆಳೆಯಬೇಕೆಂದು ಅವರು ಹೇಳಿದರು.

ರಷ್ಯವು ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡಲು ಮತ್ತು ಬಲಗೊಳಿಸಲು ಆಶಿಸಿರುವುದಾಗಿ ತಿಳಿಸಿದರು. ಶಾಂತಿಗಾಗಿ ಭಾರತವು ನಡೆಸುತ್ತಿರುವ ಕಾರ್ಯವನ್ನು ಅವರು ಪ್ರಶಂಸಿಸಿದರು. ಭಾರತದ ಕಲಾ ವಿಶೇಷಗಳನ್ನು ಅವರು ಬಹುವಾಗಿ ಹೊಗಳಿದರು.

ಸಂತೆಯಲ್ಲಿ ಬಿದಿರಕ್ಕಿ ಮಾರಾಟ

ಸಕಲೇಶಪುರದ ಎಲಿಗೋಣಿಬೀಡಿನ ಸಂತೆಯಲ್ಲಿ ಕಳೆದ ಎರಡು ವಾರಗಳಲ್ಲಿ ರೂಪಾಯಿಗೆ ೨॥ ಸೇರಿನಂತೆ ಬಿದಿರು ಅಕ್ಕಿಯನ್ನು ಮಾರಾಟ ಮಾಡಲಾಯಿತು. ಅದು ಆಸ್ಟ್ರೇಲಿಯದ ಗೋಧಿಯ ಗಾತ್ರದಲ್ಲಿ ಅರ್ಧದಷ್ಟಿದೆ. ಅದರಿಂದ ದೋಸೆ ರೊಟ್ಟಿ ಮತ್ತು ಅನ್ನ ಇವುಗಳನ್ನು ಮಾಡಬಹುದು.

ಜೂಜಾಟದ ಶಿಕ್ಷೆ

ರಾಜಧಾನಿಯ ಮಂಡಿ ಮೊಹಲ್ಲಾ ಠಾಣೆಯ ಸ್ಥಳದಲ್ಲಿ ಮೊನ್ನೆ ರಾತ್ರಿ ಜೂಜಾಡುತ್ತಿದ್ದ ಅಬ್ದುಲ್ ಖಾದರ್ ಮುಂತಾದ ೫ ಜನರನ್ನು ಮಂಡಿ ಪೋಲೀಸರು ದಸ್ತಗಿರಿ ಮಾಡಿ, ಅವರುಗಳ ಮೇಲೆ ಮೊಕದ್ದಮೆಯನ್ನು ಹೂಡಿರುವರು.

ಸರ್ಕಾರಿ ಕೆಲಸಗಳನ್ನು ತ್ವರಿತಗೊಳಿಸಬೇಕು

ಅಧಿಕಾರಿಗಳ ಸಭೆಯಲ್ಲಿ ಹನುಮಂತಯ್ಯನವರ ಸೂಚನೆ

ಸ್ವಂ. ಟ. ಫೋ.] ಬೆಂಗಳೂರು ೨೨

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಈ ದಿನ ಇಲಾಖಾಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳ ಸಭೆ ನಡೆಯಿತು. ಮುಖ್ಯಮಂತ್ರಿಯವರು ಮಾತನಾಡಿ ಸಂಸ್ಥಾನದಲ್ಲಿ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹವೀಯಬೇಕೆಂದೂ ಸರ್ಕಾರಿ ಕೆಲಸಗಳನ್ನು ತ್ವರಿತಗೊಳಿಸಬೇಕೆಂದೂ ತಿಳಿಸಿದರು. ಶಾಸನ ಸಭೆಯಲ್ಲಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರವೀಯಲು ಬೇಕಾದಷ್ಟು ವಿಷಯಗಳನ್ನು ಸಂಗ್ರಹಿಸಿಕೊಡಬೇಕೆಂದೂ ಉತ್ತರವೀಯಲು ... ಪರಿಸ್ಥಿತಿಯು ಮಂತ್ರಿಗಳಿಗೆ ಬಾರದಂತೆ ನೋಡಿಕೊಳ್ಳಬೇಕೆಂದೂ ... ತಿಳಿಸಿದರು.

ತಿರುವನಂತಪುರದಲ್ಲಿ ಚುನಾವಣಾ ಘರ್ಷಣೆ

ತಿರುವಾಂಕೂರು-ಕೊಚ್ಚಿಯ ಮಹಾ ಚುನಾವಣೆಯಲ್ಲಿ ತಿರುವನಂತಪುರ ನಗರ ಕ್ಷೇತ್ರದಿಂದ ಸ್ಪರ್ಧಿಸಿರುವ ವಿವಿಧ ಪಕ್ಷಗಳ ಪರವಾಗಿ ಚುನಾವಣಾ ಪ್ರಚಾರವು ಬಿರುಸಾಗಿ ನಡೆಯಿತು. ಮೊನ್ನೆ ದಿನ ನಗರದ ಒಂದು ಕಡೆ ಕಾಂಗ್ರೆಸ್ ಕಾರ್ಯಕರ್ತರುಗಳ, ಅವರ ವಿರೋಧ ಪಕ್ಷದವರೊಡನೆ ಘರ್ಷಣೆ ಸಂಭವಿಸಿ ಎರಡು ಕಡೆಯವರೂ ಸೋಡಾ ಸೀಸೆಗಳು, ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆದಾಟಲು ೨೦ ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ. ಪೋಲೀಸರು ಎಂದು ಪರಿಸ್ಥಿತಿಯನ್ನು ಹತೋಟಿಗೆ ತಂದು ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಿದರು. ಮತ್ತೊಂದು ಕಡೆ ಗಲಭೆ ನಡೆಯುತ್ತಿದ್ದಲ್ಲಿಗೆ ಹೊರಟಿದ್ದ ಪೋಲೀಸ್ ವ್ಯಾನನ್ನು ತಡೆಯಲೆತ್ನಿಸಿದ ನಾಲ್ವರನ್ನು ದಸ್ತಗಿರಿ ಮಾಡಿ ಮೂವರನ್ನು ಖುಲಾಸೆ ಮಾಡಲಾಯಿತು.

ಪಾದರಕ್ಷೆಗಳಿಂದ ವಿದ್ಯಾರ್ಥಿಗಳ ಹೊಡೆದಾಟ

ಸಾಗರದ ಪೌರಸಭಾ ಹೈಸ್ಕೂಲಿನಲ್ಲಿ ಕಳೆದ ಶುಕ್ರವಾರ ಇಬ್ಬರು ವಿದ್ಯಾರ್ಥಿಗಳು ಬಹಿರಂಗವಾಗಿ ಪಾದರಕ್ಷೆಗಳಿಂದ ಹೊಡೆದಾಡಿದರೆಂದೂ, ಅನಂತರ ವಿದ್ಯಾರ್ಥಿಗಳ ಗುಂಪುಗಳಿಗೆ ಘರ್ಷಣೆಯಾಯಿತೆಂದೂ ವರದಿಯಾಗಿದೆ. ಒಬ್ಬ ಉಪಾಧ್ಯಾಯರ ಮೇಲೆ ಕೈ ಮಾಡುವ ಪ್ರಯತ್ನವಾಯಿತೆಂದಾಗಿ ಹೇಳಲಾಗಿದೆ. ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ಅಶಿಸ್ತು ಮತ್ತು ಅನೀತಿಯ ವ್ಯವಹಾರಗಳು ಹೆಚ್ಚುತ್ತಿರುವ ಸೂಚನೆಗಳು ಕಂಡುಬರುತ್ತಿರುವುದಾಗಿಯೂ, ಸಹ ವಿದ್ಯಾಭ್ಯಾಸದ ದುಷ್ಪರಿಣಾಮಗಳು ಗೋಚರಿಸುತ್ತಿರುವುದಾಗಿಯೂ ತಿಳಿದುಬಂದಿದೆ. ಹಲವು ವಿದ್ಯಾರ್ಥಿಗಳನ್ನು ಸಸ್ಪೆಂಡ್ ಮಾಡಲಾಗಿದೆ.

ಶ್ರೀ ಪಾರಿಜಾತ ವನೇಶ್ವರಸ್ವಾಮಿ ವಾರ್ಷಿಕೋತ್ಸವ

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಗುಂಡಗಲ್ಲಿನ ಶ್ರೀ ಶಾಂತಾಶ್ರಮದಲ್ಲಿ ಮೇಲ್ಕಂಡ ಉತ್ಸವದ ಸಂಬಂಧವಾಗಿ ನಾಳೆಯಿಂದ ಬರುವ ತಿಂಗಳು ೨ನೇ ತಾ॥ ಮಂಗಳವಾರದ ವರೆಗೆ ಸಪ್ತಾಹವನ್ನು ಏರ್ಪಡಿಸಲಾಗಿದೆ. ನಾಳೆ ಬೆಳಿಗ್ಗೆ ೭.೩೦ ರಿಂದ ೯ರ ವರೆಗೆ ಬ್ರ॥ ಶ್ರೀ॥ ಶ್ರೀ ಶಂಕರಾನಂದ ಭಾರತೀ ಸ್ವಾಮಿಯವರಿಂದ ಗೀತಾ ಪಾರಾಯಣ, ಪ್ರವಚನ ಮತ್ತು ಶ್ರೀ ಎ. ಎ. ನಾರಾಯಣಪ್ಪನವರಿಂದ ಭಾಗವತವನ್ನೂ, ಸಂಜೆ ೫ ಘಂಟೆಗೆ ಶ್ರೀ ಶಂಕರಾನಂದ ಭಾರತೀ ಸ್ವಾಮಿಯವರಿಂದ ಸಾಂಖ್ಯ ಯೋಗದ ವಿಷಯವಾಗಿ ಉಪನ್ಯಾಸವನ್ನೂ ಏರ್ಪಡಿಸಲಾಗಿದೆ. ನಾಳಿದ್ದಿನಿಂಗ ಪ್ರತಿ ದಿನ ಬೆಳಿಗ್ಗೆ ಬ್ರ॥ ಶ್ರೀ॥ ಅನಂತಪದ್ಮನಾಭ ಸ್ವಾಮಿಜೀಯವರಿಂದ ಗೀತಾ ಪಾರಾಯಣ ಪ್ರವಚನಗಳು ಮತ್ತು ಮಹಾ ಮಂಗಳಾರತಿಗಳು ನಡೆಯುವುವು. ಸಂಜೆ ಶ್ರೀ ಸಾಂಖ್ಯಾನಂದರವರಿಂದ ಭಕ್ತಿಯೋಗದ ವಿಷಯವಾಗಿಯೂ, ಶ್ರೀ ಯಾಮುನಾಚಾರ್ಯರಿಂದ ಕಠೋಪನಿಷತ್ತಿನ ಬಗ್ಗೆಯೂ ಉಪನ್ಯಾಸ, ಶ್ರೀ ಸಂಬಂಧಮೂರ್ತಿ ಭಾಗವತರಿಂದ ಹರಿಕಥೆ, ಸಂ॥ ವಿದುಷಿ ಜೋಕ್ಯಮ್ಮ ಮತ್ತು ವೃಂದದವರಿಂದ ಸಂಗೀತ, ಶ್ರೀ ಸ್ವಾಮಿ ಸೋಮನಾಥಾನಂದಜಿಯವರಿಂದ ಪುರುಷೋತ್ತಮ ಯೋಗದ ವಿಚಾರವಾಗಿ ಉಪನ್ಯಾಸ ಮತ್ತು ಶ್ರೀ ಗೀಳಾದ ಕೌಶಿಕ್ ಮತ್ತು ವೆಂಕಟಸುಬ್ಬಯ್ಯನವರಿಂದ ಧಾರ್ಮಿಕ ಕಾರ್ಯಕ್ರಮಗಳು ಅನುಕ್ರಮವಾಗಿ ಏರ್ಪಡಿಸಿ ೨ನೇ ತಾ॥ ಬೆಳಿಗ್ಗೆ ಶ್ರೀ ಎ. ಎ. ನಾರಾಯಣಪ್ಪನವರಿಂದ ಮಂಗಳವೀಣೆ, ಮಧ್ಯಾಹ್ನ ಅನ್ನ ಸಂತರ್ಪಣೆ ಮತ್ತು ಸಂಜೆ ಪುರಸಭಾ ಕಮಿಷನರ್ ಶ್ರೀ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಪಿ. ನಾಗಭೂಷಣಾಚಾರ್ಯರವರ ವೀಣಾ ವಾದನವೂ ನಡೆಯುವುವು.

ಶೇಟ್ ಅನಂತಾಚಾರ್ಯರು ವಿಶೇಷ ಸೇವಾವಧಿ ಚೀಫ್ ಇಂಜನಿಯರ್

ಕಾವೇರಿ ಸರ್ಕಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಶೇಟ್ ಅನಂತಾಚಾರ್ಯರವರು ... ಪ್ರಮುಖ ನೀರಾವರಿ ಯೋಜನೆಗಳ ... ... ನೇಮಿಸಲಾಗಿದೆ

ಮಾರ್ಚಿ ೮ ರಿಂದ ಪೂರ್ವ ಬಂಗಾಳದ ಚುನಾವಣೆ

ಪೂರ್ವ ಬಂಗಾಳದ ಸಾರ್ವತ್ರಿಕ ಚುನಾವಣೆಯು ಬರುವ ತಿಂಗಳು ಎಂಟನೇ ತಾ॥ ನಿಂದ ೧೨ ರ ವರೆಗೆ ನಡೆಯುವುದೆಂದು ಢಾಕ್ಕಾದಲ್ಲಿ ಹೊರಡಿಸಲಾದ ವಿಶೇಷ ಗೆಜೆಟ್ ಪ್ರಕಟಣೆಯೊಂದು ತಿಳಿಸಿದೆ.

ಪೌರಸಭಾ ಚುನಾವಣೆಗೆ ಬಹಿಷ್ಕಾರ

ಸೌರಾಷ್ಟ್ರದ ಸಿಹೋರ್ ಎಂಬ ಸ್ಥಳದಲ್ಲಿ ಕಳೆದ ವಾರ ಪೌರಸಭೆಯ ಚುನಾವಣೆಯು ಏರ್ಪಾಡಾಗಿದ್ದಿತು. ಉಮೇದುವಾರಿಕೆ ಪತ್ರಗಳನ್ನು ಯಾರೂ ಸಲ್ಲಿಸದೆ, ಚುನಾವಣೆಯೇ ನಡೆಯದಂತಾಗಿದೆ. ಹಲವು ಕಾರ್ಯಕರ್ತರುಗಳ ಹೆಸರುಗಳನ್ನು ಓಟರುಗಳ ಪಟ್ಟಿಯಲ್ಲಿ ಸೇರಿಸದಿದ್ದುದೇ ಈ ರೀತಿಯ ಬಹಿಷ್ಕಾರಕ್ಕೆ ಕಾರಣ. ಕಾರ್ಮಿಕರು ಹೊರಗಿನ ಹಳ್ಳಿಯವರೆಂದು ಪೌರಾಧಿಕಾರಿಗಳು ಅವರ ಹೆಸರನ್ನು ಪಟ್ಟಿಯಲ್ಲಿ ಸೇರಿಸಿರಲಿಲ್ಲ.

ವಿಶ್ವದ ಅತ್ಯಂತ ದೊಡ್ಡ ಟ್ಯಾಂಕರ್

ವರ್ಷಕ್ಕೆ ೨೫ ಸಾವಿರ ಸಂಸಾರಗಳಿಗೆ ಸಾಕಾಗುವಷ್ಟು ಪೆಟ್ರೋಲನ್ನು ಒಂದೇ ಬಾರಿಗೆ ಸಾಗಿಸಬಲ್ಲ ವರ್ಲ್ಡ್ ಗ್ಲೋರಿ ಎಂಬ ವಿಶೇಷ ಅತ್ಯಂತ ದೊಡ್ಡ ಟ್ಯಾಂಕರ್ ಹಡಗೊಂದನ್ನು ಮಸಾಚುಸೆಟ್ಸ್‌ನಲ್ಲಿ ನಿರ್ಮಿಸಲಾಗಿದೆಯೆಂದು ಗೊತ್ತಾಗಿದೆ. ಒಂದು ಕೋಟಿ ಡಾಲರ್ ವೆಚ್ಚದಲ್ಲಿ ಸಿದ್ಧಗೊಳಿಸಲಾಗಿರುವ ಈ ನೌಕೆಯಲ್ಲಿ ಒಂದು ಬಾರಿಗೆ ೪೫ ಸಾವಿರ ಟನ್ ಎಣ್ಣೆಯನ್ನು ಸಾಗಿಸಬಹುದು. ಇದು ೭೩೦ ಅಡಿ ಉದ್ದವಿದೆ.

ಶ್ರೀ ಗೋಂದಾವಲೇಕರ ಬ್ರಹ್ಮಚೈತನ್ಯ ವಿಗ್ರಹ ಪ್ರತಿಷ್ಠಾಪನೆ

ರಾಜಧಾನಿಯ ಚಾಮುಂಡಿಪುರದ ಶಂಕರನಾರಾಯಣಸ್ವಾಮಿ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವಿಠ್ಠಲ ಚೈತನ್ಯ ಮಂದಿರದಲ್ಲಿ ಶ್ರೀ ಗೋಂದಾವಲೇಕರ ಶ್ರೀ ಬ್ರಹ್ಮಚೈತನ್ಯ ಮಹಾರಾಜರ ವಿಗ್ರಹದ ಪ್ರತಿಷ್ಠಾಪನಾ ಮಹೋತ್ಸವವನ್ನು ಬರುವ ತಿಂಗಳು ೭ನೇ ತಾರೀಖು ಭಾನುವಾರ ಬೆಳಿಗ್ಗೆ ೧೧ ರಿಂದ ೧೨ ಘಂಟೆ ವರೆಗೆ ನೆರವೇರಿಸಲು ಏರ್ಪಾಡಾಗಿದೆ. ಭಕ್ತಾದಿಗಳು ಸಹಾಯ ಮಾಡಬೇಕೆಂದು ಕೋರಲಾಗಿದೆ.

ಶಾರದಾ ಪೂಜೆ

ಚಾಮರಾಜನಗರದ ಅರವಿಂದ ಹಿಂದೀ ಮಂದಿರದ ವಿದ್ಯಾರ್ಥಿಗಳು ಶ್ರೀ ಶಾರದಾ ಪೂಜೆಯನ್ನು ಗೌ॥ ಕಿ॥ ಬಾಯ್ಸ್ ಮಿಡಲ್ ಸ್ಕೂಲಿನ ಆವರಣದಲ್ಲಿ ಕಳೆದ ಬುಧವಾರ ಶ್ರೀ ಯು. ಎಂ. ಮಾದಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ವಿದ್ಯಾರ್ಥಿಗಳ ಭಾಷಣಗಳಾದನಂತರ ಶ್ರೀ ಪಿ. ವೆಂಕಟಾಚಲಶರ್ಮರವರು ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯುವ ಉದ್ದೇಶ ಮತ್ತು ಅದರ ಪ್ರಚಾರದ ವಿಷಯವಾಗಿ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಅವಶ್ಯವಾಗಿ ಮಾತೃಭಾಷೆ ಸಂಸ್ಕೃತ ಮತ್ತು ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯಬೇಕೆಂದು ವ್ಯಕ್ತಪಡಿಸಿದರು. ಸಂಘದ ವ್ಯವಸ್ಥಾಪಕರಾದ ಶ್ರೀ ಟಿ. ವಿ. ವೆಂಕಟಕೃಷ್ಣಯ್ಯನವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯಾದನಂತರ ಸಭೆಯು ಮುಕ್ತಾಯವಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೩೦ ವೈ. ಎಸ್. ಸುಂದರ ಸಿತಾರ್. ಮಧ್ಯಾಹ್ನ ೧ ೩೦ ಕುಟೀರ ಕೈಗಾರಿಕೆ, ಸಹಕಾರಿ ಮತ್ತು ಪಶು ಸಂಗೋಪನೆ. ಅರ ನಾಗಳು ೩ ಬಿ ಎಸ್. ರಾಮಯ್ಯರ್ ಸಂಗೀತ. ಸಂಜೆ ೫-೩೦ ಮಕ್ಕಳ ೬ ೩೦ ಎಂ. ಎ. ಸುಂದರಿದೇವಿ, ಸಂಗೀತ ೬-೧೫ ಎಂ. ಬಿ. ಗೋಪಿನಾಥ್, ಕನ್ನಡ ಗೀತೆಗಳು ೭-೫ ಭಜನಾಸ್ತೋತ್ರ ೭-೩೦ ಆರೋಗ್ಯ ಭಾಗ್ಯ-ಸೂರ್ಯ ನಮಸ್ಕಾರ, ೮ ಪಶ್ಚಿಮಘಟ್ಟಗಳ ಕನ್ನಡ ಭಾಷಣ, ೮ ೩೦ ಸೌರಾಷ್ಟ್ರ ... ೯ ೩೦ ರಾಷ್ಟ್ರೀಯ ಕಾರ್ಯಕ್ರಮ ೧೦ ಕ್ಕೆ ವಾರ್ತೆ ...

ನಿಜಾಮರ ಭಾಷಣಕ್ಕೆ ಬಹಿಷ್ಕಾರ

ಹೈದರಾಬಾದು ಶಾಸನ ಸಭೆಯಲ್ಲಿ ರಾಜಪ್ರಮುಖರಾದ ನಿಜಾಮರು ನೆನ್ನೆ ಆರಂಭ ಭಾಷಣ ಮಾಡಲು ಬಂದಕೂಡಲೇ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿ, ಭಾಷಣವಾದನಂತರ ಹಿಂತಿರುಗಿದರು. ಭಾಷಣದ ಕಾಲದಲ್ಲಿ ಕಾಂಗ್ರೆಸ್ ಸದಸ್ಯರಲ್ಲದೆ ಇಬ್ಬರು ಸ್ವತಂತ್ರರೂ ಇದ್ದರು. ರಾಜಪ್ರಮುಖತ್ವವು ಇನ್ನೂ ಜಾರಿಯಲ್ಲಿರುವುದನ್ನು ಪ್ರತಿಭಟಿಸಿ ಮೇಲ್ಕಂಡ ಸಭಾತ್ಯಾಗದ ಪ್ರಕರಣವು ನಡೆಯಿತು.

ಸತ್ತ ಅಳಿಯನ ದರ್ಶನಕ್ಕಾಗಿ ಹೋದ ಮಾವನಿಗೆ ಅಪಮೃತ್ಯು

ದಕ್ಷಿಣ ಭಾರತೀಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಶ್ರೀ ಸುಂದರ ರಾಮರೆಡ್ಡಿಯವರು, ಮೋಟಾರು ಅಪಘಾತದಲ್ಲಿ ಗಾಯಗೊಂಡು ಕಳೆದ ಶನಿವಾರ ಮೃತಪಟ್ಟ ಸಂದರ್ಭದಲ್ಲಿ, ಅವರ ಮಾವಂದಿರಾದ ತಿರುಪತಿ ವೆಂಕಟೇಶ್ವರ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾಕ್ಟರ್ ರಾಮಕೃಷ್ಣರೆಡ್ಡಿಯವರು ಅಳಿಯನ ಅಂತ್ಯದರ್ಶನ ಪಡೆಯಲು ಬಸ್ಸಿನಲ್ಲಿ ಹೋಗುತ್ತಿದ್ದಾಗ ಲಾರಿಯೊಂದಕ್ಕೂ ಬಸ್ಸಿಗೂ ಡಿಕ್ಕಿಯಾಗಿ ರೆಡ್ಡಿಯವರಿಗೂ ಇತರ ಆರು ಜನ ಪ್ರಯಾಣಿಕರಿಗೂ ಗಾಯವಾಯಿತು. ನೆಲ್ಲೂರು ಆಸ್ಪತ್ರೆಯಲ್ಲಿ ರೆಡ್ಡಿಯವರು ಮೃತಪಟ್ಟರೆಂದು ಹೇಳಲಾಗಿದೆ.

ಗಂಟೆಗೆ ೧೪೪ ಮೈಲಿ ವೇಗದ ವಿದ್ಯುಚ್ಛಕ್ತಿ ರೈಲು

ಫ್ರಾನ್ಸಿನ ವಿದ್ಯುಚ್ಛಕ್ತಿ ರೈಲೊಂದು ೩ ದಿನಗಳ ಹಿಂದೆ ಗಂಟೆಗೆ ೧೪೪ ಮೈಲಿ ವೇಗದಲ್ಲಿ ಪ್ರಯಾಣಮಾಡಿ ಪ್ರಪಂಚದ ಹೊಸ ರಿಕಾರ್ಡನ್ನು ಸ್ಥಾಪಿಸಿದೆ. ಅದಕ್ಕೆ ಎರಡು ದಿನಗಳ ಹಿಂದೆ ಅದೇ ರೈಲು ೧೩೪ ಮೈಲಿಯಷ್ಟು ವೇಗದಲ್ಲಿ ಹೋಗಿದ್ದಿತು.

ಅಪಘಾತದಿಂದ ದೋಣಿ ಮುಳುಗಿತು

ಬೊಂಬಾಯಿ ರೇವಿನಲ್ಲಿ ಕಾರ್ತೇಜ್ ಎಂಬ ಪ್ರಯಾಣಿಕ ಹಡಗಿಗೆ ಸಹಾಯ ಮಾಡುತ್ತಿದ್ದ ಚಿಕ್ಕ ದೋಣಿಯೊಂದು ನೆನ್ನೆ ಅಪಘಾತಕ್ಕೀಡಾಗಿ ಮುಳುಗಿಹೋಗಿದೆ.

ಕ್ರೀಡಾ ಕೇಂದ್ರ ನಾಯಕರ ಶಿಕ್ಷಣ ಶಿಬಿರದ ಆರಂಭ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ವನಿತಾ ಸದನದಲ್ಲಿ ಮೊನ್ನೆ ಕ್ರೀಡಾ ಕೇಂದ್ರ ನಾಯಕರ ಶಿಕ್ಷಣ ಶಿಬಿರವನ್ನು ಪೌರಸಭಾ ಕಮಿಷನರಾದ ಶ್ರೀ ಎಲ್. ಲಕ್ಷ್ಮಣರಾಯರು ಆರಂಭಗೊಳಿಸಿದರು. ಅವರು ಮಾತನಾಡಿ, ಮಕ್ಕಳ ಆರೋಗ್ಯ ಭಾಗ್ಯವು ಹೆಚ್ಚಲು ಆಟದ ಕೇಂದ್ರಗಳು ಅಗತ್ಯವೆಂದು ತಿಳಿಸಿದರು. ನಗರದ ನಾನಾ ಪ್ರದೇಶಗಳಲ್ಲಿ ಕ್ರೀಡಾ ಸಾಧನಗಳನ್ನು ಪೌರಸಭೆಯವರು ಒದಗಿಸಿರುವುದಾಗಿಯೂ, ಸಧ್ಯದಲ್ಲೇ ಮಂಡಿ ಮೊಹಲ್ಲಾ, ಚಾಮುಂಡಿಪುರ, ನಜರ್‌ಬಾದ್ ಮತ್ತು ಕೃಷ್ಣಮೂರ್ತಿಪುರಗಳಲ್ಲಿ ಪ್ರಯೋಗಾರ್ಥವಾಗಿ ಕ್ರೀಡಾ ಕೇಂದ್ರಗಳನ್ನು ತೆರೆಯಲಿರುವುದಾಗಿಯೂ ತಿಳಿಸಿದರು. ಕೇಂದ್ರಗಳ ಸ್ಥಾಪನಾ ಉದ್ದೇಶವನ್ನು ಸಾರ್ಥಕಗೊಳಿಸುವುದು ನಾಯಕರ ಕೈಯಲ್ಲಿದೆಯೆಂದೂ, ಅದರಿಂದ ಅವುಗಳು ವೃದ್ಧಿಹೊಂದಿ ಜನಪ್ರಿಯವಾಗಬಲ್ಲವೆಂದೂ ಆಶಿಸಿದರು. ಶಿಶು ಸಾಹಿತ್ಯ ಸಂಘದವರು ಕೈಗೊಂಡಿರುವ ಈ ಉದ್ಯಮವನ್ನು ಅವರು ಹೊಗಳಿ ಅದಕ್ಕೆ ಯಶಸ್ಸನ್ನು ಕೋರಿದರು.

ASTRO—PALMISTRY

(ಜಾತಕ - ಪ್ರಶ್ನೆ - ಹಸ್ತಸಾಮುದ್ರಿಕ)

H.S. ವೆಂಕಟರಾವ್, B A, B L

1329 ಕೃಷ್ಣಮೂರ್ತಿಪುರಂ, ಮೈಸೂರು

Edited, Printed and Published by A R Nagarajan at Sadhvi Press D Subbiah Road, Mysore

ಪ್ರವಾಹದಲ್ಲಿ ೧೮ ಮರಣಗಳು

ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡ್ ಮತ್ತು ನ್ಯೂಸೌತ್‌ವೇಲ್ಸ್ ಸಂಸ್ಥಾನಗಳ ತೀರ ಪ್ರದೇಶದಲ್ಲಿ ಭಾರಿ ಬಿರುಗಾಳಿಯು ಬೀಸಿಯುಂಟಾದ ಪ್ರವಾಹದಿಂದಾಗಿ ೧೮ ಜನರು ಮಡಿದು, ಸಾವಿರ ಜನರಿಗೆ ನೆಲೆಯಿಲ್ಲವಾಗಿದೆ. ಬ್ರಿಟಿಷ್ ರಾಣಿಯವರು ಇಳಿದುಕೊಂಡಿದ್ದ ಗೊಲ್ಡ್ ಕೋಸ್ಟ್ ಹೋಟೆಲ್ ಎಂಬ ಭವನದ ಕೆಳಭಾಗಗಳು ನೀರಿನಲ್ಲಿ ಮುಳುಗಿತ್ತೆಂದು ಹೇಳಲಾಗಿದೆ. ಅವರು ಎತ್ತರವಾದ ಪ್ರದೇಶಗಳಲ್ಲಿ ಆಶ್ರಯಪಡೆದಿರುತ್ತಾರೆ.

೩,೦೦೦ ರಷ್ಯಾ ಕಮ್ಯೂನಿಸ್ಟರ ಉಚ್ಚಾಟನೆ

ರಷ್ಯದ ಒಳಾಡಳಿತ ಮಂತ್ರಿಯಾಗಿದ್ದ ಬೆರಿಯಾರವರ ... ಲಾಟ್ವಿಯ ... ಪ್ರಾಂತವಾದ ಜಾರ್ಜಿಯಾದಲ್ಲಿ ೩ ಸಾವಿರ ಕಮ್ಯೂನಿಸ್ಟರನ್ನು ಇದುವರೆಗೆ ಉಚ್ಚಾಟನೆ ಮಾಡಲಾಗಿದೆ.

ನಹಾಸ್ ಪಾಷಾರವರ ಪತ್ನಿಯ ವಿಚಾರಣೆ

ಈಜಿಪ್ಟಿನ ಮಾಜಿ ಪ್ರಧಾನಿ ಮುಸ್ತಫಾ ನಹಾಸ್ ಪಾಷಾರವರ ಪತ್ನಿ ಜೈನಾಬ್ ಎಲ್ ವಕೀಲ್‌ರವರು ಅಲ್ಲಿನ ಕ್ರಾಂತಿಯ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಯಾಗುವರು. ಸರ್ಕಾರದ ಕೆಲಸದಲ್ಲಿ ಅಕ್ರಮವಾಗಿ ಪ್ರವೇಶಿಸಿ, ಐಶ್ವರ್ಯ ಸಂಪಾದನೆ ಮಾಡಿದರೆಂದು ಅವರ ಮೇಲೆ ಆಪಾದನೆ ಹೊರಿಸಲಾಗಿದೆ. ಅವರಿಗೆ ಇನ್ನೂ ೪೦ ವರ್ಷ ವಯಸ್ಸು ಆಗಬೇಕಾಗಿದೆ. ... ಕಾರಣ ಗುರಿಯಾಗಿರುವವರಲ್ಲಿ ಈಕೆಯೇ ಮೊದಲನೆಯ ಮುಸ್ಲಿಂ ಸ್ತ್ರೀ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೧೯ ೦ ೦	೨೧ ೧೨ ೦
ಹರಳುಬೀಜ	೨೪ ೧೪ ೦	೪೪ ೦ ೦
ಹುಚ್ಚೆಳ್ಳು	೪೭ ೧೪ ೦	೪೨ ೦ ೦
ಹೊಂಗೇಬೀಜ	೨೨ ೨ ೦	೨೮ ೪ ೦
ಹುಣಸೇಬೀಜ	೧೨ ೦ ೦	೧೨ ೨ ೦
ಹುರುಳಿ	೨೮ ೦ ೦	೨೯ ೧೨ ೦
ಹೆಸರು	೪೮ ೧೪ ೦	
ಕಾಲುಸಂದೆ	೪೦ ೨ ೦	೪೪ ೪ ೦
ಅವರೆ	೨೬ ೯ ೦	೨೮ ೨ ೦
ಧನಿಯ	೨೮ ೮ ೦	೨೯ ೧೦ ೦
ಕೊಗಂ	೨೭ ೮ ೦	೨೮ ೦ ೦
ಕಡಲೆ	೪೬ ೮ ೦	೪೮ ೦ ೦
ಸೆಣಬಿನ ಬೀಜ	೨೭ ೧೦ ೦	೨೯ ೪ ೦
ಹುಣಸೇಹಣ್ಣು	೨ ೮ ೦	೪ ೧೦ ೦
ಸೀಗೆಕಾಯಿ	೪ ೦ ೦	೪ ೧೧ ೦
ಮೆಣಸಿನಕಾಯಿ	೨೬ ೧೦ ೦	೬೭ ೮ ೦
ಕೊಬರಿ ೧೦೦೦	೧೯೦ ೦ ೦	೨೪೪ ೦ ೦
ಬೆಲ್ಲ	೪ ೮ ೦	೫ ೦ ೦

WANTED

By a reputed firm in Mysore city, a competent, full-time Sub Overseer, owning a cycle, possessing good physique, (Preferably a retired gentleman and a resident of Mysore city), capable of supervising several works by covering an average distance of about 15 miles a day, and capable of preparing plans, estimates, drawings etc., in respect of P. W. D. (Civil) works. Applications furnishing the experience, age, etc., from willing candidates, intimating the salary required, may be sent to reach the following address on or before the 28th February 1954

POST BOX NO. 24
Mysore

ಟೆಲಿಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೨] MYSORE : WEDNESDAY 24-2-1954 :: ಮೈಸೂರು : ಬುಧವಾರ ೨೪-೨-೧೯೫೪ [ಸಂಚಿಕೆ ೧೯೩

ಕಾಶ್ಮೀರದ ಮೇಲೆ ಅಮೆರಿಕಾ ಶಸ್ತ್ರಾಸ್ತ್ರ ಬಳಕೆಗೆ ನಿಷೇಧ

ಕಾಶ್ಮೀರದ ಮೇಲೆ ಅಮೆರಿಕದ ಶಸ್ತ್ರಾಸ್ತ್ರ ಪ್ರಯೋಗಕ್ಕೆ ನಿಷೇಧ

ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ಒದಗಿಸುವ ವಿಷಯದಲ್ಲಿ ಅಮೆರಿಕಾ ಸರ್ಕಾರದವರು ಮುಂದಿನ ವಾರ ತಮ್ಮ ನಿರ್ಧಾರವನ್ನು ಪ್ರಕಟಿಸಲಿರುವರೆಂದು ನಿರೀಕ್ಷಿಸಲಾಗಿದೆ. ಕಮ್ಯೂನಿಸ್ಟ ವಲಯದ ಸುತ್ತಲೂ ನಾರ್ವೆಯಿಂದ ಜಪಾನ್ ಮತ್ತು ಅಲಾಸ್ಕಾ ವರೆಗೂ [illegible] ಭದ್ರತಾ ಕೋಟೆಯನ್ನು ನಿರ್ಮಿಸಿಕೊಳ್ಳುವ ವ್ಯವಸ್ಥೆಯಲ್ಲಿ ಪಾಕಿಸ್ತಾನವೂ ಅಮೆರಿಕದೊಡನೆ ಸೇರುವುದೆಂದು ಹೇಳಲಾಗಿದೆ. ಕಾಶ್ಮೀರದ ಪ್ರಶ್ನೆಯು ಬಿಗಡಾಯಿಸಿ ಭಾರತ ಮತ್ತು ಪಾಕಿಸ್ತಾನಗಳಿಗೆ ಯುದ್ಧವಾದರೆ, ಆಗ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಉಪಯೋಗಿಸದಂತೆ ಅಮೆರಿಕಾ ಮತ್ತು ಪಾಕಿಸ್ತಾನಗಳ ನಡುವೆ ಆಗುವ ಮಿಲಿಟರಿ ಒಪ್ಪಂದದಲ್ಲಿ ಷರತ್ತು ಹಾಕಿ ಭಾರತದಲ್ಲಿ ಮೂಡಿರುವ ಶಂಕೆಯನ್ನು ನಿವೃತ್ತಿಗೊಳಿಸಲು ಅಮೆರಿಕಾ ಸರ್ಕಾರದವರು ಆಲೋಚಿಸುತ್ತಾರೆಂದು ವರದಿಯಾಗಿದೆ.

ಶಸ್ತ್ರಾಸ್ತ್ರ ಸಹಾಯಕ್ಕಾಗಿ ಅಮೆರಿಕಕ್ಕೆ ಪಾಕಿಸ್ತಾನ ಮನವಿ

ಅಮೆರಿಕದ ಪರಸ್ಪರ ಭದ್ರತಾ ಶಾಸನದ ವ್ಯಾಪ್ತಿಯೊಳಗೆ ಒಳಪಟ್ಟಂತೆ ಮಿಲಿಟರಿ ಸಹಾಯವನ್ನು ಒದಗಿಸಲು ಅಮೆರಿಕವನ್ನು ತಮ್ಮ ಸರ್ಕಾರದವರು ಕಳೆದ ಭಾನುವಾರ ಪ್ರಾರ್ಥಿಸಿದುದಾಗಿ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ತಿಳಿಸಿರುತ್ತಾರೆ. ಈ ಪ್ರಾರ್ಥನೆಗೆ ಅಮೆರಿಕದಿಂದ ಇನ್ನೂ ಉತ್ತರ ಬಂದಿಲ್ಲವೆಂದು ಅವರು ತಿಳಿಸಿರುವರು. ಅದು ಶೀಘ್ರದಲ್ಲೇ ಬರಲಿರುವುದಾಗಿಯೂ ಹೇಳಲಾಗಿದೆ.

೧೮ ವರ್ಷದ ಯುವತಿಗೆ ಫಾಸಿ ಶಿಕ್ಷೆ

ಮಲಯದಲ್ಲಿ ಶಸ್ತ್ರ ಸಜ್ಜಿತ ದರೋಡೆಕಾರರ ದೊಡನೆ ಸೇರಿದ್ದಳೆಂದು, ೧೮ ವರ್ಷದ ಚೀನಾ ಯುವತಿಯೊಬ್ಬಳಿಗೆ ಜೊಹೋರ್ ಸಂಸ್ಥಾನದ ನ್ಯಾಯಾಧೀಶರು ಮರಣ ದಂಡನೆಯನ್ನು ವಿಧಿಸಿರುತ್ತಾರೆ. ಮೊಕದ್ದಮೆಯು ನಡೆಯುತ್ತಿದ್ದಾಗ ಪೂರ್ತಾ ಮೌನದಿಂದ ಇದ್ದ ಆಕೆಯು ಶಿಕ್ಷೆಯಾದುದನ್ನು ಕೇಳಿ, ತನಗೆ ಮರಣದಂಡನೆ ಕೊಡಿರೆಂದೂ, ತಾನು ಅಪೀಲು ಹೋಗುವುದಾಗಿಯೂ ತಿಳಿಸಿರುತ್ತಾಳೆ. ಅಕ್ರಮವಾಗಿ ಬಾಂಬನ್ನು ಹೊಂದಿದ್ದಳೆಂದು ಮತ್ತೊಬ್ಬ ೩೫ ವರ್ಷದ ಮಹಿಳೆಗೆ ೧೦ ವರ್ಷ ಸಜಾ ಮತ್ತು ದರೋಡೆಕಾರರೊಡನೆ ಸಂಪರ್ಕಕ್ಕಾಗಿ ಜೀವಾವಧಿ ಸಜಾ ಶಿಕ್ಷೆ ವಿಧಿಸಲ್ಪಟ್ಟಿದೆ. ಆಕೆಯು ೫ ತಿಂಗಳ ಗರ್ಭಿಣಿಯಾದುದರಿಂದ ಆಕೆಗೆ ಕಾರಾಗೃಹ ವಾಸದ ಶಿಕ್ಷೆ ಕೊಡಲಾಗಿದೆ.

ಲಾಹೋರಿಗೆ ಗಡಿನಾಡು ಗಾಂಧಿ

ಗಡಿನಾಡು ಗಾಂಧಿಯೆಂದು ಪ್ರಖ್ಯಾತರಾದ ಖಾನ್ ಅಬ್ದುಲ್ ಗಫಾರ್ ಖಾನರು ರಾವಲ್ಪಿಂಡಿಯಿಂದ ಲಾಹೋರಿಗೆ ೨ ದಿನಗಳಲ್ಲಿ ಪ್ರಯಾಣ ಮಾಡಲಿರುವರು. ಅವರಿಗೆ ಲಿಖಿತ ಮೂಲಕ ಅನುಮತಿ ಬರದಿದ್ದರೆ, ಈಗಿರುವ ಸ್ಥಳದಿಂದ ನೇರಕ್ಕೆ ಹೊರಟುಹೋಗುವುದಾಗಿಯೂ ಅವರು ತಿಳಿಸಿರುವರು.

ರಷ್ಯದ ಕಲಾವಿದರಿಂದ ಕನ್ನಡದಲ್ಲಿ ಗಾಯನ

ಬೆಂಗಳೂರು ೨೩

ಮೊನ್ನೆ ಸಂಜೆ ರಷ್ಯದ ಕಲಾವಿದರು ಇತ್ತ ಪ್ರದರ್ಶನದಲ್ಲಿ ಪ್ರೇಕ್ಷಕರನ್ನು ಚಕಿತಗೊಳಿಸುವಂತೆ ರಷೀದ್ ಬೇಬುಟಾಲೀವ್‌ರವರು 'ಶಾಂತಿ ಪ್ರೀತಿಸು ಮನಸ್ಸಿನ, ನೆನೆವೆ ಸಬಿಯೇ ಮತ್ತು ಸೂರ್ಯ ಅಸ್ತಮಾನಗಳು" ಎಂಬ ಎರಡು ಕನ್ನಡದ ಕೃತಿಗಳನ್ನು ಹಾಡಿದರು. ಇವನ್ನು ಕೇಳಿ ಪ್ರೇಕ್ಷಕ ವೃಂದವು ಹರ್ಷೋದ್ಗಾರ ತೆಗೆಯಿತು. ಅಲ್ಲದೆ ಸುಪ್ರಸಿದ್ಧ ಭಾರತೀಯ ಕವಿ ಮಹಮದ್ ಇಕ್‌ಬಾಲ್‌ರವರ "ಸಾರೇ ಜಹಾಂಸೆ ಅಚ್ಛಾ ಹಿಂದೂಸ್ತಾನ್ ಹಮಾರಾ" ಎಂಬ ದನ್ನೂ ಅವರು ಹಾಡಿದರು.

ಶಾಸನ ಸಭೆಗಳ ಅಧಿವೇಶನ

ಮೈಸೂರು ಸಂಸ್ಥಾನದ ವಿಧಾನ ಸಭೆಯ ಆಯವ್ಯಯ ಅಧಿವೇಶನವು ಬೆಂಗಳೂರಿನಲ್ಲಿ ಮಾರ್ಚಿ ೧೦ರಿಂದ ೩೦ರ ವರೆಗೆ ನಡೆಯುವುದು. ವಿಧಾನ ಪರಿಷತ್ತಿನ ಸಭೆಯು ೧೫ರಿಂದ ೩೦ರ ವರೆಗೆ ಸೇರುವುದು.

ಬರ್ಮಾ ಕರೆನ್ ದಂಗೆಕೋರ ನಾಯಕರಿಬ್ಬರ ಶರಣಾಗತಿ

ಬರ್ಮಾದ ಸರ್ಕಾರಿ ಸೈನ್ಯಗಳು ಪಾಪ್ಲಿಯಾಂಗ್ ಪ್ರದೇಶದಲ್ಲಿ ಕರೆನ್ ದಂಗೆಕೋರರ ಮೇಲೆ ಯಶಸ್ವಿಯಾಗಿ ಕಾರ್ಯಾಚರಣೆ ನಡೆಸಿ ಮೂರು ಆಯಕಟ್ಟಿನ ಸ್ಥಾನಗಳನ್ನು ಹಿಡಿದಿರುವುವೆಂದೂ, ಇಬ್ಬರು ಉನ್ನತ ಸ್ಥಾನದ ಕರೆನ್ ಸೈನಾಧಿಕಾರಿಗಳು ತಮ್ಮ ೨೦ ಮಂದಿ ಸಹೋದ್ಯೋಗಿಗಳು ಮತ್ತು ಮದ್ದು ಗುಂಡುಗಳೊಡನೆ ಶರಣಾಗತರಾಗಿ ಬಂದರೆಂದೂ ವರದಿಯಾಗಿದೆ. ಸರ್ಕಾರದವರು ಕಳೆದ ಮಂಗಳವಾರ ಕಾರ್ಯಾಚರಣೆ ನಡೆಸಿದಾಗ ಮೊದಲು ಅದರ ಸುಳಿವೇ ಗೊತ್ತಾಗಲಿಲ್ಲವೆಂದು ಹೇಳಲಾಗಿದೆ. ಒಂದು ಪ್ರದೇಶದಲ್ಲಿ ದಂಗೆಕಾರರ ಗುಂಪೊಂದನ್ನು ಸುತ್ತುವರಿದು ಸೋಲಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ೩ ಆನೆಗಳು, ಒಂದು ಜಪಾನ್ ತಯಾರಿಕೆಯ ಫಿರಂಗಿ ಮತ್ತು ಬಹಳವಾಗಿ ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜೂಜಾಟಕ್ಕೆ ೧ ವರ್ಷದಲ್ಲಿ ೬೦ ಕೋಟಿ ಪೌಂಡು

ಬ್ರಿಟನ್ನಿನಲ್ಲಿ ಕಳೆದ ವರ್ಷ ಜೂಜಾಟಗಳಿಗಾಗಿ ೬೦ ಕೋಟಿ ೨೦ ಲಕ್ಷ ಪೌಂಡುಗಳನ್ನು ಹಾಕಲಾಯಿತೆಂದೂ, ಹಿಂದಿನ ವರ್ಷಕ್ಕಿಂತಲೂ ಕಳೆದ ವರ್ಷದ ಮೊತ್ತವು ೨ ಕೋಟಿ ೬೦ ಲಕ್ಷವನ್ನು ಹೆಚ್ಚಿತ್ತೆಂದೂ ವರದಿಯಾಗಿದೆ.

ಲಿಸ್ಬನ್ನಿನಲ್ಲಿ ವಿಚಾರಣೆಗಾಗಿ ಗೋವಾ ದಂಪತಿಗಳ ರವಾನೆ

ಪೋರ್ಚುಗೀಸರ ವಿರುದ್ಧವಾದ ಚಟುವಟಿಕೆಗಳನ್ನು ನಡೆಸಿದರೆಂಬ ಅಪವಾದನೆಗೆ ಗುರಿಯಾಗಿರುವ ಗೋವೆಯ ವೈದ್ಯರಾದ ಡಾಕ್ಟರ್ ಪುಂಡಲೀಕ್ ಗೈತೊಂಡೆ ಮತ್ತು ಅವರ ಪತ್ನಿ ಎಡಿಲಾ ಗೈತೊಂಡೆಯವರನ್ನು ವಿಚಾರಣೆಗಾಗಿ ಪೋರ್ಚುಗೀಸರ ಹಡಗೊಂದರಲ್ಲಿ ಲಿಸ್ಬನ್ನಿಗೆ ರವಾನಿಸಲಾಗಿದೆ. ಅವರನ್ನು ಬೀಳ್ಕೊಡಲು ಗೋವದ ಅನೇಕ ಜನ ಬಂದರು ಬಳಿ ಸೇರಿದ್ದರು.

ಅಮೆರಿಕಾ ಮತ್ತು ಪಾಕಿಸ್ತಾನ ಒಪ್ಪಂದದ ಖಂಡನೆ

ಅಫ್ಘನ್ ಸಾಂಸ್ಕೃತಿಕ ನಿಯೋಗದ ನಾಯಕರ ಭಾಷಣ

ಮೈಸೂರು ೨೪

ಅಫ್ಘಾನಿಸ್ಥಾನದಿಂದ ಆಗಮಿಸಿರುವ ಸಾಂಸ್ಕೃತಿಕ ನಿಯೋಗದ ನಾಯಕರಾದ ಡಾ|| ಅಲಿ ಅಹಮದ್ ಖಾನ್ ಪೋಪಾಲ್‌ರವರು ನೆನ್ನೆ ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡಿ, ಪಾಕಿಸ್ತಾನ ಮತ್ತು ಅಮೆರಿಕಗಳಿಗೆ ಮಿಲಿಟರಿ ಒಪ್ಪಂದವಾಗುವುದನ್ನು ಅಫ್ಘಾನಿಸ್ತಾನದ ಶಾಂತಿ ಪ್ರೇಮಿ ಪ್ರಜೆಗಳು ಒಪ್ಪುವುದಿಲ್ಲವೆಂದು ತಿಳಿಸಿದರು. ಏಷ್ಯದಲ್ಲಿ ಕೊರಿಯದ ಮತ್ತೊಂದು ಘಟನೆಯು ನಡೆಯಬಾರದೆಂದೂ, ಮಾನವ ಕೋಟಿಯ ಅಭಿವೃದ್ಧಿಗೆ ಶಾಂತಿಯು ಅವಶ್ಯಕವೆಂದೂ ಅವರು ಹೇಳಿದರು. ಮುಂದೆ ಯುದ್ಧಗಳಾಗಲೀ ಒಪ್ಪಂದಗಳಾಗಲೀ ಅಥವಾ ಅಣುಶಸ್ತ್ರ ಪ್ರಯೋಗಗಳಾಗಲೀ ಕೂಡದೆಂದು ಅವರು ತಿಳಿಸಿದರು.

ಮುಂದುವರಿದು, ತಮ್ಮ ರಾಜ್ಯದಲ್ಲಿ ವಿದ್ಯಾಶಾಲೆಗಳಲ್ಲಿ ಪುಷ್ತು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಪಾಠಗಳನ್ನು ಹೇಳಿಕೊಡಲಾಗುತ್ತಿರುವುದೆಂದೂ, ಇಂಗ್ಲೀಷಿನಲ್ಲಿ ಪಾಠವೇ ನಡೆಯುತ್ತಿಲ್ಲವೆಂದೂ ಅವರು ತಿಳಿಸಿದರು.

ಕೇಡಿಗಳಿಗೆ ಶಿಕ್ಷೆ

ರಾಜಧಾನಿಯ ಕ್ರೈಂ ಬ್ರಾಂಚ್ ಪೋಲೀಸರು ಕಳ್ಳತನದ ಸಂಬಂಧವಾಗಿ ಲಕ್ಷ್ಮಣ್ ಕೇಡಿ ಮಂಜ ಉರುಫ್ ಉಗ್ರ ಉರುಫ್ ನರಸಿಂಹ ಎಂಬುವನ ಮೇಲೆ ಹೂಡಿದ್ದ ೭ ಮೊಕದ್ದಮೆಗಳಲ್ಲಿ ಮೊನ್ನೆ ತೀರ್ಪಿತ್ತು ಅಪರಾಧಿತನಿಗೆ ೯ ತಿಂಗಳ ಕಠಿಣ ಸಜಾವನ್ನೂ, ಚಿಕ್ಕ ಎಂಬ ಕೇಡಿಯ ಮೇಲೆ ಹೂಡಿದ್ದ ೫ ಮೊಕದ್ದಮೆಗಳಲ್ಲಿ ನೆನ್ನೆ ೬ ತಿಂಗಳು ಕಠಿಣ ಸಜಾವನ್ನೂ, ಹರಿಶ್ಚಂದ್ರ ರಸ್ತೆಯಲ್ಲಿರುವ ಭೈರವೇಶ್ವರ ದೇವಸ್ಥಾನದಲ್ಲಿ ಕಳ್ಳತನ ಮಾಡಿದ ಕರಿಯ ಎಂಬ ಕೇಡಿಗೆ ೧ ತಿಂಗಳ ಕಠಿಣ ಶಿಕ್ಷೆಯನ್ನೂ ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ.

ಭಾರತದ ಪ್ರಜಾ ಪ್ರಭುತ್ವದ ಮೇಲೆ ಉಪನ್ಯಾಸ

ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಮಾಲೆಯ ಅಂಗವಾಗಿ ನಾಳಿದ್ದು ಚಾಮುಂಡಿಪುರದಲ್ಲಿ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಭಾರತದಲ್ಲಿ ಪ್ರಜಾ ಪ್ರಭುತ್ವದ ಸ್ಫುರಣ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಸಹಕಾರ ಸಂಘದ ಮೂಲಕ ವಿದ್ಯುಚ್ಛಕ್ತಿ ಉತ್ಪತ್ತಿ

ಬೊಂಬಾಯಿ ಸಂಸ್ಥಾನದ ದಕ್ಷಿಣ ಸತಾರಾ ಜಿಲ್ಲೆಯ ತಾಸಗಾಂವ್ ಎಂಬಲ್ಲಿ ೩೮೦ ಜನ ಸದಸ್ಯರುಳ್ಳ ಸಹಕಾರ ಸಂಘವೊಂದು ಸ್ಥಾಪಿತವಾಗಿ ೨ ಲಕ್ಷ ರೂ ಬಂಡವಾಳದಿಂದ ೧೦೫ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ಪ್ರಯೋಗ ನಡೆಸಲಾಗುತ್ತಿದೆ. ಆ ತಾಲ್ಲೂಕಿನಲ್ಲೆಲ್ಲಾ ಕೈಗಾರಿಕೆ, ನೀರಾವರಿ ಮತ್ತು ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಸಂಸ್ಥೆ ಆಶಿಸಿದೆ.

ಆಂಧ್ರ ಶಾಸನ ಸಭೆಯಿಂದ ಕಮ್ಯೂನಿಸ್ಟರ ಸಭಾತ್ಯಾಗ

ಆಂಧ್ರ ಶಾಸನ ಸಭೆಯ ಕಮ್ಯೂನಿಸ್ಟ್ ಸದಸ್ಯರು, ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ನಡೆಸದೆ ಇದ್ದ ಬಗ್ಗೆ ಸರ್ಕಾರವನ್ನು ಖಂಡಿಸುವ ನಿರ್ಣಯವನ್ನು ನೆನ್ನೆ ಮಂಡಿಸಲಾಗಿ ಅದನ್ನು ಸಭಾಧ್ಯಕ್ಷರು ತಳ್ಳಿಹಾಕಿದುದರಿಂದ ಆ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು. ಅಧ್ಯಕ್ಷರ ರೂಲಿಂಗನ್ನು ತಮ್ಮ ಪಕ್ಷವು ಮಾನ್ಯ ಮಾಡುವುದಾದರೂ, ಸೂಚನೆಯನ್ನು ಚರ್ಚಿಸಲು ಅವಕಾಶ ದೊರೆಯದೆ ಹೋದುದರಿಂದ ತಮ್ಮ ಹಕ್ಕುಗಳನ್ನು ಮೊಟಕು ಮಾಡಿದಂತಾಗಿದೆಯೆಂದು ಪಕ್ಷದ ಮುಖಂಡರು ತಿಳಿಸಿದರು.

ಭಾಷಾವಾರು ಪ್ರಾಂತ ಸಮಿತಿಗೆ ಲಿಖಿತ ಮನವಿಗಳು

ಭಾರತದ ಸಂಸ್ಥಾನಗಳ ಪುನರ್ವ್ಯವಸ್ಥಾ ಸಮಿತಿಯವರು, ಸಾರ್ವಜನಿಕರು ಮತ್ತು ಸಂಸ್ಥೆಗಳಿಗೆ ಮಾಡಿಕೊಂಡಿರುವ ಪ್ರಾರ್ಥನೆಯಲ್ಲಿ ಸಂಸ್ಥಾನಗಳ ಪುನರ್ವಿಂಗಡನೆ ಬಗ್ಗೆ ತಮ್ಮ ಅಭಿಪ್ರಾಯವನ್ನು ಲಿಖಿತ ಮೂಲಕ ಇದೇ ಏಪ್ರಿಲ್ ೨೪ರೊಳಗೆ ಒಪ್ಪಿಸುವಂತೆ ಸೂಚಿಸಿರುತ್ತಾರೆ. ಪ್ರಶ್ನಮಾಲೆಯ ಮೂಲಕ ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯುವಂತೆ ಏರ್ಪಡಿಸಿದ್ದ ಕಾರ್ಯವನ್ನು ಸಮಿತಿಯವರು ರದ್ದು ಮಾಡಿರುತ್ತಾರೆ.

ಮಾಜಿ ಮುಖ್ಯ ಮಂತ್ರಿಯ ಠೇವಣಿ ಮುಟ್ಟುಗೋಲು

ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸಂಸ್ಥಾನದ ಶಾಸನ ಸಭೆಗೆ ನಡೆದ ಚುನಾವಣೆಗಳಲ್ಲಿ ಆ ಕ್ಷೇತ್ರದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಕರ್ನಲ್ ರಘುವೀರ ಸಿಂಗರು ಆರಿಸಿಬಂದಿರುತ್ತಾರೆ. ಇನ್ನೂ ಇಬ್ಬರು ಕಾಂಗ್ರೆಸ್ ಸ್ಪರ್ಧಿಗಳು ಗೆದ್ದಿರುತ್ತಾರೆ. ಅಕಾಲಿ ಪಕ್ಷದ ಜ್ಞಾನಸಿಂಗ್ ರಾರೇವಾಲಾ [illegible] ಪಕ್ಷದ ಮದನ ಮೋಹನ [illegible]ರವರು ಚುನಾಯಿತರಾಗಿರುವರು. ಮಾಜಿ ಮುಖ್ಯ ಮಂತ್ರಿ ರಾರೇವಾಲಾರವರು ಪರಾಜಿತರಾಗಿರುವರಲ್ಲದೆ ಠೇವಣಿಯನ್ನೂ ಸಹ ಕಳೆದುಕೊಂಡಿರುವರು.

೫೦ ಗಂಟೆ ಸತತ ಸೈಕಲ್ ಸವಾರಿ

ಹೊಳೇನರಸೀಪುರದ ೧೯ ವರ್ಷ ವಯಸ್ಸಿನ ಶ್ರೀ ಜಿ ಪಾರ್ಥಸಾರಥಿ ಎಂಬ ಯುವಕನು ಅಲ್ಲಿನ ತಾಲ್ಲೂಕು ಕಛೇರಿ ಎದುರಿನ ಮೈದಾನದಲ್ಲಿ ೫೦ ಗಂಟೆಕಾಲ ಸತತ ಸೈಕಲ್ ಸವಾರಿ ಮಾಡಿರುತ್ತಾನೆ. ಪೌರಸಭೆಯವರು ಅವನಿಗೆ ೧೦೦ ರೂ ಬಹುಮಾನವನ್ನು ಕೊಟ್ಟರು.

ಮಾಟ್ಸೆಟುಂಗರಿಗೆ ಅಸ್ವಸ್ಥತೆ ?

ಚೀಣಾದ ಅಧ್ಯಕ್ಷರಾದ ಜನರಲ್ ಮಾಟ್ಸೆಟುಂಗರು ತೀವ್ರ ರೋಗಪೀಡಿತರಾಗಿರುವರೆಂದು ವರದಿಯಾಗಿದೆ. ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಧಿವೇಶನಕ್ಕೆ ಹೋಗದೆ ಇರುವುದು ಈ ಸುದ್ದಿಗೆ ಸಮರ್ಥನೆ ಕೊಟ್ಟಿರುವುದೆಂದು ಹೇಳಲಾಗಿದೆ.

○ ಹೊಸಕೋಟೆಯಿಂದ ಬೆಂಗಳೂರಿಗೆ ೭೫೦ ರೂ ಬೆಲೆಯ ಗಂಧದ ಮರವನ್ನು ಅಕ್ರಮವಾಗಿ ಸಾಗಿಸಿದರೆಂದು ಸೈಫಾ ಮತ್ತು ಮುನಿಯಪ್ಪ ಎಂಬುವರಿಗೆ ಬೆಂಗಳೂರು ಸಿವಿಲ್ ಪ್ರದೇಶದ ನ್ಯಾಯಾಧೀಶರು [illegible] ೩ ತಿಂಗಳ [illegible] ವಿಧಿಸಿದ್ದಾರೆ.

ಆಂಧ್ರದಲ್ಲಿ ಪಾನ ನಿರೋಧದ ಕ್ರಮದಲ್ಲಿ ತೀವ್ರ ಬದಲಾವಣೆ

ಆಂಧ್ರ ಸರ್ಕಾರದವರು ನೇಮಿಸಿರುವ ಪಾನ ನಿರೋಧ ಪರಿಶೀಲನಾ ಸಮಿತಿಯವರು ಒಪ್ಪಿಸಿರುವ ವರದಿಯಲ್ಲಿ, ಅಲ್ಲಿ ಜಾರಿಯಲ್ಲಿರುವ ಪಾನನಿರೋಧ ಶಾಸನವನ್ನು ಬಿಚ್ಚುಕಡಿವೆ ಪೂರ್ಣವಾಗಿ ರದ್ದು ಮಾಡುವಂತೆ ಸಲಹೆ ಮಾಡಿರುತ್ತಾರೆಂದು ವರದಿಯಾಗಿದೆ. ಸಂಬಂಧಪಟ್ಟ ತೆರಿಗೆಯನ್ನು ಅಗ್ಗಗೊಳಿಸುವುದು, ಸೇಂದಿಯ ವ್ಯಾಪಾರಕ್ಕೆ ರಹದಾರಿ ತೆಗೆದುಹಾಕುವುದು ಮತ್ತು ದೇಶೀ ಮದ್ಯವನ್ನು ಉಪಯೋಗಿಸಲು ರಹದಾರಿಗಳನ್ನು ಯಥೇಚ್ಛವಾಗಿ ಕೊಡುವುದು ಇವೇ ಮುಂತಾದ ಸಲಹೆಗಳನ್ನು ನೀಡಲಾಗಿದೆ. ಪಾನ ನಿರೋಧವು ಶಾಸನದಿಂದ ನಿರೋಧವಾಗಿಲ್ಲವೆಂದೂ, ಬಹುವಾಗಿ ಲಂಚಗುಳಿತನಕ್ಕೆ ಬೆಂಬಲವಾಗಿ ಸಾರ್ವಜನಿಕಾಭಿಪ್ರಾಯವು ದೂರಾಗಿರುವುದು ಶಾಸನವು ವಿಫಲವಾಗಲು ಮುಖ್ಯ ಕಾರಣವಾಗಿರುವುದೆಂದೂ ಸಮಿತಿಯವರು ಹೇಳಿರುತ್ತಾರೆ. ಹೊಸ ನೀತಿಯೊಂದನ್ನು ಅನುಸರಿಸಿಕೊಂಡು ಅತ್ಯಂತ ಕಡಿಮೆ ಬಂದದ ಮದ್ಯಪಾನಕ್ಕೆ ಅವಕಾಶವೀಯಬೇಕೆಂದು ಸೂಚಿಸಲಾಗಿದೆ. ಹೊಸ ಕ್ರಮದಿಂದ ಅಧಿಕ ಸಂಪಾದನೆಯಾಗಬೇಕೆಂಬ ನೀತಿಯನ್ನು ಬಿಡುವ ತೆಯೂ ಸೂಚಿಸಲಾಗಿದೆ.

ಸೇವಾದಳದವರಿಗೆ ಜಾತ್ರೆಯಲ್ಲಿ ಸೇವೆಗಾಗಿ ಬಹುಮಾನ

ಈ ಸಲ ನಡೆದ ಮುಡುಕುತೊರೆ ಜಾತ್ರೆಯಲ್ಲಿ ಟಿ. ನರಸೀಪುರದ ವಿದ್ಯಾಶಾಲೆಯ ಸೇವಾದಳದ ೩೦ ಸ್ವಯಂಸೇವಕರು ಮತ್ತು ತಲಕಾಡು ಪ್ರೌಢಶಾಲೆಯ ಸೇವಾದಳದ ಸ್ವಯಂಸೇವಕರು ಸ್ವಚ್ಛತಾ ಕಾರ್ಯ, ಶೌಚ ಪೋಸ್ಟ್ ಗೊಬ್ಬರ ತಯಾರಿಕೆ, ಬಿಡಾರಗಳಲ್ಲಿ ಭಕ್ತಾದಿಗಳಿಗೆ ಸೌಕರ್ಯಗಳ ಏರ್ಪಾಡನ್ನು ಮಾಡಿದ್ದರು. ಜಾತ್ರೆಯಲ್ಲಿ ಅನೇಕ ಜೇಬುಗಳ್ಳರನ್ನು ಬಂಧಿಸಿ ಪೋಲೀಸರ ವಶಕ್ಕೆ ಒಪ್ಪಿಸಲಾಯಿತು. ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಎರಡೂ ಶಾಲೆಗಳ ಸ್ವಯಂಸೇವಕರಿಗೂ ಬೆಳ್ಳಿಯ ಬಟ್ಟಲುಗಳನ್ನು ಕೊಡಲಾಯಿತು. ಜಿಲ್ಲಾ ಆರೋಗ್ಯಾಧಿಕಾರಿಗಳು ಒಬ್ಬ ಸ್ವಯಂಸೇವಕನಿಗೆ 'ಉಚಿತ ಸೇವೆ' ಎಂಬ ಒಂದು ಚಿನ್ನದ ಪದಕವನ್ನು ಪಾರಿತೋಷಕವಾಗಿ ಕೊಟ್ಟರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪೀಠಿಕಾ ವಾದನ ೭ ... ಚೌಡಯ್ಯ ಸಂಗೀತ ಮಧ್ಯಾಹ್ನ ೧-೪೦ ಮತ್ತು ೨ ಗಂ ರಾತ್ರಿ ... ೩ ಚೌಡಯ್ಯ ಸಂಗೀತ ಸಂಜೆ ೫-೪೦ ಮತ್ತು ೭-೫ ವಿದ್ವಾನ್ ... ಎಸ್. ಸೋಮನಾಥ ... ವಾಚನ ೭-೪೦ ... ವಾಚನ ... ಎಸ್. ಅನಂತ ... "ಜನತಾ" ೯-೧೫ ... ಭಾಗವತರ್ ... ೯-೪೦ ... ಗೀತೆಗಳು

೧೭ ಲಕ್ಷ ೩೦ ಸಾವಿರ ರೂ. ವೆಚ್ಚದಿಂದ ಬೆಂಗಳೂರಿನಲ್ಲಿ ಅಖಿಲ ಭಾರತ ಮುಚ್ಚರ ಆಸ್ಪತ್ರೆಯನ್ನು ವಿಶ್ವಸಂಸ್ಥೆಯ ಆರೋಗ್ಯ ಸಮಿತಿಯ ಸಹಾಯದಲ್ಲೇ ಸ್ಥಾಪಿಸಲಿದೆ. ಅದಕ್ಕೆ ವರ್ಷಂಪ್ರತಿ ೧ ಲಕ್ಷ ೩೭,೫೦೦ ರೂ. ವೆಚ್ಚವಾಗುವುದೆಂದೂ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ವಸ್ತು	ರೂ ಆಣೆ	ರೂ ಆ
ಕಡಲೆಕಾಯಿ	೧೬ ೪ ೦	೨೪ ೮ ೦
ಎಳ್ಳು	೩೦ ೩ ೦	೩೩ ೩ ೦
ಹೆಸರುಬೇಳೆ	೨೪ ೦ ೦	೩೩ ೦ ೦
ಹುಚ್ಚೆಳ್ಳು	೩೫ ೦ ೦	೪೧ ೦ ೦
ತೊಗರಿಬೇಳೆ	೧೫ ೨ ೦	೨೫ ೪ ೦
ಉದ್ದಿನಬೇಳೆ	೧೧ ೧೪ ೦	೧೩ ೨ ೦
ಹುರುಳಿ	೨೫ ೮ ೦	೨೯ ೪ ೦
ಹೆಸರು	೩೪ ೨ ೦	೩೯ ೦ ೦
ಅಲಸಂದೆ	೨೭ ೦ ೦	೪೪ ೨ ೦
ಧನಿಯ	೩೦ ೦ ೦	೩೦ ೬ ೦
ತೊಗರಿ	೨೪ ೧೪ ೦	೩೦ ೦ ೦
ಕಡಲೆ	೧೬ ೬ ೦	೫೦ ೨ ೦
ಉದ್ದಿನ ಬೇಳೆ	೨೫ ೦ ೦	೩೧ ೪ ೦
ಹುರುಳಿಕಾಳು	೫ ೧೫ ೦	೮ ೪ ೦
ಸೀಗೆಕಾಯಿ	೩ ೭ ೦	೪ ೯ ೦
ಹುಣಸೇಹಣ್ಣು	೨೩ ೧೨ ೦	೩೦ ೪ ೦
ತೆಂಗಿನಕಾಯಿ ೧೦೦೦	೧೮೮ ೦ ೦	೨೦೩ ೦ ೦
ಬೆಲ್ಲ	೪ ೮ ೦	೫ ೦ ೦

ಮೈಸೂರು ಸಾಬುವಿನೊಡನೆ ನೆಹರೂ ಭೇಟಿ

ಪ್ರಧಾನಿ ನೆಹರೂರವರು ನಾಳೆ ಹಾಲಿವುಡ್ಡಿನ ಚಲನ ಚಿತ್ರ ನಟರಾದ ಮೈಸೂರು ಸಾಬುರವರನ್ನು ದೆಹಲಿಯಲ್ಲಿ ಭೇಟಿ ಮಾಡುವರು. ನಾಳೆ ತಮ್ಮನ್ನು ಕಾಣುವಂತೆ ಸಾಬುರವರಿಗೆ ನೆಹರೂರವರು ಕರೆ ಕಳುಹಿಸಿರುತ್ತಾರೆ. ಸಾಬುರವರು ಪೆಡ್ಡಾ ಕಾರ್ಯಕ್ರಮದ ಚಿತ್ರಗಳನ್ನು ತೆಗೆದುಕೊಂಡು ಅವುಗಳನ್ನು ಜೋಡಿಸಿ ಫಿಲಂ ಮಾಡುವುದರಲ್ಲಿ ನಿರತರಾಗಿರುವರು. ಪ್ರಧಾನಿ ನೆಹರೂರವರನ್ನು ನೋಡಬೇಕೆಂಬ ತಮ್ಮ ಉತ್ಕಟ ಇಚ್ಛೆಯು ಪೂರೈಸಲಿರುವುದಕ್ಕಾಗಿ ಅವರ ಸಂತೋಷಭರಿತರಾಗಿರುವರು. ತಾವು ಭಾರತಕ್ಕೆ ಎರಡು ಉದ್ದೇಶಗಳಿಂದ ಕೂಡಿ ಬಂದಿದ್ದಾಗಿಯೂ, ತಾವು ಹಾಲಿವುಡ್ಡಿಗೆ ಹೋಗಲು ೧೮ ವರ್ಷಗಳ ಹಿಂದೆ ಮೈಸೂರಿನ ಹಿಂದಿನ ಮಹಾರಾಜರು ಸೌಲಭ್ಯ ಕಲ್ಪಿಸಿದುದಕ್ಕಾಗಿ ಈಗಿನ ರಾಜಪ್ರಮುಖರಿಗೆ ಕೃತಜ್ಞತೆಯನ್ನು ಸೂಚಿಸಲೂ ಮತ್ತು ನೆಹರೂರವರನ್ನು ಭೇಟಿ ಮಾಡಲೂ ತಾವು ಉದ್ದೇಶಪಟ್ಟಿದ್ದಾಗಿ ಅವರು ಹೇಳಿದರು.

ವಿದ್ಯಾರ್ಥಿಗಳಿಗೆ ರಾಮಕೃಷ್ಣ ಮತ್ತು ವಿವೇಕಾನಂದರು ಆದರ್ಶರೆಂದು ಭಾಷಣ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನೆನ್ನೆ ನಡೆದ ಸಭೆಯ ಅಧ್ಯಕ್ಷರಾದ ಶ್ರೀ ಡಿ. ಎಸ್. ಕುಶಾಲಪ್ಪನವರು ಮಾತನಾಡಿ, ವಿದ್ಯಾರ್ಥಿಗಳು ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರಂತೆ ಉಚ್ಚ ರೀತಿಯಲ್ಲಿ ನಡೆದುಕೊಳ್ಳಬೇಕೆಂದೂ ಅವರ ಆದರ್ಶವನ್ನು ತಮ್ಮ ಧ್ಯೇಯವನ್ನಾಗಿಟ್ಟುಕೊಳ್ಳಬೇಕೆಂದೂ ತಿಳಿಸಿದರು. ಶಾಲೆಯ ಸಿಬ್ಬಂದಿಗಳು ... ಸಲ್ಲಿಸುತ್ತಿರುವ ಸೇವೆಯನ್ನು ಅವರು ಪ್ರಶಂಸಿಸಿದರು.

ಶಂಕರ ಜಯಂತಿ ಪೂಜಾ ವಿಧಾನ

ಶೈವ, ವೈಷ್ಣವ ... ಸೌರಶಾಕ್ತ ಮತ್ತು ಗಾಣಪತ್ಯ ಮತಗಳ ಆದಿ ಗುರುಗಳಾದ ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿಯು ಏಪ್ರಿಲ್ ತಿಂಗಳು ೭ನೇ ತಾ|| ನಡೆಯುವುದು. ಜಯಂತಿಯನ್ನು ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ ಆಚರಿಸುವವರು ಕಾಲಿ (?) ಪುರದಲ್ಲಿರುವ ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ವ್ಯವಸ್ಥಾಪಕರಿಗೆ ಮಾರ್ಚಿ ... ಒಳಗೆ ಬರೆದರೆ ಪೂಜಾ ವಿಧಾನದ ಪುಸ್ತಕವನ್ನು ಕಳುಹಿಸಿಕೊಡಲಾಗುತ್ತದೆ. ಪೂಜಾ ವಿಧಾನವನ್ನು ತರಿಸಿಕೊಂಡನಂತರ ಪುನಃ ಬರೆದರೆ ಶ್ರೀ ಶಂಕರಾಚಾರ್ಯರ ಬೆಳ್ಳಿಯ ಪ್ರತಿಮೆಯೊಂದನ್ನು ಕಳುಹಿಸಲಾಗುವುದು.

ವುಡ್‌ಲ್ಯಾಂಡ್ಸ್

26-2-54ನೇ ಶುಕ್ರವಾರದಿಂದ

ಪ್ರತಿ ದಿನ ಮೂರು ಪ್ರದರ್ಶನಗಳು

ಗೋಯಲ್ ಸಿನಿ ಕಾರ್ಪೋರೇಷನ್‌ರವರ ಹಿಂದಿ ಚಿತ್ರ

ಆಸ್ * AAS

ಪಾತ್ರ: ಕಾಮಿನಿ ಕೌಶಲ್, ಶೇಖರ್, ಓಂ ಪ್ರಕಾಶ್ ಮತ್ತು ಗುಲಾಬ್

ತಪ್ಪದೆ ನೋಡಿರಿ !

ನಾಗಪುರದಲ್ಲೂ ಮಕ್ಕಳ ಅಪಹರಣದ ಸುದ್ದಿಯಿಂದ ಗಾಬರಿ

ಮಕ್ಕಳನ್ನು ಅಪಹರಿಸಲಾಗುತ್ತಿದೆಯೆಂಬ ವದಂತಿಯು ಕಳೆದ ಗುರುವಾರ ನಾಗಪುರದಲ್ಲಿ ಹರಡಿ ಅಲ್ಲಿನ ಹಲವು ಶಾಲೆಗಳು ಆ ದಿನ ಮುಚ್ಚಲ್ಪಟ್ಟವು. ಅನೇಕ ಮಾತಾಪಿತೃಗಳು ಮತ್ತು ಪೋಷಕರುಗಳು ಶಾಲೆಗಳಿಗೆ ಹೋಗಿ ತಮ್ಮ ಮಕ್ಕಳನ್ನು ಕರೆದುಕೊಂಡು ಹೋದರು. ನಂತರ ಪೋಲೀಸರು ಊರಿನಲ್ಲೆಲ್ಲಾ ಲೌಡ್ ಸ್ಪೀಕರ್ ಮುಖಾಂತರ ಸುದ್ದಿಗೆ ಆಧಾರವಿಲ್ಲವೆಂದು ಪ್ರಚಾರ ಮಾಡಿದರು.

ಚಾಮರಾಜನಗರ ತಾಲ್ಲೂಕು ಕಾಂಗ್ರೆಸ್ ಕಾರ್ಯದರ್ಶಿಗಳ ಮನವಿ

ಚಾಮರಾಜನಗರ ತಾಲ್ಲೂಕಿನ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯವರಾದ ಶ್ರೀ ಎಂ. ನಂಜುಂಡ ಶೆಟ್ಟಿಯವರು ಮನವಿಯೊಂದನ್ನು ಸಲ್ಲಿಸಿ, ಈ ತಿಂಗಳು ೨೮ನೇ ತಾ|| ನೊಳಗಾಗಿ ಮಹಾಜನರು ಕಾಂಗ್ರೆಸ್ ಸಂಸ್ಥೆಯ ಪ್ರಾಥಮಿಕ ಸದಸ್ಯರಾಗಬೇಕೆಂದೂ ಕ್ರಿಯಾಸದಸ್ಯರಾಗಲಿರುವವರೂ ಸಹ ಇದೇ ಹೊತ್ತಿನೊಳಗೆ ಸದಸ್ಯರಾಗಬೇಕೆಂದೂ ಕೋರಿರುತ್ತಾರೆ.

ವಾರ್ಷಿಕೋತ್ಸವ

ಮೈಸೂರು ಸರ್ಕಾರಿ ಟ್ರೈನಿಂಗ್ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವನ್ನು ಸಧ್ಯದಲ್ಲೇ ನಡೆಸಲಾಗುವುದು. ಹಳೆಯ ವಿದ್ಯಾರ್ಥಿಗಳು ಸಹಕರಿಸಬೇಕೆಂದು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಕನ್ನಡ ಪ್ರಾಕ್ಟೀಸಿಂಗ್ ಮಿಡಲ್ ಸ್ಕೂಲಿನ ಉಪಾಧ್ಯಾಯರಾದ ಶ್ರೀ ಎ. ಎಸ್. ಕೃಷ್ಣಮೂರ್ತಿಯವರಿಗೆ ಬರೆದು ಕೇಳಬೇಕೆಂದು ಸೂಚಿಸಲಾಗಿದೆ.

M G M's Spectacular Technicolor Romance

The Gala Show of

BEAUTY, FUN & MUSIC

The True Story of the Queen of Bathing Beauty

With - Esther Williams Victor Mature Walter Pidgeon and David Brian In

MILLION DOLLAR MERMAID

From 26-2-54 Daily 3 Shows

AT SRI GAYATHRI,

MYSORE

ಒಲಂಪಿಯಾ

24-2-54 ರಿಂದ ಜನಭರಿತವಾದ ೩ ನೇ ವಾರ

ಪ್ರತಿ ಸಂಸಾರವೂ ನೋಡಿ ಆನಂದಿಸಬೇಕಾದಂತಹ ಅತ್ಯುತ್ತಮ ಸಾಮಾಜಿಕ ಹಿಂದಿ ಚಿತ್ರ

ಮ್ಯೂಸಿಕಲ್ ಪಿಕ್ಚರ್ಸ್ **ಜೀವನ ಜ್ಯೋತಿ**

ಪಾತ್ರ - ಚಾಂದ್ ಉಸ್ಮಾನಿ, ಶಶಿಕಲಾ ಮತ್ತು ಶಮ್ಮಿ ಕಪೂರ್

— ಮುಂದಿನ ಬದಲಾವಣೆ —

ಅಶೋಕ್ ಕುಮಾರ್‌ರವರ **ಪರಿಣೀತಾ**

ನಿರ್ದೇಶನ- ಬಿಮಲ್ ರಾಯ್

ಕಳ್ಳತನಕ್ಕಾಗಿ ಚಿತ್ರದುರ್ಗದವನ ಬಂಧನ

ಶ್ರೀರಂಗಪಟ್ಟಣ, ೨೧

ಇಲ್ಲಿನ ಪ್ರಭುದೇವಾ ಸ್ಟೋರ್ಸ್ ಅಂಗಡಿಯಲ್ಲಿ ೮-೧೦ ದಿನಗಳ ಹಿಂದೆ ಪ್ರತಿ ರಾತ್ರಿಯೂ ಬೀಗವನ್ನು ತೆಗೆದು ಸಾಮಾನುಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಸಂಬಂಧದಲ್ಲಿ, ಪರೀಕ್ಷೆ ನಡೆಸಲು ಅಂಗಡಿಯವರು ಕಳೆದ ಶನಿವಾರ ಅಲ್ಲಿಯೇ ರಾತ್ರಿ ಇದ್ದು ಹೊರಗಡೆ ಬೀಗ ಹಾಕಿದ್ದರೆಂದೂ, ಒಬ್ಬನು ಬಾಗಿಲನ್ನು ತೆರೆದು ಒಳಗೆ ಬಂದಾಗ ಅವನನ್ನು ಹಿಡಿಯಲು ಅವರು ಪ್ರಯತ್ನಪಟ್ಟು ಅವನು ಓಡಿ ಹೋದನೆಂದೂ, ನಂತರ ಗಸ್ತು ಪೋಲೀಸರ ಸಹಾಯದಿಂದ ಅವನನ್ನು ಬಂಧಿಸಲಾಯಿತೆಂದೂ ವರದಿಯಾಗಿದೆ. ಅವನ ಬಳಿ ಅಂಗಡಿಗೆ ಸೇರಿದ ೬೦೦ ರೂಗಳ ಸಾಮಾನುಗಳು ದೊರೆತಿವೆ. ಅವನ ಹೆಸರು ಅಬ್ದುಲ್ ಖಾದರ್ ಎಂದೂ, ಆತನು ಚಿತ್ರದುರ್ಗದವನೆಂದೂ ತಿಳಿದುಬಂದಿದೆ.

ನೆಹರೂ ಒಪ್ಪಂದ ಖಂಡಿಸಿದ ಯುವತಿಗೆ ಅರ್ಧ ಚಂದ್ರ

ಕರಾಚಿಗೆ ಹೋಗಿರುವ ಭೋಪಾಲಿನ ಯುವತಿ ಆಲಿಯಾ ಅನ್ಸಾರಿ ಎಂಬಾಕೆಯು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಿ ನೆಹರೂ ಮತ್ತು ಪಾಕಿಸ್ತಾನಗಳ ಮಿಲಿಟರಿ ಒಪ್ಪಂದವನ್ನು ಖಂಡಿಸಿದುದಕ್ಕಾಗಿ ಆಕೆಯು ೨೪ ಗಂಟೆಗಳಲ್ಲಿ ಪಾಕಿಸ್ತಾನದಿಂದ ಹೊರಕ್ಕೆ ಹೊರಟು ಹೋಗುವಂತೆ ಅಧಿಕಾರಿಗಳು ಸೂಚಿಸಿರುತ್ತಾರೆ. ಕಳೆದ ಡಿಸೆಂಬರ್ ತಿಂಗಳು ಕರಾಚಿಯಲ್ಲಿ ನಡೆದ ಅಖಿಲ ಪಾಕಿಸ್ತಾನ ವಿದ್ಯಾರ್ಥಿಗಳ ಸಮ್ಮೇಳನಕ್ಕಾಗಿ ಆಕೆಯು ಭೋಪಾಲಿನಿಂದ ಹೋಗಿದ್ದಳು.

SRI GANESHA

TALKIES

From 25-2-54 · For 3 Days

Universal Picture Presents

THE STORY OF THE GREAT DRIVE IN THE YELLOW STONE

In Technicolor

GUN SMOKE

Featuring Audy Murphy, Susan Cabot & Paul Kelly

— NEXT CHANGE :—

Columbia's

GOLDEN HAWK

(In Technicolor)

ನೋಟೀಸು

ಮೈಸೂರು ಡಿವಿಜನ್ ಕೋ ಆಪರೇಟಿವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ,

Case No 355 of 53-54

ವಾದಿ: ದಿ ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಚಾಮುಂಡಿ ರಸ್ತೆ, ಮೈಸೂರು

Vs.

ಪ್ರತಿವಾದಿ: ಡಿ. ವಿ. ಅಶ್ವತ್ಥನಾರಾಯಣ ರಾವ್, ಬಿ. ಎಸ್‌ಸಿ., (Ex) ಆರ್ಗನೈಜರ್, ಹೆಲ್ತ್ ಯೂನಿಯನ್ ಕೌನ್ಸಿಲ್, ಮೈಸೂರು.

ಮೇಲ್ಕಂಡ ಪ್ರತಿವಾದಿಯು ತಾರೀಖು 26 2-1954 ನೇ ಸುಮಾರು ಏಪ್ರಿಲ್ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಲು ಈ ಮೂಲಕ ತಿಳಿಸಿರುತ್ತೆ. ತಪ್ಪಿದರೆ ಏಕಪಕ್ಷ (Ex parte) ತೀರ್ಪು ಮಾಡಲಾಗುತ್ತೆ ತಿಳಿಯುವುದು.

M. KRISHNAPPA,

ರಿಜಿಸ್ಟ್ರಾರ್

26—2—54 ರಿಂದ :: ಅಮೋಘ ಪ್ರಾರಂಭ

ಪ್ರಭಾ ಪಿಕ್ಚರ್ ಹೌಸಿನಲ್ಲಿ

ಪ್ರತಿ ದಿನ ಮೂರು ಆಟಗಳು

ಮಾಡರ್ನ್ ಥಿಯೇಟರ್ಸ್‌ರವರ ಜನಪ್ರಿಯ ಪೌರಾಣಿಕ ಕನ್ನಡ ಚಿತ್ರ

* ದೇವಕನ್ನಿಕಾ *

ಪಾತ್ರ - ಇಂದುಶೇಖರ್, ಹೆಚ್. ಆರ್. ಶಾಸ್ತ್ರಿ, ಕಾಂತಿಗ್ರಾಂ, ಮುರಿರಾವ್, ಬಿ. ಎನ್. ಬಾಲಕೃಷ್ಣ, ಮಾಸ್ಟರ್ ಜ್ಞಾನೇಶ್ವರ್, ಜಾನಕಿ, ರಮಾದೇವಿ, ಇಂದಿರಾ, ಕುಮಾರಿ ವಿಮಲಾ

ಕಥೆ, ಸಂಭಾಷಣೆ, ಹಾಡುಗಳು: ಹುಣಸೂರು ಕೃಷ್ಣಮೂರ್ತಿ | ದಿಗ್ದರ್ಶನ: ಟಿ. ಆರ್. ರಾವ್ | ಸಂಗೀತ: ಜಿ. ರಾಮನಾಥನ್

[A RAJSHRI RELEASE

Edited, Printed and Published by A. R Nagarajan at Sadhvi Press, D. Subbiah Road, Mysore

ರಿಜಿಸ್ಟರ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 446

ಸಾಧ್ವಿ

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨] MYSORE : THURSDAY 25 2-1954 : ಮೈಸೂರು : ಗುರುವಾರ ೨೫-೨-೧೯೫೪ [ಸಂಚಿಕೆ ೦೯೧

– ಈಜಿಪ್ಟಿನ ಅಧ್ಯಕ್ಷ ಜನರಲ್ ನಗೀಬರ ರಾಜೀನಾಮೆ –

ಐದು ಜನ ಬಸ್ ಮಾಲೀಕರ ಮೇಲೆ ಮೊಕದ್ದಮೆ

ಕೈಗಾರಿಕಾ ನ್ಯಾಯಾಲಯದ ತೀರ್ಪನ್ನು ಜಾರಿಗೆ ಕೊಡದ ಬಗ್ಗೆ

ಮೈಸೂರು ೨೪

ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ಕೈಗಾರಿಕಾ ನ್ಯಾಯಾಲಯದಲ್ಲಿ ಹಲವು ಬಸ್ಸುಗಳ ಮಾಲೀಕರ ಮೇಲೆ ಹೂಡಿದ್ದ ಮೊಕದ್ದಮೆಗಳಲ್ಲಿ ನ್ಯಾಯಾಲಯದವರ ತೀರ್ಪನ್ನು ಇದುವರೆಗೂ ಪಾಲಿಸದೆ ಉಲ್ಲಂಘಿಸಿರವ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ನಗರದ ಒನೇ ನ್ಯಾಯಾಧೀಶರ ಕೋರ್ಟಿನಲ್ಲಿ ಚಾಮುಂಡಿ, ರಹಮಾನಿಯ, ಹಬ್ಬೀರ್, ಕೆ ಬಿ ವ ಶ್ರೀ ಲಕ್ಷ್ಮೀದೇವಿ ಮೋಟಾರು ಸರ್ವೀಸ್ಸುಗಳ ಮಾಲೀಕರ ಮೇಲೆ ಮೊಕದ್ದಮೆ ಹೂಡಿರುತ್ತಾರೆ

ಮಗನಿಂದ ತಂದೆಯು ಕೊಲೆಯಾದ ಆಪಾದನೆ

ಮೈಸೂರು ತಾಲ್ಲೂಕು ದಾಸನಕೊಪ್ಪಲಿನಲ್ಲಿ ಕರೀಗೌಡ ಎಂಬುವನನ್ನು ಅವನ ಮಗ ನಿಂಗಯ್ಯ ಎಂಬಾತನು ಕಳೆದ ೭ ನೇ ತಾ|| ಅವರ ಹೊಲದ ಬಳಿ ಕಲ್ಲಿನಿಂದ ಹೊಡೆದು ಜಜ್ಜಿ ಕೊಲೆ ಮಾಡಿದನೆಂದು ನಗರದ ಎರಡನೇ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ 'ತಂದೆಯನ್ನು ಕೊಂದು ಶವವನ್ನು ಅಲ್ಲಿಯೇ ೨-೩ ದಿನಗಳ ವರೆಗೆ ಹೂತಿಟ್ಟು, ನಂತರ ಅಪಾದಿತನು ಸುಟ್ಟುಹಾಕಿದನೆಂದೂ, ಎ ಸ್ತಿನ ವಿಷಯದಲ್ಲಿ ತಂದೆ ಮಕ್ಕಳಿಗೆ ವ್ಯಾಜ್ಯ ವಾಗಿತ್ತೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೩೦ ಕ್ಕೆ ಆಲ್ ಇಂಡಿಯಾ ನಿಲಯ ಮತ್ತು ೬-೪೫ ಪ್ರಸಾರವಾಗಿ ಗಂಗೂಬಾಯಿ ಹಾನಗಲ್, ಸರ್ದಾರ್ ಬಾಯಿ ಕರೆಡ್ಕರ್ ರಿಂದ ಹಿಂದೂಸ್ತಾನಿ ೧-೪೦ ಮತ್ತು ೧-೫೦ ಸಂಗೀತ ... ಇಂದಿರಾ ಶ್ರೀನಿವಾಸನವರಿಂದ ... ಸಂಜೆ ೫-೩೦ ಕ್ಕೆ ಆಲ್ ಇಂಡಿಯಾ ... ೬-೧೫ ಮತ್ತು ೭-೧೫ ಎಲ್ ಎಸ್ ... ಸಂಗೀತ ೭-೪೦ ... ರಾಜ್ಯದ ... ಗೀತೆ ... ಪಂಚವಟಿ ಯಕ್ಷಗಾನ ನಾಟಕ ೯ ೪೦ ಇಂದ್ರ ಧನುಷ್ ಹಿಂದಿಯಲ್ಲಿ ವಿವಿಧ ಕಾರ್ಯಕ್ರಮ

ಸಂಸ್ಥಾನದಲ್ಲಿ ನಿರುದ್ಯೋಗದ ಸರ್ವೆ

ಬೆಂಗಳೂರು ೨೪

ಸಂಸ್ಥಾನದಲ್ಲಿ ನಿರುದ್ಯೋಗದ ಬಗ್ಗೆ ಸರ್ಕಾರದವರು ಸರ್ವೆಯೊಂದನ್ನು ಏರ್ಪಡಿಸಿರುತ್ತಾರೆ. ಅಂಕಿ ಅಂಶಗಳ ಕಛೇರಿಯವರು ನಡೆಸಲಿರುವ ಸರ್ವೇ ಸಂಬಂಧವಾಗಿ ಸಂಸ್ಥಾನದಲ್ಲಿರುವ ನಿರುದ್ಯೋಗಿಗಳು ತಮ್ಮ ಹೆಸರು, ವಿಳಾಸ, ವಯಸ್ಸು, ಲಿಂಗ ಮತ್ತು ಅರ್ಹತೆಗಳ ವಿವರಗಳನ್ನು ಇಲಾಖೆಯ ಡೈರೆಕ್ಟರಾದ ವ್ಯವಸಾಯ ಡೈರೆಕ್ಟರಿಗೆ ತಿಳಿಸುವಂತೆ ಕೋರಲಾಗಿದೆ ಅ ಹಾಕೆಯಲ್ಲಿ ಸಾಧಾರಣ, ಪಾರಿಭಾಷಿಕ ಮತ್ತು ಇತರ ವಿದ್ಯಾಭ್ಯಾಸದ ಮಟ್ಟ, ನಿರುದ್ಯೋಗಿಗಳಾಗಿರುವ ಅವಧಿ ಮತ್ತು ಕಾರಣ ಇವುಗಳನ್ನು ತಿಳಿಸುವಂತೆಯೂ ಸೂಚಿಸಲಾಗಿದೆ

ಇಂಜನಿಯರುಗಳ ರಚನಾತ್ಮಕ ಕಾರ್ಯದಿಂದ ವಿಶ್ವಶಾಂತಿ ಸಾಧನೆ

ನ್ಯಾಷನಲ್ ಇನ್ಸ್ಟಿಟ್ಯೂಟ್ ಸಂಘದಲ್ಲಿ ಎಂ ವಿ ಕೃಷ್ಣರಾಯರ ಭಾಷಣ

ಮೈಸೂರು ೨೪

ಇಲ್ಲಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ ಸಂಘದಲ್ಲಿ ಮಹಾರಾಜಾ ಕಾಲೇಜಿನ ಪ್ರೊಫೆಸರ್ ಡಾ|| ಎಂ ವಿ ಕೃಷ್ಣರಾಯರು ನೆನ್ನೆ ಸಂಘದ ವಾರ್ಷಿಕ ಭಾಷಣ ವನ್ನು ಮಾಡಿ ಭಾರತದ ಪ್ರಗತಿಗೆ ಇಂಜನಿಯರುಗಳ ಸೇವೆಯು ಅತ್ಯವಶ್ಯಕವಾಗಿರುವುದೆಂದು ತಿಳಿಸಿದರು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಇಂಜನಿಯರುಗಳು ರಚನಾತ್ಮಕ ಕಾರ್ಯಗಳನ್ನು ನಡೆಸಬೇಕೆಂದು ಅವರು ಹೇಳಿದರು ಸಂಸ್ಥಾನದ ... ಪ್ರಧಾನ ... ರೋಣಮಣಿ ... ಅಧ್ಯಕ್ಷತೆ ವಹಿಸಿದ್ದರು

ಶ್ರೀ ವಿ ಚಂದ್ರಶೇಖರನ್ ರ ಪ್ರಾರ್ಥನೆ ಸಂಘದ ಅಧ್ಯಕ್ಷ ಶ್ರೀ ಬಿ ಎಸ್ ... ರವರಿಂದ ಸ್ವಾಗತ ಭಾಷಣ ಕಾರ್ಯದರ್ಶಿ ಶ್ರೀ ಹೆಚ್ ಎಸ್ ತಿ ಮಯ್ಯಂಗಾರ್ಯರಿಂದ ವರದಿ ಮತ್ತು ಶ್ರೀ ಎಸ್ ಆರ್ ... ರಿಂದ ಕ್ರೀಡೆಗಳ ಬಗ್ಗೆ ವರದಿಗಳಾದನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು

ಡಾ|| ಕೃಷ್ಣರಾಯರು ಭಾಷಣ ಮಾಡಿದ ಮೇಲೆ, ಅಧ್ಯಕ್ಷರು ಮಾತನಾಡಿ ಇಂಜನಿಯರುಗಳ ಅವಶ್ಯಕತೆಯು ಈಗ ಬಹಳವಾಗಿರವುದೆಂದೂ, ನ್ಯಾಷನಲ್ ಇನ್ಸ್ಟಿಟ್ಯೂಟು ಸಂಸ್ಥೆಯು ಬಹಳವಾಗಿ ಅಭಿವೃದ್ಧಿ ಹೊಂದಿರುವುದೆಂದೂ, ಅದು ಇನ್ನೂ ಚೆನ್ನಾಗಿ ಬೆಳೆಯಲೆಂದೂ ಹಾರೈಸಿದರು

ಜ್ಯೋತ್ಸ್ನಾ ಎಂಬ ವಿದ್ಯಾರ್ಥಿನಿಯಿಂದ ನೃತ್ಯವೂ, ಕಾಲೇಜು ಸಂಘದ ಕಲಾವಿದರಿಂದ ನಾಟಕವೂ ಆದುವು

ಹೈದರಾಬಾದಿನಲ್ಲೂ ಆಹಾರದ ಹತೋಟಿ ರದ್ದು

ಹೈದರಾಬಾದಿನಲ್ಲಿ ಈ ದಿನದಿಂದ ಆಹಾರ ಧಾನ್ಯಗಳ ಮೇಲಿರುವ ಎಲ್ಲಾ ಹತೋಟಿಗಳನ್ನೂ ತೆಗೆಯಲಾಗುವುದು ಹೈದರಾಬಾದು ಮತ್ತು ಸಿಕಂದರಾಬಾದು ನಗರಗಳಲ್ಲಿಯೂ ಅಕ್ಕಿಯನ್ನು ಹತೋಟಿಯಿಂದ ತಪ್ಪಿಸಲಾಗುವುದು ಅಲ್ಲಿ ಪಡಿತರವನ್ನು ಈಗ ಸೇರಿಗೆ ... ಕಾಸಿನಿಂದ ಅದು ... ಕಾಸಿಗೆ ... ಗಿದೆ

ಕೋಡಾಕ ಸೀಸೆ ಕಾರ್ಕ್ ನುಂಗಿದವನಿಗೆ ಶಸ್ತ್ರ ಚಿಕಿತ್ಸೆ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೆನ್ನೆ ಕಿವಿ, ಮೂಗು, ಗಂಟಲು ವ್ಯಾಧಿಗಳ ಚಿಕಿತ್ಸಾ ಪ್ರವೀಣರಾದ ಡಾ|| ಟಿ ಮಾಣಿಕ್ಯಂರವರು ಮುಸ್ಲಿಮ ನೊಬ್ಬನಿಗೆ ಶಸ್ತ್ರ ಚಿಕಿತ್ಸೆ ನಡೆಸಿ, ಆತನ ಅನ್ನ ನಾಳದಲ್ಲಿ ಸೇರಿದ್ದ ಸೋಡಾ ಸೀಸೆಯ ರಬ್ಬರ್ ಕಾರ್ಕನ್ನು ತೆಗೆದರು ಕೆಲವು ದಿನಗಳ ಹಿಂದೆ ನಾಳದಲ್ಲಿ ಕಾರ್ಕು ಸೇರಿ, ಅವನಿಗೆ ತುಂಬಾ ತೊಂದರೆಯಾಗಿ ಆಸ್ಪತ್ರೆಗೆ ಬಂದಿದ್ದನು ವೈದ್ಯರ ಚಾತುರ್ಯದ ಬಗ್ಗೆ ಅಲ್ಲಿಗೆ ಬಂದಿದ್ದವರೆಲ್ಲರೂ ಆಶ್ಚರ್ಯ ಮತ್ತು ಹರ್ಷವನ್ನು ವ್ಯಕ್ತಪಡಿಸಿದರು

ಈಜಿಪ್ಟಿನ ಅಧ್ಯಕ್ಷ ಜನರಲ್ ನಗೀಬರ ರಾಜೀನಾಮೆ

ದೇಶದಲ್ಲೆಲ್ಲಾ ಜರೂರು ಪರಿಸ್ಥಿತಿಯ ಘೋಷಣೆ

ಈಜಿಪ್ಟಿನ ಅಧ್ಯಕ್ಷರಾದ ಜನರಲ್ ನಗೀಬರು ತಮ್ಮ ಎಲ್ಲಾ ಸ್ಥಾನಗಳಿಗೂ ರಾಜೀನಾಮೆ ಯಿತ್ತಿರುವರೆಂಬ ವಾರ್ತೆ ಬಂದಿರುತ್ತದೆ ಅವರ ಸ್ಥಾನದಲ್ಲಿ ಉಪಾಧ್ಯಕ್ಷರಾದ ಅಬ್ದೆಲ್ ನಸೀರ್‌ರವರು ಪ್ರಧಾನ ಮಂತ್ರಿಯಾಗಿ ಅಧಿಕಾರವ ಹಿಡಿದುಕೊಂಡು ದೇಶದಲ್ಲೆಲ್ಲಾ ಜರೂರು ಪರಿಸ್ಥಿತಿಯನ್ನು ಘೋಷಿಸಿರುವುದಾಗಿಯೂ ತಿಳಿದುಬಂದಿದೆ.

ಜನರಲ್ ನಗೀಬರ ಕ್ರಾಂತಿಕಾರಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೂ ರಾಜೀನಾಮೆಯಿತ್ತಿರುವುದಾಗಿ ಗೊತ್ತಾಗಿದೆ ... ಕ್ಕಿಂತಲೂ ಹೆಚ್ಚಿನ ಅಧಿಕಾರವು ಬೇಕೆಂದು ಅವರು ಕೋರಿದುದಾಗಿಯೂ ಅದಕ್ಕೆ ಕ್ರಾಂತಿಕಾರಿ ಪಕ್ಷವು ಒಪ್ಪಲಿಲ್ಲವೆಂದೂ ಹೇಳಲಾಗಿದೆ ಮಂತ್ರಿಗಳನ್ನೂ ಮತ ಅಧಿಕಾರಿಗಳನ್ನೂ ನೇಮಿಸುವುದ ... ಮತ್ತು ಸಮಿತಿಯ ನಿರ್ಧಾರಗಳನ್ನು ಮಾರ್ಪಾಡು ಮಾಡುವುದೇ ಮುಂತಾದ ವಿಷಯಗಳಲ್ಲಿ ತಮಗೆ ಪೂರ್ಣಾಧಿಕಾರವಿರಬೇಕೆಂದು ಅವರು ಅಪೇಕ್ಷಿಸಿದ್ದರೆಂಗಿ ಭಾವಿಸಲಾಗಿದೆ

ಗಲಾಟೆ ಇರದಿದ್ದರೂ ಬೀದಿ ಬೀದಿಗಳಲ್ಲಿ ಭಯಂಕರ ... ರಾಜ್ಯತ್ಯಾಗ ಮಾಡಿದನಂತರ ಜನರಲ್ ನಗೀಬರು ಅಧಿಕಾರಕ್ಕೆ ... ಬಿದ್ದರು

ಸಾರ್ವತ್ರಿಕ ಚುನಾವಣೆಗಳು ನಡೆಯುವವರಿಗೆ ಈಜಿಪ್ಟಿನ ಅಧ್ಯಕ್ಷ ಸ್ಥಾನವು ಖಾಲಿಯಿರುವುದೆಂದು ಹೇಳಲಾಗಿದೆ

ಪಶ್ಚಿಮ ರಾಷ್ಟ್ರಗಳಿಂದ ಶಸ್ತ್ರಾಸ್ತ್ರ ಸಹಾಯಕ್ಕಾಗಿ ಇರಾಕಿನ ಬೇಡಿಕೆ

ಪಶ್ಚಿಮ ರಾಷ್ಟ್ರಗಳೊಡನೆ ಇರಾಕ್ ದೇಶವು ಸಹಕರಿಸುವುದೆಂದೂ ಆಕ್ರಮಣದ ವಿರುದ್ಧವಾಗಿ ತನ್ನ ರಕ್ಷಣಾ ಬಲವನ್ನು ಹೆಚ್ಚಿಸಿಕೊಳ್ಳಲು ಪಶ್ಚಿಮ ದೇಶಗಳ ಶಸ್ತ್ರಾಸ್ತ್ರಗಳನ್ನು ಅದು ಕೇಳಲಿರುವುದೆಂದೂ ಇರಾಕಿನ ಪ್ರಧಾನಿ ಡಾ|| ಫಧಿಲ್ ಜಮೆಲಿಯವರು ತಿಳಿಸಿರುತ್ತಾರೆ.

ಕೋಳಿ ಮರಿಗೆ ೪ ಕಾಲುಗಳು

ಕೊಪ್ಪ ತಾಲ್ಲೂಕಿನ ಗೋಕಲ್ ಎಂಬಲ್ಲಿ ಶ್ರೀ ಸಿದ್ದಪ್ಪನಾಯಕರ ಮನೆಯಲ್ಲಿ ಕೋಳಿಯೊಂದರ ಆರು ಮರಿಗಳ ಪೈಕಿ ಒಂದಕ್ಕೆ ೪ ಕಾಲುಗಳಿದ್ದು ಪ್ರಾಣಿಯಂತೆ ಕಾಣಿಸುತ್ತಿದೆ

ಮೈಸೂರು ಸರ್ಕಾರದ ಆಯವ್ಯಯದಲ್ಲಿ ಭಾರಿ ಖೋತಾ

ಸ್ವಂ ಸು ಫೋ॰] ಬೆಂಗಳೂರು ೨೪

ಸಂಸ್ಥಾನದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಭಾರಿ ಖೋತಾ ಆಗುವ ನಿರೀಕ್ಷೆಯಿದೆಯೆಂದು ತಿಳಿದುಬಂದಿದೆ ಖೋತಾ ೩ ಕೋಟಿಗೂ ಮಿಗಿಲಾಗಬಹುದಾಗಿದೆ

ಈ ದಿನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಶಾಸನ ಸಭಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಡೆದು, ಸಂಸ್ಥಾನದ ಆಯವ್ಯಯ ಪಟ್ಟಿಯ ಅಂದಾಜನ್ನು ಪರಿಶೀಲಿಸಲಾಯಿತು ಆಯವ್ಯಯದಲ್ಲಿ ಬರುವ ಭಾರಿ ಖೋತಾವನ್ನು ಭರ್ತಿ ಮಾಡುವ ವಿಷಯ ಚರ್ಚಿಸಲ್ಪಟ್ಟಿತು

ವಿಶ್ವವಿದ್ಯಾಲಯದ ಬಜೆಟ್ ೮೩ ಲಕ್ಷ ರೂ.

ಸರ್ಕಾರದಿಂದ ೮೦|| ಲಕ್ಷ ರೂ. ಗ್ರಾಂಟು

ಸ್ವಂ ಸು ಫೋ॰] ಬೆಂಗಳೂರು ೨೪

ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಈ ದಿನ ವೈಸ್‌ಛಾನ್ಸಲರ ಅಧ್ಯಕ್ಷತೆಯಲ್ಲಿ ಸೇರಿದು ಆಯವ್ಯಯ ಪಟ್ಟಿಯನ್ನು ಪರಿಶೀಲಿಸಲಾಯಿತು ೮೩ ಲಕ್ಷ ರೂ. ವಿನ ಅಂದಾಜು ಆಯವ್ಯಯವನ್ನು ಸಿದ್ಧಗೊಳಿಸಿ, ಸರ್ಕಾರದಿಂದ ೬೨ ಲಕ್ಷ ರೂ ಗಳ ಗ್ರಾಂಟನ್ನು ಕೇಳಲಾಗಿದೆ. ಸರ್ಕಾರದವರು ಈ ಮೊದಲೇ ಪತ್ರ ಬರೆದು ೪೭ ಲಕ್ಷ ರೂ. ಕೊಡುವುದಾಗಿ ತಿಳಿಸಿದ್ದರೆಂದೂ ಆದರೆ ನೆನ್ನೆ ಬರೆದಿರುವ ಪತ್ರದಲ್ಲಿ ೮೦|| ಲಕ್ಷ ರೂ. ಕೊಡುವುದಾಗಿ ಹೇಳಿರುವರೆಂದೂ ಅಧ್ಯಕ್ಷರು ತಿಳಿಸಿದರು.

ಶಾಸನ ಶಾಲೆಯ ಮೇಲೆ ರಿಟ್ ಅರ್ಜಿ ಪರಿಶೀಲನೆ

ಶಾಸನ ವಿಜ್ಞಾನ ಶಾಲೆಯ ಇಂಜನಿಯರಿಂಗ್ ಇಲಾಖೆ ನೌಕರರಾಗಿದ್ದು, ಕೆಲಸದಿಂದ ತೆಗೆಯಲ್ಪಟ್ಟ ಶ್ರೀ ಟಿ. ಎಂ ತಿರುವೆಂಗಳಂರವರು ಹೂಡಿರುವ ರಿಟ್ ಅರ್ಜಿಯನ್ನು ಈ ದಿನ ಹೈಕೋರ್ಟಿನಲ್ಲಿ ಶ್ರೇಷ್ಠ ನ್ಯಾಯಾಧೀಶರು ಅಡ್ಮಿಟ ಮಾಡಿಕೊಂಡರು

ಡಾ|| ನಾಗನಗೌಡರು ಸಾಮೂಹಿಕ ಯೋಜನಾ ಸಮಿತಿ ಅಧ್ಯಕ್ಷರು

ಸಂಸ್ಥಾನದ ಸಾಮೂಹಿಕ ಯೋಜನಾ ಸಮಿತಿಯ ಅಧ್ಯಕ್ಷತೆಗೆ ಶ್ರೀ ಹೆಚ್ ಎಸ್ ರುದ್ರಪ್ಪನವರು ಕೊಟ್ಟಿರುವ ರಾಜೀನಾಮೆಯು ಇದೇ ತಿಂಗಳು ೧೭ ರಿಂದ ಜಾರಿಗೆ ಬಂದಿರುವುದೆಂದೂ, ಅಂದಿನಿಂದ ವ್ಯವಸಾಯ ಸಚಿವ ಡಾ|| ಆರ್ ನಾಗನಗೌಡರೇ ಸಮಿತಿಯ ಅಧ್ಯಕ್ಷರಾಗಿರುವರೆಂದೂ ಸರ್ಕಾರದ ಆಜ್ಞೆಯಾಗಿದೆ

ಓಟಿಗಾಗಿ ದುಡ್ಡು ಕೇಳಿದ ಮುದುಕಿ

ತಿರುವಾಂಕೂರು ಕೊಚ್ಚಿ ಚುನಾವಣೆಗಳ ಸಂಬಂಧವಾಗಿ ಒಂದು ಕ್ಷೇತ್ರದಲ್ಲಿ ಒಬ್ಬ ಮುದುಕಿಯು ಹೋಗಿ ಚುನಾವಣಾಧಿಕಾರಿಯನ್ನು ತನ್ನ ಓಟಿಗಾಗಿ ೧ ರೂ ಕೊಡುವಂತೆ ಕೇಳಿದಳೆಂದೂ ಅವರು ಆಕೆಯ ಓಟನ್ನು ರದ್ದುಪಡಿಸಿ ಮನೆಗೆ ಕಳುಹಿಸಿದರೆಂದೂ ವರದಿಯಾಗಿದೆ.

ಆಂಧ್ರ ಮಂತ್ರಿಮಂಡಲವನ್ನು ಉಳಿಸಲು ಸಭಾಧ್ಯಕ್ಷರ ಓಟು

ಆಂಧ್ರದಲ್ಲಿ ಜಿಲ್ಲಾ ಬೋರ್ಡುಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ ತಿದ್ದುಪಡಿ ಮಸೂದೆಯೊಂದನ್ನು ಅಲ್ಲಿನ ಶಾಸನ ಸಭೆಯಲ್ಲಿ ನೆನ್ನೆ ಸರ್ಕಾರದವರು ತಂದಾಗ, ಪರವಾಗಿ ೫೭ ಮತ್ತು ವಿರೋಧವಾಗಿ ೫೭ ಸದಸ್ಯರು ಓಟು ಕೊಡಲಾಗಿ, ಸಭಾಧ್ಯಕ್ಷರು ತಮ್ಮ ಕ್ಯಾಸ್ಟಿಂಗ್ ಓಟನ್ನು ಸರ್ಕಾರದ ಕಡೆ ಕೊಟ್ಟುದರಿಂದ ತಿದ್ದುಪಡಿ ಮಸೂದೆಯು ಅಂಗೀಕೃತವಾಯಿತು.

○ ಕಳೆದ ಸೋಮವಾರ ರಾತ್ರಿ ಬಹಾವಲ್ಪುರದ ಗಡಿ ಬಳಿ ಭಾರತ ಮತ್ತು ಪಾಕಿಸ್ತಾನಗಳ ಶಸ್ತ್ರ ಸಜ್ಜಿತ ಪೊಲೀಸರಿಗೆ ೧೪ ಗಂಟೆಗಳ ಕಾಲ ಕಾಳಗವು ನಡೆಯಿತೆಂದೂ ಪಾಕಿಸ್ತಾನದ ಕಡೆ ಹಲವು ಸಾವು ನೋವುಗಳಾದುವೆಂದೂ ವರದಿಯಾಗಿದೆ.

ಮುದ್ರಣ ಕಾಗದದ ಮೇಲಿನ ಆಕ್ಟ್ರಾಯ್ ಸುಂಕ ತೆಗೆಯಬೇಕು

ಪೌರಸಭೆಯವರಲ್ಲಿ ನಗರದ ಪತ್ರಿಕಾ ಸಂಪಾದಕರ ಮನವಿ

ಮೈಸೂರು ೨೪

ಮೈಸೂರು ನಗರಕ್ಕೆ ಬರುವ ಮುದ್ರಣ ಕಾಗದದ (ನ್ಯೂಸ್ ಪ್ರಿಂಟ್ ಪೇಪರ್) ಮೇಲೆ ಹಾಕಲಾಗುತ್ತಿರುವ ಆಕ್ಟ್ರಾಯ್ ತೆರಿಗೆಯನ್ನು ವಜಾ ಮಾಡುವಂತೆ ಪೌರಸಭೆಯವರನ್ನು ಕೋರಿ ನಗರದ ಪತ್ರಿಕಾ ಸಂಪಾದಕರುಗಳು ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದಿರುತ್ತಾರೆ. ಬೆಂಗಳೂರು, ಮದರಾಸು, ಬೊಂಬಾಯಿ ಮುಂತಾದ ಕಡೆಗಳಲ್ಲಿ ಆ ಕಾಗದದ ಮೇಲೆ ತೆರಿಗೆಯನ್ನು ಹಾಕುತ್ತಿಲ್ಲವೆಂದೂ ಮೈಸೂರು ನಗರದಲ್ಲಿ ಮಾತ್ರ ಇದನ್ನು ವಸೂಲ್ ಮಾಡುತ್ತಿರುವುದಾಗಿಯೂ ಅವರು ತಿಳಿಸಿರುತ್ತಾರೆ.

ಮಾರಾಟದ ತೆರಿಗೆಯು ... ಆಕ್ಟ್ರಾಯ್ ತೆರಿಗೆಯನ್ನು ... ರದ್ದು ಮಾಡಬೇಕೆಂದು ಅನೇಕ ... ಒಕ್ಕೊರಲು ಬರುತ್ತಿದೆ ... ಗಳು ಸಾರ್ವಜನಿಕ ... ಜನ ಜೀವನದ ಅಭ್ಯುದಯ ... ವರ್ತಮಾನ ಪತ್ರಿಕೆಗಳಿಗೆ ... ವಸೂಲಾಗುವ ... ಪೌರಸಭೆಯವರು ... ನೀಡಬೇಕೆಂದು ... ಕೋರಿರುತ್ತಾರೆ.

ವಿವಿಧ ವಿನೋದಾವಳಿ

ರಾಜಧಾನಿಯ ... ಸಂಗೀತ ... ಮಹಿಳಾ ... ಗಂಟೆಗೆ ... ವಿಧ ವಿನೋದ ... ನಾಗಪ್ಪಾಚಾರ್ಯರ ... ನಡೆಯುವುದು ಸರ್ವರಿಗೂ ಸ್ವಾಗತವಿದೆ.

ಕವಿ ಕಾಳಿದಾಸನ ದಿನಾಚರಣೆ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜು ಸಂಸ್ಕೃತ ಸಂಘದ ಆಶ್ರಯದಲ್ಲಿ ಮಹಾಕವಿ ಕಾಳಿದಾಸನ ದಿನಾಚರಣೆಯು ... ತಿಂಗಳ ... ಸಂಜೆ ... ಗಂಟೆಗೆ ಕಾಲೇಜಿನ ... ಭವನದಲ್ಲಿ ... ಸುಪ್ರಸಿದ್ಧ ಸಾಹಿತಿಗಳಾದ ... ಅಧ್ಯಕ್ಷತೆಯಲ್ಲಿ ... ದಿನ ಶ್ರೀ ಎಸ್ ವಿ ... ಪನ್ಯಾಸ ಶ್ರೀ ಟಿ ಎಸ್ ... ರವರ ಕಾವ್ಯವಾಚನ ಮತ್ತು ಶ್ರೀ ... ರವರ ಸಂಗೀತ ಮುಂತಾದುವು ನಡೆಯುವುವು. ಮಾರನೇ ದಿನದ ಕಾರ್ಯಕ್ರಮದಲ್ಲಿ ಡಾ|| ಎಲ್ ... ಪ್ರೊ|| ... ಶ್ರೀ ಎಸ್ ವಿ ವೆಂಕಟಾಚಲಂ ಶ್ರೀಮತಿಗಳಾದ ಎಸ್ ಆರ್ ... ಭಾಗವಹಿಸುವರು. ಸರ್ವರಿಗೂ ಆಹ್ವಾನವಿದೆ.

ಜಮೀನು ಮಾರಾಟಕ್ಕಿದೆ

ಈ ಮೂಲಕ ಸಕಲ ಜನರಿಗೂ ತಿಳಿಸುವುದೇನೆಂದರೆ —

ಚಾಮುಂಡಿ ... ಪಶ್ಚಿಮ ದಿಕ್ಕಿನ ... ಜಮೀನು ... ನಂಬರು 31 ... 2 ... 8 ... ಇಷ್ಟವುಳ್ಳವರು ... ಬರಬೇಕು.

(Sd) Rev Hubert A Pitt
... Main Street
5 1 1954 ... Chamrajpet

Edited Printed and Published by A E Nagarajan at Sadhvi ... D S ... Road Mysore

ಅಧಿಕಾರಿಗಳು ಮಂತ್ರಿಗಳ ಬಳಿ ನೇರವಾಗಿ ಹೋಗಬಹುದು

ಕೆಲಸ ತಾವಕಾಶವಾಗುವುದನ್ನು ತಪ್ಪಿಸಲು ಮುಖ್ಯ ಮಂತ್ರಿಗಳ ಸಲಹೆ

ಬೆಂಗಳೂರು ೨೪

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಅಧಿಕಾರಿಗಳ ಸಭೆಯಲ್ಲಿ ಭಾಷಣ ಮಾಡಿ ಹಲವು ಇಲಾಖೆಗಳಲ್ಲಿ ಸರ್ಕಾರಿ ಕೆಲಸವು ... ತಪ್ಪಿಸಲು ಅಧಿಕಾರಿಗಳು ತಮ್ಮ ... ಇತರ ಮಂತ್ರಿಗಳ ಬಳಿ ನೇರವಾಗಿ ಬರಬಹುದೆಂದು ತಿಳಿಸಿರುತ್ತಾರೆ. ಪ್ರಜಾಪ್ರಭುತ್ವದ ಕಾಲದಲ್ಲಿ ಅಧಿಕಾರಿಗಳು ಮಾಡುತ್ತಿರುವ ಕಾರ್ಯವು ಜನರಿಗೆ ಚೆನ್ನಾಗಿ ಗೊತ್ತಾಗುವುದರಿಂದ ಅವರು ಮೆಚ್ಚುವುದಿಲ್ಲ ... ಈಗ ರಾಜ್ಯದ ... ಎಂದು ಅವರು ಹೇಳಿ ಅಧಿಕಾರಿ ವರ್ಗದವರಲ್ಲಿ ದಕ್ಷತೆ ಇರುವವರಿಗೆ ಹೆಚ್ಚು ಪುರಸ್ಕಾರ ಸಿಗುವುದೆಂದೂ ಬಡ್ತಿ ಕೊಡುವಾಗ ಸೀನಿಯಾರಿಟಿಯೊಂದನ್ನೇ ಗಮನಿಸುವುದಿಲ್ಲವೆಂದೂ ಇನ್ನುಮುಂದೆ ದಕ್ಷರಾದವರಿಗೆ ಬಡ್ತಿ ಕೊಡಲಾಗುವುದೆಂದೂ ತಿಳಿಸಿದರು.

ಅಂತರ ಸಂಸ್ಥಾನ ಮಾರಾಟ ತೆರಿಗೆ ವಿಧಾಯಕಕ್ಕೆ ನೂತನ ಮಾರ್ಗ

ಅಂತರ ಸಂಸ್ಥಾನಗಳ ಮಾರಾಟದ ತೆರಿಗೆ ಸಂಬಂಧದಲ್ಲಿ ಸುಪ್ರೀಂ ಕೋರ್ಟಿನವರು ಇತ್ತೀಚೆಗೆ ನೀಡಿದ ... ತೆರಿಗೆಯನ್ನು ವಿಧಾಯಕ ಮಾಡುವ ಬಗ್ಗೆ ಸರ್ಕಾರದವರು ಹೊಸ ಮಾರ್ಗವನ್ನು ... ಮೈಸೂರು ಸಂಸ್ಥಾನದಲ್ಲಿ ವಾಸಿಸುತ್ತಿರುವ ... ತೆರಿಗೆ ... ವ್ಯಾಪಾರಿಗಳು ... ನಡೆಸಿರು ... ಸರ್ಕಾರಕ್ಕೆ ... ವಿಷಯಗಳನ್ನು ... ಅಧಿಕಾರಿಯೊಬ್ಬರ ... ಪರಿಶೀಲಿಸುವುದಕ್ಕೆ ... ವ್ಯಾಪಾರಸ್ಥರು ... ಸಂಸ್ಥಾನದ ಅಧಿಕಾರಿಗಳ ... ತನಿಖೆ ಮಾಡಿ ... ಸರ್ಕಾರಕ್ಕೆ ... ಬೆಂಗಳೂರಿನ ಮಾರಾಟ ತೆರಿಗೆ ಅಧಿಕಾರಿಗೆ ... ವ್ಯಾಪಾರಸ್ಥರು ತಮ್ಮ ... ತೆರಿಗೆ ವಿಧಾಯಕದ ಬಗ್ಗೆ ಅಪೀಲಿಗೆ ಅವಕಾಶವುಂಟು.

ಅಸ್ಪೃಶ್ಯತೆ ವಿರುದ್ಧವಾಗಿ ಹೋರಾಟಕ್ಕೆ ದ್ರವ್ಯ ಸಹಾಯ

ಅಸ್ಪೃಶ್ಯತೆ ... ಹೋರಾಡುವ ಉದ್ದೇಶದಿಂದ ಮುಖ್ಯವಾಗಿ ... ಪತ್ರಿಕೆಗಳಿಗೆ ಸಹಾಯ ದ್ರವ್ಯವನ್ನು ಕೊಡಲು ಬೊಂಬಾಯಿ ಸರ್ಕಾರದವರು ಆಲೋಚಿಸಿರುತ್ತಾರೆ. ಇದಕ್ಕಾಗಿ ೧೫,೦೦೦ ರೂಪಾಯಿಗಳನ್ನು ಅವರು ತೆಗೆದಿಟ್ಟಿರುತ್ತಾರೆ.

WANTED

By a reputed firm in Mysore city, a competent full time Sub Overseer owning a cycle possessing good physique (Preferably a retired gentleman and a resident of Mysore city), capable of supervising several works by covering an average distance of about 15 miles a day and capable of preparing plans, estimates, drawings etc, in respect of P W D (Civil) works. Applications furnishing the experience age, etc, from willing candidates, intimating the salary required, may be sent to reach the following address on or before the 28th February 1954

POST BOX NO 24
Mysore

ನೆಹರೂ ಹೇಳಿಕೆಯ ಮೇಲೆ ಫ್ರಾನ್ಸ್ ಸಭೆಯಲ್ಲಿ ಚರ್ಚೆ

ಇಂಡೋಚೀಣದಲ್ಲಿ ಯುದ್ಧವನ್ನು ಕೂಡಲೇ ನಿಲ್ಲಿಸಬೇಕೆಂದು ಭಾರತದ ಪ್ರಧಾನಿ ನೆಹರೂರವರು ಮಾಡಿದ ಸಲಹೆಯನ್ನು ಫ್ರಾನ್ಸಿನ ರಾಷ್ಟ್ರೀಯ ಸಭೆಯಲ್ಲಿ ಚರ್ಚಿಸಲು ನಿರ್ಧರಿಸಲಾಗಿದೆ. ಜಿನೀವಾ ಸಭೆ ನಡೆಯುವ ಮುಂಚೆ ಸೀಸ್ ಫೈರ್ ಅನ್ನು ಜಾರಿಗೆ ತರುವ ಬಗ್ಗೆ ಯಾವುದಾದರೂ ಕಾರ್ಯಕ್ರಮವನ್ನು ಫ್ರಾನ್ಸ್ ಕೈಗೊಳ್ಳಬೇಕೆಂದು ಸಭೆಯು ಇದೇ ತಿಂಗಳ ... ಅಧ್ಯಕ್ಷ ... ರವರು ಹೇಳಿರುತ್ತಾರೆ.

ಯುದ್ಧಾಸಕ್ತ ರಾಷ್ಟ್ರಗಳಿಗೆ ರಷ್ಯದ ರಕ್ಷಣಾ ಮಂತ್ರಿಯ ಎಚ್ಚರಿಕೆ

ರಷ್ಯದ ಸೈನ್ಯ ಮತ್ತು ನೌಕಾ ದಿನೋತ್ಸವದ ಸಂಬಂಧವಾಗಿ ಮೊನ್ನೆ ಅಲ್ಲಿನ ರಕ್ಷಣಾ ಮಂತ್ರಿ ಮಾರ್ಷಲ್ ಬುಲ್ಗಾನಿನ್‌ರವರು ಭಾಷಣ ಮಾಡಿ ಯಾವ ಘಳಿಗೆಯಲ್ಲಾದರೂ ಶತ್ರುವನ್ನು ನಾಶಪಡಿಸುವಂತಹ ಪೆಟ್ಟನ್ನು ರಷ್ಯದ ಸೈನ್ಯಗಳು ಕೊಡಬಲ್ಲವೆಂದು ಹೇಳುತ್ತಾ ವಿವೇಚನೆಯನ್ನು ಕಳೆದುಕೊಂಡು ಯುದ್ಧಕ್ಕಾಗಿ ಹಾತೊರೆಯುವವರ ನೀತಿಯನ್ನು ತಣ್ಣಗೆ ಮಾಡಲು ತಮ್ಮ ಬಲ ಶಕ್ತಿ ಸಾಧನಗಳು ಉಪಯೋಗವಾಗಿಯೂ ಅವರು ಹೇಳಿರುವರು.

ಉದ್ಯಾನವನೋತ್ಸವ

ಸಂಸ್ಥಾನದ ಉದ್ಯಾನವನಗಳ ಸಂಘದ ಮೈಸೂರು ಶಾಖೆಯವರು ಇದೇ ಜುಲೈ ತಿಂಗಳ ಮೊದಲನೇ ವಾರದಲ್ಲಿ ಉದ್ಯಾನವನೋತ್ಸವನ್ನು ನಗರದಲ್ಲಿ ನೆರವೇರಿಸಲಿರುವರು. ಈ ಸಂಬಂಧದಲ್ಲಿ ಬಹುಮಾನಗಳನ್ನು ಕೊಡುವುದಕ್ಕಾಗಿ ಜುಲೈ ೧ನೇ ತಾ|| ಅರಮನೆ ಸರ್ಕಾರಿ ... ಪೌರಸಭಾ ಉದ್ಯಾನವನಗಳಲ್ಲೂ ೨ನೇ ತಾ|| ಖಾಸಗಿ ಉದ್ಯಾನವನ ಮತ್ತು ಕೈತೋಟಗಳಿಗೂ ಭೇಟಿಯಿರುವುದು. ಫಲಪುಷ್ಪ ಪ್ರದರ್ಶನವು ... ಮತ್ತು ೪ನೇ ತಾ|| ಗಳಲ್ಲಿ ಏರ್ಪಾಡಾಗುವುದು. ಎಲ್ಲರೂ ಈ ಉತ್ಸವದಲ್ಲಿ ಭಾಗವಹಿಸಿ ಸಹಕರಿಸುವಂತೆಯೂ ಹೆಚ್ಚಿನ ವಿವರಗಳನ್ನು ಕರ್ಜನ್ ಪಾರ್ಕಿನಲ್ಲಿರುವ ಸಂಘದ ಕಛೇರಿಯಲ್ಲಿ ತಿಳಿದುಕೊಳ್ಳುವಂತೆಯೂ ಸಂಘದ ಉಪಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರು ಕೋರಿರುತ್ತಾರೆ.

ತಿರುವಾಂಕೂರು ಚುನಾವಣಾ ಘರ್ಷಣೆಯಲ್ಲಿ ಇರಿತ

ತಿರುವನಂತಪುರದ ಒಂದು ಚುನಾವಣಾ ಕ್ಷೇತ್ರದಲ್ಲಿ ಮೊನ್ನೆ ಎರಡು ಪಕ್ಷಗಳಿಗೆ ಘರ್ಷಣೆ ನಡೆದು ೩ ಜನರು ಇರಿಯಲ್ಪಟ್ಟಿರುವರು. ಅಪರಾಧಿಗಳನ್ನು ಬಂಧಿಸಲಾಗಿದೆ. ಮತ್ತೊಂದು ಕ್ಷೇತ್ರದಲ್ಲಿ ನಡೆದ ಗಲಭೆಯ ಸಂಬಂಧವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಮುಸ್ಲಿಂ ಲೀಗಿನ ... ಪಕ್ಷದವರಾದ ಕೆ ಪಿ ... ರವರನ್ನು ದಸ್ತಗಿರಿ ಮಾಡಲಾಗಿದೆ.

೮೦೦ ವಿದ್ಯಾರ್ಥಿಗಳ ಉಪವಾಸ ಮುಕ್ತಾಯ

ಡಾ|| ಜೆ ಸಿ ಘೋಷ್‌ರವರನ್ನು ತಪ್ಪಿಸಲು ಬಂಗಾಳದ ಖರಗಪುರದಲ್ಲಿರುವ ಭಾರತೀಯ ಪಾರಿಭಾಷಿಕ ಶಾಲೆಯ ಡೈರೆಕ್ಟರಾಗಿ ಮುಂದೆಯೂ ಇಟ್ಟುಕೊಳ್ಳುವ ಉದ್ದೇಶದಿಂದ ಶಾಲೆಯ ೮೦೦ ವಿದ್ಯಾರ್ಥಿಗಳು ಕಳೆದ ಸೋಮವಾರದಿಂದ ಉಪವಾಸ ಮುಷ್ಕರವನ್ನು ಹೂಡಿದ್ದರು. ೧೨ ವಿದ್ಯಾರ್ಥಿ ಪ್ರತಿನಿಧಿಗಳನ್ನು ಡಾ|| ಘೋಷ್‌ರವರು ಕರೆಸಿಕೊಂಡು ಚರ್ಚೆ ನಡೆಸಿದನಂತರ ಉಪವಾಸವು ಮೊನ್ನೆ ಕೊನೆಗೊಂಡಿತು.

ಮೈಸೂರು ಪೇಟೆ ಧಾರಣೆ

ಪದಾರ್ಥ	ಮಿ ಅಂಶ	ಪಾ ೫
ಕಡಲೆಕಾಯಿ	೧೯ ೪ ೦	೨೬ ೧೪ ೦
ಎಳ್ಳು	೪೪ ೦ ೦	
ಹರಳುಬೀಜ	೨೫ ೮ ೦	೩೧ ೦ ೦
ಹುಚ್ಚೆಳ್ಳು	೩೪ ೨ ೦	೪೩ ೧೨ ೦
ಹೊಂಗೇಬೀಜ	೨೧ ೧೪ ೦	೨೪ ೫ ೬
ಹುಣಸೇಬೀಜ	೧೩ ೧೦ ೦	೧೩ ೧೪ ೦
ಹುರುಳಿ	೨೬ ೨ ೦	೨೫ ೪ ೦
ಹೆಸರು	೩೭ ೪ ೦	೩೯ ೦ ೦
ಹಲಸಂದೆ	೩೩ ೦ ೦	೪೬ ೫ ೦
ಅವರೆ	೨೮ ೮ ೦	೩೨ ೨ ೦
ಧನಿಯ	೨೮ ೦ ೦	೩೦ ೧೩ ೦
ಕೊಬ್ಬರಿ	೨೬ ೧೦ ೦	೨೮ ೪ ೦
ಕಡಲೆ	೪೫ ೧೪ ೦	೪೪ ೧೪ ೦
ಕಿರುಬಿನ ಬೀಜ	೨೩ ೧೨ ೦	೨೯ ೬ ೦
ಹುಣಸೇಹಣ್ಣು	೪ ೮ ೦	೮ ೧೦ ೦
ಸೀಗೆಕಾಯಿ	೩ ೧೪ ೦	೪ ೧೦ ೦
ಮೆಣಸಿನಕಾಯಿ	೨೯ ೧೨ ೦	೩೭ ೦ ೦
ತೆಂಗಿನಕಾಯಿ ೧೦೦೦	೧೨೫ ೦ ೦	೩೧೪ ೦ ೦
ಬೆಲ್ಲ	೪ ೮ ೦	೮ ೦ ೦

26—2—54 ರಿಂದ .. ಅನೇಕ ಪ್ರಾರಂಭ

ಪ್ರಭಾ ಪಿಕ್ಚರ್ ಹೌಸಿನಲ್ಲಿ
ಪ್ರತಿ ದಿನ ಮೂರು ಆಟಗಳು

ಮಾಡರ್ನ್ ಥಿಯೇಟರ್ಸ್‌ರವರ ಜನಪ್ರಿಯ ಪೌರಾಣಿಕ ಕನ್ನಡ ಚಿತ್ರ

• ದೇವಕನ್ನಿಕಾ •

ಪಾತ್ರ ಇಂದುಶೇಖರ್ ಬೆಟ್ ಆರ್ ಶಾಸ್ತ್ರಿ ಶಾಂತಿಗ್ರಾಂ, ಮುರಿರಾವ್,
ಟಿ ಎನ್ ಬಾಲಕೃಷ್ಣ, ಮಾಸ್ಟರ್ ಹಿರಣ್ಣಯ್ಯ, ಜಾನಕಿ,
ರಮಾದೇವಿ ಇಂದಿರಾ ಕುಮಾರಿ ಶಕುಂತಲಾ

ಕತೆ, ಸಂಭಾಷಣೆ ಹಾಡುಗಳು — ಹುಣಸೂರು ಕೃಷ್ಣಮೂರ್ತಿ
ದಿಗ್ದರ್ಶನ — ಬಿ ಆರ್ ರಾವ್
ಸಂಗೀತ — ಜಿ ರಾಮನಾಥನ್

[A RAJSHRI RELEASE

ರಿಜಿಸ್ಟರ್ ನಂ 798 || ವಂದೇ ಮಾತರಂ || ಜಿಲ್ಲಾ ಪತ್ರಿಕೆ ೩ ಆಣೆ

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ದೊರೆಯುತ್ತವೆ, ಬಂದು ನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಸಂಪಾದಕ
ಬಿಡಿ ಪ್ರತಿಗಳಿಗೆ ...
ತಿಂಗಳಿಗೆ ...
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨] MYSORE FRIDAY 26 2-1954 ಮೈಸೂರು : ಶುಕ್ರವಾರ ೨೬-೨ ೧೯೫೪ [ಸಂಚಿಕೆ ...

ಸಿರಿಯಾ ದೇಶದಲ್ಲಿ ಅಂತರ್ಯುದ್ಧ; ಅಧ್ಯಕ್ಷರ ಪಲಾಯನ

ಸಂತೆ ಗಾಡಿ-ಹಣದ ಲೂಟಿ ಮಾಡಿದವರಿಗೆ ಶಿಕ್ಷೆ

ಮೈಸೂರು ೨೬

೧೯೫೦ ನೇ ಇಸವಿ ಅಕ್ಟೋಬರ್ ೯ ನೇ ... ನಗರಗನೂರು ಸಂತೆಗೆ ಹೋಗಿ ವಾಪಸು ... ತಿದ್ದ ಬಳಗಲಿ ಸಂಗಪ್ಪ, ಶಿವಬಸಪ್ಪ ಎಂಬುವರ ಗಾಡಿಯನ್ನು ... ನರಸೀಪುರ-ನಂಜನಗೂಡು ರಸ್ತೆಯಲ್ಲಿ ತಡೆದು ಲೂಟಿ ಮಾಡಿದರೆಂದು ನಂಜನಗೂಡು ಪೋಲೀಸರು ... ಮುದ್ದು ಬಸಪ್ಪ, ಮಾದಶೆಟ್ಟಿ ಮತ್ತು ... ಉರುಫ್ ಲೈಟು ಮತ್ತು ಬಳಗಲಿಯ ... ಮತ್ತು ಮಾದಶೆಟ್ಟಿ ಎಂಬುವರ ... ನಂಜನಗೂಡ ಕೋರ್ಟಿನಲ್ಲಿ ಹೂಡಿದ್ದ ... ಮೊಕದ್ದಮೆಯು ಸೆಷನ್ಸಿಗೆ ಗುರಿಯಾಗಿದ್ದು, ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ... ಎಸ್ ಭೀಮರಾಯರು ವಿಚಾರಣೆ ನಡೆಸಿ, ... ಬಹುಮತಾಭಿಪ್ರಾಯದಂತೆ ೨ನೇ ... ಮುದ್ದು ಬಸಪ್ಪನನ್ನು ಖುಲಾಸೆ ಮಾಡಿ ಉಳಿದ ೫ ಜನರಿಗೆ ತಲಾ ೩ ವರ್ಷ ಕಠಿಣ ... ಸಜೆಯನ್ನು ವಿಧಿಸಿರುತ್ತಾರೆ.

ಆಪಾದಿತರ ಪರ ಶ್ರೀ ಮಹೇಶಚಂದ್ರ ಗುರವರೂ, ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಜಿ ಶಂಕರಶೆಟ್ಟಿಯವರೂ ವಕಾಲತ್ತು ವಹಿಸಿದ್ದರು.

... ಪೋಪರ ಪ್ರತಿನಿಧಿಯ ಆಗಮನ

ರೋಮನ್ ಕ್ಯಾಥೊಲಿಕ್ ಕ್ರೈಸ್ತರ ಜಗದ್ಗುರುಗಳಾದ ಪೋಪರ ಪ್ರತಿನಿಧಿ ರೆವರೆಂಡ್ ಮಾರ್ಟಿನ್ ಲ್ಯೂಕಾಸ್‌ರವರು ಮೈಸೂರಿಗೆ ಆಗಮಿಸಿರುತ್ತಾರೆ. ಮೊನ್ನೆ ಇಲ್ಲಿನ ಕ್ಯಾಥೊಲಿಕ್ ... ಏರ್ಪಡಿಸಿದ್ದ ಸಭೆಯಲ್ಲಿ ಅವರಿಗೆ ... ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಪೌರಸಭಾಧ್ಯಕ್ಷ ಶ್ರೀ ಕೆ. ... ಮತ್ತು ನಗರಾಭಿವೃದ್ಧಿ ಸಮಿತಿ-ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ಅತಿಥಿಗಳಿಗೆ ... ಗಳನ್ನು ಅರ್ಪಿಸಿದರು. ಶ್ರೀ ಲ್ಯೂಕಾಸ್ ... ಮಹಾರಾಜರ ಮತ್ತು ... ಗುಣಾತಿಶಯಗಳನ್ನು ಕೊಂಡಾಡಿದರು.

ಮಾನ್ ಅನಾಹುತದಲ್ಲಿ ೩ ಜನ ವೈಮಾನಿಕರ ಮರಣ

... ನೆನ್ನೆ ದಿಲ್ಲಿಯ ಪಾಲಂ ... ದಿಂದ ಹಾರಿದ ಹಕೋಟಾ ವಿಮಾನವು ... ಕೆಲವು ನಿಮಿಷಗಳಲ್ಲೇ ಯಮುನಾ ... ಬಳಿ ಅನಾಹುತಕ್ಕೀಡಾಗಿ ಚಾಲ... ಕ್ಯಾಪ್ಟನ್ ಅಂಬರ್ ಮತ್ತು ... ಮಲ್ಹೋತ್ರರವರೂ, ಅಬ್ಸರ್ವರ್ ... ಕೃಷ್ಣಮೂರ್ತಿಯವರೂ ಮೃತಪಟ್ಟರು.

ವಿ. ಶ್ರೀನಿವಾಸಯ್ಯಂಗಾರ್ಯರ ನಿಧನ

ಮದ್ರಾಸಿನ ಸುಪ್ರಸಿದ್ಧ ವಕೀಲರೂ ಮತ್ತು ... ಹೈಕೋರ್ಟಿನ ಮಾಜಿ ನ್ಯಾಯಾಧೀಶರಾದ ಶ್ರೀ ವಿ. ವಿ. ಶ್ರೀನಿವಾಸಯ್ಯಂಗಾರ್ಯರು ನೆನ್ನೆ ತಮ್ಮ ಗೃಹದಲ್ಲಿ ಹೃದಯವೇದನೆಯಿಂದ ... ವಾಗಿ ಮೃತಪಟ್ಟರು. ಅವರಿಗೆ ೮೨ ... ವಯಸ್ಸು.

ಹೊಸ ಹೋಟೇಲುಗಳ ಆರಂಭಕ್ಕೆ ನಿರ್ಬಂಧ ರದ್ದು

ಬೆಂಗಳೂರು ೨೬

ಸಂಸ್ಥಾನದಲ್ಲಿ ಹೊಸ ಹೋಟೇಲುಗಳನ್ನು ತೆರೆಯಲು ೧೯೪೯ ರಲ್ಲಿ ವಿಧಿಸಿದ್ದ ನಿರ್ಬಂಧವನ್ನು ಸರ್ಕಾರದವರು ತೆಗೆದುಹಾಕಿರುತ್ತಾರೆ. ದೇಶದಲ್ಲಿ ಆಹಾರದ ಪರಿಸ್ಥಿತಿ ಉತ್ತಮಗೊಂಡಂತೆಲ್ಲಾ ಹತೋಟಿಗಳನ್ನು ಕ್ರಮವಾಗಿ ತೆಗೆಯುವ ಸರ್ಕಾರದ ನೀತಿಯ ಅನುಸಾರವಾಗಿ ಈ ಆಜ್ಞೆಯಾಗಿದೆ.

ಅಮೇರಿಕಕ್ಕೆ ಪಾಕಿಸ್ತಾನದ ಮಿಲಿಟರಿ ನೆಲೆಗಳಿಲ್ಲ

ಅಮೆರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವನ್ನು ಕೊಡಲು ನಿರ್ಧರಿಸಿದೆಯೆಂದು ನೆನ್ನೆ ದಿನ ವಾಷಿಂಗ್ಟನ್ ಮತ್ತು ಕರಾಚಿಗಳಲ್ಲಿ ಏಕ ಕಾಲದಲ್ಲಿ ಪ್ರಕಟಿಸಲಾಯಿತು. ವಾಷಿಂಗ್ಟನ್ನಿನ ಪ್ರಕಟಣೆಯಲ್ಲಿ ಅಧ್ಯಕ್ಷ ಐಸೆನ್‌ಹೋವರು ಪರಸ್ಪರ ರಕ್ಷಣಾ ಸಹಾಯ ಶಾಸನದ ಪ್ರಕಾರ ಸಖ್ಯದಲ್ಲಿಯೇ ಒಪ್ಪಂದವಾಗಲಿದೆಯೆಂದು ನುಡಿದಿದ್ದಾರೆ. ಪಾಕಿಸ್ತಾನದ ಅವಶ್ಯಕತೆಗಳನ್ನು ಅರಿಯಲು ಶೀಘ್ರದಲ್ಲಿಯೇ ಮಿಲಿಟರಿ ನಿಯೋಗವೊಂದು ಅಲ್ಲಿಗೆ ಹೊರಡಲಿರುವುದೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಸಹಾಯವನ್ನು ಯಾವ ದೇಶದ ಮೇಲೆಯೂ ಆಕ್ರಮಣ ಮಾಡಲು ತೆಗೆದುಕೊಳ್ಳಲಾಗುತ್ತಿಲ್ಲವೆಂದೂ, ಅಮೆರಿಕಕ್ಕೆ ಮಿಲಿಟರಿ ನೆಲೆಗಳನ್ನು ಕೊಡುವ ಅಭಿಪ್ರಾಯವೇ ಇಲ್ಲವೆಂದೂ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ತಿಳಿಸಿದ್ದಾರೆಂದು ಕರಾಚಿಯ ಪ್ರಕಟಣೆಯು ಹೇಳುತ್ತದೆ.

ಮಕ್ಕಳ ಕದ್ದುಯ್ಯುವ ಗಾಬರಿಯಿಂದ ನಿರಪರಾಧಿಯ ಬಂಧನ

ರಾಜಧಾನಿಯ ಮಂಡಿ ಮೊಹಲ್ಲಾ ಪೋಲೀಸ್ ಠಾಣೆ ಬಳಿ ನೆನ್ನೆ ಸುಮಾರು ೫೦೦ ಜನರ ಗುಂಪೊಂದು ಸೇರಿ ಒಬ್ಬ ಯುವಕನನ್ನು ಪೋಲೀಸರ ವಶಕ್ಕೆ ಒಪ್ಪಿಸಿ, ಆತನು ಮಕ್ಕಳನ್ನು ಅಪಹರಣ ಮಾಡಿದನೆಂದು ತಿಳಿಸಿದರು. ಪೋಲೀಸರು ಅವನನ್ನು ಪೂರ್ತಿಯಾಗಿ ವಿಚಾರಿಸಿ ಆಗ ಅವನನ್ನು ಬಿಟ್ಟಿರುತ್ತಾರೆ. ಆತನ ಹೆಸರು ಶ್ರೀನಿವಾಸನೆಂತಲೂ, ಅದೇ ಮೊಹಲ್ಲೆಯ ನಿವಾಸಿಯೆಂದೂ ಅ... ಜಾತಿಯವನೆಂದೂ ಗೊತ್ತಾಗಿದೆ. ಮಕ್ಕಳ ಅಪಹರಣದ ಸುದ್ದಿ ... ಸಿಕ್ಕಿಲ್ಲವೆಂದು ವರದಿಯಾಗಿದೆ.

ಹುಡುಗಿಯೊಬ್ಬಳು ಸಿಕ್ಕಿರುತ್ತಾಳೆ

ರಾಜಧಾನಿಯ ಇರ್ವಿನ್ ರಸ್ತೆಯಲ್ಲಿ ಯುನಾನಿ ಆಸ್ಪತ್ರೆ ಬಳಿ ನೆನ್ನೆ ರಾತ್ರಿ ೮ ಗಂಟೆ ಹೊತ್ತಿನಲ್ಲಿ ಸುಮಾರು ೫ ವರ್ಷದ ಕೆಂಪು ವರ್ಣದ ... ಎಂಬ ಹುಡುಗಿಯು ಮಂಡಿ ಮೊಹಲ್ಲಾ ನಿವಾಸಿ ಶ್ರೀ ಸಿ. ಎ. ಅಹಮದ್ ರವರಿಗೆ ಸಿಕ್ಕಿದ್ದು ಆಕೆಯನ್ನು ಅವರು ಈ ದಿನ ಮಂಡಿ ಪೋಲೀಸು ಠಾಣೆಗೆ ಕರೆತಂದರೆಂದೂ, ಠಾಣೆಯಲ್ಲಿ ಇರಲು ಹುಡುಗಿಯು ಒಪ್ಪದಿದ್ದರಿಂದ ಶ್ರೀ ಅಹಮದ್ ರವರೊಡನೆ ಕಳುಹಿಸಲಾಯಿತೆಂದೂ, ವಾರಸುದಾರರು ಯಾರಾದರೂ ಇದ್ದಲ್ಲಿ ಠಾಣೆಗೆ ತಿಳಿಸಬೇಕೆಂದೂ ಸೂಚಿಸಲಾಗಿದೆ. ಹುಡುಗಿಗೆ ಮಲಯಾಳಿ ಭಾಷೆ ಬರುತ್ತದೆ.

ಪಾಕ್-ಅಮೆರಿಕಾ ಒಪ್ಪಂದದ ಬಗ್ಗೆ ನೆಹರೂರವರಿಗೆ ಐಸೆನ್‌ಹೋವರರ ಪತ್ರ

ಅವಶ್ಯಕವಿದ್ದರೆ ಭಾರತಕ್ಕೂ ಸಹಾಯ ನೀಡುವುದಾಗಿ ಭರವಸೆ

ಅಮೆರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವನ್ನು ಕೊಡಲು ನಿರ್ಧರಿಸಿರುವುದಾಗಿ ತಿಳಿಸಿ ಈ ಬಗ್ಗೆ ಭಾರತಕ್ಕೆ ಸಮಾಧಾನ ಹೇಳಲೋ ಎಂಬಂತೆ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಪ್ರಧಾನಿ ನೆಹರೂರವರಿಗೆ ಪತ್ರವೊಂದನ್ನು ಬರೆದಿದ್ದಾರೆ. ಮೇಲ್ಕಂಡ ಒಪ್ಪಂದದಲ್ಲಿ ಭಾರತದ ವಿರುದ್ಧವಾಗಿ ಆಕ್ರಮಣವಾಗದಿರುವಂತೆ ತಕ್ಕ ಷರತ್ತುಗಳಿರುವುವೆಂದೂ, ಹಾಗೂ ಪಾಕಿಸ್ತಾನವು ಆಕ್ರಮಣ ಮಾಡಿದರೆ ತಾವು ವಿಶ್ವಸಂಸ್ಥೆಯಲ್ಲಿಯೂ ಮತ್ತು ಹೊರಗೂ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ತಿಳಿಸಿರುತ್ತಾರೆ. ಬೇಕಾದರೆ ಭಾರತಕ್ಕೂ ಸಹ ಇದೇ ರೀತಿಯ ಸಹಾಯವನ್ನು ತಾವು ಕೊಡಲು ಸಿದ್ಧರಾಗಿರುವುದಾಗಿಯೂ ಅವರು ನೆಹರೂರವರಿಗೆ ಭರವಸೆ ನೀಡಿದ್ದಾರೆ.

೪ ಲಕ್ಷ ರೂ. ಸಾಲ ಕೊಡಿಸುವುದಾಗಿ ಹೇಳಿ ಮೋಸದ ಪ್ರಯತ್ನ

ಬೊಂಬಾಯಿಯ ೩ ಆಪಾದಿತರಿಗೆ ಜೈಲು ರಿಮಾಂಡು

ಮೈಸೂರು ೨೬

ರಾಜಧಾನಿಯ ಬರ್ಮಾ ಶೆಲ್ ಏಜೆಂಟರಾದ ಶ್ರೀ ವಿ. ನಾರಾಯಣರಾವ್ ಮತ್ತು ... ರಾದ ಶ್ರೀ ಎಂ. ಎಸ್. ಮಾಧವರಾಯರಿಗೆ ೪ ಲಕ್ಷ ರೂಗಳನ್ನು ಸಾಲ ಕೊಡಿಸುವುದಾಗಿ ಹೇಳಿ ಅವರಿಂದ ... ರೂ ಗಳನ್ನು ಪಡೆದು ಮೋಸ ಮಾಡಿದ ... ಸಂಬಂಧವಾಗಿ ಬೊಂಬಾಯಿಯ ... ಗುರುನಾಥ ಸ. ಭೀಮಸ ... ದೇಶಾಯಿ ಉರುಫ್ ... ಮತ್ತು ... ಈ ಮೂರು ಜನರನ್ನು ಬೊಂಬಾಯಿಯ ಪೋಲೀಸರು ದಸ್ತಗಿರಿ ಮಾಡಿ, ಇಲ್ಲಿಗೆ ಕರೆತಂದು ನಗರದ ... ನೇ ನ್ಯಾಯಾಧೀಶರ ಮುಂದೆ ಈ ದಿನ ಹಾಜರುಪಡಿಸಿದರು.

ಅವರ ಪರವಾಗಿ ಇಲ್ಲಿನ ವಕೀಲರಾದ ಶ್ರೀ ಎ. ಜಿ. ಮೈಸೂರ್‌ವಾಲಾರವರು ಜಾಮೀನು ಅರ್ಜಿಯನ್ನು ಸಲ್ಲಿಸಲಾಗಿ ಆಪಾದಿತರನ್ನು ತಲಾ ೨೫ ಸಾವಿರ ರೂ ಗಳ ಜಾಮೀನಿನ ಮೇಲೆ ಬಿಡುವಂತೆ ನ್ಯಾಯಾಧೀಶರು ಆಜ್ಞೆ ಮಾಡಿದರು. ಜಾಮೀನು ಕೊಡಲು ಅವರಿಗೆ ಸಾಧ್ಯವಾಗದೆ, ಅವರನ್ನು ಸಬ್ ಜೈಲಿಗೆ ರಿಮ್ಯಾಂಡ್ ಮಾಡಲಾಯಿತು.

ಇದೇ ಸಂಬಂಧದಲ್ಲಿ ಮತ್ತೊಬ್ಬ ಆಪಾದಿತರಾದ ಜೆ. ಮಾಣಿಕ್‌ಜಿ ದೇಸಾಯಿಯವರು ಸಿಕ್ಕಿಲ್ಲ.

ನಗರದ ಕ್ರೈಂ ಬ್ರಾಂಚ್ ಪೋಲೀಸರು ಸದರಿಯವರ ಮೇಲೂ ಮತ್ತು ಮೈಸೂರು ನಿವಾಸಿಗಳಾದ ಸೇಟ್ ವಿ. ರಂಗಸ್ವಾಮಿ ಅಯ್ಯಂಗಾರ್, ಅವರ ಪುತ್ರ ಕೃಷ್ಣಸ್ವಾಮಿಯವರ ಮೇಲೂ ನಗರದ ೧ ನೇ ಕೋರ್ಟಿನಲ್ಲಿ ಐ. ಪಿ. ಸಿ. ೪೨೦ ಮತ್ತು ೧೨೦ ಬಿ ವಿಧಿ ಪ್ರಕಾರ ಮೊಕದ್ದಮೆ ಹೂಡಿರುವರು.

ಸದರಿ ರಂಗಸ್ವಾಮಿ ಅಯ್ಯಂಗಾರ್ ಮತ್ತು ಇನ್ನಿಬ್ಬರು ಮೈಸೂರಿನವರು ಕಳೆದ ಏರು ತಿಂಗಳಿಂದಲು ಜೈಲಿನಲ್ಲಿರುವರು.

ಸಿರಿಯಾ ಅಧ್ಯಕ್ಷ ಶಿಷಾಕ್ಲಿಯವರ ಪಲಾಯನ

ಕಳೆದ ಮೂರು ವರ್ಷಗಳಿಂದ ಸಿರಿಯಾ ದೇಶದ ಅಧ್ಯಕ್ಷರಾಗಿದ್ದ ಕರ್ನಲ್-ಶಿಷಾಕ್ಲಿಯವರು ಅಲ್ಲಿ ನೆನ್ನೆ ಸೈನ್ಯದವರಿಂದ ನಡೆದ ದಂಗೆಯ ಪರಿಣಾಮವಾಗಿ ತಮ್ಮ ಪದವಿಗೆ ರಾಜೀನಾಮೆಯಿತ್ತು, ದೇಶ ತ್ಯಾಗ ಮಾಡಿರುವರೆಂದು ... ಬಂದಿದೆ. ತಮ್ಮ ... ಪ್ರಯತ್ನ ನಡೆಸಿದರೂ ... ಶಿಷಾಕ್ಲಿಯವರು ಸೈನ್ಯ ಮತ್ತು ... ನ್ನು ಕಳುಹಿಸಿದ್ದರೆಂದು ಹೇಳಲಾಗಿದೆ. ... ಅಧ್ಯಕ್ಷ ಹಸೆಂ ಎಲ್ ಅತ್ತಾಸಿಯವರು ... ಅಧ್ಯಕ್ಷರಾಗಿರುವರೆಂದು ... ಸಿರಿಯಾ ... ತಿಳಿಸುತ್ತದೆ. ದಂಗೆಯ ... ತ್ವವನ್ನು ಮುಸ್ತಫಾ ಎಲ್ ... ವಹಿಸಿಕೊಂಡಿರುವುದಾಗಿ ವರದಿಯಾಗಿದೆ. ಅವರು ಶಿಷಾಕ್ಲಿಯವರಿಗೆ ಅಂತ್ಯ ಸೂಚನೆ ಕೊಟ್ಟು ದೇಶ ಬಿಡುವಂತೆ ೨೪ ಗಂಟೆಗಳ ಅವಧಿಯ ನೋಟೀಸನ್ನು ಕೊಟ್ಟಿದ್ದರು. ಉತ್ತರ ಭಾಗದ ದಂಗೆಕೋರರೊಡನೆ ದಕ್ಷಿಣ ಭಾಗದ ಸೈನ್ಯಗಳೂ ಸೇರಿರುವುದಾಗಿಯೂ ಹೇಳಲಾಗಿದೆ.

ಜಾಮೀನಿನ ಮೇಲೆ ಬಿಡುಗಡೆ ...

ಮೊನ್ನೆ ... ಅಧ್ಯಕ್ಷ ... ರವರು ತಮ್ಮ ಮನೆಯನ್ನು ಬಿಟ್ಟು ಹೊರಗೆ ಹೋಗಕೂಡದೆಂದು ಆಜ್ಞೆ ಮಾಡಲ್ಪಟ್ಟಿರುವರೆಂದೂ ಮತ್ತು ... ವನ್ನು ಶಸ್ತ್ರ ಸಜ್ಜಿತ ಸೈನಿಕರು ಕಾಯುತ್ತಿರುವುದಾಗಿಯೂ ... ಸಲೀಮ್ ರವರು ... ರಾಜೀನಾಮೆಯಿಂದ ... ಯಾವ ಬದಲಾವಣೆಯೂ ... ಅವರು ಹೇಳಿದ್ದಾರೆ. ... ರೂಗು ಪರಿಸ್ಥಿತಿಯನ್ನು ... ದೂ ಸಹ ಅವರು ಹೇಳಿರುವರು ... ದಲ್ಲಿರುವ ಸರ್ಕಾರಿ ಕಛೇರಿ ಮತ್ತು ... ಕಟ್ಟಡಗಳಲ್ಲಿ ... ಧ್ವಜಗಳನ್ನು ...

ಭಾರತಕ್ಕೆ ಅಮೆರಿಕದ ೪೧೧ ಶ್ರೀಮಂತರ ಆಗಮನ

ಅಮೆರಿಕದ ೪೧೧ ಜನ ಶ್ರೀಮಂತ ಪ್ರವಾಸಿಗರು ಭಾರತದಲ್ಲಿ ಎಂಟು ದಿನಗಳ ಪ್ರವಾಸಕ್ಕಾಗಿ ಮೊನ್ನೆ ಬೊಂಬಾಯಿಗೆ ಆಗಮಿಸಿದರು. ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಅವರು ಭೇಟಿ ಕೊಡಲಿರುವರು. ಅವರು ದೆಹಲಿ, ಆಗ್ರಾ, ಕಾಶಿ, ಸಿಕ್ರಿ, ಸಾಂಚಿ, ಜೈಪುರ, ಅಜಂತಾ, ಮೈಸೂರು, ಮದ್ರಾಸ್, ಕಲ್ಕತ್ತಾ, ಡಾರ್ಜಿಲಿಂಗ್ ಮುಂತಾದ ಸ್ಥಳಗಳನ್ನು ಸಂದರ್ಶಿಸುವರು. ಭಾರತ ಮತ್ತು ಅಮೆರಿಕಾ ಪ್ರಜೆಗಳ ಪರಸ್ಪರ ಬಾಂಧವ್ಯ ಮತ್ತು ಮಿತ್ರತ್ವವು ಬೆಳೆಯಬೇಕೆಂದು ಅವರು ಆಶಿಸಿರುತ್ತಾರೆ.

ಮಾರಾಟ ತೆರಿಗೆ ಸಮಿತಿ ಶಿಫಾರಸುಗಳ ಅಂಗೀಕಾರ

ಮಾರಾಟ ತೆರಿಗೆ ವಿಧಾಯಕದ ಬಗ್ಗೆ ಸಂಸ್ಥಾನ ಸರ್ಕಾರದವರು ರಚಿಸಿದ್ದ ಸಲಹಾ ಸಮಿತಿಯವರು ಒಪ್ಪಿಸಿರುವ ಮುಖ್ಯ ಶಿಫಾರಸು ... ವನ್ನು ... ಅಂಗೀಕರಿಸಿರುತ್ತಾರೆ

ಸಂಸ್ಥಾನದ ಮುಖ್ಯ ನೀರಾವರಿ ಚೀಫ್ ಇಂಜನಿಯರ್

ಹೆಚ್ ಅನಂತಾಚಾರ್ಯರಿಂದ ಅಧಿಕಾರ ಸ್ವೀಕಾರ

ಬೆಂಗಳೂರು ೨೬

ಸಂಸ್ಥಾನದ ಮುಖ್ಯ ನೀರಾವರಿ ಚೀಫ್ ಇಂಜನಿಯರರಾಗಿ ನೇಮಿತರಾಗಿರುವ ಶ್ರೀ ಹೆಚ್. ಅನಂತಾಚಾರ್ಯರು ನೆನ್ನೆ ತಮ್ಮ ಹೊಸ ಅಧಿಕಾರವನ್ನು ವಹಿಸಿಕೊಂಡರು. ಇವರು ಮೈಸೂರಿನಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಾಗಿ ಇದುವರೆಗೆ ಇದ್ದರು.

ಶ್ರೀಯುತರು ೧೯೨೪ರಲ್ಲಿ ಬಿ. ಇ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಪಡೆದು ಉತ್ತೀರ್ಣರಾದರು. ಬೊಂಬಾಯಿ ಅರಣ್ಯಗಳಿಗೆ ಸಂಬಂಧಿಸಿದಂತೆ ಇರುವ ಇಂಜನಿಯರಿಂಗ್ ಶಾಖೆಯಲ್ಲೂ ಮತ್ತು ಎಂ. ಎಸ್. ಎಂ. ಫೈನಾನ್ಸ್‌ನಲ್ಲಿಯೂ ಕೆಲಸ ಮಾಡಿದ್ದರು.

1927 ರಲ್ಲಿ ಸಂಸ್ಥಾನದಲ್ಲಿ ಸಬ್ ಇಂಜನಿಯರಾಗಿ ಸೇರಿ, ಎರಡು ವರ್ಷಗಳನಂತರ ಅಸಿಸ್ಟೆಂಟ್ ಇಂಜನಿಯರ್ ಆಗಿಯೂ ೧೯೪೬ ರಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿಯೂ, ಅನಂತರ ಸೂಪರಿಂಟೆಂಡಿಂಗ್ ಇಂಜನಿಯರಾಗಿಯೂ ನೇಮಕವಾದರು.

ಇರ್ವಿನ್ ಕಾಲುವೆ ವರ್ಕ್ಸ್ ಸರ್ವೇ, ಕಾಲುವೆಯ ಮದ್ದೂರ್ ಶಾಖೆಯ ನಿರ್ಮಾಣ, ಕೆರೆಗೋಡು ಮತ್ತು ಕಾವೇರಿ ನಾಲೆಗಳ ರಚನೆ, ಮಂಡ್ಯ ಮತ್ತು ಫ್ರೆಂಚ್‌ರಾಕ್ಸ್ ಪ್ರದೇಶದ ನೀರಾವರಿ ಅಭಿವೃದ್ಧಿ ಮತ್ತು ಕಾಲುವೆಗಳ ಮೇಂಟೆನೆನ್ಸ್, ಇವುಗಳನ್ನು ೭ ವರ್ಷ ಕಾಲ ನಡೆಸಿದರು. ಇದಲ್ಲದೆ ಸಂಸ್ಥಾನದ ಹಲವು ಕಾಲುವೆ ಪ್ರದೇಶಗಳಲ್ಲಿಯೂ ಹಲವು ವರ್ಷ ಕಾಲ ಕೆಲಸ ಮಾಡಿದ್ದರು.

ಮಾರ್ಕೋನಹಳ್ಳಿ ಜಲಾಶಯ [illegible], ಇತರ ಅನೇಕ ಕಡೆಗಳಲ್ಲಿಯೂ ಇವರ ಕೆಲಸ ಮಾಡಿ ಖ್ಯಾತಿಗಳಿಸಿರುವರು. ಹೆಬ್ಬಾಳದ ಕಾಲುವೆಯನ್ನು ಮುಗಿಸಿ ೬,೦೭೦ ಎಕರೆ ಜಮೀನಿಗೆ ನೀರು ಒದಗಿಸಲು ಏರ್ಪಾಡು ಮಾಡಿರುವರು. ಕಾವೇರಿ ನರ್ಕಲ್ಲಿನ ನೀರಾವರಿ ಮತ್ತು ನುಗು ಅಣೆಕಟ್ಟಿನ ಕಾರ್ಯದಲ್ಲಿಯೂ [illegible] ಕೆಲಸ ಮಾಡಿರುವರು.

ಬಳ್ಳಾರಿ ಪೌರಸಭೆಯನ್ನು ರದ್ದು ಮಾಡಲು ಸರ್ಕಾರಕ್ಕೆ ಒತ್ತಾಯ

ಬಳ್ಳಾರಿ ಪಟ್ಟಣಿಗರ ಮತ್ತು ಮೈಸೂರು ಸಂಸ್ಥಾನದ ಹಿತರಕ್ಷಣೆಗಾಗಿ ಬಳ್ಳಾರಿಯ ಪೌರಸಭೆಯನ್ನು ರದ್ದು ಮಾಡಬೇಕೆಂದು ಅಲ್ಲಿನ ಜಿಲ್ಲಾ ವಾಣಿಜ್ಯ ಸಂಘದವರು ಸರ್ಕಾರವನ್ನು ಒತ್ತಾಯಪಡಿಸಿರುತ್ತಾರೆ. ಪೌರಸಭೆಯವರು ಜಿಲ್ಲೆಯ ಸೇರಡೆ ಬಗ್ಗೆ ಭಾಷಾವಾರು ಮತ್ತು ರಾಜಕೀಯ ಚಿಜ್ಞಾಸೆಗಳಲ್ಲಿ ಕೈಹಾಕಿ, ಸಾಮಾನ್ಯವಾದ ಪೌರಕರ್ತವ್ಯವನ್ನು ಮರೆತಿರುವರೆಂದೂ, ಪಟ್ಟಣದ ನೀರಿನ ಸರಬರಾಜಿನ ತೊಂದರೆಯ ಪರಿಹಾರಕ್ಕೆ ಅಧ್ಯಕ್ಷರು ಅಡ್ಡಿಯಾಗಿರುವರೆಂದೂ ವಾಣಿಜ್ಯ ಸಂಸ್ಥೆಯವರು ಹೇಳುತ್ತಾರೆ.

ಕಾಂಗ್ರೆಸ್ ಸದಸ್ಯತ್ವದ ಪುಸ್ತಕಗಳನ್ನು ಹಿಂತಿರುಗಿಸಲು ಮನವಿ

ಸದಸ್ಯತ್ವದ ಪುಸ್ತಕಗಳನ್ನು ತೆಗೆದುಕೊಂಡಿರುವ ಮೈಸೂರು ನಗರದ ದಕ್ಷಿಣ ವಿಭಾಗದ ಕಾಂಗ್ರೆಸ್ ಕಾರ್ಯಕರ್ತರುಗಳೆಲ್ಲರೂ ಅವುಗಳನ್ನು ೨೮ ನೇ ತಾ|| ಹಿಂತಿರುಗಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎ. ಗೋಪಾಲರಾಯರು ಕೋರಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ ೭-೩೦ ರಿ ಎಸ್. ಎ. [illegible] ದೇವರ ನಾಮ ಮಧ್ಯಾಹ್ನ ೧-೪೦ ಮಕ್ಕಳ ಕಾರ್ಯಕ್ರಮಗಳು ೩ ಬಾಲ ಜಗತ್ತು ಮಕ್ಕಳ ಕಾರ್ಯಕ್ರಮ ಸಂಜೆ ೫-೪೦ ರಿ ಎಸ್. ಮ [illegible] ಸಂಗೀತ ೬ ಹಿಂದಿ ಪಾಠ ೬ [illegible] ಆರ್ ಇಂದಿನಿಂದ ಕನ್ನಡ ಗೀತೆ ೭-೫ ನಾಗಸ್ವರ ೭-೪೦ ಎ. ಶ್ರೀನಿವಾಸಮೂರ್ತಿ ಪಿಟೀಲು ವಾದನ [illegible] ಸೋಸಲೆ ನಾರಾಯಣದಾಸರ ಹರಿಕಥೆ [illegible]

[illegible]

ಹೆಚ್. ಅನಂತಾಚಾರ್

ಮುಖ್ಯ ನೀರಾವರಿ ಚೀಫ್ ಇಂಜನಿಯರರು

ಮಾಜಿ ವಾಣಿಜ್ಯ ಕಾರ್ಯದರ್ಶಿ ಮೇಲೆ ಲಂಚಕ್ಕಾಗಿ ಮೊಕದ್ದಮೆ

ಲಂಚ ಪಡೆದಿರುವ ಕಾರಣಕ್ಕಾಗಿ ಭಾರತ ಸರ್ಕಾರದ ಮಾಜಿ ವಾಣಿಜ್ಯ ಕಾರ್ಯದರ್ಶಿ ಎಸ್. ಎ. ವೆಂಕಟರಾಮನ್‌ರವರ ಮೇಲೆ ದಿಲ್ಲಿಯ ನ್ಯಾಯಾಲಯ ಒಂದರಲ್ಲಿ ಮೊಕದ್ದಮೆ ದಾಖಲಾಗಿದೆ. ಇವರ ಬೊಂಬಾಯಿಯ ಎರಡು ವ್ಯಾಪಾರಿ ಸಂಸ್ಥೆಗಳಿಂದ ೨೦ ಸಾವಿರ ರೂ ಬೆಲೆಯ ಸಾಮಾನುಗಳನ್ನು ಲಂಚವಾಗಿ ಪಡೆದಿದ್ದರೆಂದು ಆಪಾದಿಸಲಾಗಿದೆ.

ಗೋವಾ ಸೈನ್ಯಗಳಿಂದ ಶಾಂತಿಗೆ ಭಂಗವಾದರೆ ಸೂಕ್ತ ಕ್ರಮ

ಗೋವಾದಲ್ಲಿ ಪೋರ್ಚುಗೀಸ್ ಅಧಿಕಾರಿಗಳು ತಮ್ಮ ಸೈನ್ಯ ಮತ್ತು ಶಸ್ತ್ರಗಳನ್ನು ಹೆಚ್ಚಿಸಿಕೊಳ್ಳುತ್ತಿರುವರೆಂದೂ, ಇದು ಪ್ರದೇಶಗಳಲ್ಲಿ ಶಾಂತಿ ಭಂಗವಾದರೆ ಭಾರತ ಸರ್ಕಾರದವರು ಸೂಕ್ತ ಕ್ರಮಗಳನ್ನು ಕೈಗೊಳ್ಳುವರೆಂದೂ ಕೇಂದ್ರ ರಾಜ್ಯ ಪರಿಷತ್ತಿನಲ್ಲಿ ಉಪ ವಿದೇಶಾಂಗ ಮಂತ್ರಿ ಎ. ಕೆ. ಚಂದರವರು ಹೇಳಿದರು.

ತಾಲ್ಲೂಕು ರೇಂಜ್ ಉಪಾಧ್ಯಾಯರುಗಳ ಸಭೆ

ಮೈಸೂರು ತಾಲ್ಲೂಕು ರೇಂಜ್ ಉಪಾಧ್ಯಾಯರುಗಳ ಸಭೆಯು ಕಳೆದ ಶನಿವಾರ ಟ್ರೈನಿಂಗ್ ಕಾಲೇಜ ಪ್ರಿನ್ಸಿಪಾಲರಾದ ಶ್ರೀ ಡಿ. ಶಿವರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸಿ. ಆರ್. [illegible] ನವರಿಂದ ಪ್ರಾರ್ಥನೆ, ಸಂಘದ ಕಾರ್ಯದರ್ಶಿ ಶ್ರೀ ಎಂ. [illegible] ನಾರಾಯಣರಾಯರ ವರದಿಗಳಾದ ನಂತರ ಪ್ರಾಕ್ಟೀಸಿಂಗ್ ಮಿಡಲ್ ಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೃಷ್ಣಮೂರ್ತಿಯವರೂ ಮತ್ತು ಪ್ರಾಥಮಿಕ ಶಾಲಾ ಹೆಡ್ಮಾಸ್ಟರ್ ಶ್ರೀ ಸಿದ್ಧಬಸಪ್ಪನವರೂ ಭಾಷಣ ಮಾಡಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವದಲ್ಲಿ ತಾಲ್ಲೂಕು ಉಪಾಧ್ಯಾಯರುಗಳು ಭಾಗವಹಿಸುವಂತೆ ಕೋರಿದರು. ಅದರಂತೆಯೇ ತೀರ್ಮಾನವೂ ಆಯಿತು.

ಎಂ. ಎಸ್. ಸುಬ್ಬಲಕ್ಷ್ಮಿಯವರ ಸಂಗೀತದ ಪ್ರಸಾರ

ನಾಳೆ ರಾತ್ರಿ ೯|| ಗಂಟೆಗೆ ಭಾರತ ರೇಡಿಯೋಗಳಲ್ಲಿ ಎಂ. ಎಸ್. ಸುಬ್ಬಲಕ್ಷ್ಮಿಯವರ ಸಂಗೀತದ ವಿಶೇಷ ಕಾರ್ಯಕ್ರಮವು ಇದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಂ ಪೈ	ರೂ. ಆ. ಪೈ
ಕಡಲೆಕಾಯಿ	೧೪ ೧೨ ೦	೨೬ ೨ ೦
ಎಳ್ಳು	೬೮ ೦ ೦	
ಹರಳುಬೀಜ	೨೯ ೭ ೦	
ಹುಚ್ಚೆಳ್ಳು	೪೬ ೨ ೦	೪೦ ೦ ೦
ಹೊಂಗೆಬೀಜ	೨೧ ೨ ೦	೨೫ ೧೪ ೦
ಹುಣಸೇಬೀಜ	೧೨ ೧೨ ೦	
ಹುರುಳಿ	೨೩ ೧೪ ೦	೨೯ ೦ ೦
ಹೆಸರು	೪೯ ೦ ೦	೪೧ ೧೨ ೦
ಹಲಸಂದೆ	೩೦ ೪ ೦	೪೩ ೦ ೦
ಅವರೆ	೨೫ ೦ ೦	೨೯ ೦ ೦
ಧನಿಯ	೨೯ ೦ ೦	೨೯ ೨ ೦
ತೊಗರಿ	೨೯ ೧೨ ೦	
ಕಡಲೆ	೪೯ ೦ ೦	೪೮ ೨ ೦
ಹತ್ತಿಬೀಜ	೨೬ ೪ ೦	೨೯ ೧೨ ೦
ಹುಣಸೇಹಣ್ಣು	೫ ೨ ೦	೮ ೧೨ ೦
ಸೀಗೇಕಾಯಿ	೩ ೧೩ ೦	೪ ೯ ೦
ಮೆಣಸಿನಕಾಯಿ	೩೦ ೦ ೦	೩೦ ೦ ೦
ತೆಂಗಿನಕಾಯಿ ೧೦೦೦	೧೧೦ ೦ ೦	೩೧೧ ೦ ೦
ಬೆಲ್ಲ	೪ ೯ ೦	[illegible] ೦ ೦

ಇಂಡೋಚೀಣ ಯುದ್ಧದ ಬಗ್ಗೆ ನೆಹರೂ ಸಲಹೆಗೆ ಕೆನಡದ ಬೆಂಬಲ

ಇಂಡೋಚೀಣದಲ್ಲಿ ಕೂಡಲೇ ಯುದ್ಧ ನಿಲ್ಲುವಂತೆ ಆಗಬೇಕೆಂದು ನೆಹರೂರವರು ಮಾಡಿರುವ ಮನವಿಗೆ ಕೆನಡದ ಪ್ರಧಾನಿ ಸೆಂಟ್ ಲಾರೆಂಟ್‌ರವರು ಬೆಂಬಲವಿತ್ತಿರುವರು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹಾಮರ್ಸ್ ಜೋಲ್ಡ್‌ರವರೂ ಸಹ ಇಂಡೋಚೀಣದಲ್ಲಿ ಸೀಸ್‌ಫೈರ್ ಆಗಬೇಕೆಂದು ತಿಳಿಸಿರುವರು.

ಭಾರತದ ಸೈನ್ಯಗಳಲ್ಲಿ ೬೮ ಆತ್ಮಹತ್ಯ ಪ್ರಸಂಗ

ಭಾರತದ ಸೈನ್ಯಗಳಲ್ಲಿ ಕಳೆದ ವರ್ಷ ೬೮ ಜನರ ಆತ್ಮಹತ್ಯ ಮಾಡಿಕೊಂಡಿರುತ್ತಾರೆ. ಅವ್ರಲ್ಲಿ ಒಬ್ಬ ನೌಕಾ ದಳದವನೂ, ಇಬ್ಬರು ವಿಮಾನ ಬಲದವರೂ ಇರುವರು. ಪ್ರೇಮ ಭಂಗದಿಂದ ೫ ಜನ ಸೈನಿಕರು ಮಡಿದಿರುತ್ತಾರೆ. ಗೃಹಕೃತ್ಯದ ಕಾರಣಗಳಿಗಾಗಿ ೨೮ ಜನರು ಸತ್ತಿರುವರು.

ಅಮೆರಿಕದ ಸೈನ್ಯ ಸಹಾಯದಿಂದ ಕಾಶ್ಮೀರದ ನೀತಿ ಬದಲಾವಣೆ

ಪಾಕಿಸ್ತಾನಕ್ಕೆ ಅಮೆರಿಕವು ಕೊಡಲಿರುವ ಮಿಲಿಟರಿ ಸಹಾಯದಿಂದ ಕಾಶ್ಮೀರ ಸಮಸ್ಯೆಯ ಈಗಿನ ನೀತಿಯಲ್ಲಿ ಖಂಡಿತವಾಗಿಯೂ ಬದಲಾವಣೆಯುಂಟಾಗಿರುವುದೆಂದು ಪ್ರಧಾನಿ ನೆಹರೂರವರ ಮೊನ್ನೆ ಲೋಕ ಸಭೆಯಲ್ಲಿ ತಿಳಿಸಿದರು. ಇದಲ್ಲದೆ ಪಾಕಿಸ್ತಾನದ ಪ್ರಧಾನಿ ಮಹಮದಾಲಿಯವರು ಮಿಲಿಟರಿ ಸಹಾಯದಿಂದ ಸಮಸ್ಯೆ ಸುಲಭವಾಗಿ ಬಗೆಹರಿಯುವುದೆಂದು ಹೇಳಿರುವುದು ವಿಸ್ಮಯಕಾರಕವೆಂದೂ ಅವರು ನುಡಿದರು.

ಹಿಂದಿ-ರಷ್ಯಾ ನಿಘಂಟು

ರಷ್ಯದ ರಾಜಧಾನಿ ಮಾಸ್ಕೋವಿನಲ್ಲಿರುವ ವಿದೇಶಿ ಮತ್ತು ರಾಷ್ಟ್ರೀಯ ನಿಘಂಟುಗಳ ಪ್ರಕಟನಾಲಯವು ಇದೇ ಪ್ರಥಮವಾಗಿ ಹಿಂದಿ ಮತ್ತು ರಷ್ಯ ಭಾಷೆಗಳಲ್ಲಿ ನಿಘಂಟೊಂದನ್ನು ಪ್ರಚುರಪಡಿಸುತ್ತದೆ.

ಶಾಸನ ಸಭೆಯಲ್ಲಿ ೬ನೇ ತಾ|| ಆಯವ್ಯಯದ ಪಟ್ಟಿ

ತಿರಿಯ ಶಾಸನ ಸಭೆಯಲ್ಲಿ ಬರುವ ತಿಂಗಳು ೬ನೇ ತಾ|| ಸಂಸ್ಥಾನದ ಆಯವ್ಯಯದ ಪಟ್ಟಿಯನ್ನು ಮಂಡಿಸಲಾಗುವುದು. ೧೦ನೇ ತಾ|| ದಿಂದ ೧೫ರ ವರೆಗೆ ಅದರ ಮೇಲೆ ಚರ್ಚೆ ನಡೆಯುವುದು. ಮಾರ್ಚಿ ೧೭ ರಿಂದ ೩೧ನೇ ತಾ|| ವರೆಗೆ ಮಸೂದೆ ಮಂಜೂರಾದುವುಗಳನ್ನು ಕರೆಲಾಗುವುದು. ಇನಾಂ ರದ್ದಿಯಾತಿ ಮಸೂದೆಯೂ ಪರಿಶೀಲಿಸಲ್ಪಡುವುದು. ೧,೦೪೨ ಪ್ರಶ್ನೆಗಳು ಬಂದಿರುತ್ತವೆ.

ವುಡ್‌ಲ್ಯಾಂಡ್ಸ್

26-2-54ನೇ ಶುಕ್ರವಾರದಿಂದ

ಪ್ರತಿ ದಿನ ಮೂರು ಪ್ರದರ್ಶನಗಳು

ಗೋಯಲ್ ಸಿನಿ ಕಾರ್ಪೋರೇಷನ್‌ರವರ

ಹಿಂದಿ ಚಿತ್ರ

ಆಸ್ * AAS

ಪಾತ್ರ :- ಕಾಮಿನಿ ಕೌಶಲ್, ಕೇಟುರ್, ಓಂ ಪ್ರಕಾಶ್ ಮತ್ತು ಗುಲಾಬ್

ತಪ್ಪದೆ ನೋಡಿರಿ !

ಆಂಧ್ರಕ್ಕೆ ಬಳ್ಳಾರಿಯನ್ನು ವಾಪಸು ಕೊಡಲು ಒತ್ತಾಯ

ಬಳ್ಳಾರಿಯಲ್ಲಿ ಕಳೆದ ಮಂಗಳವಾರ ಮಾಜಿ ಮದರಾಸ್ ಮಂತ್ರಿ ಶ್ರೀ ಹೆಚ್. ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಯೊಂದು ನಡೆದು ಬಳ್ಳಾರಿಯನ್ನು ಆಂಧ್ರ ಪ್ರಾಂತಕ್ಕೆ ಒಪ್ಪಿಸಬೇಕೆಂದು ಭಾಷಣಗಳಾದುವು. ಅಲ್ಲಿನ ಪ್ರಮುಖ ವಕೀಲರಾದ ಶ್ರೀ ಪಿ. ಎಂ. ಶಾಸ್ತ್ರಿಯವರು ಮಾತನಾಡಿ ಮುಸ್ಲಿಮರ ಆಕ್ರಮಣದಿಂದ ಹಂಪೆಯು ನಾಶವಾದಂತೆ, ಮಿಶ್ರಾ ವರದಿಯಿಂದ ಬಳ್ಳಾರಿಯು ಹಾಳಾಗಿದೆಯೆಂದು ತಿಳಿಸಿದರು. ಮೈಸೂರು ಶಾಸನ ಸಭಾ ಸದಸ್ಯರಾಗಿರುವ ಶ್ರೀ ಎಂ. ಗಂಗಪ್ಪನವರು ಮಾತನಾಡಿ, ತಾವು ಮೈಸೂರು ಶಾಸನ ಸಭೆಯಲ್ಲಿ ಭಾಗವಹಿಸಿದನಂತರ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಲ್ಲವೆಂದೂ, ಶಾಸನ ಸಭೆಗೆ ಹೋಗಕೂಡದೆಂದು ಜನರು ಹೇಳಿದರೆ ತಾವು ಹೋಗುವುದಿಲ್ಲವೆಂದೂ ತಿಳಿಸಿದರು. ಅವಶ್ಯಕವಿದ್ದರೆ ಆಂಧ್ರರು ತಮ್ಮ ಗುರಿ ಸಾಧನೆಗಾಗಿ ಜೈಲು ವಾಸ ಮತ್ತು ಲಾಠಿ ಏಟುಗಳನ್ನು ತಾಳುವುದಕ್ಕೂ ಸಿದ್ಧವಾಗಬೇಕೆಂದು ಅವರು ನುಡಿದರು.

ನೌಕರರ ಬೇಡಿಕೆಗಳನ್ನು ಅಲಕ್ಷಿಸಿರುವುದಕ್ಕಾಗಿ ಉಪವಾಸ

ಹೈದರಾಬಾದ್ ಸರ್ಕಾರವು ಸರ್ವೆ ಇಲಾಖೆ ನೌಕರರ ಬೇಡಿಕೆಗಳನ್ನು ನಿರ್ಲಕ್ಷಿಸುತ್ತಾ ಬಂದಿರುವುದರ ವಿರುದ್ಧವಾಗಿ ಮತ್ತು ಇದರ ಬಗ್ಗೆ ಜನಗಳ ಗಮನವನ್ನು ಸೆಳೆಯುವ ಸಲುವಾಗಿ ಕಸ್ತೂರಿ ಬಾಯಿಯವರ ಸಮಾಧಿಯ ಬಳಿ ೩ ವಾರಗಳಕಾಲ ಉಪವಾಸ ಮಾಡಿ ಅನಂತರ ದೆಹಲಿಗೆ ತೆರಳಲು ಆ ಇಲಾಖೆಯ ನೌಕರ ಶ್ರೀ ಸೊಹ್ರಾಬ್‌ಜಿ ಕವಾಸ್‌ಜಿ ಎಂಬಾತನು ಕಾಲ್ನಡಿಗೆಯಿಂದ ಪೂನಾಕ್ಕೆ ಬಂದಿದ್ದಾನೆಂದು ತಿಳಿದುಬಂದಿದೆ.

ತಾರಾಲೋಕ

ಸಚಿತ್ರ ಕನ್ನಡ ವಾರ ಪತ್ರಿಕೆ

ಮಾರ್ಚಿ ಮೊದಲ ವಾರದಲ್ಲಿ

ಹೊರಬೀಳುತ್ತದೆ

★ ಚಂದಾದಾರರಿಗೆ ಕಾಣಿಕೆ

★ ಲೇಖಕರಿಗೆ ಸದವಕಾಶ

· ವಿವರಗಳಿಗೆ ಬರೆಯಿರಿ ·

ಸಂಪಾದಕರು:– 'ತಾರಾಲೋಕ'

ಮೈಸೂರು

ಪ್ರಭಾ

ಇಂದಿನಿಂದ ಅಮೋಘ ಪ್ರಾರಂಭ

ದಿನವೂ 3 ಆಟಗಳು

ಮೂರ್ತಿ ಪಿಕ್ಚರ್ಸ್‌ರವರ ಅರ್ಪಣೆ

ಪೌರಾಣಿಕ ಕನ್ನಡ ಚಿತ್ರ

ದೇವಕನ್ನಿಕಾ

ಪಾತ್ರ – ಇಂದುಶೇಖರ್, ಎಸ್. ಆರ್. ಶಾಸ್ತ್ರಿ, ಕಾಂತಿಸ್ವರ, ಟಿ. ಎನ್. ಬಾಲಕೃಷ್ಣ, ಮುರಾರಿ, ಜಾನಕಿ ಲಕ್ಷ್ಮೀದೇವಿ

Edited, Printed and Published by A R Nagarajan at Sadhvi Press, D.Subbiah Road, Mysore

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

27—2—54 ನೇ ಶನಿವಾರದಿಂದ ★ ಅಮೋಘ 3 ನೆಯ ವಾರ

ಪ್ರತಿ ದಿನ ಮೂರು ಆಟಗಳು

ರಾಜರಾಜೇಶ್ವರಿ ಕಂಪೆನಿಯವರ

ತಮಿಳು ಚಿತ್ರ

✱ ಲಕ್ಷ್ಮಿ ✱

(ಜೆಮಿನಿಯವರ ರಿಲೀಸ್)

ಪಾತ್ರ – ಕನ್ನಾಂಬ, ಪದ್ಮಿನಿ, ಎನ್. ನಾರಾಯಣರಾವ್, ಚಂದ್ರಬಾಬು, ಮನೋಹರ್

ರಿಜಿಸ್ಟರ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಬಿ ವಿ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೦೨] MYSORE SATURDAY 27-2-1954 :: ಮೈಸೂರು : ಶನಿವಾರ ೨೭-೨-೧೯೫೪ [ಸಂಚಿಕೆ ೧೪೬

ಪಾಕಿಸ್ತಾನದ ರಕ್ಷಣೆಗಾಗಿ ೨೦ ಕೋಟಿ ರೂ. ಅಧಿಕ ವೆಚ್ಚ

ಬಸ್ಸು ಕೆಲಸಗಾರರ ಮುಷ್ಕರ ರದ್ದು

ಮೈಸೂರು ೨೭

ಕೈಗಾರಿಕಾ ನ್ಯಾಯಾಲಯದವರಿತ್ತ ತೀರ್ಪಿನ ಪ್ರಕಾರ ನಡೆದುಕೊಳ್ಳದಿರುವ ಬಸ್ಸು ಮಾಲೀಕರ ಮೇಲೆ ಸರ್ಕಾರದವರು ಕ್ರಮ ಜರುಗಿಸದಿದ್ದರೆ ನಾಳಿದ್ದಿನಿಂದ ಮುಷ್ಕರ ನಡೆಸುವುದಾಗಿ ಜಿಲ್ಲಾ ಬಸ್ಸು ಕೆಲಸಗಾರರ ಸಂಘದವರು ಕೈಗೊಂಡಿದ್ದ ತೀರ್ಮಾನವನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿದೆ. ಸರ್ಕಾರದವರು ಹಲವು ಬಸ್ಸು ಮಾಲೀಕರ ಮೇಲೆ ಕೋರ್ಟಿನಲ್ಲಿ ವ್ಯವಹಾರ ಹೂಡಿರುವುದರಿಂದ ಮುಷ್ಕರವು ನಡೆಯುವುದಿಲ್ಲ. ಕೈಗಾರಿಕಾ ನ್ಯಾಯಾಲಯದ ತೀರ್ಪಿನ ಅಂಶಗಳನ್ನು ಜಾರಿಗೆ ತರದಿರುವ ಇತರ ಬಸ್ಸು ಮಾಲೀಕರ ಮೇಲೂ ಕ್ರಮ ಜರುಗಿಸಲು ಸಂಘದ ಕಾರ್ಯಕಾರಿ ಸಮಿತಿಯು ಸರ್ಕಾರವನ್ನು ಒತ್ತಾಯಪಡಿಸುತ್ತದೆ

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ಸಂತೋಷ ಸಮಾರಂಭ

ರಾಜಧಾನಿಯಲ್ಲಿರುವ ದಕ್ಷಿಣ ಕನ್ನಡ ವಿದ್ಯಾರ್ಥಿಗಳ ಸಂಘದ ಸಂತೋಷ ಸಮಾರಂಭವು ನಾಳೆ ಬೆಳಿಗ್ಗೆ ೧೦|| ಘಂಟೆಗೆ ದಾಸಪ್ರಕಾಶ ಹೋಟೇಲಿನಲ್ಲಿ ಜರುಗುವುದು. ಶ್ರೀಮತಿ ಯಶೋಧರಾ ದಾಸಪ್ಪನವರು ಅಧ್ಯಕ್ಷತೆ ವಹಿಸುವರು

ಶ್ರೀ ರಾಮ ಸಪ್ತಾಹ

ಮಂಡಿ ಮೊಹಲ್ಲೆಯ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಪಕ್ಕದಲ್ಲಿ ಹಾಕಿರುವ ಚಪ್ಪರದಲ್ಲಿ ೨೪ನೇ ವರ್ಷದ ಶ್ರೀ ರಾಮ ಸಪ್ತಾಹವು ನಾಳೆಯಿಂದ ಬರುವ ತಿಂಗಳು ೭ನೇ ತಾ|| ಪೂರ್ತಾ ನಡೆಯುವುದು. ನಾಳೆ ಬೆಳಿಗ್ಗೆ ೫|| ಘಂಟೆಗೆ ಸಪ್ತಾಹವು ಆರಂಭವಾಗುವುದು. ಪ್ರತಿ ದಿನ ಬೆಳಿಗ್ಗೆ ೬|| ಯಿಂದ ೭|| ವರೆಗೆ ಭಗವದ್ಗೀತಾ ಪಾರಾಯಣವೂ, ಸಂಜೆ ೬ ರಿಂದ ೯ರ ವರೆಗೆ ಬ್ರ|| ಶ್ರೀ ಹರಿಹರಾನಂದ ಭಾರತಿ ಮತ್ತು ಶ್ರೀ ಸಂಬಂಧಮೂರ್ತಿಗಳಿಂದ ಹರಿಕಥೆಗಳೂ ನಡೆಯುತ್ತವೆ. ಮಹಾಜನರು ಧನಧಾನ್ಯ ರೂಪದಲ್ಲಿ ಸಹಾಯ ಮಾಡುವಂತೆ ಭಕ್ತ ಮಂಡಲಿಯವರು ಕೋರಿರುತ್ತಾರೆ

ಉಪನ್ಯಾಸ

ರಾಜಧಾನಿಯ ಸುಬ್ಬರಾಯನಕೆರೆ ಏರಿಯ ಮೇಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಮಂತ್ರಾಲಯದ ಸಂಸ್ಕೃತ ಪಾಠಶಾಲೆಯ ವೇದಾಂತ ವಿದ್ವಾಂಸರಾದ ಬ್ರ|| ಶ್ರೀ ರಾಘವೇಂದ್ರಾಚಾರ್ಯರು ನಾಳೆಯಿಂದ ಪ್ರತಿನಿತ್ಯ ಸಂಜೆ ೬|| ಯಿಂದ ೮|| ಗಂಟೆವರೆಗೆ ರಾಮಚಾರಿತ್ರ ಮಂಜರಿ ಮತ್ತು ರಾಘವೇಂದ್ರ ಸ್ವಾಮಿಗಳವರ ಚರಿತ್ರೆಗಳ ಬಗ್ಗೆ ಉಪನ್ಯಾಸ ಮಾಡುವರು. ಆಸ್ತಿಕ ಮಹನೀಯರು ದಯಮಾಡಿಸುವಂತೆ ಕೋರಲಾಗಿದೆ

ಜೂಜಾಟದ ಶಿಕ್ಷೆ

ಮಂಡಿ ಮೊಹಲ್ಲಾ ಸವಾಯ್ ರಸ್ತೆಯ ಸಿನೆಮೊಂದರ ಮಹಡಿಯ ಮೇಲೆ ನೆನ್ನೆ ಮಧ್ಯಾಹ್ನ ಜೂಜಾಡುತ್ತಿದ್ದ ಮಹಮದ್ ಯೂಸುಫ್ ವಗೈರೆ ಆರು ಜನರನ್ನು ಮಂಡಿ ಪೋಲೀಸರು ದಸ್ತಗಿರಿ ಮಾಡಿ, ಮೊಕದ್ದಮೆಯನ್ನು ಹೂಡಿರುತ್ತಾರೆ

ವಿಶ್ವವಿದ್ಯಾಲಯ ಶಿಕ್ಷಣದ ಅವಧಿ ೩ ವರ್ಷ

ಬೆಂಗಳೂರು ೨೭

ವಿಶ್ವವಿದ್ಯಾಲಯ ಶಿಕ್ಷಣದ ಅವಧಿಯು ಮೂರು ವರ್ಷವಿರುವಂತೆ ಕೇಂದ್ರ ವಿದ್ಯಾ ಸಮಿತಿಯವರು ಮಾಡಿರುವ ಸಲಹೆಯನ್ನು ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಅಂಗೀಕರಿಸಿರುತ್ತಾರೆ. ಅವಧಿಯು ಎರಡು ವರ್ಷವಿರಬೇಕೆಂದು ಮೊದಲು ಸಮಿತಿಯು ತೀರ್ಮಾನ ಮಾಡಿದ್ದಿತು

ಸರ್ಕಾರಿ ನೌಕರರ ಉಡುಪಿನ ನಿಯಮ

ಆದಷ್ಟು ಮಟ್ಟಿಗೆ ಸ್ವದೇಶೀ ಬಟ್ಟೆಗಳಿಂದ ತಯಾರಿಸಲ್ಪಟ್ಟ ಉಡುಪುಗಳನ್ನು ನೌಕರರು ಧರಿಸಿ ಕಛೇರಿಗೆ ಬರುವಂತೆ ಆಜ್ಞೆ ಮಾಡಿ, ಕಿರು ಅಂಗಿ, ಷರಾಯಿ ಅಥವಾ ಪಂಚೆಯನ್ನು ಕೆಲಸದ ವೇಳೆಯಲ್ಲಿ ಹಾಕಿಕೊಳ್ಳಬೇಕೆಂದು ಸಂಸ್ಥಾನದ ಸರ್ಕಾರದವರು ಸೂಚಿಸಿರುತ್ತಾರೆ. ಸಂಜೆಯ ಸಮಾರಂಭಗಳಿಗಾಗಿ, ಕಿರು ಅಂಗಿ ಮತ್ತು ಬಿಳಿಯ ಪಂಚೆ ಅಥವಾ ಷರಾಯಿಯನ್ನು ಧರಿಸಬೇಕೆಂದೂ, ಸಾಂಪ್ರದಾಯಿಕ ಸಮಾರಂಭಗಳಲ್ಲಿ ಭಾಗವಹಿಸುವಾಗ, ಬಿಳಿಯ ಅಥವ ಕಪ್ಪುಬಣ್ಣದ ಲಾಂಗ್ ಕೋಟು ಮತ್ತು ರುಮಾಲು ಇರಬೇಕೆಂದೂ ವಿಧಾಯಕ ಮಾಡಲಾಗಿದೆ

ಹಿರಿಯ ಶಾಸನ ಸಭೆಗೆ ಕಾಂಗ್ರೆಸ್ ಉಮೇದುವಾರರು

ಶ್ರೀಗಳಾದ ಎಲ್ ಎಚ್ ತಿಮ್ಮಾಬೋವಿ, ಎಂ ವೆಲ್ಲೂರಿ ಮತ್ತು ತಿರುಮಲೇಗೌಡರನ್ನು ಸಂಸ್ಥಾನದ ಹಿರಿಯ ಶಾಸನ ಸಭೆಯಲ್ಲಿ ಖಾಲಿಯಾಗುವ ಸ್ಥಾನಗಳಿಗೆ ಕಾಂಗ್ರೆಸ್ ಉಮೇದುವಾರರನ್ನಾಗಿ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯವರು ಆರಿಸಿರುತ್ತಾರೆ

೭೧ ಲಕ್ಷ ಜನರಿಂದ ಟಿಕೆಟ್ಟಿಲ್ಲದ ಪ್ರಯಾಣ

ಕಳೆದ ವರ್ಷ ಭಾರತದ ರೈಲ್ವೆಗಳಲ್ಲಿ ೭೧ ಲಕ್ಷಕ್ಕೂ ಹೆಚ್ಚು ಮಂದಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿ ಸಿಕ್ಕಿಬಿದ್ದರೆಂದೂ, ಕುಂಭಮೇಳ ಒಂದರಲ್ಲೇ ೩೭ ಸಾವಿರ ಜನ ಈ ರೀತಿ ಪ್ರಯಾಣ ಮಾಡಿದರೆಂದೂ ಸುಮಾರು ೧|| ಕೋಟಿ ರೂ ಗಳು ದಂಡದ ರೂಪದಲ್ಲಿ ವಸೂಲಾದುವೆಂದೂ ಗೊತ್ತಾಗಿದೆ

ಹುಡುಗಿಯನ್ನು ಪುಸಲಾಯಿಸಿ ಒಡವೆ ಅಪಹಾರಕ್ಕಾಗಿ ಬಂಧನ

ಮಂಡಿ ಮೊಹಲ್ಲಾ ನಿವಾಸಿಯೊಬ್ಬರ ಮಗಳನ್ನು ಬನ್ನೂರು ಕಡೆಯವನೆಂದು ಹೇಳಲಾದ ಷಫಿ ಅಹಮದ್ ಎಂಬಾತನ ನೆನ್ನೆ ಪುಸಲಾಯಿಸಿ ಹುಡುಗಿಯ ಕೈಗೆ ಬೊಂಬೆಯೊಂದನ್ನು ಕೊಟ್ಟು ಅವಳ ಕಾಲಿನ ಚೈನನ್ನು ಕಿತ್ತುಕೊಂಡು ಓಡುತ್ತಿದ್ದಾಗ, ಅಲ್ಲಿದ್ದ ಹಲವರು ಅವನನ್ನು ಹಿಡಿದು ಲಷ್ಕರ್ ಪೋಲೀಸರಿಗೆ ಒಪ್ಪಿಸಿದರು. ಅವನನ್ನು ದಸ್ತಗಿರಿ ಮಾಡಲಾಗಿದೆ

ಕನ್ನಡಕ ಸಿಕ್ಕಿದೆ

ಒಂದು ಕನ್ನಡಕ ಮತ್ತು ಲೆಕ್ಕಗಳನ್ನು ಗುರುತು ಹಾಕಿರುವ ಎರಡು ಚೀಟಿಗಳನ್ನು ಕನ್ನಡಕದ ಪೆಟ್ಟಿಗೆಯೊಂದು ಚಾಮರಾಜಪುರಂ ಪೋಸ್ಟಾಫೀಸ್ ಬಳಿ ಸಿಕ್ಕಿರುತ್ತದೆ. ಮಾಲೀಕರು ಸರಿಯಾದ ರುಜುವಾತು ಕೊಟ್ಟು ಸಾಧ್ವಿ ಕಛೇರಿಯಿಂದ ಪಡೆಯಬಹುದು

ಮಕ್ಕಳ ಅಪಹರಣದ ಸುದ್ದಿ ನಿರಾಧಾರವಾದುದು

ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳ ವಿವರಣೆ

ಮೈಸೂರು ೨೭

ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ರಾಜಧಾನಿಯಲ್ಲಿ ಇತ್ತೀಚೆಗೆ ಮಕ್ಕಳ ಅಪಹರಣದ ವಿಷಯವಾಗಿ ಹರಡಿರುವ ಸುದ್ದಿಯು ನಿರಾಧಾರವಾದುದೆಂದೂ, ಅದನ್ನು ಯಾರೂ ನಂಬಬಾರದೆಂದೂ ತಿಳಿಸಿದರು. ಸುಳ್ಳು ವದಂತಿಗಳಿಂದ ನಿರಪರಾಧಿಗಳಾದ ಹಲವು ವ್ಯಕ್ತಿಗಳನ್ನು ಉದ್ರೇಕಗೊಂಡ ಗುಂಪಿನವರು ಹಿಡಿದು ಹಿಂಸಿಸಿ ಪೋಲೀಸು ಠಾಣೆಗೆ ಕರೆದೊಯ್ದ ನಿದರ್ಶನಗಳನ್ನು ಉದಹರಿಸಿದರು

ಈ ರೀತಿ ಜನರ ಗುಂಪಿನ ಆಘಾತಕ್ಕೆ ಗುರಿಯಾಗಿದ್ದ ಹಲವರು ಸಭೆಗೆ ಬಂದು ತಮ್ಮ ಅನುಭವಗಳನ್ನು ನಿರೂಪಿಸಿದರು

ನಗರದ ಶಾಲೆಗಳ ಬಳಿ ಖಾಕೀ ಉಡುಪಿನ ಪೋಲೀಸಿನವರನ್ನು ಉಸ್ತುವಾರಿಗಾಗಿ ಕಾವಲು ಹಾಕಲಾಗಿದೆಯೆಂದೂ, ಇದಲ್ಲದೆ ಬೈಸಿಕಲ್ಲುಗಳ ಮೇಲೂ ಗಸ್ತು ತಿರುಗಲಾಗುತ್ತದೆಂದೂ ಜಿಲ್ಲಾಧಿಕಾರಿಗಳು ಹೇಳಿ ತಂದೆ ತಾಯಿಗಳು ಯಾವ ಕಳವಳಕ್ಕೂ ಆಸ್ಪದವೀಯದೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಕೋರಿದರು

ಪೌರಸಭಾಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರ ಮಾತನಾಡಿ ನಗರದಲ್ಲಿ ಒಂದು ಮಗುವೂ ಸಹ ಇದುವರೆಗೆ ಅಪಹರಿಸಲ್ಪಟ್ಟಿಲ್ಲವೆಂದು ಹೇಳಿದರು. ಜನರು ಉದ್ರೇಕಗೊಂಡು ನಿರಪರಾಧಿಗಳಾದವರನ್ನು ಯಾವ ತೊಂದರೆಗೂ ಒಳಪಡಿಸಬಾರದೆಂದು ಸೂಚಿಸಿದರು.

ಸುಳ್ಳು ವದಂತಿಗಳನ್ನು ತಡೆಗಟ್ಟಲು ಪತ್ರಿಕೆಗಳವರು ಸಹಕರಿಸಬೇಕೆಂದು ಜಿಲ್ಲಾಧಿಕಾರಿಗಳೂ, ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರೂ ಕೋರಿದರು. ಪತ್ರಿಕಾ ಪ್ರತಿನಿಧಿಗಳು ಇತ್ತ ಹಲವು ಸಲಹೆಗಳನ್ನು ಜಿಲ್ಲಾಧಿಕಾರಿಗಳು ಅಂಗೀಕರಿಸಿ ಅವುಗಳಿಗೆ ಅನುಸಾರವಾಗಿ ಸೂಕ್ತ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು

ವೇತನ ಬಟವಾಡೆ

ನಾಳೆ ತಿಂಗಳ ಕೊನೆಯ ದಿನವಾಗಿದ್ದು ಭಾನುವಾರವಾದ್ದರಿಂದ ನೌಕರದಾರರಿಗೆ ವೇತನವನ್ನು ಜಿಲ್ಲಾ ಖಜಾನೆಯಲ್ಲಿ ೧ನೇ ತಾ|| ಬೆಳಿಗ್ಗೆ ೮ ರಿಂದ ೧೨ ಮತ್ತು ೨ನೇ ತಾ|| ೧೧ ರಿಂದ ೩ ಘಂಟೆಯವರೆ ಬಟವಾಡೆಗೆ ಮಾಡಲಾಗುವುದು.

ಪಾಕಿಸ್ತಾನದ ರಕ್ಷಣಾ ವ್ಯವಸ್ಥೆಗಾಗಿ ೨೦ ಕೋಟಿ ಹೆಚ್ಚು ವೆಚ್ಚ

ಪಾಕಿಸ್ತಾನದಲ್ಲಿ ತಯಾರಿಸಲಾಗಿರುವ ಬರುವ ವರ್ಷದ ಆಯವ್ಯಯದ ಪಟ್ಟಿಯಲ್ಲಿ ದೇಶದ ರಕ್ಷಣಾ ವ್ಯವಸ್ಥೆಗಾಗಿ ೨೦ ಕೋಟಿ ರೂ. ಗಳನ್ನು ಹೆಚ್ಚಾಗಿ ಖರ್ಚು ಮಾಡಲು ನಿರ್ಧರಿಸಲಾಗಿರುವುದೆಂದೂ, ಈ ಮೊಬಲಗನ್ನು ಯುದ್ಧ ಸಾಮಗ್ರಿಗಳ ತಯಾರಿಕೆಗಾಗಿ ವಿನಿಯೋಗಿಸಲಾಗುವುದೆಂದೂ ಗೊತ್ತಾಗಿದೆ.

ಸಂಸ್ಥಾನದಲ್ಲಿ ೬ ವರ್ಷ ಅವಧಿಯ ಪ್ರಾಥಮಿಕ ವಿದ್ಯಾಭ್ಯಾಸ

ವಿದ್ಯಾ ಸೆಸ್ಸು ಮತ್ತು ಹೆಚ್ಚು ವಿದ್ಯಾ ಶುಲ್ಕ ವಿಧಿಸಲು ವಿಚಾರ

ಬೆಂಗಳೂರು ೨೭

ಸಂಸ್ಥಾನ ಸರ್ಕಾರದವರು ರಚಿಸಿರುವ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಆಖೈರು ಸಭೆಯು ನೆನ್ನೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ಸಂಸ್ಥಾನದಲ್ಲಿ ೬ ವರ್ಷಗಳಿಗೆ ಮಿತಿಗೊಳಿಸಬೇಕೆಂದು ಸಮಿತಿಯು ನಿರ್ಧರಿಸಿತು. ಮಾಧ್ಯಮಿಕ ಮತ್ತು ಪ್ರಾಥಮಿಕ ವಿದ್ಯಾಭ್ಯಾಸವನ್ನು ಒಟ್ಟು ೧೧ ವರ್ಷಗಳೆಂದು ಗೊತ್ತುಪಡಿಸಿರುವುದನ್ನು ಸಭೆಯು ಅನುಮೋದಿಸಿತು

ವಿದ್ಯಾ ಸುಧಾರಣೆಗಳನ್ನು ಜಾರಿಗೆ ತರಲು ವಿದ್ಯಾ ಸೆಸ್ಸು ಹಾಕುವುದು, ವಿದ್ಯಾ ಶುಲ್ಕವನ್ನು ಹೆಚ್ಚಿಸುವುದು ಮತ್ತು ಕೇಂದ್ರದಿಂದ ಗ್ರಾಂಟು ಕೇಳುವುದು ಈ ಮೂರು ವಿಧಾನಗಳಿಂದ ಹಣವನ್ನು ಶೇಖರಿಸಲು ಒಪ್ಪಲಾಯಿತು. ವಿದ್ಯಾ ಸೆಸ್ಸಿನಿಂದ ೧೨ ಲಕ್ಷ ರೂ. ಬರುವುದಾಗಿ ಮುಖ್ಯ ಮಂತ್ರಿಗಳು ತಿಳಿಸಿದರು

ನಗೀಬರಿಗೆ ಪ್ರಾಣ ದಾನ ಮಾಡಿರುವುದಾಗಿ ಈಜಿಪ್ಟ್ ಮಂತ್ರಿ ಹೇಳಿಕೆ

ಮಾಜಿ ಅಧ್ಯಕ್ಷ ನಗೀಬರನ್ನು ತಾವು ಮನಸ್ಸು ಮಾಡಿದ್ದರೆ ಕೊಂದುಹಾಕಬಹುದಾಗಿತ್ತೆಂದೂ, ದಂಗೆಕೋರರಿಗೆ ಮಾಡಿರುವ ರೀತಿಯಲ್ಲಿಯೇ ಅವರ ಬಗ್ಗೆಯೂ ಈಗ ನಡೆದುಕೊಳ್ಳಲಾಗಿರುವುದೆಂದೂ ಈಜಿಪ್ಟ್ ಮಂತ್ರಿ ಸಾಲಾ ಸಲೀಂರವರು ತಿಳಿಸಿರುತ್ತಾರೆ.

ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಭಾವಚಿತ್ರ ಅನಾವರಣ

ಮುಖ್ಯ ಮಂತ್ರಿಯವರಿಂದ

ಸ್ವಂ ಟು ಫೋ॰] ಬೆಂಗಳೂರು ೨೭

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಜಿಲ್ಲಾ ಬೋರ್ಡು ಕಟ್ಟಡದಲ್ಲಿ ಬೋರ್ಡಿನ ಮಾಜಿ ಅಧ್ಯಕ್ಷರಾದ ಶ್ರೀಗಳು ಪುಟ್ಟಯ್ಯ, ಅಬ್ದುಲ್ ರಹಮಾನ್, ವಿ. ವೆಂಕಟಪ್ಪ ಮತ್ತು ಈಗಿನ ಅಧ್ಯಕ್ಷ ಶ್ರೀ ಹೆಚ್ ಆರ್. ಗುರುವಾರೆಡ್ಡಿಯವರ ಭಾವಚಿತ್ರಗಳನ್ನು ಅನಾವರಣ ಮಾಡಿದರು. ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಜಿಲ್ಲಾ ಬೋರ್ಡುಗಳನ್ನು [illegible] ಡಿ, ವಿಶೇಷ ಅಧಿಕಾರಿಗಳಿಗೆ ವಹಿಸುವುದರಿಂದ ಬೋರ್ಡುಗಳ ಕೆಲಸವು ದಕ್ಷತೆಯಿಂದ ಸಾಗುವುದಿಲ್ಲವೆಂದು ಅರ್ಥ ಮಾಡಲಾಗಿದೆಯೆಂದೂ, ಸಂಸ್ಥಾನದಲ್ಲಿ ಸಾರ್ವಜನಿಕಾಭಿಪ್ರಾಯವು ಬಂದುದರಿಂದ ಇಲ್ಲಿ ಬೋರ್ಡುಗಳನ್ನು ರದ್ದು ಮಾಡಿ ಅವುಗಳ ಭವಿಷ್ಯದ ಬಗ್ಗೆ ಸಮಿತಿಯನ್ನು ರಚಿಸಲಾಗಿರುವುದೆಂದೂ ತಿಳಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷರು ಬೇಕಾದರೆ ಸಮಿತಿಯ ಮುಂದೆ ತಮ್ಮ ಅಭಿಪ್ರಾಯವನ್ನು ತಿಳಿಸಬಹುದೆಂದು ಹೇಳಿದರು.

ಕಾಳಿದಾಸ ಮಹೋತ್ಸವ

ಮೈಸೂರ ೨೭

ಪ್ರಥಮ ದರ್ಜೆ ಕಾಲೇಜಿನ ಸಂಸ್ಕೃತ ಸಂಘದವರು ನೆನ್ನೆ ಸಂಜೆ ಕ್ರಾಫರ್ಡ್ ಭವನದಲ್ಲಿ ಮಹಾಕವಿ ಕಾಳಿದಾಸನ ಮಹೋತ್ಸವವನ್ನು ಆರಂಭಗೊಳಿಸಿದರು. ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತರು ಅಧ್ಯಕ್ಷತೆ ವಹಿಸಿದ್ದರು

ಶ್ರೀ ಎಸ್ ವಿ. ವೆಂಕಟಾಚಲಂರವರಿಂದ ಪ್ರಾರ್ಥನೆಯಾದನಂತರ ಸಂಘದ ಅಧ್ಯಕ್ಷರಾದ ಶ್ರೀ ಎಸ್. ರಂಗನಾಥಾಚಾರ್‌ರವರು ಸ್ವಾಗತ ಭಾಷಣ ಮಾಡಿ ಮಹೋತ್ಸವದ ವಿಚಾರವನ್ನು ತಿಳಿಸಿದರು

ಶ್ರೀ ಟಿ. ಎಸ್ ಗೋಪಾಲರವರು ಕುಮಾರ ಸಂಭವ ಗ್ರಂಥದ ಪರಿಚಯವನ್ನು ಮಾಡಿ, ಅದರ ಹಲವು ಪದ್ಯಗಳನ್ನು ಸವಿಸ್ತಾರವಾಗಿ ಹಾಡಿದರು. ಕಾಳಿದಾಸನ ಕಾವ್ಯಗಳ ವಿಷಯವಾಗಿ ಶ್ರೀ ಎಸ್ ವಿ ಪರಮೇಶ್ವರ ಭಟ್ಟರು ಸ್ವಾರಸ್ಯವಾದ ಭಾಷಣ ಮಾಡಿದರು.

ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿ ಭಾಷಣ ಮಾಡಿ ಕಾಳಿದಾಸನು ಭಾರತಕ್ಕೆ ಮಾತ್ರವಲ್ಲದೆ ಅಂತರ ರಾಷ್ಟ್ರೀಯ ಕವಿ ಸಾರ್ವಭೌಮನೆಂದು ಹೇಳಿದರು. ಆವನ ಕಾವ್ಯಗಳನ್ನೂ ನಾಟಕಗಳನ್ನೂ ನಮ್ಮ ಜನರಿಗೆ ಹೆಚ್ಚುಹೆಚ್ಚಾಗಿ ಪರಿಚಯ ಮಾಡಿಕೊಡಲು ದೊಡ್ಡ ಪ್ರಯತ್ನಗಳು ನಡೆಯಬೇಕೆಂದು ಸೂಚಿಸಿದರು.

ಇಂಗ್ಲೆಂಡಿನಲ್ಲಿ ಷೇಕ್ಸ್‌ಪಿಯರ್ ಕವಿಯ ನಾಟಕಗಳನ್ನು ಹತ್ತಾರು ವರ್ಷ ಕಾಲ ಅಭ್ಯಾಸ ಮಾಡಿ ಅನಂತರ ರಂಗಭೂಮಿಯ ಮೇಲೆ ಬಹಳ ಪರಿಷ್ಕಾರವಾಗಿ ಪ್ರದರ್ಶಿಸಿ ಅನೇಕ ತಿಂಗಳುಗಳ ಕಾಲ ಅಲ್ಲಿನ ಜನರಿಗೆ ಮನರಂಜನೆಯನ್ನುಂಟುಮಾಡಿ ವಿಶೇಷವಾದ ಪ್ರೋತ್ಸಾಹವನ್ನೂ ಸಹ ಪಡೆಯಲಾಗುತ್ತಿದೆಯೆಂದು ಅವರ ತಿಳಿಸಿ, ನಮ್ಮ ನಾಟಕಗಳೂ ಅಂತಹ ಮಟ್ಟಕ್ಕೆ ಬರುವಂತಾಗಲೆಂದು ಹಾರೈಸಿದರು

ಶ್ರೀಮತಿ ಎ ವಿ ಮನೋಹರರವರಿಂದ ಗಾಯನವೂ, ಶ್ರೀ ಎಸ್ ವಿ ವೇದಾಂತಾಚಾರ್ಯರಿಂದ ವೀಣಾ ವಾದನವೂ ಸಪ್ನವಾಸವದತ್ತ ಎಂಬ ದೃಶ್ಯ ಪ್ರದರ್ಶನವೂ ಆದ ಮೇಲೆ ಮಂಗಳಾರ್ತಿ ಮತ್ತು ರಾಷ್ಟ್ರ ಗೀತೆಯೊಡನೆ ಸಭೆ ಮುಗಿಯಿತು

ಶ್ರೀ ರಾಮ ಸಹಾಯ ಸಂಘದ ಸಂತೋಷ ಸಮಾರಂಭ

ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದ ವಿದ್ಯಾರ್ಥಿ ಶಾಖೆಯ ಸಂತೋಷ ಸಮಾರಂಭವು ನಾಳೆ ಸಂಜೆ ೫|| ಗಂಟೆಗೆ ಪುರಸಭಾ ಶಾಸನಕರಾದ ಶ್ರೀ ಎಸ್ ಲಕ್ಷ್ಮಿನಾರಾಯಣರ ಅಧ್ಯಕ್ಷತೆಯಲ್ಲಿ ನಡೆಯುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಸಿಟೀಲು ೭ ೩೦ ಎಂ ಎಸ್ ಸುಬ್ಬುಲಕ್ಷ್ಮಿ, ಮಧುರೆ ಮಣಿ ಅಯ್ಯರ್ ಡಿ ಕೆ ಪಟ್ಟಮ್ಮಾಳ್, ಲಾಲ್ಗುಡಿ ಜಯರಾಮನ್ ೧—೩೦ ಮತ್ತು ೧ ೫೦ ಮಧ್ಯಾಹ್ನ ೩ ನಮ್ಮ ಮಕ್ಕಳ ಗೀತೆಗಳು ಸಂಜೆ ೬—೩೦ ಮತ್ತು ೬ ೫ ಶ್ರೀಮತಿ ... ವೆಂಕಟೇಶ್ ಸಂಗೀತ ೬ ಗಾನ ವಿಹಾರ ೬—೧೫ ನಾವು ಮತ್ತು ನಮ್ಮವರು ೭ ೪೦ ನೃತ್ಯ ಗೀತೆ ೮ ಸರೋಜಾದೇವಿ, ಸಂಗೀತ ೯ ೧೫ ಕನ್ನಡ ಗೀತೆಗಳು ೯—೩೦ ದೂರದರ್ಶಿ—ಕನ್ನಡ ನಾಟಕ

ಕಾಶ್ಮೀರದ ಪ್ರಶ್ನೆಯಲ್ಲಿ ಪ್ರವೇಶಿಸಲು ಕಷ್ಟವೆಂದು ಗಫಾರ್ ಖಾನ್

ರಾವಲ್ಪಿಂಡಿಯಿಂದ ಲಾಹೋರಿಗೆ ಖಾನ್ ಅಬ್ದುಲ್ ಗಫಾರ್ ಖಾನರು ಆಗಮಿಸಿದರು. ಪಾಕಿಸ್ತಾನದ ಕಡೆಗೆ ಕಾಶ್ಮೀರದ ಜನರನ್ನು ಒಲಿಸಿಕೊಳ್ಳಲು ಸಾಧ್ಯವೇ ಎಂದು ಅವರನ್ನು ಪ್ರಶ್ನಿಸಲಾಗಿ, ತಮ್ಮನ್ನು ಅಧಿಕಾರಿಗಳ ಹಿಂದೆ ಜೈಲಿಗೆ ಕಳುಹಿಸುವ ಮುಂಚೆ ತಮ್ಮ ಪ್ರಭಾವವನ್ನು ಬೀರುವ ಅವಕಾಶವು ಇತ್ತು, ಈಗ ಅದು ಸಾಧ್ಯವಿಲ್ಲವೆಂದು ಅವರು ಹೇಳಿದರು. ಪಾಕಿಸ್ತಾನದೊಡನೆ ಸೇರಲು ಕಾಶ್ಮೀರದ ಜನರು ಹೋರಾಟ ನಡೆಸುವಂತೆ ತಾವು ಈಗ ಸೂಚಿಸಿದರೆ, ತಾವಾರೆಂದೂ ಪಾಕಿಸ್ತಾನದಲ್ಲಿ ತಮಗೆ ಸ್ವಾತಂತ್ರ್ಯವಿರುವುದೇ ಎಂದು ಪ್ರಶ್ನೆಗಳು ಬರುವುವೆಂದು ಅವರು ತಿಳಿಸಿದರು. ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದಾಗಿ ಜಿನ್ನಾರವರಿಗೆ ತಿಳಿಸಿದ್ದೆ. ವರ್ಷಗಳ ಮೇಲೆ ಪರಿಸ್ಥಿತಿಯು ಈಗ ಬಹು ಕೊಡಕಾಗಿರುವುದೆಂದೂ ಅವರು ಅಭಿಪ್ರಾಯಪಟ್ಟಿರುವರು

ಕಛೇರಿಗೆ ಸ್ವಂತ ಆನೆ ಮೇಲೆ ಬಂದ ಜವಾನ

ಬಿಹಾರಿನ ಶಿಂಗನ ಭೂಮಿಯ ಜವಾನ ವೇಣು ಸಿಂಗ್ ಎಂಬ ೧೮ ವರ್ಷದ ಯುವಕನು ನೆನ್ನೆ ಅಲ್ಲಿನ ಸರ್ಕಾರಿ ಕಛೇರಿಗೆ ತನ್ನ ಸ್ವಂತ ಆನೆಯ ಮೇಲೆ ಬಂದು ಎಲ್ಲರನ್ನೂ ಆಶ್ಚರ್ಯಗೊಳಿಸಿದನೆಂದು ವರದಿಯಾಗಿದೆ ತನ್ನ ಬಳಿ ಆನೆಯೊಂದು ಇದೆ ಎಂದು ಅವನು ಸಹೋದ್ಯೋಗಿಗಳಿಗೆ ಹೇಳಲಾಗಿ ಅವರು ಅವನನ್ನು ಪರಿಹಾಸ್ಯ ಮಾಡಿದರೆಂದೂ ತನ್ನ ಮಾತ ಸಿದ್ಧವೆಂದು ಅವನ್ನು ತೋರಿಸಲು ಅವನು ಆನೆಯ ಮೇಲೆ ಕಛೇರಿಗೆ ಬಂದ, ಆದನ್ನು ಹೊರಗೆ ಕಟ್ಟಿಹಾಕಿ ಕೆಲಸಕ್ಕೆ ಹೋದಾಗ ಪತ್ರಿಕಾ ವರದಿಗಾರರು ಅವನನ್ನು ವಿಚಾರಿಸಲಾಗಿ ಆನೆಯು ಸ್ಲಿಡೆ ೧೧೦೦ ಭಿಗಾ ಜಮೀನು ತನಗೆ ಇರುವುದಾಗಿಯೂ ಹೇಳಿದನೆಂದು ವರದಿಯಾಗಿದೆ ಇಷ್ಟೆಲ್ಲ ಆಸ್ತಿ ತನಗಿದ್ದರೂ ಸರ್ಕಾರಿ ನೌಕರಿಯ ಚಪಲ್ಯದಿಂದ ತಾನು ತಿಂಗಳಿಗೆ ೫೫ ರೂ ಮೇಲೆ ಕೆಲಸಕ್ಕೆ ಸೇರಿರುವುದಾಗಿಯೂ ಅವನು ಹೇಳಿದನು

ಇಂಗ್ಲಿಷ್ ಸೆಮಿನಾರ್ ಮುಕ್ತಾಯ ಸಮಾರಂಭ

ನಗರದ ಫಸ್ಟ್ ಗ್ರೇಡ್ ಕಾಲೇಜಿನ ಇಂಗ್ಲಿಷ್ ಸೆಮಿನಾರಿನ ಮುಕ್ತಾಯ ಸಮಾರಂಭವು ಶ್ರೀ ಎಲ್ ಎಸ್ ಸೂರ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ನೆನ್ನೆ ನಡೆಯಿತು ಶ್ರೀ ಟಿ ಎಸ್ ಗೋಪಾಲರವರಿಂದ ಪ್ರಾರ್ಥನೆ, ಶ್ರೀ ಶ್ರೀಕಂಠಶರ್ಮರಿಂದ ಆವರಣ ಮತ್ತು ಶ್ರೀ ವಿ ಪುಟ್ಟಮಾದಪ್ಪನವರಿಂದ ಸ್ವಾಗತ ಭಾಷಣವಾದನಂತರ ಸೆಮಿನಾರಿನ ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿದರು. ಮನರಂಜನೆ ಕಾರ್ಯಕ್ರಮಗಳಾದ ಮೇಲೆ ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರೊ|| ಎಸ್ ವಿ ರಂಗಣ್ಣನವರು ಮುಕ್ತಾಯ ಭಾಷಣ ಮಾಡಿದರು ಅಧ್ಯಕ್ಷರ ಭಾಷಣವಾದನಂತರ ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಆಫ್ರಿಕದಲ್ಲಿ ಬ್ರಿಟಿಷರ ಧ್ವಜದ ರದ್ದು

ದಕ್ಷಿಣ ಆಫ್ರಿಕದಲ್ಲಿ ರಾಷ್ಟ್ರೀಯ ಏಕ್ಯತೆಯನ್ನು ಸಾಧಿಸಲು ಅಲ್ಲಿರುವ ಈಗಿನ ಎರಡು ಧ್ವಜಗಳ ಪೈಕಿ ಒಂದನ್ನು ಮಾತ್ರ ಆ ದೇಶದ ಅಧಿಕೃತ ಧ್ವಜವನ್ನಾಗಿಟ್ಟುಕೊಳ್ಳಬೇಕೆಂಬ ಸೂಚನೆಯ ಸೂಚನೆಯೊಂದನ್ನು ಅಲ್ಲಿನ ಪಾರ್ಲಿಮೆಂಟಿನ ಸರ್ಕಾರದ ಪರ ಸದಸ್ಯರೊಬ್ಬರು ಸೂಚಿಸಿರುತ್ತಾರೆ ಈ ಸಂಬಂಧವಾಗಿ ಅಲ್ಲಿನ ಪ್ರಧಾನಿಯವರು ಮಾತನಾಡಿ ಈಗಿರುವ ಪದ್ಧತಿಯಿಂದ ಅನೈಕ್ಯತೆಗೆ ಕಾರಣವಾಗಿದೆ ಎಂದೂ, ಇಂಗ್ಲೆಂಡಿನ ರಾಷ್ಟ್ರ ಧ್ವಜವಾದ ಯೂನಿಯನ್ ಜಾಕ್ ಬಾವುಟವು ಎಲ್ಲಾ ಕಡೆಗಳಲ್ಲೂ ಹಾರಾಡಲು ಅವಕಾಶವಿರಕೂಡದೆಂದೂ ತಿಳಿಸಿದರು

ಗಾಂಧಿ ಸ್ಮಾರಕ ನಿಧಿಗೆ ೫೦ ಲಕ್ಷ

ಮಹಾತ್ಮಾ ಗಾಂಧಿಯವರ ರಾಷ್ಟ್ರೀಯ ಸ್ಮಾರಕ ನಿಧಿಗೆ ಬೊಂಬಾಯಿಯ ಗಿರಣಿ ಮಾಲೀಕರ ಸಂಘದವರ ೫೦ ಲಕ್ಷ ರೂ ಗಳನ್ನು ಕೊಟ್ಟಿರುತ್ತಾರೆ. ಬೊಂಬಾಯಿಯ ಕೈಗಾರಿಕೆ ಕೆಲಸಗಾರರಿಗಾಗಿ ಆಸ್ಪತ್ರೆಯೊಂದನ್ನು ನಿರ್ಮಿಸಲು ಈ ಹಣವನ್ನು ಕೊಡಲಾಗುವುದು. ಆಸ್ಪತ್ರೆಯಲ್ಲಿ ೩೦೦ ಹಾಸಿಗೆಗಳಿಗೆ ಅವಕಾಶ ಕಲ್ಪಿಸಲಾಗುವುದು

ಸರ್ಕಾರದ ವಿರುದ್ಧವಾಗಿ ವೈದ್ಯರ ರಿಟ್ ಅರ್ಜಿ ಅಂಗೀಕಾರ

ಬೆಂಗಳೂರಿನ ಸಿವಿಲ್ ಪ್ರದೇಶದಲ್ಲಿ ವೈದ್ಯರಾಗಿರುವ ಡಾ|| ಎಂ ಜಿ ವಿಶ್ವೇಶ್ವರಯ್ಯನವರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಾಧೀಶರು ಅಡ್ಮಿಟ್ ಮಾಡಿಕೊಂಡಿರುತ್ತಾರೆ ತಾವು ಮೊದಲು ಬೌರಿಂಗ್ ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಕೆಲಸ ಮಾಡುತ್ತಿದ್ದುದಾಗಿಯೂ, ತಮ್ಮ ನೌಕರಿ ಬಗ್ಗೆ ಸರ್ಕಾರದವರು ಅನುಮಾನವನ್ನುಂಟುಮಾಡಿದ್ದು ಪ್ರಯುಕ್ತ ತಾವು ಹೊರಗಡೆ ನೌಕರಿಗೆ ಹಂಗಾಮಿಯಾಗಿ ಹೋದುದಾಗಿಯೂ ತಿಳಿಸಿ, ತಮ್ಮ ನೌಕರಿಯು ಕೊನೆಗೊಂಡಿರುವುದಾಗಿ ಸರ್ಕಾರದವರು ಹೇಳುವುದು ನ್ಯಾಯವಲ್ಲವೆಂದೂ, ಈ ಬಗ್ಗೆ ಆಜ್ಞೆಯಾಗಬೇಕೆಂದೂ ಕೋರಿರುತ್ತಾರೆ

ವೇಮನನ ಬಗ್ಗೆ ಭಾಷಣ

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳ ಅಂಗವಾಗಿ ನಾಳೆ ಚಿಕ್ಕಬಳ್ಳಾಪುರದಲ್ಲಿ ಮಹಾರಾಜಾ ಕಾಲೇಜಿನ ತೆಲುಗು ಉಪಪ್ರಾಧ್ಯಾಪಕರಾದ ಶ್ರೀ ಕೆ ಸುಬ್ಬರಾಮಪ್ಪನವರು 'ವೇಮನನ ಬಗ್ಗೆ ಭಾಷಣ ಮಾಡುವರು

ವಿಮಾನಕ್ಕೆ ರಣಹದ್ದಿನ ಡಿಕ್ಕಿ

ತಿರುಚಿ ವಿಮಾನ ನಿಲ್ದಾಣದಿಂದ ಮೊನ್ನೆ ಹೊರಟ ಪ್ರಯಾಣಿಕರ ವಿಮಾನವೊಂದು ಹಾರಾಡುತ್ತಿದ್ದ ರಣಹದ್ದಿಗೆ ಡಿಕ್ಕಿ ಹೊಡೆದು, ವಿಮಾನಕ್ಕೆ ಸ್ವಲ್ಪ ಜಖಂ ಆಯಿತು

ಅರಸು ಬೋರ್ಡಿಂಗ್ ವಿದ್ಯಾರ್ಥಿ ಸಂಘದ ದಿನಾಚರಣೆ

ರಾಜಧಾನಿಯ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಶಾಲೆಯ ವಿದ್ಯಾರ್ಥಿ ಸಂಘದ ದಿನಾಚರಣೆಯು ನಾಳೆ ಸಂಜೆ ೬ ಘಂಟೆಗೆ ಟೀಚರ್ಸ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ ಸಿ ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಂಡ	ರೂ.
ಕಡಲೇಕಾಯಿ	೧೬ ೮ ೦	೨೫ ೦ ೦
ಹರಳುಬೀಜ	೨೭ ೧೨ ೦	೩೩ ೪ ೦
ಹುಚ್ಚೆಳ್ಳು	೪೬ ೬ ೦	೫೦ ೪ ೦
ಹೊಂಗೇಬೀಜ	೨೩ ೧೦ ೦	೨೬ ೯ ೦
ಹುಣಸೇಬೀಜ	೧೨ ೬ ೦	
ಹುರುಳಿ	೨೫ ೧೪ ೦	೨೯ ೦ ೦
ಹೆಸರು	೪೬ ೪ ೦	೫೧ ೧೪
ಹಲಸಂದೆ	೪೩ ೪ ೦	೪೨ ೦
ಅವರೆ	೪೩ ೦ ೦	
ಧನಿಯ	೨೭ ೦ ೦	೨೯ ೦
ತೊಗರಿ	೨೯ ೨ ೦	೪೨ ೦
ಕಡಲೆ	೪೪ ೮ ೦	೪೯ ೦
ಸೆಣಬಿನ ಬೀಜ	೨೯ ೨ ೦	೨೯ ೧೨
ಹುಣಸೇಹಣ್ಣು	೪ ೦ ೦	೯ ೧೨
ಸೀಗೆಕಾಯಿ	೪ ೪ ೦	೪ ೧೧
ಮೆಣಸಿನಕಾಯಿ	೨೨ ೮ ೦	೪೧ ೧೦
ತೆಂಗಿನಕಾಯಿ ೧೧೦೦	೧೯೬ ೦ ೦	೨೩೬ ೦

SRI GANESHA
TALKIES
GALA RELEASE ON
28-2-54 For 4 Days
Columbia's
GOLDEN HAWK
In Technicolor
(Based on the Most Popular Novel of the Same Name by the Most Popular writer in America now)
Featuring Rhonda Fleming
Helen Carter, John Sutton
& Sterling Hayden, etc

Edited Printed and Published by A R Nagarajan at Sadhvi Press, D.Subbiah Road, Mysore.

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ !
ಒಲಂಪಿಯಾ * ಅಮೋಘ ಪ್ರಾರಂಭ 3—3—54 ರಿಂದ ಪ್ರತಿ ದಿನ ಮೂರು ಆಟಗಳು
ಇಂದಿನ ಸಮಾಜದ ಲೋಪದೋಷಗಳನ್ನು ಬೆಳಕಿಗೆ ತಂದ ಅಮರ ಪ್ರೇಮದ ನೈಜ ಕಲಾ ಕಲ್ಪ
ಶರಚ್ಚಂದ್ರಚಟರ್ಜಿ ಯವರ * ಪರಿಣೀತಾ
ಪಾತ್ರ— ಅಶೋಕ್ ಕುಮಾರ್, ಮೀನಾ ಕುಮಾರಿ, ಅಸಿತ್ ಬರನ್
ನಿರ್ದೇಶನ - ಬಿಮಲ್ ರಾಯ್

ನೂರಾರು ಮಂದಿ ರೋಗವಿಮುಕ್ತರಾಗಿ ಲಾಭಪಡೆಯುತ್ತಿದ್ದಾರೆ

ಸಾಧನಾ ಔಷಧಾಲಯ
ಢಾಕಾ (ಬಂಗಾಳ)
ಶಾಖೆ 1067 ಶ್ರೀರಾಮ ಪೇಟೆ ಮೈಸೂರು
ಅಧ್ಯಕ್ಷರು ಡಾ|| ಜೋಗೇಶ್ ಚಂದ್ರಘೋಷ್,
ಎಂ ಎ, ಎಫ್ ಸಿ ಎಸ್ (ಲಂಡನ್) ಎಂ ಸಿ ಎಸ್ (ಅಮೆರಿಕಾ), ಆಯುರ್ವೇದ ಶಾಸ್ತ್ರೀ
ನಮ್ಮ ಮೇಲ್ಕಂಡ ಔಷಧಾಲಯದಲ್ಲಿ ಸ್ತ್ರೀ ಪುರುಷರ ಹಾಗೂ ಚಿಕ್ಕ ಮಕ್ಕಳ ಸಮಸ್ತ ವಿಧವಾದ ಹಳೆಯ ಮತ್ತು ಹೊಸ ರೋಗಗಳಿಗೆ ಉತ್ತಮ ಔಷಧಗಳನ್ನು ಕೊಟ್ಟು ಚಿಕಿತ್ಸೆ ಮಾಡಲಾಗುತ್ತದೆ ನಾನಾ ಕಡೆಗಳಲ್ಲಿ ಚಿಕಿತ್ಸೆ ಹೊಂದಿ ನಿರಾಶರಾದ ಸಾವಿರಾರು ಮಂದಿ ಇಲ್ಲಿಗೆ ಬಂದು ಗುಣ ಹೊಂದಿ, ತಮ್ಮ ಕಠಿಣ ರೋಗಗಳಿಂದ ಪಾರಾಗಿ ಜೀವಾನಂದ ಪಡೆಯುತ್ತಿದ್ದಾರೆ
ಚಿಕಿತ್ಸಕರು . ಡಾ|| ಕವಿರಾಜ್ ಜೆ ಸಿ. ಸರ್ಕಾರ್,
ರಿಜಿಸ್ಟರ್ಡ್ (ಶಾಖೆ) ರಿ ನಂ N 4162, (ಕಲ್ಕತ್ತಾ)

ಕಾಂಗ್ರೆಸ್ ವಸ್ತು ಪ್ರದರ್ಶನ.
೧೯೫೪
ಬೆಂಗಳೂರು ಕಾರ್ಪೊರೇಷನ್ ಜಿಲ್ಲಾ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ
1954 ನೆಯ ಮಾರ್ಚಿ 11 ನೆಯ ತಾರೀಖು ಗುರುವಾರ
ಅಮೋಘ ಪ್ರಾರಂಭ
ಭಾರತ ಸರ್ಕಾರದ ಮತ್ತು ಮೈಸೂರು ಸರ್ಕಾರದ ನಾನಾ ಇಲಾಖೆಗಳೂ, ಭಾರತದ ನಾನಾ ಭಾಗಗಳಿಂದ ಪ್ರದರ್ಶನಕಾರರೂ ಭಾಗವಹಿಸುವರು.
ಪ್ರಾಂತಿಯಂತ ಕಲಾವಿದರ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ

ಟೆಲಿಫೋನ್ ನಂ. 792 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ 6 ಕಾಸು

ಮದುವೆ ಜವಳಿ!
ಎಲ್ಲಾ ರಯಿಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೮೩] MYSORE SUNDAY 28-2-1954 :: ಮೈಸೂರು : ಭಾನುವಾರ ೨೮-೨-೧೯೫೪ [ಸಂಚಿಕೆ ೧೯೯

– ಜನರಲ್ ನಗೀಬರಿಗೆ ಮತ್ತೆ ಈಜಿಪ್ಟ್ ಅಧ್ಯಕ್ಷ ಪಟ್ಟ –

ನಗರದ ನೀರು ಸರಬರಾಜಿಗೆ ೩೯॥ ಲಕ್ಷ ರೂ. ಯೋಜನೆ

ಸರ್ಕಾರಕ್ಕೆ ಪುರಸಭೆಯ ನಿರ್ಣಯ

ಮೈಸೂರು ೨೮

ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು ೩೯॥ ಲಕ್ಷ ರೂ ಗಳ ಯೋಜನೆಯೊಂದನ್ನು ಸರ್ಕಾರಕ್ಕೆ ಶಿಫಾರಸು ಮಾಡುವಂತೆ ನೆನ್ನೆ ಸಂಜೆ ಸೇರಿದ್ದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ತೀರ್ಮಾನಿಸಲಾಯಿತು. ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಮೊದಲು ಅಧ್ಯಕ್ಷರು ಮಾತನಾಡಿ, ನಗರದ ನೀರಿನ ಕೊರತೆಯನ್ನು ಪೂರೈಸಲು ೬೨ ಲಕ್ಷ, ೩೯॥ ಲಕ್ಷ ಮತ್ತು ೨೭ ಲಕ್ಷ ರೂ ಗಳ ೩ ಯೋಜನೆಗಳು ಸಿದ್ಧವಾಗಿವೆಯೆಂದೂ ತಾಂತ್ರಿಕ ನಿಪುಣರುಗಳೂ ಮತ್ತು ಎಂಜಿನಿಯರೂ ೩೯॥ ಲಕ್ಷ ರೂ ಗಳ ಯೋಜನೆಯಿಂದ ಹೆಚ್ಚಿನ ಉಪಯೋಗವೆಂದು ಅಭಿಪ್ರಾಯಪಟ್ಟಿರುವರೆಂದೂ ತಿಳಿಸಿದರು

೬೨ ಲಕ್ಷ ರೂ ಗಳ ಯೋಜನೆಯನ್ನು ಸದ್ಯ ಈಗಿನ ಆರ್ಥಿಕ ಸ್ಥಿತಿಯಲ್ಲಿ ಒಪ್ಪಲು ಸಾಧ್ಯವಿಲ್ಲವೆಂದೂ, ೨೭ ಲಕ್ಷ ರೂ ಗಳ ಯೋಜನೆಯಿಂದಾಗುವ ಪ್ರಯೋಜನವು ಅಷ್ಟೇನೂ ಹೆಚ್ಚಿನದಲ್ಲವೆಂದೂ, ಅಲ್ಲದೆ ಸರ್ಕಾರದವರು ಈಗಲೇ ಕೃಷ್ಣರಾಜಸಾಗರದಿಂದ ೩ ಅಡಿಯ ಪೈಪುಗಳನ್ನು ಹಾಕಿಸಿ ಸುಮಾರು ೧೩॥ ಲಕ್ಷ ರೂ. ಗಳನ್ನು ಖರ್ಚು ಮಾಡಿರುವುದರಿಂದಲೂ ಯೋಜನೆಗೆ ಅವರ ಪಾಲಿನ ಉಳಿಕೆ ೭॥ ಲಕ್ಷ ರೂ ಗಳನ್ನು ಕೊಡಲು ಒಪ್ಪುವ ಸಂಭವವಿರುವುದರಿಂದಲೂ ಈ ಯೋಜನೆಯನ್ನು ಒಪ್ಪಿಕೊಳ್ಳುವುದು ಒಳ್ಳೆಯದೆಂದೂ ಅಧ್ಯಕ್ಷರು ಸೂಚಿಸಿದರು

ಅನಂತರ ಸಭೆಯು ಈ ಯೋಜನೆಯನ್ನು ಒಪ್ಪಿ, ಸರ್ಕಾರವು ಇದರಲ್ಲಿ ಅರ್ಧ ಪಾಲನ್ನು ವಹಿಸಿಕೊಂಡು ಕೊಡುವ ಸಾಲವನ್ನು ೩೦ ಕಂತುಗಳಲ್ಲಿ ತೀರಿಸುವುದೆಂಬ ನಿರ್ಣಯವನ್ನು ಅಂಗೀಕರಿಸಿತು

ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಕಮಿಷನರು ಉತ್ತರವಿತ್ತು, ನಗರಕ್ಕೆ ಈಗ ಆಗುತ್ತಿರುವ ನೀರಿನ ಸರಬರಾಜು ಯೋಜನೆಯು ಕಾರ್ಯಗತವಾದ ಮೇಲೆ ನೀರಿನ ಸರಬರಾಜು ೫೨ ಲಕ್ಷ ಗ್ಯಾಲನ್ನುಗಳಿಂದ ೬೦ ಲಕ್ಷಕ್ಕೇರುವುದೆಂದೂ ಈ ಯೋಜನೆಯ ಪ್ರಕಾರ ಕೃಷ್ಣರಾಜಸಾಗರದಲ್ಲಿ ಪಂಪಿಂಗ್ ಸ್ಟೇಷನ್ನನ್ನು ಸ್ಥಾಪಿಸಿದ್ದೇ ಆದರೆ ಇನ್ನು ೩೦ ವರ್ಷಗಳ ಕಾಲ ಮೈಸೂರು ಎಷ್ಟೇ ಬೆಳೆದರೂ ನೀರನ್ನು ಒದಗಿಸಲು ಕಷ್ಟವಾಗುವುದಿಲ್ಲವೆಂದೂ ತಿಳಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೩೦ ಟಿ ಪಾಪಯ್ಯ ನಾಗಸ್ವರ ಮಧ್ಯಾಹ್ನ ೧-೪೦ ರೆಕಾರ್ಡ್ ಸಂಗೀತ ೧-೫೦ ರೆಕಾರ್ಡ್ ಚಿಟ್ಟೇಲು ೨ ಆರ್. ಚಂದ್ರಸಿಂಗ್ ಸಂಗೀತ ಸಂಜೆ ೫-೧೦ ಟಿ ಪಾಪಯ್ಯ ನಾಗಸ್ವರ, ಗಾನವಿಹಾರ ೬-೧೫ ಕೆ ವಿ ಶ್ರೀರಾಮುಲುನಾಯ್ಡು ಹಿಂದಿ ಭಜನೆ ೭-೫ ಆರ್ ಚಂದ್ರಸಿಂಗ್ ಸಂಗೀತ ೭-೪೦ ಬಿ ವಿ ಸತ್ಯನಾರಾಯಣ ವಯಸ್ಕರ ಶಿಕ್ಷಣದ ಬಗ್ಗೆ ಭಾಷಣ ೮ ... ನಾಡು ೮-೧೫ ಮತ್ತು ೯-೩೦ ಆರ್ ಎಸ್ ... ಪಿಟೀಲು ವೀಣೆ ೯-೧೫ ಎಂ. ಯಾದವನ್ ... ಇಂಗ್ಲಿಷ್ ಭಾಷಣ

ಸಕ್ಕರೆ ಕಂಪೆನಿ ಅಧ್ಯಕ್ಷ ಎ. ಜಿ. ಬಂದೀಗೌಡರ ನಿವೃತ್ತಿ

ಕೆ ನಾರಾಯಣಸ್ವಾಮಿಯವರು ಹೊಸ ಸರ್ಕಾರಿ ಡೈರೆಕ್ಟರ್

ಬೆಂಗಳೂರು ೨೮

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಂಪೆನಿಯ ಅಧ್ಯಕ್ಷರೂ, ಕಂಪೆನಿ ಬೋರ್ಡಿನಲ್ಲಿ ಸರ್ಕಾರಿ ಡೈರೆಕ್ಟರೂ ಆಗಿರುವ ಶ್ರೀ ಎ ಜಿ ಬಂದೀಗೌಡರನ್ನು ಸರ್ಕಾರದವರು ನಿವೃತ್ತಿಗೊಳಿಸಿ ಅವರ ಸ್ಥಾನದಲ್ಲಿ ಸಂಸ್ಥಾನದ ಅಡಿಷನಲ್ ವಾಣಿಜ್ಯ ಇಲಾಖೆ ಡೈರೆಕ್ಟರಾದ ಶ್ರೀ ಕೆ ನಾರಾಯಣಸ್ವಾಮಿಯವರನ್ನು ಸರ್ಕಾರಿ ಡೈರೆಕ್ಟರಾಗಿ ನೇಮಿಸಿರುವರೆಂದೂ, ತಿಳಿದುಬಂದಿದೆ ಶ್ರೀ ನಾರಾಯಣಸ್ವಾಮಿಯವರು ಕಂಪೆನಿಯ ಅಧ್ಯಕ್ಷರಾಗಿ ಆರಿಸಲ್ಪಡುವರೆಂದು ಹೇಳಲಾಗಿದೆ

ಕಂಪೆನಿಯ ಆಡಳಿತದ ಹಲವು ವಿಷಯಗಳು ಸರ್ಕಾರದ ಗಮನಕ್ಕೆ ಬಂದ, ಆ ಬಗ್ಗೆ ತನಿಖೆಗೆ ಏರ್ಪಾಡು ಮಾಡಿ ಸರ್ಕಾರದವರು ಕೇಳಿದ ಸಮಜಾಯಿಷಿಗೆ ಶ್ರೀ ಬಂದೀಗೌಡರಿಂದ ಇದುವರೆಗೆ ಏನೂ ಉತ್ತರವು ದೊರೆಯಲಿಲ್ಲವೆಂದೂ ಅದ್ದರಿಂದ ಮೇಲ್ಕಂಡ ತೀರ್ಮಾನಕ್ಕೆ ಬರಲಾಯಿತೆಂದೂ ಹೇಳಲಾಗಿದೆ

ಜೀತದ ಆಳನ್ನು ಹೊಡೆದ ಆಪಾದನೆ

ಹಾಲಿಗ್ರಾಮದ ಶ್ರೀ ಕೆಂಪೇಗೌಡ ನಾಲ್ಕನೇ ಶ್ರೀ ದೇವೇಗೌಡರ ಮನೆಯಲ್ಲಿ ೧೨-೧೩ ವರ್ಷಗಳಿಂದ ಜೀತ ಮಾಡಿಕೊಂಡಿದ್ದ ಕೆಲವು ದಿನಗಳ ಹಿಂದೆ ಊರಿಗೆ ಹೋಗಿ ಬೇರೆ ಕಡೆ ಹೋಗಿ ಆ ದಿನಗಳನಂತರ ಪುನಃ ಕೆಲಸಕ್ಕೆ ಹಿಂತಿರುಗಿದ ಅಡಿಕನಾರ್ ಟೇಲ ಮುತ್ತ ಎಂಬುವವನನ್ನು ಹೊಡೆದ ಪರಿಣಾಮವಾಗಿ ಅವನ ಮೈ ಊದಿರುವುದನ್ನು ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಪೋಲೀಸರು ಸರ್ಟಿಫೈ ಮಾಡಿದನಂತರ ಆತನನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ, ಈ ತರಹದ ಕೃತ್ಯಗಳು ಕೃಷ್ಣರಾಜನಗರದ ತಾಲ್ಲೂಕು ಹಳ್ಳಿಗಳಲ್ಲಿ ಬಹಳವಾಗಿ ನಡೆಯುತ್ತಿರುವುದಾಗಿಯೂ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ತಿಳಿಸುತ್ತಾರೆ

ಸಿಬ್ಬಂದಿ ಖೋತಾ ಪ್ರತಿಭಟಿಸಲು ಮಹಿಳಾ ನೌಕರಳ ಉಪವಾಸ

ಬೊಂಬಾಯಿ ಸರ್ಕಾರದವರು ಸಿವಿಲ್ ಸರಬರಾಜು ಇಲಾಖೆಯಲ್ಲಿ ಸಿಬ್ಬಂದಿ ಖೋತಾವನ್ನು ಜಾರಿಗೆ ತರುವುದನ್ನು ಪ್ರತಿಭಟಿಸಲು ನಾಳೆಯಿಂದ ಉಪವಾಸ ಹೂಡುವುದಾಗಿ ಕುಮಾರಿ ಮುಖರ್ಜಿ ಎಂಬ ನೌಕರಳು ಸಿವಿಲ್ ಸರಬರಾಜು ಮಂತ್ರಿಗಳಿಗೆ ನೋಟೀಸು ಕೊಟ್ಟಿರುತ್ತಾಳೆ ಸಿಬ್ಬಂದಿ ಖೋತಾವು ಜಾರಿಗೆ ಬಂದರೆ ೧,೩೦೦ ನೌಕರರಿಗೆ ಕೆಲಸವಿಲ್ಲವಾಗುವುದೆಂದು ಆಕೆಯು ಹೇಳಿರುತ್ತಾಳೆ

ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಅಲ್ಲಿನ ಕನಕದಾಸ ವಿದ್ಯಾರ್ಥಿನಿಲಯದ ಉಪನ್ಯಾಸ ಮಂದಿರದಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಗಳ ಅಂಗವಾಗಿ ಈ ದಿನ ಮತ್ತು ನಾಳೆ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ ಬೆಂಗಳೂರಿನ ಮಿಥಿಕ್ ಸೊಸೈಟಿಯ ಶ್ರೀ ಎಸ್ ಶ್ರೀಕಂಠಯ್ಯನವರು ಶ್ರೀ ಶಂಕರಾಚಾರ್ಯರ ವಿಷಯವಾಗಿ ಭಾಷಣ ಮಾಡುವರು

ಜನರಲ್ ನಗೀಬರಿಗೆ ಮತ್ತೆ ಈಜಿಪ್ಟಿನ ಅಧ್ಯಕ್ಷ ಪಟ್ಟ

ಸೈನ್ಯಾಧಿಕಾರಿಗಳ ದಂಗೆಯ ಪರಿಣಾಮ

ಈಜಿಪ್ಟಿನಲ್ಲಿ ಏಕಮತ್ಯವನ್ನು ಕಾಪಾಡುವ ಸಲುವಾಗಿ ಅಲ್ಲಿನ ಕ್ರಾಂತಿಕಾರಿ ಕೌನ್ಸಿಲಿನವರು ಮಾಜಿ ಅಧ್ಯಕ್ಷ ನಗೀಬರೊಡನೆ ಸಂಧಾನ ನಡೆಸಿ ಮತ್ತೆ ಅವರನ್ನೇ ಅಧ್ಯಕ್ಷರನ್ನಾಗಿ ನೇಮಿಸಿ ಘೋಷಣೆ ಹೊರಡಿಸಿರುತ್ತಾರೆ ಜನರಲ್ ನಾಸೆರ್‌ರವರೇ ಅಲ್ಲಿನ ಪ್ರಧಾನಿಯಾಗಿ ಮುಂದುವರಿಯುವರು ಈ ಘೋಷಣೆಯು ಹೊರಬಿದ್ದೊಡನೆಯೇ ಅಲ್ಲಿನ ಜನರೆಲ್ಲರೂ ಹರ್ಷೋದ್ಗಾರ ಮಾಡಿ, ಕುಣಿದಾಡಿ ನಗೀಬರಿಗೆ ಜಯಕಾರಗಳನ್ನು ಮಾಡಿದರು ತರುವಾಯ ನಗೀಬರು ಮತ್ತೆ ಅಧಿಕಾರ ಸ್ವೀಕರಿಸಿ ತಾವು ಪ್ರಜಾಸೇವೆಗಾಗಿ ಸದಾ ಸಿದ್ಧವಿರುವುದಾಗಿ ತಿಳಿಸಿದರು

ನಗೀಬರನ್ನು ಪದಚ್ಯುತರನ್ನಾಗಿ ಮಾಡಿದ ಘಟನೆಯ ಬಗ್ಗೆ ನೂತನ ಪ್ರಭುತ್ವಕ್ಕೆ ವಿರುದ್ಧವಾಗಿ ಕೈರೋವಿನ ಅಬ್ಬಾಸಿಯಾ ಬ್ಯಾರಕ್ಸಿನಲ್ಲಿ ೪೦ ಮಂದಿ ಸೈನ್ಯಾಧಿಕಾರಿಗಳು ದಂಗೆ ಎದ್ದಿದ್ದರೆಂದೂ ಈ ಪ್ರಕರಣವೇ ಮೇಲ್ಕಂಡ ಸಂಧಾನಕ್ಕೆ ಕಾರಣವಾಯಿತೆಂದೂ ತಿಳಿದುಬಂದಿದೆ ಕ್ರಾಂತಿಕಾರಿ ಸಮಿತಿಯು ಎರಡು ಪಕ್ಷಗಳೂ ಒಪ್ಪಂದಕ್ಕೆ ಬಂದಿರುವುದಾಗಿ ಗೊತ್ತಾಗಿದೆ

ನಗೀಬರ ಪದಚ್ಯುತಿಯನ್ನು ವಿರೋಧಿಸಿ ಸೂಡಾನ್ ರಾಜ್ಯದ ಪ್ರಜೆಗಳು ಖಾರ್ಟೂಂನಲ್ಲಿ ನೆನ್ನೆ ಪ್ರದರ್ಶನ ನಡೆಸಿ ನಗೀಬರಿಲ್ಲದ ಈಜಿಪ್ಟಿನೊಡನೆ ತಮ್ಮ ಸಂಬಂಧವಿರಕೂಡದೆಂದು ಘೋಷಿಸಿದರು

ಸಿಮೆಂಟ್, ಸಾಬೂನು ಮತ್ತು ಕೃತಕ ರೇಷ್ಮೆ ಮೇಲೆ ಸುಂಕ

ಹೊಸ ವರ್ಷದಿಂದ ಭಾರತದ ಆಡಳಿತ ಅನುದಿನಗಳಿಗೆ ಪೌಂಡಿಗೆ ೭ ಆಣೆಯಂತೆ ತೆರಿಗೆಯನ್ನು ಕಟ್ಟಿಸಲು ಕೇಂದ್ರ ಸರ್ಕಾರದವರು ಹೊಸ ಆಯವ್ಯಯ ಪಟ್ಟಿಯಲ್ಲಿ ಸೂಚನೆ ಮಾಡಿರುತ್ತಾರೆ ಸೂಪರ್ ಫೈನ್ ಹತ್ತಿ ಬಟ್ಟೆ ಮೇಲೆ ಗಜಕ್ಕೆ ೭ ಕಾಸಿನಂತೆಯೂ ಇತರ ಬಟ್ಟೆಗಳ ಮೇಲೆ ೩ ಕಾಸಿನಂತೆಯೂ ಸುಂಕವನ್ನು ಹೆಚ್ಚಿಸಲಾಗುವುದು ಕೃತಕ ರೇಷ್ಮೆ ಬಟ್ಟೆಮೇಲೆ ಗಜಕ್ಕೆ ೧॥ ಆಣೆಯಂತೆ ಸುಂಕವನ್ನು ವಿಧಿಸಲಾಗುವುದು ರೇಷ್ಮೆ ಹತ್ತಿ ಮತ್ತು ಜಂಕ್ ಶೀಟು ಮೇಲೆ ಆಮದು ತೆರಿಗೆಯನ್ನು ವಜಾ ಮಾಡಲಾಗುವುದು ಆದಾಯ ತೆರಿಗೆಯು ಈಗಿನಂತೆಯೇ ಮುಂದುವರಿಯುವುದು. ಸಿಮೆಂಟಿಗೆ ಟನ್ನಿಗೆ ೫ ರೂ , ಬಾರು ಸೋಪು ಹಂಡ್ರೆಡ್‌ವೇಟಿಗೆ ೫। ರೂ ಇತರ ಬಟ್ಟೆ ಸೋಪುಗಳಿಗೆ ಹಂಡ್ರೆಡ್‌ವೇಟಿಗೆ ೭-೨-೦, ಟಾಯ್ಲೆಟ್ ಸಾಮಾನಿಗೆ ಹಂಡ್ರೆಡ್‌ವೇಟಿಗೆ ೧೮ ರೂ ಮತ್ತು ಪಾದರಕ್ಷೆಗಳಿಗೆ ಶೇಕಡ ೧೦ ರಂತೆ ಸುಂಕವನ್ನು ವಿಧಿಸಲಾಗುವುದು

ಪಾರ್ಸಲಿನಲ್ಲಿ ಔಷಧಿ ಬದಲು ಕಲ್ಲು

ಹಾಸನದ ಔಷಧಿಗಳ ವ್ಯಾಪಾರಿಯಾದ ಶ್ರೀ ಹೆಚ್ ಕೆ ನಂಜುಂಡಶೆಟ್ಟಿಯವರು ಮದ್ರಾಸಿನ ಒಂದು ಕಂಪೆನಿಯಿಂದ ತರಿಸಿದ ಸುಮಾರು ೨೫೦ ರೂ ಗಳ ಪಾರ್ಸಲಿನಲ್ಲಿ ಔಷಧಿ ಸಾಮಾನುಗಳಿಲ್ಲದೆ ಬರೀ ಕಲ್ಲುಗಳೇ ತುಂಬಿದ್ದುವೆಂದು ವರದಿಯಾಗಿದೆ

ಜಿಲ್ಲಾ ಬೋರ್ಡು ಆಯವ್ಯಯದಲ್ಲಿ ೧೫ ಲಕ್ಷ ರೂ. ಉಳಿತಾಯ

ಮೈಸೂರು ೨೮

ಜಿಲ್ಲಾ ಬೋರ್ಡಿನ ಬಜೆಟ್ ಅಧಿವೇಶನವು ಇಂದು ಬೆಳಿಗ್ಗೆ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು

೫೪ ಜನವರಿ ಸಾಲಿನಲ್ಲಿ ಬೋರ್ಡಿನ ಆದಾಯವು ೨೪ ೯೭ ೦೦೦ ರೂ, ಗಳೂ, ಖರ್ಚು ೨೩,೪೧,೦೦೦ ರೂ ಗಳೂ ಇದ್ದು ೧,೫೬ ೦೦೦ ರೂ ಉಳಿತಾಯವಾಗುವ ಅಂದಾಜಾಗಿದೆ

ಅಧ್ಯಕ್ಷರು ಆಯವ್ಯಯ ಪಟ್ಟಿಯನ್ನು ಮಂಡಿಸಿ, ಬೋರ್ಡಿನವರು ಕೈಗೊಂಡಿರುವ ರಚನಾತ್ಮಕ ಕಾರ್ಯಗಳನ್ನು ವಿವರಿಸಿದರು. ಜಿಲ್ಲೆಯಲ್ಲಿ ಹಲವು ಹಳ್ಳಿಗಳನ್ನು ರಸ್ತೆಯ ನಿರ್ಮಾಣಕ್ಕಾಗಿ ೩,೧೦,೦೦೦ ರೂ ಗಳನ್ನೂ, ಆಸ್ಪತ್ರೆಗಳ ಖರ್ಚುಗಳಿಗಾಗಿ ೧,೪೦,೦೦೦ ರೂ ಗಳನ್ನೂ ಆಯವ್ಯಯದ ಅಂದಾಜಿನಲ್ಲಿ ಒದಗಿಸಿರುವುದಾಗಿ ಅವರು ತಿಳಿಸಿದರಲ್ಲದೆ ಸಾರ್ವಜನಿಕರಿಂದ ಬಹುವಾಗಿ ಸಹಾಯವು ಬರುತ್ತಿರುವುದರಿಂದ ಜಿಲ್ಲಾ ಬೋರ್ಡಿನ ಹಣಕಾಸಿನ ಪರಿಸ್ಥಿತಿಯು ತೃಪ್ತಿಕರವಾಗಿರುವುದೆಂದೂ, ಸರ್ಕಾರದಿಂದ ಬರಬೇಕಾದ ಬಾಕಿಯೆಲ್ಲವೂ ಬಂದರೆ ಉಳಿತಾಯವು ಇನ್ನೂ ಹೆಚ್ಚಾಗುತ್ತದೆಂದೂ ತಿಳಿಸಿದರು.

ಸರ್ಕಾರದಿಂದ ಹಣವು ಬರುವ ಬಗ್ಗೆ ಕೆಲವು ಸದಸ್ಯರುಗಳು ಅನುಮಾನವನ್ನು ವ್ಯಕ್ತಪಡಿಸಲು, ಅಧ್ಯಕ್ಷರು ಸಮಾಧಾನವಿತ್ತು ಅದು ಕಾನೂನು ಬದ್ಧವಾಗಿರುವುದರಿಂದ ಅನುಮಾನಪಡಬೇಕಾಗಿಲ್ಲವೆಂದು ಹೇಳಿದರು

ಭಾರತದ ಆಯವ್ಯಯದಲ್ಲಿ ೨೭ ಕೋಟಿ ರೂ. ಖೋತಾ

ಪಾರ್ಲಿಮೆಂಟಿನಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ೫೪ ೫೫ ನೇ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಿದರು ವರಮಾನವು ೪೪೧.೦೩ ಕೋಟಿ ರೂ ಮತ್ತು ೪೬೭ ೦೯ ಕೋಟಿ ರೂ ವೆಚ್ಚದ ಅಂದಾಜಾಗಿದ್ದು ೨೬ ೦೬ ಕೋಟಿ ರೂ ಖೋತಾ ಬೀಳುವ ನಿರೀಕ್ಷೆಯಿದೆ ಹೊಸ ವರ್ಷದಲ್ಲಿ ರಸ್ತೆಗಾಗಿ ಇಲಾಖೆಗೆ ಒದಗಿಸಿರುವ ಹಣವು ಈಗಿನಷ್ಟೇ ಇದೆಯೆಂದೂ, ದೇಶಾದ್ಯಂತ ಕೇಂದ್ರ ಸರ್ಕಾರವು ಆರ್ಥಿಕ ಕ್ಷೇತ್ರದಲ್ಲಿ ಭಾರತವು ಸ್ವಯಂಪೂರ್ಣತೆಯ ಅಭಿವೃದ್ಧಿ ಕಾರ್ಯಗಳು ತಡವಾಗಬಾರದೆಂಬ ನೀತಿಯನ್ನು ಸರ್ಕಾರದವರು ಹೊಂದಿರುವುದಾಗಿಯೂ ಸಿ. ಡಿ. ದೇಶಮುಖ್‌ರವರು ಹೇಳಿದರು.

ತಿರುವಾಂಕೂರು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ೧೩ ಸ್ಥಾನ

ತಿರುವಾಂಕೂರು-ಕೊಚ್ಚಿ ಚುನಾವಣೆಯ ಓಟುಗಳ ಎಣಿಕೆಯು ನೆನ್ನೆ ಪ್ರಾರಂಭವಾಗಿ ಒಟ್ಟು ೪೩ ಸ್ಥಾನಗಳ ಫಲಿತಾಂಶಗಳು ಹೊರಬಿದ್ದಿವೆ ಅವುಗಳಲ್ಲಿ ಕಾಂಗ್ರೆಸ್ಸಿಗೆ ೧೩ ಸ್ಥಾನಗಳೂ, ಕಮ್ಯೂನಿಸ್ಟ್ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷಗಳಿಗೆ ತಲಾ ೯ ಸ್ಥಾನಗಳೂ ಮತ್ತು ತಿರುವಾಂಕೂರು ತಮಿಳು ನಾಡು ಕಾಂಗ್ರೆಸ್, ಕ್ರಾಂತಿಕಾರಿ ಸೋಷಲಿಸ್ಟ್ ಪಕ್ಷಗಳು ಮತ್ತು ಸ್ವತಂತ್ರರಿಗೆ ತಲಾ ಮೂರು ಸ್ಥಾನಗಳೂ ಲಭಿಸಿವೆ ತಿರುವಾಂಕೂರು-ಕೊಚ್ಚಿ ಚುನಾವಣೆಯಲ್ಲಿ ಶಾಸನಸಭೆಗೆ ಸ್ಪರ್ಧಿಸಿದ್ದ ಆರೋಗ್ಯ ಮಂತ್ರಿ ಮಾಧವನ್‌ರವರು ಪರಾಜಿತರಾಗಿರುವರು ಅಲ್ಲಿನ ಹಣಕಾಸಿನ ಮಂತ್ರಿ ಪನಂಪಳ್ಳಿ ಗೋವಿಂದ ಮೆನನ್‌ರವರು ಆರಿಸಲ್ಪಟ್ಟಿರುತ್ತಾರೆ

ವಾ ರ ಭ ವಿ ಷ್ಯ

ತಾ|| ೨೮ ೨ ೫೪ ರಿಂದ ೬ ೩ ೫೪ ರ ವರೆಗೆ

ಮೇಷ — ಆರೋಗ್ಯಕ್ಕೆ ಕ್ಲೇಶ ಹಣಕಾಸಿನ ಅಡಚಣೆ, ನೌಕರಿಯಲ್ಲಿ ಯಶಸ್ಸು ವ್ಯಾಪಾರಿಗಳಿಗೆ ಕ್ಲೇಶ ತಾ|| ೨೮ ೧ ಶುಭದಿನಗಳು

ವೃಷಭ — ಆರೋಗ್ಯ ನೆಟ್ಟಗೆ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಉತ್ತಮ ಸ್ಥಿತಿ ಪರ್ತಕರಿಗೆ ಸ್ವಲ್ಪ ಚಿಂತೆ ಪ್ರತಿಷ್ಠೆ ಹೆಚ್ಚು ತಾ|| ೨೮ ೧ ಶುಭ ವಾರ್ತೆ ವೆಚ್ಚ

ಮಿಥುನ — ಗೃಹ ಕಲಹ ಆಯಾಸ ಮತ್ತು ಲಾಭವಿಲ್ಲದ ಪ್ರವಾಸ ಆರೋಗ್ಯ ತೃಪ್ತಿಕರ, ನೌಕರಿಯಲ್ಲಿ ಅತೃಪ್ತಿ ವ್ಯಾಪಾರ ಉದ್ಯೋಗಗಳಲ್ಲಿ ಹಾನಿಯುಂಟು ತಾ|| ೨೮ ೧ ಉತ್ತಮ ದಿನಗಳು

ಕಟಕ — ಆರೋಗ್ಯ ಉತ್ತಮ ತಾಯಿಯ ಆರೋಗ್ಯಕ್ಕೆ ಕ್ಲೇಶ ವ್ಯಾಪಾರ ಉದ್ಯೋಗಗಳಲ್ಲಿ ಹಾನಿ ಪ್ರವಾಸ ಬೇಡ ತಾ|| ೧ ಮತ್ತು ೨ ಇದ್ದುದರಲ್ಲಿ ಉತ್ತಮ

ಸಿಂಹ — ಬೇಸರ ಆರೋಗ್ಯಕ್ಕೆ ಕ್ಲೇಶ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಹಾನಿಯಿಲ್ಲ ಪ್ರವಾಸದಲ್ಲಿ ಕೊಂಚ ಉತ್ತಮ ತಾ|| ೧ ಮತ್ತು ೨ ಅನುಕೂಲದ ದಿನಗಳು

ಕನ್ಯಾ — ಆರೋಗ್ಯ ಸಾಧಾರಣ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ತಾತ್ಕಾಲಿಕ ತೃಪ್ತಿ ಪ್ರವಾಸದಲ್ಲಿ ಯಶ ತಾ|| ೨ ಮತ್ತು ೩ ಲಾಭ ಮತ್ತು ಪ ಹಸ್ಯದ ಪತ್ರಾಗಮನ

ತುಲಾ — ಆರೋಗ್ಯ ನೆಟ್ಟಗೆ ವಾರದಲ್ಲಿ ವಿಶೇಷ ರೀತಿಯ ಹಣದ ಅಡಚಣೆ ವ್ಯಾಪಾರ ಉದ್ಯೋಗದಲ್ಲಿ ಸಹಾಯ ನೌಕರಿಯಲ್ಲಿ ಬೇಸರ ಗೃಹ ಕಲಹ ಪ್ರವಾಸದಲ್ಲಿ ಕೊಂಚ ಉತ್ತಮ ತಾ|| ೨ ಮತ್ತು ೩ ವೃಷ್ಟಿಪ್ರಯೋಜನ ಧನ ಲಾಭ

ವೃಶ್ಚಿಕ—ಆರೋಗ್ಯ ಸಾಧಾರಣ ಪತ್ನಿಯ ಆರೋಗ್ಯ ಉತ್ತಮ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಉತ್ತಮ ಪ್ರವಾಸದಲ್ಲಿ ಹಣ ತಾ|| ೨ ೩ ಶುಭ ವಾರ್ತೆ, ವಸ್ತ್ರದ ಪತ್ರಾಗಮನ, ಲಾಭ

ಧನು—ಆರೋಗ್ಯಕ್ಕೆ ಕ್ಲೇಶ ಮನಸ್ಸಿಗೆ ಚಿಂತೆ ಆರ್ಥಿಕ ವ್ಯತ್ಯಯ ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಹಾನಿ ಗೃಹ ವ್ಯಾಜ್ಯ ಪ್ರವಾಸ ಕಷ್ಟಕರ ತಾ|| ೨, ೩ ೪ ಇದ್ದುದರಲ್ಲಿ ಉತ್ತಮ

ಮಕರ — ಆರೋಗ್ಯಕ್ಕೆ ಕ್ಲೇಶ ಆರ್ಥಿಕ ತೊಂದರೆ ಮನಸ್ಸಿಗೆ ಚಿಂತೆ ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಸಾಧಾರಣ ಸ್ಥಿತಿ ಪ್ರವಾಸ ಬೇಡ ತಾ|| ೫ ೬ ಅಪಘಾತ ಭಯ ಎಚ್ಚರಿಕೆ

ಕುಂಭ — ಆರೋಗ್ಯ ಉತ್ತಮ ಹೊಸ ಕಾರ್ಯಗಳಿಗೆ ತಕ್ಕ ಕಾಲ ಉತ್ಸಾಹ ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಮಿತ್ರ ಸಹಾಯ ಪ್ರವಾಸದಲ್ಲಿ ಕ್ಲೇಶ ತಾ|| ೩ ೪ ಲಾಭ ಚಿಂತಾ ನಾಶ

ಮೀನ— ಆರೋಗ್ಯ ಉತ್ತಮ, ಅನಿರೀಕ್ಷಿತ ಲಾಭ, ಪ್ರವಾಸದಲ್ಲಿ ಯಶ ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಉತ್ತೇಜನ ಬಂಧು ಪ್ರಿಯರ ವಿಯೋಗ ಸಂಭವ ತಾ|| ೩ ೪ ಶುಭ ವಾರ್ತೆ ಲಾಭ

ಪ್ರಸಿದ್ಧ ಪತ್ರಿಕೆ

ಕಾಂಚೀಪುರದ ತಿಂಗ್ಳೂರು ಬೀಟಿ ಬೆಟ್ಟದಲ್ಲಿ ನೆಲೆಸಿರುವ ಶ್ರೀ ಸಿದ್ದೇಶ್ವರ ಮಾಡೇಶ್ವರ ರಥೋತ್ಸವ ಕಾಲದಲ್ಲಿ ದನದ ಪರೀಷೆಯನ್ನು ತಾ|| 4 3 1954 ರಿಂದ ಒಂದು ವಾರ ನಡೆಯಿಸಲು ಮಾಡಿದ್ದ ಏರ್ಪಾಡನ್ನು ಜಾತ್ರೆ ನಡೆವ ಸುತ್ತ ಮುತ್ತಲ ಪ್ರದೇಶದಲ್ಲಿ ಕಾಲರಾ ವಿಷ ರೋಗವು ಹರಡುವ ಸಂಭವ, ದುವುದರಿಂದ ಆರೋಗ್ಯ ಇಲಾಖಾ ಡೈರೆಕ್ಟರವರ ಸೂಚನೆಯ ಮೇರೆ ಇಲ್ಲದಂತಾಗುತ್ತದೆ ಆದರೆ ರಥೋತ್ಸವವು ತಾ|| 8 3 1954 ರಲ್ಲಿ ಮಾಮೂಲಿನಂತೆ ನಡೆಯುತ್ತದೆ

ಎಚ್ ಎಸ್ ಪಾಳ್ಯೇಗಾರ್,
ಶ್ರೀ ಮಾಡೇಶ್ವರ ದೇವಸ್ಥಾನದ ಕಮಿಟಿಯ
ಸೆಕ್ರೆಟರಿಯವರು

ನಗರದಲ್ಲಿ ಆರೋಗ್ಯ ತೆರಿಗೆಯ ವಸೂಲಿ

ಪುರಸಭೆಯಲ್ಲಿ ಪರಿಶೀಲನೆ

ಮೈಸೂರು ೨೮

ನೆನ್ನೆ ದಿನ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರಂಭದಲ್ಲಿ ಅಧ್ಯಕ್ಷರು ನಗರದಲ್ಲಿ ಮಕ್ಕಳ ಅಪಹರಣದ ಬಗ್ಗೆ ಉಂಟಾಗಿರುವ ಕೋಲಾಹಲದ ವಿಚಾರವನ್ನು ಪ್ರಸ್ತಾಪಿಸಿ ಇಲ್ಲಿಯವರೆಗೂ ಯಾವ ಒಂದು ಮಗುವೂ ಕಳುವಾಗಿಲ್ಲವೆಂದೂ, ಜಿಲ್ಲಾಧಿಕಾರಿಗಳೂ ಪೊಲೀಸ್ ಸೂಪರಿಂಟೆಂಡೆಂಟರೂ ಕ್ರಮವನ್ನು ಕೈಗೊಂಡಿರುವುದರಿಂದ ಜನರು ಅನವಶ್ಯಕವಾಗಿ ಭಯಪಡಬಾರದೆಂದು ತಾವು ಪ್ರಾರ್ಥಿಸುವುದಾಗಿಯೂ ನುಡಿದರು ತಮ್ಮ ವಾರ್ಡಿನಲ್ಲೆ ಒಂದು ಪ್ರಸಂಗವು ನಡೆಯಿತೆಂದ ಶ್ರೀ ಬಿ ಕೆ ರಾಮಕೃಷ್ಣಯ್ಯನವರು ತಿಳಿಸಿದಂಗ ಇಂತಹ ಸಾಮಾನ್ಯ ಘಟನೆಗಳು ನಡೆಯುವ ಸಂಭವವಿದರೂ ಜನರು ಗಾಬರಿಪಡ ವ ಪ್ರಮೇಯ ವಿಲ್ಲ ವೆಂದು ಅಧ್ಯಕ್ಷರು ತಿಳಿಸಿದರು

ಕಳೆದ ಸಭೆಯ ಕಾರ್ಯ ಕಲಾಪಗಳ ವಿಧಾನದ ಮೇಲೆ ಶ್ರೀ ರಾಮಕೃಷ್ಣಯ್ಯನವರು ಎತ್ತಿದ್ದ ಕ್ರಿಯಾಲೋಪದ ಬಗ್ಗೆ ನೆನ್ನೆ ಅಧ್ಯಕ್ಷರು ತಮ್ಮ ತೀರ್ಪನ್ನು ಕೊಡುತ್ತಾ ಬಹಳ ಕಾಲದಿಂದಲೂ ಸಭೆಯ ಸಾಮಾನ್ಯ ವಿಷಯಗಳನ್ನು ಪ್ರಶ್ನೋತ್ತರಗಳಿಗಿಂತ ಮುಂಚೆ ಚರ್ಚಿಸುವ ಪದ್ಧತಿಯಿರುವುದರಿಂದ ಹಿಂದಿನ ಸಭೆಯಲ್ಲಿಯೂ ಪ್ರಶ್ನೋತ್ತರವನ್ನು ಮೊದಲು ಚರ್ಚಿಸದಿದ್ದುದು ಕಾನೂನಿಗೆ ವಿರುದ್ಧವಲ್ಲವೆಂದು ನುಡಿದರು

ನಗರದಲ್ಲಿ ಆರೋಗ್ಯದ ತೆರಿಗೆಯನ್ನು ವಸೂಲ್ಮಾಡಲು ಮತ್ತು ಸಾರ್ವಜನಿಕ ವೈದ್ಯ ಶಾಲೆಗಳಿಗೆ ಪ್ರತ್ಯೇಕ ಸಹಾಯ ಕೊಡಲೂ ಆಗುವುದಿಲ್ಲವೆಂದು ತಿಳಿಸಿ ಸಭೆಯು ಕರೆದಿರುವುದನ್ನು ಒಪ್ಪುವುದಕ್ಕಾಗುವುದಿಲ್ಲವೆಂದೂ ಈ ಎರಡೂ ಪುರಸಭೆಗಳ ಆಗತ್ಯ ಕರ್ತವ್ಯವಾದುದರಿಂದ ಅದನ್ನು ಒಪ್ಪಿಕೊಳ್ಳಬೇಕೆಂದೂ, ಸರ್ಕಾರದವರಿಂದ ಬಂದಿರುವ ಸೂಚನೆಯ ಬಗ್ಗೆ ಶ್ರೀ ಟಿ ನರಸಿಂಹಯ್ಯಂಗಾರರು ಮಾತನಾಡಿ ಈಗ ಪ್ರದರ್ಶನಗಳ ಮೇಲಿನ ತೆರಿಗೆಯ ವಸೂಲಿಯ ಖರ್ಚಿಗಾಗಿ ಒಟ್ಟು ಮೊತ್ತದ ಶೆ ಕಡ ೧೨|| ಯನ್ನು ಕೊಡುತ್ತಿರುವಂತೆಯೇ ಇದಕ್ಕೂ ಕೊಡುವುದಾದರೆ ಒಪ್ಪಬಹುದೆಂಬ ನಿರ್ಣಯವನ್ನು ಸೂಚಿಸಿದರು

ಶ್ರೀ ಬಿ ಜಿ ಬಾಬ್ ವಿಜಾನ್‌ನೂರ್ ಹುಸೇನ್ ಮುಂತಾದವರ ಮಾತನಾಡಿ ಪುರಸಭೆಯು ತೆರಿಗೆಯನ್ನು ವಸೂಲ್ಮಾಡಿ ಜನಗಳ ಅಸಮಾಧಾನಕ್ಕೆ ಪಾತ್ರವಾಗುವುದರಿಂದ ಇದನ್ನು ಒಪ್ಪಕೂಡದೆಂದು ನುಡಿದರು

ನಾವು ಒಪ್ಪಲಿ ಬಿಡಲಿ ತೆರಿಗೆಯನ್ನು ಜನರು ಹೇಗಾದರೂ ಕೊಡಬೇಕಾಗುವುದು ಅಲ್ಲದೆ ಸರ್ಕಾರವು ನಮಗೆ ಎಷ್ಟೋ ವಿಧದಲ್ಲಿ ಸಹಾಯ ಮಾಡದಿರುವಾಗ ನಾವು ಇದನ್ನು ಒಪ್ಪದಿರುವುದು ಸರಿಯಲ್ಲ- ಎಂಬುದಾಗಿ ಅಧ್ಯಕ್ಷರು ಸಮಾಧಾನವಿತ್ತರು

ವಸೂಲ್ಮಾಡಬೇಕಾಗಿದ್ದ ಹಾಗೆಯೇ ಬಿಡಲಾಗಿದ್ದ ೩ ವರ್ಷದ ತೆರಿಗೆಯನ್ನಾದರೂ ಮನ್ನಾ ಮಾಡಿಕೊಡಲು ಸರ್ಕಾರವನ್ನು ಪ್ರಾರ್ಥಿಸಬೇಕೆಂಬ ಸಂಯುಕ್ತ ರಂಗದವರ ಸೂಚನೆಯನ್ನು ಅಧ್ಯಕ್ಷರು ಅಂಗೀಕರಿಸಿದರು ೭ ಮೇಲೆ ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಲಾಯಿತು

ನಗರದ ಉತ್ತರ ಭಾಗದಲ್ಲಿ ಚರಂಡಿ ವ್ಯವಸ್ಥೆಯನ್ನು ಮಾಡಲು ಆಗುವ ೬ ಲಕ್ಷ ರೂ ಗಳ ಖರ್ಚಿನಲ್ಲಿ ಸರ್ಕಾರದ ಪಾಲು ಬಂದಕೂಡಲೇ ಕೆಲಸ ಪ್ರಾರಂಭಿಸಬಹುದೆಂದು ತೀರ್ಮಾನಿಸಲಾಯಿತು

ನಜರ್‌ಬಾದ್ ಮತ್ತು ಖಿಲ್ಲೆ ಮೊಹಲ್ಲಗಳಲ್ಲಿರುವ ಸೈನ್ಯದ ಕಟ್ಟಡಗಳಿಗೆ ಭಾರತದ ರಕ್ಷಣೆ ಶಾಖೆಯವರಿಂದ ತೆರಿಗೆಯನ್ನು ವಸೂಲ್ಮಾಡಬೇಕೆಂಬ ಸರ್ಕಾರದ ಸೂಚನೆಯನ್ನು ಒಪ್ಪಲಾಯಿತು

ಅನಂತರ ಪ್ರಶ್ನೋತ್ತರಗಳಾದುವು. ಶ್ರೀ ಕುಮಾರಸ್ವಾಮಿಯವರ ಪ್ರಶ್ನೆಗೆ ಉತ್ತರವೀಯುತ್ತಾ ನಗರದಲ್ಲಿ ೦ ಸಾರ್ವಜನಿಕ ಫ್ಲಷ್ ಕಕ್ಕಸ್ಸುಗಳಿದ್ದು ಬೇರೆ ೦ ಕಕ್ಕಸುಗಳಿಗೆ ನೀರಿನ ಸೌಕರ್ಯವನ್ನೊದಗಿಸಲಾಗಿದೆಯೆಂದೂ ಒಟ್ಟಿನಲ್ಲಿ ಅವುಗಳ ಸ್ಥಿತಿಗಳು ಅಷ್ಟಾಗಿ ಸಮಾಧಾನಕರವಾಗಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು ಪೌರಸಭೆಯಲ್ಲಿ ಕೇಂದ್ರ ಸ್ಥಳದಲ್ಲಿ ಇರುವ ಅಜ ದವಾಖಾನೆಗಳ ಪೈಕಿ ಜನಕ್ಕೆ ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆಯೆಂದೂ ನುಡಿದರು

ಶ್ರೀ ಎಂ ಎಸ್ ತಿಮ್ಮಯ್ಯನವರ ಪ್ರಶ್ನೆಗುತ್ತರವಾಗಿ ಬನ್ನಿ ಮಂಟಪದ ಬಡಾವಣೆಯ ಕಾರ್ಯವನ್ನು ಕೈಬಿಡಲಾಗಿಲ್ಲವೆಂದು ತಿಳಿಸಿದರು

ಕಳೆದ ೨ ವರ್ಷಗಳಲ್ಲಿ ಪುರಸಭೆಯು ಮಾಡಿದ ಳಾ ನಿಣ ಯಗಳ ಪೈಕಿ ಎರಡನ್ನು ಮಾತ್ರ ಸರ್ಕಾರದವರು ಅಂಗೀಕರಿಸಿರುವರೆಂದೂ ಉಳಿದುವನ್ನು ಕಾರ್ಯಗತ ಮಾಡಲು ಪ್ರಯತ್ನಿಸಲಾಗಿದೆಯೆಂದೂ ಶ್ರೀ ಬಿ ಜಿ ದಾಸರ ಪ್ರಶ್ನೆಯೊಂದಕ್ಕುತ್ತರವೀಯಲಾಯಿತು ಅವರ ಮತ್ತೊಂದು ಪ್ರಶ್ನೆಗುತ್ತರವಾಗಿ ಕಳೆದ ವರ್ಷ ವಿವಿಧ ವ್ಯಾಪಾರಗಳಿಗೆ ಲೈಸೆನ್ಸಿಗಾಗಿ ಒಟ್ಟು ... ಅರ್ಜಿಗಳು ಬಂದವೆಂದೂ ಅವುಗಳ ಪೈಕಿ ೨೦ನ್ನು ಮಂಜೂರು ಮಾಡಲಾಯಿತೆಂದೂ ಸುಮಾರು ೩೭೬ ಪ್ರಸಂಗಗಳಲ್ಲಿ ಕ್ರಮ ಕೈಗೊಂಡು ೧೮೪ ಜನರಿಗೆ ಶಿಕ್ಷೆಯಾಗಿ ೧೦೪ ಲೈಸೆನ್ಸುಗಳು ಇನ್ನೂ ಪರಿಶೀಲನೆಯಲ್ಲಿವೆಯೆಂದೂ ತಿಳಿಸಲಾಯಿತು

ಜ|| ವಿಜಾನ್‌ನೂರ್ ಹುಸೇನರ ಪ್ರಶ್ನೆಯೊಂದಕ್ಕೆ ಉತ್ತರವಿತ್ತು ೧೯೫೦ನೇ ಇಸವಿಯಿಂದ ಪೌರಸಭಾ ಸದಸ್ಯರಿಗೆ ಉಪಾಹಾರದ ವಿಚಾರ ಪ್ರಾರಂಭವಾಯಿತೆಂದೂ ಇದಕ್ಕಾಗಿ ಕಳೆದ ವರ್ಷ ೧೬೫ ರೂ ಗಳ ಖರ್ಚಾದುದೆಂದೂ ಅಧ್ಯಕ್ಷರು ತಿಳಿಸಿದರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತು, ಮನೆ ಕಂದಾಯ ಹೆಚ್ಚಿಸಿದುದರಿಂದ ಪುರಸಭೆಗೆ ಸುಮಾರು ೧ ಲಕ್ಷ ರೂ ಹೆಚ್ಚು ಆದಾಯ ಬರುವುದೆಂದೂ ಕಂದಾಯದಲ್ಲಿ ಬಾಕಿ ನಿಂತಿದ್ದುದಕ್ಕೆ ಅಧಿಕಾರಿಗಳು ಬೇರೆ ಕಾರ್ಯಗಳಲ್ಲಿ ಮಗ್ನರಾಗಿದ್ದುದು ಕಾರಣವೆಂದೂ, ಈಗಿನ ಆರ್ಥಿಕ ಮುಗ್ಗಟ್ಟಿನಿಂದಲ್ಲವೆಂದೂ ನುಡಿದರು

ಅನಂತರ ಶ್ರೀ ಪಿ ಎಲ್ ಕುಮಾರಸ್ವಾಮಿಯವರು ನಗರದ ಎಲ್ಲಾ ದಾದಮಾರಿಗಳಿಗೆ ತಕ್ಷಣವೇ ಉಚಿತ ಗೃಹ ವಸತಿಯನ್ನು ಒದಗಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು ಶ್ರೀ ಬಿ ಕೆ ಪುಟ್ಟಯ್ಯನವರು ಅನುಮೋದಿಸಿದರು

ಜ|| ವಿಜಾನ್‌ನೂರ್ ಹುಸೇನರು "ಪುರಸಭೆಯ ಜಮಾದಾರಿಗಳಿಗೆ ಎಂಬುದಾಗಿಯೂ ಮತ್ತು ಶ್ರೀ ಟಿ ನರಸಿಂಹಯ್ಯಂಗಾರ್ಯರು "ತಕ್ಷಣವೇ" ಎಂಬುದರ ಬದಲು "ಆದಷ್ಟು ಬೇಗನೆ" ಎಂಬುದಾಗಿಯೂ ಸೂಚಿಸಿ ತಂದ ತಿದ್ದುಪಡಿಗಳೊಂದಿಗೆ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು ಅದರಂತೆ ಗಟಾರಪುರ ಕಾಲೋನಿಯ ಮತ್ತು ಅವುಗಳ ಪಕ್ಕದಲ್ಲಿನ ಮೋರಿ ಮನೆಗಳ ಪ್ರದೇಶಕ್ಕೆ ಒಳಚರಂಡಿಯನ್ನು ಮಾಡಿಸಿಕೊಡಬೇಕೆಂಬ ಮತ್ತೊಂದು ನಿರ್ಣಯವನ್ನು ಶ್ರೀ ಕುಮಾರಸ್ವಾಮಿಯವರು ಮಂಡಿಸಿದರು ಜ|| ವಿಜಾನ್‌ನೂರ್ ಹುಸೇನರು ಅನುಮೋದಿಸಿದರು

ಹಣದ ಅಭಾವ ಮತ್ತು ನೀರು ಸರಬರಾಜು ಮಾಡಲಾಗದಿರುವ ಪ್ರಯುಕ್ತ ಈ ಕೆಲಸವನ್ನು ಇಲ್ಲಿಯವರೆಗೆ ಕೈಗೊಳ್ಳಲಾಗಲಿಲ್ಲವೆಂದು ಅಧ್ಯಕ್ಷರು ತಿಳಿಸಿದರು ನಗರಾಭಿವೃದ್ಧಿ ಸಮಿತಿಯ ಕಾರ್ಯಕ್ರಮದಲ್ಲಿ ಇದೂ ಅಡಕವಾಗಿರುವುದರಿಂದ ನಿರ್ಣಯವನ್ನು ಹಿಂದಕ್ಕೆ ಪಡೆಯಲು ಶ್ರೀ ಎಸ್ ರಂಗಣ್ಣನವರು ಸೂಚಿಸಿದಾಗ ಶ್ರೀ ಕುಮಾರಸ್ವಾಮಿಯವರು ಒಪ್ಪಲಿಲ್ಲ ನಿರ್ಣಯವನ್ನು ಓಟಿಗೆ ಹಾಕಿದಾಗ ೧೯ ಪರವಾಗಿ ಮತ್ತು ೧೪ ವಿರುದ್ಧವಾಗಿ ಓಟುಗಳು ಬಂದು ಅದು ಬಿದ್ದುಹೋಯಿತು

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ !

ಒಲಂಪಿಯಾ ✱ ಅಮೋಘ ಪ್ರಾರಂಭ ತಾ|| 3—3—54 ರಿಂದ ಪ್ರತಿ ದಿನ ಮೂರು ಆಟಗಳು

ಇಂದಿನ ಸಮಾಜದ ದೋಷಪೂರಿತ ಕಟ್ಟುಪಾಡುಗಳನ್ನು ಬೆಳಕಿಗೆ ತಂದ ಅಮರ ಪ್ರೇಮದ ವೈವಿಧ್ಯದ ಕಥೆ

ಶರತ್‌ಚಂದ್ರಚಟರ್ಜಿ ಯವರ

• ಪ ರಿ ಣೀ ತಾ •

ಪಾತ್ರ — ಅಶೋಕ್ ಕುಮಾರ್, ಮೀನಾಕುಮಾರಿ ಆಶಿತ್ ಬರನ್

ನಿರ್ದೇಶನ ಬಿಮಲ್ ರಾಯ್

ಜಗನ್ಮೋಹನ ಬಂಗ್ಲೆಯಲ್ಲಿ

ಅಮೋಘ ಹರಾಜು ಮಾರಾಟ

4—3—54 ರಿಂದ :: 6 ದಿನಗಳವರೆಗೆ

ಪ್ರತಿದಿನ ಬೆಳಗ್ಗೆ 9 ಘಂಟೆಗೆ

ಎಂಪೈರ್ ಅಕ್ಷನೀರ್ಸ್‌ರವರಿಂದ

581 ಇರ್ವಿನ್ ರಸ್ತೆ, ಮೈಸೂರು

C. T. C PUBLICATIONS

FOR S S L C STUDENTS

A Guide to English Prose and Poetry	1 0 0
ಕನ್ನಡ ಪದ್ಯದ ಪ್ರಶ್ನೋತ್ತರ	0 10 0
ಗದ್ಯದ "	0 6 0
Elementary Mathematics (10 Papers answered)	1 12 0
— Do ಕನ್ನಡದಲ್ಲಿ	1 12 0
Optional Algebra (10 Papers)	1 2 0
ಆಧುನಿಕ ಜನಜೀವನ ಹೋರಾಟದ ಕೈಪಿಡಿ	0-8 0
Simplified Grammar	0 6 0

Agents

M/s J Hanumanthaiah & Sons, Mysore

— Publishers —

CITY TUTORIAL COLLEGE

Near V V Market, Mysore

ರಾ ಜ ಕ ಮ ಲ್,

ಮೈ ಸೂ ರು

25 2 54 ರಿಂದ ಅಮೋಘ 7ನೇ ವಾರ

ವಿಜಯವಾರವರ ಮಹತ್ತರದ ಕಮಿಲ ಚಿತ್ರ

ಚಂ ದ್ರ ಹಾ ರಂ

ಪಾತ್ರ ಎನ್ ಟಿ ರಾಮರಾವ್, ಶ್ರೀರಂಜನಿ, ಸಾವಿತ್ರಿ ರಂಗರಾವ್ ಮುಂತಾದವರು

ತಾ ರಾ ಲೋ ಕ

ಸಚಿತ್ರ ಕನ್ನಡ ವಾರ ಪತ್ರಿಕೆ

ಮಾರ್ಚಿ ಮೊದಲ ವಾರದಲ್ಲಿ

ಹೊರಬೀಳುತ್ತದೆ

★ ಜಾಹಿರಾತುದಾರರಿಗೆ ಸುಸಮಯ

★ ಲೇಖಕರಿಗೆ ಸದವಕಾಶ

ವಿವರಗಳಿಗೆ ಬರೆಯಿರಿ

ಸಂಪಾದಕರು 'ತಾರಾಲೋಕ'

ಮೈಸೂರು

Edited, Printed and Published by A R Nagarajan at Sadhvi Press D Subbiah Road, Mysore

ಟೆಲಿಫೋನ್ ನಂ 792

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದು ನೋಡಿ
M. V. ಭೋಜಯ್ಯ
ಬಿ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

|| ವಂದೇ ಮಾತರಂ ||

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೬] MYSORE MONDAY 1-3-1954 ಮೈಸೂರು : ಸೋಮವಾರ ೧-೩-೧೯೫೪ [ಸಂಚಿಕೆ ೨೦೦

ಈಜಿಪ್ಟಿನಲ್ಲಿ ವಿದ್ಯಾರ್ಥಿಗಳ ಗುಂಪಿನ ಮೇಲೆ ಗುಂಡು

ಜಿಲ್ಲಾ ಬೋರ್ಡಿನ ಆಯವ್ಯಯದ ಅಂದಾಜಿನ ಅಂಗೀಕಾರ

ಜಿಲ್ಲಾ ಬೋರ್ಡುಗಳ ರದ್ದಿನ ಬಗ್ಗೆ ಅಧ್ಯಕ್ಷರ ಟೀಕೆ

ಮೈಸೂರು ೧

ನೆನ್ನೆ ದಿನ ಜಿಲ್ಲಾಬೋರ್ಡು ಅಧ್ಯಕ್ಷರು ಮಂಡಿಸಿದ ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ಸದಸ್ಯರುಗಳ ಭಾಷಣಗಳಾದನಂತರ ಅದು ಅಂಗೀಕರಿಸಲ್ಪಟ್ಟಿತು ಸುಮಾರು ೨೩ ಸಾವಿರ ರೂ ಗಳ ವೆಚ್ಚಕ್ಕೆ ಅಂದಾಜಿನಲ್ಲಿ ಕೆಲವು ಹೊಸ ರಸ್ತೆಗಳು ಮತ್ತು ಇತರ ಕೆಲಸಗಳನ್ನು ಮಾಡಬೇಕೆಂದು ಸಹ ತೀರ್ಮಾನಿಸಲಾಯಿತು

ಹೊಸದಾಗಿ ಕೆಲವು ಆಸ್ಪತ್ರೆಗಳು ರಸ್ತೆಗಳು, ಕಟ್ಟಡಗಳೇ ಮುಂತಾದುವುಗಳಿಗಾಗಿ ಬಂದಿದ್ದ ಧನಸಹಾಯವನ್ನು ಅಂಗೀಕರಿಸಿ ಅವರ ಕೆಲಸಗಳನ್ನು ಮಾಡಿಸುವ ತೀರ್ಮಾನಿಸಲಾಯಿತು

ದೇವನೂರು ಚಿಟ್ಟೆದಪುರ ಮತ್ತು ಬನ್ನೂರಿನ ಹೈಸ್ಕೂಲಿನ ಕಟ್ಟಡಗಳಿಗಾಗಿ ತಲಾ ೮ ಸಾವಿರ ರೂ ಗಳನ್ನು ಕೊಡುವಂತೆ ಮಂಜೂರಾಯಿತು

ಅಧ್ಯಕ್ಷರು ಭಾಷಣ ಮಾಡಿ ಕಳೆದ ಏಳು ವರ್ಷಗಳಿಂದಲೂ ಕ್ರಮಕ್ರಮವಾಗಿ ಬೋರ್ಡು ಪ್ರಗತಿ ಹೊಂದಿರುವ ವಿಷಯವನ್ನು ತಿಳಿಸಿದರು ಆದರ ಹಣಕಾಸಿನ ಸ್ಥಿತಿಯು ಬಹಳ ಸಮರ್ಪಕವಾಗಿದೆಯೆಂದು ಹೇಳಿದರು ಸರ್ಕಾರದಿಂದ ೯ ಲಕ್ಷ ೪೨ ಸಾವಿರ ರೂ ಬರಬೇಕಾಗಿದೆಯೆಂದೂ ಸಾಲವು ೯೫ ಸಾವಿರ ರೂ ಮಾತ್ರ ಇರುವುದಾಗಿಯೂ ಹೇಳಿದರು ಎಲ್ಲಾ ನಿರ್ಣಯಗಳೂ ಭಿನ್ನಾಭಿಪ್ರಾಯವಿಲ್ಲದೆ ಒಮ್ಮತದಿಂದ ತೀರ್ಮಾನವಾಗಿರುವುದು ಬೋರ್ಡಿನ ಒಂದು ವೈಶಿಷ್ಟ್ಯವೆಂದ ನುಡಿದರು ಬೋರ್ಡಿನ ಅಧೀನದಲ್ಲಿಯೇ ಇಂಜನಿಯರಿಂಗ್ ಕೆಲಸಗಳು ನಡೆಯಲು ಸರ್ಕಾರದವರು ಅವಕಾಶ ಕಲ್ಪಿಸಿದುದರಿಂದ ಕಟ್ಟಡಗಳು ರಸ್ತೆಗಳು ಸುಲಭ ವೆಚ್ಚದಲ್ಲಿ ಅತ್ಯಲ್ಪ ಕಾಲದಲ್ಲಿ ಆಗಲು ಅವಕಾಶವಾಯಿತೆಂದು ಹೇಳಿದರು

ಇದುವರೆಗೆ ಜಿಲ್ಲಾ ಬೋರ್ಡಿಗೆ ಸಾರ್ವಜನಿಕರಿಂದ ೧೦ ಲಕ್ಷ ೧ ಸಾವಿರ ರೂ ಧನ ಸಹಾಯ ಬಂದಿರುತ್ತದೆ ಅವುಗಳ ಪೈಕಿ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳಿಗಾಗಿ ೬,೯೩,೦೦೦ ರೂ, ಆಸ್ಪತ್ರೆ ಕಟ್ಟಡಗಳಿಗಾಗಿ ೨,೦೨,೦೦೦ ರೂ, ರಸ್ತೆ ಮತ್ತು ಸಾರ್ವಜನಿಕ ಕಟ್ಟಡಗಳಿಗಾಗಿ ೯೯,೯೦೦ ರೂ ಬಂದಿರುತ್ತದೆ ಕಳೆದ ೭ ವರ್ಷಗಳಲ್ಲಿ ಆದಾಯವ್ಯಯವು ೧೫ ೧೦ ರಷ್ಟು ಹೆಚ್ಚಿರುತ್ತದೆ ಆಯುರ್ವೇದ ಮತ್ತು ಪಾಶ್ಚಾತ್ಯ ಪದ್ಧತಿಗಳೆರಡರಲ್ಲೂ ಆಸ್ಪತ್ರೆಗಳನ್ನು ಸ್ಥಾಪಿಸಿರುವುದು ಬೋರ್ಡಿನ ಒಂದು ವೈಶಿಷ್ಟ್ಯವಾಗಿರುತ್ತದೆ ಒಟ್ಟು ೫೮ ಆಸ್ಪತ್ರೆಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿವೆ ಕ್ರಿಮಿನಾಶಕ ಶಸ್ತ್ರಗಳ ಮೂಲಕ ಪ್ಲೇಗನ್ನು ಪೂರ್ಣವಾಗಿ ನಿವಾರಿಸಲಾಗಿದೆ ಸಾರ್ವಜನಿಕ ಆರೋಗ್ಯವು ಅತ್ಯಂತ ಸಮರ್ಪಕವಾಗಿರುತ್ತದೆ ೧೦ ಪ್ರೌಢಶಾಲೆಗಳನ್ನು ಅನೇಕ ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ ಎಂಬುದಾಗಿ ಅಧ್ಯಕ್ಷರು ತಿಳಿಸಿ ... ಕಾರ್ಯಗಳಲ್ಲಿ

ಸಿರಿಯಾ ರಾಜಧಾನಿಯಲ್ಲಿ ಸತತವಾಗಿ ಗುಂಡಿನ ಸುರಿಮಳೆ

ಕಳೆದ ೪ ದಿನಗಳಿಂದಲೂ ಸಿರಿಯಾದಲ್ಲುಂಟಾಗಿರುವ ಬಿಕ್ಕಟ್ಟು ಭೀಕರ ರೂಪವನ್ನು ತಾಳುತ್ತಿದೆ ದಿನವೂ ಡಮಾಸ್ಕಸ್ಸಿನಲ್ಲಿ ಶಿಷಕ್ಲಿಯವರ ಮತ್ತು ಹಮು ... ಯವರ ಪರವಾಗಿ ಜನರು ನಡೆಸಿದ ಪ್ರದರ್ಶನಗಳ ಮೇಲೆ ಮಿಲಿಟರಿ ಪೋಲೀಸರು ತಡೆಯಿಲ್ಲದೆ ಗುಂಡು ಹಾರಿಸುತ್ತಾ ಬಂದಿದ್ದಾರೆ ಇದರಿಂದ ವಿಪರೀತವಾಗಿ ಸಾವುನೋವುಗಳುಂಟಾಗಿವೆಯೆಂದು ವರದಿಯಾಗಿದೆ ನಗರದ ಬೀದಿಗಳಲ್ಲಿ ಶಸ್ತ್ರಸಜ್ಜಿತ ಟ್ಯಾಂಕುಗಳು ಸಂಚರಿಸುತ್ತಿವೆ ಅಲ್ಲಿ ಈಗ ಇರುವ ಪರಿಸ್ಥಿತಿಯನ್ನು ಘೋಷಿಸಿ ನಗರದಲ್ಲಿ ಕರ್ಫ್ಯೂ ಆಜ್ಞೆಯನ್ನು ವಿಧಿಸಲಾಗಿದೆ ಜನರು ಪಾರ್ಲಿಮೆಂಟ್ ಭವನಕ್ಕೆ ಕಲ್ಲಿನೇಟಿನಿಂದ ಆಕ್ರಮಣ ಮಾಡಿದವರು ಮತ್ತು ಅಲ್ಲಿನ ಪಾರ್ಲಿಮೆಂಟನ್ನು ಸಹ ವಿಸರ್ಜಿಸಲಾಗಿದೆ ಅಲೆಪ್ಪೋ ನಗರದಿಂದ ನೆನ್ನೆ ಹೊರಟ ಸೈನ್ಯಗಳ ಸಹ ಡಮಾಸ್ಕಸ್ಸನ್ನು ತಲುಪಿದ ಸುದ್ದಿ ಮುಟ್ಟಿದುಬಂದಿದೆ

ಕಹಳೆ ... ಸಿದ ಸಕಲರಿಗೂ ಧನ್ಯವಾದಗಳನ್ನರ್ಪಿಸಿದರು

ಜಿಲ್ಲಾ ಬೋರ್ಡುಗಳನ್ನು ಹಠಾತ್ತಾಗಿ ರದ್ದು ಮಾಡಲು ಇತ್ತೀಚೆಗೆ ಸರ್ಕಾರದವರು ಹೊರಡಿಸಿರುವ ಆಜ್ಞೆಯನ್ನು ಅಧ್ಯಕ್ಷರು ಉಗ್ರವಾಗಿ ಖಂಡಿಸಿದರು ಈ ಬೋರ್ಡುಗಳ ವಿಷಯದಲ್ಲಿ ಯಾವ ಕಡೆಗಳಿಂದಲೂ ಆಕ್ಷೇಪಣೆಗಳು ಬರದಿರುವಾಗ ಪ್ರಜಾಪ್ರಭುತ್ವ ಯುಗದಲ್ಲಿ ಇಂತಹ ಚುನಾಯಿತ ಸಂಸ್ಥೆಗಳನ್ನು ತಪ್ಪಿಸಿ ಸರ್ಕಾರಿ ಅಧಿಕಾರಿಗಳಿಗೆ ಅವುಗಳ ಮೇಲ್ವಿಚಾರಣೆಯನ್ನು ವಹಿಸಿ ನಾಮಕರಣದ ಸಲಹೆಗಾರರ ಸಮಿತಿಯ ರಚನೆಯ ವೈಚಿತ್ರ್ಯವನ್ನು ಅವರು ತೀವ್ರವಾಗಿ ಟೀಕಿಸಿದರು ಇದರಿಂದ ಪ್ರಜೆಗಳಿಗೆ ಆಗುತ್ತಿದ್ದ ಸೌಲಭ್ಯಗಳು ಬಹು ಮಟ್ಟಿಗೆ ತಪ್ಪಿ ಕಷ್ಟ ಪರಂಪರೆಗಳು ಪ್ರಾಪ್ತವಾಗುವುವೆಂದೂ ಸೂಚಿಸಿದರು

ಪಾಶ್ಚಿಮಾತ್ಯ ದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳು ಪಾರ್ಲಿಮೆಂಟ್ ಸಭೆಯಿಂದಲೇ ನೇರವಾಗಿ ಅಧಿಕಾರವನ್ನು ಪಡೆದು ಪೋಲೀಸ್ ಮತ್ತು ಶಾಂತಿ ರಕ್ಷಣೆಗಳ ಪಾಲನೆ ಮುಂತಾದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಾಗ ನಮ್ಮ ಸರ್ಕಾರದವರು ಅನುಸರಿಸುತ್ತಿರುವ ನೀತಿಯು ಅತ್ಯಂತ ಪ್ರತಿಗಾಮಿಯಾಗಿರುವುದೆಂದು ಅವರು ನುಡಿದರು ಹೊಸ ಸಮಿತಿಯವರು ಅಭಿಪ್ರಾಯವನ್ನು ಕೊಡುವವರೆಗಾದರೂ ಇಂದಿನ ಬೋರ್ಡುಗಳನ್ನು ಮುಂದುವರಿಸಿ ಅನಂತರ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿತ್ತೆಂದು ಅವರು ಅಭಿಪ್ರಾಯಪಟ್ಟರು ಸಾರ್ವಜನಿಕರು ಕೈ ಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳದೆ ತಮ್ಮ ಅಭಿಪ್ರಾಯವನ್ನು ಸರ್ಕಾರದ ಮುಂದೆ ಮಂಡಿಸಿ ಅದರಂತೆ ಅವರು ನಡೆಯುವ ಹಾಗೆ ಮಾಡಬೇಕೆಂದ ಎಚ್ಚರಿಸಿದರು

ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಕಾರ್ಯತತ್ಪರತೆ ಮತ್ತು ಸೇವಾ ಭಾವನೆಗಳನ್ನು ಕೊಂಡಾಡಿ ... ಭಾಷಣ ಮಾಡಿ...

ಮಂಡ್ಯ ಸಕ್ಕರೆ ಕಾರ್ಖಾನೆಗೆ ಹೊಸ ಅಧ್ಯಕ್ಷರು

ಸ್ವಂ ಸು ಪ್ರೋ] ಬೆಂಗಳೂರ ೧

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಕಂಡು ಬಂದ ಹಲವು ದೋಷದೂಷಣೆಗಳ ಪ್ರಯುಕ್ತ ಅಲ್ಲಿನ ಅಧ್ಯಕ್ಷರಾದ ಶ್ರೀ ಎ ಜಿ ಬಂದಿಗೌಡರ ಬದಲು ಕೈಗಾರಿಕೆ ಡೈರೆಕ್ಟರಿಂದ ಶ್ರೀ ಚಿಕ್ಕ ನಾರಾಯಣಸ್ವಾಮಿಯವರನ್ನು ಸರ್ಕಾರದವರು ಡೈರೆಕ್ಟರಾಗಿ ನೇಮಿಸಿದ್ದಾರೆ ಅವರನ್ನು ಅಧ್ಯಕ್ಷರನ್ನಾಗಿಯೂ ಆರಿಸಲಾಗುವುದು

ಸಿಮೆಂಟ್ ಹೆಂಚು ತಯಾರಿಕೆಗಾಗಿ ೩೯ ಸಾವಿರ ರೂ

ಸಂಸ್ಥಾನದಲ್ಲಿ ಮಣ್ಣಿನ ಪಾತ್ರೆ ಮತ್ತು ಸಿಮೆಂಟ ಹೆಂಚುಗಳ ತಯಾರಿಕೆಗಾಗಿ ಕೇಂದ್ರ ಸರ್ಕಾರದವರು ೩೯ ಸಾವಿರ ರೂ ಗಳನ್ನು ಕೊಡಲೊಪ್ಪಿರುತ್ತಾರೆ ೧॥ ಲಕ್ಷ ರೂ ಗಳನ್ನೊದಗಿಸುವಂತೆ ಸಂಸ್ಥಾನ ಸರ್ಕಾರದವರು ಕೇಂದ್ರದವರನ್ನು ಕೋರಿದ್ದರು

ಬೆಂಗಳೂರಿನಲ್ಲಿ ಖಾದಿ ಪ್ರದರ್ಶನಾಲಯ

ಬೆಂಗಳೂರಿನಲ್ಲಿ ಖಾದಿ ಎಂಪೋರಿಯಂ ಒಂದನ್ನು ಏರ್ಪಡಿಸಬೇಕೆಂದು ಸರ್ಕಾರಕ್ಕೆ ಸಂಸ್ಥಾನದ ಖಾದಿ ಕೈಮಗ್ಗ ಸಲಹಾ ಸಮಿತಿಯು ಶಿಫಾರಸು ಮಾಡಿರುತ್ತದೆ

ಈಜಿಪ್ಟಿನಲ್ಲಿ ನಗೀಬರ ಪರವಾಗಿ ವಿದ್ಯಾರ್ಥಿಗಳ ಪ್ರದರ್ಶನ

ಪೋಲೀಸರ ಗುಂಡಿನೇಟಿನಿಂದ ೧೪ ಜನರಿಗೆ ಗಾಯ

ಜ॥ ನಗೀಬರ ಪರವಾದ ವಿದ್ಯಾರ್ಥಿಗಳ ಗುಂಪೊಂದು ನೆನ್ನೆ ಕೈರೋದಲ್ಲಿ ಕ್ರಾಂತಿ ಕೌನ್ಸಿಲ್ಲಿನ ವಿರುದ್ಧವಾಗಿ ಭಾರಿ ಪ್ರದರ್ಶನವೊಂದನ್ನು ನಡೆಸಿದಾಗ ಪೋಲೀಸರು ಗುಂಡು ಹಾರಿಸಿದುದರಿಂದ ೧೪ ಮಂದಿ ಗಾಯಗೊಂಡರೆಂದು ತಿಳಿದುಬಂದಿದೆ ಅದರಲ್ಲಿ ಹೆಚ್ಚಾಗಿ ಮುಸ್ಲಿಂ ಬ್ರದರ್‌ಹುಡ್ ಸಂಸ್ಥೆಯವರಿದ್ದರೆಂದು ಹೇಳಲಾಗಿದೆ ಅವರು ಸರ್ಕಾರಿ ಭವನದ ಮುಂದೆ ಬಂದು ನಿಂತು ನಗೀಬರ ಅವರನ್ನು ಸಮಾಧಾನಗೊಳಿಸುತ್ತಾ ಭಾಷಣ ಮಾಡಿ ಈಜಿಪ್ಟಿನಲ್ಲಿ ಪಾರ್ಲಿಮೆಂಟರಿ ಪ್ರಭುತ್ವವನ್ನು ಆದಷ್ಟು ಬೇಗನೆ ಜಾರಿಗೆ ತರುವುದಾಗಿ ತಿಳಿಸಿದರ ನಗೀಬರು ಅಧಿಕಾರ ಸ್ವೀಕಾರಕ್ಕಾಗಿ ಸರ್ಕಾರಿ ಭವನಕ್ಕೆ ಬಂದಾಗ ಅಬ್ದುಲ್ ನಸೀರ್ ಮತ್ತು ಸಾಲಾ ಸಲೀಂರವರು ಅವರನ್ನು ಅಪ್ಪಿಕೊಂಡರೆಂದು ವರದಿಯಾಗಿದೆ

ಬನುಮಯ್ಯ ಶಾಲೆಯ ರಜತ ಮಹೋತ್ಸವ

ರಾಜಧಾನಿಯ ಬನುಮಯ್ಯನವರ ಶಾಲೆಯ ರಜತ ಮಹೋತ್ಸವವು ಇದೇ ಮಾರ್ಚಿ ೧೩ ನೆಯ ದಿನಾಂಕದಂದು ನಡೆಯಲಿದೆ ಶ್ರೀ ಮರ್ಚ ... ರವರು ಈ ಮಹೋತ್ಸವವನ್ನು ಉದ್ಘಾಟನೆ ಮಾಡುವವರಿದ್ದಾರೆ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೆಲ್ಲ ಪ್ರತ್ಯೇಕವಾಗಿ ಆಹ್ವಾನ ಪತ್ರಿಕೆಗಳನ್ನು ಕಳುಹಿಸಬೇಕಾಗಿರುವುದರಿಂದ ಅವರುಗಳ ತಮ್ಮ ಹೆಸರು ಮತ್ತು ವಿಳಾಸಗಳನ್ನು ಶಾಲೆಯ ಕಾರ್ಯದರ್ಶಿಗಳಿಗಾಗಲೀ ಮುಖ್ಯೋಪಾಧ್ಯಾಯರಿಗಾಗಲೀ ... ಬೇಕೆಂದು ಕೋರಲಾಗಿದೆ

ವಿದ್ಯಾರ್ಥಿನಿಯರ ಶುಲ್ಕದ ರಿಯಾಯಿತಿ ರದ್ದು

ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು

ಸ್ವಂ ಸು ಪ್ರೋ] ಬೆಂಗಳೂರು ೧

ವಿದ್ಯಾರ್ಥಿನಿಯರಿಗೆ ಕಾಲೇಜುಗಳಲ್ಲಿ ಇದ್ದ ಅರ್ಧ ಶುಲ್ಕದ ರಿಯಾಯಿತಿಯು ಹೊರಗಿನ ವಿದ್ಯಾರ್ಥಿನಿಯರಿಗೆ ಅನ್ವಯಿಸದೇ ಕಾರಣವನ್ನುಂಟುಮಾಡಿ ರಾಜ್ಯಾಂಗಕ್ಕೆ ವಿರೋಧವಾಗಿದ್ದುದರಿಂದ ಅದನ್ನು ರದ್ದು ಮಾಡಲಾಯಿತೆಂದು ಈ ದಿನ ಶಾಸನ ಸಭೆಯಲ್ಲಿ ಶ್ರೀ ಎ ಜಿ ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ಸಂಸ್ಥಾನದಲ್ಲಿ ಕೈಗೊಳ್ಳಲಾಗಿರುವ ನಿರುದ್ಯೋಗಿಗಳ ಸರ್ವೆಯು ಕೇವಲ ವಿದ್ಯಾವಂತರಿಗೆ ಮಾತ್ರ ಸಂಬಂಧಿಸಿದ್ದಲ್ಲವೆಂದೂ, ಎಲ್ಲಾ ವರ್ಗಗಳವರಿಗೂ ಅನ್ವಯಿಸುವುದೆಂದೂ ಮುಖ್ಯಮಂತ್ರಿಯವರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಬೆಂಗಳೂರಿನ ವಿಧಾನ ಸೌಧದ ಕಟ್ಟಡದಲ್ಲಿ ೨,೦೦೦ ಜನರಿಗೆ ಉದ್ಯೋಗವು ದೊರೆತಿದೆಯೆಂದೂ ಸಹಾ ಅವರು ತಿಳಿಸಿದರು

ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದ ಶ್ರೀ ರಾಘವೇಂದ್ರರಾಯರನ್ನು ನಿವೃತ್ತಿಗೊಳಿಸಿದ ಬಗ್ಗೆ ಅವರು ಅಪಪ್ರಚಾರವನ್ನು ಮಾಡುತ್ತಿರುವುದಾಗಿಯೂ ಆದರೆ ಅವರ ನಿವೃತ್ತಿಯು ಕ್ರಮಬದ್ಧವಾಗಿರುವುದಾಗಿಯೂ ಇನ್ನೊಬ್ಬರ ಪ್ರಶ್ನೆಗೆ ತಿಳಿಸಲಾಯಿತು

ಅನಂತರ ಮಸೂದೆಗಳನ್ನು ತೆಗೆದುಕೊಳ್ಳಲಾಯಿತು ಇನಾಂ ರದ್ದಿನ ಮಸೂದೆಯನ್ನು ಚರ್ಚಿಸಲಾಗುತ್ತಿದೆ

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಸಂತೋಷಕೂಟ

ನೆನ್ನೆ ದಾಸಪ್ರಕಾಶದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಸಂತೋಷಕೂಟವು ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಅಧ್ಯಕ್ಷರಾದ ಶ್ರೀ ಕೆ ನಾರಾಯಣರಾಯರು ಸ್ವಾಗತ ಭಾಷಣ ಮಾಡಿ ಸಭೆಗೆ ಬಂದಿದ್ದ ಸಂದೇಶಗಳನ್ನು ಓದಿದರು ಶ್ರೀ ಗಣಪತಿಯವರಿಂದ ರಾಗಮಾಲಿಕೆಯ ವಾದನಾನಂತರ ಕಾರ್ಯದರ್ಶಿ ಶ್ರೀ ಎಂ ರಾಮಚಂದ್ರರಾಯರು ಸಂಘದ ವರದಿಯನ್ನು ಒಪ್ಪಿಸಿದರು ವಿವಿಧ ವೇಷ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿನಿಯೋಗ ಮಾಡಿ ಅಧ್ಯಕ್ಷರು ದೇಶದ ಅಭಿವೃದ್ಧಿಗೆ ವಿದ್ಯಾರ್ಥಿಗಳು ಗಂಡು ಹೆಣ್ಣೆಂಬ ಭೇದವಿಲ್ಲದೆ ದುಡಿಯಬೇಕೆಂದು ಉಪದೇಶಿಸಿದರು. ಅನಂತರ ವಿದ್ಯಾರ್ಥಿಗಳಿಂದ "ಯಕ್ಷಗಾನ" ಮತ್ತು ಭಾಷಣಗಳಾದುವು ಸಂಜೆ ನಾಟಕವಾದನಂತರ ಪ್ರೊ॥ ಕೆ ನಾರಾಯಣರಾಯರು ಮುಕ್ತಾಯ ಭಾಷಣ ಮಾಡಿದರು ಶ್ರೀ ವಿಶ್ವನಾಥ ಬೆಳರಾಯರಿಂದ ವಂದನಾರ್ಪಣೆಯಾದನಂತರ ಸಭೆ ಮುಕ್ತಾಯವಾಯಿತು

○ ನಂಜನಗೂಡು ತಾಲ್ಲೂಕು ದೇವನೂರು ಹೈಸ್ಕೂಲಿನ ವಾರ್ಷಿಕೋತ್ಸವವು ಬರುವ ೭ ನೇ ತಾ॥ ವಿದ್ಯಾ ಸಚಿವರಾದ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ... ಶ್ರೀ ... ಉದ್ಘಾಟನೆ ಮಾಡುವರು

ಕಾಳಿದಾಸನ ವಿಜ್ಞಾನ ದೃಷ್ಟಿ

ಡಾ॥ ಎಲ್ ಸೀಬಯ್ಯನವರ ಭಾಷಣ

ಮೈಸೂರು ೧

ಕವಿತೆ, ವಿಜ್ಞಾನ ಮತ್ತು ತತ್ವಜ್ಞಾನಗಳ ಪರಸ್ಪರ ಹೊಂದಿಕೊಂಡಿರುತ್ತವೆ ಒಂದರಲ್ಲಿ ಪಂಡಿತರಾಗಿರುವವರು ಮತ್ತೊಂದರ ಪರಿಚಯವನ್ನು ಹೊಂದಿರಬೇಕು—ಎಂಬ ಅಭಿಪ್ರಾಯವನ್ನು ಡಾ॥ಎಲ್ ಸೀಬಯ್ಯನವರು ಮೊನ್ನೆ ಕ್ರಾಫರ್ಡ್ ಭವನದಲ್ಲಿ ನಡೆದ ಕಾಳಿದಾಸ ಮಹೋತ್ಸವದ ಅಧ್ಯಕ್ಷತೆ ವಹಿಸಿ ನುಡಿದರು ಕಾಳಿದಾಸನಿಗೆ ಪ್ರಕೃತಿ ವಿಜ್ಞಾನ ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರ, ಭೌತಶಾಸ್ತ್ರ ಮುಂತಾದುವುಗಳ ಪರಿಚಯವು ಸಂಪೂರ್ಣವಾಗಿತ್ತೆಂದು ಅವನ ಕಾವ್ಯಗಳ ನಿದರ್ಶನಗಳಿಂದ ನಿರೂಪಿಸಿದರು ಕಾಳಿದಾಸನು ನಮ್ಮ ರಾಷ್ಟ್ರದ ಅತ್ಯಂತ ಶ್ರೇಷ್ಠ ಕವಿಯೆಂದೂ, ಅವನ ಗ್ರಂಥಗಳನ್ನು ಸಕಲರೂ ಪಠಿಸಬೇಕೆಂದೂ ಅವರು ಸೂಚಿಸಿದರು

ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಂ ಲಕ್ಷ್ಮೀನರಸಿಂಹಯ್ಯನವರು ಕಾಳಿದಾಸನ ನಾಟಕಗಳಾದ ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಮತ್ತು ಶಾಕುಂತಲಗಳಲ್ಲಿ ಬರುವ ಪುಣ್ಯಳ ಪಾತ್ರದ ವ್ಯಕ್ತಿತ್ವವನ್ನು ವಿವರಿಸಿ ಪುತ್ರ ಪ್ರೇಮ ಪೂರ್ವಾಂಕ ಪ್ರೇಮದ ಪರಮೋತ್ಕರ್ಷ ಸ್ವರೂಪತೆಯೆಂಬುದನ್ನು ನಿರೂಪಿಸಿದರು

ಮೊದಲು ಶ್ರೀ ಟಿ ಎಸ್ ಗೋಪಾಲರವರಿಂದ ಪ್ರಾರ್ಥನೆಯೂ ಶ್ರೀ ಎಲ್ ವಿ ವೆಂಕಟಾಚಲಂರವರಿಂದ ಗೀತೆಗಳೂ ಆನಂತರ ಶ್ರೀ ಎಸ್. ರಂಗಾಚಾರ್ಯಲು ಸ್ವಾಗತ ಭಾಷಣ ಮಾಡಿ ಕಾಳಿದಾಸನ ಮಹೋತ್ಸವದ ಉದ್ದೇಶವನ್ನು ವಿವರಿಸಿದರು

ಶ್ರೀಮತಿಗಳಾದ ಎಸ್ ... ತ ಗಮತ್ತು ಪದ್ಮರವರಿಂದ ಗಾಯನವೂ ಪುಂರ್ವಾಶಿತ ಫಲ ಎಂಬ ದೃಶ್ಯವೂ, ಕಾರ್ಯದರ್ಶಿಯವರಾದ ಶ್ರೀ ಪಿ ಸುಂದರರವರಿಂದ ವಂದನಾರ್ಪಣೆಯೂ ಅದನಂತರ ರಾಷ್ಟ್ರಗೀತೆಯೊಡನೆ ಮಹೋತ್ಸವವು ಮುಕ್ತಾಯವಾಯಿತು

ಬೇಲೂರು ದೇವಸ್ಥಾನದಲ್ಲಿ ಗರುಡ ವಿಗ್ರಹಕ್ಕೆ ಪೆಟ್ಟು

ಬೇಲೂರಿನ ಶ್ರೀ ಚನ್ನಕೇಶವ ದೇವಾಲಯದಲ್ಲಿ ದೇವರ ಎದುರಿಗೆ ನಿಕ್ಷೇಪವ ಸುಂದರವಾದ ಗರುಡ ವಿಗ್ರಹದ ಮೂಗನ್ನು ಯಾರೋ ಒಡೆದು ಭಿನ್ನಗೊಳಿಸಿರುತ್ತಾರೆ

ಕೊರಿಯಾ ಬಗ್ಗೆ ೧೮ ರಾಷ್ಟ್ರಗಳ ಸಭೆಗೆ ಅಮೆರಿಕದ ಆಹ್ವಾನ

ಕೊರಿಯದ ಸಂಬಂಧವಾಗಿ ಜಿನೀವಾ ರಾಜಕೀಯ ಸಮ್ಮೇಳನಕ್ಕೆ ಬರುವಂತೆ ಅಮೆರಿಕವು ದಕ್ಷಿಣ ಕೊರಿಯಾ ಮತ್ತು ಇತರ ೧೫ ಮಿತ್ರ ರಾಷ್ಟ್ರಗಳನ್ನು ಆಹ್ವಾನಿಸಿರುತ್ತದೆ ಕೊರಿಯಾ ಯುದ್ಧಕ್ಕೆ ಸೈನ್ಯಗಳನ್ನು ಕಳುಹಿಸಿದ ರಾಷ್ಟ್ರಗಳಿಗೆ ಆಹ್ವಾನವೀಯಲಾಗಿದೆ

ಔಷಧಿಗೆ ಬದಲು ದ್ರಾವಕ ಕೊಟ್ಟು ರೋಗಿಯ ಮರಣ

ವಿಶಾಖಪಟ್ಟಣದ ಹೆಂಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಶಾಪೇಷಂಟುಗಳಾಗಿ ಸೇರಿದ್ದ ಇಬ್ಬರು ಮಹಿಳಾ ರೋಗಿಗಳಿಗೆ ಅಲ್ಲಿನ ನೌಕರನೊಬ್ಬನು ಕಳೆದ ಗುರುವಾರ ಔಷಧಿಗೆ ಬದಲಾಗಿ ಕಾರ್ಬಾಲಿಕ್ ದ್ರಾವಕವನ್ನು ಕುಡಿಸಿದ ಪರಿಣಾಮವಾಗಿ ಒಬ್ಬಳು ಮೃತಪಟ್ಟಳೆಂದೂ, ಮತ್ತೊಬ್ಬಳ ಸ್ಥಿತಿಯು ಚಿಂತಾಜನಕವಾಗಿತ್ತೆಂದೂ ವರದಿಯಾಗಿದೆ ಆಸ್ಪತ್ರೆ ಅಧಿಕಾರಿಗಳು ಈ ಬಗ್ಗೆ ತನಿಖೆ ನಡೆಸುತ್ತಿರುವರೆಂದು ಹೇಳಲಾಗಿದೆ

ಸಂಸ್ಕೃತ ಸಾಹಿತ್ಯ ಪರೀಕ್ಷೆ

ಎರಡನೇ ದರ್ಜೆ ನೌಕರರಿಗೆ ಇಂಗ್ಲಿಷ್ ಸೇರಿದ ಸಂಸ್ಕೃತ ಸಾಹಿತ್ಯ ಪರೀಕ್ಷೆಯು ಸ್ಕೂಲ್ ಫೈನಲ್ ಪರೀಕ್ಷೆಗೆ ಸರಿಸಮವಾಗಿರುವುದೆಂದು ಅಂಗೀಕರಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ವಿಲ್ಲಾಲಾ ೭-೩೦ ಭಕ್ತಿ ಸಂಗೀತ ಮಧ್ಯಾಹ್ನ ೧-೪೦ ಮತ್ತು ೧ ೫೦ ಕಾ ಕಲಾ ... ಶಿವಸ್ತುತಿ ಶಿವರಾತ್ರಿ ಬಗ್ಗೆ ಭಾಷಣ ಗಂಗೆ ಗೌರಿ ಇತ್ಯಾದಿ ಸಂಜೆ ೬-೪೦ ... ಸುಬ್ಬಶಾಸ್ತ್ರಿ ... ಬಾಲ ... ಕಾರ್ಯಕ್ರಮ ೭-೪೦ ಭಕ್ತಿ ಗೀತೆ ... ೪೦ ... ಸಂಗೀತ ... ಕಾರ್ಯಕ್ರಮ

ಭಾರತಕ್ಕೆ ಗೋಧಿಯ ಆಮದಿಲ್ಲ

ಭಾರತಕ್ಕೆ ಈ ಜೂನ್ ತಿಂಗಳಿಗೆ ಮುಗಿಯುವ ೧ ವರ್ಷದಲ್ಲಿ ಕೊಳ್ಳಬೇಕಾದ ೧೦ ಲಕ್ಷ ಟನ್ ವಿದೇಶೀ ಗೋಧಿಯನ್ನು ತೆಗೆದುಕೊಳ್ಳುವುದಿಲ್ಲವೆಂದು ಭಾರತವು ಅಂತರ್ರಾಷ್ಟ್ರೀಯ ಗೋಧಿ ಸಮಿತಿಗೆ ತಿಳಿಸಿರುತ್ತದೆ ದೇಶದಲ್ಲಿ ಆಹಾರದ ಪರಿಸ್ಥಿತಿಯು ತೃಪ್ತಿಕರವಾಗಿದ್ದು, ಗೋಧಿಯನ್ನು ಆಮದು ಮಾಡಬೇಕಾದ ಪ್ರಮೇಯವಿಲ್ಲದಿರುವುದೇ ಇದಕ್ಕೆ ಕಾರಣ.

ಲಾವೋಸ್ ರಾಜಧಾನಿಯ ಮೇಲೆ ಧಾಳಿ ವಿಫಲವೇ?

ಇಂಡೋಚೀಣಾದ ಲಾವೋಸ್ ಸಂಸ್ಥಾನದ ರಾಜಧಾನಿ ಲುವಾಂಗ್ ಪ್ರಬಾಂಗ್ ನಗರದ ಮೇಲೆ ವಿಯಟ್ಮಿನ್ನರು ನಡೆಸಿದ ಧಾಳಿಯು ವಿಫಲಗೊಂಡಿರುವುದಾಗಿ ಫ್ರೆಂಚ್ ಹೈಕಮಾಂಡಿನವರು ತಿಳಿಸಿರುತ್ತಾರೆ ವಿಯಟ್ಮಿನ್ನರ ಕಡೆ ಬಂದಿದ್ದ ಉತ್ತಮ ಪಡೆಗಳಿಗೆ ಬಲವಾದ ಪೆಟ್ಟು ಬಿದ್ದು ಅವು ಪುನಃ ೫೦ ಮೈಲಿ ದೂರದಲ್ಲಿ ವ್ಯೂಹ ರಚಿಸಿಕೊಳ್ಳುತ್ತಿರುವುದಾಗಿ ಹೇಳಲಾಗಿದೆ

ಲಕ್ಷ್ಮಿ ಟಾಕೀಸ್

3-3-54 ನೇ ಬುಧವಾರ

ಮಹಾ ಶಿವರಾತ್ರಿ ಪ್ರಯುಕ್ತ

4 ಪ್ರದರ್ಶನಗಳು

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನ ನೀಡುತ್ತಿರುವ ಅತ್ಯುತ್ತಮ ಸಾಮಾಜಿಕ ತಮಿಳು ಚಿತ್ರ

ಪೊನ್ ವಯಲ್

(ಚಿನ್ನದ ಭೂಮಿ)

ಪ್ರದರ್ಶನದ ಕಾಲ - ೨-೪೫, ೬-೧೫, ೯-೪೫ ಮತ್ತು ೧-೩೦ ಕ್ಕೆ

ಶ್ರೀ ಚಾಮುಂಡೇಶ್ವರಿ ಟಾಕೀಸ್

ಮಹಾ ಶಿವರಾತ್ರಿ ಸಲುವಾಗಿ ವಿಶೇಷ ಆಕರ್ಷಣೆ

3-3 54ರಿಂದ ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು

ರಂಜಾ ವಿಶ್ವ ಪ್ರಖ್ಯಾತಿಯ ಕೆಂಪರಾಜ್ ರವರು ದಿಗ್ದರ್ಶಿಸಿರುವ ಕನ್ನಡ ಚಿತ್ರ

• ಜ ಲ ದು ರ್ಗ •

ಪಾತ್ರ - ಕೆಂಪರಾಜ್ ಕೃಷ್ಣಕುಮಾರಿ ... ಭಟ್ಟ ಮತ್ತು ಸಂಧ್ಯಾ

ಶಿವರಾತ್ರಿ ದಿನ ರಾತ್ರಿ 1 ಗಂಟೆಗೆ 4ನೇ ಪ್ರದರ್ಶನವೂ ಉಂಟು

... ನಿಧಕಾದ ... ಪಾಸುಗಳನ್ನು ಮೊದಲಿನ 2 ವಾರಗಳು ಮುತ್ತು ವಡಾದಿರುತ್ತ

MYSORE CITY IMPROVEMENT TRUST BOARD

MYSORE

Notification No B 3 C 503,53 54
Dated 22 2-1954

It is hereby notified for the information of the public that 20 shop sites located in the best business centre of Mysore city, formed in the New Statue Circle between Devaraja Market and Lansdowne Buildings are available for sale Intending purchasers are hereby intimated that sealed tenders with an earnest money deposit of Rs. 500/- each will be received in this office UPTO 5 P.M. ON MONDAY THE 22ND MARCH 1954.

Further details re the notification, layout plan and site dimensions etc., can be had at the office of the City Improvement Trust Board, Mysore, during office hours on all working days.

(Sd) S LINGANNA,
Chairman



೭೭ ವರ್ಷದ ವರ ಮತ್ತು ೭೫ ವಯಸ್ಸಿನ ವಧು

ಲಂಡನ್ನಿನ ೭೭ ವರ್ಷದ ಆಲ್ಫ್ರೆಡ್ ಚಿಚೆಸ್ಟರ್ ಎಂಬ ವೃದ್ಧನು ೭೫ ವರ್ಷದ ಮಿಲಿ ಗೂಡ್ನರ್ ಎಂಬಾಕೆಯನ್ನು ವಿವಾಹವಾಗಿರುತ್ತಾನೆ. ವಧುವಿನ ತಾಯಿಯಾದ ೧೦೦ ವರ್ಷದ ಮುದುಕಿಯ ಮನೆಯಲ್ಲಿ ವಾಸಿಸಲು ನವ ದಂಪತಿಗಳು ನಿಶ್ಚಯಿಸಿರುತ್ತಾರೆ.

ಮೋತಿಲಾಲ್ ಟಾಕೀಸ್

3-3-54 ನೇ ಬುಧವಾರ

ಶಿವರಾತ್ರಿ ಪ್ರಯುಕ್ತ

1 ದಿನ ಮಾತ್ರ 4 ಪ್ರದರ್ಶನಗಳು

ಗಣೇಶ ಮಹಿಮೆ

(ಹಿಂದಿ)

೩ ೩೦, ೬-೩೦ ೯-೩೦, ೧-೦ ಕ್ಕೆ

SRI GAYATHRI TALKIES

EXTENDED FOR 1O DAY ON

MILLION DOLLAR MERMAID

On 2 3 54 One Day On

THE ACTRESS

From 3 3 54 For 2 Da

Paramount's Cecil B. D'Milles

CLEOPATRA

ಮೈಸೂರು ನಗರಾಭಿವೃದ್ಧಿ ಸಮಿತಿ

ಪ್ರ ಕ ಟ ಣೆ

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ—ಪೋಲ್ಯಾಂಡ್ ಆಫೀಸಿಗೆ ಸಂಬಂಧಪಟ್ಟ ಸ್ಕ್ರೀನಿನಲ್ಲಿ ಹಳೇ ಸಾಮಾನುಗಳು, ಬಂದರೆ ... ಗಾದ ಸಾಮಾನುಗಳು, ಮರದ ಸಾಮಾನುಗಳು ಇತ್ಯಾದಿ, ಮಾರ್ಚ್ ಮಾಹೆ 6ನೇ ತಾರೀಖು ಬೆಳಿಗ್ಗೆ ... ಗಂಟೆಗೆ ಸ್ಕ್ರೀನಿನ ಆವರಣದಲ್ಲಿ ಬಹಿರಂಗ ... ಹರಾಜು ನಿಮೂದಿಸಿರುವ ಕಾಲದಲ್ಲಿ, ... ರಾಜು ಮಾಡಿರುವವರ ಅಥವಾ ಅವರ ಅಧಿಕೃತ ... ಪ್ರತಿನಿಧಿಯು ಸಮ್ಮುಖದಲ್ಲಿ ಹರಾಜು ಮಾಡಲ್ಪಡುತ್ತದೆ

ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ... ಗಳನ್ನು ಮೊದಲೇ ... ಹರಾಜಿನಲ್ಲಿ ಭಾಗವಹಿಸಬಹುದು ... ಹರಾಜು ಅದನಂತರ ... ಹುದು

ಅಪ್ಸೆಟ್ ಬಿಡ್ ದಾರನು ... ಬಿಡ್ ಮೊಬಲಗನ್ನು ... ಸಾಮಾನುಗಳನ್ನು ಹೊರಕ್ಕೆ ಸಾಗಿಸಲೇಬೇಕು ... ಹಣವನ್ನು ... ಹಣವನ್ನು ಮುಟ್ಟುಗೋಲು ... ಗುತ್ತ ಮತ್ತು ಸಾಮಾನುಗಳನ್ನು ... ಹರಾಜು ಮಾಡಲಾಗುತ್ತ ... ಹರಾಜಿನಲ್ಲಿ ಬಂದ ಬಿಡ್ ಮೊಬಲಗು ಮೊದಲು ... ರಾಜಿನ ಬಿಡ್ ಮೊಬಲಗಿಗಿಂತ ... ವ್ಯತ್ಯಾಸದ ಹಣವನ್ನು ... ದಾರಿಯಿಂದ ವಸೂಲು ಮಾಡಲಾಗುತ್ತ

ಅಪ್ಸೆಟ್ ಬಿಡ್ ಮೊಬಲಗಿನ ಮೇಲೆ ... ಕೃ ನಂತ ... ವಸೂಲು ಮಾಡಲಾಗುತ್ತದೆ ... ಅಪ್ಸೆಟ್ ಬಿಡ್ ಒಪ್ಪಿತ ಅಥವಾ ... ಹಕ್ಕು ... ಕಳಗೆ ... ಸಲ್ಲಿದ ... ವಿವರಗಳನ್ನು ... ಆಫೀಸ್ ದಿನಗಳಲ್ಲಿ 3 5 ಗಂಟೆವರೆಗೆ ... ಯಬಹುದು ಹರಾಜು ಮಾಡಲ್ಪಡುವ ಸಾಮಾನುಗಳ ಪಟ್ಟಿಯನ್ನು ಆಫೀಸಿನ ನೋಟೀಸ್ ... ರ್ಡನಲ್ಲಿಯೂ, ಸ್ಕ್ರೀನಿನಲ್ಲಿಯೂ ಪ್ರಕಟಿಸಿರುತ್ತ

ಹರಾಜಾಗುವ ಸಾಮಾನುಗಳನ್ನು ಸ್ಕ್ರೀನಿ ... ಲ್ಲಿ ಬೆಳಿಗ್ಗೆ 8-12 ಗಂಟೆಗಳೊಳಗೆ ಇಷ್ಟವುಳ್ಳ ... ನೋಡಬಹುದು

K V RAJARATHNA...
Trust Board Engineer

Edited, Printed and Publish... by A R Nagarajan at Sadh... Press, D.Subbiah Road, Mysor...

ಟೆಲಿಫೋನ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದು ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE · TUESDAY 2 3-1954 : ಮೈಸೂರು : ಮಂಗಳವಾರ ೨-೩-೧೯೫೪ [ಸಂಚಿಕೆ ೨೬೦

ಅಮೆರಿಕಾ ಅಸೆಂಬ್ಲಿಯಲ್ಲಿ ಗುಂಡೇಟು; ಐವರಿಗೆ ಗಾಯ

ಅಮೇರಿಕದ ಪ್ರಜಾ ಸಭೆಯ ಸದಸ್ಯರ ಮೇಲೆ ಗುಂಡು

ಅಮೇರಿಕದ ಪ್ರಜಾ ಸಭೆಯಲ್ಲಿ ನೆನ್ನೆ ಪೋರ್ಟೋರಿಕೊ ದ್ವೀಪದ ಇಬ್ಬರು ಗಂಡಸರು ಮತ್ತು ಒಬ್ಬ ಮಹಿಳೆಯು ಸದಸ್ಯರ ಮೇಲೆ ಗುಂಡು ಹಾರಿಸಿದುದರಿಂದ ಐವರಿಗೆ ಗಾಯವಾಯಿತು. ಪೆಟ್ಟು ಬಿದ್ದ ಒಬ್ಬರು ನೆಲದ ಮೇಲೆ ಬಿದ್ದರು. ತಮ್ಮ ದೇಶವು ಸ್ವತಂತ್ರವಲ್ಲವೆಂದೂ, ಅದನ್ನು ಸ್ವತಂತ್ರಗೊಳಿಸಬೇಕೆಂದೂ ಗುಂಡು ಹಾರಿಸಿದವರು ಕೂಗಿದರು. ಗುಂಡು ಹಾರಿಸುತ್ತಲೇ ಸದಸ್ಯರುಗಳು ತಮ್ಮ ಸ್ಥಾನಗಳಲ್ಲೇ ಅಡಗಿಕೊಂಡರು. ಬಂದೂಕಗಳನ್ನು ಪುನಃ ಬಾರು ಮಾಡಿಕೊಳ್ಳುತ್ತಿರುವಷ್ಟರಲ್ಲೇ ಪೋಲೀಸರು ಪೋರ್ಟೋರಿಕೋನ್ನರನ್ನು ಬಂಧಿಸಿದರು. ಗಾಯವಾದವರಿಗೆ ಚಿಕಿತ್ಸೆ ಮಾಡಲಾಯಿತು.

ದ. ಭಾರತ ರೇಡಿಯೊ ಸಂಗೀತ ಪರೀಕ್ಷಕರ ಸಮಿತಿ

ದಕ್ಷಿಣ ಭಾರತದಲ್ಲಿ ರೇಡಿಯೊ ಸಂಗೀತಗಾರರ ಪರೀಕ್ಷಕರ ಸಮಿತಿಯನ್ನು ಕೇಂದ್ರ ಸರ್ಕಾರದವರು ಈ ರೀತಿ ಪುನರ್ರಚಿಸಿರುತ್ತಾರೆ – ಉಪಾಧ್ಯಕ್ಷರು-ಶ್ರೀ ಟಿ. ವಿ. ಸುಬ್ಬರಾವ್. ಸದಸ್ಯರು: ನ್ಯಾಯಾಧೀಶ ಶ್ರೀ ಟಿ. ಎಲ್. ವೆಂಕಟರಾಮಯ್ಯರ್, ವಿದ್ವಾಂಸರುಗಳಾದ ಶೆಮ್ಮಂಗುಡಿ ಶ್ರೀನಿವಾಸಯ್ಯರ್, ಚಿತ್ತೂರು ಸುಬ್ರಹ್ಮಣ್ಯಪಿಳ್ಳೆ, ಟಿ. ಚೌಡಯ್ಯ, ರಾಜರತ್ನಂಪಿಳ್ಳೆ, ಚೆಂಬೈ ವೈದ್ಯನಾಥ ಭಾಗವತರ್ ಮತ್ತು ಚಿಲಕಲಾಪೂಡಿ ವೆಂಕಟೇಶ್ವರ ಶರ್ಮ.

ವಯಸ್ಕರ ಶಿಕ್ಷಣ ಕೇಂದ್ರದ ಸ್ಥಾಪನೆ

ರಾಜಧಾನಿಯ ಆದಿಕರ್ನಾಟಕಪುರದ ಪಂಚಾಯಿತಿ ಕಟ್ಟಡದಲ್ಲೂ ಇತರ ಮೂರು ಕಡೆಗಳಲ್ಲೂ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಈ ಸಂಜೆಯಿಂದ ತೆರೆಯಲಾಗುವುದು. ಅವುಗಳನ್ನು ನಡೆಸಲು ಕಾರ್ಯನಿರ್ವಾಹಕ ಸಮಿತಿಯೊಂದನ್ನು ರಚಿಸಲಾಗಿದೆ. ಪೌರಸಭೆಯ ಉಪಾಧ್ಯಕ್ಷ ಶ್ರೀ ಕೆ. ಸಿದ್ದಯ್ಯನವರ ಅಧ್ಯಕ್ಷರಾಗಿಯೂ, ಸಭಾಸದಸ್ಯ ಶ್ರೀ ಜಿ. ಎಸ್. ರಾಮಕೃಷ್ಣಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಎಸ್. ಗೋಪಾಲರಾಯರು ಕಾರ್ಯದರ್ಶಿಯಾಗಿಯೂ, ಶ್ರೀಗಳಾದ ಎಸ್. ಜವರಯ್ಯ, ದೊಡ್ಡಹೊಲಕ್ಕಯ್ಯ, ಚಿನ್ನಸಾಮಯ್ಯ, ಕರಿಸಿದ್ದಯ್ಯನವರುಗಳು ಸದಸ್ಯರಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩ ಕ್ಲಾರಿಯೊನೆಟ್ ೭-೩೦ ಹೆಚ್. ಶಾಂತಾಬಾಯಿ ಸಂಗೀತ ಹೆಚ್. ಎಸ್. ಗಣಪತ್ ರಾವ್ ತಬಲ. ಮಧ್ಯಾಹ್ನ ೧-೪೦ ಟಿ. ಎಂ. ಬಾಲಸುಬ್ರಹ್ಮಣ್ಯಂ ರಿಕಾರ್ಡ್ ೧-೫೦ ವೀಣೆ ರಿಕಾರ್ಡ್ ೨ ರತ್ನಮ್ಮ ಕೃಷ್ಣಮೂರ್ತಿ ಸಂಗೀತ. ಸಂಜೆ ೫-೪೦ ಮತ್ತು ಕೆ. ಟಿ. ಎಂ. ಶ್ರೀನಿವಾಸ ಸಂಗೀತ ೬-೧೫ ಬಸವೇಶ್ವರ ವಚನಗಳು ೭-೩ ಹೆಚ್. ಶಾಂತಾಬಾಯಿ ಸಂಗೀತ ಹೆಚ್. ಎಸ್. ಗಣಪತ್‌ರಾವ್ ತಬಲ ೭-೪೦ ಸುಭಾಷಿತ ಸಾಹಿತ್ಯ, ಹೆಚ್. ಎಲ್. ಹರಿಯಪ್ಪನವರ ಭಾಷಣ ೮-೪೦ ರಾಷ್ಟ್ರೀಯ ಕಾರ್ಯಕ್ರಮ ೯-೧೫ ರಾತ್ರಿ ಕೆ. ಟಿ. ಶ್ರೀನಾಥ್ ಇಂಗ್ಲಿಷ್ ಭಾಷಣ ೯-೧೫ "ಶಿವರಾತ್ರಿ" ಕೆ. ವಿ. ಸುಬ್ಬಣ್ಣನವರಿಂದ ಬರೆದ [illegible] "[illegible]" ನಾಟಕ

ಸುಡಾನ್ ಪಾರ್ಲಿಮೆಂಟಿನ ಆರಂಭದ ದಿನದಲ್ಲೇ ಗಲಭೆ

ಸುಡಾನ್ ದೇಶದ ಪ್ರಥಮ ಪಾರ್ಲಿಮೆಂಟು ನೆನ್ನೆ ಆರಂಭವಾಗಬೇಕಾಗಿದ್ದು ರಾಜಧಾನಿ ಖಾರ್ಟೂಂನಲ್ಲಿ ಭಾರಿ ಗಲಭೆಗಳಾಗಿ ಅವರಿಂದ ೨೦ ಮರಣಗಳು ಸಂಭವಿಸಿದ ಪ್ರಯುಕ್ತ ಸಭೆಯನ್ನು ಇದೇ ೧೦ನೇ ತಾ|| ಗೆ ಮುಂದೆ ಹಾಕಲಾಯಿತು. ೫೦ ಸಾವಿರ ಪ್ರದರ್ಶನಕಾರರು ಅಲ್ಲಿನ ಗೌರ್ನರ್ ಜನರಲ್ಲರ ಭವನದ ಮುಂದೆ ಸುಡಾನು ಈಜಿಪ್ಟಿನೊಡನೆ ಸೇರುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. ಆಗತಾನೆ ಈಜಿಪ್ಟಿನ ಅಧ್ಯಕ್ಷ ನಗೀಬರು ಸಮಾರಂಭದಲ್ಲಿ ಭಾಗವಹಿಸಲು ಅಲ್ಲಿಗೆ ಬಂದಿದ್ದರು. ನಗೀಬರು ಸುಡಾನಿನಲ್ಲಿ ಹುಟ್ಟಿದವರು. ೩ ವರ್ಷಗಳೊಳಗಾಗಿ ಸುಡಾನು ಸ್ವತಂತ್ರವಾಗಲಾಗಲಿ ಅಥವಾ ಈಜಿಪ್ಟಿನೊಡನೆ ಐಕ್ಯ ಹೊಂದುವುದಾಗಲಿ ಅವಕಾಶವಿದೆ. ಗಲಭೆಗಳಾದಾಗ ಪೋಲೀಸರು ಗುಂಡು ಹಾರಿಸಿದರು. ಗಲಭೆಯಲ್ಲಿ ಬ್ರಿಟಿಷ್ ಪೋಲೀಸ್ ಅಧಿಕಾರಿಯೊಬ್ಬರು ಮಡಿದರು. ೧೧೭ ಜನರಿಗೆ ಗಾಯವಾಗಿದೆ.

ಹರಿಜನ ಬಾಲಯೋಗಿಗಳ ದರ್ಶನ

ರಾಜಮಹೇಂದ್ರಿಗೆ ಸ್ವಲ್ಪ ದೂರದಲ್ಲಿರುವ ಮುಮ್ಮಿಡಿವರದ ಬಾಲಯೋಗಿಗಳು [illegible] ಭಕ್ತಾದಿಗಳಿಗೆ ಸಂದರ್ಶನವೀಯುವರೆಂದು ವರದಿಯಾಗಿದೆ. ೧೯೪೯ರಲ್ಲಿ ಇವರು ತಮ್ಮ ೧೬ನೇ ವಯಸ್ಸಿನಲ್ಲಿ ಯೋಗ ಸಮಾಧಿಯನ್ನು ಪ್ರವೇಶಿಸಿದರು. ಅಂದಿನಿಂದ ಇದುವರೆಗೂ ಅವರು ಆಹಾರವನ್ನೇ ಸೇವಿಸಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಶಿವರಾತ್ರಿಯಾದ ಮಾರನೇ ದಿನ ಮಾತ್ರ ತಮ್ಮ ಗುಡಿಸಲಿನಲ್ಲಿ ಜನರಿಗೆ ಸಂದರ್ಶನವೀಯುವರು. ಅವರು ಅಲ್ಲಿನ ಹರಿಜನ ವಸತಿಯಲ್ಲಿ ಜನಿಸಿದವರು. ಅವರ ದರ್ಶನ ಪಡೆಯಲು ಸಹಸ್ರಗಟ್ಟಲೆ ಜನರು ಮುಮ್ಮಿಡಿವರಕ್ಕೆ ಪ್ರತಿವರ್ಷವೂ ತೆರಳುವರು.

ಯಕ್ಷಗಾನ

ರಾಜಧಾನಿಯ ಶ್ರೀ ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಘ್ನೇಶ್ವರಸ್ವಾಮಿ ದೇವಸ್ಥಾನದ ಬಳಿ ಮಹಾ ಶಿವರಾತ್ರಿ ಪ್ರಯುಕ್ತ ನಾಳೆ ರಾತ್ರಿ ೧೦ ಗಂಟೆಗೆ ದಾನಶೂರ ಕರ್ಣ ಮತ್ತು ೧೨ಕ್ಕೆ ಭೂಕೈಲಾಸ ಎಂಬ ವಿಷಯವಾಗಿ ಯಕ್ಷಗಾನವನ್ನು ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರು ಮಾಡುವರು.

ಕಟಾವುದಾರಳ ಮಕ್ಕಳಿಗೆ ಜೀವನಾಂಶ ರದ್ದು

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ಶ್ರೀ ಜಮುಲಸ್ವಾ ನೇಯ್ಗೆ ಕಾರ್ಖಾನೆಯ ಮಾಲೀಕರಾದ ಶ್ರೀ ಕೆ. ಬಿ. ಲಕ್ಷ್ಮೀನಾರಾಯಣಯ್ಯನವರು ಚಿಕ್ಕರಂಗಮ್ಮ ಎಂಬಾಕೆಯನ್ನು ಕಟಾವು ಮಾಡಿಕೊಂಡಿದ್ದು ಹುಟ್ಟಿದುವೆಂದು ಹೇಳಲಾದ ೨ ಹೆಣ್ಣು ಮತ್ತು ಒಂದು ಗಂಡು ಮಕ್ಕಳ ಪೋಷಣೆಗಾಗಿ ತಿಂಗಳಿಗೆ ತಲಾ ೫೦ ರೂ. ಜೀವನಾಂಶವನ್ನು ಕೊಡುವಂತೆ ನಗರದ ೧ನೇ ನ್ಯಾಯಾಧೀಶರು ಕೊಟ್ಟಿದ್ದ ತೀರ್ಪಿನ ವಿರುದ್ಧವಾಗಿ ಶ್ರೀ ಲಕ್ಷ್ಮೀನಾರಾಯಣಯ್ಯನವರು ಹೈಕೋರ್ಟಿಗೆ ಅಪೀಲು ಹೋಗಿದ್ದು, ಕೆಳ ಕೋರ್ಟಿನ ತೀರ್ಪನ್ನು ಈಗ ರದ್ದು ಮಾಡಲಾಗಿದೆ.

ಕಾಶ್ಮೀರದಲ್ಲಿರುವ ಅಮೇರಿಕಾ ಮಿಲಿಟರಿಯವರು ತಟಸ್ಥರಲ್ಲ

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೆರವಿನ ಬಗ್ಗೆ ನೆಹರೂರವರ ತೀವ್ರ ಖಂಡನೆ

ಕಾಶ್ಮೀರದ ಗಡಿ ಬಳಿ ಸೀಸ್ ಫೈರ್ ಲೈನಿನಲ್ಲಿ ಭಾರತದ ಕಡೆ ಇರುವ ಅಮೇರಿಕದ ವೀಕ್ಷಕರು ತಟಸ್ಥ ರಾಷ್ಟ್ರಕ್ಕೆ ಸೇರಿದವರೆಂದು ಭಾವಿಸಲಾಗದೆಂದು ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ಘೋಷಿಸಿದರು. ಪಾಕಿಸ್ತಾನಕ್ಕೆ ಅಮೇರಿಕದ ಮಿಲಿಟರಿ ಸಹಾಯದಿಂದ ಭಾರತ ಮತ್ತು ಪಾಕಿಸ್ತಾನಗಳ ವ್ಯಾಜ್ಯದಲ್ಲಿ ಅವರು ಒಂದು ಭಾಗವಹಿಸಿದಂತಾಗಿದೆಯೆಂದು ಅವರು ತಿಳಿಸಿದರು. ಭಾರತ ಮತ್ತು ಏಷ್ಯಾದ ರಾಷ್ಟ್ರಗಳು ಯಾವ ಉದ್ದಿಶ್ಯವಾದರೂ ಯಾವುದೇ ಹೊರ ರಾಷ್ಟ್ರಗಳ ಅಧೀನತೆಗೆ ಒಳಪಡಲು ಇಚ್ಛಿಸುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು. ಪಾಕಿಸ್ತಾನಕ್ಕೆ ಅಮೇರಿಕದ ಶಸ್ತ್ರಾಸ್ತ್ರವು ಬರುವುದರಿಂದ ಉಂಟಾಗುವ ವಿಷಮ ಪರಿಸ್ಥಿತಿಯಲ್ಲಿ ಭಾರತೀಯರು ಒಗ್ಗಟ್ಟಿನಿಂದ ಇರಬೇಕೆಂದು ನೆಹರೂರವರು ಕೋರಿದರು.

ಅಮೇರಿಕವು ಭಾರತಕ್ಕೆ ಮಿಲಿಟರಿ ಸಹಾಯ ಕೊಡುವ ಬಗ್ಗೆ ಐಸೆನ್‌ಹೋವರರ ಮಾತುಗಳನ್ನು ಕುರಿತು ನೆಹರೂರವರು ತಮ್ಮ ಅಭಿಪ್ರಾಯವನ್ನು ಸೂಚಿಸಿ ಪಾಕಿಸ್ತಾನಕ್ಕೆ ನೆರವನ್ನು ಕೊಡುವುದಕ್ಕೆ ವಿರೋಧಿಸುವ ನಾವೇ ಅದೇ ರೀತಿಯ ನೆರವನ್ನು ಕೇಳಿದರೆ ನಾವು ಅಪ್ರಾಮಾಣಿಕರೂ ಮತ್ತು [illegible] ಸಾಧಕರೂ ಆಗುವುದಾಗಿ ಹೇಳಿದರು. ಅಮೇರಿಕದ ಶಸ್ತ್ರಾಸ್ತ್ರಗಳನ್ನು ಪಯೋಗಿಸಿ ಆಕ್ರಮಣ ನಡೆಸಿದರೆ ಅದನ್ನು ತಡೆಗಟ್ಟುವುದಾಗಿ ಐಸೆನ್‌ಹೋವರರು ತಿಳಿಸಿದುದಕ್ಕೆ ಉತ್ತರವಾಗಿ, ಕಾಶ್ಮೀರದಲ್ಲಿ ೬|| ವರ್ಷಗಳ ಹಿಂದೆ ಆಕ್ರಮಣವಾದರೂ, ಇದುವರೆಗೂ ಅಮೇರಿಕವು ಅದನ್ನು ಖಂಡಿಸದೆ ಶಾಂತಿಯ ದೃಷ್ಟಿಯಿಂದ ಭಾರತವು ಆ ಆಕ್ರಮಣ ನಡೆದ ವಿಷಯವನ್ನು ಒತ್ತಿ ಹೇಳಬಾರದೆಂದು ಬುದ್ಧಿವಾದ ಹೇಳುತ್ತಿರುವುದೆಂದೂ ನುಡಿದರು.

ನೆಹರೂರವರ ಹೇಳಿಕೆಯ ಪರಿಣಾಮವಾಗಿ ಗಡಿ ಬಳಿ ಇರುವ ೧೭ ಅಮೇರಿಕದ ಮಿಲಿಟರಿ ವೀಕ್ಷಕರನ್ನು ವಾಪಸು ಕರೆಸಲು ಸೂಚಿಸಲಹುದೆಂದು ಹೇಳಲಾಗಿದೆ.

ಕಛೇರಿಗೆ ಮೋಟಾರಿನಲ್ಲಿ ಹೋಗುವ ಜವಾನ

ಸಿಂಹಳದ ಬ್ಯಾಂಕೊಂದರ ಒಬ್ಬ ಜವಾನನು ಪ್ರತಿನಿತ್ಯವೂ ಬ್ಯಾಂಕಿಗೆ ತನ್ನ ಮೋಟಾರಿನಲ್ಲಿ ಕೆಲಸಕ್ಕಾಗಿ ಹೋಗಿಬರುತ್ತಿರುವನು. ಅದನ್ನು ಹೊರಗಡೆ ನಿಲ್ಲಿಸಿ ಬೀಗ ಹಾಕಿ ತನ್ನ ಕೆಲಸದಲ್ಲಿ ಅವನು ತೊಡಗುವನು. ಕುದುರೆ ಜೂಜಿನಲ್ಲಿ ಅವನಿಗೆ ಭಾರಿ ಬಹುಮಾನವು ಬಂದು ಅದರಿಂದ ಅವನು ಮೋಟಾರನ್ನು ಕೊಂಡುಕೊಂಡಿರುತ್ತಾನೆ. ಆದರೂ ಅವನು ಜವಾನಿ ಕೆಲಸದಲ್ಲಿ ಬಹಳ ಆಸಕ್ತಿ ಹೊಂದಿರುವನು.

೮೮ ದಿನ ಉಪವಾಸ ಮಾಡಿದ ಸಾಧುವಿನ ಮರಣ

ಆತ್ಮ ಶುದ್ಧಿಗಾಗಿ ಉಪವಾಸ ವ್ರತವನ್ನಾಚರಿಸುತ್ತಿದ್ದ ಚಂದ್ರ ಮುನೀಜಿ ಎಂಬ ಜೈನ ಶ್ವೇತಾಂಬರ ಸಾಧುವೊಬ್ಬರು ಮಧ್ಯ ಪ್ರದೇಶದ ಚಾಂದಾ ನಗರಕ್ಕೆ ೨೦ ಮೈಲಿ ದೂರದಲ್ಲಿರುವ ಭದ್ರಾವತಿ ಎಂಬಲ್ಲಿ ೮೮ ದಿನಗಳ ಉಪವಾಸದ ನಂತರ ಮೃತಪಟ್ಟಿದ್ದಾರೆ.

ಭಾರತದ ಶ್ರೇಷ್ಠ ನ್ಯಾಯಾಧೀಶರ ಆಗಮನ

ಸ್ವಂ. ಟೆ. ಫೋ.] ಬೆಂಗಳೂರು ೨

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೆಹರ್ ಚಂದ್ ಮಹಾಜನ್‌ರವರು ಈ ದಿನ ಇಲ್ಲಿಗೆ ಆಗಮಿಸಿದರು. ಅವರು ಹೈಕೋರ್ಟಿನಲ್ಲಿ ನಡೆಯುತ್ತಿದ್ದ ಖೂನಿ ಮೊಕದ್ದಮೆಯನ್ನು ವೀಕ್ಷಿಸಿದರು.

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಉಮೇದುವಾರಿಕೆ ಅರ್ಜಿಗಳು

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ನೆನ್ನೆ ಶ್ರೀಗಳಾದ ಕೆ. ಸಿ. ರೆಡ್ಡಿ, ಹೆಚ್. ಸಿ. ದಾಸಪ್ಪ, ಶ್ರೀಮತಿ ಯಶೋಧರಾ ದಾಸಪ್ಪ ಮತ್ತು ಶ್ರೀ ಜಿ. ವಿ. ಚಲ್ಲಂರವರು ಕಾಂಗ್ರೆಸ್ ಪರವಾಗಿ ಉಮೇದುವಾರಿಕೆ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸಂಸ್ಥಾನದ ಶಾಸನ ಸಭೆಯು ಇಬ್ಬರನ್ನು ಕೇಂದ್ರ ಸಭೆಗೆ ಚುನಾಯಿಸಲಿದೆ.

ಪ್ರವಾಸಿಗಳ ರೈಲು ಪರ್ವತದಿಂದ ಉರುಳಿದ ಪ್ರಸಂಗ

ಆಗ್ನೇಯ ಫ್ರಾನ್ಸಿನ ಟೌಲೌಸ್ ಎಂಬ ಪಟ್ಟಣದ ಬಳಿಯಲ್ಲಿ ಬೆಟ್ಟಗುಡ್ಡಗಳ ಮೇಲೆ ಹೋಗುತ್ತಿದ್ದ ಪ್ರವಾಸಿಗರ ರೈಲೊಂದು ಕಂಬಿಯಿಂದ ಹಾರಿ ಕೊರಕಲೊಳಗೆ ಬಂಡೆಗಳ ಮೇಲೆ ಬಿದ್ದು ಅಪಘಾತಕ್ಕೀಡಾಯಿತೆಂದು ವರದಿಯಾಗಿದೆ. ಇದರಿಂದ ತುಂಬಾ ಸಾವುನೋವುಗಳಾಗಿರಬೇಕೆಂದು ಹೇಳಲಾಗಿದೆ.

ಶೃಂಗೇರಿ ಮಠಕ್ಕೆ ಸಾಲಿಯಾನಾ ೧೬ ಲಕ್ಷ ರೂ. ಪರಿಹಾರ

ಸ್ವಂ. ಟೆ. ಫೋ.] ಬೆಂಗಳೂರು ೨

ಚುನಾಯಿತ ಸಮಿತಿಯಿಂದ ಪರಿಶೀಲಿಸಲ್ಪಟ್ಟ ಇನಾಂ ರದ್ದಿಯಾತಿ ಮಸೂದೆಯನ್ನು ನೆನ್ನೆ ಶಾಸನ ಸಭೆಯಲ್ಲಿ ರೆವಿನ್ಯೂ ಸಚಿವರು ಮಂಡಿಸಿ, ಶೃಂಗೇರಿ ಜಹಗೀರನ್ನು ರದ್ದು ಪಡಿಸಿದರೂ, ಮಠಕ್ಕೆ ಬರುತ್ತಿದ್ದ ಹಣವನ್ನು ಅದಕ್ಕೆ ಪರಿಹಾರ ದ್ರವ್ಯವಾಗಿ ಕೊಡಲಾಗುವುದೆಂದೂ ಅದು ವರ್ಷಂಪ್ರತಿ ೧೬ ಲಕ್ಷ ರೂ. ಆಗುವುದೆಂದೂ ತಿಳಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ೩ ಲಕ್ಷ ರೂ. ವರಮಾನ ಬರುವುದಾಗಿಯೂ ಅವರು ಹೇಳಿರುವರು.

ಎಂ. ಹಯಾತ್‌ರವರಿಗೆ ಭಾರತ ಸರ್ಕಾರದ ಹುದ್ದೆ

ಸಂಸ್ಥಾನದ ನಿವೃತ್ತ ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾದ ಶ್ರೀ ಎಂ. ಹಯಾತ್‌ರವರನ್ನು ಭಾರತ ಸರ್ಕಾರದ ನೀರು ಮತ್ತು ವಿದ್ಯುಚ್ಛಕ್ತಿ ಸಮಿತಿಯ ಸದಸ್ಯರಾಗಿ ನೇಮಿಸಲಾಗಿದೆ. ಅವರು ಬಾಂಕಾಕಿನಲ್ಲಿ ಈಗ ವಿಶ್ವಸಂಸ್ಥೆಯ ಅಧಿಕಾರಿಗಳಾಗಿರುವರು. ಅವರನ್ನು ಕೂಡಲೇ ವಾಪಸು ಕರೆಸಲಾಗುವುದು.

ವಿದ್ಯುಚ್ಛಕ್ತಿ ಅಧಿಕಾರಿ ನ್ಯಾಕನ್ನರ ರಾಜೀನಾಮೆ

ವಿದ್ಯುಚ್ಛಕ್ತಿ ಇಲಾಖೆಯ ೧ನೇ ಗ್ರೇಡು ಸೂಪರಿಂಟೆಂಡೆಂಟರಾದ ಶ್ರೀ ಮ್ಯಾಥ್ಯೂರವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುತ್ತಾರೆ. ಇದು ಇನ್ನೂ ಅಂಗೀಕಾರವಾಗಿಲ್ಲ.

ಉತ್ತರ ಕೊರಿಯಾ ಮೇಲೆ ದಕ್ಷಿಣ ಕೊರಿಯಾದ ಧಾಳಿಯೇ ?

ಉತ್ತರ ಮತ್ತು ದಕ್ಷಿಣ ಕೊರಿಯಗಳನ್ನು ಒಂದುಗೂಡಿಸುವ ಸಲುವಾಗಿ ಉತ್ತರ ಕೊರಿಯದ ಮೇಲೆ ತಮ್ಮ ಸೈನ್ಯಗಳು ಧಾಳಿ ನಡೆಸುವುದೆಂದ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ಬೆದರಿಕೆಯನ್ನು ಹಾಕಿರುವರೆಂದು ವರದಿಯಾಗಿದೆ. ಈ ಧಾಳಿಯಲ್ಲಿ ಅವರು ಬೇರೆ ರಾಷ್ಟ್ರಗಳ ಸಹಾಯವನ್ನು ಕೋರದೆ ಒಂಟಿಯಾಗಿಯೇ ಮುನ್ನುಗ್ಗುವರೆಂದೂ ವರದಿಯಾಗಿದೆ

ಹರಿಕಥೆ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಗೀತಾ ಪ್ರಚಾರಿಣಿ ಸಭೆಯಲ್ಲಿ ಶಿವರಾತ್ರಿ ಪ್ರಯುಕ್ತ ನಾಳೆ ರಾತ್ರಿ ೧೦ ಗಂಟೆಗೆ ವಿ|| ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಯವರಿಂದ ಭಕ್ತ ಕಣ್ಣಪ್ಪ ಎಂಬ ಹರಿಕಥೆಯು ನಡೆಯುವುದು

ತಿರುವಾಂಕೂರು ಮಂತ್ರಿಯ ರಾಜೀನಾಮೆ

ತಿರುವಾಂಕೂರಿನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋತುಹೋದುದರಿಂದ ಅಲ್ಲಿನ ಆರೋಗ್ಯ ಮಂತ್ರಿ ಶ್ರೀ ಎ ಮಾಧವನ್ ರವರು ತಮ್ಮ ಪದವಿಗೆ ರಾಜಿನಾಮೆ ಸಲ್ಲಿಸಿರುವರೆಂದು ತಿಳಿದುಬಂದಿದೆ

ಹರಿಕಥೆ

ದೇವಾಂಬಾ ಅಗ್ರಹಾರದಲ್ಲಿರುವ ಶ್ರೀ ಕಾಶಿ ವಿಶ್ವೇಶ್ವರ ದೇವಾಲಯದಲ್ಲಿ ನಾಳೆ ೧೦ ಗಂಟೆಗೆ ವೇ|| ನದೀಪುರಂ ಶ್ರೀನಿವಾಸ ರಂಗಾಚಾರ್ಯರು ಕುಮಾರ ವಿಜಯ (ಸುಬ್ರಹ್ಮಣ್ಯೇಶ್ವರಸ್ವಾಮಿ) ಎಂಬ ಶಿವಕಥೆಯನ್ನು ಮಾಡುವರು

○ ನೆನ್ನೆ ತಾನೆ ಲೆಬನಾನಿನಲ್ಲಿ ಹೊಸದಾಗಿ ರಚಿತವಾಗಿದ್ದ ಅಬ್ದುಲ್ಲಾ ಎಲ್ ಯಾಫಿಯವರ ಮಂತ್ರಿಮಂಡಲವು ಅಧಿಕಾರದ ಹಂಚಿಕೆಯ ಭಿನ್ನಾಭಿಪ್ರಾಯಕ್ಕಾಗಿ ನೆನ್ನೆ ರಾಜೀನಾಮೆ ಯಿತ್ತಿರುವುದೆಂದ ತಿಳಿದುಬಂದಿದೆ

ಜ್ಯೋತಿ ಬಸುರವರ ಬಂಧನ

ಪಶ್ಚಿಮ ಬಂಗಾಳದ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಜ್ಯೋತಿ ಬಸುರವರನ್ನು ಕಳೆದ ಶನಿವಾರ ಪೊಲೀಸರು ಸ್ಥಾನಬದ್ಧತಾ ಶಾಸನದ ಪ್ರಕಾರ ದಸ್ತಗಿರಿ ಮಾಡಿದರು. ಬಂಗಾಳದ ಶಿಕ್ಷಕರ ಮುಷ್ಕರವು ನಡೆದಾಗ ಉಂಟಾದ ದೊಂಬಿಯ ಸಂದರ್ಭದಲ್ಲಿ ಶ್ರೀ ಬಸುರವರ ಬಂಧನಕ್ಕಾಗಿ ದಸ್ತಗಿರಿ ವಾರೆಂಟನ್ನು ಹೊರಡಿಸಲಾಗಿತ್ತು. ಅವರು ಕಳೆದ ೧೬ ನೇ ತಾ|| ನಿಂದ ಅಲ್ಲಿನ ಶಾಸನ ಸಭಾಧ್ಯಕ್ಷರ ರಕ್ಷಣೆ ಪಡೆದು ಸಭಾ ಭವನದಲ್ಲೇ ಆಶ್ರಯ ಪಡೆದಿದ್ದರು. ಸಭೆಯ ಅಧಿವೇಶನವು ನೆನ್ನೆ ಮುಂದುವರಿಸಲ್ಪಟ್ಟನಂತರ ಶ್ರೀ ಬಸುರವರು ತಮ್ಮ ಮೇಲಿನ ವಾರೆಂಟು ರದ್ದಾಗಿರಬಹುದೆಂದು ಭಾವಿಸಿ ಹೊರಕ್ಕೆ ಬಂದು, ಮೋಟಾರಿನಲ್ಲಿ ದಕ್ಷಿಣ ಕಲ್ಕತ್ತಕ್ಕೆ ಹೋಗುತ್ತಿದ್ದಾಗ ಪೊಲೀಸರು ತಡೆದು ಅವರನ್ನು ಬಂಧಿಸಿದರು.

★ ಇಂಡೋಚೈನಾದ ರಾಜಧಾನಿ ಹನಾಯ್ ನಲ್ಲಿ ಸಿಕ್ಕಿ ಸಹಸ್ರಗಟ್ಟಲೆ ಪುಡಿಕೊಳಗಳು ಸಿಡಿದು ೩ ಲಕ್ಷ ಜನ ಗಾಂಧಿ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ. ಒಬ್ಬ ಸೈನ್ಯಾಧಿಕಾರಿಯೂ ಮರಣಕ್ಕೀಡಾಗಿದ್ದಾರೆಂದು ಹೇಳಲಾಗಿದೆ

ಮೋತಿಲಾಲ್ ಟಾಕೀಸ್

3-3-54 ನೇ ಬುಧವಾರ

ಶಿವರಾತ್ರಿ ಪ್ರಯುಕ್ತ

1 ದಿನ ಮಾತ್ರ 4 ಪ್ರದರ್ಶನಗಳು

ಗಣೇಶ ಮಹಿಮೆ

(ಹಿಂದಿ)

೩-೩೦, ೬-೩೦, ೯-೩೦, ೧-೦ ಕ್ಕೆ

Edited, Printed and Published by A R Nagarajan at Sadhvi Press, D.Subbiah Road, Mysore

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಮಧ್ಯ ರಾತ್ರಿ 1 ಗಂಟೆಗೂ ಆಟವುಂಟು

ಒಲಂಪಿಯಾ ✱ ಆನೋಘ ಪ್ರಾರಂಭ ೩-3 54 ರಿಂದ ಪ್ರತಿ ದಿನ ಮೂರು ಆಟಗಳು

ಇಂದಿನ ಸಮಾಜದ ಲೋಪದೋಷಗಳನ್ನು ಬೆಳಕಿಗೆ ತಂದ ಅಮರ ಪ್ರೇಮದ ನೈಜ ಕಲಾ ವಸ್ತು

ಶರಚ್ಚಂದ್ರಚಟರ್ಜಿಯವರ ★ **ಪರಿಣೀತಾ** ★

ಪಾತ್ರ — ಅಶೋಕ್ ಕುಮಾರ್ ಮೀನಾಕುಮಾರಿ ಅಜಿತ್ ಬನರ್ಜಿ

ನಿರ್ದೇಶನ - ಬಿಮಲ್ ರಾಯ್

ಮಹಾ ಶಿವರಾತ್ರಿ ಪ್ರಯುಕ್ತ ನಾಳೆ ದಿನ ನಾಲ್ಕು ಆಟಗಳು

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

27—2—54 ನೇ ಶನಿವಾರದಿಂದ ★ ಅಮೋಘ ವಾದ 3 ನೆಯ ವಾರ

ಪ್ರತಿ ದಿನ ಮೂರು ಆಟಗಳು

ರಾಜರಾಜೇಶ್ವರಿ ಕಂಪೆನಿಯವರ

✱ ತಮಿಳು ಚಿತ್ರ **ಲಕ್ಷ್ಮಿ** ✱

(ಜೆಮಿನಿಯ ಮರು ರಿಲೀಸ್)

ಪಾತ್ರ - ಕಣ್ಣಾಂಬ, ವನಜ, ಎಲ್ ನಾರಾಯಣರಾವ್, ಚಂದ್ರಬಾಬು ಮನೋಹರ್

ಲಕ್ಷ್ಮಿ ಟಾಕೀಸ್ ✱ 3-3-54 ನೇ ಬುಧವಾರ

ಮಹಾ ಶಿವರಾತ್ರಿ ಪ್ರಯುಕ್ತ ನಾಲ್ಕು ಪ್ರದರ್ಶನಗಳು

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನ ನೀಡುತ್ತಿರುವ ಅತ್ಯುತ್ತಮ ಸಾಮಾಜಿಕ ತಮಿಳು ಚಿತ್ರ

★ **ಪೊನ್ ವಯಲ್** ★

(ಚಿನ್ನದ ಭೂಮಿ)

ಪ್ರದರ್ಶನದ ಕಾಲ :— 2.45, 6 15, 9 45 ಮತ್ತು 1 30

ಶ್ರೀ ಚಾಮುಂಡೇಶ್ವರಿ ಟಾಕೀಸ್

ಮಹಾ ಶಿವರಾತ್ರಿ ಸಲುವಾಗಿ ವಿಶೇಷ ಆಕರ್ಷಣೆ

3-3-54 ರಿಂದ : ಅಮೋಘ ಪ್ರಾರಂಭ · ಪ್ರತಿ ದಿನ 3 ಪ್ರದರ್ಶನಗಳು

'ರಾಜಾ ವಿಕ್ರಮ' ಖ್ಯಾತಿಯ ಕೆಂಪರಾಜ್ ರವರು ನಿರ್ದೇಶಿಸಿರುವ ಕನ್ನಡ ಚಿತ್ರ

✱ **ಜಲದುರ್ಗ** ✱

ಪಾತ್ರ ಕೆಂಪರಾಜ್ ಕೃಷ್ಣಕುಮಾರಿ ಬಿ ಆರ್ ಪಂತುಲು ಭಟ್ಟ ಮತ್ತು ಸಂಧ್ಯಾ

ಶಿವರಾತ್ರಿ ದಿನ ರಾತ್ರಿ 1 ಗಂಟೆಗೆ 4 ನೇ ಪ್ರದರ್ಶನವೂ ಉಂಟು

ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಪಾಸುಗಳನ್ನು ಮೊದಲಿನ 2 ವಾರಗಳು ಮನ್ನಾ ಮಾಡಿರುತ್ತೆ

SRI CHAMUNDESWARI BHAVAN

YELWAL ROAD, MYSORE

Special Arrangements FOR HOT SEASON at Upstairs, Specially Decorated Dining Hall

FROM 3RD MARCH 1954

(Maha Shivarathri Day)

Daily from : 4 P. M. to 7 P. M.

All Kinds of Fruit Juices, Ice cream, Fruit Salads & Special Savouries & Sweets

—: M E N U :—

FRUIT SALAD — BANANA ICE-CREAM — VANILLA ICE CREAM
ALMOND ICE-CREAM — GULAB ICE CREAM

ALMOND COLD — ORANGE JUICE — PINE APPLE JUICE
LEMON JUICE — TOMATO JUICE — GRAPE JUICE

MILK SYRUPS — SWEET CURDS SYRUPS

VEGETABLE CUTLETS — SANDWICHES — TOAST BUTTER — POTATO CHIPS

OUR PLANTATION 'A' COFFEE A SPECIALITY

Our Special Set Dosai available in the Mornings & Evenings

— Please visit & Taste our Special Preparations —

★ **Special Menus in Meals to suit Hot Weather**

★ **Concession to permanent boarders in Meals Section**

ಟೆಲಿಫೋನ್ ನಂ. 792 ॥ ಶಂಕೇ ಸಾಹಸಂ ॥ ಬಿಡಿ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಬ ಸ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೩] MYSORE WEDNESDAY 3-3-1954 : ಮೈಸೂರು : ಬುಧವಾರ ೩-೩-೧೯೫೪ [ಸಂಚಿಕೆ ೨೦೦

– ಇಂದು ತಿರುವಾಂಕೂರು ಸರ್ಕಾರದ ರಾಜೀನಾಮೆ –

ತಿರುವಾಂಕೂರು-ಕೊಚ್ಚಿ ಮಂತ್ರಿಮಂಡಲದ ರಾಜೀನಾಮೆ

ತಿರುವಾಂಕೂರಿನಲ್ಲಿ ಸ್ಥಿರವಾಗಿ ನಿಲ್ಲಬಲ್ಲ ಸರ್ಕಾರವನ್ನು ರಚಿಸುವುದಕ್ಕೆ ದಾರಿ ಮಾಡಿಕೊಡಲು ಅಲ್ಲಿನ ಪ್ರಜಾ ಮಂತ್ರಿಮಂಡಲವು ರಾಜಪ್ರಮುಖರಿಗೆ ಈ ದಿನ ರಾಜೀನಾಮೆ ಸಲ್ಲಿಸುವುದಾಗಿ ವರದಿಯಾಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪೂರ್ಣ ಬಹುಮತವು ಬರದೆ ಇರುವುದೂ ಮಂತ್ರಿಮಂಡಲದ ರಾಜೀನಾಮೆಗೆ ಒಂದು ಕಾರಣವೆಂದು ಅಲ್ಲಿನ ಹಣಕಾಸಿನ ಮಂತ್ರಿ ಗೋವಿಂದ ಮೆನನ್ನರು ತಿಳಿಸಿರುತ್ತಾರೆ. ಚುನಾವಣೆಗಳಲ್ಲಿ ಆರೋಗ್ಯ ಮಂತ್ರಿ ವಿ ವರ್ಘೀಸರವರೊಬ್ಬರ ಹೊರತು ಉಳಿದವರೆಲ್ಲರೂ ಜಯಶಾಲಿಗಳಾಗಿರುವರು. ಕಳೆದ ಶಾಸನ ಸಭೆಯ ೧೧೮ ಸ್ಥಾನಗಳ ಪೈಕಿ ಕಾಂಗ್ರೆಸ್ಸಿಗೆ ೪೪ ದೊರೆತು ೫ ಜನ ಸ್ವತಂತ್ರರ ಸಹಕಾರದಿಂದ ಅದು ಮಂತ್ರಿಮಂಡಲವನ್ನು ರಚಿಸಿದ್ದಿತು.

ಜಟ್ಟಿಗಳ ಕಾಳಗದಲ್ಲಿ ಭಾರಿ ಗಲಭೆ ಮತ್ತು ೫ ಮರಣಗಳು

ಬಿಹಾರಿನ ಭಾಗಲ್ಪುರಕ್ಕೆ ಸಮೀಪದ ಒಂದು ಊರಿನಲ್ಲಿ ನೆನ್ನೆ ಜಟ್ಟಿಗಳ ಕಾಳಗವು ನಡೆಯುತ್ತಿದ್ದಾಗ, ಎರಡು ಪಕ್ಷಗಳ ಬೆಂಬಲಿಗರಿಗೆ ಹೊಡೆದಾಟಗಳಾಗಿ ೫ ಜನರು ಸತ್ತು ಹತ್ತು ಮಂದಿಗೆ ಗಾಯಗಳಾದುವು. ಗಲಭೆಯಿಂದ ಅವ್ಯವಸ್ಥೆಯುಂಟಾಗಿ ಹತ್ತಿರದ ಒಂದು ಸೇತುವೆಯಿಂದ ಮಕ್ಕಳು ಮತ್ತು ಇತರ ಹಲವರನ್ನು ನದಿಗೆ ಎತ್ತಿಹಾಕಲಾಯಿತೆಂದೂ ಹೇಳಲಾಗಿದೆ. ಎತ್ತಿಹಾಕಲ್ಪಟ್ಟವರ ಗತಿ ಏನಾಯಿತೆಂಬುದು ರಾತ್ರಿ ಬಹಳ ಹೊತ್ತಿನವರೆಗೂ ತಿಳಿದುಬರಲಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟರೂ, ಪೊಲೀಸರೂ ಸ್ಥಳಕ್ಕೆ ಹೋಗಿರುತ್ತಾರೆ.

ಉಪನ್ಯಾಸ

ಹಾಲೆಂಡಿನ ಯೂಟ್ರೆಕ್ಟ್ ವಿಶ್ವವಿದ್ಯಾಲಯದ ವಿದ್ಯಾ ಪ್ರವೀಣರಾದ ಶ್ರೀ ಆಲ್ಬರ್ಟ್ ಎಚ್ ಸ್ಟೀಂಕ್‍ಮೇಯರವರು ಮಹಾರಾಜಾ ಕಾಲೇಜಿನಲ್ಲಿ ಇಂದು ಮತ್ತು ನಾಳೆ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಸಮಸ್ಯೆಗಳು ಮತ್ತು ಚುನಾವಣೆಗಳು ಮತ್ತು ರಾಜಕೀಯ ಎಂಬ ವಿಷಯವಾಗಿ ಸಂಜೆ ೫॥ ಗಂಟೆಗೆ ಉಪನ್ಯಾಸ ಮಾಡುವರು. ಪ್ರೊ॥ ವಿ ಎಲ್ ಡಿಸೋಜಾರವರು ಅಧ್ಯಕ್ಷತೆ ವಹಿಸುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ನಾಗಸ್ವರ ೬-೨೦ ಆರ್ ಪರಶುರಾಮರ ಸಂಗೀತ ಮಧ್ಯಾಹ್ನ ೧-೪೦ ಮತ್ತು ೨ ಕ್ಕೆ ಪಿಟೀಲು ೨ ಆರ್ ಪರಶುರಾಮರ ಸಂಗೀತ ಸಂಜೆ ೫-೪೦ ಮತ್ತು ೬ ಆರ್ ವಿಶ್ವೇಶ್ವರನ್ ವೀಣೆ ೩ ಹಿಂದಿ ಪಾಠ ೩-೧೫ ಲಲಿತನ್ನು ಭಾರತ ವಾಚನ ೭ ೫ ಕರ್ನಾಟಕ ಸಂಗೀತ ೭-೪೦ ಬಿಚ್ಚಾರ್ ಕೃತಿಗಳು. ೮ ೩೦ ರಾಗ ಕೋಲ್ ೯ ೧೫ ಗೀತೆಗಳು. ೯ ೪೦ ನಿಮ್ಮ ಮೆಚ್ಚಿನ ಗೀತೆಗಳು

5—3—54

ಬೆಳಿಗ್ಗೆ ೭ ೫ ವೀಣೆ ೭ ೨೦ ಪಾದೂರಿ ಮಣಿ ಅಯ್ಯರ್ ಕರ್ನಾಟಕ ಮಧ್ಯಾಹ್ನ ೧ ೪೦ ಮತ್ತು ೧ ೫೦ ಸಂಗೀತ ೨ ಪಶುಪಾಲನ ವಿಚಾರ, ಮಹಿಳೆಯರ ಕಾರ್ಯಕ್ರಮ ಸಂಜೆ ೫ ೪೦ ಮತ್ತು ೬ ರಂಗಗೀತೆಗಳು ೩ ಹಿಂದಿ ಪಾಠ ೩ ೧೫ ಕನ್ನಡ ಗೀತೆಗಳು ೭ ೫ ಮತ್ತು ೭ ೪೦ ಟಿ ಆರ್ ಮಹಾಲಿಂಗಂ ಸಂಗೀತ ೭ ೩೦ ಕರ್ನಾಟಕ ಜನಪದ ಗೀತೆ ೯ ೧೫ ಫೀಚರ್ ೯ ೪೦ ಶಿವ ಗದಂಗ

ಸರ್ಕಾರ ಮತ್ತು ನ್ಯಾಯಾಂಗಗಳಲ್ಲಿ ಪರಸ್ಪರ ಸೌಹಾರ್ದ ಅಗತ್ಯ

ಭಾರತದ ಶ್ರೇಷ್ಠ ನ್ಯಾಯಾಧೀಶರ ಭಾಷಣ

ಬೆಂಗಳೂರು ೩

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೆಹರ್ ಚಂದ್ ಮಹಾಜನ್‍ರವರ ಗೌರವಾರ್ಥವಾಗಿ ನಿನ್ನೆ ಇಲ್ಲಿನ ಬಾರ್ ಕೌನ್ಸಿಲ್ಲಿನವರು ಮತ್ತು ವಕೀಲ ಸಂಘದವರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಶ್ರೇಷ್ಠ ನ್ಯಾಯಾಧೀಶರು ಮಾತನಾಡಿ ಭಾರತವು ಒಂದೇ ನಾಡಾಗಿರುವುದರಿಂದ ಸಕಲ ಭಾರತೀಯರೂ ಐಕ್ಯತೆಯಿಂದ ಕೆಲಸ ಮಾಡಬೇಕೆಂದು ಹೇಳಿದರು. ಮೈಸೂರು ಸಂಸ್ಥಾನದ ಸರ್ಕಾರ ಮತ್ತು ನ್ಯಾಯಾಂಗ ವಿಭಾಗಗಳು ಹಳೆಯದನ್ನು ಮರೆತು ಸಂಪೂರ್ಣ ಸಹಕಾರದಿಂದ ವರ್ತಿಸಬೇಕೆಂದು ಕೋರಿದರು. ಸರ್ಕಾರ ಮತ್ತು ನ್ಯಾಯಾಂಗಗಳು ಸರ್ಕಾರದ ಎರಡು ಮುಖ್ಯ ಅಂಗಗಳೆಂದು ಅವರು ಹೇಳಿ ತಮ್ಮ ಎಡಬಲ ಪಕ್ಕಗಳಲ್ಲಿ ಕುಳಿತಿದ್ದ ಶ್ರೀ ಮೇದಪ್ಪ ಮತ್ತು ಶ್ರೀ ಪದ ವೆಂಕಟಯ್ಯನವರ ಕಡೆ ಕೈ ತೋರಿಸಿದರು.

ವಕೀಲರುಗಳು ರಾಜಕೀಯ ಪಕ್ಷದ ಯಂತ್ರಗಳಾಗಬಾರದೆಂದೂ ಹಾಗೆ ಮಾಡಿದರೆ ತಮ್ಮ ಕರ್ತವ್ಯವನ್ನು ಅವರು ಸಲ್ಲಿಸಲಾಗುವುದಿಲ್ಲವೆಂದೂ, ವಕೀಲ ವೃಂದವು ಮಂತ್ರಿಮಂಡಲವನ್ನು ಸರಿಯಾದ ದಾರಿಗೆ ಹೋಗುವಂತೆ ಮಾಡಬಲ್ಲದಲ್ಲದೆ, ನ್ಯಾಯಾಂಗವು ಸ್ವತಂತ್ರವಾಗಿರಲು ಸಹಾಯಕವಾಗುವುದೆಂದೂ ಅವರ ಅಭಿಪ್ರಾಯಪಟ್ಟರು.

ಶ್ರೇಷ್ಠ ನ್ಯಾಯಾಧೀಶರಿಗೆ ವಕೀಲರ ಮನವಿ

ಈ ದಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಮೆಹರ್ ಚಂದ್ ಮಹಾಜನ್‍ರವರನ್ನು ೩೦ ಜನ ವಕೀಲರು ಭೇಟಿ ಮಾಡಿದ್ದರು. ವಕೀಲರ ಸಂಘದ ಪರವಾಗಿ ಅವರಿಗೆ ಸಲ್ಲಿಸಿದ ಮನವಿಯೊಂದರಲ್ಲಿ, ಹೊಸ ಟ್ರಿಬ್ಯೂನಲ್ಲುಗಳಲ್ಲಿ ಹೆಚ್ಚಾಗಿ ವಕೀಲರನ್ನು ನೇಮಿಸಬೇಕೆಂತಲೂ, ಪರಸ್ಪರ ವಿರೋಧವಾದ ಕಾನೂನುಗಳನ್ನು ತಪ್ಪಿಸಬೇಕೆಂತಲೂ, ಪತ್ರಿಕಾ ಶಾಸನವನ್ನು ವಜಾ ಮಾಡಬೇಕೆಂತಲೂ ಮತ್ತು ನ್ಯಾಯಾಧೀಶರನ್ನು ಸಂಬೋಧಿಸುವಾಗ ಲಾರ್ಡ್‍ಷಿಪ್ ಮುಂತಾದ ಪದಗಳನ್ನು ತೆಗೆದುಹಾಕಬೇಕೆಂತಲೂ ಕೋರಲಾಯಿತು.

ಸೂಚನೆ

ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಪೆಪ್ಸು ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಭಾರಿ ಜಯ

ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸಂಸ್ಥಾನಗಳ ಒಕ್ಕೂಟದಲ್ಲಿ ಈಚೆಗೆ ನಡೆದ ಮಹಾ ಚುನಾವಣೆಗಳಲ್ಲಿ ೬೦ ಸದಸ್ಯರಿರುವ ಶಾಸನ ಸಭೆಗೆ ಕಾಂಗ್ರೆಸ್ಸಿನ ೩೫ ಉಮ್ಮೇದವಾರರು ಆರಿಸಿ ಬಂದಿರುತ್ತಾರೆ. ಅಕಾಲಿಗಳ ಬಲಪಕ್ಷದವರಿಗೆ ೭, ಎಡಪಕ್ಷದವರಿಗೆ ೧ ಕಮ್ಯೂನಿಸ್ಟರಿಗೆ ೩ ಮತ್ತು ಸ್ವತಂತ್ರರಿಗೆ ೭ ಸ್ಥಾನಗಳು ದೊರೆತಿವೆ.

ಬೆಂಗಳೂರಿನಲ್ಲಿ ಆಕಾಶವಾಣಿ ಕೇಂದ್ರ

ಬೆಂಗಳೂರಿನಲ್ಲಿ ಆಲ್ ಇಂಡಿಯಾ ರೇಡಿಯೋವಿನ ಕೇಂದ್ರದ ಕಟ್ಟಡದ ಕೆಲಸವನ್ನು ಬರುವ ವರ್ಷ ಆರಂಭಿಸಲಾಗುವುದು. ೫೦ ಸಾವಿರ ಕಿಲೋವಾಟುಗಳ ವಿಸ್ತಾರದ ಮೀಡಿಯಂ ವೇವ್ ಟ್ರಾನ್ಸ್‌ಮಿಟರನ್ನು ಅಳವಡಿಸಲಾಗುವುದು.

ನೆಹರೂ ಹೇಳಿಕೆಯಿಂದ ಭದ್ರತಾ ಸಮಿತಿಯಲ್ಲಿ ಬಿಕ್ಕಟ್ಟು

ಕಾಶ್ಮೀರದಲ್ಲಿರುವ ವಿಶ್ವಸಂಸ್ಥೆಯ ವೀಕ್ಷಕರ ಪೈಕಿ ಅಮೆರಿಕದವರು ತಟಸ್ಥ ರಾಷ್ಟ್ರಕ್ಕೆ ಸೇರಿದವರಲ್ಲವೆಂದು ನೆಹರೂರವರು ಹೇಳಿರುವುದು ಮತ್ತು ಈ ಬಗ್ಗೆ ಭಾರತವು ಕ್ರಮ ಜರುಗಿಸುವುದರಿಂದ ಭದ್ರತಾ ಸಮಿತಿಗೆ ಹಿಂದೆಂದೂ ಒದಗದ ಜಟಿಲ ಸಮಸ್ಯೆಯೊಂದು ಉದ್ಭವಿಸಿದಂತಾಗುವುದೆಂದು ಅಭಿಪ್ರಾಯ ಪಡಲಾಗಿದೆ. ಭಾರತದಿಂದ ಈ ಬಗ್ಗೆ ಸೂಚನೆಯು ಬಂದರೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ಕ್ರಮ ಕೈಗೊಳ್ಳಬೇಕಾಗುವುದೆಂದು ಹೇಳಲಾಗಿದೆ.

ಗುಡ್ಡದಿಂದ ಬಸ್ಸು ಉರುಳಿ ಐವರ ಪ್ರಾಣಹಾನಿ

ಅಸ್ಸಾಮಿನ ರಾಜಧಾನಿ ಷಿಲ್ಲಾಂಗಿನಿಂದ ಚಿರಾಪುಂಜಿಗೆ ಹೋಗುವ ರಸ್ತೆಯಲ್ಲಿ ಒಂದು ಕಡೆ ಗುಡ್ಡದ ಮೇಲಿನಿಂದ ಬಸ್ಸೊಂದು ಉರುಳಿ, ಡ್ರೈವರ್ ಮತ್ತು ೪ ಜನ ಪ್ರಯಾಣಿಕರು ಮಡಿದಿರುತ್ತಾರೆ. ಇತರರಿಗೆ ತೀವ್ರ ಗಾಯವಾಗಿದೆ. ಇಬ್ಬರ ಸ್ಥಿತಿ ಶೋಚನೀಯವಾಗಿದೆ.

ಹರಿಕಥೆ

ರಾಜಧಾನಿಯ ಕಬ್ಬೇರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠಲಸ್ವಾಮಿ ದೇವಾಲಯದಲ್ಲಿ ಈ ರಾತ್ರಿ ೯॥ ಗಂಟೆಗೆ ಮಹಾಶಿವರಾತ್ರಿ ಪ್ರಯುಕ್ತ ವೇ॥ ಮ॥ ಹೆಚ್ ಎಸ್ ನೀಲಕಂಠದಾಸರಿಂದ ಭೂಕೈಲಾಸ ಎಂಬ ಹರಿಕಥೆಯು ನಡೆಯುವುದು.

ನಾಗಯ್ಯನಹಳ್ಳಿಯ ಶ್ರೀ ಲಕ್ಷ್ಮೀನಾರಾಯಣ ಭಾಗವತರು ಈ ಸಂಜೆ ೬ ರಿಂದ ೭-೩೦ ಘಂಟೆವರೆಗೆ ಚಾಮರಾಜ ರಸ್ತೆಯಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡದಲ್ಲಿ ರಾಮಾಯಣದ "ಅಂಗುಳ್ಯ ಪ್ರದಾನ" ಎಂಬ ಭಾಗದ ಹರಿಕಥೆಯನ್ನೂ ಮತ್ತು ಶಿವರಾತ್ರಿ ಪ್ರಯುಕ್ತ ಈ ರಾತ್ರಿ ೮ ರಿಂದ ೧೦ ಘಂಟೆವರೆಗೆ ವೆಲ್ಲಿಂಗ್ಟನ ಸ್ಥಳದಲ್ಲಿ ಮಾರ್ಕಂಡೇಯ ಚರಿತ್ರೆ ಎಂಬ ಕಥೆಯನ್ನೂ ಮಾಡುವರು.

ನಂಜನಗೂಡಿನ ಭಾವಸಾರ ಕ್ಷತ್ರಿಯ ಮಂಡಳಿಯ ಆಶ್ರಯದಲ್ಲಿ ಶ್ರೀ ಆರ್ ಶೇಷಗಿರಿರಾಯರ ಅಂಗಡಿ ಬಳಿ ಶಿವರಾತ್ರಿ ಪ್ರಯುಕ್ತ ಈ ರಾತ್ರಿ ೧೦ ಗಂಟೆಗೆ ವೇ॥ ಬ್ರ॥ ಶ್ರೀ ಗೋಮಠಂ ಸೀತಾರಾಮಾಚಾರ್ಯರಿಂದ ಸೂರ್ಯ ಕಲ್ಯಾಣ ಎಂಬ ಹರಿಕಥೆಯು ನಡೆಯುವುದು.

ಸಂಗೀತ ವ್ಯಾಸಂಗ ಗೋಷ್ಠಿ

ರಾಜಧಾನಿಯ ನರಸಿಂಹರಾಜ ಮೊಹಲ್ಲಾದಲ್ಲಿರುವ ಶ್ರೀ ಎಂ ಆರ್ ಶ್ರೀನಿವಾಸಯ್ಯಂಗಾರ್ಯರು ಕಳೆದ ಭಾನುವಾರ ತಮ್ಮ ಮನೆಯಲ್ಲಿ ಸಂಗೀತ ವ್ಯಾಸಂಗ ಗೋಷ್ಠಿಯನ್ನು ಪ್ರಾರಂಭಿಸಿದರು. ಶ್ರೀಮತಿಯರಾದ ರಾಜಂ ಶೇಷಾದ್ರಿ ಮತ್ತು ಲಲಿತಮ್ಮ ಮತ್ತು ವಿದ್ವಾಂಸರುಗಳಾದ ಆರ್. ಕೆ ಶ್ರೀಕಂಠನ್, ಎಂ ಎ ನರಸಿಂಹಾಚಾರ್, ಟಿ ಆರ್. ಶ್ರೀನಿವಾಸರವರಿಂದ ಗಾಯನ ಮತ್ತು ಡಾ॥ ಬಿ. ಆರ್ ತಾವಾಚಾರ್ಯರಿಂದ ವೇಣುವಾದನಗಳಾದುವು. ಪ್ರತಿ ಭಾನುವಾರ ಸಂಜೆ ೫ ರಿಂದ ೭ ಗಂಟೆ ವರೆಗೆ ಕಾರ್ಯಕ್ರಮ ನಡೆಯುವುವು.

ಅವಿದ್ಯಾವಂತರು ಶಾಸನ ಸಭೆಗಳಲ್ಲಿರಲಾಗದು

ಭಾರತದ ಶ್ರೇಷ್ಠ ನ್ಯಾಯಾಧೀಶರ ಅಭಿಪ್ರಾಯ

ಸ್ವಂ ಸು ಪೋ॥] ಬೆಂಗಳೂರು ೩.

ಈ ದಿನ ಇಲ್ಲಿನ ಲಾ ಕಾಲೇಜಿನ ಬಹುಮಾನ ವಿನಿಯೋಗ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೆಹರ್ ಚಂದ್ ಮಹಾಜನ್‍ರವರು ಮಾತನಾಡಿ, ಜನರು ನ್ಯಾಯಾಂಗದ ವಿಷಯವನ್ನು ಹೆಚ್ಚು ತಿಳಿದುಕೊಳ್ಳಬೇಕೆಂದು ಹೇಳಿದರು. ಪ್ರಜಾಪ್ರಭುತ್ವ ಮತ್ತು ವಯಸ್ಕರ ಮತದಾನವಿರುವ ಈ ಕಾಲದಲ್ಲಿ ಶಾಸನ ಸಭೆಗಳಿಗೆ ಅವಿದ್ಯಾವಂತರು ಸದಸ್ಯರಾಗಿ ಹೋಗದಂತೆ ಮಾಡಬೇಕೆಂದೂ, ನ್ಯಾಯಾಂಗದ ಪರಿಚಯವಿಲ್ಲದಿದ್ದರೆ ಸದಸ್ಯರಿಗೆ ಕಷ್ಟವೆಂದೂ ಹೇಳಿದರು. ಕಾನೂನು ಬಲ್ಲವರು ಓಟುಗಳಿಸುವ ಮಾರ್ಗವನ್ನು ಅರಿಯಬೇಕೆಂದೂ ತಿಳಿಸಿದರು. ಸಂಸ್ಥಾನದಲ್ಲಿ ಲಾ ಕಾಲೇಜನ್ನು ಸ್ಥಾಪಿಸಿದ ಬಗ್ಗೆ ಅವರು ಸಂತೋಷವನ್ನು ಸೂಚಿಸಿದರು.

ಅಧ್ಯಕ್ಷ ಐಸೆನ್‍ಹೋವರರ ಕೊಲೆ ಬೆದರಿಕೆಗಾಗಿ ಬಂಧನ

ಅಮೆರಿಕದ ಅಧ್ಯಕ್ಷ ಐಸೆನ್‍ಹೋವರರನ್ನು ಕೊಲೆ ಮಾಡುವುದಾಗಿ ಬೆದರಿಸಿದನೆಂದು ಪೋರ್ಟೊರಿಕೊವಿನ ಪೀಡ್ರೊ ಓರೊಕೊ ಎಂಬ ೩೪ ವರ್ಷ ವಯಸ್ಸಿನ ತರುಣನನ್ನು ದಸ್ತಗಿರಿ ಮಾಡಲಾಗಿದೆ. ಅವನನ್ನು ಜಾಮೀನು ಮೇಲೆ ಬಿಡಲು ೧೫ ಸಾವಿರ ಡಾಲರ್‌ಗಳನ್ನು ಕೇಳಲಾಗಿದೆ.

ರಾಮ ಸಹಾಯ ಸಂಘದ ಸಂತೋಷ ಸಮಾರಂಭ

ರಾಜಧಾನಿಯ ೩ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀರಾಮ ಸಹಾಯ ಸಂಘದ ವಿದ್ಯಾರ್ಥಿ ಕೂಟದ ಸಂತೋಷ ಸಮಾರಂಭವು ಪುರಸಭಾ ಸದಸ್ಯರಾದ ಶ್ರೀ ಎ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆಯಿತು. ಕುಮಾರಿ ಎಂ ಎಸ್ ರಾಜಲಕ್ಷ್ಮಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ಅಗರಂ ರಂಗಯ್ಯನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಸ್. ಪಾರ್ಥಸಾರಥಿಯವರು ಸಂಘದ ವರದಿಯನ್ನು ಒಪ್ಪಿಸಿದ ಮೇಲೆ ವಿವಿಧ ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಭಾರತದ ರಾಜ್ಯಾಂಗದಲ್ಲಿ ಪೌರರ ಹಕ್ಕುಗಳ ರಕ್ಷಣೆಗೆ ಪ್ರಾಧಾನ್ಯತೆಯನ್ನು ಕೊಡಲಾಗಿದೆಯೆಂದೂ, ಪೌರರ ಕರ್ತವ್ಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವನ್ನುಂಟುಮಾಡುವುದು ಅಗತ್ಯವೆಂದೂ ಅಧ್ಯಕ್ಷರು ತಮ್ಮ ಭಾಷಣದಲ್ಲಿ ನುಡಿದರು. ವಿದ್ಯಾರ್ಥಿಗಳಾದ ಶ್ರೀ ವ್ಯಾಸರಾಯರಿಂದ ವೀಣೆ, ರಾಜಗೋಪಾಲ್‍ರವರಿಂದ ಬುಲ್‍ಬುಲ್ ತರಂಗ್ ಮತ್ತು ಸುಬ್ರಹ್ಮಣ್ಯರವರಿಂದ ಲಾವಣಿಗಳಾದನಂತರ ವಿ॥ ಎಸ್ ನಂಜುಂಡಸ್ವಾಮಿಯವರ ಗಾಯನವು, ವಿ॥ ಎ ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ॥ ಹರಿಶ್ಚಂದ್ರರವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು. ಶ್ರೀ ಟಿ ಎಸ್. ಕೃಷ್ಣರಾಯರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯಾದನಂತರ ಸಭೆಯ ಕಾರ್ಯ ಮುಗಿಯಿತು.

ಸತ್ತ ಮಹಿಳೆಯು ಮತ್ತೆ ಬದುಕಿದ ಪ್ರಸಂಗ

ಹೊಟ್ಟೆ ನೋವಿಗಾಗಿ ಶಸ್ತ್ರ ಚಿಕಿತ್ಸೆ ಪಡೆಯಲು ವಿಯಟ್ನಾಮದ ಒಬ್ಬ ಮಹಿಳೆಯು ಅಲ್ಲಿನ ಆಸ್ಪತ್ರೆಯಲ್ಲಿ ಸೇರಿ, ಚಿಕಿತ್ಸೆಯು ಫಲಪ್ರದವಾಗದೆ ಅವಳ ರಕ್ತ ಪರಿಚಲನೆ ಮತ್ತು ಹೃದಯ ಕ್ರಿಯೆಗಳು ಪೂರ್ಣವಾಗಿ ನಿಂತ, ಕೈ ಕಾಲುಗಳು ತಣ್ಣಗಾಗಿದ್ದು ವೈದ್ಯ ನಿಪುಣರುಗಳ ತರುವಾಯ ಚಿಕಿತ್ಸೆಯ ಪರಿಣಾಮವಾಗಿ ಬದುಕಿದ ಪ್ರಸಂಗವು ವರದಿಯಾಗಿದೆ. ಮೃತ ಶರೀರದಲ್ಲಿ ಇದ್ದ ಶಾಖದ ಪ್ರಮಾಣವನ್ನು ಮಿತಿಯಿಂದ ಹೆಚ್ಚಿಸಿ ಹಲವು ಇಂಜಕ್ಷನ್ನುಗಳನ್ನು ಕೊಟ್ಟನಂತರ ಆಕೆಯು ನಿಧಾನವಾಗಿ ಮತ್ತೆ ಉಸಿರಾಡಲು ಆರಂಭಿಸಿದಳೆಂದು ಹೇಳಲಾಗಿದೆ. ಆಕೆಯು ೨೭ ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಪೂರ್ಣ ಆರೋಗ್ಯ ಹೊಂದಿ ಹೊರಬಂದು ತನ್ನ ದಿನಚರಿ ಕೆಲಸಗಳನ್ನು ಮಾಡಿಕೊಂಡಿರುವಳೆಂದು ತಿಳಿದುಬಂದಿದೆ

ಮೂರು ಜನರಿಗೆ ಮಡದಿಯಾಗಿದ್ದ ಮಹಿಳೆ

ಭದ್ರಾವತಿಯ ಮಧ್ಯ ವಯಸ್ಸಿನ ಮಹಿಳೆಯೊಬ್ಬಳು ತನಗೆ ಸೇರಿದವಳೆಂದು ಏಕಕಾಲದಲ್ಲಿ ಮೂವರು ವಾದಿಸುತ್ತಿದ್ದು, ಆದ್ದರಿಂದುಂಟಾದ ಸಮಸ್ಯೆಯನ್ನು ಪೋಲೀಸರು ಬಿಡಿಸಬೇಕಾಗಿ ಬಂದಿದ್ದಿತು. ಒಬ್ಬ ಮುಸಲ್ಮಾನನು ಎಂಟು ತಿಂಗಳ ಹಿಂದೆ ಆಕೆಯೊಡನೆ ತಾನು ವಿವಾಹವಾಗಿದ್ದುದಾಗಿ ಹೇಳಿದ್ದನು. ಮತ್ತೊಬ್ಬನು ತನ್ನ ಮಗುವೊಂದನ್ನು ಜೊತೆಗೆ ಕರೆತಂದು ಅದರ ತಾಯಿ ಆಕೆಯೆಂದು ತಿಳಿಸಿದ್ದನು. ತನ್ನೊಡನೆ ೯ ವರ್ಷ ಕಾಲ ಇದ್ದುದಾಗಿ ಮೂರನೆಯವನು ಹೇಳಿದ್ದನು. ಕಡೆಗೆ ರಾಜಿಯಾಗಿ ಆಕೆಯು ಮೂರನೆಯವನೊಡನೆ ಇರಲು ಒಪ್ಪಿರುತ್ತಾಳೆ

ತಿರುವಾಂಕೂರು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ೪೫ ಸ್ಥಾನ

ತಿರುವಾಂಕೂರ ಕೊಚ್ಚಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ೪೫ ಸ್ಥಾನಗಳು ಬಂದಿವೆ. ಕಮ್ಯೂನಿಸ್ಟರಿಗೆ ೨೭, ಪ್ರಜಾ ಸಮಾಜವಾದಿಗಳಿಗೆ ೧೮, ಕ್ರಾಂತಿಕಾರಿ ಸಮಾಜವಾದಿಗಳಿಗೆ ೯ ತಮಿಳುನಾಡು ಕಾಂಗ್ರೆಸ್ಸಿಗೆ ೧೨ ಸ್ವತಂತ್ರರಿಗೆ ೬ ಹೀಗೆ ಒಟ್ಟು ೧೧೭ ಸ್ಥಾನಗಳ ಎಣಿಕೆಯು ಪೂರೈಸಿದೆ. ತಿರುವಾಂಕೂರಿನ ಗೃಹ ಮಂತ್ರಿ ಟಿ. ಎಂ. ವರ್ಗೀಸ್‌ರ ಅಪಜಯ ಹೊಂದಿರುತ್ತಾರೆ

ಮೈಸೂರು ಸರ್ಕಾರಕ್ಕೆ ೩½ ಕೋಟಿ ಕೇಂದ್ರದ ಗ್ರಾಂಟ್

ಮೈಸೂರು ಸಂಸ್ಥಾನದ [illegible] ಯ ವರ್ಷದಲ್ಲಿ [illegible] ಬೇಕಾಗುವುದರಿಂದ ಭಾರತ ಸರ್ಕಾರದವರು ೧೯೫೫ನೇ ಸಾಲಿಗಾಗಿ ೩ ಕೋಟಿ [illegible] ಗಳ ಗ್ರಾಂಟನ್ನು ಕೊಡಲಿರುವರೆಂದು ವರದಿಯಾಗಿದೆ. ೮೦ ಮತ್ತು ೧೧ ಲಕ್ಷ ರೂ. [illegible] ದೂ ಗೊತ್ತಾಗಿದೆ

ತಾರಾಲೋಕ

ಸಚಿತ್ರ ಕನ್ನಡ ವಾರ ಪತ್ರಿಕೆ

ಮಾರ್ಚಿ ಮೊದಲ ವಾರದಲ್ಲಿ

ಹೊರಬೀಳುತ್ತದೆ

★ ಚಾಮರಾಜನಗರ [illegible]

★ ಲೇಖನಗಳಿಗೆ [illegible]

[illegible]

ಸಂಪಾದಕರು - [illegible] ತಾರಾಲೋಕ

ಮೈಸೂರು

SRI GANESHA

TALKIES

From 1-3-54 For 2 Days

Columbia's

ALL ASHORE

(SUN GALORE)

[illegible]

With Mickey Rooney and

Dick Haymes

Edited Printed and Published by A. R. Nagarajan at Sadhvi Press D. Subbiah Road Mysore

ಲಕ್ಷ್ಮಿ ಟಾಕೀಸ್

3-3-54 ನೇ ಬುಧವಾರ

ಮಹಾ ಶಿವರಾತ್ರಿ ಪ್ರಯುಕ್ತ ನಾಲ್ಕು ಪ್ರದರ್ಶನಗಳು

[illegible]

★ ಪ್ರೋಗ್ ವಯರ್ ★

(ಚಿನ್ನದ ಭೂಮಿ)

ಪ್ರದರ್ಶನದ ಕಾಲ — 2-45 6-15, 9-45 ಮತ್ತು 1-30

ಶ್ರೀ ಚಾಮುಂಡೇಶ್ವರಿ ಟಾಕೀಸ್

ಮಹಾ ಶಿವರಾತ್ರಿ ಸಲುವಾಗಿ ವಿಶೇಷ [illegible]

3-3-54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು

[illegible]

* ಜಲದುರ್ಗ *

ಪಾತ್ರ: [illegible]

ಶಿವರಾತ್ರಿ ಪ್ರಯುಕ್ತ ಈ ದಿನ ರಾತ್ರಿ 1 ಗಂಟೆಗೆ 4 ನೇ ಪ್ರದರ್ಶನ [illegible]

ಎಲ್ಲಾ ವಿಧದ [illegible] 2 ವಾರಗಳು [illegible]

ಶ್ರೀ ಚಾಮುಂಡೇಶ್ವರಿ ಭವನ

ಇರ್ವಿನ್ ರಸ್ತೆ, ಮೈಸೂರು

ಭವನದ ಮಹಡಿ ಮೇಲೆ ಬೇಸಿಗೆ ಕಾಲಕ್ಕಾಗಿ ವಿಶೇಷ ಏರ್ಪಾಡುಗಳು

ಅಪೂರ್ವ ರೀತಿಯಲ್ಲಿ ಶೃಂಗರಿಸಿರುವ ಭೋಜನ ಶಾಲೆ

1954 ನೇ ಮಾರ್ಚಿ 3 ನೇ ತಾ॥ ನಿಂದ :: ಕೋಲ್ಡ್ ಬಾರ್

ಪ್ರತಿ ದಿನವೂ ಮಧ್ಯಾಹ್ನ 4 ಘಂಟೆಯಿಂದ ಸಂಜೆ 7 ಘಂಟೆ ವರೆಗೆ

ಎಲ್ಲಾ ತರಹೆಯ ಹಣ್ಣುಗಳ ರಸ, ಐಸ್ ಕ್ರೀಂ, ಫ್ರೂಟ್ ಸಾಲಡ್‌ಗಳು ಮತ್ತು ವಿಶೇಷ ಖಾರ ಮತ್ತು ಸಿಹಿ ಪದಾರ್ಥಗಳು

— ಉಪಾಹಾರಗಳ ವಿವರ —

ಫ್ರೂಟ್ ಸಾಲಡ್ — ಬಾಳೆಹಣ್ಣಿನ ಐಸ್ ಕ್ರೀಂ — ವನಿಲ್ಲಾ ಐಸ್ ಕ್ರೀಂ

ಬಾದಾಮ್ ಐಸ್ ಕ್ರೀಂ — ಗುಲಾಬ್ ಐಸ್ ಕ್ರೀಂ — ಬಾದಾಂ ಕೋಲ್ಡ್

★ ★ ★

ಕಿತ್ತಲೆಹಣ್ಣಿನ ರಸ - ಪೈನಾಪಲ್ ರಸ - ನಿಂಬೆಹಣ್ಣಿನ ರಸ - ಟೊಮಾಟೊ ರಸ - ದ್ರಾಕ್ಷಿಹಣ್ಣಿನ ರಸ

★ ★ ★

ಹಾಲಿನ ಶರಬತ್ತು — ಸಿಹಿ ಮೊಸರಿನ ಶರಬತ್ತುಗಳು

★ ★ ★

ವೆಜಿಟಬಲ್ ಕಟ್ಲೆಟ್ಟುಗಳು - ಸಾಂಡ್ವಿಚ್ಚುಗಳು - ಬೆಣ್ಣೆಯ ಟೋಸ್ಟು - ಆಲೂಗೆಡ್ಡೆ ಉಪ್ಪೇರಿ

★ ★ ★

ನಮ್ಮ ಪ್ಲಾಂಟೇಷನ್ 'ಎ' ಕಾಫಿ ಒಂದು ವಿಶೇಷ

ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತೂ ನಮ್ಮ ಸ್ಪೆಷಲ್ ಸೆಟ್ ದೋಸೆಗಳು ಸಿಗುತ್ತವೆ

— ದಯವಿಟ್ಟು [illegible] ನಮ್ಮ ಅಪೂರ್ವ ತಯಾರಿಕೆಗಳ ರುಚಿ ನೋಡಿರಿ —

★ ಬೇಸಿಗೆ ಹವಾಕ್ಕೆ ಅನುಗುಣವಾದ ದಿವ್ಯ ಭೋಜನದ ತಯಾರಿಕೆ

★ ಊಟದ ವಿಭಾಗದಲ್ಲಿ ಖಾಯಂ ಬೋರ್ಡರುಗಳಿಗೆ ರಿಯಾಯಿತಿ ಉಂಟು

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಂಗುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI . LEADING NATIONALIST DAILY OF MYSORE

ಸಂಪುಟ ೧೫] MYSORE : FRIDAY 5-3-1954 : ಮೈಸೂರು : ಶುಕ್ರವಾರ ೫-೩-೧೯೫೪ [ಸಂಚಿಕೆ ೨೦೬

ತಿರುವಾಂಕೂರಿನಲ್ಲಿ ವಾಮ ಪಕ್ಷಗಳ ಸರ್ಕಾರದ ರಚನೆ?

ಪೌರಸಭಾಧ್ಯಕ್ಷರ ಮೇಲೆ ನಗರೂರರ ಕಂಟೆಂಪ್ಟ್ ಅಪಾದನೆ

ಮೈಸೂರು ೫

ಇಲ್ಲಿನ ಪೌರಸಭೆಯ ಅಧ್ಯಕ್ಷರು ಮತ್ತು ಅಸಿಸ್ಟೆಂಟ್ ಅಧಿಕಾರಿಗಳ ಮೇಲೆ ಶ್ರೀ ನಗರೂರು ರಾಮಚಂದ್ರರಾಯರು ೧ನೇ ಮನ್ಸೀಫರ ಕೋರ್ಟಿನಲ್ಲಿ ನೆನ್ನೆ ಕಂಟೆಂಪ್ಟ್ ಅರ್ಜಿಯನ್ನು ಸಲ್ಲಿಸಿದರು. ನೀರಿನ ತೆರಿಗೆ ಸಂಬಂಧವಾಗಿ ಅವರು ಪೌರಸಭೆಯ ಮೇಲೆ ಸದರಿ ಕೋರ್ಟಿನಲ್ಲಿ ದಾವೆಯೊಂದನ್ನು ಹೂಡಿ, ಅದು ತೀರ್ಮಾನವಾಗುವ ವರೆಗೂ ವಾದಿಯ ಮನೆಗೆ ನೀರು ಬಿಡುವುದನ್ನು ನಿಲ್ಲಿಸುವುದಿಲ್ಲವೆಂದು ಪೌರಸಭೆಯ ವಕೀಲರು ಕೋರ್ಟಿಗೆ ಭರವಸೆ ಕೊಟ್ಟಿದ್ದರೂ ಸಹ, ನೀರಿನ ಕಂದಾಯವನ್ನು ಕೊಡಬೇಕೆಂದೂ ಇಲ್ಲವಾದರೆ ನೀರು ಸರಬರಾಜನ್ನು ತಪ್ಪಿಸುವುದಾಗಿಯೂ, ಪೌರಸಭೆಯವರು ತಮಗೆ ನೋಟೀಸನ್ನು ಕೊಟ್ಟಿರುವರೆಂದೂ, ಅದು ಅಕ್ರಮವೂ ಕೋರ್ಟಿಗೆ ಅವಹೇಳನಕರವಾದುದೂ ಎಂದೂ, ಸದರಿ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದೂ ಅವರು ತಮ್ಮ ಅರ್ಜಿಯಲ್ಲಿ ತಿಳಿಸಿರುತ್ತಾರೆ.

ಹೋಟೇಲು ಕೆಲಸಗಾರರ ಉಪವಾಸ ಸತ್ಯಾಗ್ರಹ

ಕೈಗಾರಿಕಾ ನ್ಯಾಯಾಲಯದವರು ಕೊಟ್ಟ ತೀರ್ಪಿನ ಅಂಶಗಳನ್ನು ನಗರದ ರೈಲ್ವೆ ಸ್ಟೇಷನ್ ಹೋಟೇಲಿನ ಮಾಲೀಕರು ಜಾರಿಗೆ ಕೊಡದೆ ಇರುವುದಕ್ಕಾಗಿಯೂ, ಈ ಸಂಬಂಧವಾಗಿ ಸರ್ಕಾರದ ಉದಾಸೀನಕ್ಕಾಗಿಯೂ ಮತ್ತು ಇದೇ ೩೦ನೇ ತಾ॥ ಸದರಿ ಹೋಟೇಲಿನ ಕಂಟ್ರಾಕ್ಟ್ ಮುಗಿದು ಯಾವ ಪರಿಹಾರವೂ ದೊರೆಯುವ ಭರವಸೆ ಇಲ್ಲದಿರುವುದರಿಂದಲೂ ನಗರದ ಹೋಟೇಲು ಕೆಲಸಗಾರರ ಸಂಘದ ಮುಖಂಡರುಗಳು ರೈಲ್ವೆ ಸ್ಟೇಷನ್ ಹೋಟೇಲು ಕೆಲಸಗಾರರಾದ ಶ್ರೀ ಕೆ ವಾಸುಶೆಟ್ಟಿಯವರೊಡನೆ ಇದೇ ತಿಂಗಳು ೧೭ ನೇ ತಾ॥ ನಿಂದ ಉಪವಾಸ ಸತ್ಯಾಗ್ರಹವನ್ನು ನಡೆಸಲಿರುವರೆಂದು ಹೋಟೇಲು ಕೆಲಸಗಾರರ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಜೇನು ಹುಳುಗಳಿಂದ ಯಾಗದ ಭಂಗ

ಅಬ್ದುಲ್ ಪುರಕ್ಕೆ ೫ ಮೈಲಿ ದೂರವಿರುವ ಒಂದು ದೇವಾಲಯದಲ್ಲಿ ನಡೆಯುತ್ತಿದ್ದ ಒಂದು ಯಜ್ಞ ಮಂಟಪಕ್ಕೆ ಹತ್ತಿರದಲ್ಲಿದ್ದ ಜೇನು ಗೂಡಿನ ಹುಳುಗಳು ಮುತ್ತಿ ಯಾಗವನ್ನು ಭಂಗಗೊಳಿಸಿದುವೆಂದು ವರದಿಯಾಗಿದೆ. ಯಾಗದ ಹೊಗೆಯು ಜೇನು ಗೂಡಿಗೆ ತಗಲಿ, ಹುಳುಗಳು ಎದ್ದು ಹಲವು ಋತ್ವಿಕರನ್ನು ಕಡಿದುವೆಂದೂ, ಅವರು ಓಡಿಹೋದರೆಂದೂ ಹೇಳಲಾಗಿದೆ. ಬೇರೆ ಕಡೆಯಲ್ಲಿ ಯಜ್ಞಕುಂಡದ ಏರ್ಪಾಡಿಸಲಾಗಿದೆ.

೮ ಜನ ಈಜಿಪ್ಟ್ ಅಧಿಕಾರಿಗಳ ವಿಚಾರಣೆ

ಈಜಿಪ್ಟಿನ ಕ್ರಾಂತಿ ಮಂಡಲಿಯು ಉರುಳಿಸಲೆತ್ನಿಸಿದರೆಂದು ಅಲ್ಲಿನ ೮ ಜನ ಅಶ್ವ ಸೈನ್ಯಾಧಿಕಾರಿಗಳನ್ನು ಮಿಲಿಟರಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಲಾಗುವುದು. ಅವರು ಕಮ್ಯೂನಿಸ್ಟ್ ಪಕ್ಷಪಾತಿಗಳೆಂದು ಹೇಳಲಾಗಿದೆ.

ತಿರುವಾಂಕೂರು-ಕೊಚ್ಚಿ ಮಂತ್ರಿಮಂಡಲದ ರಾಜೀನಾಮೆ

ತಿರುವಾಂಕೂರು ಕೊಚ್ಚಿಯಲ್ಲಿ ಅಧಿಕಾರ ನಿರ್ವಹಿಸುತ್ತಿದ್ದ ಎ ಜೆ ಜಾನ್‌ರವರ ಮಂತ್ರಿಮಂಡಲವು ನೊನ್ನೆ ರಾಜಪ್ರಮುಖರಿಗೆ ರಾಜೀನಾಮೆಯನ್ನು ಸಲ್ಲಿಸಿತು. ಆಡಳಿತದ ಬಗ್ಗೆ ಹೊಸ ಏರ್ಪಾಡು ಮಾಡುವವರೆಗೂ ಈಗಿನ ಮಂತ್ರಿಗಳೇ ಮುಂದುವರಿಯಬೇಕೆಂದು ರಾಜಪ್ರಮುಖರು ಸೂಚಿಸಿರುತ್ತಾರೆ.

ಯಮುನೆಯಲ್ಲಿ ದೋಣಿ ಮುಳುಗಿ ೧೦೦ ಜನರ ಮರಣ

ಆಗ್ರಾ ನಗರಕ್ಕೆ ೫೦ ಮೈಲಿ ದೂರವಿರುವ ಸೌರಂಗಿ ಘಟ್ಟದ ಬಳಿ ನೊನ್ನೆ ಯಮುನಾ ನದಿಯಲ್ಲಿ ಹೋಗುತ್ತಿದ್ದ ದೋಣಿಯೊಂದು ತಲೆಕೆಳಗಾಗಿ ಮಗುಚಿದ ಕಾರಣ ಮಾವಾಗಿ ನೂರು ಜನರಾದರೂ ಕಡೆಯ ಪಕ್ಷ ಮುಳುಗಿ ಸತ್ತಿರಬಹುದೆಂದು ವರದಿಯಾಗಿದೆ. ಮಹಾಶಿವರಾತ್ರಿಯ ದಿನ ಈಶ್ವರನ ದೇವಾಲಯವೊಂದಕ್ಕೆ ಹೋಗಿ, ಅಲ್ಲಿ ಪೂಜಾದಿಗಳನ್ನು ನಡೆಸಲು ಅವರುಗಳು ತೆರಳುತ್ತಿದ್ದರೆಂದು ಹೇಳಲಾಗಿದೆ.

೨೭ ಗೂಡ್ಸ್ ವ್ಯಾಗನ್ನುಗಳು ಸೇತುವೆಯಿಂದ ಉರುಳಿದುವು

ಭೋಪಾಲ್ ಮತ್ತು ಉಜ್ಜಯಿನಿ ವಿಭಾಗದ ರೈಲು ಪಥದಲ್ಲಿ ೨ನೇ ತಾ॥ ರಾತ್ರಿ ಒಂದು ಗೂಡ್ಸ್ ಗಾಡಿಯು ಬೆಹರೀ ಮತ್ತು ಮಸ್ಸಿಗಳ ನಿಲ್ದಾಣಗಳ ನಡುವೆ ಹೋಗುತ್ತಿದ್ದಾಗ ಸೇತುವೆಯೊಂದರ ಮೇಲಿನಿಂದ ೨೭ ವ್ಯಾಗನ್ನುಗಳು ಕಳಚಿಕೊಂಡು ಕೆಳಗಡೆ ಹರಿಯುವ ಹೊಳೆಯೊಂದಕ್ಕೆ ಮಗುಚಿಕೊಂಡುವೆಂದು ವರದಿಯಾಗಿದೆ. ಇಂಜನ್ನು ಮತ್ತು ೭ ಗಾಡಿಗಳು ಸುರಕ್ಷಿತವಾಗಿ ದಾಟಿದುವೆಂದೂ ಎರಡು ವ್ಯಾಗನ್ನುಗಳೂ, ೧ ಬ್ರೇಕ್ ವ್ಯಾನೂ ಕಂಬಿಯ ಮೇಲೆಯೇ ನಿಂತುವೆಂದೂ ಹೇಳಲಾಗಿದೆ. ಸೇತುವೆಗೆ ಜಖಂ ಆಗಿದೆ. ಯಾರಿಗೂ ಸಾವುನೋವುಗಳಾಗಿಲ್ಲ.

ಜೂಜಾಟಕ್ಕಾಗಿ ಮೊಕದ್ದಮೆ

ರಾಜಧಾನಿಯ ಲಷ್ಕರ್ ಪೋಲೀಸರು ನೆನ್ನೆ ರಾತ್ರಿ ಸಸ್ಪೆಂಡ್ ಹೆಡ್ ಶ್ರೀ ಶ್ರೀಕಂಠಯ್ಯನವರ ಮನೆಯಲ್ಲಿ ಜೂಜಾಡುತ್ತಿದ್ದವರೆಂದು ಹೇಳಲಾದ ೫ ಜನರನ್ನು ದಸ್ತಗಿರಿ ಮಾಡಿ ಅವರ ಮೇಲೆ ಈ ದಿನ ೧ನೇ ನ್ಯಾಯಾಧೀಶರ ಮುಂದೆ ಮೊಕದ್ದಮೆ ಹೂಡಿರುತ್ತಾರೆ. ಅಲ್ಲಿ ಸುಮಾರು ೩೫ ರೂ ಗಳು ದೊರೆತುವೆಂದು ಹೇಳಲಾಗಿದೆ.

ಉದ್ಧವಗೀತೆ ಮೇಲೆ ಉಪನ್ಯಾಸ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ರಾಮಾನುಜ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ನಾಳೆಯಿಂದ ೧೨ನೇ ತಾ॥ ಶುಕ್ರವಾರ ಪರ್ಯಂತ ಪ್ರತಿನಿತ್ಯವೂ ರಾತ್ರಿ ೯ ರಿಂದ ೧೦ ಗಂಟೆವರೆಗೆ ಶ್ರೀ ಉದ್ಧವ ಗೀತಾ ಎಂಬ ವಿಷಯವಾಗಿ ಉಪನ್ಯಾಸ ರತ್ನಾಕರ ವೇ॥ ಜಯತೀರ್ಥಾಚಾರ್ಯರವರಿಂದ ಉಪನ್ಯಾಸವು ನಡೆಯುವುದು. ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ನಾಳೆ ದಿನ ಕಾರ್ಯಕ್ರಮದ ಆರಂಭೋತ್ಸವವನ್ನು ನೆರವೇರಿಸುವರು. ಆಸ್ತಿಕ ಮಹನೀಯರು ದಯಮಾಡಿಸುವಂತೆ ಕೋರಲಾಗಿದೆ.

ರಾಜಸಭೆಯು ಸಂಸ್ಥಾನದ ಸಮಾರಂಭವೇ, ಖಾಸಗಿಯೇ?

ಶಾಸನ ಸಭೆಯಲ್ಲಿ ವೆಚ್ಚದ ಬಗ್ಗೆ ದೀರ್ಘ ಪ್ರಶ್ನೋತ್ತರ

ಸ್ವಂ ಸು ಫೋ] ಬೆಂಗಳೂರು ೫

ಈ ದಿನ ಕಿರಿಯ ಶಾಸನ ಸಭೆಯ ಪ್ರಶ್ನೋತ್ತರಗಳ ಕಾಲದಲ್ಲಿ ಶ್ರೀ ನರಸಿಂಹರೆಡ್ಡಿ ಶ್ರೀ ಪಿ ಆರ್ ರಾಮಯ್ಯ ಮತ್ತು ಶ್ರೀ ಎಸ್ ಸಿ ನಾಗಯ್ಯರೆಡ್ಡಿಯವರುಗಳು ಮಾಡಿದ ಪ್ರಶ್ನೆಗಳಿಗೆ ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಉತ್ತರವಿತ್ತು, ದಸರಾ ಕಾಲದಲ್ಲಿ ನಡೆಯುತ್ತಿರುವ ರಾಜಸಭೆಯು ಸ್ವಲ್ಪಮಟ್ಟಿಗೆ ಸರ್ಕಾರದ ಸಮಾರಂಭವಾಗಿರುವುದೆಂದೂ ಸ್ವಲ್ಪ ಮಹಾರಾಜರ ವೈಯಕ್ತಿಕವೆಂದೂ ಅದನ್ನು ವಿಂಗಡಿಸುವುದು ಕಷ್ಟವೆಂದೂ ತಿಳಿಸಿದರು. ಸಭೆಗೆ ಬರಲು ಆಹ್ವಾನವೀಯುವುದು ಅರಮನೆಯ ಅಧಿಕಾರಿಗಳ ಕರ್ತವ್ಯವಾಗಿದೆಯೆಂದೂ ಹೇಳಿದರು. ಆಹ್ವಾನ ನೀಡುವುದರಲ್ಲಿ ಸರ್ಕಾರದ ಕೈವಾಡವಿರುವುದಿಲ್ಲವೆಂದೂ ಸಚಿವರು ನುಡಿದರು.

ಈ ಸಮಾರಂಭಕ್ಕಾಗಿ ಸರ್ಕಾರದವರು ಆಹ್ವಾನಿಸುವ ಅತಿಥಿಗಳ ವೆಚ್ಚವನ್ನು ಸರ್ಕಾರದವರೇ ವಹಿಸುವರೆಂದೂ ಅರಮನೆಯವರು ತಮ್ಮ ಅತಿಥಿಗಳ ವೆಚ್ಚವನ್ನು ವಹಿಸುವರೆಂದೂ ತಿಳಿಸಲಾಯಿತು.

ಅರಮನೆಯ ಮುಂದೆ ಹರಿಜನರ ಕುಸ್ತಿಯ ಏರ್ಪಾಡಿನ ಬಗ್ಗೆಯೂ ಪ್ರಶ್ನೋತ್ತರಗಳಾದುವು. ಹರಿಜನರು ಮತ್ತು ಸವರ್ಣೀಯರಲ್ಲಿ ಭೇದಭಾವ ಹೋಗಬೇಕೆಂಬ ಉದ್ದೇಶದಿಂದ ಹರಿಜನರ ಕುಸ್ತಿಯನ್ನು ಅರಮನೆ ಮುಂದೆ ಏರ್ಪಡಿಸಲಾಗಿದ್ದಿತೇ- ಎಂದು ಶ್ರೀ ನರಸಿಂಹ ರೆಡ್ಡಿಯವರು ಕೇಳಿದರೆ ಮುಖ್ಯ ಮಂತ್ರಿಯವರು ಉತ್ತರವಿತ್ತು, ಸಾರ್ವಜನಿಕರು ಸಹಕಾರ ನೀಡಿದರೆ ಎಲ್ಲವೂ ಸಾಧ್ಯವೆಂದು ಹೇಳಿದರು. ಈ ಸಾರಿ ನಡೆದ ಏರ್ಪಾಡಿನಲ್ಲಿ ಪರಸ್ಪರ ಸೌಹಾರ್ದವಿದ್ದಿತೇ ಎಂದು ಕೇಳಲಾಗಿ ಅದಕ್ಕೆ ಸರ್ಕಾರದವರು ಉತ್ತರವೀಯಲಿಲ್ಲ.

ನಿರುದ್ಯೋಗ ನಿವಾರಣೆಗೆ ೭೪ ಲಕ್ಷ ರೂ

ಗ್ರಾಮ ಮತ್ತು ಪಟ್ಟಣಗಳಲ್ಲಿ ನಿರುದ್ಯೋಗ ನಿವಾರಣೆಗಾಗಿ ಕೇಂದ್ರ ಸರ್ಕಾರದವರು ಹೊಸ ವರ್ಷದಲ್ಲಿ ತೆಗೆದಿಟ್ಟಿರುವ ಹಣದ ಪೈಕಿ ಮೈಸೂರು ಸಂಸ್ಥಾನಕ್ಕೆ ೭೪ ಲಕ್ಷ ರೂ ಗಳನ್ನು ಕೊಡಲಾಗುವುದೆಂದು ಗೊತ್ತಾಗಿದೆ. ಎಲ್ಲ ಸಂಸ್ಥಾನಗಳಿಗೆ ಕೊಡಲು ೭೪ ಕೋಟಿ ರೂ ತೆಗೆದಿಡಲಾಗಿದೆ.

ಅಮೆರಿಕಕ್ಕೆ ಟಿ ಸಿದ್ದಲಿಂಗಯ್ಯನವರು

ಸಂಸ್ಥಾನದ ಮಾಜಿ ಕೈಗಾರಿಕಾ ಸಚಿವರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಶೀಘ್ರದಲ್ಲೇ ಅಮೆರಿಕದಲ್ಲಿ ಪ್ರವಾಸ ಕೈಗೊಳ್ಳಲಿರುವರೆಂದು ವರದಿಯಾಗಿದೆ.

೬ ಹೊಸ ಸಕ್ಕರೆ ಕಾರ್ಖಾನೆಗಳು

ದಕ್ಷಿಣ ಭಾರತದಲ್ಲಿ ಆರು ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಕೊಡಲಾಗುವುದೆಂದು ಕೇಂದ್ರ ಆಹಾರ ಮಂತ್ರಿ ಕಿದ್ವಾಯಿ ... ತ್ತಾರೆ

ತಿರುವಾಂಕೂರಿನಲ್ಲಿ ವಾಮ ಪಕ್ಷಗಳ ಸರ್ಕಾರದ ಸ್ಥಾಪನೆ?

ತಿರುವಾಂಕೂರು ಕೊಚ್ಚಿಯ ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಪಟ್ಟಂ ತಾನುಪಿಳ್ಳೆಯವರು ಅಲ್ಲಿನ ರಾಜಪ್ರಮುಖರಿಗೆ ಪತ್ರವೊಂದನ್ನು ಬರೆದು ಶಾಸನ ಸಭೆಯ ೫೫ ಜನ ಸದಸ್ಯರ ಬಂಗಡಕ್ಕೆ ತಮ್ಮನ್ನು ನಾಯಕರಾಗಿ ಆರಿಸಲಾಗಿದೆಯೆಂದೂ, ರಾಜಪ್ರಮುಖರು ತಮಗೆ ಭೇಟಿ ಕೊಡಬೇಕೆಂದೂ ತಿಳಿಸಿರುತ್ತಾರೆ. ಅಲ್ಲಿನ ವಾಮ ಪಕ್ಷದವರು ಪ್ರಜಾ ಸಮಾಜವಾದಿಗಳು ಮತ್ತು ವಾಮ ಪಕ್ಷದ ಬೆಂಬಲ ಪಡೆದು ಗೆದ್ದ ಸ್ವತಂತ್ರರು ಸೇರಿ ಒಟ್ಟು ೫೫ ಜನರ ಪಕ್ಷವನ್ನು ರಚಿಸಿರುವರೆಂದು ಹೇಳಲಾಗಿದೆ. ಹೊಸ ಸಂಯುಕ್ತ ಪಕ್ಷಕ್ಕೆ ಸೇರಿರುವ ಕ್ರಾಂತಿಕಾರಿ ಸಮಾಜವಾದಿ ಪಕ್ಷದ ನಾಯಕರಾದ ಶ್ರೀಕಂಠನ್ ನಾಯರ್‌ರವರು ಒಂದು ವಾರದಲ್ಲೇ ಪಟ್ಟಂ ತಾನುಪಿಳ್ಳೆಯವರ ನೇತೃತ್ವದಲ್ಲಿ ವಾಮ ಪಕ್ಷಗಳ ಸಮ್ಮಿಶ್ರ ಸರ್ಕಾರವಾಗಿರುವುದಾಗಿ ಹೇಳಿರುತ್ತಾರೆ.

ಶಾಸನ ಸಭೆಗೆ ಚುನಾಯಿತರಾಗಿ ಬಂದಿರುವ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ನಾಯಕರಾಗಿ ಪಾನಂಪಳ್ಳಿ ಗೋವಿಂದ ಮೆನನ್ನರು ಆರಿಸಲ್ಪಟ್ಟಿರುತ್ತಾರೆ. ಕಾಂಗ್ರೆಸ್ಸಿನವರು ಸಭೆಯಲ್ಲಿ ವಿರೋಧ ಪಕ್ಷದಂತೆ ಕಾರ್ಯಗಳು ಆಲೋಚಿಸಿರುವರೆಂದು ಗೊತ್ತಾಗಿದೆ.

ಎಸ್ ರೇವಣ್ಣನವರ ಉಪವಾಸ

ನಂಜನಗೂಡು ೫

ಇಲ್ಲಿನ ಕಪಿಲಾ ಟಿಟ್ಟಿ ಗಿರಣಿ ಕೆಲಸಗಾರರ ಸಂಘದ ಬೇಡಿಕೆಗಳನ್ನು ಕಾರ್ಖಾನೆ ಸಮಾಹೆಯವರು ಕೈಗಾರಿಕಾ ಟ್ರಿಬ್ಯುನಲ್ ಮುಂದೆ ಮೂರು ತಿಂಗಳುಗಳಾದರೂ ಮಂಡಿಸದೆ ಇರುವುದರಿಂದ ಸಂಘದ ಅಧ್ಯಕ್ಷರಾದ ಶ್ರೀ ಎಸ್ ರೇವಣ್ಣನವರು ೫ ದಿನಗಳಿಂದ ಉಪವಾಸ ಹೂಡಿರುವರೆಂದು ಸತ್ಯಾಗ್ರಹ ಶಿಬಿರದ ಕಾರ್ಯದರ್ಶಿ ಶ್ರೀ ಆರ್ ಶ್ರೀನಿವಾಸರಾಯರು ತಿಳಿಸುತ್ತಾರೆ.

ರಾಜರೊಬ್ಬರಿಂದ ೧ ಲಕ್ಷ ಭಿಗಾ ಜಮೀನು ದಾನ

ಬಿಕನೇರಿನ ರಾಜ ರಘುವೀರಸಿಂಗ ಮಹಾರಾಜರವರು ತಮಗೆ ಪುತ್ರೋತ್ಸವವಾದ ಸಂತೋಷಾರ್ಥವಾಗಿ ಭೂದಾನ ಯಜ್ಞಕ್ಕೆ ೧ ಲಕ್ಷ ಮತ್ತು ೧ ಭಿಗಾ ಜಮೀನನ್ನು ದಾನವಾಗಿ ಕೊಟ್ಟಿರುತ್ತಾರೆ. ಈಗಾಗಲೇ ಬಿಕನೇರಿನ ಮಹಾರಾಜರ ಸಹೋದರ ಅಮರಸಿಂಗರು ೨೮೪,೫೦೦ ಭಿಗಾ ಜಮೀನನ್ನು ಯಜ್ಞಕ್ಕೆ ಕೊಟ್ಟಿರುವರು.

ಕೆಂಪು ಷರಟಿನವರ ಮೇಲೆ ನಿರ್ಬಂಧ ರದ್ದು

ಗಡಿನಾಡಿನ ಕೆಂಪು ಷರಟಿನವರ ಸಂಸ್ಥೆಯಾದ ಖುದಾಯಿ ಖಿದ್ಮತ್‌ಗಾರ್ ದಳದ ಮೇಲೆ ೬ ವರ್ಷಗಳಿಂದಲೂ ಇರುವ ನಿಷೇಧವನ್ನು ವಜಾ ಮಾಡುವ ವಿಷಯವು ಪಾಕಿಸ್ತಾನ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ವರದಿಯಾಗಿದೆ. ಈ ಸಂಬಂಧವಾಗಿ ಅಲ್ಲಿನ ಒಳಾಡಳಿತ ಮಂತ್ರಿ ಮುಸ್ತಾಕ್ ಅಹಮದ್ ಗುರ್ಮಾನಿಯವರು ಡಾ॥ ಅಬ್ದುಲ್ ಗಫಾರ್ ಖಾನರೊಡನೆಯೂ, ಡಾ॥ ಖಾನ್ ಸಾಹೇಬರೊಡನೆಯೂ ಮಾತುಕತೆ ನಡೆಸಿರುತ್ತಾರೆ. ಪಾಕಿಸ್ತಾನದ ಗೌರ್ನರ್ ಜನರಲ್ ಮತ್ತು ಗಫಾರ್ ಖಾನರ ಭೇಟಿಯೂ ಸಹ ಸಂಭವವಿದೆ ... ಆಗಲಿದೆ

ನಗರದ ಕೊಳಕು ಪ್ರದೇಶಗಳನ್ನು ಅಚ್ಚುಕಟ್ಟು ಮಾಡುವುದು

ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೩

ಪುರಸಭೆಯಲ್ಲಿ ಮುಂದುವರಿದ ಅಧಿವೇಶನವು ನೆನ್ನೆ ಮಧ್ಯಾಹ್ನ ಶ್ರೀ ಕ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು

ದಸರಾ ವಸ್ತು ಪ್ರದರ್ಶನದ ಸಮಿತಿಗೆ ಹೆಚ್ಚು ಜನ ಪೌರಸಭಾ ಸದಸ್ಯರನ್ನು ಸೇರಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲು ಶ್ರೀ ಎಂ ಎಲ್. ತಿಮ್ಮಯ್ಯನವರು ತಂದ ನಿರ್ಣಯವನ್ನು ಡಾ|| ಬಿ ಜಿ ಧಾರ್‌ರವರು ಅನುಮೋದಿಸಿದರು ಈ ನಿರ್ಣಯವು ಪುರಸಭೆಯ ಕಾರ್ಯಕ್ಷೇತ್ರದ ವ್ಯಾಪ್ತಿಗೆ ಒಳಪಡುವುದಿಲ್ಲವಾದುದರಿಂದ ಅಕ್ರಮವೆಂದು ಶ್ರೀ ಎಸ್ ಲಿಂಗಣ್ಣನವರು ಒಂದು ಕ್ರಿಯಾಲೋಪವನ್ನು ಎತ್ತಿದರು ಶ್ರೀಗಳಾದ ಬಿ ಕೆ ರಾಮಕೃಷ್ಣಯ್ಯ ಮತ್ತು ಆರ್ ಸೋಮಸುಂದರವರುಗಳು ಮಾತನಾಡಿ ನಿರ್ಣಯವು ಪುರಸಭೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದೆಂದು ವಾದಿಸಿದರು ಕೊನೆಯಲ್ಲಿ ಅಧ್ಯಕ್ಷರು ಲಿಂಗಣ್ಣನವರ ಕ್ರಿಯಾಲೋಪವನ್ನು ಎತ್ತಿ ಹಿಡಿದು ನಿರ್ಣಯವನ್ನು ತಳ್ಳಿಹಾಕಿದರು

ನಗರದಲ್ಲಿ ಪುರಸಭೆಯ ವರ ಒಂದು ಈಜುವ ಕೊಳವನ್ನು ಕಟ್ಟಬೇಕೆಂಬ ಶ್ರೀ ಎಂ ಎಲ್ ತಿಮ್ಮಯ್ಯನವರ ನಿರ್ಣಯವನ್ನು ಶ್ರೀ ಹೆಚ್ ಎಲ್. ಪುಟ್ಟಯ್ಯನವರು ಅನುಮೋದಿಸಿದರು ನಗರದಲ್ಲಿ ಏರ್ಪಡಿಸಿರುವ ಈಜುವ ಕೊಳವನ್ನು ಅಭಿವೃದ್ಧಿಪಡಿಸುವುದು ಸಾಧ್ಯವೆಂದು ಶ್ರೀ ಎಸ್ ಲಿಂಗಣ್ಣನವರು ಸೂಚಿಸಿದರು ನಗರದಲ್ಲಿ ನೀರಿನ ಅಭಾವವೂ ಇರುವುದರಿಂದ ಹೊಸದಾದ ಕೊಳಗಳನ್ನು ಕಟ್ಟುವುದು ಸೂಕ್ತವಲ್ಲವೆಂದು ಅಧ್ಯಕ್ಷರು ತಿಳಿಸಿದರಿಂದ ಸದಸ್ಯರು ವಾಪಸು ಪಡೆದರು

ನಗರದಲ್ಲಿ ಒಂದು ಯೋಗಾಭ್ಯಾಸ ಶಿಕ್ಷಣದ ಶಾಲೆಯನ್ನು ಪುರಸಭೆಯ ವರು ಸ್ಥಾಪಿಸಬೇಕೆಂದು ಡಾ|| ಬಿ ಜಿ ಧಾರ್‌ರವರು ತಂದ ನಿರ್ಣಯವನ್ನು ಶ್ರೀ ಎಂ ಎಲ್ ತಿಮ್ಮಯ್ಯನವರು ಅನುಮೋದಿಸಿದರು ಶ್ರೀ ಎಸ್ ಲಿಂಗಣ್ಣ ಶ್ರೀ ಜಿ ಎಸ್ ರಾಮಕೃಷ್ಣಯ್ಯ ಮತ್ತು ಶ್ರೀ ಎ ಕೃಷ್ಣಮೂರ್ತಿರಾಯರು ಪಾಸ್ ಮಾಡಿ ಪುರಸಭೆಯು ಸ್ವತಃ ಅದನ್ನು ನಡೆಸುವುದಕ್ಕಿಂತ ಶಾಲೆಗಳನ್ನು ನಡೆಸಲು ಮುಂದೆ ಬರುವವರಿಗೆ ಸಹಾಯ ನೀಡುವುದು ಉತ್ತಮವೆಂದು ಹೇಳಿ ನಿರ್ಣಯವನ್ನು ವಿರೋಧಿಸಿದರು ನಿರ್ಣಯವನ್ನು ಓಟಿಗೆ ಹಾಕಿದಾಗ ೧೩ ಪರವಾಗಿ ಮತ್ತು ೧೪ ವಿರುದ್ಧವಾಗಿ ಮತಗಳು ಬಂದು ಅದು ಬಿದ್ದುಹೋಯಿತು

ನಗರದಲ್ಲಿರುವ ಕೊಳಕು ಪ್ರದೇಶಗಳ ನಿರ್ಮೂಲೀಕರಣ ಮಾಡಿ, ಅಲ್ಲಿರುವ ಬಡವರಿಗೆ ಬೇರೆ ಕಡೆ ಗೃಹ ವಸತಿಯನ್ನು ಏರ್ಪಡಿಸಿಕೊಡಬೇಕೆಂದು ಪ್ರಾರ್ಥಿಸಿ, ರಿ|| ಫಾ|| ಅಡಿಯೊರವರು ತಂದಿದ್ದ ನಿರ್ಣಯವನ್ನು ಶ್ರೀ ಕುಟ್ಟಿನೋರವರು ಅನುಮೋದಿಸಿದರು ಇದಕ್ಕಾಗಿ ಆಗುವ ಖರ್ಚುವೆಚ್ಚಗಳನ್ನು ಪರಿಶೀಲಿಸಿ ಕಾರ್ಯಕ್ರಮ ಕೈಗೊಳ್ಳುವ ಸಲುವಾಗಿ ಮ್ಯಾನೇಜಿಂಗ್ ಸಮಿತಿಗೆ ಒಪ್ಪಿಸಬೇಕೆಂದು ತೀರ್ಮಾನಿಸಲಾಯಿತು

ಅನಂತರ ಶ್ರೀ ಎಂ ಕೆ ಲಿಂಗಣ್ಣ ಮತ್ತು ಸೇತೂರಾಮರಾವರು ಭಿಕ್ಷುಕರ ಪರಿಹಾರ ಸಮಿತಿಗೂ, ಶ್ರೀಗಳಾದ ಎ ಕೃಷ್ಣಮೂರ್ತಿರಾವ್ ತೋಗಿ ಸಿದ್ದಯ್ಯ ಮತ್ತು ಕೆಂಗೇಗೌಡರು ಕಂಟಿ ಅಣ್ಣಯ್ಯ ಪಂಡಿತರ ಛತ್ರದ ಸಮಿತಿಗೂ ಮತ್ತು ಶ್ರೀಗಳಾದ ಬಿ ಎಲ್ ರಾಮಸ್ವಾಮಿ ಶೆಟ್ಟಿ ಮತ್ತು ಜಿ ಎಸ್ ರಾಮಕೃಷ್ಣಯ್ಯನವರು ನಗರದ ಎಕ್ಸೈಸ್ ಲೈಸೆನ್ಸ್ ಬೋರ್ಡಿಗೂ ಚುನಾಯಿತರಾದರು

ಹಿಂದಿ ಪರೀಕ್ಷೆಗಳು

ವಾಣೀವಿಲಾಸ ಮೊಹಲ್ಲಾದ ಮಹಾಜನ ವಿದ್ಯಾಪೀಠದಲ್ಲಿ, ಬರುವ ಆಗಸ್ಟ್ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿವಿಧ ಪರೀಕ್ಷೆಗಳಿಗೆ ಕೂಡಲಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಿಂದೀ ವರ್ಗಗಳು [illegible]

ದಹಲಿಯಿಂದ ೧೭ ಕಛೇರಿಗಳ ವರ್ಗಾವಣೆ

ದೆಹಲಿಯಿಂದ ೧೭ ಕಛೇರಿಗಳನ್ನು ಬೇರೆ ಕಡೆಗೆ ವರ್ಗಾಯಿಸಲು ಭಾರತ ಸರ್ಕಾರದವರು ಆಲೋಚಿಸಿರುತ್ತಾರೆ ಸರ್ಕಾರಕ್ಕೆ ನೇರವಾಗಿ ಸಂಬಂಧಪಡದಿರುವ ಕಛೇರಿಗಳನ್ನು ವರ್ಗ ಮಾಡಲಾಗುವುದು

ಓಟುದಾರರ ಪಟ್ಟಿಯ ಪುನರ್ವಿಮರ್ಶೆ

ಪ್ರಕೃತ ಸಾಲಿನಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿರುವ ಎಲ್ಲಾ ಶಾಸನ ಸಭಾ ಮತ್ತು ಪಾರ್ಲಿಮೆಂಟರಿ ಸ್ಥಾನಗಳ ಕ್ಷೇತ್ರಗಳಲ್ಲೂ ಓಟರುಗಳ ಪಟ್ಟಿಯನ್ನು ಪುನರ್ವಿಮರ್ಶೆ ನಡೆಸುವಂತೆ ಸರ್ಕಾರದ ಆಜ್ಞೆಯಾಗಿದೆ ಮೈಸೂರು ನಗರ ಮತ್ತು ಎರಡೂ ಜಿಲ್ಲೆಗಳ ಟೌನ್ ಮುನಿಸಿಪಾಲಿಟಿ ಕ್ಷೇತ್ರಗಳಲ್ಲೂ ಪಟ್ಟಿಯನ್ನು ತಯಾರಿಸುವಂತೆ ಸೂಚಿಸಲಾಗಿದೆ

ಜಿಲ್ಲಾ ಬೋರ್ಡ್ ಆಸ್ಪತ್ರೆಯ ಪ್ರಾರಂಭ

ಕಳೆದ ತಿಂಗಳು ೧೫ ನೇ ತಾ|| ನಂಜನಗೂಡು ತಾಲ್ಲೂಕು ತಾಂಡವಪುರದಲ್ಲಿ ಜಿಲ್ಲಾ ಬೋರ್ಡಿನ ಆಸ್ಪತ್ರೆಯು ಆರಂಭಗೊಳಿಸಲ್ಪಟ್ಟಿತು ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಕೆಂಪನಂಜಪ್ಪನವರಿಂದ ಸ್ವಾಗತ ಭಾಷಣ ಶ್ರೀ ಹಜ್ಜಿಗೆ ಲಿಂಗಣ್ಣ ಮತ್ತು ತಾಲ್ಲೂಕು ಮುಖಂಡರ ಭಾಷಣಗಳು ನಂತರ ಅಧ್ಯಕ್ಷರ ಹಳ್ಳಿಗರಲ್ಲಿ ರೋಗಗಳನ್ನು ತಡೆಗಟ್ಟಲು ಆಸ್ಪತ್ರೆಯ ಸಹಾಯವಾಗಲೆಂದು ಹಾರೈಸಿದರು ಶ್ರೀ ಕೆ ಕೆಂಪನಂಜಪ್ಪನವರು ವಂದನಾರ್ಪಣೆ ಮಾಡಿದ ನಂತರ ಶ್ರೀ ಟಿ ಆರ್ ರಂಗಸ್ವಾಮಿಯವರಿಂದ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ದಳ್ಳಾಳಿ ದೀಕ್ಷಿತ್

ದಳ್ಳಾಳಿ ದೀಕ್ಷಿತ್ ಎಂಬುದು ಗುಂಡೂ ದೀಕ್ಷಿತ್ ಗುಂಡುಮಂತ್ರ ಎಂಬ ಪ್ರಹಸನ ಪುಸ್ತಕದ ಕೃತಿಯೊಂದು ನಮಗೆ ಬಂದಿದೆ ಹಣ ಸಂಪಾದನೆಯೇ ನಮ್ಮ ಉದ್ದೇಶವಾಗಬೇಕೆಂಬ ನ್ಯಾಯವನ್ನು ಮರೆತು ಕೊನೆಗೆ ಅನನುಭವಿಯಾದ ಪರಿಣಾಮವನ್ನು ಕಂಡ ಕತೆ ಅದರಲ್ಲಿ ನಿರೂಪಿತವಾಗಿದೆ ಸಮಾಜದಲ್ಲಿ ಕಾಣಬರುವ ಹಲವು ರೋಗದೋಷಗಳನ್ನು ಚಿತ್ರಿಸುವುದೇ ಈ ಪುಸ್ತಕದ ಗುರಿಯಾಗಿದೆ ಇದರ ಗ್ರಂಥಕರ್ತರು ಶ್ರೀ ಎಲ್ ಎಸ್ ಚಕ್ರವರ್ತಿಯವರು ಇದು ಅವರ ಮೊದಲನೆಯ ನಾಟಕ. ನಂಜನಗೂಡಿನ ಇಂದಿರಾ ಸಾಹಿತ್ಯ ಮಾಲೆಯವರು ಇದನ್ನು ಪ್ರಕಟಿಸಿರುತ್ತಾರೆ ಬೆಲೆ ೯ ಆಣೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಬಿಟ್ಟೀಲು ೭ ೩೦ ಬಿ ಕೆ ಸಾಗ ಲಕ್ಷ್ಮಿ ದೇವರ ನಾಮ ಮಧ್ಯಾಹ್ನ ೧–೩೦ ಭಕ್ತಾ [illegible] ೧–೫೦ ಸಮಾಚಾರ [illegible] ೬ ಬಾಲ ಜಗತ್–ಮಕ್ಕಳ ಕಾರ್ಯಕ್ರಮ ಸಂಜೆ ೫ ೪೦ ಬಿ ಕೆ ರ ಜಲಕ್ಷ್ಮಿ ಸಂಗೀತ ೬ ಹಿಂದಿ ಪಾಠ ೬–೧೫ ಆರ್ ಸಿ ನಾಗರತ್ನ ಕನ್ನಡ ಗೀತೆಗಳು ೬–೫ ಲಿಕಾಯರ್ ನಾಗಸ್ವರ ೬–೪೦ ಬಿ ಸಿ ಟಿ ವಾಸ್ವಿಕೇಶರ ಬಗ್ಗೆ ಭಾಷಣ ಎ ಜಿ ಆರ್ ಗಣೇಶ ಹಯಗ್ರೀವ ಮೂರ್ತಿ ಕಥಾ ಕಾಲಕ್ಷೇಪ ೮–೩೦ ಪ್ರಥಮ ಸಿಗರೆಂಬ ಭರತ ನಾಟ್ಯ ಸಂಘದ ಆರಂಭದ ವಿವರ (ಪುನಃಪ್ರಸಾರ) ೯–೧೫ ಮಂಗಳ ವಾದ್ಯ ಕಛೇರಿ ೯–೪೦ ರಾಷ್ಟ್ರೀಯ ಕಾರ್ಯಕ್ರಮ

ಬೇಕಾಗಿದ್ದಾರೆ

ನಮ್ಮ ಕಲಾ ಪ್ರಪಂಚ ಎಂಬ ಸಚಿತ್ರ ಮಾಸ ಪತ್ರಿಕೆಯು 26 3 54 ನೇ ತಾರೀಖು ಹೊರ ಬೀಳಲಿದೆ ಇದಕ್ಕೆ ಸಂಸ್ಥಾನದಾದ್ಯಂತ ಏಜಂಟರುಗಳು ಸುದ್ದಿಗಾರರು ಮತ್ತು ಚಂದಾದಾರರು ಬೇಕಾಗಿದ್ದಾರೆ

ಉತ್ತಮ ಕಥೆ ನಾಟಕಗಳನ್ನು ಕಳುಹಿಸುವವರಿಗೆ ಬಹುಮಾನ ಕೊಡಲಾಗುತ್ತೆ ವಿವರಗಳಿಗೆ ಎರಡು ಆಣೆ (0 2-0) ಸ್ಟಾಂಪಿನೊಂದಿಗೆ, ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

Editor, "KALA PRAPANCHA"
No 214 Sree Rama Street,
Old Agrahar Mysore

Edited, Printed and Published by A R Nagarajan at Sadhvi Press D Subbiah Road, My-

ಪಿರಿಯಾಪಟ್ಟಣದಲ್ಲಿ ದನಗಳ ಆಸ್ಪತ್ರೆಯ ಆರಂಭೋತ್ಸವ

ನಂದೀಬಸಪ್ಪನವರ ಉದಾರ ದಾನ

ಪಿರಿಯಾಪಟ್ಟಣದಲ್ಲಿ ಕಳೆದ ೨೭ ನೇ ತಾ|| ಪಶು ವೈದ್ಯ ಶಾಲೆಯ ಆರಂಭೋತ್ಸವವು ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು ತಾಲ್ಲೂಕಿನಲ್ಲಿ ಹಿಂದೆ ಅಮಲ್ದಾರರಾಗಿದ್ದ ಶ್ರೀ ಮಲ್ಲೇಗೌಡರು ಆರಂಭೋತ್ಸವವನ್ನು ನೆರವೇರಿಸಿದರು ಈ ಸಂಬಂಧದಲ್ಲಿ ಆಸ್ಪತ್ರೆಯ ನಿರ್ಮಾಣಕ್ಕೆ ಸಹಾಯ ಮಾಡಿದ ಮೈಸೂರಿನ ಶ್ರೀ ಕೆ ನಂದಿಬಸಪ್ಪನವರು ಶ್ರೀ ಚನ್ನಬಸಪ್ಪನವರಿಗೆ ಬಿನ್ನವತ್ತಳೆಯೊಂದನ್ನು ಕೊಟ್ಟರು ಶ್ರೀ ಚನ್ನಬಸಪ್ಪನವರ ಸೇವಾಕಾಂಕ್ಷೆ, ಸಾಹಸ ಮತ್ತು ಮೇಧಾಶಕ್ತಿಯನ್ನು ಅವರು ಪ್ರಶಂಸಿಸಿದ್ದರು

ಶ್ರೀ ಮಲ್ಲೇಗೌಡರಿಗೆ ತಾಲ್ಲೂಕಿನ ಪರವಾಗಿ ಶ್ರೀ ಮಲ್ಲಿಕಾರ್ಜುನಪ್ಪನವರು ಮಾನಪತ್ರವನ್ನು ಒಪ್ಪಿಸಿದರು ಆಸ್ಪತ್ರೆಯ ಕಟ್ಟಡಕ್ಕೆ ಸಹಾಯ ಮಾಡಿದವರನ್ನು ಮಲ್ಲೇಗೌಡರು ಹೊಗಳಿದರು ಶ್ರೀ ಚನ್ನಬಸಪ್ಪನವರು ಭಾಷಣ ಮಾಡಿ ತಾಲ್ಲೂಕಿನ ಧನಿಕರು ಸಾರ್ವಜನಿಕ ಕೆಲಸಗಳಿಗೆ ಮಾಡಿರುವ ಸಹಾಯಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿದರು

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಸಂಘ

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿ ಸಂಘದ ನೂತನ ಅಧಿಕಾರಿ ವರ್ಗದ ಚುನಾವಣೆಯು ನೆನ್ನೆ ನಡೆದು ಶ್ರೀ ಕೆ ನಾರಾಯಣರಾಯರು ಅಧ್ಯಕ್ಷರಾಗಿಯೂ, ಶ್ರೀ ಎ ರಾಮಣ್ಣನವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ ಜಿ ಪ್ರಕಾಶರಯ್ಯನವರು ಖಜಾಂಚಿಗಳಾಗಿಯೂ ಮತ್ತು ಶ್ರೀ ಭಾಸ್ಕರಶೆಟ್ಟರು ಕಾರ್ಯದರ್ಶಿಗಳು ಮತ್ತು ಶ್ರೀಮತಿ ಲಲಿತಾ ಮ್ಯಾಕೇಲ್ ಶ್ರೀಗಳಾದ ಬಿ ಕೆ ಶೆಟ್ಟಿ, ಬಿ ಒಕೃಷ್ಣನಾಯರ್ ಮತ್ತು ಪದ್ಮನಾಭರಾಯರು ಸದಸ್ಯರುಗಳಾಗಿಯೂ ಚುನಾಯಿತರಾದರು

ವಿವಿಧ ವಿನೋದಾವಳಿ

ರಾಜಧಾನಿಯ ಅಕ್ಕನ ಬಳಗದವರು ಈ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಿರುತ್ತಾರೆ ಪೌರಸಭಾ ಕಮಿಷನರರಾದ ಶ್ರೀ ಎಲ್ ಲಕ್ಷ್ಮಣರಾಯರು ಅಧ್ಯಕ್ಷತೆ ವಹಿಸುವರು

ಕಾಂಗ್ರೆಸ್ ಸದಸ್ಯರನ್ನು ಸೇರಿಸಲು ಹೆಚ್ಚು ಅವಧಿ

ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಅವಧಿಯನ್ನು ಮಾರ್ಚಿ ೧೫ರ ವರೆಗೆ ಹೆಚ್ಚಿಸಲಾಗಿದೆಯೆಂದು ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಟಿ ಮರಿಯಪ್ಪನವರು ತಿಳಿಸುತ್ತಾರೆ

ಮೈಸೂರು ಪೇಟೆ ಧಾರಣೆ

ಪಳ್ಳೆ	ರೂ ಆಂ ಪೈ	ರೂ ಗೆ
ಕಡಲೇಕಾಯಿ	೯೯ ೩ ೦	೨೭ ೩ ೦
ಹುಚ್ಚೆಳ್ಳು	೪೩ ೪ ೦	೪೮ ೦ ೦
ಹೊಂಗೇಬೀಜ	೧೮ ೦ ೨	೨೫ ೦ ೦
ಹುಣಸೇಬೀಜ	೧೩ ೦ ೦	
ಹುರುಳಿ	೨೫ ೩ ೦	೨೮ ೮ ೦
ಹರಳಿನ ಬೀಜ	೩೬ ೦ ೦	
ಹುಣಸೇಹಣ್ಣು	೩ ೧೧ ೦	೯ ೫ ೦
ಸೀಗೆಕಾಯಿ	೪ ೬ ೦	೪ ೯ ೦
ಮೆಣಸಿನಕಾಯಿ	೨೪ ೧೦ ೦	
ಬೆಲ್ಲ	೪ ೪ ೦	

೧೦೫ ಲಕ್ಷ ರೂ.ಗಳ ದಾನ

ಕಲ್ಕತ್ತೆಯ ಕಾಭೂಷಣ ಡೇ ಎಂಬ ೮೭ ವರ್ಷದ ವೃದ್ಧನು ಕಳೆದ ೨೮ ನೇ ತಾ|| ತನ್ನ ಹುಟ್ಟಿದ ದಿನದ ಹಬ್ಬದ ಪ್ರಯುಕ್ತ ತನ್ನ ಆಸ್ತಿಯಲ್ಲಿ ಉಳಿದಿದ್ದ ೨ ಲಕ್ಷ ೬೦ ಸಾವಿರ ರೂ ಗಳನ್ನು ಒಂದು ವಿಶೇಷ ಸಮಾರಂಭ ನಡೆಸಿ, ಸಾರ್ವಜನಿಕ ಸಂಸ್ಥೆಗಳಿಗೆ ದಾನ ಮಾಡಿದನು ಇದೂ ಸೇರಿ, ಅವನು ೧೦೫ ೬೦೦ ರೂ ಗಳನ್ನು ದಾನ ಮಾಡಿರುವನು

ಗೃಹಕಲಹಕ್ಕಾಗಿ ಇಡೀ ಸಂಸಾರದ ಕೊಲೆ ಮತ್ತು ಆತ್ಮಹತ್ಯೆ

ತಿರುವನಂತಪುರ ಜಿಲ್ಲೆಯ ಆಲೂರ್ ಹಳ್ಳಿಯ ಸದಾಶಿವನ್ ಎಂಬಾತನು ಗೃಹ ಕಲಹಕ್ಕಾಗಿ ತನ್ನ ಪತ್ನಿ, ಚಿಕ್ಕಮ್ಮ, ೧೨ ವರ್ಷದ ಭಾವ ಮೈದುನ ಮತ್ತು ೧೧ ತಿಂಗಳ ತನ್ನ ಮಗುವನ್ನು ಕೊಂದು, ಅವರ ಕೈಕಾಲುಗಳನ್ನು ಕಟ್ಟಿ, ಕೊನೆಗೆ ತಾನು ಒಂದು ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಒಂದು ಕೋಳು ಕತ್ತರಿಸಲ್ಪಟ್ಟ ತಂದೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ವಿದ್ಯಾವರ್ಧಕ ಪ್ರೌಢಶಾಲಾ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ವಿದ್ಯಾವರ್ಧಕ ಪ್ರೌಢಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ವಸ್ತುಪ್ರದರ್ಶನದ ಸ್ಥಳದಲ್ಲಿ ನೆರವೇರುವುದು ಶಿರಿಯ ಶಾಸಕ ಸಭೆಯ ಅಧ್ಯಕ್ಷರಾದ ಶ್ರೀ ಹೆಚ್ ಸಿದ್ದಯ್ಯನವರು ಅಗ್ರಾಸನ ವಹಿಸುವರು

ರಾಜಕಮಲ್ ಚಿತ್ರಕಲಾ ಮಂದಿರದ ಆರಂಭ

ರಾಜಧಾನಿಯ ಪ್ರಭ ದೇವ್ ಟಾಕೀಸ್ ಬಳಿ ರಿಕ್ಲೆಕ್ಸ್ ಸ್ಟೂಡಿಯೊ ಎಂಬ ಸಂಸ್ಥೆಯು ಕಾರಣಾಂತರದಿಂದ ಮುಚ್ಚಲ್ಪಟ್ಟಿದ್ದು, ಕಳೆದ ೯ ನೇ ತಾ|| ನಿಂದ ಶ್ರೀ ರಾಜಕಮಲ್ ಚಿತ್ರಕಲಾ ಮಂದಿರ ಎಂಬ ಹೆಸರಿನಲ್ಲಿ ಪುನರಾರಂಭವಾಗಿದೆ ಈ ಬಗ್ಗೆ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಪೌರಸಭಾ ಸದಸ್ಯರಾದ ಶ್ರೀ ಎಂ ಸಿ ಮಹದೇವಸ್ವಾಮಿಯವರು ವಹಿಸಿದ್ದರು. ಕನ್ಯಾ ಬಾಲಿಕೆಯಿಂದ ಪ್ರಾರ್ಥನೆ, ಶ್ರೀ ಜಿ ಎಸ್ ಪರಮಶಿವಯ್ಯನವರಿಂದ ಸ್ವಾಗತ ಭಾಷಣವೂ, ಸಂಗೀತದ ಡೈರೆಕ್ಟರಾದ ಶ್ರೀ ಬಾಲಚಂದರ್‌ರವರಿಂದ ಗಾಯನವೂ ಏರ್ಪಾಡಾಗಿದ್ದುವು ಅಧ್ಯಕ್ಷರು ಭಾಷಣ ಮಾಡಿ ಸಂಸ್ಥೆಗೆ ಯಶಸ್ಸನ್ನು ಕೋರಿದರು

SRI GANESHA
TALKIES
From 6-3-54 For 4 Days
RETURN OF THE CORSICAN BROTHERS
(In the Tradition of Alexander Dumas)
Sequel to the Famous
CORSICAN BROTHERS
Featuring - Richard Greene and Paula Raymond
Supported by Dona Drake and Raymond Burr

ABID'S LONG-AWAITED
GRAND OUT-RIGHT AUCTION SALE
On SUNDAY the 7th MARCH '54 AT 10 A M
AT SHOW-ROOMS
FURNITURE & HOUSEHOLD EFFECTS consisting of Spring cushioned Sofa Suites Bedroom Sofa spring cushioned easy chair & arm chairs T W Double door Almirah Show counters Teapoys UNDERWOOD TYPEWRITER Office wall clocks, Writing Tables, R W & T W Single & Double cots Glass door Book case TAILOR'S Cutting Table, H M V portable Gramaphone Records, H M V 6 Valves band spread Radio in working order, PETROMAX LIGHT Door and Window frames TENTS many other useful articles
INSPECTION on SATURDAY the 6th March Between 3 & 6 P M
TERMS — SPOT CASH

ಟೆಲಿಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ದಿ.
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE SATURDAY 6-3-1954 : ಮೈಸೂರು : ಶನಿವಾರ ೬-೩-೧೯೫೪ [ಸಂಚಿಕೆ ೫೪

ಸಂಸ್ಥಾನದ ಆಯವ್ಯಯದಲ್ಲಿ ೩ ಕೋಟಿ ೯ ಲಕ್ಷ ಖೋತಾ

ಹಿರಿಯ ಶಾಸನ ಸಭೆಗೆ ೧೨ ಜನರ ಸ್ಪರ್ಧೆ

ಬೆಂಗಳೂರು ೬

ಸಂಸ್ಥಾನದ ಕಿರಿಯ ಶಾಸನ ಸಭೆಯಿಂದ ಹಿರಿಯ ಸಭೆಗೆ ಆರಿಸಲ್ಪಡುವ ೫ ಸದಸ್ಯರುಗಳ ಚುನಾವಣೆ ಸಂಬಂಧವಾಗಿ ನೆನ್ನೆ ೧೨ ಜನರು ನಾಮಪತ್ರಗಳನ್ನು ಸಲ್ಲಿಸಿದರು. ಕಾಂಗ್ರೆಸ್ಸಿನ ಪರವಾಗಿ ಶ್ರೀಗಳಾದ ಮಹಮದ್ ವೆಲ್ಲೂರಿ, ಎಲ್ ಹೆಚ್ ತಿಮ್ಮಬೋವಿ, ಮರಿಸ್ವಾಮಯ್ಯ, ವಡ ಪಾಟೀಲ್, ಟಿ ಸಿ ಬ್ರಹ್ಮಯ್ಯ ಮತ್ತು ಮಲ್ಲೇಗೌಡರೂ ಸ್ವತಂತ್ರವಾಗಿ ಶ್ರೀಗಳಾದ ಜಿ ಮರುಳಪ್ಪ, ಆರ್ ಸಿ ಕೇಶವಣ್ಣ, ಬಿ ಟಿ ರಾಮಯ್ಯ, ಸದಾಶಿವರಾವ್, ಬಿ ಕೆ ಪುಟ್ಟರಾಮಯ್ಯ, ಎಸ್ ಎಂ ಸಿದ್ದಯ್ಯ ಮತ್ತು ಸಂಜೀವರೆಡ್ಡಿಯವರೂ ಸ್ಪರ್ಧಿಸಿರುವರು. ೨೨ನೇ ತಾ॥ ಚುನಾವಣೆಯಾದೆ.

ಸೋಮವಾರ ನೀರು ಸರಬರಾಜು ಇಲ್ಲ

ಬೆಳಗುಳ ಪಂಪಿಂಗ್ ಸ್ಟೇಷನ್ನಿಗೆ ನೀರನ್ನು ಒದಗಿಸುವ ದೇವರಾಯ ನಾಲೆಯ ಪಾತ್ರವನ್ನು ಸ್ವಚ್ಛ ಹಸ್ತಿರ ಚೆಕ್ಕಟ ಮಾಡುವುದರಿಂದ ಸೋಮವಾರ ಬೆಳಗ್ಗೆ ೮ ಘಂಟೆಯಿಂದ ಸಂಜೆ ೮ ಘಂಟೆಯವರೆಗೆ ನಗರಕ್ಕೆ ನೀರಿನ ಸರಬರಾಜು ಮಾಡಲು ಅವಕಾಶವಿಲ್ಲವಾಗಿ ಪುರಜನರು ಈ ಬಗ್ಗೆ ಹಿಂದಿನ ದಿವಸ ಅ ದರೆ ೭-೩-೫೪ ನೇ ಭಾನುವಾರವೇ ಮುಂಜಾಗ್ರತೆಯಿಂದ ತಮಗೆ ಬೇಕಾಗುವ ನೀರನ್ನು ಶೇಖರಿಸಿಕೊಳ್ಳಬೇಕಾಗಿ ರಾಜಧಾನಿಯ ಪೌರಸಭಾ ಕಮೀಷನರರು ಪ್ರಾರ್ಥಿಸಿರುತ್ತಾರೆ.

ಬೆಂಗಳೂರಿನಲ್ಲಿ ರೇಡಿಯೋ ಕೇಂದ್ರದ ಸ್ಥಾಪನೆಗಾಗಿ ಏರ್ಪಾಟು

ಬೆಂಗಳೂರು ಪ್ರದೇಶದಲ್ಲಿ ಕೇಂದ್ರ ಸರ್ಕಾರದವರು ಏರ್ಪಡಿಸಲಿರುವ ಅಖಿಲ ಭಾರತ ರೇಡಿಯೋ ಕೇಂದ್ರಕ್ಕಾಗಿ, ಹೊಸಕೋಟೆ ಮತ್ತು ಅವಲ ಹಳ್ಳಿಯಲ್ಲಿ ಹಲವು ಜಮೀನುಗಳನ್ನು ವಶಪಡಿಸಿಕೊಳ್ಳುವಂತೆ ಮೈಸೂರು ಸರ್ಕಾರದವರು ಲಕ್ಷ್ಯ ಮಾಡಿರುತ್ತಾರೆ. ಅಲ್ಲಿ ರೇಡಿಯೋ ರಿಸೀವಿಂಗ್ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ. ಬೆಂಗಳೂರು ಕೇಂದ್ರವು ಕೆಲಸ ಮಾಡಲು ಆರಂಭಿಸಿದನಂತರ ಮೈಸೂರಿನಲ್ಲಿರುವ ರೇಡಿಯೋವನ್ನು ಮುಚ್ಚಲಾಗುವುದು.

ಕಳ್ಳತನಕ್ಕಾಗಿ ಬರೆ ಹಾಕಿದ ಪ್ರಸಂಗ

ಭವಾನಿಯ ದೊರೆಸ್ವಾಮಿ ಚೆಟ್ಟಿಯಾರ್ ಅವರ ಪತ್ನಿ ರುಕ್ಮಿಣಿ ಅಮ್ಮಾಳ್ ಮತ್ತು ಮಗ ಜಗನ್ನಾಥ ಎಂಬುವರನ್ನು ವೇಣುಗೋಪಾಲ ಎಂಬ ೧೧ ವರ್ಷದ ಹುಡುಗನಿಗೆ ಬರೆ ಹಾಕಿದ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ. ಬಾಲಕನು ಅವರ ಮನೆಯಿಂದ ಹಾದಿಯನ್ನು ಕದ್ದುಕೊಂಡು ಹೋಗುತ್ತಿದ್ದಾಗ ಸಿಕ್ಕಿಬಿದ್ದನೆಂದೂ, ದೊಡ್ಡ ಕಬ್ಬಿಣದ ಸಲಾಕೆಯನ್ನು ಕೆಂಪಗೆ ಕಾಯಿಸಿ ಅವನಿಗೆ ಬರೆ ಹಾಕಲಾಯಿತೆಂದೂ ಹೇಳಲಾಗಿದೆ. ಆಪಾದಿತರನ್ನು ಜಾಮೀನು ಮೇಲೆ ಬಿಡಲಾಗಿದೆ.

ಶಾಲಾ ದಿನಾಚರಣೆ

ರಾಜಧಾನಿಯ ಶಾರದಾ ವಿಲಾಸ ಹೈಸ್ಕೂಲಿಗೆ ಸೇರಿದ ಕಮ್ಮರ್ಷಿಯಲ್ ಶಾಲೆಯ ದಿನಾಚರಣೆಯು ನಾಳೆ ಸಂಜೆ ೫ ಗಂಟೆಗೆ ಇನ್‌ಸ್ಟಿಟ್ಯೂಟಿನ ಭವನದಲ್ಲಿ ನೆರವೇರುವುದು. ಪ್ರೊಫೆಸರ್ ಎಂ ವಿ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು.

ಸಂಸ್ಥಾನದ ಆಯವ್ಯಯದಲ್ಲಿ ೩,೦೯ ೩೩ ಲಕ್ಷ ಖೋತಾ

ಹೊಸ ತೆರಿಗೆಗಳನ್ನು ವಿಧಿಸಲು ಸೂಚನೆ

ಸ್ವಂ ಪು ಪ್ರೋ॥] ಬೆಂಗಳೂರು ೬

ಈ ದಿನ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ೧೯೫೪-೫೫ ನೇ ಸಾಲಿನ ಆಯ ವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸಿ, ೩ ಕೋಟಿ ೯ ಲಕ್ಷದ ೩೩ ಸಾವಿರ ರೂ ಖೋತಾ ಬೀಳ ಬಹುದಾಗಿ ತಿಳಿಸಿದರು. ಆದಾಯವು ೩೯ ೩೧ ೪೩,೦೦೦ ರೂ ವೆಚ್ಚವು ೪೪ ೩೦ ೭೬ ೦೦೦ ರೂ ಆಗುವ ನಿರೀಕ್ಷೆಯಿರುವುದಾಗಿ ಅವರು ಹೇಳಿದರು.

ಅವರು ೯೦ ನಿಮಿಷಗಳ ಕಾಲ ಭಾಷಣ ಮಾಡಿದರು. ಖೋತಾವನ್ನು ಕಡಿಮೆ ಮಾಡಲು ಹೊಸ ತೆರಿಗೆಗಳನ್ನು ಹಾಕಬೇಕೆಂದೂ ರಾಷ್ಟ್ರಾಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಿರುವುದರಿಂದ ಹೆಚ್ಚು ಖೋತಾ ಬೀಳುವುದಾಗಿಯೂ ಅವರು ಹೇಳಿದರು.

ಭೂಕಂದಾಯದ ಮೇಲೆ ೯ ೯ ಚಾರ್ಜನ್ನು ಖುಷ್ಕಿಗೆ ಬೆಳೆ ರೂ॥ ೧೦ ಕ್ಕೆ, ೩ ಬಗೆ ತರಿ ಭೂಮಿ ಮತ್ತು ಬಾಗಾಯಿತು ಬೆಳೆಗೆ ಕೀಳ ೬೬ ೨/೩ರಂತೆ ಹಾಕಲಾಗುವುದು. ಕಾಫಿ, ಏಲಕ್ಕಿ ಮುಂತಾದುವುಗಳ ಮೇಲೆ ರೂ॥ ೧೦ ರಷ್ಟು ತೆರಿಗೆಯನ್ನು ಹೆಚ್ಚಿಸಲಾಗುವುದು. ನೀರು ಸರಬರಾಜು ರೂ॥ ೫೦ ರಷ್ಟು ಹೆಚ್ಚಿಸುವುದು. ವಿದ್ಯುಚ್ಛಕ್ತಿ ದರವನ್ನು ರೂ॥ ೧೦ ರಿಂದ ೨೦ ರಷ್ಟು ಹೆಚ್ಚಿಸಲಾಗುವುದು. ನೀರಾವರಿ ವಿದ್ಯುಚ್ಛಕ್ತಿ ದರವನ್ನು ಆಹಾರದ ಬೆಳೆಗೆ ೯ ಕಾಸಿನಂತೆಯೂ ಇತರ ಬೆಳೆಗೆ ೧॥ ಆಣೆಯಂತೆಯೂ ಹೆಚ್ಚಿಸುವುದು, ಹೊಟೇಲುಗಳ ಒಟ್ಟು ವ್ಯಾಪಾರದ ಮೇಲೆ ೭॥ ಸಾವಿರಕ್ಕಿಂತಲೂ ಹೆಚ್ಚಿದ್ದರೆ ಶೇಕಡ ೧೦॥ಯಂತೆ ಮಾರಾಟ ತೆರಿಗೆಯನ್ನು ವಿಧಿಸುವುದು, ಗಿರಣಿ ಮತ್ತು ವಿದ್ಯುಚ್ಛಕ್ತಿ ಮಗ್ಗದ ಬಟ್ಟೆಗೆ, ಒರಟು ಬಟ್ಟೆ ವಿನಹ, ರೂ ೧ ಗೆ ೩ ಕಾಸಿನಂತೆ ಒಂದೇ ಘಟ್ಟದಲ್ಲಿ ಮಾರಾಟ ತೆರಿಗೆ ಹಾಕುವುದು, ಸ್ಟಾಂಪು ದರ ಹೆಚ್ಚಿಸುವುದು—ಈ ರೀತಿ ತೆರಿಗೆಗಳನ್ನು ಹಾಕಲಾಗುವುದೆಂದು ಮುಖ್ಯ ಮಂತ್ರಿಯವರು ತಿಳಿಸಿದರು.

ಎರಡನೇ ಪಂಚ ವಾರ್ಷಿಕ ಯೋಜನೆಯ ಕೆಲಸಗಳಿಗಾಗಿ ೩ ಲಕ್ಷ ರೂ ಸಾಲವನ್ನು ಎತ್ತಲಾಗುವುದೆಂದೂ ಅವರು ಹೇಳಿದರು.

ಪಾನ ನಿರೋಧವನ್ನು ಮಿಕ್ಕ ಜಿಲ್ಲೆಗಳಲ್ಲಿ ಜಾರಿಗೆ ತಂದರೆ ೧೧೦ ಲಕ್ಷ ರೂ ನಷ್ಟವಾಗುವುದೆಂದೂ, ಇನ್ನು ಕೆಲವು ತಾಲ್ಲೂಕುಗಳಿಗೆ ಪಾನ ನಿರೋಧವನ್ನು ಅನ್ವಯಿಸಲಾಗುವುದಲ್ಲದೆ, ಈಗ ಜಾರಿಯಲ್ಲಿರುವ ಕಡೆಗಳಲ್ಲಿ ಕಟ್ಟುನಿಟ್ಟಾಗಿ ಪಾನ ನಿರೋಧವನ್ನು ಆಚರಣೆಗೆ ತರಲು ಏರ್ಪಾಡು ಮಾಡಲಾಗುವುದೆಂದೂ ಅವರು ನುಡಿದರು.

ಹೊಸ ತೆರಿಗೆಗಳಿಂದ ಸರ್ಕಾರಕ್ಕೆ ೧ ಕೋಟಿ ರೂ ವರಮಾನ ಬರುವ ನಿರೀಕ್ಷೆ ಇದೆ.

ಬೊಂಬಾಯಿ ಸರ್ಕಾರಿ ಕಾಲೇಜುಗಳಲ್ಲಿ ಹಿಂದಿ ಮಾಧ್ಯಮ

ಬೊಂಬಾಯಿಯ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲೂ ಹೊಸ ವರ್ಷದಿಂದ ಮೊದಲನೆ ತರಗತಿಗಳಲ್ಲಿ ಹಿಂದಿಯನ್ನು ಮಾಧ್ಯಮವಾಗಿ ಜಾರಿಗೆ ತರಲು ಅಲ್ಲಿನ ಸರ್ಕಾರದವರು ಆಲೋಚಿಸುತ್ತಿದ್ದಾರೆ.

ಡ್ರೇಟರ್ ಕೊಲೆ ಅಪಾದಿತನಿಗೆ ಮರಣ ದಂಡನೆ

ಸ್ವಂ ಪು ಪ್ರೋ॥] ಬೆಂಗಳೂರು ೬

ಇಲ್ಲಿನ ಬಿಷಪ್ ಕಾಟನ್ ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಎನಿಡ್ ಡ್ರೇಟರರವರನ್ನು ಕಳೆದ ವರ್ಷ ಕೊಲೆ ಮಾಡಿದನೆಂದು ಜೋಕರ್ ಜೋಸೆಫ್ ಉರುಫ್ ಕುಪ್ಪುಸ್ವಾಮಿ ಎಂಬುವನಿಗೆ ಈ ದಿನ ಇಲ್ಲಿನ ಸೆಷನ್ಸ್ ನ್ಯಾಯಾಧೀಶರು ಮರಣ ದಂಡನೆಯನ್ನು ವಿಧಿಸಿದರು. ದರೋಡೆಗಾಗಿ ೧೪ ವರ್ಷ ಮನೆಗೆ ಕಳ್ಳತನದಲ್ಲಿ ನುಗ್ಗಿದುದಕ್ಕಾಗಿ ೧೦ ವರ್ಷ ಕಠಿಣ ಸಜಾವನ್ನು ವಿಧಿಸಿ, ಅವೆಲ್ಲವನ್ನೂ ಏಕ ಕಾಲದಲ್ಲಿ ಅನುಭವಿಸುವಂತೆ ನ್ಯಾಯಾಧೀಶರು ಆಜ್ಞೆ ಮಾಡಿದರು. ಈ ಆಜ್ಞೆಗಳು ಹೈಕೋರ್ಟಿನ ಕನ್ಫರ್‌ಮೇಷನ್ನಿಗೆ ಒಳಪಟ್ಟಿರುವುದಾಗಿಯೂ ನ್ಯಾಯಾಧೀಶರು ತಿಳಿಸಿದರು.

ಮಾರಾಟ ತೆರಿಗೆ ಬಗ್ಗೆ ಹೊಸ ಶಾಸನ

ಮಾರಾಟ ತೆರಿಗೆ ಸಲಹಾ ಸಮಿತಿಯವರು ಕೊಟ್ಟ ವರದಿಯ ಶಿಫಾರಸುಗಳನ್ನು ಸರ್ಕಾರದವರು ಅಂಗೀಕರಿಸಿ ಆ ಮೇರೆಗೆ ಈಗಿನ ಶಾಸನ ಸಭಾಧಿವೇಶನದಲ್ಲೇ ಮಸೂದೆಯೊಂದನ್ನು ಮಂಡಿಸಲಿರುವರು.

ಬಳ್ಳಾರಿ ಡಿ ಐ ಜಿ ಯಾಗಿ ಚಂಡಿಯವರ ವರ್ಗ

ಬೆಂಗಳೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಚಾಂಡಿಯವರನ್ನು ಬಳ್ಳಾರಿ ಜಿಲ್ಲೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸರಾಗಿ ವರ್ಗಾಯಿಸಲಾಗಿದೆ.

ಭಾರತದಲ್ಲೆಲ್ಲಾ ಚಕ್ರಬಂಧ ಸ್ಪರ್ಧೆಗಳ ರದ್ದು

ಭಾರತದಲ್ಲೆಲ್ಲಾ ಎಲ್ಲಾ ಚಕ್ರಬಂಧ ಸ್ಪರ್ಧೆಗಳನ್ನೂ ನಿಷೇಧಿಸುವ ಮಸೂದೆಯನ್ನು ಪಾರ್ಲಿಮೆಂಟಿನ ಮುಂದಿನ ಅಧಿವೇಶನದಲ್ಲಿ ತರುವ ವಿಷಯವನ್ನು ಸರ್ಕಾರದವರು ಆಲೋಚಿಸುತ್ತಿರುವರೆಂದೂ, ಈ ಬಗ್ಗೆ ಶೀಘ್ರ ನಿಖರವಾದ ನಿರ್ಧಾರವನ್ನು ತಿಳಿಸಲಾಗುವುದೆಂದೂ ಕೇಂದ್ರ ಗೃಹ ಮಂತ್ರಿ ಕಟ್ಜೂರವರು ಹೇಳಿರುತ್ತಾರೆ.

ತಮಿಳು ಪದ್ಯಗಳ ಪರೀಕ್ಷೆ

ಶ್ರೀ ಕಂಚಿ ಕಾಮಕೋಟಿ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಸೂಚನೆ ಮೇರೆ, ತಿರುಪ್ಪಾವೈ ಮತ್ತು ತಿರುವೆಂಬಾವೈ ತಮಿಳು ಪದ್ಯಗಳ ಪರೀಕ್ಷೆಯು ನಾಳೆ ಮಧ್ಯಾಹ್ನ ೩ ಗಂಟೆಗೆ ರಾಜಧಾನಿಯ ಕೆಂಪನ ಜಾಂಬಾ ಅಗ್ರಹಾರದಲ್ಲಿರುವ ರಾಮ ನಿವಾಸ ಎಂಬ ಮನೆಯಲ್ಲಿ ನಡೆಯಲೇರ್ಪಾಡಾಗಿದೆ. ಅದರಲ್ಲಿ ಕುಳಿತುಕೊಳ್ಳಲಿರುವವರು ನಾಳೆ ೩ ಗಂಟೆಯೊಳಗಾಗಿ ಅಲ್ಲಿಗೆ ಹೋಗಬೇಕೆಂದೂ, ೬೦ ಪದ್ಯಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಾಲಕಬಾಲಕಿಯರಿಗೆ ಕಾಮಾಕ್ಷಿ ದೇವಿಯವರ ಮುದ್ರೆಯಿಂದೊಡಗೂಡಿದ ಬಂಗಾರದ ಕಾಸನ್ನೂ ೩೦ ಪದ್ಯಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರಿಗೆ ಬೆಳ್ಳಿಯ ಕಾಸನ್ನೂ ಕಳೆದ ವರ್ಷದಂತೆ ಈ ಸಾರಿಯೂ ಕೊಡಲಾಗುವುದೆಂದೂ ಪರೀಕ್ಷೆಗಳ ವ್ಯವಸ್ಥಾಪಕರಾದ ಶ್ರೀ ಎಂ ವಿ ಕೃಷ್ಣಸ್ವಾಮಿ ಶಾಸ್ತ್ರಿಗಳವರ ತಿಳಿಸಿರುತ್ತಾರೆ.

ಮಂಕುಬೂದಿ ಹಾಕಿ ಮಹಿಳೆಯನ್ನು ಕರೆದೊಯ್ದ ಪ್ರಸಂಗ

ಶ್ರೀಮತಿ ಸುಬ್ಬಮ್ಮ ಜೋಯಿಸರ ಅನುಭವ

ಮೈಸೂರು ೬

ರಾಜಧಾನಿಯಲ್ಲಿ ಮಕ್ಕಳ ಅಪಹರಣದ ವದಂತಿಯು ತಣ್ಣಗಾಗುತ್ತಿರುವಂತೆಯೇ ಮಂಕು ಬೂದಿ ಹಾಕಿ ಒಬ್ಬ ಮಾನ್ಯ ಮಹಿಳೆಯನ್ನು ಯಾರಿಗೂ ತಿಳಿಯದಂತೆ ಬೆಂಗಳೂರಿಗೆ ಕರೆದೊಯ್ದ ಪ್ರಸಂಗವು ನಗರದಲ್ಲಿ ವಿಶೇಷ ಕುತೂಹಲವನ್ನೂ, ಕಾತುರವನ್ನೂ ಉಂಟು ಮಾಡಿರುತ್ತದೆ. ನಡೆದಿರುವ ವಿದ್ಯಮಾನವು ನಂಬಿಕೆಯಿಲ್ಲದವರಿಗೂ ನಂಬಿಕೆ ಹುಟ್ಟುವಂತೆ ಇರುತ್ತದೆ.

ಸೋಮನಾಥ್ ಬೀದಿಯ ಶ್ರೀ ಎಂ ಎ ಜೋಯಿಸರ ಮನೆಯಲ್ಲಿ ನೆನ್ನೆ ಬೆಳಿಗ್ಗೆ ೧೧ ಗಂಟೆಯಲ್ಲಿ ಮಧ್ಯ ವಯಸ್ಸಿನ ಆಗಂತುಕನೊಬ್ಬನನ್ನು ಶ್ರೀ ಜೋಯಿಸರ ಪತ್ನಿ ಶ್ರೀಮತಿ ಸುಬ್ಬಮ್ಮನವರು ಹೊರಗೆ ಬಂದು ವಿಚಾರಿಸಲಾಗಿ, ಅವನು ಒಂದು ಖಾಲಿ ಕಾಗದವನ್ನು ಅವರ ಕೈಗೆ ಕೊಟ್ಟು, ರುಜು ಮಾಡುವಂತೆ ಕೇಳಿದನೆಂದೂ, ಅದನ್ನು ಶ್ರೀಮತಿಯವರು ನಿರಾಕರಿಸಲು, ಕಾಗದವನ್ನು ಹಿಂದಕ್ಕೆ ತೆಗೆದುಕೊಂಡು ಇನ್ನೊಂದು ಕೈಯಲ್ಲಿದ್ದ ಚೀಲಕ್ಕೆ ಕೈ ಹಾಕಿದನೆಂದೂ, ಅನಂತರ ನಡೆದ ವಿದ್ಯಮಾನಗಳು ಅವರಿಗೆ ಗೊತ್ತೇ ಆಗಲಿಲ್ಲವೆಂದೂ ತಿಳಿದುಬಂದಿದೆ.

ಸಂಜೆ ೫॥ ಗಂಟೆ ಸಮಯದಲ್ಲಿ ಶ್ರೀಮತಿ ಸುಬ್ಬಮ್ಮನವರು ಬೆಂಗಳೂರಿಗೆ ಹೋಗುತ್ತಿದ್ದ ರೈಲು ಗಾಡಿಯೊಂದರಲ್ಲಿ ಕಾಣ ಇರುವುದಾಗಿ ಅರಿತು ವಿಸ್ಮಯಗೊಂಡು ಪಕ್ಕದಲ್ಲಿದ್ದವರನ್ನು ವಿಚಾರಿಸಲಾಗಿ ಅವರು ಸಮಾಧಾನ ಹೇಳಿ ಬೆಂಗಳೂರಿನಲ್ಲಿ ತಮ್ಮ ಮನೆಗೆ ಕರೆದುಕೊಂಡು ಹೋದರೆಂದು ತಿಳಿದುಬಂದಿದೆ. ಅಲ್ಲಿ ನೋಡಲಾಗಿ ಶ್ರೀಮತಿ ಸುಬ್ಬಮ್ಮನವರ ತಲೆ ಮೇಲೆ ಬೂದಿಯನ್ನು ಚೆಲ್ಲಿದ್ದುದು ಕಂಡುಬಂದಿತು. ಅನಂತರ ಅವರ ಬಂಧುಗಳು ಅವರನ್ನು ಮೋಟಾರಿನಲ್ಲಿ ಮಧ್ಯ ರಾತ್ರಿ ಹೊತ್ತಿಗೆ ಮೈಸೂರಿಗೆ ಕರೆತಂದು ಬಿಟ್ಟರು.

ಅವರ ಮೈ ಮೇಲಿದ್ದ ೩-೪ ಸಾವಿರ ರೂ. ಒಡವೆಗಳ ಪೈಕಿ ಯಾವುದೂ ನಷ್ಟವಾಗದಿರುವುದು ಒಂದು ವಿಶೇಷ.

ಆಗಂತುಕನು ಶ್ರೀಮತಿಯವರನ್ನು ಮೈಸೂರು ರೈಲ್ವೆ ನಿಲ್ದಾಣಕ್ಕೆ ಕರೆದೊಯ್ದು ೧೧॥ ಗಂಟೆ ರೈಲಿನಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗುತ್ತಿದ್ದನೆಂದು ತಿಳಿದುಬರುತ್ತದೆ.

ರೈಲಿನಲ್ಲಿ ಪ್ರಯಾಣ ಮಾಡುವಾಗ ಅವರ ಕೈಯಲ್ಲಿ ಒಂದು ಟಿಕೇಟು ಮಾತ್ರ ಇತ್ತೆಂದು ಗೊತ್ತಾಗಿದೆ.

ಅಸಿಸ್ಟೆಂಟ್ ಪೋಲೀಸು ಸೂಪರಿಂಟೆಂಡೆಂಟರೂ, ಲಕ್ಷ್ಮೀಪುರಂ ಪೋಲೀಸರೂ ಬಂದು ತನಿಖೆ ನಡೆಸಿದರು.

ವೀಣಾ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬। ಗಂಟೆಗೆ ಆ॥ ಎ॥ ವಿ ದೊರೆಸ್ವಾಮಿ ಅಯ್ಯಂಗಾರ್ಯರ ವೀಣಾ ವಾದನವೂ, ವಿ। ಕೆ ಹರಿಶ್ಚಂದ್ರರವರ ನ ... ಗಜೇಂದ್ರನ ... ... ನ ... - ...

ದೆಹಲಿಯಲ್ಲಿ ಕನ್ನಡ ಹಬ್ಬ

ದೆಹಲಿಯ ಕರ್ನಾಟಕ ಸಂಘದವರು ಇದೇ ತಿಂಗಳು ೧೯, ೨೦ ಮತ್ತು ೨೧ನೇ ತಾ|| ಗಳಲ್ಲಿ ಕನ್ನಡ ಸಾಂಸ್ಕೃತಿಕ ಹಬ್ಬವನ್ನು ಆಚರಿಸಲಿರುವರು ಕರ್ನಾಟಕ ಮತ್ತು ಕನ್ನಡ ಭಾಷೆಗೆ ಸಂಬಂಧಿಸಿದ ಸಾಹಿತ್ಯ ಸಂಸ್ಕೃತಿ ಕಲೆ ಮುಂತಾದುವುಗಳನ್ನು ಪ್ರದರ್ಶಿಸುವುದೇ ಹಬ್ಬದ ಮುಖ್ಯ ಗುರಿಯಾಗಿದೆ ಕರ್ನಾಟಕದ ಕಲೆಗಳ ಮತ್ತು ಕುಶಲ ಕೆಲಸಗಳ ಪ್ರದರ್ಶನವನ್ನು, ಕಲಾ ವೈಭವವನ್ನೂ ಸಹ ಏರ್ಪಡಿಸಲಾಗುವುದು ಕರ್ನಾಟಕದ ಕಲಾವಿದರು ಮತ್ತು ಕುಶಲ ಕೆಲಸಗಾರರನ್ನು ತಮ್ಮ ಪ್ರದರ್ಶಕ ವಸ್ತುಗಳನ್ನು ಕಳುಹಿಸುವಂತೆ ಕೋರಲಾಗಿದೆ. ಹಲವು ಕಲಾ ಸಂಸ್ಥೆಗಳು ತಮ್ಮ ಪ್ರತಿನಿಧಿಗಳ ತಂಡಗಳನ್ನು ಕಳುಹಿಸುವಂತೆಯೂ ಕೋರಿಸಲಾಗಿದೆ ಈ ಸಂಬಂಧವಾಗಿ ಪತ್ರ ವ್ಯವಹಾರವನ್ನು ಶ್ರೀ ಎಂ ಎ ನರಸಿಂಹಯ್ಯಂಗಾರ್ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ ೩೩/೩೪, ಲೋದಿ ಕಾಲೊನಿ, ನವದೆಹಲಿ ಈ ವಿಳಾಸಕ್ಕೆ ಬರೆಯಬೇಕೆಂದು ಕೋರಲಾಗಿದೆ

ಭಿಕ್ಷುಕನಿಂದ ಪೋಲೀಸರಿಗೆ ಇರಿತ

ಬೊಂಬಾಯಿಯಲ್ಲಿ ಪೋಲೀಸರ ವಶದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಒಬ್ಬ ಭಿಕ್ಷುಕನು ೩ ಜನ ಪೋಲೀಸರನ್ನು ಒಬ್ಬ ಸ್ತ್ರೀ ಪೋಲೀಸಳನ್ನೂ ಚಾಕುವಿನಿಂದ ಇರಿದಿರುವನೆಂದು ಹೇಳಲಾಗಿದೆ ಇಬ್ಬರು ಪೋಲೀಸರ ಸ್ಥಿತಿ ತೀವ್ರವಾಗಿದೆ ಭಿಕ್ಷುಕರ ಹಾವಳಿ ತಪ್ಪಿಸಲು ಪೋಲೀಸರು ೧೦ ಜನರನ್ನು ದಸ್ತಗಿರಿ ಮಾಡಿ ವ್ಯಾನಿಗೆ ಹತ್ತಿಸುತ್ತಿದ್ದರೆಂದೂ, ಒಬ್ಬ ಮುಸ್ಲಿಂ ಫಕೀರನು ರಾಸಗಿ ಬರಲೊಪ್ಪದೆ ಅವನನ್ನು ಪೋಲೀಸರು ಬಲಾತ್ಕಾರವಾಗಿ ವ್ಯಾನಿನೊಳಕ್ಕೆ ಕಳುಹಿಸಲು ಪ್ರಯತ್ನಿಸಿದಾಗ ಅವನ ಇವರನ್ನು ಇರಿದನೆಂದೂ ಹೇಳಲಾಗಿದೆ

ಪ್ರಕೃತಿ ವಿಜ್ಞಾನ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನ ಸಂಘದ ವಾರ್ಷಿಕೋತ್ಸವವನ್ನು ನಾಳೆ ಸಂಜೆ ೬ ಗಂಟೆಗೆ ಕಾಲೇಜಿನಲ್ಲಿ ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ನೆರವೇರಿಸುವರು. ಶ್ರೀಮತಿ ಎ ಪೊನ್ನಮ್ಮ ಮತ್ತು ಪಾರ್ಥಸಾರಥಿಯವರ ಸಂಗೀತ ಕಛೇರಿಗಳನ್ನು ಏರ್ಪಡಿಸಲಾಗಿದೆ

ಸಹಾಯಾರ್ಥ ನಾಟಕ

ರಾಜಧಾನಿಯ ಶ್ರೀ ಸಾಯಿಬಾಬಾ ಸಂಗೀತ ಮಂಡಲಿಯು ೧೫ನೇ ವಾರ್ಷಿಕೋತ್ಸವದ ಸಹಾಯಾರ್ಥವಾಗಿ ಈ ರಾತ್ರಿ ೧೦ ಘಂಟೆಗೆ ನಗರದ ಹೋಟೇಲು ಕೆಲಸಗಾರರ ಸಂಘದವರು ಟೌನಹಾಲಿನಲ್ಲಿ ಧರ್ಮರಕ್ಷಕರು ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು ಮಹಾಜನರು ನಾಟಕವನ್ನು ನೋಡಿ ವಾರ್ಷಿಕೋತ್ಸವ ನಿಧಿಗೆ ಉದಾರವಾಗಿ ಸಹಾಯ ಮಾಡುವಂತೆ ಕೋರಲಾಗಿದೆ

ಉ|| ಕರ್ನಾಟಕ ವಿದ್ಯಾರ್ಥಿನಿಲಯದ ದಿನಾಚರಣೆ

ರಾಜಧಾನಿಯಲ್ಲಿರುವ ಉತ್ತರ ಕರ್ನಾಟಕ ವಿದ್ಯಾರ್ಥಿಗಳ ನಿಲಯದ ದಿನಾಚರಣೆಯು ನಾಳೆ ಮಧ್ಯಾಹ್ನ ೪ ಗಂಟೆಗೆ ನೆರವೇರುವುದು. ಕನ್ನಡ ಕತೆಗಳ ಬರಹಗಾರರಾದ ಶ್ರೀ ಕ ರಾ ಸುಬ್ಬರಾಯರು ಭಾಷಣ ಮಾಡುವರು ಕತೆಗಾರರಾದ ಶ್ರೀ ಎ ಸೀತಾರಾಮರವರು ಅಧ್ಯಕ್ಷತೆ ವಹಿಸುವರು

ಅಮೇರಿಕಾ ಪಾಕಿಸ್ತಾನ ಒಪ್ಪಂದದ ಖಂಡನೆಗಾಗಿ ಸರ್ವ ಪಕ್ಷ ಸಭೆ

ಅಮೇರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವನ್ನು ಕೊಡುವುದರಿಂದ ಭಾರತ ಮತ್ತು ಏಷ್ಯಕ್ಕೆ ಆಗುವ ಧಕ್ಕೆಯನ್ನು ಕಡೆಯಲು ಮತ್ತು ಪ್ರಪಂಚದ ಶಾಂತಿಗೆ ಬರಬಹುದಾದ ವಿಪತ್ತನ್ನು ಎದುರಿಸಲು ಆ ಎರಡು ರಾಷ್ಟ್ರಗಳಿಗೆ ಆಗುವ ಮಿಲಿಟರಿ ಒಪ್ಪಂದವನ್ನು ಖಂಡಿಸುವುದಕ್ಕಾಗಿ ನಾಳೆ ಸರ್ವ ಪಕ್ಷಗಳ ಸಭೆಯನ್ನು ಕರೆಯಲು ಮೈಸೂರಿನ ಕಮ್ಯೂನಿಸ್ಟ್ ಪಕ್ಷದ ಸಮಿತಿಯು ನಿರ್ಧರಿಸಿದೆ ಎಲ್ಲಾ ರಾಜಕೀಯ ಪಕ್ಷಗಳೂ ಅದರಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ಚಾಮುಂಡಿ ಬೆಟ್ಟದಲ್ಲಿ ಸಹಸ್ರ ಚಂಡೀ ಮಹಾಯಾಗ

ಮೈಸೂರು ೬

ಇದೇ ಫಾಲ್ಗುಣ ಶುದ್ಧ ಅಷ್ಟಮಿ ಬುಧವಾರ ಯಿಂದ ಚತುರ್ದಶೀ ಪರ್ಯಂತ ಅಂದರೆ ಮಾರ್ಚಿ ೧೦ನೇ ತಾ|| ನಿಂದ ೧೬ರ ವರೆಗೆ ಚಾಮುಂಡಿ ಬೆಟ್ಟದಲ್ಲಿ ಲೋಕ ಕಲ್ಯಾಣಾರ್ಥವಾಗಿ ಸಹಸ್ರ ಚಂಡಿ ಯಾಗವನ್ನು ನಡೆಸಲು ಯಾಗದ ಸಮಿತಿಯವರು ನಿರ್ಧರಿಸಿರುತ್ತಾರೆ ಅದರ ಆರಂಭೋತ್ಸವವನ್ನು ಶ್ರೀಮನ್ ಮಹಾರಾಜರು ನೆರವೇರಿಸುವರು ಈ ಕಾರ್ಯಕ್ಕೆ ಆಸ್ತಿಕ ಮಹಾಜನರು ಉದಾರ ಸಹಾಯವನ್ನು ಮಾಡಬೇಕೆಂದು ಯಾಗದ ಸಮಿತಿಯವರು ಕೋರಿರುತ್ತಾರೆ ತಾ|| ೭ ರಿಂದ ೧೬ರ ಸಂಜೆ ವರೆಗೆ ಯಾಗಕ್ಕೆ ಸಂಬಂಧಿಸಿದ ಕಛೇರಿಯು ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರ ಮಠದಲ್ಲಿ ಇರುವುದು ಮಹಾಜನರು ಧನಧಾನ್ಯಗಳನ್ನು ಅಲ್ಲಿ ಒಪ್ಪಿಸುವಂತೆ ಕೋರಲಾಗಿದೆ

ಯಾಗದ ಸಂಚಾಲಕರು

ಶ್ರೀ ಕೋಟೇಶ್ವರ ಶ್ರೀನಿವಾಸಂ.ಯರು

ಪರೀಕ್ಷೆಯ ಉತ್ತರ ಪತ್ರಗಳಲ್ಲಿ ರಾಮನಾಮ ಬರೆಯುವ ಸಲಹೆ

ಗೌಹಾಟಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಭಾಗವಹಿಸಲು ಕೆಲವು ದಿನಗಳೇ ಉಳಿದಿರುವವೆಂದೂ, ಅವುಗಳಲ್ಲಿ ತೇರ್ಗಡೆ ಹೊಂದಬೇಕಾದರೆ ವಿದ್ಯಾರ್ಥಿಗಳ ಉತ್ತರ ಪತ್ರಗಳಲ್ಲಿ ೧,೨೫,೦೦೦ ಸಲ ರಾಮನಾಮವನ್ನು ಬರೆಯಬೇಕೆಂದೂ ಇಲ್ಲವಾದರೆ ತೇರ್ಗಡೆಯಾಗುವುದಿಲ್ಲವೆಂದೂ ತಿಳಿಸಿ ವಿದ್ಯಾರ್ಥಿಗಳಿಗೆ ಕಾಗದಗಳು ಬರುತ್ತಿರುವುದಾಗಿ ವರದಿಯಾಗಿದೆ ಇದನ್ನು ನೋಡಿ ಮಾತಾಪಿತೃಗಳಿಗೆ ಯೋಚನೆಗೆ ಇಟ್ಟುಕೊಂಡಿದೆ ದೇವಿಯೊಬ್ಬಳು ಬರೆದಿರುವಂತೆ ಪತ್ರಗಳಲ್ಲಿ ಕಾಣಬಂದಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭–೫ ಮತ್ತು ಸಂಜೆ ೭–೨೦ ಎಂ ಎಲ್ ವಸಂತ ಕುಮಾರಿ ಮತ್ತು ನಾರಾಯಣರಾವ್ ವ್ಯಾಸ್ ರವರಿಂದ ಮಧ್ಯಾಹ್ನ ೧–೪೦ ಮತ್ತು ೧–೫೦ ವೀಣೆ ೨ ಭವನ ನೃತ್ಯ ಗೀತೆಗಳು ಸಂಜೆ ೬–೪೦ ಮತ್ತು ೭–೫ ಆರ್ ಮಾಧವಿ ಸಂಗೀತ ೬ ಗಾನ ವಿಹಾರ ೭ ೧೫ ನೃತ್ಯ ಮತ್ತು ನಮ್ಮ ವರ ೭ ೪೦ ಪತ್ರಿಕೆ ನಡೆ ಟಿ ಎ ಎಸ್ ಶಿವರುದ್ರಪ್ಪ, ಪಿಟೀಲು ೯ ೧೫ ರಾತ್ರಿ ಸಂಗೀತ ೯ ೪೦ ರೂಪಕ ಟಿ ಪಿ ರಾಜರತ್ನಂರವರ ನಾಟಕ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಆ
ಕಡಲೇಕಾಯಿ	೧೯ ೪ ೦	೨೫ ೧೪ ೦
ಹರಳುಬೀಜ	೨೫ ೬ ೦	೩೩ ೨ ೦
ಹುಚ್ಚೆಳ್ಳು	೩೫ ೦ ೦	೩೭ ೮ ೦
ಹೊಂಗೇಬೀಜ	೧೯ ೦ ೦	೨೫ ೬ ೦
ಹುಣಸೇಬೀಜ	೧೨ ೮ ೦	
ಹುರುಳಿ	೨೫ ೧೨ ೦	೨೯ ೪ ೦
ಹೆಸರು	೩೪ ೬ ೦	೪೧ ೮ ೦
ಹಲಸಂದಿ	೩೭ ೦ ೦	೪೨ ೧೦ ೦
ಅವರೆ	೨೮ ೦ ೦	
ಧನಿಯ	೨೫ ೧೪ ೦	೨೮ ೧೦ ೦
ತೊಗರಿ	೨೪ ೧೪ ೦	
ಕಡಲೆ	೪೪ ೨ ೦	೪೭ ೨ ೦
ಹುಣಸೇಹಣ್ಣು	೪ ೧೫ ೦	೯ ೧೦ ೦
ಸೀಗೆಕಾಯಿ	೪ ೪ ೦	೫ ೧ ೦
[illegible]	೧೬೩ ೦ ೦	೨೩೪ ೦ ೦

ಬೆಂಗಳೂರು ಫುಟ್‌ಬಾಲ್ ಆಟಗಾರರ ಬಗ್ಗೆ ಪಕ್ಷಪಾತವೇ ?

ರಾಜಧಾನಿಯ ಫುಟ್‌ಬಾಲ್ ಆಟಗಳ ಪ್ರೇಮಿಯೊಬ್ಬರಾದ ಶ್ರೀ ಬಿ ಕೆ ನಾರಾಯಣ್ ಎಂಬುವರು ಪತ್ರವೊಂದನ್ನು ಬರೆದು ರಾಜಧಾನಿಯಲ್ಲಿ ಫುಟ್‌ಬಾಲ್ ಆಟಗಳು ಹೀನಸ್ಥಿತಿಗೆ ಇಳಿಯುತ್ತಿರುವುದಾಗಿಯೂ ಮೈಸೂರಿನ ಆಟಗಾರರಿಗೆ ಪುರಸ್ಕಾರ ದೊರೆಯದೆ ಬೆಂಗಳೂರಿನವರಿಗೆ ಇಲ್ಲಿನ ಫುಟ್‌ಬಾಲ್ ಸಂಘದವರು ವಿಶೇಷ ಪ್ರೋತ್ಸಾಹ ಕೊಡುತ್ತಿರುವರೆಂದೂ, ಸಂಘದ ನಿಬಂಧನೆಗಳು ಸರಿಯಾಗಿ ಪಾಲಿಸಲ್ಪಡದೆ ಮೈಸೂರು ಆಟಗಾರರು ಒಂದೆರಡು ದಿನಗಳ ಅವಕಾಶವನ್ನು ಬೇಡಿದರೆ ಅವರ ಆಟವನ್ನೇ ರದ್ದುಮಾಡಿ ಬೆಂಗಳೂರು ಟೀಮುಗಳಿಗೆ ಕೇಳಿದಷ್ಟು ಅವಕಾಶವೀಯಲಾಗುತ್ತಿರುವುದೆಂದೂ ತಿಳಿಸಿರುತ್ತಾರೆ ಕಾಲಕಾಲಕ್ಕೆ ನಡೆಯಬೇಕಾದ ಟೂರ್ನಮೆಂಟುಗಳನ್ನು ಸರಿಯಾಗಿ ನಡೆಸುತ್ತಿಲ್ಲವೆಂದೂ, ಸಂಘದವರು ಇನ್ನು ಮುಂದಾದರೂ ನ್ಯಾಯದಿಂದಲೂ ಪಕ್ಷಪಾತರಹಿತವಾಗಿಯೂ ನಡೆದುಕೊಳ್ಳಬೇಕೆಂದೂ ಅವರು ಕೋರಿರುತ್ತಾರೆ

ದೇವನೂರು ಪ್ರೌಢಶಾಲಾ ಸಂಘದ ವಾರ್ಷಿಕೋತ್ಸವ

ನಂಜನಗೂಡು ತಾಲ್ಲೂಕು ದೇವನೂರು ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ ಜಿಲ್ಲಾ ಬೋರ್ಡ್ ಪ್ರೌಢಶಾಲಾ ವಿದ್ಯಾರ್ಥಿ ಸಂಘದ ನಾಲ್ಕನೆಯ ವಾರ್ಷಿಕೋತ್ಸವವು ನಾಳೆ ಸಂಜೆ ೬|| ಗಂಟೆಗೆ ನೆರವೇರುವುದು ಸಂಸ್ಥಾನದ ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಸಂಘದ ವಾರ್ಷಿಕ ಭಾಷಣವನ್ನು ಮಾಡುವರು ಮತ್ತು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್ ಎ ಚನ್ನಬಸಪ್ಪನವರ ಭಾವಚಿತ್ರವನ್ನು ಅನಾವರಣ ಮಾಡುವರು ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು

ರಾಮಕೃಷ್ಣ ಪರಮಹಂಸರ ಜನ್ಮ ದಿನ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಈ ದಿನ ಮತ್ತು ನಾಳೆ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನವನ್ನು ಆಚರಿಸಲಾಗುವುದು ಈ ಸಂಜೆ ೫ ರಿಂದ ೭ರ ವರೆಗೆ ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಯವರಿಂದ ಭಕ್ತ ಕಣ್ಣಪ್ಪ ಎಂಬ ಹರಿಕಥೆಯೂ, ನಾಳೆ ಸಂಜೆ ೫|| ಯಿಂದ ೬|| ವರೆಗೂ ಅ|| ವಿ|| ರಾಮಯ್ಯ ಮತ್ತು ಗೆಳೆಯರಿಂದ ದೇವರನಾಮ ಮತ್ತು ಅನಂತರ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ, ಟಿ ಎಸ್. ರಾಮರಾವ್ ಮತ್ತು ಶ್ರೀ ಸೋಮನಾಥಾನಂದಜಿಯವರಿಂದ ಉಪನ್ಯಾಸಗಳೂ ನಡೆಯುವುವು

★ ಆಯುರ್ವೇದ ಕಾಲೇಜು ಟ್ಯೂಟರ್ ಸಂಘದ ಆಶ್ರಯದಲ್ಲಿ ಈ ಸಂಜೆ ೬|| ಗಂಟೆಗೆ ಮತ್ತು ನಾಳೆ ಬೆಳಗ್ಗೆ ೧೦|| ಗಂಟೆಗೆ ಕಾಲೇಜಿನ ಆವರಣದಲ್ಲಿ ಕೇಂದ್ರ ಆಹಾರ ಸಂಶೋಧನಾಲಯದ ಡಾ ಆರ್ ಭಗವಾನರವರು "ವಿಟಮಿನ್ಸ್" ಎಂಬ ವಿಷಯವಾಗಿ ಭಾಷಣ ಮಾಡುವರು.

SRI GANESHA
TALKIES

From 7–3–54 For 3 Days

RETURN OF THE CORSICAN BROTHERS

(In the Tradition of Alexander Dumas)

Sequel to the Famous

CORSICAN BROTHERS

Featuring - Richard Greene and Paula Raymond

Supported by Dona Drake and Raymond Burr

Edited, Printed and Published by A R Nagarajan at Sadhvi Press, D Subbiah Road, Mysore

SRI CHAMUNDESWARI BHAVAN

YELWAL ROAD MYSORE

FROM 3–3–1954

Special Arrangements for HOT SEASON at Up stairs, Specially Decorated Hall

Daily From 4 P M to 7 P M

Fruit Salad Ice-Cream Banana, Vanilla Almond and Gulab Ice-Creams

Almond Cold Fruit Juices Pineapple Oranges Lemon Tomato and Grape

Milk Syrups Swee Curds Syrups Vegetable Cutlets Sandwiches Toast Butter and Potato Chips

★

OUR PLANTATION 'A' COFFEE A SPECIALITY

Our Special Set Dosai available in the Mornings & Evenings

★ Special Menus in Meals to suit Hot Weather

★ Concession to permanent Boarders in Meals Section

ಜೀವ ವಿಮೆ ....

ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ ....

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ, ಸೇವೆ ಸಹಕಾರ ಸಲ್ಲಿಸಿದೆ
ಪೂರ್ಣ ಭದ್ರತೆ—ತೀರ ಕಡಿಮೆ ವೆಚ್ಚ ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚುವುದು ! ಅತ್ಯನುಕೂಲವಾದ ಪ್ರೀಮಿಯಂ ದರ ಸುಲಭ ಸಾಲ ಸೌಕರ್ಯ, ಕಡವಿಲ್ಲದ ವಿಮಾ ವೆಚ್ಚಲಿನ ಪಾವತಿ ಪ್ರತಿಗಳ ಕಾಪಾಡುವಲ್ಲಿ ವಿಮೆ ಮಾಡಲು ಇಂದೇ ನಿರ್ಧರಿಸಿರಿ .

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು

ಟೆಲಿಫೋನ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 6 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ತಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI . LEADING NATIONALIST DAILY OF MYSORE

ಸಂಪುಟ ೧೨] MYSORE SUNDAY 7-3-1954 : ಮೈಸೂರು : ಭಾನುವಾರ ೭-೩-೧೯೫೪ [ಸಂಚಿಕೆ ೨೦೭

ಸಂಸ್ಥಾನದ ೨ನೇ ೫ವರ್ಷದ ಯೋಜನೆಗೆ ೩ ಕೋಟಿ ಸಾಲ

೨ನೇ ಪಂಚ ವಾರ್ಷಿಕ ಯೋಜನೆಗಾಗಿ ೩ ಕೋಟಿ ರೂ. ಸಾಲ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೬

ಕೆಳಗಿನ ಶಾಸನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಹೊಸ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಿ, ಪಂಚ ವಾರ್ಷಿಕ ಯೋಜನೆಗಳಿಗಾಗಿ ೩ ಕೋಟಿ ರೂ ಸಾಲವನ್ನು ಎತ್ತಲಾಗುವುದೆಂದು ತಿಳಿಸಿದರು

ಹೊಸ ವರ್ಷದಲ್ಲಿ ೮ ಬಗೆಯ ತೆರಿಗೆಗಳನ್ನು ವಿಧಿಸುವ ವಿಷಯವನ್ನು ಅವರು ಸೂಚಿಸಿದ್ದಲ್ಲದೆ ಅವುಗಳಿಂದ ಬರುವ ಸುಮಾರು ೧ ಕೋಟಿ ರೂ ಗಳಿಂದ ೩ ಕೋಟಿ ರೂ ಕೊರತೆಯನ್ನು ೧೮೫ ಲಕ್ಷಕ್ಕೆ ಇಳಿಸಬಹುದೆಂದು ಅವರು ಅಂದಾಜು ಮಾಡಿದರು

ಅವರು ಭಾಷಣ ಮಾಡಿ, ಪ್ರಜೆಗಳ ಮೇಲೆ ತೆರಿಗೆಯ ಹೊರೆಯು ಸ್ವಲ್ಪ ಹೆಚ್ಚುವುದೆಂಬುದು ತಮಗೆ ಗೊತ್ತಿರುವುದೆಂದೂ, ಸಂಸ್ಥಾನದಲ್ಲಿ ರಾಷ್ಟ್ರಾಭಿವೃದ್ಧಿ ಕಾರ್ಯಗಳು ತಡೆಯಿಲ್ಲದೆ ನಡೆಯಬೇಕೆಂಬ ಒಂದು ಉದ್ದೇಶದಿಂದಲೇ ಈ ಹೊರೆಯನ್ನು ಸಾರ್ವಜನಿಕರು ಹೊರುವಂತೆ ಮಾಡಬೇಕಾಗುವುದಾಗಿಯೂ ತಿಳಿಸಿದರು ಪ್ರತಿಯೊಂದು ತೆರಿಗೆಯನ್ನೂ ಹಲವಾರು ಬಾರಿ ಬಹುವಾಗಿ ಪರೀಕ್ಷಿಸಲ್ಪಟ್ಟಿತಾದರೂ ಕಳೆದ ೩೦ ವರ್ಷಗಳಿಂದ ಭೂಕಂದಾಯವು ಒಂದೇ ಸ್ಥಿತಿಯಲ್ಲಿರುವುದೆಂದು ಅವರು ಹೇಳಿ, ಈ ಅವಧಿಯಲ್ಲಿ ವ್ಯವಸಾಯೋತ್ಪನ್ನಗಳ ಬೆಲೆಗಳು ೧೬ರಷ್ಟಾಗಿರುವುವೆಂದು ತಿಳಿಸಿದರು ಆದ್ದರಿಂದ ಭೂಕಂದಾಯದ ಮೇಲೆ ಹಾಕುವ ಸರ್ ಚಾರ್ಜ್ ಬಹು ಮಂದಿಯ ಮೇಲೆ ಬೀಳುವುದರಿಂದ ಅದು ಜನರಿಗೆ ಹೆಚ್ಚು ಹೊರೆಯಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು ಇದರಿಂದ ಬರುವ ಹಣವನ್ನು ವ್ಯವಸಾಯಗಾರರ ಅಭಿವೃದ್ಧಿಗಾಗಿಯೇ ವೆಚ್ಚ ಮಾಡಲಾಗುವುದೆಂದೂ ಅವರು ತಿಳಿಸಿದರು

ಮುಂದುವರಿದು ಕಾಫಿ ಮತ್ತು ಇತರ ತೋಟಗಳ ಮೇಲೆ ವಿಧಿಸಿರುವ ಕಂದಾಯವು ಅಲ್ಪವಾಗಿರುವುದೆಂದೂ ಆ ಉತ್ಪನ್ನಗಳಿಂದ ಹೆಚ್ಚು ಬೆಲೆಯು ಬರುತ್ತಿರುವುದೆಂದೂ, ಕೊಡಗು, ಮದ್ರಾಸು ಮತ್ತು ತಿರುವಾಂಕೂರು ಕೊಚ್ಚಿಗಳಲ್ಲಿ ವ್ಯವಸಾಯ ವರಮಾನ ತೆರಿಗೆಗಳನ್ನು ಜಾರಿಗೆ ತಂದಿರುವುದೆಂದೂ, ಮೈಸೂರು ಸರ್ಕಾರದವರು ಹಾಗೆ ಮಾಡದೆ ಕಂದಾಯವನ್ನು ಏರಿಸಲು ಒಂದು ಫ್ಲ್ಯಾಟ್ ರೇಟನ್ನು ಹಾಕುವರೆಂದು ಮುಖ್ಯ ಮಂತ್ರಿಯವರು ತಿಳಿಸಿದರು

ನೀರು ಸರಬರಾಜು ಮುಂತಾದುವುಗಳ ಕಂದಾಯದ ವಿಷಯವಾಗಿ ಅವರು ಮಾತನಾಡಿ, ಸ್ಟ್ಯಾಂಪು ಮತ್ತು ರಿಜಿಸ್ಟ್ರೇಷನ್ ರುಸುಂಗಳು ಪಕ್ಕದ ಸಂಸ್ಥಾನಗಳಿಗಿಂತ ಮೈಸೂರಿನಲ್ಲಿ ಕಡಿಮೆಯಿರುವುದಾಗಿ ಹೇಳಿದರು

ವೆಚ್ಚದ ವಿಷಯವನ್ನು ವಿವರಿಸಿ, ಬಂಡವಾಳ ಹಾಕುವ ಕೆಲಸಗಳಿಗಾಗಿ ೧೧೬೮ ಲಕ್ಷ ರೂ ಗಳನ್ನು ಹೊಸ ವರ್ಷದಲ್ಲಿ ವೆಚ್ಚದ ಅಂದಾಜು ಮಾಡಲಾಗಿರುವುದೆಂದು ಹೇಳಿದರು ಅದರಿಂದ ಹಣಕಾಸಿನ ತೊಂದರೆಯಿಂದ ಈ ವರ್ಷ ೭೭೩ ಲಕ್ಷ ರೂ ಗಳನ್ನು ಒದಗಿಸಲಾಗಿರುವುದೆಂದು ಅವರು ಹೇಳಿದರು. ಭದ್ರಾ, ನುಗು, ತುಂಗ ಮತ್ತು ತುಂಗಭದ್ರಾ ಯೋಜನೆಗಳಿಗೆ ಕ್ರಮವಾಗಿ ೧೫೫, ೪೫, ೩೩ ಮತ್ತು ೪೯ ೫ ಲಕ್ಷ ರೂ ಗಳನ್ನು ತೆಗೆದಿಡಲಾಗುವುದೆಂದು ಹೇಳಿದರು ಹೊಸ ಸಾಲವನ್ನು ತೆಗೆಯುವುದರ ಜೊತೆಗೆ ಕೇಂದ್ರದಿಂದ ೩½ ಕೋಟಿ ರೂ ಸಹಾಯವು ಬರುವುದೆಂದೂ, ಉಳಿತಾಯವಾಗುವ ಹಣದಿಂದ ೧೫೩ ಲಕ್ಷ ರೂ ಗಳನ್ನು ಈ ಎಲ್ಲ ಕಾರ್ಯಗಳಿಗೂ ಒದಗಿಸಲಾಗುವುದೆಂದೂ ಅವರು ಹೇಳಿದರು

ಮುಂದುವರಿದು ಈ ವರ್ಷದಲ್ಲಿ ವಿದ್ಯಾಭ್ಯಾಸ ಸುಧಾರಣೆಯನ್ನು ಜಾರಿಗೆ ತರಲಾಗುವುದೆಂದೂ, ಸಮಿತಿಯ ಶಿಫಾರಸುಗಳಲ್ಲಿ ಉತ್ತಮ ಗುಣಗಳನ್ನು ಹೊಂದಿರುವ ಸುಧಾರಣೆಗಳನ್ನು ಜಾರಿಗೆ ಕೊಡುವ ಸಂಬಂಧದಲ್ಲಿ ೫೪ ೫೫ನೇ ವರ್ಷದಲ್ಲಿ ೪೧೮ ಲಕ್ಷ ರೂ ವೆಚ್ಚವಾಗುವುದೆಂದೂ ಅವರು ನುಡಿದರು

ಸಂಸ್ಥಾನದಲ್ಲಿ ಆಸ್ಪತ್ರೆಗಳ ಸಂಖ್ಯೆಯು ೪೯೩ ರಿಂದ ೫೦೦ ಕ್ಕೆ ಹೆಚ್ಚಿರುವುದೆಂದು ಮುಖ್ಯ ಮಂತ್ರಿಗಳು ಹೇಳಿದರು ಕುಷ್ಠ ರೋಗದ ತಡೆಗಾಗಿ ೩೦,೦೦೦ ರೂ ತೆಗೆದಿಡಲಾಗಿದೆಯೆಂದೂ, ಹುಚ್ಚರ ಆಸ್ಪತ್ರೆಯಲ್ಲಿ ಅಭಿವೃದ್ಧಿಗೊಳಿಸಿ ಅಲ್ಲಿ ಸಂಶೋಧನೆ ನಡೆಸಲು ಈ ವರ್ಷ ೧ ಲಕ್ಷ ರೂ ಒದಗಿಸಲಾಗಿರುವುದೆಂದೂ ಅವರು ಹೇಳಿದರು

ಬೆಂಗಳೂರು, ಮೈಸೂರು ನಗರಗಳಲ್ಲೂ ಇತರ ಕಡೆಗಳಲ್ಲೂ ನೀರು ಸರಬರಾಜು ವ್ಯವಸ್ಥೆ ಉತ್ತಮಪಡಿಸಲು ೨½ ಕೋಟಿ ರೂ ಬೇಕಾಗುವುದು ಮೈಸೂರು ನಗರದಲ್ಲಿ ನೀರಿನ ಅಭಿವೃದ್ಧಿಗಾಗಿ ಅಂದಾಜು ಮಾಡಲ್ಪಟ್ಟಿರುವ ೩೯ ೪೯ ಮತ್ತು ೭೩ ೫೧ ಲಕ್ಷ ರೂ ಗಳ ಎರಡು ಯೋಜನೆಗಳನ್ನು ಪೌರಸಭೆಯವರು ಚರ್ಚಿಸಿರುವರೆಂದೂ, ಈ ಬಗ್ಗೆ ಸರ್ಕಾರದವರು ಬೇಗನೆ ಕ್ರಮ ಕೈಗೊಳ್ಳುವರೆಂದೂ ಹೇಳಿದರು ಗ್ರಾಮಗಳಲ್ಲಿ ನೀರಿನ ಸರಬರಾಜಿಗಾಗಿ ೧೦ ಲಕ್ಷ ರೂ ಒದಗಿಸಲಾಗುವುದೆಂದು ಹೇಳಿದರು

೨೨ ನೇ ತಾ|| ತಿರುವಾಂಕೂರು ಶಾಸನ ಸಭೆ

ತಿರುವಾಂಕೂರು-ಕೊಚ್ಚಿ ಶಾಸನ ಸಭೆಯ ಪ್ರಥಮ ಅಧಿವೇಶನವು ಇದೇ ತಿಂಗಳು ೨೨ನೇ ತಾ|| ಸೇರುವಂತೆ ಅಲ್ಲಿನ ರಾಜಪ್ರಮುಖರು ಸೂಚಿಸಿರುತ್ತಾರೆ

ಅಲಹಾಬಾದ್ ಕಮ್ಯೂನಿಸ್ಟರಿಂದ ಸ್ಟಾಲಿನ್ನರ ಶ್ರಾದ್ಧ

ರಷ್ಯದ ಪ್ರಧಾನಿಯಾಗಿದ್ದ ಮಾರ್ಷಲ್ ಸ್ಟಾಲಿನ್ನರ ವರ್ಷ ಶ್ರಾದ್ಧವನ್ನು ಅಲಹಾಬಾದು ಕಮ್ಯೂನಿಸ್ಟರು ಮೊನ್ನೆ ಆಚರಿಸಿದರೆಂದು ವರದಿಯಾಗಿದೆ

ಮದ್ಯ ಸಾಗಿಸುತ್ತಿದ್ದ ಕುದುರೆ ಮತ್ತು ಮಾಲೀಕನ ದಸ್ತಗಿರಿ

ಪೋಲಾಪುರದಲ್ಲಿ ಕಳೆದ ಬುಧವಾರ ಕುದುರೆಯೊಂದರ ಮೇಲೆ ೮ ಸೀಸೆ ಹೆಂಡವನ್ನು ಒಬ್ಬನು ಅಕ್ರಮವಾಗಿ ಕೊಂಡೊಯ್ಯುತ್ತಿದ್ದಾಗ ಆವನನ್ನೂ ಮತ್ತು ಕುದುರೆಯನ್ನೂ ಪೋಲೀಸರು ದಸ್ತಗಿರಿ ಮಾಡಿದರೆಂದು ವರದಿಯಾಗಿದೆ

ಲಕ್ಕವಳ್ಳಿ ಜಲಾಶಯದ ಕಾರ್ಮಿಕರಲ್ಲಿ ಘರ್ಷಣೆ

ಲಕ್ಕವಳ್ಳಿ, ಬಳಿ ನಿರ್ಮಿಸಲಾಗುತ್ತಿರುವ ಜಲಾಶಯದ ಕೆಲಸಗಾರರಲ್ಲಿ ಕಳೆದ ೨ ನೇ ತಾ|| ಹೊಡೆದಾಟಗಳಾಗಿ ೨೭ ಮಂದಿಗೆ ಗಾಯವಾಗಿದೆ ೧೦ ಜನರ ಸ್ಥಿತಿ ತೀವ್ರವಾಗಿದೆ ಸ್ಥಳೀಯ ಅಧಿಕಾರಿಗಳು ಮತ್ತು ಪೋಲೀಸರು ಪರಿಸ್ಥಿತಿಯನ್ನು ಶಮನಗೊಳಿಸುವ ಪ್ರಯತ್ನವು ವಿಫಲವಾಗಿ ಭದ್ರಾವತಿಯಿಂದ ರಿಸರ್ವ್ ಪೋಲೀಸರನ್ನು ಕರೆಸಬೇಕಾಯಿತು ಆ ದಿನ ಒಬ್ಬ ಕೂಲಿಯವನು ಕಲ್ಲುಗಳನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಾಗ, ಒಬ್ಬ ಕೂಲಿ ಹೆಂಗಸಿಗೆ ಅವನ ಶರೀರವು ತಾಕಿತೆಂದೂ ಇದೇ ನೆಪವಾಗಿ ಕಾರ್ಮಿಕರಲ್ಲಿ ಎರಡು ಪಂಗಡಗಳಾಗಿ ಇಬ್ಬರಿಗೂ ಕಾಳಗವೇ ನಡೆಯಿತೆಂದೂ, ಕಲ್ಲು, ದೊಣ್ಣೆ, ಕೊಡಲಿ ಮುಂತಾದುವು ಯಥೇಚ್ಛವಾಗಿ ಉಪಯೋಗಿಸಲ್ಪಟ್ಟುವೆಂದೂ ಹೇಳಲಾಗಿದೆ

ಇರಿತದಿಂದ ಹರಿಜನ ಯಾತ್ರಿಕರ ಮರಣ

ಮಡಕೇರಿಗೆ ೬ ಮೈಲಿ ದೂರವಿರುವ ಬೆಟ್ಟಕ್ಕೇರಿ ಎಂಬಲ್ಲಿ ಶಿವರಾತ್ರಿಗಾಗಿ ಭಾಗಮಂಡಲಕ್ಕೆ ಹೊರಟಿದ್ದ ಇಬ್ಬರು ಹರಿಜನ ಪ್ರಯಾಣಿಕರನ್ನು ಇರಿದ ಪರಿಣಾಮವಾಗಿ ಅವರು ಮಡಿದಿರುವರೆಂದೂ ಮತ್ತೊಬ್ಬನಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ ಮೃತಪಟ್ಟವರು ಒಂದು ತೋಪಿನ ಬಳಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಬೇರೆ ಊರಿನ ಹರಿಜನರು ಅಲ್ಲಿಗೆ ಬಂದು ಅವರನ್ನು ಚೂರಿಯಿಂದ ಇರಿದರೆಂದೂ ಇದರ ಪರಿಣಾಮವಾಗಿ ಒಟ್ಟು ನಾಲ್ವರಿಗೆ ಗಾಯಗಳಾದುವೆಂದೂ ಹೇಳಲಾಗಿದೆ ಇಬ್ಬರು ಹರಿಜನರನ್ನು ದಸ್ತಗಿರಿ ಮಾಡಲಾಗಿದೆ ಕಾವೇರಿಯಲ್ಲಿ ಸ್ನಾನ ಮಾಡುವುದಕ್ಕಾಗಿ ಮೃತಪಟ್ಟವರು ಮತ್ತು ಗಾಯಗೊಂಡವರು ಹೋಗುತ್ತಿದ್ದರು

ವಾರ್ಷಿಕೋತ್ಸವ

ರಾಜಧಾನಿಯ ಮರಿಮಲ್ಲಪ್ಪನವರ ಪ್ರಾಕ್ಟೀಸಿಂಗ್ ಸ್ಕೂಲ್ ಮತ್ತು ಮಾಡಲ್ ಸ್ಕೂಲುಗಳ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಾಳೆ ಮತ್ತು ನಾಳಿದ್ದು ಸಂಜೆ ೫|| ಗಂಟೆಗೆ ಶಾಲೆಯಲ್ಲಿ ನೆರವೇರುವುದು ಟೀಚರ್ಸ್ ಕಾಲೇಜಿನ ಶ್ರೀ ಸಿ ರಂಗಾಚಾರ್ಯರು ಅಧ್ಯಕ್ಷತೆ ವಹಿಸುವರು

೧,೦೦೦ ಕಾರ್ಮಿಕರಿಂದ ಸಹಾನುಭೂತಿ ಉಪವಾಸ

ನಂಜನಗೂಡು ೬

ಇಲ್ಲಿನ ಕಪಿಲಾ ಟೆಕ್ಸ್‌ಟೈಲ್ಸಿನ ಕಾರ್ಮಿಕ ಸಂಘದವರು ಬೇಡಿಕೆಗಳ ಒಗ್ಗೆ ರಾಜೀ ಸಂಧಾನವು ನಿಷ್ಫಲವಾಗಿ ಮೂರು ತಿಂಗಳುಗಳಾದರೂ ಕೈಗಾರಿಕಾ ನ್ಯಾಯಾಲಯದ ಮುಂದೆ ಕಾರ್ಮಿಕ ಅಧಿಕಾರಿಗಳು ಈ ವಿಷಯವನ್ನು ತರಲಿಲ್ಲವೆಂಬ ಕಾರಣಕ್ಕಾಗಿ ಕಳೆದ ೧ನೇ ತಾ|| ನಿಂದಲೂ ಉಪವಾಸವನ್ನು ಮಾಡುತ್ತಿರುವ ಸಂಘದ ಅಧ್ಯಕ್ಷ ಶ್ರೀ ಎಸ್ ಗೇವಣ್ಣನವರ ಬಗ್ಗೆ ಸಹಾನುಭೂತಿ ತೋರಿಸಲು ಈ ದಿನ ಗಿರಣಿ ಮತ್ತು ಕಾವೇರಿ ಪೇಪರ್ ಮಿಲ್ಲಿನ ೧೦೦೦ ಮಂದಿ ಕೆಲಸಗಾರರು ಉಪವಾಸ [illegible] ಮಾಡಲು [illegible]

ರಘುವೀರಸಿಂಗರು ಪೆಪ್ಸು ಮುಖ್ಯ ಮಂತ್ರಿಯಾಗುವರು

ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸಂಸ್ಥಾನಗಳ ಒಕ್ಕೂಟದ ಮುಖ್ಯ ಮಂತ್ರಿಯಾಗಿ ಕರ್ನಲ್ ರಘುವೀರ ಸಿಂಗರು ನೇಮಕವಾಗುವರೆಂದೂ, ವೃಷಭಾನರವರು ಮಂತ್ರಿಯಾಗುವರೆಂದೂ ವರದಿಯಾಗಿದೆ

ಅಸ್ಸಾಂ ನೌಕರರಿಗೆ ಹೆಚ್ಚಿನ ಸಂಬಳ

೧೫೦ ರೂ ಗಳಿಗಿಂತಲೂ ಕಡಿಮೆ ಸಂಬಳ ಬರುವ ಎಲ್ಲಾ ನೌಕರರುಗಳಿಗೂ ೩ ರಿಂದ ೫ ರೂ ವರೆಗೆ ವೇತನವನ್ನು ಹೆಚ್ಚಿಸಲು ಅಸ್ಸಾಮಿನ ಸರ್ಕಾರದವರು ನಿರ್ಧರಿಸಿರುತ್ತಾರೆ ಪೋಲೀಸು ಕಾನ್ಸ್ಟೇಬಲ್ಲುಗಳಿಗೆ ವಿಶೇಷ ರೀತಿಯ ಪರಿಹಾರ ಕೊಡಲೂ ವ್ಯವಸ್ಥೆಯಾಗಿದೆ ಈ ಎರಡು ಯೋಜನೆಗಳಿಂದ ಒಟ್ಟು ೭೮ ಸಾವಿರ ಜನ ನೌಕರರಿಗಾಗಿ ೨೦ ಲಕ್ಷ ರೂ ಗಳ ವೆಚ್ಚವು ಸರ್ಕಾರಕ್ಕೆ ಹೆಚ್ಚಾಗಿ ತಗಲುವುದು

ಎಣ್ಣೆ ಸಾಗಿಸಲು ಸಮುದ್ರದ ತಳದಲ್ಲಿ ಕೊಳಾಯಿಗಳು

ಬೊಂಬಾಯಿ ರೇವಿನ ಉತ್ತರ ಭಾಗದಿಂದ ಬುಚರ್ ದ್ವೀಪಕ್ಕೆ ಸಮುದ್ರ ತಳದಲ್ಲಿ ೪ ಮೈಲಿಗಳಷ್ಟು ಉದ್ದದ ಕೊಳಾಯಿಗಳನ್ನು ಹಾಕಲಾಗುತ್ತಿದೆ ಅವುಗಳು ೩ ಅಡಿ ಅಗಲವಾಗಿವೆ, ಬೊಂಬಾಯಿ ಬಳಿ ಟ್ರಾಂಬೆ ದ್ವೀಪದಲ್ಲಿ ನಿರ್ಮಿತವಾಗುತ್ತಿರುವ ಎಣ್ಣೆ ಶೋಧನೆ ಕೇಂದ್ರಗಳಿಗೆ ಅಶುದ್ಧವಾದ ಎಣ್ಣೆಯನ್ನು ರವಾನಿಸಲು ಇದರಿಂದ ಅನುಕೂಲವಾಗುವುದು ಪೌರ್ವಾತ್ಯ ದೇಶದಲ್ಲೆಲ್ಲೂ ಇಂತಹ ಕೆಲಸವು ನಡೆದಿಲ್ಲವೆಂದು ಹೇಳಲಾಗಿದೆ ಇದಕ್ಕಾಗಿ ೪ ಕೋಟಿ ರೂ ಖರ್ಚಾಗುವುದು

ಈಜಿಪ್ಟಿನ ರಾಜ್ಯಾಂಗ ಸಭೆಗೆ ಜೂನ್‌ನಲ್ಲಿ ಚುನಾವಣೆ

ಈಜಿಪ್ಟಿನ ರಾಜ್ಯಾಂಗವನ್ನು ಗೊತ್ತುಪಡಿಸಬಲ್ಲ ಸಭೆಯೊಂದನ್ನು ಏರ್ಪಡಿಸುವುದಕ್ಕಾಗಿ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಚುನಾವಣೆ ನಡೆಸಲು ನಿರ್ಧರಿಸಲಾಗಿದೆಯೆಂದು ಅಲ್ಲಿನ ಪ್ರಧಾನಿ ಜನರಲ್ ನಾಸಿರ್‌ರವರು ಹೇಳಿರುತ್ತಾರೆ

ಮಸೂದೆಗಳ ಅಂಗೀಕಾರ

ನ್ಯಾಷನಲ್ ಕೇಡೆಟ್ ಕೋರ್ ಮತ್ತು ಪ್ರಾದೇಶಿಕ ಸೈನ್ಯಗಳಲ್ಲಿರುವವರು ಶಾಸನ ಸಭಾ ಸದಸ್ಯರಾಗಲು ಇರುವ ಅನರ್ಹತೆಯನ್ನು ರದ್ದುಗೊಳಿಸುವ ತಿದ್ದುಪಡಿ ಮಸೂದೆಯೂ, ಮೈಸೂರು-ಬೆಂಗಳೂರುಗಳಲ್ಲಲ್ಲದೆ ಬೇರೆ ಕಡೆ ಇರುವ ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರುಗಳು ವಿಶ್ವವಿದ್ಯಾಲಯದ ಅಕೇಡೆಮಿಕ್ ಕೌನ್ಸಿಲ್ಲಿನ ಸದಸ್ಯರಾಗಲು ಇದ್ದ ಅನರ್ಹತೆಯನ್ನು ನಿವಾರಿಸುವ ಮಸೂದೆಯೂ ಕೆಳಗಿನ ಶಾಸನ ಸಭೆಯಲ್ಲಿ ನೆನ್ನೆ ಅಂಗೀಕೃತವಾಯಿತು

○ ಭಾರತದಲ್ಲಿ ಇದೇ ಮೊದಲಾಗಿ ಜಲಜನಕ ವಾಯುವನ್ನು ದ್ರವ ರೂಪಕ್ಕೆ ಪರಿವರ್ತಿಸಲಾಗಿದೆಯೆಂದು ವರದಿಯಾಗಿದೆ ಕಲ್ಕತ್ತೆಯ ವಿಜ್ಞಾನ ಸಂಘದ ಡಾ|| ಎ ಬೋಸ್ ಮತ್ತು [illegible]

ವಾರ ಭವಿಷ್ಯ

ತಾ|| ೭-೩-೫೪ ರಿಂದ ೧೪-೩-೫೪ರ ವರೆಗೆ

ಮೇಷ— ಆರೋಗ್ಯಕ್ಕೆ ಕ್ಲೇಶ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಚಿತ್ತ ಚಾಂಚಲ್ಯ. ಆರ್ಥಿಕ ಮುಗ್ಗಟ್ಟು, ಸಂಸಾರ ತಾಪತ್ರಯ, ಪ್ರವಾಸದಲ್ಲಿ ವಾಹನಾಪಘಾತ ತಾ|| ೧೦, ೧೧ ಮಿತ್ರ ಸಹಾಯ, ಮಾನ ರಕ್ಷಣೆ

ವೃಷಭ— ಉಪ್ಪು ತಿಂದವರಿಂದ ದ್ರೋಹವಾಗುವ ಸಂಭವ, ಸಂಸಾರ ತಾಪತ್ರಯ ಪತ್ನಿಗೆ ವಾಹನಾದಿಗಳಿಂದ ಅಪಘಾತ, ವರಮಾನವೆಲ್ಲವೂ ವೈದ್ಯರ ಕಡೆಗೆ ಹೋಗುವುದು ಆರೋಗ್ಯ ಉತ್ತಮ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಅಲಕ್ಷ್ಯದಿಂದ ಹಾನಿ, ಮಂಗಳ ಕಾರ್ಯಕ್ಕೆ ವಿಘ್ನ, ಪ್ರವಾಸದಲ್ಲಿ ಹಾನಿ ತಾ|| ೮, ೯ ಸ್ತ್ರೀ ವರ್ಗದಿಂದ ಅಪಮಾನ

ಮಿಥುನ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಪ್ರಗತಿ ಮಂಗಳ ಕಾರ್ಯ ತಾ|| ೧೦ ೧೧ ಹೆಚ್ಚು ಖರ್ಚು, ಗಲಾಟೆ

ಕರ್ಕ ಆರೋಗ್ಯ ಉತ್ತಮ ಸಂತತಿಗೆ ಮಾತ್ರ ಕ್ಲೇಶ ಪ್ರವಾಸದಲ್ಲಿ ಆಕಸ್ಮಿಕ ಲಾಭ, ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಶತ್ರುಗಳು ಮಿತ್ರರಾಗಿ ಎಲ್ಲಾ ರೀತಿಯಲ್ಲೂ ಸುಧಾರಣೆ ತಾ|| ೧೦, ೧೧ ಶುಭ ವಾರ್ತೆ, ಮೃಷ್ಟಾನ್ನ ಭೋಜನ

ಸಿಂಹ— ದುರ್ಘಟನೆಗಳು ನಡೆದು ಮನಸ್ಸಿಗೆ ಚಿಂತೆ ಅಮೂಲ್ಯ ವಸ್ತುಗಳು ಅಗ್ನಿಯಪಾಲು, ಆರೋಗ್ಯ ಆರ್ಥಿಕ ಸ್ಥಿತಿ ಚಿಂತಾಜನಕ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಶತ್ರುಗಳಿಂದ ಹಾನಿ ಪ್ರವಾಸದಲ್ಲಿ ವಿಘ್ನ ಅಪಘಾತ ಭಯ, ಕಲಹ ತಾ|| ೮, ೧೨ ಸಂಕಟ ನಿವಾರಣೆ, ಮಾನ ರಕ್ಷಣೆ

ಕನ್ಯಾ — ಸಾಂಪತ್ತಿಕ ದೃಷ್ಟಿಯಿಂದ ಅನುಕೂಲದ ವಾರ ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಪ್ರಗತಿ, ಲಾಭ ಪಾಲುದಾರಿಕೆ ವ್ಯವಹಾರದಲ್ಲಿ ಜಯ, ಪ್ರವಾಸದಲ್ಲಿ ಲಾಭ. ತಾ|| ೮, ೯ ಹೆಚ್ಚು ಖರ್ಚು, ಸುಖ ಭೋಜನ

ತುಲಾ— ಆರೋಗ್ಯ ಉತ್ತಮ, ಮಾನಸಿಕ ಸ್ಥಿತಿ ವಿಚಿತ್ರ, ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಕ್ಲೇಶ, ಪ್ರವಾಸ ಆಗದು ತಾ|| ೧೦, ೧೧ ಬಂಧುಗಳಾಗಮನ, ಮನೋವ್ಯಥೆ

ವೃಶ್ಚಿಕ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಬಹಳ ಚಮತ್ಕಾರವುಳ್ಳದ್ದು ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭದ ಬದಲು ಕೈಯಿಂದ ಹೊರಟುಹೋಗುವುದು ಪ್ರವಾಸ ಬೇಡ ತಾ|| ೮, ೧೨ ನಿದ್ರಾನಾಶ, ಅಶುಭ ವಾರ್ತೆ

ಧನು — ಆರ್ಥಿಕ ಮುಗ್ಗಟ್ಟು, ಆರೋಗ್ಯ ತಾಪದಾಯಕ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ವಿಚಿತ್ರ ಸ್ಥಿತಿ ಪ್ರವಾಸ ಕಷ್ಟಕರ ತಾ|| ೧೦, ೧೧ ಅಪ್ರಿಯ ವಾರ್ತೆ, ಹೆಚ್ಚು ಖರ್ಚು

ಮಕರ— ಆರೋಗ್ಯ, ಆರ್ಥಿಕ, ಮಾನಸಿಕ ದೃಷ್ಟಿಯಿಂದ ಲಾಭ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಯಶ ಪ್ರವಾಸ ಸುಗಮ, ಸ್ತ್ರೀ ಸುಖ. ತಾ|| ೮, ೧೨ ಧರ್ಮ ಕಾರ್ಯಕ್ಕೆ ವೆಚ್ಚ.

ಕುಂಭ—ಗ್ರಹಮಾನ ಅನುಕೂಲದಾಯಕ. ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ಪ್ರಗತಿ. ಕೋರ್ಟು ಕಾರ್ಯದಲ್ಲಿ ಯಶ ತಾ|| ೧೦, ೧೧ ಬಂಧುಮಿತ್ರರ ಆಗಮನ, ನಿದ್ರಾನಾಶ

ಮೀನ— ಆರೋಗ್ಯ ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರಗತಿ. ಕೋರ್ಟು ಕಾರ್ಯಕ್ಕೆ ನಿರ್ವಿಘ್ನ, ಪ್ರವಾಸ ಸುಖಕರ. ತಾ|| ೮, ೧೦ ಮಹತ್ವದ ಪತ್ರ, ಮಿತ್ರ ಭೇಟಿ

೨ ಸಾವಿರ ಮೈಲಿ ಹೊಸ ರೈಲು ರಸ್ತೆ

ಭಾರತದ ಎರಡನೇ ಪಂಚ ವಾರ್ಷಿಕ ಯೋಜನೆಯ ಅಂಗವಾಗಿ ೧,೫೦೦ ರಿಂದ ೨,೦೦೦ ಮೈಲಿಯಷ್ಟು ದೂರದವರೆಗೆ ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಗುವುದೆಂದು ರೈಲ್ವೆ ಮಂತ್ರಿಯವರು ತಿಳಿಸಿದ್ದಾರೆ.

ಬಾಂಬು ಸಿಡಿತದಿಂದ ಮೊರಾಕೊ ಸುಲ್ತಾನರಿಗೆ ಗಾಯ

ಫ್ರೆಂಚರಿಗೆ ಸೇರಿರುವ ಮೊರಾಕೊ ದೇಶದ ಸುಲ್ತಾನರು ಮೊನ್ನೆ ಮರ್ರಾಕೇಶ್ ನಗರದ ಮಸೀದಿಯಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಗ ಅವರ ಬಳಿ ಬಾಂಬು ಸಿಡಿದು ಅವರಿಗೆ ಗಾಯವಾದುದಾಗಿ ವರದಿಯಾಗಿದೆ ಸಿಡಿದ ವಸ್ತುವು ಇಟಲಿಯಲ್ಲಿ ತಯಾರಾದ ಕೈ ಬಾಂಬೆಂದು ಹೇಳಲಾಗಿದೆ ಸುಲ್ತಾನರನ್ನು ವಧೆ ಮಾಡಲು ಕಳೆದ ಆಗಸ್ಟಿನಲ್ಲೂ ಪ್ರಯತ್ನ ನಡೆಸಲಾಗಿತ್ತು

ಮಕ್ಕಳ ಒಡವೆ ಅಪಹರಣಕ್ಕಾಗಿ ಶಿಕ್ಷೆ

ನಗರದಲ್ಲಿ ಮಕ್ಕಳನ್ನು ಪುಸಲಾಯಿಸಿ ಕರೆದುಕೊಂಡುಹೋಗಿ ಅವರ ಮೈ ಮೇಲಿನ ಒಡವೆಗಳನ್ನು ಕಳಚಿಕೊಂಡು, ಅವರುಗಳನ್ನು ಅಲ್ಲೇ ಬಿಟ್ಟು ಪರಾರಿಯಾಗುತ್ತಿದ್ದನೆಂಬ ಆಪಾದನೆ ಮೇಲೆ ಕೊಳ್ಳೇಗಾಲದ ನಿವಾಸಿ, ಹಾಲಿ ಬನ್ನೂರಿನಲ್ಲಿದ್ದನೆಂದು ಹೇಳಲಾದ ಷಫಿ ಅಹಮದ್ ಎಂಬ ಕೈದಿಯ ಮೇಲೆ ಲಷ್ಕರ್ ಪೋಲೀಸರು ಹೂಡಿದ್ದ ಎರಡು ಮೊಕದ್ದಮೆಗಳಲ್ಲಿ ನಗರದ ಪ್ರಥಮ ದರ್ಜೆ ನ್ಯಾಯಾಧೀಶರು ತಲಾ ೩ ತಿಂಗಳಂತೆ ಒಟ್ಟು ೬ ತಿಂಗಳ ಕಠಿಣ ಶಿಕ್ಷೆಯನ್ನು ನಿನ್ನೆ ದಿನ ವಿಧಿಸಿದರು

ಭಾವಚಿತ್ರಗಳ ಅನಾವರಣ

ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿಯಲ್ಲಿರುವ ಶ್ರೀ ಕೆಂಪದೇವಮ್ಮ ಜಿಲ್ಲಾ ಬೋರ್ಡ್ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಿನ್ನೆ ಮಧ್ಯಾಹ್ನ ೩ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ನಡೆಯಲು ಏರ್ಪಾಡಾಗಿತ್ತು ಮಾಜಿ ಹಣಕಾಸಿನ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರು ಸಂಘದ ಸಮಾರೋಪ ಭಾಷಣವನ್ನೂ ಮತ್ತು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಭಾವಚಿತ್ರದ ಅನಾವರಣವನ್ನೂ ಮಾಡಿದರು ಸ್ಕೂಲು ಕಟ್ಟಡಕ್ಕೆ ದಾನಿಗಳಾದ ಗ್ರಾಮದ ಛೇರ್ಮನ್ ಶ್ರೀ ಸಿರಿಯಪ್ಪನವರ ಮತ್ತು ಶ್ರೀಮತಿ ಕೆಂಪದೇವಮ್ಮನವರ ಭಾವಚಿತ್ರಗಳನ್ನು ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅನಾವರಣ ಮಾಡಿದರು

ಪೌರಸಭಾ ಕೆಲಸಗಾರರ ಸಂಘದ ಸ್ಥಾಪನೆ

ರಾಜಧಾನಿಯ ಪೌರಸಭಾ ಕೆಲಸಗಾರರ ಸಭೆಯು ಕಳೆದ ಬುಧವಾರ ಬಾಡಬಂಡಿ ಕೇರಿಯಲ್ಲಿ ನಡೆದು ಕೆಲಸಗಾರರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ಒಂದು ಸಂಘವನ್ನು ಸ್ಥಾಪಿಸುವಂತೆ ನಿರ್ಧರಿಸಲಾಯಿತು ಸಂಘದ ಅಧ್ಯಕ್ಷರಾಗಿ ಶ್ರೀ ಮುನಿಯಪ್ಪನವರೂ ಕಾರ್ಯದರ್ಶಿಯಾಗಿ ಶ್ರೀ ಬಿ ಸುಬ್ಬಸಿಂಗ್‌ರವರೂ ಉಪ ಕಾರ್ಯದರ್ಶಿಯಾಗಿ ಶ್ರೀ ಮಾರಯ್ಯನವರೂ, ಕೋಶಾಧಿಕಾರಿಗಳಾಗಿ ಶ್ರೀ ಗುರುಮೂರ್ತಿಯವರೂ ಆರಿಸಲ್ಪಟ್ಟಿರುತ್ತಾರೆ

ರಾಷ್ಟ್ರೀಯ ಕೈಮಗ್ಗದ ದಿನಾಚರಣೆ

ರಾಷ್ಟ್ರೀಯ ಕೈಮಗ್ಗದ ದಿನಾಚರಣೆ ಸಂಬಂಧವಾಗಿ ಈ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯುವ ಸಮಾರಂಭವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಆರಂಭಗೊಳಿಸುವರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ.ಗೆ
ಕಡಲೆಕಾಯಿ.	೨೦ ೦ ೦	೨೬ ೧೨ ೦
ಎಳ್ಳು	೬೨	೬೪ ೧೨ ೦
ಅರಳುಬೀಜ	೨೫ ೦ ೦	೨೯ ೬ ೦
ಹುಚ್ಚೆಳ್ಳು	೩೫ ೦ ೦	೪೨ ೨ ೦
ಹೊಂಗೇಬೀಜ	೧೮ ೧೪ ೦	೨೩ ೦ ೦
ಹುರುಳಿ	೨೫ ೦ ೦	೨೮ ೪ ೦
ಹೆಸರು	೩೬ ೦ ೦	೪೦ ೧೦ ೦
ಉದ್ದು	೫೫ ೦ ೦	
ಅಲಸಂದೆ	೩೦ ೨ ೦	೪೭ ೬ ೦
ಹುಣಸೇಬೀಜ	೧೨ ೬ ೦	
ಹುಣಸೇಹಣ್ಣು	೯ ೧೩ ೦	೧ ೧೨ ೦
ಸೀಗೆಕಾಯಿ	೪ ೧೦ ೦	೫ ೪ ೦
ಕಡಲೆ	೪೨ ೦ ೦	೪೬ ೦ ೦
ಹರಳಿನ ಬೀಜ	೨೮ ೦ ೦	೩೧ ೦ ೦
ಧನಿಯ	೨೮ ೧೫ ೦	೩೫ ೮ ೦
ತೊಗರಿ	೩೪ ೪ ೦	೩೭ ೦ ೦
ತೆಂಗಿನಕಾಯಿ ೧೦೦೦	೧೨೦ ೦ ೦	೨೫೦ ೦ ೦
ಮೆಣಸಿನಕಾಯಿ	೨೫ ೦ ೦	೨೮ ೧ ೦

ಗಂಡಸಿನ ಹೊಟ್ಟೆಯಲ್ಲಿ ಗರ್ಭ

ಪಾಕಿಸ್ತಾನದ ಬಹಾವಲ್ಪುರದಲ್ಲಿರುವ ಆಸ್ಪತ್ರೆಯೊಂದರಲ್ಲಿ ಉದರವ್ಯಾಧಿಯ ಚಿಕಿತ್ಸೆಗಾಗಿ ೨೫ ವರ್ಷದ ಉಮರ್‌ವಾಡಾ ಎಂಬ ಯುವಕನೊಬ್ಬನು ಸೇರಿರುತ್ತಾನೆ ವೈದ್ಯರು ಅವನ ಹೊಟ್ಟೆಯನ್ನು ಪರೀಕ್ಷಿಸಲಾಗಿ ಅದರಲ್ಲಿ ಗರ್ಭವೊಂದು ಇದ್ದುದು ಕಂಡು ಬಂದು, ಶಸ್ತ್ರ ಚಿಕಿತ್ಸೆ ನಡೆಸಲಾಯಿತು ಆಗ ಪೂರ್ಣವಾಗಿ ಬೆಳೆದಿರುವ ಶಿಶುವೊಂದು ಕಾಣಿಸಿತೆಂದು ಹೇಳಲಾಗಿದೆ ಅದು ಉಮರ್‌ವಾಡನ ಅವಳಿ ಸಹೋದರನೆಂದೂ ಹೇಳಲಾಗಿದೆ ಉಮರ್‌ವಾಡನ ಜನನಕಾಲದಲ್ಲಿ ತಾಯಿಯ ಗರ್ಭದಿಂದ ಹೊರಬಂದಾಗ ಈ ಶಿಶುವು ಉಮರ್‌ವಾಡನ ಹೊಟ್ಟೆಯನ್ನು ಸೇರಿತ್ತೆಂದೂ ಮಗುವಿನ ತಲೆ ತುಂಬ ಕೂದಲು, ಬಾಯಿಯಲ್ಲಿ ಹಲ್ಲು ಇವೆಲ್ಲಾ ಇವೆಯೆಂದೂ ಗೊತ್ತಾಗಿದೆ ಶಸ್ತ್ರ ಚಿಕಿತ್ಸೆಯ ಇತಿಹಾಸದಲ್ಲಿ ಇದು ಇಂತಹ ಎರಡನೇ ಪ್ರಸಂಗವೆಂದು ಹೇಳಲಾಗಿದೆ ಮಗುವನ್ನು ಹೊರಕ್ಕೆ ತೆಗೆಯುವುದಕ್ಕೆ ಶಸ್ತ್ರ ಚಿಕಿತ್ಸೆ ಮಾಡಲು ಈಗ ಸಾಧ್ಯವಿಲ್ಲವೆಂದೂ, ೧೦ ದಿನಗಳ ನಂತರ ಮಾಡಬಹುದೆಂದೂ ಹೇಳಲಾಗಿದೆ ಮಗುವಿನ ತಲೆಯಲ್ಲಿರುವ ಕೂದಲನ್ನು ಬೋಳಿಸಿ, ಅದನ್ನು ೧೦ ಗಜದಷ್ಟು ಉದ್ದದ ಹಗ್ಗವಾಗಿ ಹೊಸೆಯಲಾಗಿದೆ ಅದನ್ನು ನೋಡಲು ಅನೇಕರು ಬಂದು ಹೋಗುತ್ತಿರುವರು

ಶಿವರಾತ್ರಿ ದಿನ ದೇವಾಲಯದ ಬಾಗಿಲು ತೆಗೆಯುವುದು ತಡ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಕಳೆದ ಬುಧವಾರ ಮಹಾ ಶಿವರಾತ್ರಿಯ ದಿನ ಅರ್ಚಕರಿಗೂ ಪೇಷ್ಕಾರರಿಗೂ ಉಂಟಾದ ವೈಮನಸ್ಯದ ಪ್ರಯುಕ್ತ ದೇವಾಲಯದ ಬಾಗಿಲನ್ನು ಬೆಳಗ್ಗೆ ೭ ಘಂಟೆ ಮೇಲೆ ತೆರೆಯಲಾಯಿತೆಂದೂ, ನೂರಾರು ಜನ ಭಕ್ತರು ಹೊರಗೇ ನಿಂತು ಕಾಯಬೇಕಾಗಿ ಬಂದಿತೆಂದೂ ಒಬ್ಬ ಒಂತ್ರಿದಾರರು ತಿಳಿಸಿರುತ್ತಾರೆ

ಕಿರಿಯರ ತಂಡದ ವಾರ್ಷಿಕೋತ್ಸವ

ರಾಜಧಾನಿಯ ಕಿರಿಯರ ತಂಡದ ದ್ವಿತೀಯ ವಾರ್ಷಿಕೋತ್ಸವವನ್ನು ಏಪ್ರಿಲ್ ತಿಂಗಳಲ್ಲಿ ನಡೆಸುವಂತೆ ತೀರ್ಮಾನವಾಗಿದೆಯೆಂದೂ, ಸದಸ್ಯರುಗಳೆಲ್ಲರೂ ಚಂದಾ ಹಣ ೧-೮-೦ ರೂ ಗಳನ್ನು ಈ ತಿಂಗಳೊಳಗಾಗಿ ಕಳುಹಿಸಬೇಕೆಂದೂ, ಕಾರ್ಯದರ್ಶಿಗಳು ಕೋರಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬—೮ ಸಂಗೀತ ೭-೩೦ ಎ ವಿ [illegible] ನಾಗಸ್ವರ ಮಧ್ಯಾಹ್ನ ೧-೪೦ ಭಜನೆಗಳು ೧-೫೦ [illegible] ೩ ಅರ್ಧ ಗಂಟೆ ಸಂಗೀತ ಸಂಜೆ ೫-೪೦ ಎ. ಪಿ. ನಾರಾಯಣಪ್ಪ ನಾಗಸ್ವರ. ೬ ಗಾನ ವಿಹಾರ. ೬-೧೫ ಹೆಚ್ ಆರ್ [illegible] ೭ ಅರ್ಧ ಗಂಟೆ ಸಂಗೀತ ೭-೪೦ [illegible] ಸಿದ್ದಲಿಂಗಯ್ಯ ಕನ್ನಡದಲ್ಲಿ ಭಾಷಣ [illegible] ೮-೧೫ ಮತ್ತು ೯-೪೦ [illegible] ಕೃಷ್ಣಯ್ಯಂಗಾರ್ ಸಂಗೀತ, ೯-೧೫ [illegible] ಇಂಗ್ಲಿಷ್ ಭಾಷಣ

ಕಾಫಿ ಪುಡಿಗೆ ಹುಣಸೆ ಬೀಜದ ಪುಡಿಯ ಬೆರಕೆ

ಮದರಾಸಿನಲ್ಲಿ ಕಾಫಿಪುಡಿಗೆ ಹುಣಸೆ ಬೀಜದ ಪುಡಿಯನ್ನು ಬೆರಸಿ ಮಾರುತ್ತಿರುವುದಾಗಿ ದೂರುಗಳು ಬಂದಿವೆ ಮದ್ರಾಸು ಪೌರಸಭೆಯವರು ನಡೆಸಿರುವ ಪರೀಕ್ಷೆಗಳಲ್ಲಿ ಇಂತಹ ಬೆರಕೆಯ ಪ್ರಸಂಗಗಳು ವಿಪರೀತವಾಗಿರುವುದಾಗಿಯೂ ಗೊತ್ತಾಗಿದೆ

ಗಂಗೆಯಲ್ಲಿ ದೋಣಿ ಮುಳುಗಿ ೫೦ ಜನರ ಮರಣ

ಉತ್ತರ ಪ್ರದೇಶದ ಬಾಲ್ಲಿಯಾ ಜಿಲ್ಲೆಯಿಂದ ಬಿಹಾರಿನ ಬಹಾರ್ಪುರಕ್ಕೆ ೧೫೦ ಜನ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ದೋಣಿಯೊಂದು ಬಕ್ಸಾರ್ ಬಳಿ ಗಂಗೆಯಲ್ಲಿ ಮುಳುಗಿದುದರಿಂದ ೫೦ ಜನರ ಪ್ರಾಣಹಾನಿಯಾಯಿತೆಂದು ವರದಿಯಾಗಿದೆ ೪೦ ಜನರು ಸುರಕ್ಷಿತವಾಗಿ ದಡವನ್ನು ಸೇರಿರುತ್ತಾರೆ ಇತರರಿಗಾಗಿ ಶೋಧನೆ ನಡೆಯುತ್ತಿದೆ ಅವರೆಲ್ಲರೂ ಶಿವರಾತ್ರಿ ಜಾತ್ರೆಗಾಗಿ ಬಹಾರ್ಪುರಕ್ಕೆ ಹೋಗುತ್ತಿದ್ದರು.

ಬಹಿರಂಗ ಸಭೆ

ಈ ದಿನ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಅಮೇರಿಕಾ ಮತ್ತು ಪಾಕಿಸ್ತಾನದ ಒಪ್ಪಂದವನ್ನು ಖಂಡಿಸಲು ಶ್ರೀ ತಗಡೂರು ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುವುದು.

ಟ್ರೈನಿಂಗ್ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವ

ಮೈಸೂರು ಗೌ|| ಟ್ರೈನಿಂಗ್ ಕಾಲೇಜ್ ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೪-೩೦ ಗಂಟೆಗೆ ಟ್ರೈನಿಂಗ್ ಕಾಲೇಜಿನಲ್ಲಿ ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೃಷ್ಣಸ್ವಾಮಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನೆರವೇರುತ್ತದೆ ಕಾಲೇಜು ಹಳೇ ವಿದ್ಯಾರ್ಥಿಗಳು ಮತ್ತು ಮೈಸೂರು ತಾಲ್ಲೂಕು ರೇಂಜ್ ಉಪಾಧ್ಯಾಯರುಗಳು ದಯಮಾಡಿಸಬೇಕೆಂದು ಕನ್ನಡ ಪ್ರಾಕ್ಟೀಸಿಂಗ್ ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎ ಎಸ್. ಕೃಷ್ಣಮೂರ್ತಿಯವರು ಪ್ರಾರ್ಥಿಸಿರುತ್ತಾರೆ

ಹಿಂದಿ ತರಗತಿಗಳು

ಇದೇ ಆಗಸ್ಟ್ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿವಿಧ ಪರೀಕ್ಷೆಗಳಿಗಾಗಿ ನಗರದ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಕೆಳಗೆ ಕಂಡ ಕೇಂದ್ರಗಳಲ್ಲಿ ಇದೇ ೧೦ ನೇ ತಾ|| ಬುಧವಾರದಿಂದ ಹಿಂದಿ ತರಗತಿಗಳನ್ನು ನಡೆಸಲಾಗುವುದು.-ಸೊಪ್ಪಿನಕೊಳದ ಬೀದಿಯಲ್ಲಿರುವ ಸಭೆಯ ವಿದ್ಯಾಲಯದಲ್ಲಿ ಕೇಂದ್ರ, ಚಾಮರಾಜಪುರದ ಅಮ್ಮಾವಲ್ಲಿ ಸ್ಟೋರ್ಸನಲ್ಲಿ ಚಾಮರಾಜಪುರದ ಕೇಂದ್ರ, ಸರಸ್ವತಿ ಪುರದಲ್ಲಿರುವ ಗಾಯತ್ರಿ ಸಮಾಜದ ಕೇಂದ್ರ ಮತ್ತು ಒಂಟಿಕೊಪ್ಪಲಿನಲ್ಲಿರುವ ಹಿಂದಿ ಪ್ರಚಾರ ಸಭೆಯ ಕೇಂದ್ರ.

ರಾಜಕಮಲ್,
ಮೈಸೂರು
5-3-54 ರಿಂದ ಸತತ ೩ನೇ ವಾರ
ವಿಜಯಾಂವರ ಮಹತ್ತ್ವದ ತಮಿಳು ಚಿತ್ರ
ಚಂದ್ರಹಾರಂ

ಪ್ರಭಾ ✱ 5-3-54 ರಿಂದ ಎರಡನೇ ವಾರ
ದಿನವೂ 3 ಆಟಗಳು
ದೇವ ಕನ್ನಿಕಾ
ಕನ್ನಡ

Edited, Printed and Published by A. R. Nagarajan at Sadhvi Press, D.Subbiah Road, Mysore

ಪ್ರಭುದೇವಾ ಥಿಯೇಟರ್
(ಪ ಟ್ಟಾ ಟಾ ಕೀ ಸ್)
6—3—54 ನೇ ಶನಿವಾರದಿಂದ ★ ಅಮೋಘ ವಾದ 4 ನೆಯ ವಾರ
ಪ್ರತಿ ದಿನ ಮೂರು ಆಟಗಳು
ರಾಜರಾಜೇಶ್ವರಿ ಕಂಪೆನಿಯವರ
ತಮಿಳು ಚಿತ್ರ ಲಕ್ಷ್ಮಿ
(ಜೆಮಿನಿಯವರ ರಿಲೀಜ್)
—: ಮುಂದಿನ ಬಿಡುಗಡೆ :—
ನಿರುಪೇದಲು (ಕಡುಬಡವರು) ತೆಲುಗು ಚಿತ್ರ

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩] MYSORE MONDAY 8-3-1954 : ಮೈಸೂರು : ಸೋಮವಾರ ೮-೩-೧೯೫೪ [ಸಂಚಿಕೆ ೨೦೬

ಹನುಮಂತಯ್ಯನವರ ಮೇಲೆ ಚನ್ನಯ್ಯನವರ ಆರೋಪ

ಹನುಮಂತಯ್ಯನವರ ಮಂತ್ರಿ ಮಂಡಲದ ಸರ್ವಾಧಿಕಾರ ಪ್ರವರ್ತನೆ

ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಆರೋಪಣೆ

ಮೈಸೂರು ೭

ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಇಲ್ಲಿನ ವಿದ್ಯಾವರ್ಧಕ ಪ್ರೌಢ ಶಾಲೆಯ ಸಭೆಯ ವಾರ್ಷಿಕೋತ್ಸವದಲ್ಲಿ ಮೊನ್ನೆ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿ, ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಅವರ ಮಂತ್ರಿಮಂಡಲವನ್ನು ಉಗ್ರವಾಗಿ ಖಂಡಿಸಿದರು. ಸಂಸ್ಥಾನದ ಈಗಿನ ಸರ್ಕಾರದವರು ಸರ್ವಾಧಿಕಾರ ಮನೋವೃತ್ತಿಯಿಂದ ಕೆಲಸ ಮಾಡುತ್ತಿರುವರೆಂದೂ ಶಿಂಗೆ ವಿಧಾಯಕ ಮಾಡುವುದು ಮತ್ತು ಸಾರ್ವಜನಿಕರ ಮೇಲೆ ಮಹತ್ತರ ಪರಿಣಾಮ ಉಂಟುಮಾಡುವ ಇತರ ವಿಷಯಗಳ ಬಗ್ಗೆ ನೀತಿಯನ್ನು ನಿರ್ಧಾರ ಮಾಡುವ ಮುಂಚೆ ಪ್ರದೇಶ ಕಾಂಗ್ರೆಸ್ ಸಮಿತಿಯೊಡನೆ ಕಲೆತು ಸಮಾಲೋಚನೆ ನಡೆಸದೆ, ಸಮಿತಿಯನ್ನು ಕಡೆಗಣಿಸಿರುವರೆಂದೂ ತಿಳಿಸಿ ಈ ನೀತಿಯನ್ನು ಪ್ರತಿಭಟಿಸಲು ತಾವು ನಿರ್ಧರಿಸಿರುವುದಾಗಿಯೂ ಅದರಲ್ಲಿ ಯಾರು ಸೇರಲಿ, ಬಿಡಲಿ ತಮ್ಮ ಕಾರ್ಯವನ್ನು ಮುಂದ ವರಿಸುವುದಾಗಿಯೂ ಅವರು ಹೇಳಿದರು.

ಮಂತ್ರಿಮಂಡಲದ ಸದಸ್ಯರ ಅನೇಕ ಕೃತ್ಯಗಳು ಕಾಂಗ್ರೆಸ್ಸಿಗೆ ಗೌರವ ತರತಕ್ಕದ್ದಲ್ಲವೆಂದೂ ಅವರು ಅಭಿಪ್ರಾಯಪಟ್ಟರು.

ಮುಂದ ವರಿದು, ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಕೆ. ಹನುಮಂತಯ್ಯನವರು ಸರ್ವಾನುಮತದಿಂದ ಆರಿಸಲ್ಪಟ್ಟಾಗ, ಸಂಸ್ಥೆಯಲ್ಲಿ ಐಕ್ಯತೆ ಮತ್ತು ಒಗ್ಗಟ್ಟಿನ ಸಲುವಾಗಿ ಅವರ ಆಯ್ಕೆಯನ್ನು ಸಹಿಸಲಾಯಿತೆಂದೂ, ಅವರಿಗೂ ಅವರ ಮಂತ್ರಿಮಂಡಲಕ್ಕೂ ಸ್ವತಂತ್ರಾವಕಾಶವನ್ನು ಕಲ್ಪಿಸಲಾಯಿತೆಂದೂ ಶ್ರೀ ಚನ್ನಯ್ಯನವರು ಹೇಳಿದರು. ಆದರೆ ಶ್ರೀ ಹನುಮಂತಯ್ಯನವರು ಸರ್ವಾಧಿಕಾರಿಗಳಾಗಿ ವರ್ತಿಸುತ್ತಿರುವರೆಂದು ಅವರು ತಿಳಿಸಿ, ಅವರ ನೀತಿ ಬಗ್ಗೆ ಕಾಂಗ್ರೆಸ್ಸಿನವರಲ್ಲಿಯೂ ಸಾರ್ವಜನಿಕರಲ್ಲಿಯೂ ಉಂಟಾಗಿರುವ ಅತೃಪ್ತಿಯನ್ನು ಸರ್ಕಾರದವರು ಗಮನಿಸಲು ಇದು ಸಕಾಲವಾಗಿರುವುದೆಂದ ಅವರು ಸೂಚಿಸಿದರು.

ಕಾಂಗ್ರೆಸ್ ಸಂಸ್ಥೆಗೂ ಮತ್ತು ಕಾಂಗ್ರೆಸ್ ಮಂತ್ರಿಮಂಡಲಕ್ಕೂ ತೀವ್ರವಾದ ಭಿನ್ನಾಭಿಪ್ರಾಯವಿರುವ ವಿಷಯವು ಕೇಂದ್ರದ ಹೈಕಮ್ಯಾಂಡಿನವರಿಗೂ ಗೊತ್ತಿರುವುದೆಂದೂ, ಅದನ್ನು ನಿವಾರಿಸಲು ಪಟ್ಟ ಶ್ರಮ ನಿಷ್ಫಲವೂ, ಹೈಕಮ್ಯಾಂಡಿನವರ ನಿರ್ದೇಶವಿದ್ದರೂ ಮುಖ್ಯ ಮಂತ್ರಿಯವರು ತೋರಿಸುತ್ತಿರುವ ವರ್ತನೆಯಿಂದ ವ್ಯರ್ಥವಾಗಿರುವುದೆಂದೂ ಶ್ರೀ ಚನ್ನಯ್ಯನವರು ನುಡಿದರು.

ಮಂತ್ರಿಮಂಡಲದ ಲೋಪ ದೋಷಗಳ ದೊಡ್ಡ ಪಟ್ಟಿಯನ್ನೇ ಶಾವು ಕೊಡಬಲ್ಲದಾಗಿ ಅವರು ಹೇಳಿ, ಪ್ರದೇಶ ಕಾಂಗ್ರೆಸ್ ಸಮಿತಿಯ

ತಿರುವಾಂಕೂರು ಅರಸರೊಡನೆ ಪಟ್ಟಂ ತಾನುಪಿಳ್ಳೆಯವರ ಭೇಟಿ

ತಿರುವಾಂಕೂರು. ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಪಟ್ಟಂ ತಾನು ಪಿಳ್ಳೆಯವರು ಇಂದು ತಿರುವಾಂಕೂರು ರಾಜಪ್ರಮುಖರೊಡನೆ ಸರ್ಕಾರದ ರಚನೆಯ ವಿಷಯವಾಗಿ ಭೇಟಿ ಮಾಡಿ ಮಾತುಕತೆ ನಡೆಸಲಿರುವರು. ಅಲ್ಲಿ ಅವರ ಪಕ್ಷಕ್ಕೆ ೫೫ ಜನ ಸದಸ್ಯರ ಬೆಂಬಲವಿದೆಯೆಂದು ಹೇಳಲಾಗಿದೆ. ಮೊನ್ನೆ ಮಧ್ಯಾಹ್ನ ಅಲ್ಲಿನ ಕಾಂಗ್ರೆಸ್ ಪಕ್ಷದ ನಾಯಕರಾದ ಪಾನಂಪಳ್ಳಿ ಗೋವಿಂದ ಮೆನನ್ನರು ರಾಜಪ್ರಮುಖರನ್ನು ಭೇಟಿ ಮಾಡಿ ತಮಗೆ ಸರ್ಕಾರವನ್ನು ರಚಿಸಲು ಸಾಧ್ಯವಾಗದೆಂದಿಲ್ಲವೆಂದು ತಿಳಿಸಿದರೆಂದು ಗೊತ್ತಾಗಿದೆ. ಕಾಂಗ್ರೆಸ್ ಹೈಕಮ್ಯಾಂಡು ಪಕ್ಷಕ್ಕೆ ತಿರುವಾಂಕೂರಿನ ಘಟನಾವಳಿಗಳನ್ನು ಪರಿಶೀಲಿಸುತ್ತ ಮುಮ್ಮುನ್ನಿರಲು ತೀರ್ಮಾನಿಸಿದೆಯೆಂದು ಶ್ರೀ ಎಸ್. ಎನ್. ಅಗರವಾಲರು ಹೇಳಿದ್ದಾರೆ.

ನ್ನು ಕೇಳದೆ ಮತ್ತು ಸಾರ್ವಜನಿಕರಿಗೆ ತಿಳಿಯಬರುವಂತೆ ಮುಖ್ಯ ಮಂತ್ರಿಯವರು ಮೈಸೂರು ಧ್ವಜವನ್ನು ರದ್ದುಪಡಿಸಿದ ವಿಷಯವನ್ನು ದೀರ್ಘವಾಗಿ ಪ್ರಸ್ತಾಪಿಸಿದರು. ಆಗ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಹೆಚ್. ಸಿ. ದಾಸಪ್ಪನವರ ಮಂತ್ರಿಮಂಡಲದ ಕಾರ್ಯವನ್ನು ಪ್ರತಿಭಟಿಸಿದ ವಿಷಯವನ್ನು ಅವರು ಜ್ಞಾಪಿಸಿದರು.

ಭೂ ಕಂದಾಯದ ಮೇಲೆ ಸರ್‌ಚಾರ್ಜ್ ಮತ್ತು ಇತರ ತೆರಿಗೆಗಳನ್ನು ಹಾಕಿರುವ ವಿಷಯವನ್ನು ಅವರು ಪ್ರಸ್ತಾಪಿಸಿ ಇದು ಸರ್ಕಾರದ ಸರ್ವಾಧಿಕಾರದ ಮತ್ತೊಂದು ನಿದರ್ಶನವೆಂದು ತಿಳಿಸಿದರು. ೩ ಕೋಟಿ ರೂ. ಯೋಜನೆಯನ್ನು ಸರಿತೂಗಿಸಲು ತೆರಿಗೆ ಹಾಕುವ ಬಗ್ಗೆ ಕಾಂಗ್ರೆಸ್ ಸಮಿತಿಯನ್ನು ಮುಖ್ಯ ಮಂತ್ರಿಯವರು ಕೇಳಲಿಲ್ಲವೆಂದು ಆಕ್ಷೇಪಿಸಿದರು. ಆಯವ್ಯಯ ಪಟ್ಟಿಯು ರಹಸ್ಯ ವಿಷಯವಾಗಿದ್ದರೂ ಮುಖ್ಯವಾದ ವಿಷಯಗಳ ಬಗ್ಗೆ ಸಮಿತಿಯ ಅಭಿಪ್ರಾಯವನ್ನು ಪಡೆಯುವುದಾಗಿ ಕೊಟ್ಟ ಭರವಸೆಯನ್ನು ಮುಖ್ಯ ಮಂತ್ರಿಗಳು ಗೌರವಿಸಲಿಲ್ಲವೆಂದು ಹೇಳಿದರು.

ಮಟ್ಟದೊಡ್ಡಿ ಪ್ರಕರಣದ ವಿಷಯವಾಗಿ ಅವರು ಮಾತನಾಡಿ ೫೦ ಎಕರೆ ಜಮೀನನ್ನು ರೈತರಿಗೆ ಇನ್ನೂ ಕೊಟ್ಟಿಲ್ಲದಿದ್ದರೂ ಶ್ರೀ ಸಿ. ನಂಜಪ್ಪನವರಿಗೆ ಪರಿಹಾರ ಕೊಡಲೇಸರ್ಕಾರ ಹಾಗುತ್ತಿರುವುದೆಂದೂ ಹೇಳಿದರು. ಜಿಲ್ಲಾ ಬೋರ್ಡುಗಳ ರದ್ದಿಯಾತಿಯನ್ನು ಅವರು ಖಂಡಿಸಿದರು.

ಮುಂದ ವರಿದು ಭಾಷಾವಾರು ಪ್ರಾಂತಗಳ ಬಗ್ಗೆ ಟೀಕೆಗವಕಾಶವಾಗುವಂತೆ ನಡೆದುಕೊಳ್ಳಕೂಡದೆಂದು ಕಾಂಗ್ರೆಸ್ಸಿನವರಿಗೆ ಹೈಕಮಾಂಡಿನ ಸೂಚನೆ ಇದ್ದರೂ ಸಹ ಈ ಬಗ್ಗೆ ಹೇಳಿಕೆಗಳನ್ನು ಕೊಡುತ್ತಿರುವುದಕ್ಕಾಗಿ ಅವರು ಆಕ್ಷೇಪಿಸಿದರು. ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದುದು ಯಾವೊಬ್ಬ ವ್ಯಕ್ತಿ ಪ್ರಯತ್ನದಿಂದಲ್ಲವೆಂದೂ, ದೈವಗತ್ಯವಾದದೆಂದೂ, ಕೇಂದ್ರ ಸರ್ಕಾರದ ಔದಾರ್ಯದಿಂದ ಅದು ಆಯಿತೆಂದೂ ಶ್ರೀ ಚನ್ನಯ್ಯನವರು ಹೇಳಿದರು.

ಹಣಕಾಸಿನ ಮುಗ್ಗಟ್ಟಿನಿಂದ ವಿದ್ಯಾರ್ಥಿನಿಯರ ಶುಲ್ಕದ ರಿಯಾಯಿತಿ ರದ್ದು

ಶಾಸನ ಸಭೆಯಲ್ಲಿ ಪ್ರಶ್ನೆಗಳಿಗೆ ವಿದ್ಯಾ ಮಂತ್ರಿಗಳ ಉತ್ತರ

ಸ್ವಂ. ಸು ಫೋರ್] ಬೆಂಗಳೂರು ೮

ಈ ದಿನ ಶಾಸನ ಸಭೆಯಲ್ಲಿ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರುಗಳಿಗೆ ಕೊಟ್ಟಿದ್ದ ವಿದ್ಯಾ ಶುಲ್ಕದ ರಿಯಾಯಿತಿಯನ್ನು ರದ್ದು ಮಾಡಿರುವ ಬಗ್ಗೆ ಪ್ರಶ್ನೆಗಳನ್ನು ಹಾಕಿದರು. ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಉತ್ತರವಿತ್ತು ಹಣಕಾಸಿನ ಮುಗ್ಗಟ್ಟಿನಿಂದಾಗಿ ಶುಲ್ಕದ ರಿಯಾಯಿತಿಯನ್ನು ರದ್ದು ಮಾಡಲಾಯಿತೆಂದು ನುಡಿದರು. ತೆರಿಗೆ ವಿಧಿಸುವ ಬಗ್ಗೆ ಹೊಸ ಮಸೂದೆಯೊಂದು ಸಭೆಯಲ್ಲಿ ಚರ್ಚೆಯಾಗುತ್ತಿದೆ.

ಶೇಷಾದ್ರಿ ಭವನದಲ್ಲಿ ಮೆಡಿಕಲ್ ಕಾಲೇಜ್ ವಿದ್ಯಾರ್ಥಿನಿಯರಿಗೆ ನಿವಾಸ

ರಾಜಧಾನಿಯಲ್ಲಿರುವ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರ ನಿವಾಸಕ್ಕಾಗಿ ಶೇಷಾದ್ರಿ ಭವನವನ್ನು ಬಿಟ್ಟುಕೊಡಲಾಗುವುದೆಂದೂ, ಆ ಕಟ್ಟಡದಲ್ಲಿರುವ ಕಛೇರಿಗಳನ್ನು ಖಾಲಿ ಮಾಡುವಂತೆ ಆಜ್ಞೆ ಮಾಡಲಾಗಿದೆಯೆಂದೂ ವಿದ್ಯಾ ಮಂತ್ರಿಗಳು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಪೆಪ್ಸುವಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತದ ಮುಕ್ತಾಯ

ಕಳೆದ ವರ್ಷ ಪೆಪ್ಸುವಿನಲ್ಲಿ ಸರ್ದಾರ್ ಜ್ಞಾನಸಿಂಗ್ ರಾರೆವಾಲರ ಸರ್ಕಾರವು ಉರುಳಿದಾಗಿನಿಂದ ಅಲ್ಲಿ ಆರಂಭವಾದ ರಾಷ್ಟ್ರಾಧ್ಯಕ್ಷರ ಆಡಳಿತವು, ಇಂದು ನೂತನವಾಗಿ ಚುನಾಯಿತರಾದ ಕರ್ನಲ್ ರಘುಬೀರ್ ಸಿಂಗರು ಅಧಿಕಾರ ವಹಿಸಿಕೊಂಡ ಕ್ಷಣದಿಂದ ಅಂತ್ಯಗೊಳ್ಳುವುದು.

೧೧೦ ಜನ ವರ್ತಕರ ದಸ್ತಗಿರಿ

ಆಗ್ರಾ ನಗರದ ಪೌರಸಭೆಗೆ ಬಾಡಿಗೆ ಬಾಕಿ ಕೊಡದಿರುವ ವರ್ತಕರು ಮಳಿಗೆಗಳನ್ನು ಖಾಲಿ ಮಾಡುವಂತೆ ಅವರಿಗೆ ಪೌರಸಭೆಯವರು ಕೊಟ್ಟ ನೋಟೀಸನ್ನು ಪ್ರತಿಭಟಿಸಲು ಕಳೆದ ಬುಧವಾರ ವರ್ತಕರು ಹರತಾಳವನ್ನು ಆಚರಿಸಿದರೆಂದು ವರದಿಯಾಗಿದೆ. ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ದೆಸೆಯಿಂದ ೧೧೦ ಜನ ವರ್ತಕರನ್ನು ದಸ್ತಗಿರಿ ಮಾಡಲಾಗಿದೆ. ಅವರು ಖಾನೆ ಪಲ್ಲಟರೆಂದು ಹೇಳಲಾಗಿದೆ.

ಸ್ತ್ರೀ ವೇಷಧರಿಸಿ ಪಾರ್ಕಿಗೆ ಹೋದ ವಿದ್ಯಾರ್ಥಿಗಳ ಬಂಧನ

ಪಾಕಿಸ್ತಾನದ ಮುಲ್ತಾನ್ ನಗರದಲ್ಲಿ ಮಹಿಳೆಯರನ್ನು ಮಾತ್ರ ಉದ್ಯಾನವನಕ್ಕೆ ಬಿಡುವುದಾಗಿ ಪ್ರಕಟಿಸಿದ ದಿನ ಸ್ತ್ರೀವೇಷ ಧರಿಸಿದ್ದ ೩ ಮಂದಿ ವಿದ್ಯಾರ್ಥಿಗಳು ಅಲ್ಲಿಗೆ ಹೋದ ಮಹಿಳೆಯರ ಮಧ್ಯೆ ಕಂಡು ಬಂದು ಪೋಲೀಸರಿಗೆ ದೂರು ಕೊಡಲಾಗಿ ಅವರುಗಳನ್ನು ದಸ್ತಗಿರಿ ಮಾಡಲಾಯಿತು.

ಮೋಹನ್‌ದಾಸ್ ತುಳಸಿರಾಂ ಆಸ್ಪತ್ರೆಯ ಹೊಸ ವೈದ್ಯರು

ಮೈಸೂರು ೭

ರಾಜಧಾನಿಯ ಚಾಮುಂಡಿಪುರದಲ್ಲಿರುವ ಮೋಹನದಾಸ್ ತುಳಸೀರಾಂ ಆಸ್ಪತ್ರೆಯ ವೈದ್ಯಾಧಿಕಾರಿಣಿಯಾಗಿ ಬೆಂಗಳೂರು ವಾಣಿ ವಿಲಾಸ ಆಸ್ಪತ್ರೆಯ ಆರ್. ಎಂ. ಒ ರವರಾದ ಶ್ರೀಮತಿ ಆರ್. ಪದ್ಮಾ ಸುಂದರಂರವರನ್ನು ನಿಯಮಿಸಲಾಗಿದೆ. ಅವರ ಸ್ಥಾನಕ್ಕೆ ಶ್ರೀಮತಿ ದೇವಮ್ಮನವರನ್ನು ನೇಮಿಸಲಾಗಿದೆ.

ಸೂಪರಿಂಟೆಂಡಿಂಗ್ ಇಂಜನಿಯರುಗಳ ವರ್ಗಾವರ್ಗಿ

ಸರ್ಕಾರದವರು ಸೂಪರಿಂಟೆಂಡಿಂಗ್ ಇಂಜನಿಯರುಗಳ ವರ್ಗಾವಣೆಯನ್ನು ಈ ರೀತಿ ಮಾಡಿರುತ್ತಾರೆ —ಬೆಂಗಳೂರಿನಿಂದ ಶ್ರೀ ಪಿ. ರಾಮಸ್ವಾಮಯ್ಯನವರನ್ನು ಕಾವೇರಿ ಸರ್ಕಲ್ಲಿಗೆ, ಶಿವಮೊಗ್ಗೆ ಜಿಲ್ಲೆಯಿಂದ ಶ್ರೀ ಕೃಷ್ಣಸ್ವಾಮಿ ಮುದಲಿಯಾರರನ್ನು ಬೆಂಗಳೂರು ಜಿಲ್ಲೆಗೆ, ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಶ್ರೀ ಎಂ. ಎಸ್. ಮಾಧವರಾಯರನ್ನು ಮರಾಮತ್ತು ಇಲಾಖೆಗೆ ವಾಪಸು ಕಳುಹಿಸಿ, ಶಿವಮೊಗ್ಗೆಗೆ

ಪಾಕಿಸ್ತಾನ-ಅಮೆರಿಕದ ಮಿಲಿಟರಿ ಸಹಾಯಕ್ಕೆ ನೇಪಾಳದ ವಿರೋಧ

ಅಮೆರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ನೀಡುವುದನ್ನು ನೇಪಾಳವು ವಿರೋಧಿಸುತ್ತದಾಗಿ ಅಲ್ಲಿನ ವಿದೇಶಾಂಗ ಮಂತ್ರಿ ಡಿ. ಆರ್. ರೆಗ್ಮಿಯವರು ತಿಳಿಸಿರುತ್ತಾರೆ. ಅಮೆರಿಕವು ಪಾಕಿಸ್ತಾನದಲ್ಲಿ ಯುದ್ಧದ ನೆಲೆಗಳನ್ನು ಪಡೆಯುವುದರಿಂದ ಈ ಇಡೀ ಪ್ರದೇಶವನ್ನೇ ಯುದ್ಧದ ಬೇಗೆಗೆ ನೂಕಿದಂತೆ ಆಗುವುದೆಂದೂ ಅದರಿಂದ ನೇಪಾಳವು ಜಾಗರೂಕತೆಯಿಂದ ಇರಬೇಕಾಗುವುದೆಂದೂ ಅವರು ತಿಳಿಸಿರುತ್ತಾರೆ.

ಐರೋಪ್ಯ ರಾಷ್ಟ್ರಗಳಿಗೆ ಅಮೆರಿಕದ ಸಹಾಯ

ರಕ್ಷಣೆಗೆ ಉಪಯೋಗವಾಗುವ ಸಾಮಗ್ರಿಗಳನ್ನು ತಯಾರಿಸುತ್ತಿದೆಯೆಂದು ಬ್ರಿಟನ್, ಫ್ರಾನ್ಸ್, ಇಟಲಿ ಮತ್ತು ನಾರ್ವೆಗಳ ಮೇಲೆ ದೂರುಗಳು ಬರುತ್ತಿದ್ದರೂ ಸಹ, ಅವುಗಳನ್ನು ಕಡೆಗಣಿಸಿ, ಆ ರಾಷ್ಟ್ರಗಳಿಗೆ ಸಹಾಯವನ್ನು ಅಮೆರಿಕವು ಒದಗಿಸುವಂತೆ ಆಜ್ಞೆ ಮಾಡಲಾಗಿದೆ. ಸಹಾಯವನ್ನು ನಿಲ್ಲಿಸಿದರೆ ಅಮೆರಿಕೆಗೆ ಧಕ್ಕೆಯೊದಗುವುದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಿರುವರು.

೨೧೭ ದಿನಗಳಿಂದ ಪ್ರಜ್ಞಾವಿಹೀನಳಾಗಿರುವ ಯುವತಿ

ಇಂಗ್ಲೆಂಡಿನ ಮಿಡಲ್‌ಸೆಕ್ಸ್ ಪ್ರಾಂತದ ವಿಲ್ಸ್‌ವರ್ತ್ ಆಸ್ಪತ್ರೆಯಲ್ಲಿ ೨೧೭ ದಿನಗಳಿಂದಲೂ ಪ್ರಜ್ಞಾವಿಹೀನ ಸ್ಥಿತಿಯಲ್ಲಿರುವ ಕ್ಯಾಥ್ಲೀನ್ ಪಾಚೆಲ್ ಎಂಬ ಸುಂದರ ಯುವತಿಯೊಬ್ಬಳು ಇರುತ್ತಾಳೆ. ೨ ವರ್ಷಗಳ ಹಿಂದೆ ಆಕೆಯು ಮೋಟಾರು ಅಪಘಾತಕ್ಕೆ ಸಿಕ್ಕಿ ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಳು. ಈಗ ಆಕೆಯು ತನ್ನ ಬಂಧುಗಳನ್ನು ಗುರುತಿಸಬಲ್ಲವಳಾಗಿದ್ದಾಳೆ. ಆಕೆಯ ಸ್ಥಿತಿಯಲ್ಲಿ ಬದಲಾವಣೆಯೇ

ನ - ಕಿ - ಎ - ಓ - ಪ್ಪ

ಪ್ರಕೃತಿ ವಿಜ್ಞಾನ ಸಂಘದ ಸಮಾರೋಪ ಭಾಷಣ

ಮೈಸೂರು, ೭

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನಿನ್ನೆ ಪ್ರಥಮ ದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನ ಸಂಘದ ಸಮಾರೋಪ ಭಾಷಣ ಮಾಡಿ ವಿದ್ಯಾರ್ಥಿಗಳು ಧ್ಯೇಯ ನಿಷ್ಠರಾಗಿ ಬಾಳಬೇಕೆಂದು ತಿಳಿಸಿದರು. ಸ್ಫೂರ್ತಿ ಶಕ್ತಿ ಮತ್ತು ಉನ್ನತ ಆದರ್ಶಗಳನ್ನು ಇಟ್ಟುಕೊಂಡು ಅವರು ನಿಜವಾದ ದೇಶಾಭಿಮಾನಿಗಳಾಗಲು ಸಿದ್ಧತೆ ಮಾಡಿಕೊಳ್ಳಬೇಕೆಂದು ಸೂಚಿಸಿದರು. ರಾಷ್ಟ್ರದ ರಕ್ಷಣೆಗೆ ಅತ್ಯಗತ್ಯವಾದ ಸೇನಾ ದಳದಲ್ಲಿಯೂ ಅವರುಗಳು ಭಾಗವಹಿಸಿ ಸೇವೆ ಸಲ್ಲಿಸಬೇಕೆಂದು ಕೋರಿದರು.

ಶ್ರೀ ವಿಜಯರಾಘವಾಚಾರ್ಯರಿಂದ ಪ್ರಾರ್ಥನೆ, ಶ್ರೀ ವಿ ತಿ ಜೊಕ್ಕಮ್ಮನವರಿಂದ ಗಾಯನ, ಶ್ರೀ ಕೆ ಟಿ ಗಣಪತಿಯವರಿಂದ ರಂಗನಾಥಿಕೆರು ವಂದನೆ, ಶ್ರೀ ಕೆ ಎಸ್ ನಾರಾಯಣಾಚಾರ್ಯರಿಂದ ಭಾರತ ವಾಚನವು ನಡೆದನಂತರ ಪ್ರಿನ್ಸಿಪಾಲರಾದ ಡಾ|| ಎಲ್ ಸೀಬಯ್ಯನವರು ಸ್ವಾಗತ ಭಾಷಣ ಮಾಡಿ ಕಾಲೇಜು ದಿನ ದಿನಕ್ಕೆ ಬೆಳೆಯುತ್ತಿರುವ ಆ ಕಸವನ್ನು ತಿಳಿಸಿ ಅದಕ್ಕೆ ಸರ್ಕಾರದವರು ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಕೋರಿದರು.

ಕಾರ್ಯದರ್ಶಿಗಳಾದ ಶ್ರೀ ರೆಹ್ [illegible] ನರ್ಸೇರ್ಗನರು ಸಂಘದ ವರದಿಯನ್ನು ಒಪ್ಪಿಸಿದರು. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಸಚಿವರು ಬಹುಮಾನಗಳನ್ನು ಹಂಚಿದರು.

ಸಂಘದ ಅಧ್ಯಕ್ಷರಾದ ಡಾ|| ನಾರಾಯಣರಾಯರು ವಂದನಾರ್ಪಣೆಯನ್ನು ಮಾಡಿ ಸಚಿವರ ಈ ಪ್ರಥಮ ಭೇಟಿಯಿಂದ ಕಾಲೇಜಿನ ಅಭಿವೃದ್ಧಿಯು ಇತೋಪ್ಯತಿಶಯವಾಗಿ ಸಾಧಿಸಲ್ಪಡಲಿ ಎಂದು ಹಾರೈಸಿದರು.

ಉತ್ತರ ಕರ್ನಾಟಕ ವಿದ್ಯಾರ್ಥಿ ಸಂಘ

ಮೈಸೂರ್ ರಸ್ತೆಯಲ್ಲಿರುವ ಉತ್ತರ ಕರ್ನಾಟಕ ವಿದ್ಯಾರ್ಥಿ ನಿಲಯದ ದಿನಾಚರಣೆಯನ್ನು ನಿನ್ನೆ ಸಂಜೆ ಪ್ರಸಿದ್ಧ ಸಾಹಿತಿ "ಆನಂದ" ರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀ ಶ್ರೀನಿವಾಸರಾಯರಿಂದ ಪ್ರಾರ್ಥನೆ, ಮತ್ತು ಶ್ರೀ ಪಿ ಬೆಟ್ಟದೂರ್‌ರವರಿಂದ ಸ್ವಾಗತವಾದನಂತರ ಶ್ರೀ ಎಸ್ ಎನ್ ಪಾಟೀಲರು ನಿಲಯದ ವರದಿಯನ್ನು ಒಪ್ಪಿಸಿದರು. ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳು ನಡೆದ ಮೇಲೆ ಶ್ರೀ ತ ರಾ ಸುಬ್ಬರಾಯರು ಮಾತನಾಡಿ ಆಯುರ್ವೇದಾಭ್ಯಾಸಿಗಳಾದ ಈ ನಿಲಯದ ವಿದ್ಯಾರ್ಥಿಗಳು ದೇಶ ಸೇವೆ ಮಾಡಲು ನಿಸ್ವಾರ್ಥತೆಯಿಂದ ಶ್ರಮಿಸಬೇಕೆಂದು ನುಡಿದರು. ಅಧ್ಯಕ್ಷರು ಭಾಷಣ ಮಾಡಿ, ವಿದ್ಯಾರ್ಥಿಗಳು ಕರ್ನಾಟಕ ಏಕೀಕರಣಕ್ಕಾಗಿ ದುಡಿಯಬೇಕೆಂದು ಹೇಳಿದರು.

ಅಮೆರಿಕಾ ಪಾಕಿಸ್ತಾನ್ ಮಿಲಿಟರಿ ಒಪ್ಪಂದದ ಖಂಡನಾ ಸಭೆ

ರಾಜಧಾನಿಯ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ನಿನ್ನೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಅಮೆರಿಕಾ ಪಾಕಿಸ್ತಾನ ಮಿಲಿಟರಿ ಒಪ್ಪಂದವನ್ನು ಖಂಡಿಸುವ ಒಂದು ಸಭೆಯು ನಡೆಯಿತು. ಶ್ರೀಗಳಾದ ಎಂ ಎ ಉಗ್ರಪ್ಪ, ಡಿ ಆರ್ ಕೃಷ್ಣಮೂರ್ತಿ ಮತ್ತು ಅನಂತ ಸುಬ್ಬರಾಯರುಗಳು ಭಾಷಣ ಮಾಡಿದರು. "ಅಮೆರಿಕಾ ಪಾಕಿಸ್ತಾನ ಮಿಲಿಟರಿ ಒಪ್ಪಂದಕ್ಕೆ ಧಿಕ್ಕಾರ ಮತ್ತು ಭಾರತ - ಪಾಕಿಸ್ತಾನಗಳ ನಡುವೆ ಸೌಹಾರ್ದ ಚಿರಾಯುವಾಗಲಿ" ಎಂಬ ಘೋಷಣೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಚೌಲೋಪನಯನ

ಮೈಸೂರಿನ ಧರ್ಮಜ್ಞಾನ ಗುರುಕುಲಾಶ್ರಮದ ಶ್ರೀ ಓ ಶಂಕರಶಾಸ್ತ್ರಿಗಳ ಕುಮಾರ ಚಿ|| ಚಂದ್ರಶೇಖರನಿಗೆ ಚೌಲೋಪನಯನವೂ ಶ್ರೀ ವೈ ಎಸ್ ನಾರಾಯಣರವರ ಕುಮಾರ ಚಿ|| ನಾಗರಾಜನ ವರ್ಷವರ್ಧಂತಿ ಮಹೋತ್ಸವವೂ ನಿನ್ನೆ ಸರ್ವಮಾನ್ಯ ಉತ್ತನಹಳ್ಳಿಯಲ್ಲಿ ಜರಗಿತು.

ಜ್ಯೋತಿ ಬಸುರವರ ಬಿಡುಗಡೆ

ಪಶ್ಚಿಮ ಬಂಗಾಳದ ಉಪಾಧ್ಯಾಯರುಗಳ ಮುಷ್ಕರದ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದ ಅಲ್ಲಿನ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಜ್ಯೋತಿ ಬಸು ಮತ್ತು ಇತರ ೫೫ ಮಂದಿಯನ್ನು ಮೊನ್ನೆ ರಾತ್ರಿ ಖುಲಾಸೆ ಮಾಡಲಾಯಿತು.

ಎದೆಯ ಬಲಭಾಗದಲ್ಲಿ ಹೃದಯ

ಸೈಪ್ರಸ್ ದ್ವೀಪದ ೭ ವರ್ಷದ ಟೌಲಾನಿ ಕಾಮು ಎಂಬ ಹುಡುಗಿಯು ನಿಕೋಸಿಯಾ ಆಸ್ಪತ್ರೆಗೆ ಇನ್‌ಫ್ಲುಯಂಜಾ ಖಾಯಿಲೆಗಾಗಿ ಸೇರಿಸಲ್ಪಟ್ಟಳೆಂದೂ ಆಕೆಯನ್ನು ಪರೀಕ್ಷಿಸಲಾಗಿ ಆಕೆಯ ಎದೆಯ ಬಲಭಾಗದಲ್ಲಿ ಹೃದಯವಿದ್ದುದು ಗೊತ್ತಾಯಿತೆಂದೂ ವರದಿಯಾಗಿದೆ. ಇದರಿಂದ ಆಕೆಗೆ ಯಾವ ತೊಂದರೆಯೂ ಆಗಲಿಲ್ಲವೆಂದು ಹೇಳಲಾಗಿದೆ.

ವರ್ಷಕ್ಕೆ ಒಬ್ಬನೇ ಪ್ರಯಾಣಿಕನನ್ನುಳ್ಳ ರೈಲ್ವೆ ನಿಲ್ದಾಣ

ವರ್ಷಕ್ಕೆ ಸರಾಸರಿ ಒಬ್ಬನೇ ಒಬ್ಬ ಪ್ರಯಾಣಿಕನನ್ನುಳ್ಳ ಒಗ್‌ವಾರ್ಯರ್ ಎಂಬ ಒಂದು ರೈಲ್ವೆ ನಿಲ್ದಾಣವು ಆಸ್ಟ್ರೇಲಿಯದ ಮೆಲ್ಬೋರ್ನ್ ಪಟ್ಟಣದ ಬಳಿ ಇರುತ್ತದೆ. ಇಲ್ಲಿ ಗಾಡಿಯನ್ನು ನಿಲ್ಲಿಸಲು ಒಂದು ಕೆಂಪು ಬಾವುಟವನ್ನು ಜೋಪಾನವಾಗಿ ಇಡಲಾಗಿದೆ.

ಹೋಟೇಲುಗಳ ಮೇಲಿನ ಹೊಸ ವ್ಯಾಪಾರದ ತೆರಿಗೆ ಅಕ್ರಮವೇ?

ಶ್ರೀ|| ಗಾ [illegible] ಹೊಸ ಹೋಟೇಲುಗಳ ಮೇಲೆ ವ್ಯಾಪಾರದ ಮೇಲಿನ ತೆರಿಗೆ ವಿಧಿಸಿದ್ದಾಗಿ ಶಾಸನ ಸಭೆಯ ಆಯವ್ಯಯದ ಕಾರ್ಯಕ್ರಮಗಳಿಂದ ಪ್ರಕಟವಾಗಿರುವ ವಿಚಾರದಲ್ಲಿ ಶ್ರೀಗಳಾದ ಎ ಎಸ್ [illegible] ಮತ್ತು ತಗಡೂರು ರಾಮಚಂದ್ರರಾಯರು ಸಭಾಧ್ಯಕ್ಷರಾದ ಶ್ರೀ ಹೆಚ್ ಸಿದ್ಧಯ್ಯನವರಿಗೆ ಪತ್ರವೊಂದನ್ನು ಬರೆದು ಈ ರೀತಿ ತೆರಿಗೆಯನ್ನು ವಿಧಿಸುವುದು ಮಾಮೂಲಿನ ತೆರಿಗೆಯಾಗುವುದಿಲ್ಲವೆಂದೂ ವ್ಯಕ್ತಿಯ ಮೇಲಿನ ತೆರಿಗೆಯಾಗುವುದೆಂದೂ ಸೂಚಿಸಿ ಇದು ರಾಜ್ಯಾಂಗಕ್ಕೆ ವಿರುದ್ಧವಾಗುವುದೆಂದೂ ಹೇಳಿ ಹಾಗೆ ತೆರಿಗೆಯನ್ನು ವಿಧಿಸುವುದಕ್ಕೆ ಮೊದಲು ಸಂಪೂರ್ಣವಾಗಿ ಪರಿಶೀಲಿಸಬೇಕೆಂದು ಕೋರಿದ್ದಾರೆ. ರಾಜ್ಯಾಂಗದ ನಿಯಮಗಳನ್ನು ಉಲ್ಲಂಘಿಸಿ ಶಾಸನ ಮಾಡಿದರೆ ನ್ಯಾಯಸ್ಥಾನದಲ್ಲಿ ಊರ್ಜಿತವಾಗುವುದಿಲ್ಲವೆಂದು ಸಹ ತಿಳಿಸಿರುತ್ತಾರೆ.

ಹೋಟೇಲು ಕೆಲಸಗಾರರಿಗೆ ಪರಿಹಾರ

ತಾ|| ೩-೩-೫೪ರಲ್ಲಿ ಮೈಸೂರು ಸಿಟಿ ನ್ಯೂ ರಥದ ರಸ್ತೆಯಲ್ಲಿರುವ ಜಯ ಕೆಫೆಯ ಮಾಲೀಕರು ಅಲ್ಲಿನ ನಾಲ್ಕು ಜನ ಕೆಲಸಗಾರರನ್ನು ತೆಗೆದುಹಾಕಿದ್ದಕ್ಕಾಗಿ ನಿಯೋ ಹೋಟೆಲ್ ಕೆಲಸಗಾರರ ಸಂಘದವರು ದೂರು ಕೊಟ್ಟಿದ್ದು ತಾ|| ೬-೩-೫೪ ರಲ್ಲಿ ಅಂಗಡಿ ಕಾನೂನಿನ ಅಧಿಕಾರಿಗಳಾದ ಶ್ರೀ ಎಸ್ ನಾಗಪ್ಪನವರು ಐದು ತಿಂಗಳು ಸರ್ವಿಸ್ ಆಗಿದ್ದ ನಾಲ್ಕು ಜನ ಕೆಲಸಗಾರರಿಗೂ ತಲಾ ಒಂದೂವರೆ ತಿಂಗಳ ಸಂಬಳವನ್ನು ಪರಿಹಾರವಾಗಿ ಕೊಡಿಸಿರುತ್ತಾರೆ.

ದೇಶಾಭಿಮಾನ

ರಾಜಧಾನಿಯ ಮರಿಮಲ್ಲಪ್ಪನವರ ಪ್ರಾಥಮಿಕ ಶಾಲಾ ಅಧ್ಯಾಪಕರಾದ ಶ್ರೀ ಎ ಬಿ ಅಣ್ಣಯ್ಯಪ್ಪನವರಿಂದ ಬರೆಯಲ್ಪಟ್ಟಿರುವ ದೇಶಾಭಿಮಾನ ಎಂಬ ಚಿಕ್ಕ ಕಥೆ ಪುಸ್ತಕದ ಪ್ರತಿಯೊಂದನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಹೆಸರಿಗೆ ತಕ್ಕಂತೆ ದೇಶಾಭಿಮಾನವು ಪ್ರತಿ ಮಾನವನಿಗೂ ಉಂಟಾಗಲೆಂಬ ಉದ್ದೇಶದಿಂದ ಗ್ರಂಥಕಾರರು ನಾಯಕನಾಯಕಿಯರಾಗಿ ಶ್ರೀಮಂತರ ಮನೆಯಲ್ಲಿ ಹುಟ್ಟಿ ಕಾಲೇಜಿನಲ್ಲಿ ಓದಿದ ಯುವಕ ಮತ್ತು ಶ್ರೀಮಂತನೊಬ್ಬನ ಕೈಹಿಡಿದ ಮಹಿಳೆ ಈ ಇಬ್ಬರೂ ಹೇಗೆ ಆದರ್ಶವಾಗಿ ಬಾಳಿದರೆಂಬುದನ್ನು ತಿಳಿಸಿರುತ್ತಾರೆ. ಮಹಾರಾಜಾ ಸಂಸ್ಕೃತ ಕಾಲೇಜಿನ ಶ್ರೀ ಎಂ ಜಿ ನಂಜುಂಡಾರಾಧ್ಯರು ಇದಕ್ಕೆ ಮುನ್ನುಡಿ ಬರೆದಿರುತ್ತಾರೆ. ಶ್ರೀ ಗಾಯತ್ರಿ ಗ್ರಂಥಮಾಲೆಯ ೨ನೇ ಪ್ರಕಟಣೆಯಾಗಿ ಇದು ಹೊರಬಿದ್ದಿದೆ. ಪ್ರಭಾ ಪ್ರೆಸ್ಸಿನಲ್ಲಿ ಇದು ದೊರೆಯುವುದು. ಬೆಲೆ ೪ ಆಣೆ.

ಚಿತ್ರದುರ್ಗ ಜಿಲ್ಲೆಯ ಕೆರೆಗಳು ಒಡೆದ ಬಗ್ಗೆ ಕಾರಣ

ನಿರ್ಮಾಣದಲ್ಲಿ ದೋಷವಿದ್ದಿತೆಂದು ತನಿಖೆ ಸಮಿತಿಯ ಅಭಿಪ್ರಾಯ

ಬೆಂಗಳೂರು ೮

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಸಂಗೇನಹಳ್ಳಿ ಮತ್ತು ತುಪ್ಪದಹಳ್ಳಿ ಕೆರೆಗಳ ಏರಿಗಳು ಕಳೆದ ವರ್ಷದ ಮಳೆಯ ಪರಿಣಾಮವಾಗಿ ಒಡೆದು ಹೋದುದಕ್ಕೆ ಕಾರಣವನ್ನು ಕಂಡುಹಿಡಿಯಲು ನಿರ್ಮಾಣವಾಗಿದ್ದ ಸಮಿತಿಯ ಅಭಿಪ್ರಾಯದಂತೆ ಏರಿಗಳ ನಿರ್ಮಾಣದಲ್ಲಿ ದೋಷವಿದ್ದಿತೆಂದು ಹೇಳಲಾಗಿದೆ. ಇದಕ್ಕೆ ಜವಾಬ್ದಾರರಾದವರ ಮೇಲೆ ಕ್ರಮ ಕೈಗೊಳ್ಳುವಂತೆಯೂ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತದೆ. ಈ ವರದಿಯನ್ನು ಸರ್ಕಾರದವರು ಅಂಗೀಕರಿಸಿ ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಿರುತ್ತಾರೆ. ಸಂಗೇನಹಳ್ಳಿ ಕೆರೆಯನ್ನು ೧|| ಲಕ್ಷ ರೂ ಮತ್ತು ತುಪ್ಪದಹಳ್ಳಿ ಕೆರೆಯನ್ನು ೧೬೦,೦೦೦ ರೂ ವೆಚ್ಚದಲ್ಲಿ ರಿಪೇರಿ ಮಾಡಿಸುವಂತೆ ಸಮಿತಿಯು ಪಟ್ಟಿರುವ ಅಭಿಪ್ರಾಯವನ್ನು ಸರ್ಕಾರದವರು ಒಪ್ಪಿರುತ್ತಾರೆ. ಸಮಿತಿಯ ೩ ಜನ ಸದಸ್ಯರುಗಳ ಪೈಕಿ ಶ್ರೀ ಎಲ್ ಸಿದ್ದಪ್ಪ ಮತ್ತು ಶ್ರೀ ಹೆಚ್ ಆರ್ ಗುರುವಾರೆಡ್ಡಿಯವರು ಒಪ್ಪಿಸಿರುವ ಪ್ರತ್ಯೇಕ ಸೂಚನೆಯಲ್ಲಿ ಇಂಜನಿಯರುಗಳು ಲಂಚಕೋರರಾಗಿದ್ದರೆಂದೂ, ಕೀಳುಮಟ್ಟದ ಕೆಲಸಕ್ಕೆ ಹೆಚ್ಚು ದರಗಳನ್ನು ಕೊಟ್ಟು ತಮ್ಮ ಕರ್ತವ್ಯದಲ್ಲಿ ಪೂರ್ಣ ಔದಾಸೀನ್ಯ ವಹಿಸಿದ್ದರೆಂದೂ ತಿಳಿಸಿರುತ್ತಾರೆ.

ಸಂಸ್ಥಾನದಲ್ಲಿ ವೈದ್ಯರಿಲ್ಲದ ೪೯ ಆಸ್ಪತ್ರೆಗಳು

ಸಂಸ್ಥಾನದಲ್ಲಿ ೯೯ ದೊಡ್ಡ ಆಸ್ಪತ್ರೆಗಳೂ ೬೩೯ ಔಷಧಾಲಯಗಳೂ ಇರುವುವೆಂದೂ, ೪೯ ಔಷಧಾಲಯಗಳಲ್ಲಿ ವೈದ್ಯರುಗಳಿಲ್ಲವೆಂದೂ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ಮೊನ್ನೆ ಶಾಸನ ಸಭೆಯಲ್ಲಿ ತಿಳಿಸಿದರು. ಮುಖ್ಯಮಂತ್ರಿಯವರು ಮಾತನಾಡಿ ಮಲೆನಾಡು ಪ್ರದೇಶಕ್ಕೆ ಹೋಗಲು ವೈದ್ಯರುಗಳು ಹಿಂದೆ ಸರಿಯುತ್ತಿರುವರೆಂದೂ ಅವರುಗಳು ಹೋಗುವಂತೆ ಉತ್ತೇಜಿಸುವ ಕ್ರಮ ಕೈಗೊಳ್ಳಲು ಸರ್ಕಾರದವರು ಆಲೋಚಿಸುತ್ತಿರುವರೆಂದೂ ತಿಳಿಸಿದರು. ವಿಶೇಷ ವೈದ್ಯರಿಂದ ತುಂಬಾ ತೊಂದರೆಯಾಗುತ್ತಿರುವುದೆಂದೂ ಅವರುಗಳನ್ನು ವರ್ಗಾಯಿಸಿದಾಗ, ಅದರ ರದ್ದಿಗಾಗಿ ನೂರಾರು ಶಿಫಾರಸುಗಳು ಬರುತ್ತಿರುವುವೆಂದೂ, ಈ ಬಗ್ಗೆಯೂ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದೆಂದೂ ಮುಖ್ಯಮಂತ್ರಿಯವರು ನುಡಿದರು.

೨ ಮಕ್ಕಳ ತಂದೆ ಸ್ತ್ರೀಯಾದ ಪ್ರಸಂಗ

ಯುದ್ಧ ಕಾಲದಲ್ಲಿ ಕಾದಾಟ ವಿಮಾನದ ಚಾಲಕನಾಗಿದ್ದ ಮತ್ತು ಎರಡು ಮಕ್ಕಳ ತಂದೆಯಾಗಿರುವ ಒಬ್ಬ ಬ್ರಿಟಿಷ್ ಪ್ರಜೆಯು ಈಗ ಪೂರ್ಣವಾಗಿ ಸುಂದರ ಸ್ತ್ರೀಯಾಗಿ ಪರಿವರ್ತಿಸಲ್ಪಟ್ಟಿರುತ್ತಾನೆ. ಇಂತಹ ಪರಿವರ್ತನೆಯು ವೈದ್ಯಕೀಯ ಚರಿತ್ರೆಯಲ್ಲಿಯೇ ಆಗಿಲ್ಲವೆಂದು ಹೇಳಲಾಗಿದೆ. ೧೯೫೧ರ ವರೆಗೂ ಅವನು ಬ್ರಾಬ್ ಕೆವೆಲ್ ಎಂಬ ಹೆಸರಿನ ಪುರುಷನಾಗಿದ್ದನು. ಈಗ ಎಲಿಜಬೆತ್ ಕೆವೆಲ್ ಆಗಿರುತ್ತಾನೆ. ೩೦ ವಯಸ್ಸಿನ ಮೇಲೆ ಗಂಡಸರು ಸ್ತ್ರೀಯರಾಗಿ ಪರಿವರ್ತಿತವಾಗುವುದು ಅತಿ ವಿರಳ. ಇಬ್ಬರು ಮಕ್ಕಳ ತಂದೆಯು ಹೀಗಾಗಿರುವುದನ್ನು ವೈದ್ಯರು ಇದುವರೆಗೂ ಕಂಡರಿಯರು. ಚಿಕ್ಕಂದಿನಲ್ಲಿ ಆತನು ರಗ್ಬಿ ಆಟವನ್ನು ಆಡುತ್ತಿದ್ದನೆಂದೂ, ನಂತರ ದ್ವಿತೀಯ ಯುದ್ಧ ಕಾಲದಲ್ಲಿ ಸೈನ್ಯಾಧಿಕಾರಿಯಾದನೆಂದೂ, ೧೯೫೧ರ ನಂತರ ಅವನ ಶರೀರದಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತ ಬಂದಿತೆಂದೂ, ಆತನು ವೈದ್ಯರಲ್ಲಿ ಸಲಹೆ ಕೇಳಿ ಸ್ತ್ರೀತ್ವಕ್ಕಾಗಿ ಚಿಕಿತ್ಸೆ ಪಡೆಯುತ್ತಾ ಬಂದನೆಂದೂ ಕಡೆಗೆ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸೆ ಮತ್ತು ಇತರ ಶಸ್ತ್ರ ಚಿಕಿತ್ಸೆಗಳು ನಡೆದುವೆಂದೂ ಹೇಳಲಾಗಿದೆ. ಒಬ್ಬ ಪುರುಷನು ಪೂರ್ಣವಾಗಿ ಮಹಿಳೆಯಾದುದು ಇದು ಮೊದಲನೇ ಪ್ರಸಂಗವೆಂದು ಹೇಳಲಾಗಿದೆ.

ರಾಷ್ಟ್ರೀಯ ಕೈಮಗ್ಗದ ದಿನಾಚರಣೆ

ಮೈಸೂರು, ೭

ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್ ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕೈಮಗ್ಗದ ದಿನಾಚರಣೆಯ ಆರಂಭೋತ್ಸವವು ನಡೆಯಿತು.

ಕು|| ಚಿಕ್ಕಮ್ಮಾಯಿಯವರ ಸಂಗೀತವಾದನಂತರ ಶ್ರೀ ಎಸ್. ಕೆ. ಲಕ್ಷ್ಮೀನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿ ಕೈಮಗ್ಗದ ಬಗೆ ವಿವರಗಳನ್ನು ಇತ್ತರು. [illegible] ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ಎ ಪಿ ರಾವ್ ಮತ್ತು ಶ್ರೀ ಸಿದ್ಧಲಿಂಗಪ್ಪನವರು ಮಾತನಾಡಿ ಕೈಮಗ್ಗವನ್ನು ಪ್ರೋತ್ಸಾಹಿಸಬೇಕೆಂದು ಕೋರಿದರು.

ಅಧ್ಯಕ್ಷರು ಭಾಷಣ ಮಾಡಿ ಕೈಮಗ್ಗಗಳ ಅಭಿವೃದ್ಧಿಗೆ ಜನಗಳಿಂದ ಪ್ರೋತ್ಸಾಹವು ದೊರಕಬೇಕೆಂದೂ, ಸ್ತ್ರೀಯರು ಕೈಮಗ್ಗದ [illegible] ಬಟ್ಟೆಗಳನ್ನು ಕೊಂಡು ಇನ್ನೂ ಬಟ್ಟೆಗೆ ಬೆಂಬಲ ಕೊಡಬೇಕೆಂದೂ ನುಡಿದು ಕೈಮಗ್ಗದ ಬಟ್ಟೆಗಳ ಪ್ರದರ್ಶನಕ್ಕೆ ಸೌಲಭ್ಯವನ್ನೊದಗಿಸಲು ತಾವು ಪ್ರಯತ್ನ ಪಡುವುದಾಗಿಯೂ ಹೇಳಿದರು. ಕೈಮಗ್ಗಗಳಿಗೆ ಬಣ್ಣ ಹಾಕುವ ಬಗ್ಗೆ ಒಂದು ಸಲಹಾ ಸಮಿತಿಯೇರ್ಪಡುವುದು ಉಚಿತವೆಂದು ಸೂಚಿಸಿದರು.

ಬದನವಾಳ ಮತ್ತು ತಿರುಪ್ಪೂರು ಖಾದಿ ಕೇಂದ್ರಗಳು ಮತ್ತು ಕೈಮಗ್ಗದ ಸಹಕಾರ ಸಂಘಗಳು ಬಟ್ಟೆಗಳ ಪ್ರದರ್ಶನವನ್ನು ಏರ್ಪಡಿಸಿದ್ದವು.

ವಿವಾಹ ಮಹೋತ್ಸವಗಳು

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರಾದ ಶ್ರೀ ಜಿ ರುದ್ರಪ್ಪನವರು ತಮ್ಮ ಪುತ್ರಿ ಚಿ|| ಸೌ|| ಗಿರಿಜಾಂಬಾರವರನ್ನು ದಾವಣಗೆರೆ ತಾಲ್ಲೂಕು ನಲಕುಂದದಲ್ಲಿರುವ ಶ್ರೀ ಎಂ ಕೆ ಮಹದೇವಪ್ಪನವರ ಪುತ್ರ ಶ್ರೀ ಎಂ ಕೆ ಚನ್ನಪ್ಪನವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನಿನ್ನೆ ಮೈಸೂರಿನಲ್ಲಿ ನೆರವೇರಿಸಿದರು.

ರಿಟೈರ್ಡ್ ರೈಲ್ವೆ ಟ್ರಾಫಿಕ್ ಇನ್ಸ್‌ಪೆಕ್ಟರ್ ಶ್ರೀ ಟಿ ಎನ್ ಸುಬ್ಬರಾಯರ ತಮ್ಮಂದಿರಾದ ರೈಲ್ವೆ ಗೂಡ್ಸ್ ಕ್ಲಾರ್ಕ್ ಶ್ರೀ ಟಿ ಎನ್ ಸೂರ್ಯನಾರಾಯಣರಾಯರ ಪುತ್ರಿ ಚಿ|| ಸೌ|| ಸಂಜೀವಮ್ಮನನ್ನು ಶ್ರೀ ಸಿ ಕೆ ರಾಮರಾಯರ ಕುಮಾರ ಶ್ರೀ ಪಿ ಆರ್ ಗೋವಿಂದರಾಯರಿಗೆ ಕೊಟ್ಟು ವಿವಾಹ ಮಹೋತ್ಸವವು ನಿನ್ನೆ ನೆರವೇರಿತು.

ಉಪನಯನ

ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದ ಪಾರುಪತ್ತೆಗಾರ್ ಶ್ರೀ ವೈ. ಸುಬ್ಬಾಶಾಸ್ತ್ರಿಗಳ ಕುಮಾರ ಚಿ|| ಗೋಪಾಲಕೃಷ್ಣನಿಗೆ ನಿನ್ನೆ ಬ್ರಹ್ಮೋಪದೇಶವು ನೆರವೇರಿಸಲ್ಪಟ್ಟಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ [illegible] ೭-೩೦ [illegible] ಎ ಜಿ ಸುಬ್ರಹ್ಮಣ್ಯಂ ಮತ್ತು ಅನಂತಲಕ್ಷ್ಮಿ [illegible] ಮಧ್ಯಾಹ್ನ ೧-೩೦ ಮತ್ತು [illegible] ಕೊಳಲು [illegible] ಮಹಿಳಾ ವಿಹಾರ–ದಾಸರ ಪದಗಳು, ವಿರಾಮ ವಿಹಾರ, ಗೃಹ ಕೈಗಾರಿಕೆ ಬಗ್ಗೆ ಭಾಷಣ ಇತ್ಯಾದಿ. ಸಂಜೆ [illegible] ವೆಂಕಟಸುಬ್ಬರಾವ್ ವೀಣೆ [illegible] ೭-೫ [illegible] ಸಂಗೀತ ೭-೩೦ [illegible] ಭಕ್ತಿ ಗೀತೆ [illegible] ಮತ್ತು ೯-೩೦ ಎಂ ಆರ್ ಸರೋಜಿನಿ ದೇವಿ ಸಂಗೀತ ೮-೩೦ [illegible] ನಗೆಯ ಬಗ್ಗೆ ಕನ್ನಡದಲ್ಲಿ ಸಂಭಾಷಣೆ

SRI GAYATHRI
TALKIES
From 9-3-54 1 or 2 Days Only
LONG AWAITED PICTURE
M G M s
PLYMOUTH ADVENTURE
(In Technicolor)
With – Spencer Tracy

Edited, Printed and Published by A R Nagarajan at Sadhvi Press D Subbiah Road, Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಬಿಡಿ ಪ್ರತಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ಡಿಸೈನುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಸನ್ಸ್
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨] MYSORE TUESDAY 9-3-1954 : ಮೈಸೂರು : ಮಂಗಳವಾರ ೯-೩-೧೯೫೪ [ಸಂಚಿಕೆ [illegible]

ಭಾರತ-ಪಾಕಿಸ್ತಾನಗಳಿಗೆ ೬ ನದಿಗಳ ನೀರಿನ ಹಂಚಿಕೆ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಲುವೆ ವ್ಯಾಜ್ಯದ ತೀರ್ಪು

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಲುವೆ ನೀರಿನ ಬಗ್ಗೆ ನಡೆಯುತ್ತಿರುವ ವ್ಯಾಜ್ಯವು ವಿಶ್ವ ಬ್ಯಾಂಕಿನವರ ತೀರ್ಮಾನದ ಇತ್ಯರ್ಥವಾಗಿರುವುದೆಂದು ವರದಿಯಾಗಿದೆ ಇದರಂತೆ ಸಿಂಧು, ಝೀಲಂ ಮತ್ತು ಚೀನಾಬ್ ನದಿಗಳ ನೀರನ್ನು ಪಾಕಿಸ್ತಾನವೂ, ರವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನೀರನ್ನು ಭಾರತವೂ ಪೂರ್ಣವಾಗಿ ಉಪಯೋಗಿಸಿಕೊಳ್ಳಬಹುದೆಂದು ಬ್ಯಾಂಕಿನವರು ಹೇಳಿರುವರೆಂದು ಗೊತ್ತಾಗಿದೆ ಈ ತೀರ್ಪಿನ ಪರಿಣಾಮವಾಗಿ ಪಾಕಿಸ್ತಾನವು ನಿರ್ಮಿಸಿಕೊಳ್ಳಬೇಕಾಗುವ ಕಾಲುವೆಗಾಗಿ ಭಾರತವು ೪೦ ರಿಂದ ೬೦ ಕೋಟಿ ರೂಗಳನ್ನು ಪರಿಹಾರವಾಗಿ ಕೊಡಬೇಕಾಗುವುದೆಂದು ಹೇಳಲಾಗಿದೆ ಪಾಕಿಸ್ತಾನಕ್ಕೆ ವಹಿಸಲಾಗಿರುವ ನದಿಗಳಿಂದ ಭಾರತದ ಎಲ್ಲೆಯೊಳಗೆ ವಿದ್ಯುಚ್ಛಕ್ತಿಯನ್ನು ತಯಾರಿಸಿಕೊಳ್ಳಲು ಅವಕಾಶವೀಯಲಾಗುವುದೆಂದೂ, ಆದರೆ ನೀರನ್ನು ಮಾತ್ರ ಭಾರತವು ತನ್ನ ಕಡೆಗೆ ತಿರುಗಿಸಿಕೊಳ್ಳಕೂಡದೆಂದೂ ಗೊತ್ತು ಮಾಡಲಾಗಿದೆ

ಪೆಪ್ಸುವಿನಲ್ಲಿ ಕಾಂಗ್ರೆಸ್ ಸರ್ಕಾರ

ಕಳೆದ ಮಾರ್ಚಿಯಿಂದ ಜಾರಿಗೆ ಬಂದಿದ್ದ ರಾಷ್ಟ್ರಾಧ್ಯಕ್ಷರ ಆಡಳಿತವು ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸಂಸ್ಥಾನಗಳ ಒಕ್ಕೂಟದಲ್ಲಿ ನೆನ್ನೆ ಕೊನೆಗೊಂಡಿತು ಅಲ್ಲಿನ ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಕರ್ನಲ್ ರಘುವೀರಸಿಂಗರು ನೆನ್ನೆ ತಮ್ಮ ಮಂತ್ರಿಮಂಡಲದೊಡನೆ ಅಧಿಕಾರ ಸ್ವೀಕಾರ ಮಾಡಿದರು

ಫ್ರೆಂಚ್ ಭಾರತದಲ್ಲಿ ಬಿಕ್ಕಟ್ಟು

ಫ್ರಾನ್ಸಿಗೆ ಸೇರಿರುವ ಭಾರತದ ವಿಭಾಗಗಳ ಆಡಳಿತ ನಿರ್ವಹಿಸುತ್ತಿರುವ ಕಮಿಷನರ್ ಮೇನಾರ್ಡ್‌ರವರಿಗೂ ಆಡಳಿತಗಾರರಾದ ರವಿನ್ಯೂ ಮಂತ್ರಿಗಳಿಗೂ ತೀವ್ರ ಭಿನ್ನಾಭಿಪ್ರಾಯವು ಬಂದಿರುತ್ತವೆ. ಮೇನಾರ್ಡ್‌ರವರನ್ನು ತೆಗೆದುಹಾಕುವಂತೆ ಮಂತ್ರಿಗಳು ಒತ್ತಾಯಪಡಿಸುತ್ತಾರೆ. ರವಿನ್ಯೂ ಮಂತ್ರಿಗಳ ಮೇಲಿನ ಆಪಾದನೆಗಳನ್ನು ಸಹ ತನಿಖೆ ಮಾಡಲಾಗುತ್ತಿದೆ

ಭದ್ರಾವತಿಯಲ್ಲಿ ಫೆರ್‍ರೊ ಮ್ಯಾಂಗನೀಸ್ ಕಾರ್ಖಾನೆಯ ಸ್ಥಾಪನೆ

ಸ್ಟೀಲ್ ತಯಾರಿಕೆಗಾಗಿ ಬೇಕಾಗುವ ಫೆರ್‍ರೊ ಮ್ಯಾಂಗನೀಸನ್ನು ಉತ್ಪತ್ತಿ ಮಾಡಲು ಭದ್ರಾವತಿಯಲ್ಲಿ ಒಂದು ಯಂತ್ರವನ್ನು ಸ್ಥಾಪಿಸುವ ವಿಷಯವು ಮೈಸೂರು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ವರದಿಯಾಗಿದೆ

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ರೆಡ್ಡಿ ಮತ್ತು ಪಾಟಸ್ಕರವರ ಆಯ್ಕೆ

ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಸಂಸ್ಥಾನದ ನ್ಯಾಯ ಮಂತ್ರಿ ಶ್ರೀ ಹೆಚ್. ವಿ. ಪಾಟಸ್ಕರವರು ಭಾರತದ ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಆರಿಸಲ್ಪಟ್ಟಿರುತ್ತಾರೆ. ಇವರು ಏಪ್ರಿಲ್ ೩ ರಿಂದ ಆ ಸಭೆಯ ಸದಸ್ಯರಾಗುವರು

ಗೋಪಾಲಕೃಷ್ಣ ಅರಸಿನವರ ಮನೆಯಲ್ಲಿ ಭಾರಿ ಕಳ್ಳತನ

ಮೈಸೂರು ೯

ಶ್ರೀ ಎಂ ಜಿ ಮದನಗೋಪಾಲರಾಜೇ ಅರಸಿನವರ ಸಹೋದರರಾದ ಶ್ರೀ ಗೋಪಾಲಕೃಷ್ಣ ಅರಸಿನವರ ಮನೆಯಲ್ಲಿ ಕಳೆದ ೫ನೇ ತಾ|| ರಾತ್ರಿ ಯಾರೋ ಕಿಟಕಿಯನ್ನು ಮುರಿದು ಒಳಗೆ ನುಗ್ಗಿ ವಜ್ರ ವೈಢೂರ್ಯ ಮುಂತಾದ ಆಭರಣಗಳು ದೇವರ ಚಿನ್ನದ ವಿಗ್ರಹಗಳು ಬೆಳ್ಳಿ ಸಾಮಾನುಗಳು ೫ ಸೀರೆಗಳು ಮುಂತಾದ ಸುಮಾರು ೧೭-೧೮ ಸಾವಿರ ರೂ ಬೆಲೆ ಬಾಳುವ ವಸ್ತುಗಳನ್ನು ಅಪಹರಿಸಿದ್ದಾರೆಂದು ವರದಿಯಾಗಿದೆ ನಜರ್‌ಬಾದು ಪೋಲೀಸರು ತನಿಖೆ ನಡೆಸುತ್ತಿರುವರು

ಸ್ವಾಮಿ ಸೀತಾರಾಮರವರ ಆಮರಣಾಂತ ಉಪವಾಸ

ಆಂಧ್ರದಲ್ಲಿ ಪಾನನಿರೋಧ ಶಾಸನದ ವ್ಯಾಪ್ತಿಯನ್ನು ಕಡಿಮೆ ಮಾಡುವ ಬಗ್ಗೆ ರಾಮಮೂರ್ತಿ ಸಮಿತಿಯವರು ಮಾಡಿರುವ ಶಿಫಾರಸುಗಳನ್ನು ಸರ್ಕಾರದವರು ಅಂಗೀಕರಿಸದಂತೆ ಒತ್ತಾಯಪಡಿಸಲು ಸ್ವಾಮಿ ಸೀತಾರಾಮರವರು ಕಳೆದ ೫ನೇ ತಾ|| ನಿಂದ ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ ಇವರು ನಿಂಬೆಹಣ್ಣಿನ ರಸ ಮತ್ತು ತುಳಸೀ ತೀರ್ಥವನ್ನು ಮಾತ್ರ ತೆಗೆದುಕೊಳ್ಳುತ್ತಿರುವರು

ಬಂದೂಕ ಹಾರಿಸಲು ಯುವಕರಿಗೆ ತರಪೇತು

ಭಾರತದ ಯುವಕರಲ್ಲಿ ಶಿಸ್ತು ನಾಯಕತ್ವ ಮುಂತಾದ ಗುಣಗಳನ್ನು ಹೆಚ್ಚಿಸಲು ಉತ್ತಮ ವಾದ ಹಾಗೂ ವ್ಯವಸ್ಥಿತವಾದ ಬಂದೂಕ ಹಾರಿಸುವ ತರಪೇತನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರದವರು ಕ್ರಮ ಕೈಗೊಳ್ಳುವಂತೆ ಸೂಚಿಸಿ ತರಲಾಗಿದ್ದ ಖಾಸಗಿ ಸೂಚನೆಯು ಪಾರ್ಲಿಮೆಂಟಿನಲ್ಲಿ ಅಂಗೀಕೃತವಾಗಿದೆ

ಕುದಿಗಾ ಬಡಾವಣೆ ಮನೆಗೆ ಬೆಂಕಿ

ರಾಜಧಾನಿಯ ಕುದಿಗದ ಬಿಸ್ತಗೇರಿಯಲ್ಲಿರುವ ಶ್ರೀನಿವಾಸ ದೇವಾಲಯದ ಬೀದಿಯಲ್ಲಿ ೩೬೬ ನೇ ನಂಬರಿನ ಲಕ್ಷ್ಮಯ್ಯನವರ ಪತ್ನಿ ಮಾದಮ್ಮನವರ ಮನೆಗೆ ಈ ಬೆಳಗ್ಗೆ ೧೧ಃ ಗಂಟೆಯಲ್ಲಿ ಆಕಸ್ಮಾತ್ ಬೆಂಕಿ ಬಿದ್ದು, ಮೇಲ್ಛಾವಣಿ ಮತ್ತು ಜೋಳದ ಕಡ್ಡಿಗಳು ಸುಟ್ಟು ಸುಮಾರು ೫೦ ರೂ ಬೆಲೆಯ ಸಾಮಾನುಗಳು ನಷ್ಟವಾದುವು ಅಗ್ನಿಶಾಮಕ ದಳದವರು ಕೂಡಲೇ ಸ್ಥಳಕ್ಕೆ ಹೋಗಿ, ೩-೪ ಸಾವಿರ ರೂ ಬೆಲೆ ಸಾಮಾನುಗಳನ್ನು ಹೊರಕ್ಕೆ ತೆಗೆದುಹಾಕಿ, ಬೆಂಕಿಯನ್ನು ಹತೋಟಿಗೆ ತಂದರು

ತೈಲದ ಸರೋವರ

ಸಾದಿ ಅರೇಬಿಯಾದಲ್ಲಿ ಅಮೆರಿಕದ ವೈಜ್ಞಾನಿಕರು ಎಣ್ಣೆಯ ಸರೋವರವೊಂದನ್ನು ಕಂಡು ಹಿಡಿದಿರುವರು ಇಡೀ ಅಮೆರಿಕದಲ್ಲಿರುವಷ್ಟು ಅಂದರೆ ೨೫ ೦೦೦ ದಶ ಲಕ್ಷ ಬ್ಯಾರಲ್‌ಗಳಷ್ಟು ಎಣ್ಣೆಯು ಅಲ್ಲಿ ದೊರೆಯುತ್ತದೆಂದು ನಂಬಲಾಗಿದೆ

ಅಖಿಲ ಭಾರತ ಕೈ ಮಗ್ಗದ ದಿನಾಚರಣೆ

ಮೈಸೂರು ೯

ಅಖಿಲ ಭಾರತ ಕೈ ಮಗ್ಗಗಳ ದಿನಾಚರಣೆ ಸಂಬಂಧವಾಗಿ ರಾಜಧಾನಿಯಲ್ಲಿ ನೆನ್ನೆಯಿಂದ ೧೩ ನೇ ತಾ|| ವರೆಗೆ ನಿತ್ಯವೂ ಸಂಜೆ ೬ ಗಂಟೆಗೆ ವಿವಿಧ ಸ್ಥಳಗಳಲ್ಲಿ ಕೈ ಮಗ್ಗದ ಬಟ್ಟೆಗಳನ್ನು ಪ್ರೋತ್ಸಾಹಿಸಲು ಸಮಾರಂಭಗಳನ್ನು ಏರ್ಪಡಿಸಲಾಗಿದೆ ಈ ಸಂಜೆ ಪ್ರಭುದೇವಾ ಟಾಕೀಸ್ ಮುಂಭಾಗದ ಮೈದಾನದಲ್ಲಿ ಶ್ರೀ ಎ ವಿ ರಾಮರ ಅಧ್ಯಕ್ಷತೆಯಲ್ಲೂ ಮತ್ತು ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಶ್ರೀಮತಿ ಕಾಮೇಶ್ವರಮ್ಮ ಕುಪ್ಪುಸ್ವಾಮಿಯವರ ಅಧ್ಯಕ್ಷತೆಯಲ್ಲೂ ಸಭೆಗಳು ನಡೆಯುವುವು ನಾಳೆ ಅದೇ ಕರ್ನಾಟಕಪುರದ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ನಡೆಯುವ ಸಭೆಗೆ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು ೧೧ನೇ ತಾ|| ಜಯನಗರದ ವನಿತಾ ಸದನದಲ್ಲಿ ಶ್ರೀ ಎಂ ಎಸ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲೂ, ೧೨ ನೇ ತಾ|| ಒಂಟಿಕೊಪ್ಪಲಿನ ವಾಕ್ಯ ಮಂಡಲಿಯಲ್ಲಿ ಶ್ರೀ ಬಿ ಕೆ ಮೂರ್ತಿಯವರ ಅಧ್ಯಕ್ಷತೆಯಲ್ಲೂ ಸಭೆಗಳು ನಡೆಯುವುವು ೧೩ ನೇ ತಾ|| ಸಂಜೆ ೫ಕ್ಕೆ ಟೌನ್‌ಹಾಲಿನಲ್ಲಿ ಸೇರುವ ಸಭೆಯ ಅಧ್ಯಕ್ಷತೆಯನ್ನು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ವಹಿಸುವರು

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಸಂಸ್ಥಾನ ಸರ್ಕಾರದ ತೆರಿಗೆ ವಿಧಾನ ಮತ್ತು ಸಲಹೆಗಳನ್ನು ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಇದೇ ೧೨ ನೇ ತಾ|| ಸೇರುವ ಸಭೆಯಲ್ಲಿ ಚರ್ಚಿಸಲಿರುವುದಾಗಿ ಗೊತ್ತಾಗಿದೆ ಪ್ರಧಾನಿ ನೆಹರೂರವರು ಬರೆದ ಪತ್ರದ ದೃಷ್ಟಿಯಿಂದ ಮಂತ್ರಿಮಂಡಲ ಮತ್ತು ಕಾಂಗ್ರೆಸ್ ಸಂಸ್ಥೆಯ ಸಂಬಂಧದ ವಿಷಯವನ್ನೂ ಸಹ ಸಭೆಯಲ್ಲಿ ಚರ್ಚಿಸಲಾಗುವುದೆಂದು ಹೇಳಲಾಗಿದೆ

ಚಿನ್ನದ ಗಣಿಯ ಕಾರ್ಮಿಕರಿಂದ ಮುಷ್ಕರ ನೋಟೀಸು

ಸಾರ್ವತ್ರಿಕ ಮುಷ್ಕರವನ್ನು ಹೂಡುವ ಸಂಬಂಧವಾಗಿ ಮೈಸೂರು ಚಿನ್ನದ ಗಣಿ ಕಂಪೆನಿಗೆ ಮುಂಗಡದ ನೋಟೀಸನ್ನು ಕೊಡುವ ಬಗ್ಗೆ ೮೦೦೦ ಕಾರ್ಮಿಕರ ರಹಸ್ಯ ಬ್ಯಾಲೆಟ್ಟನ್ನು ತೆಗೆದುಕೊಳ್ಳಲಾಗಿದೆ

ಸಂಸ್ಥಾನದ ಪ್ರಜಾ ಸಮಾಜವಾದಿಗಳ ಸಮ್ಮೇಳನ

ಚನ್ನಪಟ್ಟಣ ೮

ಸಂಸ್ಥಾನದ ಪ್ರಜಾ ಸಮಾಜವಾದಿ ಸಮ್ಮೇಳನದಲ್ಲಿ ಭಾಗವಹಿಸಲು ಇಲ್ಲಿಗೆ ೫೦೦ ಮಂದಿ ಪ್ರತಿನಿಧಿಗಳು ಸಂಸ್ಥಾನದ ನಾನಾ ಭಾಗಗಳಿಂದ ಆಗಮಿಸಿರುತ್ತಾರೆ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಶ್ರೀ ಅಶೋಕ ಮೆಹತಾರವರನ್ನು ಊರಿನ ನಾನಾ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು

○ ಅಮೆರಿಕ ಮತ್ತು ಜಪಾನುಗಳಿಗೆ ಪರಸ್ಪರ ರಕ್ಷಣಾ ಒಪ್ಪಂದವಾಗಿ ಅದಕ್ಕೆ ಎರಡು ಸರ್ಕಾರಗಳು [illegible] ಹಾಕಿಲಾಗಿದೆ

ವಿಧಾನ ಸೌಧದ ಮುಂದೆ ದಂಡಿಗೆ ನೇರ ರಸ್ತೆ

೪ ಲಕ್ಷ ರೂ ವೆಚ್ಚದ ಅಂದಾಜು

ಸ್ವಂ ಸು ಫೋ] ಬೆಂಗಳೂರು ೯

ವಿಧಾನ ಸೌಧದ ಕಟ್ಟಡದ ಮುಂಭಾಗದ ಮೂಲಕ ಸಿವಿಲ್ ಪ್ರದೇಶಕ್ಕೆ ನಗರದ ಕಡೆಯಿಂದ ನೇರವಾದ ಭಾರಿ ರಸ್ತೆಯನ್ನು ನಿರ್ಮಾಣ ಮಾಡುವ ವಿಷಯವು ಪರ್ಯಾಲೋಚನೆಯಲ್ಲಿರುವುದೆಂದು ಈ ದಿನ ಶಾಸನ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಶ್ರೀ ಎಂ ವಿ ರಾಮರಾಯರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ರಸ್ತೆಯ ಅಡ್ಡವಾಗಿ ಶ್ರೀ ಹುಮಾಯೂನ್ ಮಿರ್ಜಾರವರ ಭವನವಿರುವುದು ಅದನ್ನು ವಶಪಡಿಸಿಕೊಳ್ಳಲು ಆಲೋಚಿಸಲಾಗಿದೆ, ಹೊಸ ರಸ್ತೆಯನ್ನು ನಿರ್ಮಿಸಲು ೪,೧೦,೦೦೦ ರೂ ಅಂದಾಜಾಗಿದೆ. ಶ್ರೀ ಮಿರ್ಜಾರವರ ಭವನವು ೩,೫೭,[illegible] ರೂ ಬಾಳುವುದು ಹೊಸ ರಸ್ತೆಯಿಂದ ಸೆಕ್ರೆಟೇರಿಯಟ್ಟಿಗೆ ಹೋಗಲು ಹೆಚ್ಚು ಅನುಕೂಲವಾಗುವುದು. ಭವನವನ್ನು ವಶಪಡಿಸಿಕೊಳ್ಳುವ ಮುಂಚೆ ಶ್ರೀ ಮಿರ್ಜಾರವರಿಗೆ ಪರಿಹಾರವೆಷ್ಟು ಕೊಡಬೇಕೆಂಬುದನ್ನು ನಿರ್ಧರಿಸಿಲ್ಲ-ಎಂದು ಸಚಿವರು ತಿಳಿಸಿದರು

ರಸ್ತೆಗಾಗಿ ತೆಗೆದುಕೊಳ್ಳುವ ಸ್ಥಳದಲ್ಲಿ ಉಳಿದ ಭಾಗವನ್ನು ೪ ಸೈಟುಗಳಾಗಿ ವಿಂಗಡಿಸಿ, ರಿಸರ್ವ್ ಬ್ಯಾಂಕು ಮುಂತಾದ ಸಂಸ್ಥೆಗಳಿಗೆ ಕೊಡಲಾಗುವುದೆಂದೂ, ಅದರ ಗಜಕ್ಕೆ ೨೫ ರೂ ಬರುವ ನಿರೀಕ್ಷೆಯಿದೆಯೆಂದೂ ಮುಖ್ಯ ಮಂತ್ರಿಗಳು ಹೇಳಿದರು.

ಶ್ರೀ ಕೆ ಎಸ್ ವಾಸನರವರು ಹಾಕಿದ ಪ್ರಶ್ನೆಗೆ ಉತ್ತರವಾಗಿ ಕಾರ್ಮಿಕ ಮಂತ್ರಿಗಳು ಏಳು ಜನ ಅಥವಾ ಹೆಚ್ಚು ಮಂದಿ ಕಾರ್ಮಿಕರು ಸದಸ್ಯರಾಗಿರುವ ಸಂಘವನ್ನು ಶಾಸನದ ಪ್ರಕಾರ ರಿಜಿಸ್ಟರ್ ಮಾಡಿಕೊಳ್ಳಲಾಗುವುದೆಂದು ಹೇಳಿದರು

ಈಜಿಪ್ಟಿನಲ್ಲಿ ನಗೀಬರಿಗೆ ಪೂರ್ಣಾಧಿಕಾರ

ಈಜಿಪ್ಟಿನಲ್ಲಿ ಒಂದು ವಾರದ ಹಿಂದೆ ನಡೆದ ಪ್ರಚಂಡ ಕ್ರಾಂತಿಯ ಪರಿಣಾಮವಾಗಿ ಅಲ್ಲಿನ ಅಧ್ಯಕ್ಷ ಜನರಲ್ ನಗೀಬರು ತಮ್ಮ ಎಲ್ಲಾ ಅಧಿಕಾರ ಸ್ಥಾನಗಳಿಗೂ ರಾಜೀನಾಮೆಯನ್ನಿತ್ತು ಎರಡು ದಿನಗಳಲ್ಲೇ, ಸಂಧಾನ ನಡೆದು ಮತ್ತೆ ಅಧ್ಯಕ್ಷ ಪದವಿಗೆ ಆರಿಸಲ್ಪಟ್ಟರು ಸರಿಯಷ್ಟೆ ನೆನ್ನೆ ಅವರಿಗೆ ಪುನಹ ಈಜಿಪ್ಟಿನ ಪ್ರಧಾನ ಪಟ್ಟವನ್ನು ವಹಿಸಲಾಯಿತೆಂದೂ, ಅವರಿಗೆ ಪೂರ್ಣಾಧಿಕಾರವನ್ನು ಕೊಟ್ಟು ಅಲ್ಲಿನ ಕ್ರಾಂತಿಕಾರಿ ಮಂಡಲಿಯ ನಾಯಕರನ್ನಾಗಿಯೂ ಆರಿಸಲಾಗಿರುವುದೆಂದೂ ಸುದ್ದಿ ಬಂದಿದೆ

ಸಂತೋಷ ಸಮಾರಂಭಗಳ ಬಗ್ಗೆ ನೆಹರೂರವರಿಗೆ ಬೇಸರ

ದೆಹಲಿ ನಗರದಲ್ಲಿ ಹಲವರು ತಮ್ಮ ಐಶ್ವರ್ಯವನ್ನು ಜಗತ್ತಿಗೆ ಪ್ರದರ್ಶಿಸುವ ಸಲುವಾಗಿ ಏರ್ಪಡಿಸುತ್ತಿರುವ ಭೋಜನ ಕೂಟ, ನೃತ್ಯ ಮುಂತಾದ ಸಮಾರಂಭಗಳನ್ನು ಕಂಡು ಪ್ರಧಾನಿ ನೆಹರೂರವರು ಬೇಸರಗೊಂಡಿರುತ್ತಾರೆ [illegible] ವರು ತಮಿಳ [illegible] ವರು

ಅಂಡಮಾನ್ ದ್ವೀಪಕ್ಕೆ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ಮೊನ್ನೆ ರಾತ್ರಿ ದೆಹಲಿ ಎಂಬ ರ ನ್ನ ಹಡಗಿನಲ್ಲಿ ಕಲಕತ್ತೆಯಿಂದ ಅಂಡಮಾನ್ ದ್ವೀಪಗಳಿಗೆ ತೆರಳಿದರು

ಭಾರತದಲ್ಲಿ ಆಯುಃ ಪ್ರಮಾಣ ಹೆಚ್ಚಿತು

ಭಾರತದ ಸೆನ್ಸಸ್ಸಿನ ಬಗ್ಗೆ ಈ ವರ್ಷದಲ್ಲಿ ಹೊರಡಿಸಲ್ಪಟ್ಟ ವರದಿಯ ಪ್ರಕಾರ ಗಂಡಸರು ಸರಾಸರಿ ೩೨ ವರ್ಷವನ್ನು ಬದುಕುವರೆಂದೂ ಮಹಿಳೆಯರು ೩೧ ವರ್ಷ ಕಾಲ ಇರುವರೆಂದೂ ಗೊತ್ತಾಗಿದೆ ೧೯೪೧ ನೇ ಇಸವಿ ಸೆನ್ಸಸ್ ಪ್ರಕಾರ ಈ ಅವಧಿಯು ೨೭ ವರ್ಷವಿದ್ದಿತು

ಪ್ರಪಂಚದಲ್ಲಿ ೨೪ ಕೋಟಿ ರೇಡಿಯೋಗಳು

ಪ್ರಪಂಚದಲ್ಲಿ ಈಗ ಒಟ್ಟು ೨೪ ಕೋಟಿ ರೇಡಿಯೋ ಸೆಟ್ಟುಗಳು ಬಳಕೆಯಲ್ಲಿರುವುದು ಪ್ರಕಟವಾಗಿದೆ ಈ ವೈಕಿ ಅರ್ಧ ದಷ್ಟು ಅಮೆರಿಕದಲ್ಲೂ, ೧, ೭,೦೦೦ ರೇಡಿಯೋಗಳು ಭಾರತದಲ್ಲೂ ಇರುವುವೆಂದ ಹೇಳಲಾಗಿದೆ

ಇರಾಕ್ ಮಂತ್ರಿಮಂಡಲದ ರಾಜೀನಾಮೆ

ಇರಾಕಿನ ದೊರೆ ಪೈಜಲ್‌ರವರಿಗೆ ಅಲ್ಲಿನ ಪ್ರಧಾನಿ ಡಾ॥ ಮಹಮದ್ ಫ ದಿಲ ಜಮೇಲಿಯವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಒಪ್ಪಿಸಿರುತ್ತಾರೆ ಅವರೇ ಇರಾಕಿನ ಬಟನಲ್ಲಿ ಬಹು ಸಂಖ್ಯಾತರ ಪಕ್ಷದ ಸಹಕಾರದೊಡನೆ ನೂತನ ಮಂತ್ರಿಮಂಡಲವನ್ನು ರಚಿಸಲಿರುವರು.

ನಾಳೆ ಶಂಕುಸ್ಥಾಪನ

ತಲಕಾಡಿನ ಜಿಲ್ಲಾ ಬೋರ್ಡ್ ಪ್ರೌಢಶಾಲೆಯ ಸಂಘದ ಆನೇ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾರ್ಥರವರ ಅಧ್ಯಕ್ಷತೆಯಲ್ಲಿ ನಡೆಯುವುದು ಶ್ರೀ ಹೆಚ್ ಎಂ ಚನ್ನಬಸಪ್ಪನವರು ಮುಖ್ಯ ಭಾಷಣ ಮಾಡುವರು

ಪಶು ವೈದ್ಯ ಶಾಲೆಯ ಆರಂಭ

ತಲಕಾಡಿನ ಸಾಹುಕಾರರಾದ ಶ್ರೀ ಶಿವಬಸವಸ್ವಾಮಿಯವರ ಕುಟುಂಬದವರು ಉದಾರವಾಗಿ ನೀಡಿರುವ ಸಹಾಯದಿಂದ ಕಟ್ಟಲಾಗಿರುವ ಅಲ್ಲಿನ ಪಶು ವೈದ್ಯ ಶಾಲೆಯ ಆರಂಭೋತ್ಸವವು ನಾಳೆ ಬೆಳಗ್ಗೆ ೧೧ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರಿಂದ ನೆರವೇರಿಸಲ್ಪಡುವುದು ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು

ಸಂಸ್ಥಾನದ ಉಪಾಧ್ಯಾಯರ ಸಮ್ಮೇಳನ

ಮೈಸೂರು ಸಂಸ್ಥಾನದ ಉಪಾಧ್ಯಾಯರುಗಳ ೯ನೇ ಸಮ್ಮೇಳನವು ಏಪ್ರಿಲ್ ತಿಂಗಳ ೨ನೇ ವಾರದಲ್ಲಿ ಬೆಂಗಳೂರಿನಲ್ಲಿ ಸೇರಲಿದೆ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸುವಂತೆ ಎಲ್ಲಾ ಉಪಾಧ್ಯಾಯರ ಸಂಸ್ಥೆಗಳನ್ನೂ ಕೋರಲಾಗಿದೆ ಬೆಂಗಳೂರಿನ ಮೇಯರಾದ ಶ್ರೀ ಹೆಚ್ ಎಸ್ ಸೀತಾರಾಮರವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ

ಶ್ರೀ ಚಾಮುಂಡೇಶ್ವರಿ

ಟಾಕೀಸ್

10-3-54 ರಿಂದ ಆನೋಘ 2ನೇ ವಾರ

ಪ್ರತಿದಿನ 3 ಪ್ರದರ್ಶನಗಳು

ಶೆಂಪರಾಜ್‌ರವರ ನಿರ್ದೇಶನದ

ಕನ್ನಡ ಚಿತ್ರ

ಜಲದುರ್ಗ

ರಾಜ್ ಶೆಂಪರಾಜ್ ಕೃಷ್ಣಕುಮಾರ್ ಮತ್ತು ಶಕುಂತಲ ಮುಂತಾದವರು

Edited Printed and Published by V R Nagarajan at Sadhvi Press D S Lbeth Road, Mysore

ಆಹಾರ ಅಭಾವ ನೀಗಲು ರಷ್ಯದ ತರುಣರಿಂದ ವ್ಯವಸಾಯ

ರಷ್ಯದಲ್ಲಿ ಆಹಾರ ಧಾನ್ಯಗಳ ಬೆಳೆಯು ಪ್ರಮಾಣಕ್ಕಿಂತ ಉತ್ಪತ್ತಿಯು ಕಡಿಮೆಯಾಗಿರುವದಾಗಿ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ ಈ ವರ್ಷದಲ್ಲಿ ಆದ ಉತ್ಪತ್ತಿಗಿಂತ ಶೇಕಡ ೩೫ ರಷ್ಟು ಹೆಚ್ಚಾಗಿ ೫ ವರ್ಷದಲ್ಲಿ ಬೆಳೆಯಬೇಕೆಂದು ಪಕ್ಷವು ಸೂಚಿಸಿದೆ ಆದ್ದರಿಂದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವವರ ಪೈಕಿ ೧ ಲಕ್ಷ ಯುವಕರನ್ನು ಹೊಸ ವರ್ಷದಲ್ಲಿ ೩ ಕೋಟಿ ಎಕರೆ ಜಮೀನು ಸಾಗುವಳಿಗಾಗಿ ನಿಯೋಜಿಸಲಾಗುವುದು

ಭಾಷಣಗಳನ್ನು ಬರೆದುಕೊಳ್ಳುವ ಯಂತ್ರ

ಆಂಧ್ರದ ಶಾಸನ ಸಭೆಯಲ್ಲಿ ಸದಸ್ಯರುಗಳು ಮಾಡುವ ಭಾಷಣಗಳನ್ನು ರಿಕಾರ್ಡ್ ಮಾಡಿಕೊಳ್ಳುವ ಯಂತ್ರವೊಂದನ್ನು ಇಡಲಾಗುವುದು ಸದಸ್ಯರ ಭಾಷಣಗಳನ್ನು ಸರಿಯಾಗಿ ಬರೆದುಕೊಳ್ಳುತ್ತಿಲ್ಲವೆಂಬ ದೂರುಗಳು ಇದರಿಂದ ತಪ್ಪುವುದೆಂದು ಶಾಸನ ಸಭಾಧ್ಯಕ್ಷರು ಹೇಳಿದ್ದಾರೆ

ನ್ಯಾಯಾಧೀಶರ ಜೇಬಿನಿಂದ ಪೆನ್ ಕದ್ದ ಕೇಸು

ಬೆಂಗಳೂರಿನ ಹೈ ಕೋರ್ಟ್ ನ್ಯಾಯಾಧೀಶರಿಂದ ಶ್ರೀ ಚನ್ನಬಸಪ್ಪ ಮಲ್ಲಿಮಠ್‌ರವರು ಕಳೆದ ಗುರುವಾರ ವಿಧಾನ ಸೌಧದ ಕಟ್ಟಡದ ಕೆಲಸವನ್ನು ಪರಿಶೀಲಿಸುತ್ತಿದ್ದಾಗ ಅಲ್ಲಿಯೇ ಕೆಲಸ ಮಾಡುತ್ತಿದ್ದ ವ್ಯಕ್ತಿ ಅಬ್ದುಲ್ ಎಂಬುವನು ಅವರ ಜೇಬಿನಿಂದ ಒಂದು ಫೌಂಟೆನ್ ಪೆನ್ನನ್ನು ಅಪಹರಿಸಿದನೆಂದು ವರದಿಯಾಗಿದೆ ಈ ಸಂಬಂಧವಾಗಿ ಅವನ ಮೇಲೆ ಮೊಕದ್ದಮೆ ಕೂಡ ಹಾಕಲಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ವರೆಗೆ
ಕಡಲೆಕಾಯಿ	೧೪ ೦	೨೪ ೧೦
ಹರಳ ಬೀಜ	೩೪ ೦ ೦	೨೯ ೦ ೦
ಹುಚ್ಚೆಳ್ಳು	೪೬ ೦ ೦	೪೪ ೦ ೦
ಹೊಂಗೇಬೀಜ	೯೯ ೦ ೦	೩೩ ೮ ೦
ಹತ್ತಿ	೫ ೪ ೦	೨೨ ೧೦ ೦
ಹೆಸರು	೩೨ ೧೪ ೦	೪೧ ೮ ೦
ಉಲುಕಂಡಿ	೪೪ ೦ ೦	೪೩ ೦ ೦
ಧನಿಯ	೩೮ ೧೨ ೦	೩೯ ೨ ೨
ತೊಗರಿ	೨೪ ೨ ೦	೩ ೦ ೦
ಸೂರ್ಯಕಾಂತಿ ಬೀಜ	೮ ೦ ೦	೩೬ ೮ ೦
ಕಡಲೆ	೪೪ ೦ ೦	೪೫ ೮ ೦
ಹುಣಸೇಬೀಜ	೧೨ ೧೦ ೦	೧೨ ೧೪ ೦
ಹುಣಸೇಹಣ್ಣು	೬ ೪ ೦	೧೧ ೦ ೦
ಹೆಸರುಬೇಳೆ	೪ ೦ ೦	೫ ೦ ೦
ಮೆಣಸಿನಕಾಯಿ	೨೬ ೦ ೦	೨೮ ೦೦ ೦
ಕೊಬ್ಬರಿ	೧೦೦ ೦ ೦	೧೬೫ ೦ ೦

ಸಿಂಹಳ ದ್ವೀಪದ ರಾಜ ಮುದ್ರೆಯ ಬದಲಾವಣೆ

ನೂರ ನಲವತ್ತು ವರ್ಷಗಳಿಂದಲೂ ಇದ್ದ ಬ್ರಿಟಿಷ್ ರಾಜ ಮುದ್ರೆಯನ್ನು ಸಿಂಹಳ ಸರ್ಕಾರದವರು ಈಗ ಬದಲಾಯಿಸಿರುತ್ತಾರೆ ಅದರ ಬದಲು ಮಾಡಿಸಲ್ಪಟ್ಟಿರುವ ಹೊಸ ಮುದ್ರೆಯಲ್ಲಿ ಕತ್ತಿಯನ್ನು ಝಳಪಿಸುತ್ತಾ ಘರ್ಜಿಸುತ್ತಿರುವ ಸಿಂಹ, ಮತ್ತು ಗುಂಡನೆಯ ಕಮಲದಲ್ಲಿ ಕಾಂಡ್ಯ ದೊರೆಗಳ ಕಿರೀಟದ ಚಿಹ್ನೆಗಳು ಇವೆ

ನಹಾಸ್ ಪಾಷಾರವರ ಪತ್ನಿಯ ಆಸ್ತಿ ಮುಟ್ಟುಗೋಲು

ಈಜಿಪ್ಟಿನ ವಫ್ದ್ ಪಕ್ಷದ ನಾಯಕರಾಗಿದ್ದ ನಹಾಸ್ ಪಾಷಾರವರ ಪತ್ನಿಯವರ ಲಂಚ ರುಷುವತ್ತುಗಳನ್ನು ಪಡೆದರೆಂದು ಅವರ ಮೇಲೆ ಆರೋಪವು ಸಾಬೀತಾಗಿ ಅವರ ೧ ಲಕ್ಷ ಪೌಂಡ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆಜ್ಞೆಯಾಗಿದೆ

ವೀರನಗೆರೆಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರ

ಮೈಸೂರು ನಗರದಲ್ಲಿ ಹೊಸದಾಗಿ ಆರಂಭವಾಗಿರುವ ೬ ವಯಸ್ಕರ ಶಿಕ್ಷಣ ಕೇಂದ್ರಗಳ ಪೈಕಿ ಒಂದಾದ ವೀರನಗೆರೆ ಕೇಂದ್ರವು ಅಲ್ಲಿನ ವರ ಮತ್ತು ಸತ್ತ ಮಕ್ಕಳ ಪ್ರದೇಶದವರಿಗಾಗಿ ಏಪ ಡಲಾಗಿದೆ ಅಲ್ಲಿ ಕೆಲಸ ಕಾರ್ಯಗಳು ಕ್ರಮವಾಗಿ ನಡೆಯುವಂತೆ ಒಂದು ಸಮಿತಿಯನ್ನು ರಚಿಸಲಾಗಿದೆ ಸಮಿತಿಯ ಧ್ಯೇಯ ಕಳೆದ ಬುಧವಾರ ಪೌರಸಭಾ ಸದಸ್ಯರಾದ ಶ್ರೀ ರ ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು ಶಿಕ್ಷಣ ಸಮಿತಿ ವ್ಯವಸ್ಥಾಪಕರಾದ ಶ್ರೀ ಸೀತಾರಾಮ ರಾವ್ ಸಮಿತಿಯ ಕಾರ್ಯಗಳನ್ನು ವಿವರಿಸಿದರು ಸದಸ್ಯರ ಅವುಗಳಿಗೆ ಬೆಂಬಲ ನೀಡುವುದಾಗಿ ಭರವಸೆಯಿತ್ತರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ಸಂಗೀತ ೭-೩೦ ಎಂ ಪಿ ರಾಮಯ್ಯ ಪಿ ಹ್ಯಾಡ್ಲಿ ೧೧-೦ ಮತ್ತು ೧೧ ರಿಕಾರ್ಡುಗಳು ೨ ಸಿ ಸರೋಜಮ್ಮ ಸಂಗೀತ ಸಂಜೆ ೬ ೩೦ ಮತ್ತು ೬ ೫೦ ಎಸ್ ಆರ್ ಪೈ ಪ್ರಶ್ನೆ ಹರಿಕಥೆ ೬ ಕ ಎಂ ಕ ೦ ಬಿಟ್ಟಿಲು ೭-೩೦ ಗ್ರಾಮೀಯ ಸಂತೋಷದ ಕೇಂದ್ರಗಳ ಕನ್ನಡದಲ್ಲಿ ಭಾಷಣ ೮ ೫೦ ರಿಕಾರ್ಡುಗಳು ೮ ಕಾರ್ಯಕ್ರಮ ೯ ೨೦ ಇಂಗ್ಲಿಷ್ ಭಾಷಣ ೯ ೫೦ ರಿಕಾರ್ಡ ಸಂಗೀತ ೧೦ ಕನ್ನಡ ನಾಟಕ

SRI GANESHA

TALKIES

From 10 3-54 For 3 Days

FRANCIS COVERS THE BIG TOWN

Featuring "Francis" The Talking Mule & Donald O Connor

ಶ್ರೀ ಚಾಮುಂಡೇಶ್ವರಿ ಭವನ

ಇರ್ವಿನ್ ರಸ್ತೆ, ಮೈಸೂರು

ತಾರೀಕು 3—3—1954 ರಿಂದ

ಬೇಸಿಗೆ ಕಾಲಕ್ಕಾಗಿ ಭವನದ ಮಹಡಿ ಮೇಲೆ ಅಪೂರ್ವ ರೀತಿಯಲ್ಲಿ ಶೃಂಗರಿಸಲ್ಪಟ್ಟಿರುವ ಅಂಗಳ

ಪ್ರತಿ ದಿನ ಸಂಜೆ 6 ರಿಂದ 7 ಘಂಟೆ ವರೆಗೆ

ಫ್ರೂಟ್ ಸಲಾಡ್ ಐಸ್ ಕ್ರೀಂ, ಬನಾನಾ ವನಿಲ್ಲಾ, ಬಾದಾಮ್ ಮತ್ತು ಗುಲಾಬ್ ಐಸ್‌ಕ್ರೀಮುಗಳು

ಬಾದಾಮ್ ಕೋಲ್ಡ್, ಫ್ರೂಟ್ ಜ್ಯೂಸುಗಳು, ಪೈನಾಪಲ್, ಆರೆಂಜ್, ಲೆಮನ್, ಟೊಮ್ಯಾಟೊ ಮತ್ತು ಗ್ರೇಪ್

ಹಾಲಿನ ಶರಬತ್ತು, ಸಿಹಿ ಮೊಸರಿನ ಶರಬತ್ತು, ವೆಜಿಟೆಬಲ್ ಕಟ್ಲೆಟ್ಟುಗಳು ಸಾಂಡ್‌ವಿಚ್ಚುಗಳು, ಟೋಸ್ಟ್ ಬಟರ್ ಮತ್ತು ಆಲೂಗೆಡ್ಡೆ ಉಪ್ಪೇರಿ

★

ನಮ್ಮ ಪ್ಲಾಂಟೇಷನ್ 'ಎ' ಕಾಫಿ ಒಂದು ವಿಶೇಷ

★

ಬೆಳಿಗ್ಗೆ ಮತ್ತು ಸಂಜೆ ಸ್ಪೆಷಲ್ ಸೆಟ್ ದೋಸೆಗಳು ಸಿಕ್ಕುತ್ತವೆ

★

★ ಬೇಸಿಗೆ ಕಾಲಕ್ಕನುಗುಣವಾದ ವಿಶೇಷ ಭೋಜನದ ತಯಾರಿಕೆ

★ ಭೋಜನ ಶಾಲೆಯಲ್ಲಿ ಶಾಶ್ವತ ಬೋರ್ಡರುಗಳಿಗೆ ರಿಯಾಯಿತಿ

ಪತ್ನಿಯ ನಡತೆ ಬಗ್ಗೆ ಸಂಶಯ ಬಂದು ಕೊಲೆ

ಹೆಗ್ಗಡದೇವನಕೋಟೆ ತಾಲ್ಲೂಕು ಕಿರೂರಿನಲ್ಲಿ ನಾಗಪ್ಪ ಎಂಬುವನು ತನ್ನ ಹೆಂಡತಿಯ ನಡತೆ ಬಗ್ಗೆ ಸಂಶಯಪಟ್ಟು ಆಕೆಯನ್ನು ಕೊಡಲಿಯಿಂದ ಹೊಡೆದು ಕೊಲೆ ಮಾಡಿರುವುದಾಗಿಯೂ, ಆತನನ್ನು ತಾಲ್ಲೂಕು ಪೊಲೀಸರು ಬಂಧಿಸಿರುವರೆಂದೂ ವರದಿಯಾಗಿದೆ

ಬೈಸಿಕಲ್ ಸಿಕ್ಕಿದೆ

ನೆನ್ನೆ ದಿನ ಒಬ್ಬ ತರುಣನು ರಾಗಿಯನ್ನು ತಂದುಕೊಡ ಬೇಕಾಗಿ ಹೇಳಿ ನನ್ನ ಬಳಿ ೨೦ ರೂ ಗಳನ್ನು ತೆಗೆದುಕೊಂಡು ನಂಬಿಕೆಗಾಗಿ ಒಂದು ಬೈಸಿಕಲ್ಲನ್ನು ಬಿಟ್ಟು ಹೋದವನು ಇದುವರೆಗೆ ಬಂದಿರುವುದಿಲ್ಲ ರಾಗಿಯನ್ನು ತಂದು ಕೊಟ್ಟಿರುವುದಿಲ್ಲ ಇದರ ವಾರೀಸುದಾರರು ನಮಗೆ ಸಲ್ಲಬೇಕಾದ ಮೇಲ್ಕಂಡ ೨೦ ರೂಗಳನ್ನು ಪಾವತಿ ಮಾಡಿ ಸರಿಯಾದ ರುಜುವಾತು ಕೊಟ್ಟು ಬೈಸಿಕಲ್ಲನ್ನು ನನ್ನಿಂದ ಪಡೆಯಬಹುದು

ಗೋರವನಿಂಗಿ ಬಸವೇಗೌಡ,
569 ಶಾಂತರಾಜ ಅರಸ್ ರೋಡು
ಕನ್ನೇಗೌಡನ ಕೊಪ್ಪಲು,
ಮೈಸೂರು

ಮೈಸೂರು ಟೌನ್ ಹಾಲಿನಲ್ಲಿ

ಹಾಕಿರುವ ಡೇರೆಯಲ್ಲಿ

14-3 54ನೇ ಭಾನುವಾರದಿಂದ

ಆನೋಘ ಪ್ರಾರಂಭ

ಭಾರತದಲ್ಲಿ ಪ್ರಸಿದ್ಧವಾಗಿ 73 ವರ್ಷಗಳಿಂದಲೂ ಆ ರಂಗ ಸರ್ಕಸ್‌ಗಳಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿರುವ

ಬೊಂಬಾಯಿ

ಜಿ. ಎ. ಸರ್ಕಸ್

101 ಜನ ಆಟಗಾರರಿಂದಲೂ 65 ಮೃಗಗಳಿಂದಲೂ ಮತ್ತು 1 ಚೈನಾ ಮಹಿಳೆ, ಭಾರತೀಯ ಪ್ರೇಯ ದೇಶ ಪ್ರದರ್ಶನ ಮತ್ತು

ಸರ್ಕಸ್ ವಿಶ್ವ ಸಂಸ್ಥೆಯ ಆಟಗಾರರಲ್ಲಿ ಅಗ್ರಗಣ್ಯರಾದ ಮಿ॥ ಎಡ್ವರ್ಡ್ ಜಾರ್ಜ್ ಮತ್ತು ಅವರ ಪತ್ನಿ, ಮೃತ್ಯುಪಂಜರವೆಂಬ ಕೋಣೆ ಮಧ್ಯದ ಅಕ್ಕಪಕ್ಕ ಗೂಡಿನಲ್ಲಿ ಎರಡು ಮೋಟಾರ್ ಸೈಕಲ್‌ಗಳನ್ನು ಕೂಡಿಸ ಎಲ್ಲಾ ಭಾಗಗಳಲ್ಲೂ ಓಡಿಸಿ ಒಬ್ಬರನ್ನೊಬ್ಬರು ದಾಟಿಹೋಗಿ ಘಂಟೆಗೆ 40 ಮೈಲಿ ವೇಗದಲ್ಲಿ ಓಡಿಸಿ ಸಿ ಗೂಡಿನ ಅಂಚಿಗೆ ಮುಟ್ಟುವಾಗ್ಗೆ ಎಲ್ಲರ ಜೀವರು ತಲ್ಲಣಗಾಗಿಯೂ ಮೋಟಾರು ಮೇಲಾಗಿಯೂ ಓಡಿಸುವ ಭಯಂಕರ ದೃಶ್ಯ

ಹುಲಿ ವೀರ ರಮೇಶ್‌ರವರು ಹುಲಿಗಳಿಗೆ ಕೋಲಿನ ವಟ್ಟನ್ನು ಹೆಚ್ಚು ಮತ್ತು ಬಾಯಿಯಿಂದ ಹುಲಿಯ ಬಾಯನ್ನು ತೆರೆದು ಮುತ್ತು ಕೊಡುವುದು ಅಲ್ಲದೆ ಇಲ್ಲದ ಬಗೆ ಲೀ ಸೈನಾ ದೇಶದವರ ಪ್ಯಾರಿಸ್ ಚೈನಾ ಯಲ್ಲೋ ಸಿಲ್ಕ್ ತಾರಕ, ಮಲಯಾ ದೇಶದ ಸ್ತ್ರೀಯರ ಚಮತ್ಕಾರ ಆಟಗಳು ಡಾಬಲ್ ಟ್ರ್ಯಾಪೀಸ್ ಮತ್ತು ಅಂತ್ಯದಲ್ಲಿ ಅತ್ಯದ್ಭುತ ಕೋಡಂಗಿಗಳ ಎಲ್ಲಾ ಆಟಗಳು ಆನೆ,ಸಿಂಹ,ಹುಲಿ ಒಂಟೆ ಕುದುರೆಗಳ ಒಟ್ಟು ಒಟ್ಟು ಆಟಗಳನ್ನು ತಪ್ಪದೆ ನೋಡಿ

ಈ ಮೃತ್ಯುಪಂಜರದ ಮೋಟಾರ್ ಸೈಕಲ್ ನೃತ್ಯವನ್ನು ಭಾರತದ ಮಾಜಿ ಪ್ರಧಾನ ಸೇನಾ ನಾಯಕರಾದ ಜನರಲ್ ಕಾರಿಯಪ್ಪನವರು ವೀಕ್ಷಿಸಿ ಹೀಗೆ ಶ್ಲಾಘಿಸಿದರು –

"ಮೃತ್ಯು ಪಂಜರದೊಳಗೆ ಆಟಗಾರರು ಬರುವುದೆಂದರೆ ಮೃತ್ಯುವಿನ ಬಾಯಿಂದ ತಪ್ಪಿಸಿಕೊಂಡು ಬಂದಂತೆಯೇ ಸರಿ"

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE WEDNESDAY 10 3-1954 : ಮೈಸೂರು : ಬುಧವಾರ ೧೦ ೩-೧೯೫೪ [ಸಂಚಿಕೆ ೨೦೬

ಸಂಸ್ಥಾನದ ಸಮಾಜವಾದಿಗಳಿಂದ ಕರ ನಿರಾಕರಣೆಯೇ

ಮೈಸೂರು ಮತ್ತು ಬೆಂಗಳೂರು ಅರಮನೆಗಳು ಮಹಾರಾಜರದು

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೧೦

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಅರಮನೆಗಳನ್ನು ಬಿಟ್ಟು ಶ್ರೀಮನ್ಮಹಾರಾಜರಿಗೆ ಸೇರಿದ ಎಲ್ಲಾ ಖಾಸಗಿ ಆಸ್ತಿಗಳಿಗೂ ಪೌರಸಭಾ ಕಂದಾಯವನ್ನು ವಿಧಿಸುವಂತೆ ಅವಕಾಶ ಕಲ್ಪಿಸುವ ಮಸೂದೆಯು ನೆನ್ನೆ ಶಾಸನ ಸಭೆಯಲ್ಲಿ ಅಂಗೀಕೃತವಾಯಿತು. ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಅರಮನೆಗಳು ಶ್ರೀಮನ್ಮಹಾರಾಜರ ಖಾಸಗೀ ಆಸ್ತಿಯೆಂಬುದು ಮಹಾರಾಜರಿಗೂ, ರಾಷ್ಟ್ರಾಧ್ಯಕ್ಷರಿಗೂ ಆಗಿರುವ ಕರಾರಿನಿಂದ ವ್ಯಕ್ತಪಟ್ಟಿರುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು.

ಇನಾಂ ರದ್ದಿಯಾತಿಗಾಗಿ ೧೦೫ ಲಕ್ಷ ರೂ ಪರಿಹಾರ

ಸಂಸ್ಥಾನದಲ್ಲಿ ಇನಾಂಗಳನ್ನು ರದ್ದುಗೊಳಿಸಬೇಕಾದರೆ ೧೦೫ ಲಕ್ಷ ರೂ ಗಳ ಪರಿಹಾರವನ್ನು ಕೊಡಬೇಕಾಗ ಬಹುದೆಂದು ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುತ್ತಾರೆ. ಇನಾಂ ರದ್ದಿಯಾತಿ ಬಗ್ಗೆ ಶ್ರೀ ಗುಂಡಪ್ಪಗೌಡರ ಸಮಿತಿಯ ಶಿಫಾರಸಿನಂತೆ ೧೫೦ ಲಕ್ಷ ರೂ. ಕೊಡಬೇಕಾಗಿತ್ತೆಂದು ಸಚಿವರು ತಿಳಿಸಿರುವರು.

ನೆಹರೂರೊಡನೆ ಮೈಸೂರು ಸಾಬು ಭೇಟಿ

ಪ್ರಧಾನಿ ನೆಹರೂರವರು ದೆಹಲಿಯಲ್ಲಿ ಮೈಸೂರು ಸಾಬುವಿಗೆ ಭೇಟಿ ಕೊಟ್ಟಿದ್ದರು. ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಸಾಬುರವರ ಒಗ್ಗೆ ನೆಹರೂರವರು ಸಂತೋಷ ವ್ಯಕ್ತಪಡಿಸಿದರು. ಶಾರಾಪುರದಲ್ಲಿ ಪೆರ್ಡ್ಸ್ ಕಾರ್ಯಾಚರಣೆ ಸಂಬಂಧವಾಗಿ ಸಾಬುರವರು ತೆಗೆದಿದ್ದ ಚಿತ್ರವನ್ನು ಪ್ರಧಾನ ಮಂತ್ರಿ, ಲೇಡಿ ಮೌಂಟ್ ಬ್ಯಾಟನ್, ಕೆನಡಾ ಪ್ರಧಾನಿ ಸೇಂಟ್ ಲಾರೆಂಟ್ ಮುಂತಾದವರು ನೋಡಿ ಪ್ರಶಂಸೆ ಮಾಡಿದರು. ಚಿತ್ರವನ್ನು ಮೈಸೂರಿನ ಶ್ರೀಮನ್ಮಹಾರಾಜರೂ ನೋಡಿರುವರು.

ರಾಮನಾಥಪುರಕ್ಕೆ ವಿದ್ಯುಚ್ಛಕ್ತಿ

ರಾಮನಾಥಪುರಕ್ಕೆ ವಿದ್ಯುಚ್ಛಕ್ತಿಯ ಸೌಕರ್ಯ ದಗಿಸಲು ಅಂದಾಜನ್ನು ಮಂಜೂರು ಮಾಡಲಾಗಿರುವುದೆಂದೂ, ಬೇಗನೆ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದೂ ಶಾಸನ ಸಭೆಯಲ್ಲಿ ವ್ಯವಸಾಯ ಮಂತ್ರಿ ಡಾ|| ನಾಗನಗೌಡರು ತಿಳಿಸಿರುತ್ತಾರೆ. ಹಳ್ಳಿಗಳಿಗೆ ದೀಪ ಕೊಡಬೇಕಾದರೆ ವೆಚ್ಚವಾಗುವ ಹಣದ ಮೇಲೆ ಶೇ|| ೬ ರಷ್ಟು ಲಾಭ ಬರಬೇಕೆಂದೂ ಸಚಿವರು ತಿಳಿಸಿರುತ್ತಾರೆ. ಮೈಸೂರು ತಾಲ್ಲೂಕು ಲಕ್ಷ್ಮೀಪುರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುವುದೆಂದೂ ತಿಳಿಸಲಾಗಿದೆ.

ಬಟ್ಟೆ ಕಳುವಿಗಾಗಿ ೧|| ವರ್ಷ ಸಜಾ

ಮೈಸೂರು. ಕೋ ಆಪರೇಟಿವ್ ಸೊಸೈಟಿಯ ೩೭ ಗಜ ಬಟ್ಟೆಯನ್ನು ಕದ್ದನೆಂದು ಬಾಷಾ ಎಂಬುವನಿಗೆ ನಗರದ ೧ ನೇ ನ್ಯಾಯಾಧೀಶರು ೧| ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

ಅಧಿಕ ತೆರಿಗೆ ವಿರುದ್ಧವಾಗಿ ಕರ ನಿರಾಕರಣೆ ಚಳುವಳಿ

ಸಂಸ್ಥಾನದ ಪ್ರಜಾ ಸಮಾಜವಾದಿಗಳ ಸಮ್ಮೇಳನದ ಕರೆ

ಚನ್ನಪಟ್ಟಣ ೧೦

ಪ್ರಜಾ ಸಮಾಜವಾದಿ ಪಕ್ಷದ ಮೈಸೂರು ಶಾಖಾ ಸಮ್ಮೇಳನವು ಬೊಂಬಾಯಿ ಸಮಾಜವಾದಿ ಮುಖಂಡರಾದ ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ಇಲ್ಲಿ ಸೇರಿ ಸಂಸ್ಥಾನ ಸರ್ಕಾರದ ತೆರಿಗೆ ನೀತಿಯನ್ನು ಖಂಡಿಸಿ, ಭೂಕಂದಾಯ, ನೀರು ಕರದಿ ಮತ್ತು ವಿದ್ಯುಚ್ಛಕ್ತಿ ವೇಲಿ ತೆರಿಗೆ ಹೆಚ್ಚಿಸಿರುವುದರ ವಿರುದ್ಧವಾಗಿ ಪ್ರಜೆಗಳು ಪ್ರತಿಭಟಿಸಬೇಕೆಂದು ಸೂಚಿಸಲಾಯಿತು. ಪ್ರತಿಭಟನೆಗೆ ಸರ್ಕಾರದವರು ಬಗ್ಗದಿದ್ದರೆ ಕಂದಾಯ ನಿರಾಕರಣಾ ಚಳುವಳಿಯನ್ನು ಹೂಡುವಂತೆಯೂ ಸಮ್ಮೇಳನವು ನಿರ್ಧರಿಸಿರುತ್ತದೆ.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೆಚ್ಚಿನ ತೆರಿಗೆಗಳನ್ನು ಕೊಡಲು ನಿರಾಕರಿಸಬೇಕೆಂದು ಮಾಡಲಾಗಿರುವ ನಿರ್ಣಯವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆದಷ್ಟು ಬೇಗನೆ ಪ್ರಚಾರ ಪಡಿಸಲು ಪ್ರತಿಭಟನಾ ಸಭೆಗಳನ್ನು ನಡೆಸಿ ಜನಾಭಿಪ್ರಾಯವನ್ನು ಕ್ರೋಡೀಕರಿಸಿ ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚಿಸಿದರು. ಸ್ವದೇಶೀ ವಸ್ತುಗಳ ಉಪಯೋಗದ ಬಗ್ಗೆ ಹಳ್ಳಿಗಾಡಿನವರಿಗೆ ತಿಳುವಳಿಕೆ ಕೊಡಬೇಕೆಂದೂ, ನಿರುದ್ಯೋಗವನ್ನು ನಿವಾರಿಸಲು ನಿರುದ್ಯೋಗಿಗಳನ್ನು ಸಂಘಟಿಸಬೇಕೆಂದೂ ಅವರು ಹೇಳಿದರು. ವಿನೋಬಾ ಭಾವೆಯವರ ಚಳುವಳಿಗೆ ಬೆಂಬಲ ನೀಡಬೇಕೆಂದೂ ತಿಳಿಸಿದರು.

ರಹದಾರಿ ಇಲ್ಲದೆ ಬಸ್ಸು ಓಡಿಸಿದುದಕ್ಕಾಗಿ ೩೦ ರೂ. ದಂಡ

ಮೈಸೂರು ೧೦

ರಾಜಧಾನಿಯಿಂದ ಸಾಲಿಗ್ರಾಮಪುರಕ್ಕೆ ಹೋಗಿ ಬರುವ ಮಂಜುನಾಥೇಶ್ವರ ಮೋಟಾರ ಸರ್ವಿಸ್ಸಿನ ಮಾಲೀಕರು ತಮ್ಮ ೬೫೬ ನೇ ನಂಬರು ಬಸ್ಸನ್ನು ರಹದಾರಿಯಿಲ್ಲದೆ ಓಡಿಸಿದರೆಂದು ಡಿ. ಎಸ್. ಡಿವಿಜನ್ನಿನ ಟ್ರಾಫಿಕ್ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಬಸ್ಸಿನ ಡ್ರೈವರ್ ಶ್ರೀ ಸತ್ಯನಾರಾಯಣರವರಿಗೆ ೩೦ ರೂ ದಂಡ ತಪ್ಪಿದರೆ ೧ ವಾರ ಸಜಾ ವಿಧಿಸಲಾಗಿದೆ.

ದನಗಳ ಕಳುವಿಗಾಗಿ ೪ ದಿನದ ಸಜಾ

ಕ್ಯಾತಮಾರನಹಳ್ಳಿಯ ಆದಿಕರ್ನಾಟಕ ಜಾತಿಯ ಮಾದ ಎಂಬುವನು ತಮ್ಮ ಹಳ್ಳಿಯ ಗುಡಿಹಾಳ್ ಮರಿ ಎಂಬುವನಿಗೆ ಸೇರಿದ ೮೦ ರೂ ಬೆಲೆ ಬಾಳುವ ದನವನ್ನು ಕದ್ದು ಮೈಸೂರಿನಲ್ಲಿ ಕಮಾನಿ ದರ್ವಾಜ ಬಳಿ ೧೫ ರೂ ಗಳಿಗೆ ಮಾರುತ್ತಿದ್ದನೆಂದು ಅವನಿಗೆ ೪ ದಿನಗಳ ಕಠಿಣ ಸಜಾ ವಿಧಿಸಲಾಗಿದೆ.

ಗೋಹತ್ಯೆಗಾಗಿ ೫೦ ರೂ ದಂಡ

ರಾಜಧಾನಿಯ ಲಷ್ಕರ್ ಮೊಹಲ್ಲಾ ಕಸಾಬಗೇರಿಯಲ್ಲಿ ಮಹಮದ್ ಅಕಂ ಮತ್ತು ಇನ್ನೊಬ್ಬನು ಸೇರಿ ದನವೊಂದನ್ನು ಕೊಯ್ಯುತ್ತಿದ್ದರೆಂದು ಅವರಿಗೆ ನಗರದ ೧ ನೇ ನ್ಯಾಯಾಧೀಶರು ತಲಾ ೫೦ ರೂ ದಂಡವನ್ನು ವಿಧಿಸಿರುತ್ತಾರೆ.

ಇನಾಂ ರದ್ದಿಯಾತಿ ಮಸೂದೆಯು ಅಂಗೀಕಾರ

ಶೃಂಗೇರಿ ಜಹಗೀರು ರದ್ದಿನ ಬಗ್ಗೆ ಪ್ರತ್ಯೇಕ ಮಸೂದೆ

ಬೆಂಗಳೂರು ೧೦

ಐದು ದಿನಗಳ ಚರ್ಚೆಯಾದನಂತರ ಇನಾಂ ರದ್ದಿಯಾತಿ ಮಸೂದೆಯು ನೆನ್ನೆ ಶಾಸನ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ರೈತರುಗಳಿಗೆ ಉಳುವ ಹಕ್ಕನ್ನೂ ಇನಾಂದಾರರಿಗೆ ಸರಿಯಾದ ಪರಿಹಾರವನ್ನೂ ಕೊಡಬೇಕೆಂದು ಸದಸ್ಯರುಗಳು ಹೇಳಿದರು. ಮಸೂದೆಗೆ ಒಂಭತ್ತು ತಿದ್ದುಪಡಿಗಳು ಬಂದು ಅವು ಅಂಗೀಕೃತವಾದುವು. ೨೦೯೪ ಹಳ್ಳಿಗಳ ೩,೬೯೯,೬೬೫ ಎಕರೆ ಪ್ರದೇಶಗಳಿಗೆ ಈ ಮಸೂದೆಯ ಅನ್ವಯವಾಗುತ್ತದೆ. ಇನಾಂದಾರರಿಗೆ ೧೦ ವರ್ಷಗಳಲ್ಲಿ ಪರಿಹಾರ ಒದಗಿಸಲೂ ೨೫ ಸಾವಿರ ಮಂದಿ ರೈತರಿಗೆ ಸೌಲಭ್ಯ ಕಲ್ಪಿಸಲೂ ಮಸೂದೆಯಿಂದ ಅವಕಾಶವಾಗಿದೆ.

ಶೃಂಗೇರಿ ಜಹಗೀರು ಮತ್ತು ಇತರ ಧರ್ಮ ಸಂಸ್ಥೆಗಳ ಇನಾಂಗಳ ಬಗ್ಗೆ ಪ್ರತ್ಯೇಕ ಮಸೂದೆಯನ್ನು ತರಲು ವ್ಯವಸ್ಥೆಯಾಗಿದೆ.

ಯುನೈಟೆಡ್ ಫ್ರಂಟ್‌ನೊಡನೆ ಸಮಾಜವಾದಿಗಳ ಸಹಕಾರಬೇಡ

ತಿರುವಾಂಕೂರು-ಕೊಚ್ಚಿಯಲ್ಲಿ ವಾಮ ಪಕ್ಷಗಳ ಯುನೈಟೆಡ್ ಫ್ರಂಟ್ ಸಂಗಡದೊಡನೆ ಸಮ್ಮಿಶ್ರ ಸರ್ಕಾರವನ್ನು ರಚಿಸುವ ಆಲೋಚನೆಯನ್ನು ಪ್ರಜಾ ಸಮಾಜವಾದಿ ನಾಯಕರಾದ ಜಯಪ್ರಕಾಶ ನಾರಾಯಣರು ವಿರೋಧಿಸಿ ಈ ಬಗ್ಗೆ ಸಂಸ್ಥೆಯ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೆ ಪತ್ರ ಬರೆದಿರುತ್ತಾರೆ. ತಮ್ಮ ಪಕ್ಷದವರು ಹೊರಗಿದ್ದುಕೊಂಡು ಯುನೈಟೆಡ್ ಫ್ರಂಟಿನವರು ಸರ್ಕಾರ ರಚಿಸಲು ಅವಕಾಶವೀಯಬೇಕೆಂದೂ, ಅವರುಗಳು ಹೇಗೆ ಕೆಲಸ ಮಾಡುವರೆಂಬುದನ್ನು ಕಾದು ನೋಡಬೇಕೆಂದೂ ಜಯಪ್ರಕಾಶರು ಸಲಹೆ ಮಾಡಿರುತ್ತಾರೆ.

ನಾನ್ ಗೆಜೆಟೆಡ್ ನೌಕರರಿಗೆ ಕೂಡಲೇ ಪರಿಹಾರಕ್ಕಾಗಿ ಕರೆ

ನಾನ್ ಗೆಜೆಟೆಡ್ ನೌಕರರುಗಳ ಸಂಘದ ಅಸಾಧಾರಣ ಸಭೆಯು ನೆನ್ನೆ ಬೆಂಗಳೂರಿನಲ್ಲಿ ನಡೆದು ನೌಕರರುಗಳಿಗೆ ಪರಿಹಾರವನ್ನು ಕೊಡಲು ಕೂಡಲೇ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಕೋರಲಾಯಿತು. ಬರುವ ತಿಂಗಳ ೧೫ ರೊಳಗೆ ಈ ಬಗ್ಗೆ ವ್ಯವಸ್ಥೆ ಮಾಡದಿದ್ದರೆ ಮುಂದಿನ ಕ್ರಮವನ್ನು ನಡೆಸಲು ಸಂಘದ ಮತ್ತೊಂದು ಜನರಲ್ ಸಭೆಯನ್ನು ಸೇರಿಸಬೇಕೆಂದೂ ನಿರ್ಧಾರವಾಯಿತು.

ಪ್ರಿಫ್ಯಾಬ್ರಿಕೇಟೆಡ್ ಗೃಹದ ಪರಿಶೀಲನೆ

ನೆನ್ನೆ ಬೆಳಿಗ್ಗೆ ಅಖಿಲ ಭಾರತ ಗೃಹ ಕೈಗಾರಿಕಾ ಸಲಹಾ ಸಮಿತಿಯ ಶ್ರೀ ಯು ಶ್ರೀನಿವಾಸನ್ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಅಮೆರಿಕದ ವಿಲ್ಲಿಸ್ ಎಂಬುವರು ಮೈಸೂರು ಹೌಸಿಂಗ್ ಬಜಾರಿನಲ್ಲಿ ಶ್ರೀ ಮಾಧವರಾಯರಿಂದ ನೂತನ ವಿಧಾನದಲ್ಲಿ ನಿರ್ಮಿತವಾಗಿರುವ ಪ್ರಿಫ್ಯಾಬ್ರಿಕೇಟೆಡ್ ಗೃಹದ ಮಾದರಿಯನ್ನು ಕಂಡು ಸಂತೋಷವನ್ನು ವ್ಯಕ್ತಪಡಿಸಿ, ಈ ಕಾರ್ಯಕ್ಕೆ ತಕ್ಕ ಪ್ರೋತ್ಸಾಹ ನೀಡುವುದಾಗಿ ಭರವಸೆಯಿತ್ತರು.

ತೆರಿಗೆ ನೀತಿಯು ಸಾಂಕ್ರಾಮಿಕ ಜಾಡ್ಯದಂತಿದೆ

ಆಯವ್ಯಯ ಅಂದಾಜಿನ ಬಗ್ಗೆ ಇಮಾಂರವರ ತೀವ್ರ ಖಂಡನೆ

ಸ್ವಂತ ಫೋನ್] ಬೆಂಗಳೂರು ೧೦

ಈ ದಿನ ಶಾಸನ ಸಭೆಯಲ್ಲಿ ಆಯವ್ಯಯ ಅಂದಾಜು ಪಟ್ಟಿಯ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಇ. ಇಮಾಂರವರು ಮಾತನಾಡಿ, ಸರ್ಕಾರದ ತೆರಿಗೆ ನೀತಿಯನ್ನು ಉಗ್ರವಾಗಿ ಟೀಕಿಸಿದರು. ಜನಾಭ್ಯುದಯ ಸರ್ಕಾರವು ಅಂದಿನಿಂದಲೂ ಜನರ ಮೇಲೆ ಭಾರಗಳು ಕಡಿಮೆಯಾಗುವುದರ ಬದಲು ತೆರಿಗೆಗಳನ್ನು ಹೇರಲಾಗುತ್ತಿರುವುದೆಂದೂ, ಕೇಂದ್ರ ಸರ್ಕಾರದ ಹೆಚ್ಚು ತೆರಿಗೆ ವಿಧಾಯಕ ನೀತಿಯು ಸಾಂಕ್ರಾಮಿಕ ಜಾಡ್ಯ ರೂಪದಲ್ಲಿ ಸಂಸ್ಥಾನಕ್ಕೆ ಹಬ್ಬಿದೆಯೆಂದೂ ವಿವೇಚನೆಯಿಲ್ಲದೆ ತೆರಿಗೆಗಳನ್ನು ಹೆಚ್ಚಿಸಲಾಗಿದೆಯೆಂದೂ ಅವರು ಹೇಳಿದರು. ಈ ವರ್ಷದ ಆಯವ್ಯಯವು ಜನರ ನಿರಾಶಾಜನಕವಾಗಿದೆಯೆಂದು ಅಭಿಪ್ರಾಯಪಟ್ಟರು.

ಮುಂದುವರಿದು, ಕರ್ನಾಟಕ ಏಕೀಕರಣವಾಗಬೇಕೆಂದೂ, ಬೊಂಬಾಯಿ ಸರ್ಕಾರದವರು ಕನ್ನಡ ಪ್ರಜೆಗಳ ಬಗ್ಗೆ ಸರಿಯಾಗಿ ವರ್ತಿಸುತ್ತಿಲ್ಲವೆಂದೂ ಅವರು ಆಕ್ಷೇಪಿಸಿದರು.

ಹಿರೇಭಾಸ್ಕರ ಅಣೆಕಟ್ಟಿನ ಎತ್ತರ ಹೆಚ್ಚಿಸಲು ಯೋಜನೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ವ್ಯವಸಾಯ ಮಂತ್ರಿ ಶ್ರೀ ನಾಗನಗೌಡರು ಮಾತನಾಡಿ, ನಿವೃತ್ತ ಇಂಜನಿಯರ್ ಶ್ರೀ ವೈರಾವ ಸ್ವಾಮಿಯವರು ಹಿರೇಭಾಸ್ಕರ ಅಣೆಕಟ್ಟನ್ನು ಎತ್ತರಿಸಿ, ಅಲ್ಲಿ ವಿದ್ಯುಚ್ಛಕ್ತಿ ಉತ್ಪನ್ನ ಮಾಡುವ ಬಗ್ಗೆ ಯೋಜನೆಯನ್ನು ಕಳುಹಿಸಿರುವರೆಂದು ಹೇಳಿದರು. ಶರಾವತಿ ನದಿಯ ಪ್ರದೇಶದಲ್ಲೆಲ್ಲಾ ಎಷ್ಟು ಸಾಧ್ಯವೋ ಅಷ್ಟು ವಿದ್ಯುಚ್ಛಕ್ತಿ ಉತ್ಪನ್ನ ಮಾಡುವ ವಿಷಯವು ಆಲೋಚನೆಯಲ್ಲಿರುವುದಾಗಿಯೂ ಸಚಿವರು ನುಡಿದರು.

ಇನ್ನೊಂದು ಪ್ರಶ್ನೆಗೆ ಉತ್ತರವಾಗಿ, ಆಡಳಿತದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸಲು ಕ್ರಮ ಕೈಗೊಳ್ಳಲಾಗುವುದೆಂದೂ, ಅದಕ್ಕಾಗಿ ಪ್ರತ್ಯೇಕ ಮಸೂದೆಯು ಅಗತ್ಯವಿಲ್ಲವೆಂದೂ ನ್ಯಾಯಾಂಗ ಸಚಿವರು ತಿಳಿಸಿದರು.

○ ಕಿರಿಯ ಶಾಸನ ಸಭೆಯಿಂದ ಹಿರಿಯ ಸಭೆಗೆ ೫ ಸ್ಥಾನಗಳಿಗಾಗಿ ನಡೆಯಬೇಕಾಗಿರುವ ಚುನಾವಣೆಯಿಂದ ಶ್ರೀ ಬ್ರಹ್ಮಯ್ಯ ಮತ್ತು ಶ್ರೀ ಸಂಜೀವರೆಡ್ಡಿಯವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುತ್ತಾರೆ. ಈಗ ೧೦ ಮಂದಿಯಲ್ಲಿ ಸ್ಪರ್ಧೆಯು ಇದೆ.

ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿ

ಈ ಅಸಿಸ್ಟೆಂಟ್ ಕಮಿಷನರ್ ದರ್ಜೆಯಲ್ಲಿರುವ ಅಧಿಕಾರಿಗಳ ವರ್ಗಾವರ್ಗಿಯು ಈ ರೀತಿ ಇದೆ :—ರಜದಮೇಲಿರುವ ಶ್ರೀ ಎಂ ಮಲ್ಲೇಶಯ್ಯನವರು ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್ ಆಗಿ, ಪರ್ಸನಲ್ ಅಸಿಸ್ಟೆಂಟ್ ಶ್ರೀ ಸಿ ಎಸ್ ರಾಜಶೇಖರಪ್ಪನವರು ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾಗಿ, ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎ ಮುನಿಸ್ವಾಮಿಗೌಡರು, ಮೈಸೂರು ಸಬ್ ಡಿವಿಜನ್ನಿಗೆ, ಮೈಸೂರು ಸಬ್ ಡಿವಿಜನ್ನಿನ ಶ್ರೀ ಎಂ ಸೈಯದ್ ಮುಹೀದ್‌ದೀನ್ ದಕ್ಷಿಣ ಕನ್ನಡದ ಎ...

ಬೆಂಗಳೂರಿನಿಂದ ಹಾಲಿನ ಸಂಶೋಧನಾ ಕೇಂದ್ರದ ವರ್ಗವೇ

ಕೇಂದ್ರ ವ್ಯವಸಾಯ ಮಂತ್ರಿ ಪಿ ಎಸ್ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಬೆಂಗಳೂರಿನಲ್ಲಿರುವ ಹಾಲಿನ ಸಂಶೋಧನಾ ಕೇಂದ್ರವನ್ನು ಬೇರೊಂದು ಸ್ಥಳಕ್ಕೆ ವರ್ಗಾಯಿಸುವ ವಿಷಯವನ್ನು ಪರ್ಯಾಲೋಚಿಸಲಾಗುತ್ತಿದೆಯೆಂದು ತಿಳಿಸಿದ್ದಾರೆ ಸರಿಯಾದ ಸ್ಥಳವನ್ನು ಗೊತ್ತುಪಡಿಸುವುದಕ್ಕಾಗಿ ಪ್ರವೀಣರ ಸಮಿತಿಯೊಂದನ್ನು ರಚಿಸಲಾಗಿರುವುದೆಂದು ಅವರು ಹೇಳಿರುವರು ಮೈಸೂರು ಸರ್ಕಾರದ ಮೂಲಕ ಸರಿಯಾದ ಸ್ಥಳವನ್ನು ನ್ಯಾಯವಾದ ಬೆಲೆಗೆ ಕೊಳ್ಳುವ ಪ್ರಯತ್ನವು ನಿಷ್ಫಲವಾದದ್ದಾಗಿ ಆಹಾರ ಮಂತ್ರಿಗಳು ತಿಳಿಸಿರುತ್ತಾರೆ ಬೇರೆಯ ಕಡೆಗೆ ಕೇಂದ್ರವನ್ನು ವರ್ಗಾಯಿಸುವುದರಿಂದ ಅಲ್ಲಿ ಈಗಿರುವ ೮೦೦ ಮಂದಿ ನೌಕರರು ನಿರುದ್ಯೋಗಿಗಳಾಗುವ ಸಂಭವವಿದೆ

ಋಷಿಕೇಶದಲ್ಲಿ ಆಯುರ್ವೇದದ ವಿಶ್ವವಿದ್ಯಾಲಯ

ಉತ್ತರ ಪ್ರದೇಶದ ಋಷಿಕೇಶದಲ್ಲಿ ಅಖಿಲ ಭಾರತ ಆಯುರ್ವೇದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕೊಟ್ಟಕಲ್ಲಿನಲ್ಲಿ ಸೇರಿದ ಆಯುರ್ವೇದ ಕಾಂಗ್ರೆಸ್ ಸಭೆಯಲ್ಲಿ ನಿರ್ಧಾರವಾಗಿದೆ ಈ ಸಂಬಂಧವಾಗಿ ದೇಹಲಿಯಲ್ಲಿ ಎಂ ಆಯುರ್ವೇದ ವಿದ್ಯಾಲಯವನ್ನು ಋಷಿಕೇಶಕ್ಕೆ ಸಾಗಿಸಲೂ ತೀರ್ಮಾನವಾಗಿದೆ ಆಯುರ್ವೇದದಲ್ಲಿ ಉತ್ತಮ ರೀತಿಯ ಶಿಕ್ಷಣವೀಯಲು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು

ಮುಂದಿನ ಆಯವ್ಯಯದಲ್ಲಿ ೬೦೦ ಕೋಟಿ ರೂ ಖೋತಾ

ಮೊದಲನೆಯ ಪಂಚವಾರ್ಷಿಕ ಯೋಜನೆಯು ಮುಕ್ತಾಯವಾಗುವ ಇನ್ನೆರಡು ವರ್ಷಗಳಲ್ಲಿ ಭಾರತದ ಆಯವ್ಯಯದಲ್ಲಿ ೫೦೦ ರಿಂದ ೬೦೦ ಕೋಟಿ ರೂ ಗಳ ಖೋತಾ ಬರುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಸಿ ಡಿ ದೇಶಮುಖ್‌ರವರು ತಿಳಿಸಿರುವರು ಮುಂದೆ ಭಾರತಕ್ಕೆ ವಿದೇಶೀ ಹಣದ ಸಹಾಯವು ಕಡಿಮೆಯಾಗುವುದೆಂದೂ ಅವರು ಹೇಳಿರುವರು

ಶಾರದಾ ವಿಲಾಸ ಪ್ರೌಢಶಾಲಾ ವಾರ್ಷಿಕೋತ್ಸವ

ರಾಜಧಾನಿಯ ಶಾರದಾ ವಿಲಾಸ ಪ್ರೌಢಶಾಲೆಯ ವಾರ್ಷಿಕೋತ್ಸವವು ಇದೇ ೧೩ ನೇ ತಾ॥ ಶನಿವಾರ ಸಂಜೆ ೬ ಗಂಟೆಗೆ ನೆರವೇರುವುದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು ಮಾಜಿ ದಿವಾನರಾದ ಶ್ರೀ ಎಂ ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣವನ್ನೂ ಮಾಡಲಾಗುವುದು

ಮಾಧ್ವ ಮಂಡಲಿಯ ಸಭೆ

ಅಖಿಲ ಭಾರತ ಮಾಧ್ವ ಮಹಾ ಮಂಡಲಿಯ ಮೈಸೂರು ಶಾಖೆಯ ಸಭೆಯು ಇದೇ ೧೫ ನೇ ತಾ॥ ಸಂಜೆ ೫ ಗಂಟೆಗೆ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವ್ಯಾಸರಾಯ ಸ್ವಾಮಿಗಳವರ ಮಠದಲ್ಲಿ ಸೇರುವುದು

ತೆಲುಗು ಕವಿಗಳ ಬಗ್ಗೆ ಭಾಷಣ

ಮೈಸೂರು ಮಹಾರಾಜಾ ಕಾಲೇಜಿನ ತೆಲುಗು ಅಸಿಸ್ಟೆಂಟ್ ಪ್ರೊಫೆಸರರಾದ ಶ್ರೀ ಕೆ ಸುಬ್ಬರಾಮಪ್ಪನವರು ಕೋಲಾರದ ಇಂಟರ್ ಕಾಲೇಜಿನ ತೆಲುಗು ಸಂಘದ ಮುಕ್ತಾಯ ಭಾಷಣವನ್ನು ಮೊನ್ನೆ ಮಾಡಿ, ತೆಲುಗು ಸಾಹಿತ್ಯಕ್ಕೆ ಶತಕ ಕವಿಗಳ ಸೇವೆಯನ್ನು ಕುರಿತು ಭಾಷಣ ಮಾಡಿದರು ಕಾಲೇಜಿನ ಸೂಪರಿಂಟೆಂಡೆಂಟರಾದ ಶ್ರೀ ಎಚ್ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು

ಚಿಕ್ಕಬಳ್ಳಾಪುರದ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಸುಬ್ಬರಾಮಪ್ಪನವರು ಪೋತನ ಮತ್ತು ಅವನ ಭಾಗವತ ಎಂಬ ವಿಷಯವಾಗಿ ಭಾಷಣ ಮಾಡಿದರು ಅಲ್ಲಿನ ವಕೀಲರೂ ಕರ್ನಾಟಕ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ ಎಸ್ ರಾಮರಾಯರು ಅಧ್ಯಕ್ಷತೆ ವಹಿಸಿದ್ದರು

ಕಳಲೆ ಶ್ರೀ ಕೈವಲ್ಯಾ ದೇವಿ ಅಮ್ಮನವರು

ಈ ದೇವಿಗೆ ಕೈವಲ್ಯಾ" ಎಂದು ಹೆಸರು ಹೇಗೆ ಬಂದಿತು ಎಂಬ ವಿಚಾರವನ್ನು "ಶ್ರೀ ಕಪಿಲಾಕ್ಷೇತ್ರವೈಭವ ದಲ್ಲಿ ಈ ರೀತಿ ಬರೆದಿರುತ್ತೆ —

ದ್ವಾಪರ ಯುಗಾಂತ್ಯದಲ್ಲಿ ಅಂಧಕಾಸುರನ ವಂಶದಲ್ಲಿ ಲವಣಾಸುರನೆಂಬೊಬ್ಬ ರಾಕ್ಷಸನು ಅಮೃತ ಪ್ರಾಶನ ಮಾಡಬೇಕೆಂಬ ಆಶೆಯಿಂದ ನಾರದರನ್ನು ಕೇಳಲು ಅವರು ತುಳಸೀ ಕಾನನದಲ್ಲಿರುವ ಬಿಂದು ಸರಸ್ಸಿನಲ್ಲಿ ಇಟ್ಟಿರುವುದಾಗಿ ಹೇಳಿದರು ಲವಣಾಸುರನು ಅಲ್ಲಿಗೆ ಹೋದಾಗ ಕಪಿಲ ಮಹರ್ಷಿಗಳು ಅವನ ದರ್ಪವನ್ನು ಅಡಗಿಸಬೇಕೆಂದು ಲೋಕ ಮೋಹಕವಾದ ಶಕ್ತಿಯನ್ನು ಸೃಷ್ಟಿಸಿದರು ಆ ಶಕ್ತಿಯು ಆ ಲವಣಾಸುರನನ್ನು ತುಳಿದು ಸಂಹರಿಸಿ ಅವನಿಗೆ ಕೈವಲ್ಯ ಪದವಿಯನ್ನು ಕೊಟ್ಟಿತು ಎಲೈ ಶಕ್ತಿಯೇ, ನೀನು ಈ ಕ್ಷೇತ್ರದ ಮಾಹಾತ್ಮ್ಯವನ್ನು ಶೋಭಿಸುತ್ತಾ ಭಕ್ತರಿಗೆ ವರಪ್ರದಳಾಗಿಯೂ ದುಷ್ಟರನ್ನು ಶಿಕ್ಷಿಸುತ್ತಾ ಆಚಾರ್ಯಳಾಗಿಯೂ ಇಲ್ಲೇ ಅರ್ಚಾರೂಪಿಣಿಯಾಗಿ ಶ್ರೀ ಕೈವಲ್ಯಾ ಎಂಬ ಹೆಸರಿನಿಂದ ಇರು ಎಂದು ಕಪಿಲ ಮಹರ್ಷಿಗಳು ಕಳಲೆ ಗ್ರಾಮದ ಪೂರ್ವಕ್ಕೆ ಉತ್ತನಹಳ್ಳಿ ಗ್ರಾಮದ ಪಶ್ಚಿಮಕ್ಕೆ ಮಧ್ಯದಲ್ಲಿ ಪ್ರತಿಷ್ಠೆ ಮಾಡಿ ಹೊರಟು ಹೋದರು ಈ ದೇವಿಯು ೯ ಡಿಗ್ರಿ ನೆಂಜನಗೂಡಿನಿಂದ ದ್ವಾಪರ ... ಸಾಗವಾಗಿ ಹೋಗಬಹುದು

ಕೊಂಗಹಳ್ಳಿ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆ

ಕೊಯಮತ್ತೂರು ಜಿಲ್ಲೆಯ ಗೋಪಿಚೆಟ್ಟಿಪಾಳ್ಯದ ತಾಲ್ಲೂಕು ಕೊಂಗಹಳ್ಳಿ ಗ್ರಾಮದಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ಮಹೋತ್ಸವವು (ಜಾತ್ರೆಯು) ಇದೇ ತಿಂಗಳು ೨೨ನೇ ತಾ॥ ನಿಂದ ೨೬ನೇ ತಾ॥ ವರೆಗೆ ವಿಜೃಂಭಣೆಯಿಂದ ನಡೆಯಲೇರ್ಪಾಡಾಗಿದೆ ಭಕ್ತ ಮಹಾ ಜನರು ಜಾತ್ರೆಗೆ ಬಂದು ದೇವರ ಕೃಪೆಗೆ ಪಾತ್ರರಾಗಬೇಕೆಂದು ಧರ್ಮಕರ್ತರುಗಳು ಕೋರಿರುತ್ತಾರೆ

ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ೮ ನೇ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ನಿಲಯದ ನೂತನ ಕಟ್ಟಡದಲ್ಲಿ ಶ್ರೀ ಎಂ ಎನ್ ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ನೆರವೇರುವುದು ಮಹಾರಾಜಾ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಡಾ॥ ಎಂ ವಿ ಕೃಷ್ಣರಾಯರು ಭಾಷಣ ಮಾಡುವರು

೩ ವರ್ಷಗಳ ನಂತರ ಸೈಕಲ್ಲುಗಳ ಆಮದಿಲ್ಲ

ಎರಡು ಮೂರು ವರ್ಷಗಳಲ್ಲಿಯೇ ಭಾರತಕ್ಕೆ ಸೈಕಲ್ಲುಗಳ ಆಮದನ್ನು ನಿಲ್ಲಿಸಲಾಗುವುದೆಂದು ಕೇಂದ್ರ ಉಪ ವಾಣಿಜ್ಯ ಮಂತ್ರಿ ಡಿ ಪಿ ಕರ್ಮಾರ್ಕರ್‌ರವರು ತಿಳಿಸಿದ್ದಾರೆ

ಶುದ್ಧಾಯುರ್ವೇದದ ಅಭ್ಯಾಸಕ್ಕಾಗಿ ಕರೆ

ಕೇರಳದ ಕೊಟ್ಟಕಲ್ಲಿನಲ್ಲಿ ಭಾನುವಾರ ಸೇರಿದ್ದ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಅಧ್ಯಕ್ಷತೆ ವಹಿಸಿ ವೈದ್ಯರತ್ನ ಪಂಡಿತ ಶಿವಶರ್ಮರವರು ಭಾಷಣ ಮಾಡುತ್ತಾ, ಈಗಿರುವ ಚಿಕಿತ್ಸಾ ವಿಧಾನದ ಬದಲು ಶುದ್ಧಾಯುರ್ವೇದದ ಅಭ್ಯಾಸವಾಗಬೇಕೆಂದು ಸಲಹೆ ಮಾಡಿದರು ಆಯುರ್ವೇದವು ಕಾಲಕಾಲಾಂತರದಿಂದಲೂ ನಿಂತ ನೀರಿನಂತಿರದೆ ಇತರ ಎಲ್ಲಾ ವೈದ್ಯಕೀಯ ಪದ್ಧತಿಗಳಿಗಿಂತಲೂ ಉತ್ತಮವಾಗಿರುವುದೆಂದು ಅವರು ಅಭಿಪ್ರಾಯಪಟ್ಟರು ಆಯುರ್ವೇದದ ಭವಿಷ್ಯ ಮತ್ತು ವಿದ್ಯಾಭ್ಯಾಸವು ಆಯುರ್ವೇದದ ವೈದ್ಯರ ಕೈಯಲ್ಲಿರಬೇಕೆಂದು ಅವರ ಒತ್ತಿ ಹೇಳಿದರು ಬರುವ ವರ್ಷದಿಂದ ಶುದ್ಧಾಯುರ್ವೇದ ಪಾಠವನ್ನು ಜಾರಿಗೆ ತರಲು ಬೊಂಬಾಯಿ ಸರ್ಕಾರದವರು ನಿರ್ಧರಿಸಿರುವುದನ್ನು ಅವರು ಪ್ರಶಂಸಿಸಿದರು ಭಾರತದ ಆರೋಗ್ಯ ಮಂತ್ರಿಗಳು ಜನರ ಆರೋಗ್ಯವನ್ನು ನಿಜವಾಗಿಯೂ ಕಾಪಾಡುವುದಾದರೆ ಭಾರತೀಯರ ಹಣದ ವ್ಯಯದಿಂದ ಅಲೋಪತಿ ವೈದ್ಯ ಪದ್ಧತಿಯು ಹರಡುವುದಕ್ಕೆ ಅವಕಾಶವೀಯಬಾರದೆಂದು ಹೇಳಿದರು

ಸಂತಾಪ ಸೂಚನೆ

ಚಾಮರಾಜನಗರದ ಆರವಿಂದ ಹಿಂದಿ ಮಂದಿರದ ಆಶ್ರಯದಲ್ಲಿ ೫ನೇ ತಾ॥ ಶ್ರೀ ಎ ಎಸ್ ನಾಗಪ್ಪನವರ ಅಧ್ಯಕ್ಷತೆಯಲ್ಲಿ ಹಿಂದಿ ವಿದ್ಯಾರ್ಥಿಗಳ ಸಭೆ ನಡೆದು ಹಿಂದಿಯಲ್ಲಿ ಉದ್ದಾಮ ಪಂಡಿತರಾದ ಶ್ರೀ ರಘುವರದಯಾಳ್ ಮಿಶ್ರಾರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು ಹಿಂದಿ ಭಾಷೆಯ ಮೂಲಕ ಅವರು ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಲಾಯಿತು

ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನ

ಮೈಸೂರು ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನವು ಈ ತಿಂಗಳು ೨೦ ಮತ್ತು ೨೧ನೇ ತಾ॥ ಹಾಸನದಲ್ಲಿ ಆರೋಗ್ಯ ಡೈರೆಕ್ಟರ ಅಧ್ಯಕ್ಷತೆಯಲ್ಲಿ ನಡೆಯುವುದು ಹಾಸನ ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ವೈ ಧರ್ಮಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸುವರು

TENDER NOTICE

Sealed tenders forthe s pply ot provis ons etc to the Palace for the year 1954 55 i e from 1 4 1954 to 31 3 1955 will be received by the undersigned at 3 P M on Monday the 15th March 1954 at the Palace Office Mysore Particulars of tenders c n be had from the Muneeb Palace Mothikhana department Mysore

H N PALLEGAR
Huzur Secretary
to H H the Maharaja of Mysore

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

12—3—54ನೇ ಶುಕ್ರವಾರದಿಂದ 1 ವಾರ ಮಾತ್ರ

* ದ್ರೌಪದಿ ವಸ್ತ್ರಾಪಹರಣ *

(ತೆಲುಗು)

ಪಾತ್ರ ನಾಗಯ್ಯ ಕನ್ನಾಂಬ ದಮ್ಮೋಟಿ ಮುಂತಾದವರು

— ಮುಂದಿನ ಬದಲಾವಣೆ —

ನಿರುಪೇದಲು (ಕಡು ಬಡವರು) ತೆಲುಗು ಚಿತ್ರ

Edited, Printed and Published by A R Nagarajan at Sadhvi Press, D Subbiah Road, Mysore

ರೇವಣ್ಣನವರ ಉಪವಾಸದ ಮುಕ್ತಾಯ

ನಂಜನಗೂಡು ೮

ಕಪಿಲಾ ಟೆಕ್ಸ್‌ಟೈಲ್ ಮಿಲ್ಲಿನ ಕೆಲಸಗಾರರ ಬೇಡಿಕೆಗಳನ್ನು ಕೈಗಾರಿಕಾ ಟ್ರಿಬ್ಯೂನಲ್ಲಿಗೆ ಒಪ್ಪಿಸುವ ಸಂಬಂಧವಾಗಿ ಕಾರ್ಯಕ್ರಮವನ್ನು ಕೂಡಲೇ ತೆಗೆದುಕೊಳ್ಳಲಾಗುವುದೆಂದು ಕಾರ್ಮಿಕ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಭರವಸೆ ಕೊಟ್ಟಿರುವ ಪ್ರಯುಕ್ತ ಕಾರ್ಮಿಕ ಸಂಘದ ಅಧ್ಯಕ್ಷ ಶ್ರೀ ಎಸ್ ರೇವಣ್ಣನವರು ಕೈಗೊಂಡಿದ್ದ ಉಪವಾಸವನ್ನು ಮುಕ್ತಾಯ ಮಾಡಿರುತ್ತಾರೆ

ಲಿಂಗ ವ್ಯತ್ಯಾಸದ ಬಗ್ಗೆ ಚಲನ ಚಿತ್ರ

ಗಂಡಸು ಹೆಂಗಸಾಗಿ ಲಿಂಗ ಪರಿವರ್ತನೆಯಾಗುವ ಸನ್ನಿವೇಶವನ್ನು ನಿರೂಪಿಸುವ ಚಲನಚಿತ್ರವೊಂದನ್ನು ಫ್ರೆಂಚ್ ಕಂಪೆನಿಯೊಂದು ತಯಾರಿಸಿದೆ. ಜಾರ್ಜ್‌ ಎಂಬ ಪುರುಷ ಸ್ತ್ರೀಯಾಗಿ ಪರಿವರ್ತನೆ ಹೊಂದಿರುವುದನ್ನು ಅದರಲ್ಲಿ ಚಿತ್ರಿಸಲಾಗಿದೆ

ಚೀಣಾದ ಅಧ್ಯಕ್ಷರ ಅಸ್ವಸ್ಥತೆ

ಚೀಣಾದ ಅಧ್ಯಕ್ಷ ಮಾವೋತ್ಸೆಟುಂಗರು ಮರಣ ಹೊಂದಿರುವರೆಂದೂ ಅಥವಾ ಮರಣೋನ್ಮುಖರಾಗಿರುವರೆಂದೂ ವರದಿಯಾಗಿದೆ ಇದಕ್ಕೆ ಸಮರ್ಥನೆ ದೊರೆತಿಲ್ಲ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭—೫ ನಿಂದ ೭—೨೦ ಪ್ರೊಫೆಸರ್ ವಿ ಸುಬ್ರಹ್ಮಣ್ಯ ಅಯ್ಯರ್ ಸಂಗೀತ ಮುಕ್ತಾಯ ೯ ೪೦ ಮುತ್ತೈದೆ ಬಿಲ್ವಮಂಗಲ ಪ್ರೊಫೆಸರ್ ವಿ ಸುಬ್ರಹ್ಮಣ್ಯ ಅಯ್ಯರ್ ಸಂಗೀತ ಸಂಜೆ ೫—೪೦ ಪಿಟೀಲು ೬ ಹಿಂದಿ ಪಾಠ ೬—೧೫ ಅರ್ ಚಂದ್ರ ಭಾರತ ವಾಚನ ೭ ೫ ರಿಕಾರ್ಡು ಸಂಗೀತ ೭ ೪೦ ಸರೋದ ದಾಸ—ಪದ್ಯಗಳ ಪಠಣ ೮ ಪಿಟೀಲು ೮ ೪೦ ವಿದ್ಯಾರ್ಥಿಗಳಿಗಾಗಿ ವಿವಿಧ ವಿನೋದಾವಳಿ ೯ ೧೫ ಪಿಟೀಲು ಮತ್ತು ಕೊಳಲು ಮತ್ತು ೯—೪೦ ಭಿನ್ನ ಮೊಳ್ಳ ನ ಗೀತೆಗಳು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೧೯ ೮ ೦	೨೬ ೮ ೦
ಕಡಲೆಕಾಯಿಬೀಜ	೪೪ ೨ ೦	
ಎಳ್ಳು	೩೪ ೦ ೦	೩೯ ೦ ೦
ಹರಳುಬೀಜ	೨೦ ೧೪ ೦	೪೪ ೦ ೦
ಹುಚ್ಚೆಳ್ಳು	೪೭ ೮ ೦	೪೯ ೪ ೦
ಹೊಂಗೆಬೀಜ	೧೬ ೨ ೦	೨೪ ೬ ೦
ಹುರುಳಿ	೨೬ ೧೪ ೦	೨೯ ೬ ೦
ಹೆಸರು	೪೬ ೦ ೦	೪೦ ೧೨ ೦
ಅಲಸಂದೆ	೪೩ ೮ ೦	೪೯ ೨ ೦
ಅವರೆ	೧೮ ೨ ೦	
ಉದ್ದು	೩೩ ೨ ೦	
ಧನಿಯ	೨೪ ೨ ೦	೨೯ ೪ ೦
ತೊಗರಿ	೨೪ ೦ ೦	೨೬ ೦ ೦
[illegible] ಬೀಜ	೨೫ ೧೦ ೦	೨೯ ೦ ೦
ಕಡಲೆ	೪೦ ೪ ೦	೪೪ ೮ ೦
ಹುಣಸೇಬೀಜ	೧೪ ೦ ೦	
ಹುಣಸೇಹಣ್ಣು	೫ ೮ ೦	೧೦ ೪ ೦
ಶೀಗೆಕಾಯಿ	೪ ೨ ೦	೪ ೧೧ ೦
ಮೆಣಸಿನಕಾಯಿ	೨೬ ೧೦ ೦	೨೯ ೦ ೦
ತೆಂಗಿನಕಾಯಿ ೧೧೦೦	೧೮೫ ೦ ೦	೨೦೦ ೦ ೦

ಮೈಸೂರು ಪಿಂಜ್ರಾಪೋಲು ಸೊಸೈಟಿ
ಪ್ರಕಟಣೆ

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಿಂಜ್ರಾಪೋಲಿಗೆ ಸೇರಿದ ತೋಟದಲ್ಲಿರುವ ಮಾವಿನ ಮರಗಳ ಈ ಸಾಲಿನ ಫಸಲನ್ನು ಇದೇ ಮಾರ್ಚಿ 21 ನೇ ತಾರೀಖು ಭಾನುವಾರ ಬೆಳಿಗ್ಗೆ 9 ಘಂಟೆಗೆ ಸದರಿ ಸ್ಥಳದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಇಷ್ಟಪಡುವವರು ಹರಾಜಿನಲ್ಲಿ ಭಾಗವಹಿಸಿ ಧರವರಮಾಡಿ ಮೂಲಕ ಗುತ್ತಿಗೆಗೆ ಪಡೆಯಬಹುದು ಅಂಗೀಕೃತವಾದ ಬಿಡ್‌ದಾರರು ಹರಾಜು ಆದ ಒಡನೆಯೇ ಹರಾಜು ಮೊಬಲಗಿನ ನಾಲ್ಕನೇ ಒಂದು ಭಾಗ ಠೇವಣಿ ಕೊಡಬೇಕು ಹರಾಜು ಮುಂಜೂರಾದ ಮೇಲೆ ಉಳಿಕೆ ಹಣವನ್ನು ಕೊಟ್ಟು ಮುಚ್ಚಳಿಕೆ ಬರೆದು ಕೊಡಬೇಕು ಹೆಚ್ಚಿಗೆ ವಿವರ ಚಾಮ ವಿಲಾಸ ರೋಡಿನಲ್ಲಿರುವ ಸದರಿ ಆಫೀಸಿನಲ್ಲಿ ತಿಳಿಯಬಹುದು

ಎಂ ರಾಮಸ್ವಾಮಿ,
ಗೌ॥ ಕಾರ್ಯದರ್ಶಿ

ರಿಜಿಸ್ಟರ್ ನಂ 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇ ನೋಡಿ
M. V ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE THURSDAY 11 3-1954 . ಮೈಸೂರು : ಗುರುವಾರ ೧೧-೩-೧೯೫೪ [ಸಂಚಿಕೆ ೩೪

ಗಲಭೆಗಾಗಿ ಬಂಗಾಳಾ ಸ್ಕೂಲ್ ಫೈನಲ್ ಪರೀಕ್ಷೆ ರದ್ದು

ಅಸಭ್ಯ ವರ್ತನೆ ಮತ್ತು ಮೈ ಮೇಲೆ ಕೈ ಮಾಡಿದ ಆಪಾದನೆ

ಮೈಸೂರು ೧೧

ರಾಜಧಾನಿಯ ಮಹಾರಾಣಿ ಕಾಲೇಜಿನ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಕಳೆದ ೮ ನೇ ತಾ|| ಮಧ್ಯಾಹ್ನ ೧ ಗಂಟೆಯಲ್ಲಿ ತರುಣಿಯರು ಬ್ಯಾಡ್ಮಿಂಟನ್ ಚಾಲನ್ನು ಆಡುತ್ತಿದ್ದಾಗ ಕನ್ನೇಗೌಡನ ಕೊಪ್ಪಲಿನ ಶಿವಣ್ಣ ಮತ್ತು ಕೃಷ್ಣರಾಜ ಮೊಹಲ್ಲಾದ ಮಹದೇವ ಎಂಬ ಇಬ್ಬರು ಯುವಕರು ಅಲ್ಲಿಗೆ ಹೋಗಿ ಅಸಭ್ಯವಾಗಿ ವರ್ತಿಸಿದರೆಂದೂ, ನಿಲಯದ ಜವಾನರು ಅವರನ್ನು ಹಿಡಿಯಲು ಬಂದಾಗ ಅವರುಗಳು ಹೊಡೆದರೆಂದೂ ದೇವರಾಜಾ ಪೋಲೀಸರು ಯುವಕರ ಮೇಲೆ ನಗರದ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವರು

ಜೂಜಾಡಲು ಮನೆ ಕೊಟ್ಟುದಕ್ಕಾಗಿ ೧ ತಿಂಗಳು ಸಜಾ, ೨೦೦ ರೂ ದಂಡ

ರಾಜಧಾನಿಯ ಮಂಡಿ ಮೊಹಲ್ಲಾ ಸಾದರ ಸ್ಟ್ರೀಟಿನಲ್ಲಿರುವ ಶೀರ್ ಸಾಬ್ ಎಂಬುವರು ಜೂಜಾಟಕ್ಕಾಗಿ ತಮ್ಮ ಮನೆಯನ್ನು ಬಿಟ್ಟುಕೊಟ್ಟರೆಂದು ಅವರಿಗೆ ೧ ತಿಂಗಳ ಕಠಿಣ ಸಜಾ ಮತ್ತು ೨೦೦ ರೂ ದಂಡವನ್ನು ವಿಧಿಸಲಾಗಿದೆ

ಬಳ್ಳಾರಿಗೆ ವರ್ಗ

ಮೈಸೂರು ಜಿಲ್ಲಾ ಬೋರ್ಡಿನ ಅಸಿಸ್ಟೆಂಟ್ ಇಂಜನಿಯರಾದ ಶ್ರೀ ಬಿ ಕೃಷ್ಣಯ್ಯಂಗಾರ್ಯರನ್ನು ಬಳ್ಳಾರಿಯ ವಿಶೇಷ ನೀರಾವರಿ ಡಿವಿಜನ್ನಿಗೆ ವರ್ಗಾಯಿಸಲಾಗಿದೆ

ರಾಷ್ಟ್ರಾಧ್ಯಕ್ಷರಿಂದ ದೆಹಲಿಯಲ್ಲಿ ಕನ್ನಡ ಹಬ್ಬದ ಆರಂಭ

ದೆಹಲಿಯ ಕರ್ನಾಟಕ ಸಂಘದವರು ಏಪ್ರಿಲ್ ತಿಂಗಳು ೧೭ ಮತ್ತು ೧೮ ನೇ ತಾ|| ಕನ್ನಡದ ಸಾಂಸ್ಕೃತಿಕ ಹಬ್ಬವನ್ನು ನೆರವೇರಿಸಲಿರುವರು ಅದರ ಆರಂಭೋತ್ಸವವನ್ನು ರಾಷ್ಟ್ರಾಧ್ಯಕ್ಷರು ೧೭ ನೇ ತಾ|| ಮಾಡುವರು ಕನ್ನಡ ಜನರ ಸಂಸ್ಕೃತಿ ಕಲೆ ಮತ್ತು ಸಾಹಿತ್ಯವನ್ನು ಇತರರಿಗೆ ಪ್ರದರ್ಶಿಸುವುದೇ ಹಬ್ಬದ ಉದ್ದೇಶ್ಯವಾಗಿದೆ ಕರ್ನಾಟಕದ ವಿವಿಧ ವಿಷಯಗಳ ಬಗ್ಗೆ ಪ್ರಮುಖರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು ಪ್ರದರ್ಶನ ಮತ್ತು ಮನರಂಜನೆಯ ಕಾರ್ಯಕ್ರಮಗಳೂ ಇವೆ

ಪ್ರದರ್ಶನದಲ್ಲಿ ಮೈಸೂರಿನ ಸುಪ್ರಸಿದ್ಧ ಗಂಧದ ಮತ್ತು ದಂತದ ಸಾಮಾನುಗಳು ಮತ್ತು ಇತರ ಉತ್ತಮ ವಸ್ತುಗಳನ್ನು ಇಡಲು ಏರ್ಪಾಡಾಗಲಿದೆ ವಿದ್ಯಾರ್ಥಿಗಳ ಮತ್ತು ಮಹಿಳೆಯರಿಂದ ತಯಾರಾದ ವಸ್ತುಗಳಿಗೂ ಅವಕಾಶ ಕಲ್ಪಿಸಲಾಗುವುದು ಶಾಲೆಗಳೂ ಸಹ ಪ್ರದರ್ಶಕ ವಸ್ತುಗಳನ್ನು ಕಳುಹಬಹುದಾಗಿದೆ ವಿದ್ಯಾರ್ಥಿಗಳ ಉತ್ತಮ ಪದಾರ್ಥಗಳಿಗೂ ಮತ್ತು ಕೈ ಬರಹದ ಮ್ಯಾಗಜೈನ್, ಡ್ರಾಯಿಂಗ್‌ಗಳಿಗೂ ಬಹುಮಾನಗಳನ್ನು ಕೊಡಲಾಗುವುದು

ಸಂಗೀತ, ನಾಟಕ, ಗ್ರಾಮ ಕಲೆ ಮುಂತಾದುವುಗಳನ್ನೂ ಏರ್ಪಡಿಸಲಾಗುವುದು ಈ ಪ್ರದರ್ಶನಗಳಲ್ಲಿ ಅತ್ಯುತ್ತಮ ಕಲಾವಿದರಿಗೆ ಪುರಸ್ಕಾರವಿದೆ

ವಿದ್ಯಾರ್ಥಿಗಳ ಪುಂಡತನಕ್ಕಾಗಿ ಪರೀಕ್ಷೆ ರದ್ದು

ಪಶ್ಚಿಮ ಬಂಗಾಳದಲ್ಲಿ ಈಗ ಆರಂಭವಾಗಿರುವ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಅಲ್ಲಿನ ಸರ್ಕಾರದವರು ರದ್ದುಗೊಳಿಸಿರುತ್ತಾರೆ ಕಲ್ಕತ್ತದಲ್ಲಿ ಮೊನ್ನೆ ಪರೀಕ್ಷೆಗಳು ಆರಂಭವಾದಾಗ ವಿದ್ಯಾರ್ಥಿಗಳು ಬೆಳಗ್ಗೆ ನಡೆದ ಪರೀಕ್ಷೆಗೆ ಹೋಗದೆ ಮಧ್ಯಾಹ್ನದ ಮೇಲೆ ಹಲವು ಕೇಂದ್ರಗಳಿಗೆ ನುಗ್ಗಿ ಸೂಪರಿಂಟೆಂಡೆಂಟುಗಳ ಮೇಲೆ ಧಾಳಿ ಮಾಡಿದರೆಂದೂ ಪರೀಕ್ಷೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಓಡಿಸಿದರೆಂದೂ ಉಪಾಧ್ಯಾಯನಿಯರಿಗೂ ಸಹ ಈ ಉಪಟಳವು ತಪ್ಪಲಿಲ್ಲವೆಂದೂ ಹೇಳಲಾಗಿದೆ ಬಸ್ಸುಗಳನ್ನು ಸೇರಿಸಿ ಹಲವು ವಿದ್ಯಾರ್ಥಿಗಳನ್ನು ಗಾಯಗೊಳಿಸಲಾಯಿತೆಂದೂ ಈ ಕಾರಣದಿಂದ ೫೬ ಸಾವಿರ ವಿದ್ಯಾರ್ಥಿಗಳ ಪರೀಕ್ಷೆಯು ರದ್ದಾಯಿತೆಂದೂ ಗೊತ್ತಾಗಿದೆ ಪರೀಕ್ಷೆಗಳನ್ನು ಪುನಃ ನಡೆಸಲಾಗುವುದು ೫೬ ಮತ್ತು ೫೭ನೇ ಇಸವಿಗಳ ಪ್ರಶ್ನೆಗಳನ್ನು ಸರಿಯಾಗಿ ವಿಂಗಡಿಸಿಕೊಡಲಿಲ್ಲವೆಂಬುದೇ ವಿದ್ಯಾರ್ಥಿಗಳ ಗಲಭೆಗೆ ಕಾರಣವೆಂದು ಹೇಳಲಾಗಿದೆ

ಚಾಮರಾಜನಗರ-ಸತ್ಯಮಂಗಲ ರೈಲ್ವೆ ಸಧ್ಯಕ್ಕಿಲ್ಲ

ಬೆಂಗಳೂರಿನಿಂದ ನೀಲಗಿರಿಗೆ ನೇರವಾಗಿ ರೈಲು ರಸ್ತೆಯನ್ನು ಹಾಕುವ ಯೋಜನೆಯು ಕೇಂದ್ರ ಸರ್ಕಾರದ ಮುಂದೆ ಇದೆ ಎರಡು ಊರುಗಳಿಗೂ ಮಧ್ಯೆ ಮೊರಪ್ಪೂರು ಮತ್ತು ಹೊಸೂರುಗಳ ನಡುವೆ ರಸ್ತೆ ಹಾಕುವ ಆಲೋಚನೆ ಮೊದಲ ಇತ್ತು ಹೈದರಾಬಾದಿನ ಖಾಂಡ್ವಾ ಮತ್ತು ಹಿಂಗೋಲಿಗಳಿಗೆ ಹೊಸ ರೈಲನ್ನು ಜರೂರಾಗಿ ಹಾಕಬೇಕಾಗಿರುವುದರಿಂದ ಚಾಮರಾಜನಗರ ಮತ್ತು ಸತ್ಯಮಂಗಲ ರೈಲು ರಸ್ತೆ ನಿರ್ಮಾಣವನ್ನು ಸಧ್ಯಕ್ಕೆ ಮುಂದೆಹಾಕಲಾಗಿದೆ

ಲೋಕ ಸಭೆಯಲ್ಲಿ ಕಮ್ಯೂನಿಸ್ಟರ ಸಭಾತ್ಯಾಗ

ಪತ್ರಿಕಾ ಅಪೇಕ್ಷಣೀಯ ಶಾಸನದ ತಿದ್ದುಪಡಿ ಮಸೂದೆಯನ್ನು ನೆನ್ನೆ ಚರ್ಚಿಸಲಾಗುತ್ತಿದ್ದಾಗ ಸಭೆಯ ಉಪಾಧ್ಯಕ್ಷರಿಗೂ, ಕಮ್ಯೂನಿಸ್ಟ್ ಪಕ್ಷದ ಉಪನಾಯಕ ಹಿರೇನ್ ಮುಖರ್ಜಿಯವರಿಗೂ ವಾಗ್ವಾದವಾಗಿ ಸಭೆಯನ್ನು ಬಿಟ್ಟು ಹೊರಗೆ ಹೋಗುವಂತೆ ಮುಖರ್ಜಿಯವರಿಗೆ ಉಪಾಧ್ಯಕ್ಷರು ಆಜ್ಞೆ ಮಾಡಿದರೆಂದೂ ಆಗ ಕಮ್ಯೂನಿಸ್ಟ್ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರೆಂದೂ ವರದಿಯಾಗಿದೆ

ತೆರಿಗೆಗಳನ್ನು ಇಳಿಸಲು ಆಲೋಚನೆ

ಬೆಂಗಳೂರು ೧೧

ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ಪ್ರಬಲವಾದ ಪ್ರತಿಭಟನೆಯು ಬಂದಿರುವುದರಿಂದ ಆಯವ್ಯಯ ಪಟ್ಟಿಯಲ್ಲಿ ಸೂಚಿಸಿರುವಂತೆ ಹೊಸ ತೆರಿಗೆಗಳಲ್ಲಿ ಕೆಲವನ್ನು ಕಡಿಮೆ ಮಾಡಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿದು ಬಂದಿದೆ

ಮಂತ್ರಿಮಂಡಲದ ರಾಜೀನಾಮೆಗಾಗಿ ಇಮಾಮರ ಒತ್ತಾಯ

ಬೆಂಗಳೂರು ೧೧

ಆಯವ್ಯಯ ಅಂದಾಜು ಪಟ್ಟಿಯನ್ನು ಶಾಸನ ಸಭೆಯಲ್ಲಿ ನೆನ್ನೆ ವಿಮರ್ಶೆ ಮಾಡುತ್ತಾ, ವಿರೋಧ ಪಕ್ಷದ ನಾಯಕರಾದ ಶ್ರೀ ಜೆ ಮಹಮದ್ ಇಮಾಮರು ದೇಶದ ಹಿತಕ್ಕಾಗಿ ಮಂತ್ರಿ ಮಂಡಲವು ರಾಜೀನಾಮೆ ಕೊಡುವಂತೆ ಒತ್ತಾಯ ಮಾಡಿದರು ಮಂತ್ರಿ ಮಂಡಲದವರ ತತ್ವ ಭಾಷೆಯಂತೆ ನಡೆದುಕೊಳ್ಳಲಿಲ್ಲವೆಂದೂ ಪ್ರಜೆಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಲ್ಲವೆಂದೂ ಅವರು ಹೇಳಿದರು

ಬಿಹಾರ್ ಶಾಸನ ಸಭೆ ಮುಂದೆ ೧೦,೦೦೦ ರೈತರ ಪ್ರದರ್ಶನ

ಬಿಹಾರಿನಲ್ಲಿ ಕಾಲುವೆ ಮತ್ತು ಟ್ಯೂಬ್ ಬಾವಿಗಳ ನೀರು ಸರಬರಾಯನ್ನು ಕಡಿಮೆ ಮಾಡುವಂತೆ ಮತ್ತು ಉಳಿಮೆಯ ಹಕ್ಕನ್ನು ತಪ್ಪಿಸುವಂತೆ ಒತ್ತಾಯಪಡಿಸಲು ನೆನ್ನೆ ಪಾಟ್ನಾದಲ್ಲಿ ಶಾಸನ ಸಭೆಯ ಮುಂದೆ ೧೦ ಸಾವಿರ ರೈತರು ಮೆರವಣಿಗೆಯಲ್ಲಿ ಬಂದು ಘೋಷಣೆಗಳನ್ನು ಕೂಗಿದರು ಕೆಂಪು ಬಾವುಟ ಹಿಡಿದು ಶಂಖಗಳನ್ನೂದುತ್ತಾ ತಮಟೆಗಳನ್ನು ಹೊಡೆಯುತ್ತಾ ರೈತರು ಅಲ್ಲಿಗೆ ನಡೆದು ಬಂದರು ಸಭಾ ಭವನಕ್ಕೆ ಅವರನ್ನು ಬಿಡದಂತೆ ಎಲ್ಲಾ ಕಡೆಗಳಲ್ಲೂ ಪೋಲೀಸರ ಕಾವಲನ್ನು ಹಾಕಲಾಗಿದ್ದಿತು ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಮೋಹರ್‌ಸಿಂಗರು ಮೆರವಣಿಗೆಯ ಮುಖಂಡರಾಗಿದ್ದರು ಬಿಹಾರಿನ ಮಂತ್ರಿ ಅನುಗ್ರಹ ನಾರಾಯಣಸಿಂಹರು ಆರು ಜನ ರೈತರ ಪ್ರತಿನಿಧಿಗಳನ್ನು ಕರೆಸಿ ಅವರಿಗೆ ನ್ಯಾಯ ದೊರಕಿಸಿಕೊಡುವುದಾಗಿ ಹೇಳಿದನಂತರ ಪ್ರದರ್ಶನಕಾರರು ಚದುರಿದರು

ತಾಲ್ಲೂಕು ಉಪಾಧ್ಯಾಯರುಗಳ ಸಭೆ

ಮೈಸೂರು ತಾಲ್ಲೂಕು ರೇಂಜ್ ಉಪಾಧ್ಯಾಯರುಗಳ ಸಭೆಯು ಈ ತಿಂಗಳು ೨೦ನೇ ತಾ|| ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಗೌರ್ನಮೆಂಟ್ ಟ್ರೈನಿಂಗ್ ಕಾಲೇಜಿನಲ್ಲಿ ನಡೆಯುವುದು ತಾಲ್ಲೂಕಿನ ಆ ರೇಂಜ್ ಉಪಾಧ್ಯಾಯರುಗಳೆಲ್ಲರೂ ಬರಬೇಕೆಂದು ಕೋರಲಾಗಿದೆ

ಸಂತಾಪ ಸೂಚಕ ಸಭೆ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಸಂಯುಕ್ತ ಮಂತ್ರಿಗಳಾದ ಪಂಡಿತ ರಘುವರ ದಯಾಳು ಮಿಶ್ರರವರ ಮರಣಕ್ಕಾಗಿ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಲಾಗಿದೆ ಹಿಂದಿ ಕಾರ್ಯಕರ್ತರು ಮತ್ತು ಪ್ರೇಮಿಗಳು ಸಭೆಗೆ ಬರಬೇಕೆಂದು ಕೋರಲಾಗಿದೆ

ವಿವಾಹ ಮಹೋತ್ಸವ

ಮೈಸೂರು ತಾಲ್ಲೂಕು ಸಿದ್ದರಾಮೇಗೌಡನಹುಂಡಿ ಗ್ರಾಮದ ಶ್ರೀ ಬೋರೇಗೌಡರು ತಮ್ಮ ಕುಮಾರಿ ಸೌ|| ಪುಟ್ಟಮ್ಮನವರನ್ನು ... ದೇ ಊರಿನ ದೇ|| ಸಿದ್ದೇಗೌಡರ ಕುಮಾರ ಶ್ರೀ ಸಿದ್ದೇಗೌಡರಿಗೆ ಕೊಟ್ಟು ಈ ದಿನ ಗ್ರಾಮದಲ್ಲಿ ವಿವಾಹವನ್ನು ನೆರವೇರಿಸುವರು

ರಾಜಕುಮಾರರ ವರ್ಧಂತಿ

ಮೈಸೂರು ೧೧

ಶ್ರೀಮನ್ ಮಹಾರಾಜರ ಪುತ್ರರಾದ ರಾಜಕುಮಾರ ಶ್ರೀಕಂಠದತ್ತ ನರಸಿಂಹರಾಜ ಒಡೆಯರರ ೧ನೇ ವರ್ಷದ ವರ್ಧಂತಿಯು ಇಂದು ಅರಮನೆಯಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿತು ಅರಮನೆ ಕಛೇರಿಗೆ ರಜಾ ಕೊಡಲಾಗಿತ್ತು

ದೇವರುಗಳ ಪ್ರತಿಷ್ಠೆ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿರುವ ಶಿಲ್ಪಿ ಸಿದ್ದಲಿಂಗಸ್ವಾಮಿಯವರ ಮನೆಯ ಪಕ್ಕದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ದೇವಾಲಯದಲ್ಲಿ ವಿಜಯ ವಿಶ್ವೇಶ್ವರ ಕಾಮಕಾಮೇಶ್ವರ ದೇವರುಗಳ ಪ್ರತಿಷ್ಠೆಯನ್ನು ಈ ಮಧ್ಯಾಹ್ನ ೧೨ ಗಂಟೆಗೆ ಮಾಡಲಾಯಿತು ಶ್ರೀಮನ್ಮಹಾರಾಜರು ಮಧ್ಯಾಹ್ನ ಅಲ್ಲಿಗೆ ತೆರಳಿ ದರ್ಶನ ಪಡೆದರು

ಅಂಗಹೀನರಿಗೆ ಅನ್ನದಾನ

ಇಲವಾಲದ ರಸ್ತೆಯಲ್ಲಿರುವ ಚಿತ್ರರಂಜನ ಮಹಲಿನಲ್ಲಿ ಈ ದಿನ ಪ್ರಿವಿಯರ್ ಸ್ಟುಡಿಯೋ ಎಂಬ ಸಂಸ್ಥೆಯ ಉದ್ಘಾಟನೆಯು ನೆರವೇರಿದ ಸಂಬಂಧವಾಗಿ ನಾಳೆ ಮಧ್ಯಾಹ್ನ ೧೨ ಗಂಟೆಗೆ ಅಂಗವಿಹೀನರಿಗೆ ಅನ್ನದಾನ ಮಾಡಲು ಏರ್ಪಾಡಾಗಿದೆ

ವಿವಾಹದ ಮೇಲೆ ತೆರಿಗೆ

ಆಂಧ್ರದ ಆಯವ್ಯಯದಲ್ಲಿ ತೋರಿರುವ ಕೊರತೆಯನ್ನು ನೀಗಿಸಲು ಸೂಕ್ತ ಮಾರ್ಗಗಳ ಪೈಕಿ ವಿವಾಹಗಳ ಮೇಲೆ ತೆರಿಗೆಯನ್ನು ವಿಧಿಸಬೇಕೆಂಬ ಸಲಹೆಯನ್ನು ಅಲ್ಲಿನ ಶಾಸನ ಸಭಾ ಸದಸ್ಯರೊಬ್ಬರು ಕೊಟ್ಟಿರುತ್ತಾರೆ ಶಾಸ್ತ್ರೋಕ್ತ ವಿವಾಹ ಪದ್ಧತಿ ಪ್ರಕಾರ ವಿವಾಹದ ಬದಲು ರಿಜಿಸ್ಟರ್ ಮದುವೆಗಳಾಗಬೇಕೆಂದೂ, ವಿಧವೆಯಾದ ತರುವಾಯ ಕೂಡ ಆಭರಣವನ್ನು ತೊಡುವವರ ಮೇಲೆ ವಿಶೇಷ ತೆರಿಗೆಯನ್ನು ವಿಧಿಸಬೇಕೆಂದೂ ಅವರು ಸಲಹೆ ಮಾಡಿರುವರು

ರಾಜ ಸಭೆಯ ನಡವಳಿಕೆ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂತ ವರದಿ] ಬೆಂಗಳೂರು ೧೧

ಈ ದಿನ ಶಾಸನಸಭೆಯಲ್ಲಿ ಶ್ರೀ ಎಸ್ ಶಿವಪ್ಪನವರು ಪ್ರಶ್ನೆ ಮಾಡಿ, ದಸರಾ ರಾಜಸಭೆಯಲ್ಲಿ ಸ್ಥಾನಗಳ ಏರ್ಪಾಡು, ಆಹ್ವಾನವೀಯುವ ಕ್ರಮ ಮುಂತಾದುವುಗಳ ಬಗ್ಗೆ ವಿವರಗಳನ್ನು ಕೇಳಿದರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು, ರಾಜಸಭೆಯ ಬಗ್ಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ಅನುಸರಿಸಲಾಗುತ್ತಿರುವುದೆಂದು ಹೇಳಿದರು ಕಳೆದ ಬಾರಿ ಮುಖ್ಯ ಮಂತ್ರಿಯವರು ಸಂಸ್ಥಾನದಲ್ಲಿ ಇದ್ದಾಗ ಅವರಿಗೆ ಸಲ್ಲಬೇಕಾದ ಮರ್ಯಾದೆಗಳು ವಿದ್ಯಾ ಮಂತ್ರಿಗಳಿಗೆ ಕೊಡಲ್ಪಟ್ಟವು ಸಭೆಯ ಏರ್ಪಾಡಿನ ಬಗ್ಗೆ ಕಾಲಸ್ಥಿತಿಗೆ ಅನುಗುಣವಾಗಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ ಎಂದು ಅವರು ಹೇಳಿದರು

ಹಿಂದೆ ಸತ್ತವರಿಗೆಲ್ಲಾ ಆಹ್ವಾನವೀಯಲಾಗುತ್ತಿದ್ದಂತೆ ಈಗಲೂ ಕೊಡಲಾಗುವುದೋ ಎಂದು ಪ್ರಶ್ನೆ ಮಾಡಲಾಗಿ ಅಂತಹ ಪ್ರಕರಣವು ನಡೆದಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದರು

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಬಿಡಿಪ್ರತಿ ಪತ್ರಿಕೆ ೩ ಕಾಸು

ಮದುವೆ ಜವಳಿ!
ಎಲ್ಲಾ ರಂಗುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೩] MYSORE FRIDAY 12-3-1954 : ಮೈಸೂರು : ಶುಕ್ರವಾರ ೧೨-೩-೧೯೫೪ [ಸಂಚಿಕೆ ೨೦೦

ತಿರು-ಕೊಚ್ಚಿ ಸರ್ಕಾರದ ಬಗ್ಗೆ ಸಮಾಜವಾದಿಗಳ ನಿರ್ಧಾರ

ಶ್ರೀ ಸಹಸ್ರಚಂಡಿ ಯಾಗದ ಕಾರ್ಯಕ್ರಮ

ಮೈಸೂರು ೧೧

ರಾಜಧಾನಿಯ ಚಾಮುಂಡಿ ಬೆಟ್ಟದಲ್ಲಿ ನಾಳೆಯಿಂದ ೧೮ ನೇ ತಾ॥ ವರೆಗೆ ಶ್ರೀ ಸಹಸ್ರಚಂಡಿಯಾಗದ ಸಮಾರಂಭವು ನಡೆಯುವುದು ನಾಳೆ ಬೆಳಿಗ್ಗೆ ೧೦॥ ಗಂಟೆಗೆ ಶ್ರೀಮನ್ಮಹಾರಾಜರು ಯಾಗದ ಆರಂಭೋತ್ಸವವನ್ನು ನೆರವೇರಿಸುವರು. ಯಾಗದ ಕಾರ್ಯಕ್ರಮಗಳು ಈ ರೀತಿ ಇವೆ —

ನಾಳೆ ಬೆಳಿಗ್ಗೆ ಮಹಾ ಗಣಪತಿ ಪ್ರಾರ್ಥನೆ, ಚಾಮುಂಡೇಶ್ವರಿ ಮಹಾಬಲೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವರ ಪೂಜೆ, ನಾಂದಿ ಪೂಜೆ, ಯಾಗಶಾಲಾ ಪ್ರವೇಶೋತ್ಸವ, ಋತ್ವಿಜರ ಸಭೆ, ಸ್ವಸ್ತಿ ವಾಚನ ಇತ್ಯಾದಿ. ೧೪ ನೇ ತಾ॥ ಆರಂಭೋತ್ಸವ ಮತ್ತು ಕಲಶ ಸ್ಥಾಪನೆ, ೧೫ ಜಪ ಮತ್ತು ಪಾರಾಯಣ ಇತ್ಯಾದಿ. ೧೬ ಶ್ರೀ ಮಹಾ ಗಣಪತಿ ಹೋಮ, ಕಲ್ಪೋಕ್ತ ಪೂಜೆ, ಜಪ ಮತ್ತು ಪಾರಾಯಣ ೧೭ ಶ್ರೀ ನವಗ್ರಹ ಹೋಮ, ಕಲ್ಪೋಕ್ತ ಪೂಜೆ ಇತ್ಯಾದಿ, ೧೮ ನೇ ತಾ॥ ಶ್ರೀ ಸಹಸ್ರಚಂಡಿ ಯಾಗ, ಸುವಾಸಿನಿ, ಕುಮಾರಿಕೆ, ದಂಪತಿ ಪೂಜೆ, ಆಚಾರ್ಯರ ಪೂಜೆ ಸಂತರ್ಪಣೆ ಇತ್ಯಾದಿ.

ಯಾಗದ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ನಂಜಲಿಂಗಪ್ಪನವರು ಮನವಿಯೊಂದನ್ನು ಹೊರಡಿಸಿ ಈ ಕಾರ್ಯಕ್ಕೆ ಮಹಾ ಜನರು ದ್ರವ್ಯ ಸಹಾಯ ಮಾಡುವಂತೆ ಕೋರಿರುತ್ತಾರೆ.

ವಿಷ ಮಿಶ್ರಿತ ಆಹಾರ ಸೇವಿಸಿದ ೧೧೫ ಜನ ಆಸ್ಪತ್ರೆಗೆ

ಬೊಂಬಾಯಿಯಲ್ಲಿ ನೆನ್ನೆ ರಾತ್ರಿ ವಿವಾಹವೊಂದರ ಸಂಬಂಧವಾದ ಔತಣದಲ್ಲಿ ವಿಷ ಮಿಶ್ರಿತ ಆಹಾರ ಸೇವನೆಗಾಗಿ ೧೧೫ ಜನರು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ಇನ್ನೂ ಅನೇಕರು ಖಾಸಗಿ ಔಷಧಾಲಯಗಳಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಊಟ ಮಾಡಿದವರು ಅವರವರ ಮನೆಗಳಿಗೆ ಹಿಂತಿರುಗಿದಾಗ ಹೊಟ್ಟೆಯಲ್ಲಿ ಸಂಕಟವುಂಟಾಗಿ ಆಸ್ಪತ್ರೆಗಳನ್ನು ಸೇರಿದರು.

ಸೂಟ್ ಕೇಸಿನಲ್ಲಿಡಬಹುದಾದ ಅಣು ಬಾಂಬು

ಸೂಟ್‌ಕೇಸುಗಳಲ್ಲಿಟ್ಟುಕೊಂಡು ಹೋಗಬಹುದಾದ ಚಿಕ್ಕ ಅಣು ಬಾಂಬುಗಳನ್ನು ತಯಾರಿಸಿರುವುದಾಗಿ ಸಧ್ಯದಲ್ಲೇ ಅಮೆರಿಕದ ಅಣು ಸಂಶೋಧನಾ ಸಿಬ್ಬಂದಿಯವರು ಜಗತ್ತಿಗೆ ತಿಳಿಸುವರೆಂದು ವರದಿಯಾಗಿದೆ. ಅದಕ್ಕಾಗಿ ಅಮೆರಿಕದ ಅಧ್ಯಕ್ಷರ ರಕ್ಷಣಾ ಅಧಿಕಾರಿಗಳು ಎಲ್ಲಾ ಸುಂಕದ ನೌಕರರಿಗೂ ಸೂಚನೆ ಕಳುಹಿಸಿ ವಿದೇಶೀಯರುಗಳ ಬಟ್ಟೆಗಳನ್ನು ಚೆನ್ನಾಗಿ ಪರಿಶೀಲಿಸಬೇಕೆಂದು ತಿಳಿಸಿರುತ್ತಾರೆ.

ಹೊಸ ಹಲ್ಲರುಗಳ ಬಗ್ಗೆ ನಿರ್ಬಂಧ ಸಡಿಲ

ಹೊಸ ಹಲ್ಲರುಗಳನ್ನು ಸ್ಥಾಪಿಸಲು ಮತ್ತು ಹಳೆಯವುಗಳಲ್ಲಿ ಚೆನ್ನಾಗಿ ಕೆಲಸವಾಗುವಂತೆ ಅವನ್ನು ಉತ್ತಮಗೊಳಿಸಲು ಏರ್ಪಡಿಸಿದ್ದ ನಿರ್ಬಂಧವನ್ನು ಸರ್ಕಾರದವರು ಸಡಿಲಗೊಳಿಸುತ್ತಾರೆ. ಆದರೆ ಆಹಾರ ಸರಬರಾಜು ಪ್ರೈವೇಟ್ ವ್ಯಕ್ತಿಯಿಂದ ಲೈಸೆನ್ಸನ್ನು ಪಡೆಯಬೇಕಾದುದು ಅಗತ್ಯವೆಂದು ಸರ್ಕಾರದವರು ಸೂಚಿಸಿರುತ್ತಾರೆ.

ಮೈಸೂರಿನಲ್ಲಿ ಆಹಾರ ಸಿಬ್ಬಂದಿ ಖೋತಾ

ಮೈಸೂರು ೧೧

ಏಪ್ರಿಲ್ ೧ರಿಂದ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಆಹಾರದ ಸಿಬ್ಬಂದಿಯಲ್ಲಿ ಖೋತಾ ಮಾಡಲು ಸರ್ಕಾರದವರು ನಿರ್ಧರಿಸಿರುವರೆಂದೂ, ಇದರಿಂದ ಸರ್ಕಾರಕ್ಕೆ ೩,೫೦,೦೦೦ ರೂ ಉಳಿತಾಯವಾಗುವ ನಿರೀಕ್ಷೆಯಿದೆಯೆಂದೂ ತಿಳಿದು ಬಂದಿದೆ. ನಗರದ ಅಸಿಸ್ಟೆಂಟ್ ರೇಷನಿಂಗ್ ಅಧಿಕಾರಿ ಮತ್ತು ೫ ಜನ ಆಹಾರ ಇನ್ಸ್‌ಪೆಕ್ಟರುಗಳ ಹುದ್ದೆಗಳು ಕೊನೆಗೊಳ್ಳುವುವೆಂದು ಗೊತ್ತಾಗಿದೆ. ಸರ್ಕಾರಿ ಸೆಂಟ್ರಲ್ ಡಿಪೋವಿನಲ್ಲಿರುವ ಹಲವು ಬಿಲ್ ಇನ್ಸ್‌ಪೆಕ್ಟರುಗಳೂ ಹೋಗಬೇಕೆಂದು ಹೇಳಲಾಗಿದೆ.

ಅಂಗಡಿ ಕಾನೂನು ಉಲ್ಲಂಘಿಸಿದ್ದಕ್ಕೆ ದಂಡ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆ ಮಾಡಿದರೆಂದು ಇನ್ಸ್‌ಪೆಕ್ಟರಾದ ಶ್ರೀ ಎಚ್. ನಾಗಪ್ಪನವರ ಎರಡನೇ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಗುಲ್ಬರ್ಗಾ ಹೊಟೇಲಿನ ಮ್ಯಾನೇಜಿಂಗ್ ಪಾರ್ಟ್ನರ್ ಶ್ರೀ ಅಬ್ದುಲ್ ರಹಿಮಾನ್ ಖಾನರಿಗೆ ೮ ರೂ ಮತ್ತು ಹಳೇ ಮೈಸೂರು ಬ್ಯಾಂಕ್ ರಸ್ತೆಯ ಗ್ರಾಂಡ್ ಫ್ರುಟ್ ಸ್ಟೋರ್ ಅಂಗಡಿ ಮಾಲೀಕರು ಶ್ರೀ ಅಬ್ದುಲ್ ವಹೀದರಿಗೆ ೪ ರೂ ದಂಡವನ್ನು ವಿಧಿಸಲಾಗಿದೆ.

ಆಂಧ್ರದಲ್ಲೂ ತೆರಿಗೆಗಳು ಹೆಚ್ಚುವುವು

ಆಂಧ್ರದಲ್ಲಿ ನೀರು ತೆರಿಗೆಯನ್ನು ಶೇ॥ ೨೫ ರಷ್ಟು ಹೆಚ್ಚಿಸಲೂ, ತೆಂಗಿನಕಾಯಿ ಹತ್ತಿ ಕಡಲೆಕಾಯಿ ಮತ್ತು ಹೊಗೆಸೊಪ್ಪಿನ ಮೇಲೆ ಹೆಚ್ಚು ತೆರಿಗೆ ಹಾಕಲೂ ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ. ಬೆಟರ್‌ಮೆಂಟ್ ಟ್ಯಾಕ್ಸ್ ಅನ್ನೂ ವಿಧಿಸಲಾಗುವುದು. ಭೂ ಕಂದಾಯದ ಮೇಲೆ ಸರ್ ಛಾರ್ಜ್ ವಿಧಿಸುವುದನ್ನು ಈಗ ಬಿಟ್ಟುಬಿಡಲಾಗಿದೆ. ಏನಾದರೂ, ತರಕಾರಿ ಹಣ್ಣು ಹೂ ಮೊಟ್ಟೆಗಳಿಗೂ ಕೈ ಮಗ್ಗದ ಬಟ್ಟೆ ಮಾರಾಟಕ್ಕೂ ಮಾರಾಟ ತೆರಿಗೆ ವಿನಾಯಿತಿಯು ದೊರೆಯುವುದು. ಹೊಸ ತೆರಿಗೆಗಳಿಂದ ೧ ಕೋಟಿ ರೂ ಹೆಚ್ಚು ವರಮಾನ ಬರುವ ನಿರೀಕ್ಷೆಯಿದೆ.

ಸತಿ ಕಸಿನ್ಸ್‌ರವರ ಮರಣ

ಭಾರತದ ಮಹಿಳೆಯರಲ್ಲಿ ಪ್ರಮುಖರೂ ಮದ್ರಾಸಿನ ಪ್ರಮುಖ ಚಿತ್ರಲೇಖಕರೂ ಮತ್ತು ಬರಹಗಾರರೂ ಆದ ಡಾ॥ ಜೆ. ಎಚ್. ಕಸಿನ್ಸ್‌ರವರ ಪತ್ನಿ ಮಾರ್ಗರೆಟ್ ಕಸಿನ್ಸ್‌ರವರು ನೆನ್ನೆ ಮದ್ರಾಸಿನಲ್ಲಿ ತಮ್ಮ ೭೬ ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಮಹಿಳೆಯರ ಪರವಾಗಿ ಅವರು ಬಲವಾದ ಚಳುವಳಿಯನ್ನು ಹೂಡಿದ್ದರು. ಬ್ರಿಟನ್ನಿನಲ್ಲಿ ಅವರು ಸ್ತ್ರೀಯರ ಏಳಿಗೆಗಾಗಿ ಹೋರಾಟ ನಡೆಸಿ ೩ ಸಾರಿ ಜೈಲು ವಾಸ ಮಾಡಿದ್ದರು. ಭಾರತಕ್ಕೆ ಅವರು ಬಂದಮೇಲೆ ಇಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ಸ್ಥಾಪಿಸಿದರು.

ತಿರುವಾಂಕೂರು ಸರ್ಕಾರದ ರಚನೆ ಬಗ್ಗೆ ಸಮಾಜವಾದಿಗಳ ನಿರ್ಧಾರ

ತಿರುವಾಂಕೂರು ಕೊಚ್ಚಿ ಪ್ರಜಾ ಸಮಾಜವಾದಿಗಳು ಮತ್ತು ವಾಮ ಪಕ್ಷದ ಸಂಯುಕ್ತ ರಂಗದ ಸಂಗಡಗಳ ಸಮ್ಮಿಶ್ರ ಸರ್ಕಾರ ರಚನೆಯ ಪ್ರಶ್ನೆಯನ್ನು ಪ್ರಜಾ ಸಮಾಜವಾದಿ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿಯವರು ತಳ್ಳಿಹಾಕಿರುತ್ತಾರೆ. ತಿರುವಾಂಕೂರಿನ ಸಮಾಜವಾದಿ ಪಕ್ಷಕ್ಕೆ ಆಹ್ವಾನವು ಬಂದರೆ ಅದು ಮಂತ್ರಿಮಂಡಲವನ್ನು ರಚಿಸಲು ಸಿದ್ಧವಾಗಿರುವುದೆಂದೂ ಕಾರ್ಯಕಾರಿ ಸಮಿತಿಯವರು ನಿರ್ಧರಿಸಿರುತ್ತಾರೆ. ಕಾಂಗ್ರೆಸ್ಸೇತರ ಸರ್ಕಾರವನ್ನು ಅಲ್ಲಿ ರಚಿಸಲು ಎರಡು ಪಕ್ಷಗಳ ಒಕ್ಕೂಟದಿಂದ ಮಾತ್ರ ಸಾಧ್ಯವೆಂದು ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಮುಖಂಡರಾದ ಪಟ್ಟಂ ತಾಣುಪಿಳ್ಳೆಯವರು ಸಮಿತಿಯ ಮುಂದೆ ತಿಳಿಸಿ ಅಂತಹ ಮಂತ್ರಿಮಂಡಲ ರಚನೆಗೆ ಅನುಮತಿ ಕೊಡಬೇಕೆಂದು ಎಷ್ಟು ಪ್ರಾರ್ಥಿಸಿದರೂ ಅದನ್ನು ಕಾರ್ಯಕಾರಿ ಸಮಿತಿಯವರು ಪುರಸ್ಕರಿಸಲಿಲ್ಲವೆಂದು ಹೇಳಲಾಗಿದೆ.

ಹೊಸ ಬಟ್ಟೆ ಗಿರಣಿಗಳಿಗೆ ಅನುಮತಿ ಇಲ್ಲ

ದೇಶದಲ್ಲಿ ಹೊಸ ಬಟ್ಟೆ ಗಿರಣಿಗಳನ್ನು ಸ್ಥಾಪಿಸುವುದಕ್ಕೆ ಭಾರತ ಸರ್ಕಾರದವರು ಅವಕಾಶ ಕೊಡುವುದಿಲ್ಲವೆಂದು ಬಟ್ಟೆಗಳ ಸಮಾಲೋಚಕರಾದ ಟಿ. ಸ್ವಾಮಿನಾಥನ್‌ರವರು ತಿಳಿಸಿರುತ್ತಾರೆ. ಬಟ್ಟೆಗಳ ಸ್ಥಿತಿಯ ಬಗ್ಗೆ ತನಿಖೆ ಸಮಿತಿಯು ಪರಿಶೀಲನೆ ನಡೆಸುತ್ತಿರುವುದೆಂದೂ ಅನಂತರ ಭಾರತ ಸರ್ಕಾರದವರ ತಮ್ಮ ನಿರ್ಧಾರವನ್ನು ತಿಳಿಸುವರೆಂದೂ ಸಮಾಲೋಚಕರು ಹೇಳಿರುತ್ತಾರೆ.

ಕಾಶ್ಮೀರದ ವೀಕ್ಷಕರು ವಿಶ್ವಸಂಸ್ಥೆಯ ಪ್ರತಿನಿಧಿಗಳು

ಕಾಶ್ಮೀರದಲ್ಲಿರುವ ವೀಕ್ಷಕರುಗಳು ವಿಶ್ವಸಂಸ್ಥೆಗೆ ನಿಷ್ಠರಾಗಿರುವರೆಂದೂ ಅವರು ಯಾವ ರಾಷ್ಟ್ರಕ್ಕೆ ಸೇರಿದವರೆಂಬ ಪ್ರಶ್ನೆಯು ಏಳುವುದಿಲ್ಲವೆಂದೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಪ್ರಧಾನಿ ನೆಹರೂರವರು ಕಾಶ್ಮೀರದಲ್ಲಿರುವ ಅಮೆರಿಕದ ಪ್ರತಿನಿಧಿಗಳ ಬಗ್ಗೆ ಆಡಿರುವ ಮಾತುಗಳು ಅನುಚಿತವಾದುವೆಂದು ತಮಗೆ ಕಾಣಿಸುವುದೆಂದೂ ಅವರು ಹೇಳಿರುವರು.

ಆಯವ್ಯಯ ಪಟ್ಟಿ ಬಗ್ಗೆ ಚರ್ಚೆ

ಸ್ವಂ ಸು ಫೋ] ಬೆಂಗಳೂರು ೧೧

ಈ ದಿನ ಶಾಸನ ಸಭೆಯಲ್ಲಿ ಆಯವ್ಯಯದ ಅಂದಾಜಿನ ಬಗ್ಗೆ ಭಾಷಣಗಳಾದುವು. ಶ್ರೀ ಎಂ. ವಿ. ರಾಮರಾಯರು ಮಾತನಾಡಿ, ಹಿಂದಿನ ಮಂತ್ರಿಮಂಡಲದ ಮೇಲೆ ಮುಖ್ಯಮಂತ್ರಿಗಳು ಆಕ್ಷೇಪಣೆಗಳನ್ನು ಮಾಡುತ್ತಿದ್ದರೆಂದೂ, ಈಗ ಅವರ ಮಂತ್ರಿಮಂಡಲವೇ ಅನೇಕ ತಪ್ಪುಗಳನ್ನು ಮಾಡುತ್ತಿದೆಯೆಂದೂ ತಿಳಿಸಿದರು. ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಮಾತನಾಡಿ ಬಳ್ಳಾರಿ ಸೇರ್ಪಡೆಯಿಂದ ಉಂಟಾದ ೪೦ ಲಕ್ಷ ರೂ ಖೋತಾವನ್ನು ಕೇಂದ್ರದವರು ತುಂಬಿಕೊಡುವಂತೆ ಸಂಸ್ಥಾನ ಸರ್ಕಾರದವರು ಒತ್ತಾಯಪಡಿಸಬೇಕೆಂದು ಹೇಳಿದರು.

ಅಧಿಕ ತೆರಿಗೆ ಬಗ್ಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ವಿರೋಧ

ಬೆಂಗಳೂರು ೧೧

ಶಾಸನ ಸಭೆಯಲ್ಲಿ ನೆನ್ನೆ ಆಯವ್ಯಯ ಅಂದಾಜು ಪಟ್ಟಿಯನ್ನು ಕುರಿತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ, ಸಭೆಯ ಸದಸ್ಯರೂ ಆದ ಶ್ರೀ ಎಚ್. ಕೆ. ವೀರಣ್ಣಗೌಡರು ಭಾಷಣ ಮಾಡಿ ಅಧಿಕ ತೆರಿಗೆಗಳನ್ನು ಕಟುವಾಗಿ ಟೀಕಿಸಿದರು. ಹೆಚ್ಚು ತೆರಿಗೆಗಳನ್ನು ಜನರು ಸಹಿಸುವುದಿಲ್ಲವೆಂದೂ, ಅವುಗಳಿಂದ ಜನರಲ್ಲಿ ಅಸಮಾಧಾನವುಂಟಾಗುವುದೆಂದೂ ಹೇಳಿದರು. ಸಂಸ್ಥಾನದಲ್ಲಿ ಪ್ರತಿಯೊಬ್ಬನ ಮೇಲೂ ತಲಾ ೨೦ ರೂ ನಂತೆ ತೆರಿಗೆ ಬೀಳುವುದೆಂದೂ ತೆರಿಗೆ ವಿಧಾಯಕ ಮಾಡುವುದರಲ್ಲಿ ವಿವೇಚನೆ ಇರಬೇಕೆಂದೂ ತಿಳಿಸಿದರು. ವಿಧಾನ ಸೌಧವನ್ನು ೭೫ ಲಕ್ಷ ರೂಗಳ ವೆಚ್ಚದಲ್ಲಿ ಈ ವರ್ಷವೇ ಪೂರೈಸುವುದನ್ನೂ, ಸಿಮೆಂಟು ರಸ್ತೆಗಳನ್ನು ಮಾಡಿಸುವುದನ್ನೂ ಅವರು ಟೀಕಿಸಿದರು. ೩೦೦ ಜನ ಸದಸ್ಯರಿದ್ದ ಪ್ರಜಾ ಪ್ರತಿನಿಧಿಗಳ ಸಭೆಯನ್ನು ಒಂದು ಚಿಕ್ಕ ಕಟ್ಟಡದಲ್ಲಿ ನಡೆಸಲಾಗುತ್ತಿತ್ತೆಂದೂ ಹೇಳಿದರು. ಸಂಸ್ಕೃತ ಪ್ರಚಾರದಿಂದ ಹಲವರಿಗೆ ಉದ್ಯೋಗ ಸಿಕ್ಕಿದಂತಾಗಿರುವುದೆಂದೂ ಹೇಳಿದರು. ಸರ್ಕಾರದವರು ರಚಿಸಿರುವ ಸಮಿತಿಗಳಲ್ಲಿ ಪಕ್ಷಪಾತವಿರುವುದೆಂದು ಆಕ್ಷೇಪಿಸಿದರು.

ರಷ್ಯಕ್ಕೆ ಹೆಚ್ಚು ರಕ್ಷಣಾ ಬಲ

ತೃತೀಯ ಪ್ರಪಂಚ ಯುದ್ಧದ ಭಯವಿರುವುದರಿಂದ ರಷ್ಯವು ತನ್ನ ರಕ್ಷಣಾ ಬಲವನ್ನು ಹೆಚ್ಚಿಸಿಕೊಳ್ಳಬೇಕೆಂದು ಆ ದೇಶದ ರಕ್ಷಣಾ ಮಂತ್ರಿ ಮಾರ್ಷಲ್ ಬುಲ್ಗಾನಿನ್‌ರವರು ತಿಳಿಸಿರುತ್ತಾರೆ. ತಮ್ಮ ಸೈನ್ಯಗಳಿಗೆ ಅತ್ಯಾಧುನಿಕವಾದ ಯುದ್ಧ ಸಾಮಗ್ರಿಗಳನ್ನು ಒದಗಿಸಲಾಗುವುದೆಂದೂ ಅವರು ಹೇಳಿರುವರು. ದ್ವಿತೀಯ ಯುದ್ಧದಲ್ಲಿ ರಷ್ಯವು ಗೆದ್ದ ರಾಷ್ಟ್ರವೆಂಬ ಖ್ಯಾತಿ ಹೊಂದಬಾರದೆಂದೂ, ರಷ್ಯಾ ಶತ್ರುಗಳ ಹಿಡಿತದಲ್ಲಿ ಅದು ಹಿಂದೆ ಬೀಳಬಾರದೆಂದೂ ಅವರು ಸೂಚಿಸಿರುವರು.

ಸಂಸ್ಥಾನದಲ್ಲಿ ಗಾಂಧರ್ವ ವಿವಾಹದ ಶಾಸನವಿಲ್ಲ

ಬೆಂಗಳೂರು ೧೧

ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಜಿ. ಶಿವಪ್ಪನವರ ಪ್ರಶ್ನೆಗೆ ಉತ್ತರವಾಗಿ ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಸಂಸ್ಥಾನದಲ್ಲಿ "ಆತ್ಮ ಗೌರವ" ವಿವಾಹಗಳ ಬಗ್ಗೆ ಶಾಸನ ಮಾಡುವುದನಗತ್ಯವೆಂದು ಹೇಳಿದರು. ಆತ್ಮ ಗೌರವ ವಿವಾಹವೆಂದರೆ ಗಾಂಧರ್ವ ವಿವಾಹವೆಂದೂ ಮಂತ್ರಿಗಳು ತಿಳಿಸಿದರು.

ರಿಸರ್ವ್ ಬ್ಯಾಂಕ್ ಮುಂದೆ ನೌಕರರ ಪ್ರದರ್ಶನ

ಸಂಬಳದ ಪುನರ್ವಿಮರ್ಶೆಯ ಪ್ರಶ್ನೆಯು ಇತ್ಯರ್ಥವಾಗುವ ಮುಂಚೆ ತಾತ್ಕಾಲಿಕ ಪರಿಹಾರವನ್ನು ಕೊಡಲು ನಿರಾಕರಿಸಿರುವರೆಂಬ ಕಾರಣಕ್ಕಾಗಿ ಬೆಂಗಳೂರಿನಲ್ಲಿರುವ ರಿಸರ್ವ್ ಬ್ಯಾಂಕ್ ಶಾಖೆಯ ನೌಕರರು ಶಾಖಾ ಕಛೇರಿ ಮುಂದೆ ನೆನ್ನೆ ಪ್ರದರ್ಶನ ನಡೆಸಿದರು. ಬ್ಯಾಂಕ ಕೆಲಸ ಆರಂಭವಾಗುವ ಮುಂಚೆ ಅವರು ಪ್ರತಿಭಟನಾ ಘೋಷಣೆಗಳನ್ನು ಕೂಗಿದರು.

ತೆರಿಗೆ ಹೆಚ್ಚಿಸಿದರೆ ಹೋಟೇಲು ಮುಚ್ಚಬೇಕಾಗುವುದು

ಬೆಂಗಳೂರು ೧೨

ಹೋಟೇಲುಗಳ ಮೇಲೆ ಶೇ|| ೧೦ ರಷ್ಟು ಮಾರಾಟ ತೆರಿಗೆಯನ್ನು ವಿಧಿಸಲು ಸರ್ಕಾರದವರು ಆಲೋಚಿಸಿರುವ ಬಗ್ಗೆ ಬೆಂಗಳೂರು ಹೋಟೇಲು ಮಾಲೀಕರ ಸಂಘದ ... ಪ್ರತಿಭಟನೆ ಸೂಚಿಸುತ್ತಿದೆ. ಸರ್ಕಾರದವರು ತಿಳಿಸಿದಂತೆ ತೆರಿಗೆಯನ್ನು ವಿಧಿಸುವುದಾದರೆ ಹೋಟೆಲುಗಳನ್ನು ಮುಚ್ಚಬೇಕಾಗುವುದೆಂದು ಅವರು ಹೇಳುವರು. ಈಗಿನ ಸ್ಥಿತಿಯಲ್ಲಿ ಹೋಟೇಲಿನವರು ಖಂಡಿತವಾಗಿ ಲಾಭದಾಯಕವಾಗಿ ... ರಷ್ಟು ಲಾಭ ಬರುತ್ತಿಲ್ಲವೆಂದು ತಿಳಿಸಲಾಗಿದೆ.

ಮಹಿಳಾ ನೌಕರಳ ಆತ್ಮಹತ್ಯ

ಬೆಂಗಳೂರು ಆರಾಂಶ ಕಛೇರಿಯಲ್ಲಿ ನೌಕರಳಾಗಿದ್ದ ಶ್ರೀಮತಿ ... ಎಂಬ ... ವರ್ಷ ದ ಹೆಣ್ಣು ... ಸೀಮೆ ಎಣ್ಣೆ ... ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯ ಮಾಡಿಕೊಂಡಿರುವುದಾಗಿ ವರದಿಯಾಗಿದೆ. ಆಕೆಗೆ ಮದುವೆಯಾಗಿತ್ತೆಂದೂ ತಿಳಿದು ಬಂದಿದೆ.

ಬೆಂಗಳೂರಿನಲ್ಲಿ ಯೋಗಿನಿ ರಮಾದೇವಿ

ವೇದ ಉಪನಿಷತ್ತು ಯೋಗಗಳಲ್ಲಿ ... ಪಂಡಿತರಾಗಿರುವ ಶ್ರೀಮತಿ ಪರಮಾನಂದ ರಮಾದೇವಿಯವರು ಬೆಂಗಳೂರಿಗೆ ಆಗಮಿಸಿದ್ದಾರೆ. ಚಿಕ್ಕವಯಸ್ಸಿನವರಾದರೂ ಅವರು ಹಿಮಾಲಯದಲ್ಲಿ ಗುರುವನ್ನು ... ಶಿಷ್ಯವೃತ್ತಿ ಮಾಡಿ ಯೋಗಾಭ್ಯಾಸವನ್ನು ಮಾಡಿರುವರು. ಭಾರತದ ಪುರಾತನ ಪವಿತ್ರ ಗ್ರಂಥಗಳನ್ನು ಚೆನ್ನಾಗಿ ಪರಿಶೀಲಿಸಿರುವರು. ಹಿಮಾಲಯದಲ್ಲಿ ಅವರು ... ವರ್ಷವಿದ್ದರು. ಶ್ರೀ ... ವರು ಮೈಸೂರಿನವರು. ಬೆಂಗಳೂರಿನಲ್ಲಿ ಯೋಗ ... ವನ್ನು ಸ್ಥಾಪಿಸಲು ಆಲೋಚಿಸುವರು.

ಚತುರ್ರಾಷ್ಟ್ರ ಮುಖಂಡರ ಸಭೆಗೆ ಐಸನ್‌ಹೋವರ್ ವಿರೋಧ

ಚತುರ್ರಾಷ್ಟ್ರಗಳ ಮುಖಂಡರ ಸಭೆಯನ್ನು ಈಗ ಕರೆಯುವುದಕ್ಕೆ ಅಮೆರಿಕದ ಅಧ್ಯಕ್ಷರು ವಿರೋಧ ಸೂಚಿಸಿರುವರು.

ರತ್ನಖಚಿತವಾದ ಬುದ್ಧನ ಪ್ರತಿಮೆ

ಸಂಗಾವಿ ನ ಒಂದು ದೇವಾಲಯದ ... ವಲ್ಲಿ ನವರತ್ನ ಖಚಿತವಾದ ಚಿನ್ನದ ಬುದ್ಧವಿಗ್ರಹವೊಂದು ಇದ್ದಿತೆಂದು ... ೧೨ ನೇ ಇಸವಿಯಲ್ಲಿ ಈ ಪ್ರತಿಮೆಯನ್ನು ಮಾಡಲಾಗಿತ್ತೆಂದು ಗೊತ್ತಾಗಿದೆ. ಆ ವಿಗ್ರಹವಲ್ಲದೆ ಇತರ ಚಿನ್ನ ಮತ್ತು ಬೆಳ್ಳಿ ಪ್ರತಿಮೆಗಳೂ ದೊರೆತಿವೆ.

ವ್ಯಭಿಚಾರಕ್ಕಾಗಿ ಮಹಿಳೆಯರಿಗೆ ಶಿಕ್ಷೆಯಿಲ್ಲ

ನಿಬಂಧನೆ ಬಗ್ಗೆ ಸುಪ್ರೀಂ ಕೋರ್ಟಿನ ಸಮರ್ಥನೆ

ವ್ಯಭಿಚಾರ ನಡೆಸಿದ ಗಂಡಸಿಗೆ ಶಿಕ್ಷೆ ವಿಧಿಸಿ ಮಹಿಳೆಗೆ ಅದನ್ನು ಕೊಡದಿರುವ ಬಗ್ಗೆ ಇಂಡಿಯನ್ ಪೀನಲ್ ಕೋಡಿನಲ್ಲಿರುವ ನಿಬಂಧನೆಯನ್ನು ಸುಪ್ರೀಂ ಕೋರ್ಟಿನವರು ಎತ್ತಿ ಹಿಡಿದರು. ಈ ಸಂಬಂಧವಾಗಿ ಬಂದಿದ್ದ ಒಂದು ಮೊಕದ್ದಮೆಯನ್ನು ವಜಾ ಮಾಡಿರುತ್ತಾರೆ. ಬೊಂಬಾಯಿಯ ... ಯೂಸುಫ್ ಅಬ್ದುಲ್ ಅಜೀಜ್ ಎಂಬಾತನು ಕೋರ್ಟಿಗೆ ಅರ್ಜಿ ಸಲ್ಲಿಸಿ ಸದರಿ ನಿಬಂಧನೆಯು ಲಿಂಗ ಭೇದವೆಣಿಸಿ ರಾಜ್ಯಾಂಗಕ್ಕೆ ವಿರೋಧವಾಗಿರುವುದೆಂದು ತಿಳಿಸಿದ್ದನು. ಅವನ್ನು ಕೋರ್ಟು ವಜಾ ಮಾಡಿ ವ್ಯಭಿಚಾರದ ದೋಷವು ಮನುಷ್ಯನದೇ ಎಂದು ... ಹೇಳುವುದು ... ಅದಕ್ಕೆ ವ್ಯತಿರಿಕ್ತವಾಗಿ ... ನಿಬಂಧನೆಯು ... ದರಿಂದ ... ದಂಡಿಸಲು ... ವೆಂದರೆ ಅವರ ... ಶಿಕ್ಷಿಸಲ್ಲವೆಂದೂ ... ಹೀಗೆ ಮಹಿಳೆಯರು ... ದಿಂದ ಅವರ ವ್ಯಭಿಚಾರ ಮಾಡಲು ... ಕೊಟ್ಟ ಹಾಗಾಗುವುದಿಲ್ಲವೆಂದೂ ನ್ಯಾಯಾಧೀಶರು ಅಭಿಪ್ರಾಯ ಪಟ್ಟರು.

ಏಪ್ರಿಲ್ ೨೦ ನೇ ತಾ|| ನೆಹರೂ ಮತ್ತು ಮಹಮದ್ ಆಲಿ ಭೇಟಿ

ಏಪ್ರಿಲ್ ೨೦ ನೇ ... ಪ್ರಧಾನಿ ನೆಹರೂರವರನ್ನು ... ಭೇಟಿ ಮಾಡುವುದಾಗಿ ... ಮಹಮದ್ ಆಲಿಯವರು ... ಕಾಶ್ಮೀರದ ಬಗ್ಗೆ ಚರ್ಚೆ ನಡೆಸಲು ... ನೆಹರೂರವರು ... ವೆಂದೂ ಅವರು ನುಡಿದಿರುವರು.

ಉದ್ಧವ ಗೀತಾ ಉಪನ್ಯಾಸದ ಮಂಗಳ

ರಾಜಧಾನಿಯ ... ಅಗ್ರಹಾರದಲ್ಲಿರುವ ಶ್ರೀ ವಿದ್ಯಾಗಣಪತಿ ಮಂದಿರದಲ್ಲಿ ಕಳೆದ ... ನಿಂದ ಬ್ರ|| ಶ್ರೀ ಜಯತೀರ್ಥಾಚಾರ್ಯರಿಂದ ನಡೆಯುತ್ತಿರುವ ಉದ್ಧವಗೀತೋಪನ್ಯಾಸದ ಮಂಗಳವು ... ಶ್ರೀ ಜೆ ಆರ್ ಜೋಯಿಸ್ ರವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಮೇಲುಕೋಟೆಯಲ್ಲಿ ಶಾತ್ತಾದ ಶ್ರೀವೈಷ್ಣವ ಸಮಾರಾಧನೆ ವಿಚಾರ

ಕೋಟೆ ಶ್ರೀ ಆಂಜನೇಯಸ್ವಾಮಿ ಅರ್ಚಕರಾದ ಶ್ರೀ ಶ್ರೀನಿವಾಸಯ್ಯನವರು ಈ ರೀತಿ ಬರೆದಿರುತ್ತಾರೆ —

ಮೇಲುಕೋಟೆಯ ವೈರಮುಡಿ ಬ್ರಹ್ಮೋತ್ಸವ ಕಾಲದಲ್ಲಿ ಶಾತ್ತಾದ ಶ್ರೀ ವೈಷ್ಣವರಿಗಾಗಿ ಸಮಾರಾಧನೆಯು ಬಹು ದಿನದಿಂದಲೂ ನಡೆಯುತ್ತಿದ್ದುದು ೫೦ ನೇ ಇಸವಿಯಿಂದ ಈ ತನಕ ವರೆಗೂ ಹಣವಿಲ್ಲದೆ ನಿಂತುಹೋಗಿರುತ್ತದೆ. ಈ ಬಗ್ಗೆ ರೆವಿನ್ಯೂ ಕಮಿಷನರಿಗೆ ಇದೇ ಜನವರಿ ೨೦ನೇ ತಾ|| ಪತ್ರ ಬರೆಯಲಾಗಿತ್ತು. ಮಂಡ್ಯದ ಜಿಲ್ಲಾಧಿಕಾರಿಗಳಿಗೂ ಅರಿಕೆ ಮಾಡಿಕೊಳ್ಳಲಾಗಿತ್ತು. ಇದುವರೆಗೂ ಯಾವ ಜವಾಬೂ ಬಂದಿರುವುದಿಲ್ಲ. ಹಿಂದೆ ಗಂಜಾಂನ ವೆಂಕಟಾಚಲ ಪಂಡಿತರು ಏರಹೂಚಿನಲ್ಲಿ ಎಕರೆಯಷ್ಟು ಜಮೀನನ್ನು ಸರ್ಕಾರಕ್ಕೆ ವಹಿಸಿ ಬಂದ ಉತ್ಪತ್ತಿಯಿಂದ ಸಮಾರಾಧನೆ ನಡೆಸಬೇಕಾಗಿತ್ತು. ಆಗಿನಿಂದಲೂ ಇದು ನಡೆದು ಬಂದಿತ್ತು. ಇದನ್ನು ನಡೆಸಲು ಶ್ರೀ ವೆಂಕಟಾಚಲ ಪಂಡಿತರ ವಂಶದವನಾದ ನನಗೆ ಅವಕಾಶ ಕೊಟ್ಟು ಜಮೀನಿನಿಂದ ಬರುವ ಉತ್ಪತ್ತಿಯನ್ನು ಸರ್ಕಾರದವರು ಕೊಡುವಂತಾಗಬೇಕು. ಈ ಬಗ್ಗೆ ಕಾಲ ವಿಳಂಬವಾಗದಂತೆ ಅಧಿಕಾರಿಗಳು ಕ್ರಮ ಜರುಗಿಸಬೇಕೆಂದು ಕೋರುತ್ತೇನೆ.

ಮೇಲುಕೋಟೆಯಲ್ಲಿ ಸಂತರ್ಪಣೆ

ಮೇಲುಕೋಟೆಯಲ್ಲಿ ನೆನ್ನೆಯಿಂದ ಆರಂಭವಾಗಿರುವ ಬ್ರಹ್ಮೋತ್ಸವಕ್ಕಾಗಿ ಬರುವ ಭಕ್ತಾದಿಗಳ ಪಕ್ಕಳಿಗೆ ಅಲ್ಲಿನ ದೈವಾಂಶ್ರಮದವರು ಮಾಮೂಲಿನಂತೆ ಸಂತರ್ಪಣೆಯನ್ನು ಏರ್ಪಡಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಕೊಳಲು ... ಸಂಜೆ ... ದೇವರನಾಮಗಳು ... ಮಧ್ಯಾಹ್ನ ... ಬಾಲ ... ಸಂಜೆ ... ಎಸ್ ಆರ್ ... ಸಂಗೀತ ... ಕುವೆಂಪುರವರ ಕವನಗಳು ... ಎಸ್ ... ಬೇಲೂರಯ್ಯ ನಾಗಸ್ವರ ... ಪಟ್ಟಾಭಿ ... ಗುರುರಾಜದಾಸ್ ... ರಾತ್ರಿ ... ಕಾರ್ಯಕ್ರಮ

ಬೆರಳು ಕಳೆದುಕೊಂಡ ವಿದ್ಯಾರ್ಥಿಗೆ ೧,೫೦೦ ಪೌಂಡು ಪರಿಹಾರ

ಲಂಡನ್ನಿನ ಆಸ್ಪತ್ರೆಯೊಂದರ ಮಹಡಿ ಮೆಟ್ಟಲಿನಿಂದ ಬಿದ್ದು ಹೆಬ್ಬೆಟ್ಟು ಮತ್ತು ಮಧ್ಯದ ಬೆಟ್ಟನ್ನು ಮುರಿದುಕೊಂಡ ಒಬ್ಬ ವಿದ್ಯಾರ್ಥಿನಿಗೆ ಅಲ್ಲಿನ ಹೈಕೋರ್ಟು ೧,೫೦೦ ಪೌಂಡು ಮತ್ತು ಕೋರ್ಟು ಖರ್ಚನ್ನು ಪರಿಹಾರವಾಗಿ ಕೊಡುವಂತೆ ಆಸ್ಪತ್ರೆಯ ಸಮಿತಿಗೆ ಆಜ್ಞೆ ಮಾಡಿರುತ್ತದೆ. ಆಕೆಯು ... ಪಿಟೀಲನ್ನು ನುಡಿಸವಂತಿಲ್ಲವೆಂದು ನ್ಯಾಯಾಧೀಶರು ಹೇಳಿರುತ್ತಾರೆ. ಸಮಿತಿಯ ಮೇಲೆ ಅವಳು ದಾವಾ ಹೂಡಿದ್ದಳು.

ಆಕಾಶವಾಣಿಯ ಮೂಲಕ ಚೆಂಬೈಯವರ ಸಂಗೀತ

ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಶ್ರೀ ಚೆಂಬೈ ವೈದ್ಯನಾಥಭಾಗವತರ ಗಾಯನ ಕಛೇರಿಯು ನಾಳೆ ರಾತ್ರಿ ... ರಿಂದ ... ರ ವರೆಗೆ ಮೈಸೂರಿನ ಆಲ್ ಇಂಡಿಯಾ ರೇಡಿಯೋದಿನಲ್ಲಿ ಇದೆ. ಶ್ರೀ ಟಿ ಚೌಡಯ್ಯನವರ ಪಿಟೀಲು ಮತ್ತು ... ರವರ ಮೃದಂಗಗಳೂ ಇವೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಆ
ಕಡಲೆಕಾಯಿ	೧೩ ೧೪ ೦	೨೬ ೪ ೦
ಎಳ್ಳು	೬೯ ೨ ೦	
ಹುರುಳಿಬೀಜ	೨೦ ೪ ೦	
ಹುಚ್ಚೆಳ್ಳು	೪೯ ೦ ೦	೪೬ ೦ ೦
ಹೊಂಗೇಬೀಜ	೧೯ ೧೨ ೦	೨೬ ೦ ೦
ಕುಸುಬೆ	೨೪ ೧೨ ೦	೨೮ ೩ ೦
ಹೆಸರು	೪೭ ೮ ೦	೪೩ ೦ ೦
ಕಡಲೆ	೩೬ ೦ ೦	
ಅವರೆ	೧೪ ೩ ೦	೨೫ ೦ ೦
ಧನಿಯ	೨೬ ೧೪ ೦	
ತೊಗರಿ	೨೬ ೦ ೦	
ಹರಳು ಬೀಜ	೨೫ ೦ ೦	೩೦ ೧೪ ೦
ರಾಗಿ	೪೨ ೦ ೦	೪೨ ೩ ೦
ಹತ್ತಿಬೀಜ	೧೨ ೧೦ ೦	೧೬ ೪ ೦
ಹುಣಸೇಹಣ್ಣು	೭ ೪ ೦	೧೦ ೮ ೦
ಸೀಗೆಕಾಯಿ	೪ ೭ ೦	೪ ೧೬ ೦
ಮೆಣಸಿನಕಾಯಿ	೨೭ ೧೦ ೦	೨೯ ೦ ೦
ಕೊಬ್ಬರಿ	೧೧೦ ೦ ೦	೨೫೦ ೦ ೦

Edited Printed and Published by A R Nagrajan at Sadhvi Press D Subbiah Road, Mysore

ಪ್ರಭಾ ★ ಇಂದಿನಿಂದ ಜಯಪ್ರದ 3ನೇ ವಾರ
ದಿನವೂ ೩ ಆಟಗಳು
ದೇವಕನ್ನಿಕಾ (ಕನ್ನಡ)

ಒಲಂಪಿಯಾ
10 3 54 ರಿಂದ ಅಮೋಘ ೩ನೇ ವಾರ
ಶರಚ್ಚಂದ್ರ ಚಟರ್ಜಿಯವರ ಬಂಗಾಳಿಯನ್ನು ಹೃದಯ ವಿದ್ರಾವಕವಾಗಿ ಚಿತ್ರಿಸುವ
✱ ಪರಿಣೀತ ✱
ದಿಗ್ದರ್ಶನ ಬಿಮಲ್ ರಾಯ್
ಪಾತ್ರ ಅಶೋಕ್ ಕುಮಾರ್ ಅತಿಬಿಣಾ ... ಮೀನಾ ಕುಮಾರಿ

SRI GANESHA TALKIES
From 13 3-54 To 3 Days
Universal's
CITY BENEATH THE SEA
(The ... Story of the Lost World at the Bottom of the Sea)
Starring Robert Ryan ... Mala Powers Anthony Quinn ... Suzanne B...

ಲಕ್ಷ್ಮೀ ಟಾಕೀಸ್ ✱ ತಾ|| 12-3-54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು
ಮಧ್ಯಾಹ್ನ 4.೦ ಸಂಜೆ 6 1/2 ಮತ್ತು ರಾತ್ರಿ 9-45
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಸಾಂಘಿಕವಾದ ಅತ್ಯುತ್ತಮ ಸಾಮಾಜಿಕ ತೆಲುಗು ಚಿತ್ರ
ಅಂತಾ ಮನವಾಳ್ಳೆ
ತಾರಾಗಣ ಕೃಷ್ಣಕುಮಾರಿ ಎಸ್ ವಿ ರಂಗರಾವ್ ಸಿ ಎಸ್ ಆರ್, ಜಮುನ ಮುಂತಾದವರು
ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ನಾಲ್ಕು ವಾರ ಮನ್ನಾ ಮಾಡಲಾಗಿದೆ

ರಾಜಕಮಲ್ ಟಾಕೀಸ್, ಮೈಸೂರು
ತಾ|| 12—3—54 ರಿಂದ :: ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ಮ ... ಲಕ್ಷ ರೂಗಳ ವ್ಯಯ ಮಾಡಿ ಅನೇಕ ವರ್ಷಗಳಿಂದ ಶ್ರಮಪಟ್ಟು ತಯಾರಿಸಿರುವ, ಮನೋಹರ ಪಿಕ್ಚರ್ಸ್ ರವರ ತಮಿಳು ಚಿತ್ರ
★ ಮನೋಹರ ★

ಭೂಮಿಕೆ — ಶಿವಾಜಿ ಗಣೇಶ್, ಕಣ್ಣಾಂಬ ... ಟಿ ಆರ್ ರಾಜಕುಮಾರಿ ಪಂಡರಿಬಾಯಿ ಗಿರಿಜ ಬಿ ಕೆ ಸರಸ್ವತಿ ಮುಂತಾದವರು
ಆರು ವಾರಗಳ ಕಾಲ ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ಡ್ ನಂ 792 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ ಬಂದ್ದೇನೋಡಿ
M. V ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE SATURDAY 13-3-1954 ಮೈಸೂರು : ಶನಿವಾರ ೧೩-೩-೧೯೫೪ [ಸಂಚಿಕೆ ೨೦೦

ಪಾಕಿಸ್ತಾನದಲ್ಲಿ ಬುಡಮೇಲು ಪಿತೂರಿ; ಐವರ ಬಂಧನ

ಹೋಟೇಲು ತೆರಿಗೆ ಶಾಸನ ಮಾಡಕೂಡದು

ಶಾಸನ ಸಭಾಧ್ಯಕ್ಷರಿಗೆ ತಗಡೂರರ ತಂತಿ

ಮೈಸೂರು ೧೩

ಹೋಟೇಲು ವ್ಯಾಪಾರದ ಮೇಲೆ ಮಾರಾಟ ತೆರಿಗೆ ವಿಧಿಸುವುದು ರಾಜ್ಯಾಂಗದ ೧೯ನೇ (ಜಿ) ಮತ್ತು ೨೭೬ ನೇ ನಿಬಂಧನೆಗಳಿಗೆ ವಿರೋಧವೆಂದೂ ಆ ರೀತಿ ಕಾನೂನು ಮಾಡಲು ಶಾಸನ ಸಭೆಗೆ ಅಧಿಕಾರವಿಲ್ಲವೆಂದೂ ಶ್ರೀ ತಗಡೂರು ರಾಮಚಂದ್ರರಾಯರು ಶಾಸನ ಸಭಾಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯನವರಿಗೆ ನೆನ್ನೆ ತಂತಿ ಕಳುಹಿಸಿ, ಕಾನೂನು ಮಾಡುವುದನ್ನು ನಿಲ್ಲಿಸಬೇಕೆಂದೂ ಹಾಗೆ ಮಾಡದಿದ್ದರೆ ರಿಟ್ ಅರ್ಜಿಯನ್ನು ದಾಖಲಾಗುವುದೆಂದೂ ತಿಳಿಸಿರುತ್ತಾರೆ

ಪತ್ರಿಕೆಗಳ ಪ್ರದರ್ಶನ

ಮೈಸೂರು ಮಹಾರಾಜಾ ಕಾಲೇಜಿನ ವಿಶ್ವ ವಿದ್ಯಾಲಯ ಪತ್ರಿಕೋದ್ಯಮ ಸಂಘದವರು ಏರ್ಪಡಿಸಿರುವ ಪತ್ರಿಕೆಗಳ ಪ್ರದರ್ಶನವು ನಾಳೆ ಬೆಳಿಗ್ಗೆ ೮ ರಿಂದ ೧೦ ವರೆಗೂ ಸಂಜೆ ೪ ರಿಂದ ೬ ಗಂಟೆವರೆಗೆ ಸಾರ್ವಜನಿಕರಿಗಾಗಿ ತೆರೆದಿರುವುದೆಂದು ವ್ಯವಸ್ಥಾಪಕರು ತಿಳಿಸಿರುತ್ತಾರೆ

ಶ್ರೀ ರಾಮ ಪಟ್ಟಾಭಿಷೇಕ

ರಾಜಧಾನಿಯ ನೂರಡಿ ರಸ್ತೆಯಲ್ಲಿ ಜಿ ಟಿ ಎ ಮುದ್ರಣಾಲಯವಿದ್ದ ಕಟ್ಟಡದಲ್ಲಿ ನಾಳೆ ಸಂಜೆ ೬ ಗಂಟೆಗೆ ನಂಗಯ್ಯ ಸಲ್ಲೂರಿನ ಬ್ರ|| ಶ್ರೀ ಲಕ್ಷ್ಮೀನಾರಾಯಣ ಭಾಗವತರು ರಾಮ ಪಟ್ಟಾಭಿಷೇಕ ಎಂಬ ಹರಿಕಥೆಯನ್ನು ಮಾಡುವರು

ಕಾಲೇಜು ಇತಿಹಾಸ ಸಂಘದ ಮಹೋತ್ಸವ

ರಾಜಧಾನಿಯ ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ರಜತ ಮಹೋತ್ಸವವು ಇದೇ ೧೬ನೇ ತಾ|| ಸಂಜೆ ೫|| ಗಂಟೆಗೆ ಕಾಲೇಜಿನಲ್ಲಿ ನಡೆಯುವುದು ಶ್ರೀ ಮಹಾರಾಜರು ಆರಂಭೋತ್ಸವವನ್ನು ನೆರವೇರಿಸುವರು ಉತ್ಸವದ ನೆನಪಿಗಾಗಿ ಏರ್ಪಡಿಸಿದ ಫೌಂಟನ್ ಅನ್ನು ಶ್ರೀ ಮಹಾರಾಜರು ಆರಂಭಿಸುವರು ೧೬ನೇ ತಾ|| ಮಧ್ಯಾಹ್ನ ೩ ಗಂಟೆಗೆ ವೈಸ್ ಚಾನ್ಸಲರಾದ ಡಾ|| ಬಿ ಎಲ್ ಮಂಜುನಾಥ್‌ರವರು ಪ್ರದರ್ಶನವನ್ನು ತೆರೆಯುವರು ಸಂಜೆ ೬ ಗಂಟೆಗೆ ಮಾಜಿ ಮಂತ್ರಿ ಶ್ರೀ ಮಹಮೂದ್ ಷರೀಫರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ವಿದ್ವಾಂಸರಾದ ಶ್ರೀ ದೊರೆಸ್ವಾಮಿ ಅಯ್ಯಂಗಾರ್ಯರ ಸಂಗೀತವು ಇದೆ

ಸೇಂದಿ ಇಳಿಸುವವರ ಸತ್ಯಾಗ್ರಹಕ್ಕೆ ಮಾಜಿ ಮಂತ್ರಿ ನಾಯಕರು

ಆಂಧ್ರದಲ್ಲಿ ಪಾನನಿರೋಧ ಕ್ರಮವನ್ನು ರದ್ದುಗೊಳಿಸದಿದ್ದರೆ ಅಲ್ಲಿ ನಡೆಯಲಿರುವ ಸೇಂದಿ ಇಳಿಸುವವರ ಸತ್ಯಾಗ್ರಹದ ನಾಯಕತ್ವವನ್ನು ಮಾಜಿ ಮಂತ್ರಿ ಲಚ್ಚಣ್ಣನವರು ವಹಿಸಲಿರುವರು ಅವರು ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡಿ ಪಾನನಿರೋಧಕ್ಕೆ ಕಾಂಗ್ರೆಸ್ ಸದಸ್ಯರೂ ವಿರೋಧವಾಗಿರುವರೆಂದೂ ಆದರೆ ಅವರುಗಳನ್ನು ಕಾಂಗ್ರೆಸ್ ಮಂತ್ರಿಗಳು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವರೆಂದೂ ಹೇಳಿರುವರು

ನೀರು ಸರಬರಾಜು ಉತ್ತಮಗೊಳ್ಳಲು ೨೬ ಲಕ್ಷ ರೂ ಸಾಲ

ಕೊಡುವಂತೆ ಸರ್ಕಾರಕ್ಕೆ ಪೌರಸಭೆಯ ಪ್ರಾರ್ಥನೆ

ಮೈಸೂರು ೧೩

ನಗರದ ಪೌರಸಭೆಯ ವಿಶೇಷ ಅಧಿವೇಶನವು ನೆನ್ನೆ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಆದಾದನಂತರ ಅಧ್ಯಕ್ಷರು ಸಭಾ ನಡವಳಿಕೆ ಬಗ್ಗೆ ಹೇಳಿಕೆಯೊಂದನ್ನಿತ್ತು ಬೆಂಗಳೂರಿನಲ್ಲಿ ಮಂತ್ರಿಗಳು ಮತ್ತು ಇತರ ಅಧಿಕಾರಿಗಳೊಡನೆ ಪೌರಸಭಾ ಪ್ರತಿನಿಧಿಗಳು ನಗರದಲ್ಲಿ ನೀರು ಸರಬರಾಜನ್ನು ಉತ್ತಮಗೊಳಿಸುವ ಸಂಬಂಧವಾಗಿ ಸಮಾಲೋಚನೆ ನಡೆಸಿರುವುದಾಗಿಯೂ ಈಗಾಗಲೇ ಪೌರಸಭೆಯು ಅಂಗೀಕರಿಸಿರುವ ೫೪ ಲಕ್ಷ ರೂ ಅಂದಾಜಿನ ಯೋಜನೆಯು ಶೀಘ್ರವಾಗಿ ಕಾರ್ಯಗತವಾಗುವಂತೆ ಮಾಡಿಕೊಡಬೇಕೆಂದೂ ಕೋರಿರುವುದಾಗಿಯೂ ತಿಳಿಸಿದ್ದಾರೆ

ಈ ಬಗ್ಗೆ ಈಗಾಗಲೇ ಶೇಖರಿಸಿರುವ ೧೬ ೨ ಲಕ್ಷ ರೂ ಬೆಲೆಯ ೨೮ ಅಂಗುಲದ ಕೊಳಾಯಿಗಳನ್ನು ಪೌರಸಭೆಗೆ ಗ್ರ್ಯಾಂಟಾಗಿ ಕೊಡಲು ಭರವಸೆ ಕೊಟ್ಟಿದ್ದಕ್ಕಾಗಿ ಸರ್ಕಾರಕ್ಕೆ ಸಭೆಯು ಕೃತಜ್ಞತೆಯನ್ನು ಸೂಚಿಸಿ ಉಳಿದ ೨೬ ೨ ಲಕ್ಷ ರೂ ಗಳನ್ನು ಯೋಜನೆಗಾಗಿ ವೆಚ್ಚ ಮಾಡಲು ಆ ಹಣವನ್ನು ಸಾಲವಾಗಿ ಕೊಡಬೇಕೆಂದು ಸಭೆಯು ಕೋರಿರುವುದಾಗಿಯೂ ಈ ಸಾಲಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಕೊಡಲ್ಪಡುವ ಸಾಲದ ಬಡ್ಡಿ ದರವನ್ನು ಹಾಕಬೇಕೆಂದೂ ಸಾಲವನ್ನು ಸುಮಾರು ೩೦ ಸಮ ವಾರ್ಷಿಕ ಕಂತುಗಳಲ್ಲಿ ತೀರಿಸುವುದಾಗಿ ಸಭೆಯು ಹೇಳಿರುವುದಾಗಿಯೂ ಅಧ್ಯಕ್ಷರು ತಿಳಿಸಿರುತ್ತಾರೆ ಅದಕ್ಕಾಗಿ ೫೫ ೫೬ ನೇ ಸಾಲಿನಿಂದ ಸಾಲ ತೀರ್ಪಿಗಾಗಿ ಪ್ರತಿ ವರ್ಷ ೨ ಲಕ್ಷ ೧೭ ಸಾವಿರ ರೂ ಗಳನ್ನು ವಿನಿಯೋಗಿಸಬೇಕೆಂದೂ ಸಭೆಯು ನಿರ್ಧರಿಸಿರುವುದಾಗಿಯೂ ಹೇಳಿ ಈ ಯೋಜನೆಯು ಕಾರ್ಯಗತವಾಗುವುದರಿಂದ ನಗರದಲ್ಲಿ ನೀರಿನ ಕೊರತೆಯು ಪರಿಹಾರವಾಗುವುದೆಂದು ಆಶಿಸಿದ್ದಾರೆ

ಸ್ವಾಮಿ ಸೀತಾರಾಮರವರ ಸ್ಥಿತಿ ಕಳವಳಕರ

ಆಂಧ್ರದಲ್ಲಿ ಪಾನ ನಿರೋಧ ಶಾಸನವನ್ನು ರದ್ದು ಮಾಡಬಾರದೆಂದು ಒತ್ತಾಯ ಪಡಿಸಲು ೧ ವಾರದಿಂದ ಆಮರಣಾಂತ ಉಪವಾಸ ಕೈಗೊಂಡಿರುವ ಸ್ವಾಮಿ ಸೀತಾರಾಮರವರ ದೇಹಸ್ಥಿತಿಯು ತೀರಾ ಕೆಟ್ಟು ನೆನ್ನೆಯಿಂದ ಅವರು ಪ್ರಜ್ಞೆ ತಪ್ಪಿರುವರೆಂದೂ ಅವರಿಗೆ ಆಗಾಗ್ಗೆ ಪಾರ್ಶ್ವ ವಾಯು ಮತ್ತು ಬಿಕ್ಕಳಿಕೆಯು ಬರುತ್ತಿರುವುದೆಂದೂ ವರದಿಯಾಗಿದೆ ಅವರ ಸ್ಥಿತಿಯ ಬಗ್ಗೆ ತೀರಾ ಕಳವಳವುಂಟಾಗಿದೆ

ಅಮೆರಿಕದ ವೀಕ್ಷಕರ ಬಗ್ಗೆ ವಿಶ್ವಸಂಸ್ಥೆಗೆ ನೆಹರೂ ಪತ್ರ

ಕಾಶ್ಮೀರದಲ್ಲಿರುವ ಅಮೆರಿಕದ ವೀಕ್ಷಕರನ್ನು ವಾಪಸು ಕರೆಸಿಕೊಳ್ಳುವಂತೆ ವಿಶ್ವ ಸಂಸ್ಥೆ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರಧಾನಿ ನೆಹರೂರವರು ಅಧಿಕಾರಯುತವಾಗಿ ಪತ್ರವನ್ನು ಬರೆಯಲಿರುವರೆಂದು ಗೊತ್ತಾಗಿದೆ

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣವೇ?

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂ ಸು ಪ್ರೋ] ಬೆಂಗಳೂರು ೧೩

ಈ ದಿನ ಶಾಸನ ಸಭೆಯಲ್ಲಿ ಶ್ರೀ ಎನ್ ಸಿ ನಾಗಯ್ಯ ರೆಡ್ಡಿಯವರ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಮತ್ತು ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಉತ್ತರವಿತ್ತು ಕೋಲಾರದ ಚಿನ್ನದ ಗಣಿಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿಲ್ಲವೆಂದೂ ಗಣಿಗಳಲ್ಲಿ ಆದ ಒಪ್ಪಂದವನ್ನು ಪಾಲಿಸುವುದರಲ್ಲಿ ಅಡಚಣೆಯಾಗುತ್ತಿರುವುದೆಂದೂ ಹೇಳಿದರು ಸರ್ಕಾರದವರು ಗಣಿಗಳ ಲೆಕ್ಕ ಪತ್ರಗಳ ತನಿಖೆ ನಡೆಸಲು ಕಂಪೆನಿಯವರು ವಿರೋಧಿಸಿರುವರೆಂದೂ ಶಾಸನ ಸಭೆಯ ಪೂರ್ಣ ಬೆಂಬಲ ದೊರೆತರೆ ಗಣಿಗಳನ್ನು ರಾಷ್ಟ್ರೀಕರಣ ಮಾಡಲು ಸಿದ್ಧವಾಗಿರುವುದಾಗಿಯೂ ಮುಖ್ಯ ಮಂತ್ರಿಗಳು ಹೇಳಿದರು

ಪೆಷಾವರಿನ ಮೇಯರಾಗಿ ಅಮೆರಿಕದ ಅಧಿಕಾರಿ

ಪೆಷಾವರ್ ನಗರದ ಮೇಯರಾಗಿ ೧೦ ದಿನಗಳ ಕಾಲ ಅಧಿಕಾರ ನಡೆಸಲು ಅನ್ ಆರ್ಬರ್ ನಗರದ ಮೇಯರರು ಪಾಕಿಸ್ತಾನಕ್ಕೆ ಬಂದಿರುತ್ತಾರೆ ಅದೇ ರೀತಿ ಪೆಷಾವರಿನ ಮೇಯರರು ಅಮೆರಿಕದ ಆರ್ಬರ್ ನಗರದಲ್ಲಿ ಅಧಿಕಾರ ವಹಿಸಲು ಹೋಗಿರುವರು

ಭೀಮಾವರದ ಬಾಲಯೋಗಿಗಳ ದರ್ಶನ

ಭೀಮಾವರದ ಬಾಲಯೋಗಿಯೊಬ್ಬರು ಮಹಾ ಜನರಿಗೆ ಕಳೆದ ಶಿವರಾತ್ರಿ ದಿನ ದರ್ಶನವಿತ್ತರು ಮಾರನೇ ದಿನವೂ ಸಹ ದರ್ಶನವೀಯುವಂತೆ ಜನರು ಅವರನ್ನು ಕೋರಲಾಗಿ ಅವರು ತಮ್ಮ ಕುಟೀರದಿಂದ ಹೊರಗಡೆ ಬಂದು ಮಧ್ಯಾಹ್ನ ೩ ಘಂಟೆವರೆಗೆ ಧ್ಯಾನ ಮಾಡುತ್ತಿದ್ದರು ಆದರೆ ಜನರು ಗಲಾಟೆ ಮಾಡಲಾಗಿ ಯೋಗಿಗಳು ಯಾರಿಗೂ ಗೊತ್ತಾಗದಂತೆ ತಮ್ಮ ಕುಟೀರವನ್ನು ಸೇರಿದರು ಮತ್ತೆ ಹೊರಕ್ಕೆ ಬರಲೇ ಇಲ್ಲ ಅವರೂ ಪಮ್ಮಿಡಿವಾಡದ ಬಾಲಯೋಗಿಗಳಂತೆಯೇ ಅದೇ ಕಾಲದಲ್ಲಿ ಅನ್ನಾಹಾರ ತ್ಯಜಿಸಿ ತಪಸ್ಸನ್ನಾರಂಭಿಸಿದರು

ಪಾಕಿಸ್ತಾನದಲ್ಲಿ ಪಿತೂರಿ ಸಂಬಂಧದಲ್ಲಿ ೫ ಜನರ ದಸ್ತಗಿರಿ

ಪಾಕಿಸ್ತಾನದ ಭದ್ರತಾ ಶಾಸನದ ಪ್ರಕಾರ ಸರಕಾರಿ ಪೋಲೀಸರು ಅಲ್ಲಿನ ಇಬ್ಬರು ಮಾಜಿ ಮಿಲಿಟರಿ ಅಧಿಕಾರಿಗಳನ್ನೂ ಮೂವರು ನಾಗರಿಕರನ್ನೂ ಬಂಧಿಸಿರುತ್ತಾರೆ ಅವರುಗಳು ಬುಡಮೇಲು ಚಳುವಳಿಯ ಪಿತೂರಿ ನಡೆಸುತ್ತಿದ್ದರೆಂದು ವರದಿಯಾಗಿದೆ ದಸ್ತಗಿರಿಯಾದವರ ಪೈಕಿ ೩ ಜನರ ಮನೆಯನ್ನು ಶೋಧಿಸಿ ಮೂರು ರಿವಾಲ್ವರುಗಳು ಎರಡು ಪಿಸ್ತೂಲುಗಳು ಮತ್ತು ೧೫೦೦ ರೌಂಡು ಮದ್ದನ್ನು ವಶಪಡಿಸಿಕೊಳ್ಳಲಾಗಿದೆ ಅವರ ಪೈಕಿ ಒಬ್ಬರು ಮೇಜರ್ ಜನರಲ್ಲರೆಂದೂ ದಸ್ತಗಿರಿಯಾದವರು ಒಬ್ಬ ವರ್ತಕನ ಸಹಕಾರ ಬೇಡಿದಾಗ ಪೋಲೀಸರಿಗೆ ಈ ವಿಷಯವು ವರದಿ ಮಾಡಲ್ಪಟ್ಟಿತೆಂದೂ ಹೇಳಲಾಗಿದೆ

ತೆರಿಗೆಗಳ ಬಗ್ಗೆ ಸತ್ಯಾಗ್ರಹದ ಬೆದರಿಕೆಗೆ ಬೆಲೆಯಿಲ್ಲ

ಆಯವ್ಯಯದ ಟೀಕೆಗಳಿಗೆ ಮುಖ್ಯ ಮಂತ್ರಿಗಳ ಉತ್ತರ

ಸ್ವಂ ಸು ಪ್ರೋ] ಬೆಂಗಳೂರು ೧೩

ಈ ದಿನ ಶಾಸನ ಸಭೆಯಲ್ಲಿ ಆಯವ್ಯಯದ ಮೇಲೆ ಸದಸ್ಯರುಗಳ ಟೀಕೆಗಳಿಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ೭೦ ನಿಮಿಷ ಕಾಲ ಮಾತನಾಡಿ ಉತ್ತರವಿತ್ತರು ವಿರೋಧ ಪಕ್ಷದ ನಾಯಕರಾದ ಶ್ರೀ ಕೆ ಮಹಮುದ್ ಇನಾಮರ ಸಲಹೆಯಂತೆ, ಸಂಸ್ಥಾನಕ್ಕೆ ಇತರ ಕನ್ನಡ ಪ್ರದೇಶಗಳು ಸೇರುವುದರಿಂದ ಅವುಗಳ ಬಗ್ಗೆ ಹಣಕಾಸಿನ ಜವಾಬ್ದಾರಿ ಎಷ್ಟಾಗುವುದು ಮುಂತಾದುವನ್ನು ಕುರಿತು ಪರಿಶೀಲನೆ ನಡೆಸಲು ಸಮಿತಿಯೊಂದನ್ನು ನೇಮಿಸಲು ಅವರು ಒಪ್ಪಿದರು

ಅಧಿಕ ತೆರಿಗೆ ವಿಧಿಸುವ ಬಗ್ಗೆ ಬಂದ ಟೀಕೆಗಳಿಗೆ ಉತ್ತರವಿತ್ತು, ಒಂದು ಕಡೆ ತೆರಿಗೆಗಳನ್ನು ಹೆಚ್ಚಿಸಕೂಡದೆಂದು ಒತ್ತಾಯಪಡಿಸಲಾಗುತ್ತಿರುವುದೆಂದೂ ಅದೇ ವೇಳೆಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ನಡೆಸಬೇಕೆಂದು ಹೇಳಲಾಗುತ್ತಿರುವುದೆಂದೂ, ಈ ಎರಡರಲ್ಲಿ ಮುಖ್ಯವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಸರ್ಕಾರದವರು ಆಲೋಚಿಸಿ ಅದರಂತೆ ತೆರಿಗೆಗಳನ್ನು ವಿಧಾಯಕ ಮಾಡಿರುವರೆಂದೂ ಹೇಳಿದರು ಅವಶ್ಯವಿದ್ದರೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ತೆರಿಗೆಗಳನ್ನು ಕಡಿಮೆ ಮಾಡಲಾಗುವುದೆಂದೂ ಅವರು ಭರವಸೆಯಿತ್ತರು

ಅಧಿಕ ತೆರಿಗೆ ಬಗ್ಗೆ ಸತ್ಯಾಗ್ರಹ ಮುಂತಾದ ಕ್ರಮಗಳು ಸರಿಯಲ್ಲವೆಂದೂ, ಅದು ತಪ್ಪೆಂದೂ ಹೇಳಿದರು ಪ್ರಜಾ ಸತ್ತಾತ್ಮಕ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ವರ್ತಿಸಬೇಕೆಂದು ಅವರು ತಿಳಿಸಿದರು

ಕಾಂಗ್ರೆಸ್ ಸದಸ್ಯರು ಮಾಡಿರುವ ಟೀಕೆಗಳನ್ನು ಕುರಿತು ಸಂಸ್ಥೆಯಲ್ಲಿ ಶಿಸ್ತು ಮತ್ತು ನಿಯಮಗಳನ್ನು ಪಾಲಿಸದಿದ್ದರೆ ಸಂಸ್ಥೆಗೇ ಕೇಡಾಗುವುದೆಂದು ಅವರು ಅಭಿಪ್ರಾಯಪಟ್ಟರು

ನ್ಯಾಯಾಂಗದಲ್ಲಿ ಆಡಳಿತವು ಪ್ರವೇಶಿಸುತ್ತಿರುವುದೆಂದು ಹೇಳುವುದು ಸರಿಯಲ್ಲವೆಂದೂ ಕಾನೂನು ಪ್ರಕಾರ ನಡೆಯುವಂತೆ ಸರ್ಕಾರವು ಹೈಕೋರ್ಟಿಗೆ ಹೇಳಿರುವುದಾಗಿಯೂ, ಹೈಕೋರ್ಟ ನವರು ಹಿಂದಿನಂತೆಯೇ ವರ್ತಿಸುವುದಾಗಿ ತಿಳಿಸಿರುವರೆಂದೂ ಅವರು ಹೇಳಿದರು

ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಡಾ|| ಮಹಾಜನರವರು ತಮಗೆ ಹೇಳಿರುವ ವಿಷಯಗಳನ್ನು ಸಭೆಗೆ ತಿಳಿಸುವಂತಿಲ್ಲವೆಂದೂ, ಸರ್ಕಾರ ಮತ್ತು ಹೈಕೋರ್ಟುಗಳ ಭಿನ್ನಾಭಿಪ್ರಾಯವನ್ನು ಸದಸ್ಯರು ದೊಡ್ಡದು ಮಾಡಬಾರದೆಂದೂ ಹೇಳಿದರು

ಮಧ್ಯ ಬರ್ಮದ ಗ್ರಾಮದಲ್ಲಿ ೧,೫೦೦ ಮನೆಗಳ ಭಸ್ಮ

ರಂಗೂನಿಗೆ ೩೫೦ ಮೈಲಿ ದೂರದಲ್ಲಿರುವ ಮಧ್ಯ ಬರ್ಮದ ಮೈಂಗಾನ್ ಎಂಬ ಗ್ರಾಮಕ್ಕೆ ಬೆಂಕಿ ಬಿದ್ದು ೧,೫೦೦ ಮನೆಗಳು ಭಸ್ಮವಾಗಿವೆ ಸಹಸ್ರಾರು ಜನರು ನಿರಾಶ್ರಿತರಾಗಿರುವರು ೫೦ ಲಕ್ಷ ರೂ ಆಸ್ತಿ ನಷ್ಟವಾಗಿರುವುದಾಗಿ ಹೇಳಲಾಗಿದೆ

ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳ ಸಭೆಗಾಗಿ ಆಲೋಚನೆ

ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳಲ್ಲಿ ಪರಸ್ಪರ ಆರ್ಥಿಕ ಸಹಕಾರವನ್ನು ಬೆಳೆಸಿಕೊಳ್ಳಲು ಸಾಧಕವಾಗುವಂತೆ ದಕ್ಷಿಣ ಆಫ್ರಿಕಾವೊಂದನ್ನು ಉಳಿದು ಮಿಕ್ಕ ಆಫ್ರಿಕಾ ರಾಷ್ಟ್ರಗಳು ಮತ್ತು ಏಷ್ಯಾ ರಾಜ್ಯಗಳ ಸಭೆಯನ್ನು ಕರೆಯಲು ತಾವು ಆಲೋಚಿಸುತ್ತಿರುವುದಾಗಿ ಇಂಡೋನೇಷ್ಯದ ಪ್ರಧಾನಿ ಡಾ|| ಅಲಿ ಶಸ್ತ್ರ ಅಮಿಜ ಧ್ವಜರವರು ಹೇಳಿರುತ್ತಾರೆ ಕಾಶ್ಮೀರದ ವ್ಯಾಜ್ಯ ಪರಿಹಾರದಲ್ಲಿ ಇಂಡೋನೇಷ್ಯ, ಬರ್ಮಾ ಮತ್ತು ಸಿಂಹಳಗಳು ಮಧ್ಯಸ್ಥಿಕೆ ಮಾಡುವುದಕ್ಕೆ ಅವರು ಒಪ್ಪಲಿರುವರೆಂದೂ ಹೇಳಲಾಗಿದೆ

ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಎಂಟನೇ ವಾರ್ಷಿಕೋತ್ಸವವು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ಮೊನ್ನೆ ನೆರವೇರಿತು ಶ್ರೀ ಎ ಆರ್. ರಾಮಚಂದ್ರಯ್ಯನವರಿಂದ ಪ್ರಾರ್ಥನೆ ಮತ್ತು ಶ್ರೀ ಆರ್ ವಾಸುದೇವಮೂರ್ತಿಯವರ ಸ್ವಾಗತ ಭಾಷಣವಾದ ನಂತರ, ಶ್ರೀ ಎಂ ಎಸ್ ನಂಜುಂಡರಾಯರು ಅನೇಕ ಗಣ್ಯ ಮಹನೀಯರಿಂದ ಬಂದ ಸಂದೇಶಗಳನ್ನೂ ನಿಲಯದ ವಾರ್ಷಿಕ ವರದಿಯನ್ನೂ ಓದಿದರು ವರದಿಯಲ್ಲಿ ಜಾತ್ಯತೀತ ನಿಲಯಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವೀಯಬೇಕೆಂದು ಕೋರಲಾಗಿತ್ತು ಮಹಾರಾಜಾ ಕಾಲೇಜಿನ ಡಾ|| ಎಂ ವಿ ಕೃಷ್ಣರಾಯರು ಭಾಷಣ ಮಾಡಿ, ಮಾನವರ ಅಪರ್ಯಂತರಂಗ ಆಶಾವಾದಿಗಳಾಗಿ ಬದುಕಬೇಕು ವರಿ ಧರ್ಮದ ಅನುಕರಣೆಯು ಅತ್ಯವಶ್ಯಕವೆಂದ ಹೇಳಿದರು, ಸಾರ್ವಜನಿಕ ವಿದ್ಯಾರ್ಥಿ ನಿಲಯವು ಸರ್ವಧರ್ಮ ಸಮನ್ವಯದ ಪ್ರಶಸ್ತ ಕರ್ಮವನ್ನು ಕೈಗೊಂಡಿದೆ ಎಂದು ತಿಳಿಸಿದರು ನಿಲಯದ ಧ್ಯೇಯ ಸಾಧನೆಗಳನ್ನು ಅಭಿನಂದಿಸಿ, ಅದರ ಸ್ಥಾಪಕರಾಗಿರುವ ಶ್ರೀ ಟಿ ಎಸ್ ಸುಬ್ಬಣ್ಣನವರ ನಿಸ್ವಾರ್ಥ ಸೇವೆಯನ್ನು ಅವರು ಪ್ರಶಂಸಿಸಿದರು ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ, ನಿಲಯದ ಪುರೋಭಿವೃದ್ಧಿಗಾಗಿ ಸರ್ಕಾರದಿಂದಾದಷ್ಟು ಸಹಾಯ ಮಾಡುವುದಾಗಿ ತಿಳಿಸಿದರು. ವಂದನಾರ್ಪಣೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ದಳವಾಯಿ ಪ್ರೌಢಶಾಲಾ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ದಳವಾಯಿ ಹೈಸ್ಕೂಲು ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಇದೇ ತಿಂಗಳ ೩ನೇ ವಾರದಲ್ಲಿ ನಡೆಯುವುದರಿಂದ ಸಂಘದ ಸದಸ್ಯರಾದ ಹಳೇ ವಿದ್ಯಾರ್ಥಿಗಳು ತಮ್ಮ ವಿಳಾಸ ಮತ್ತು ಮುಂಬರುತನ ಶುಲ್ಕವನ್ನು ಹೈಸ್ಕೂಲಿನಲ್ಲಿರುವ ಸಂಘದ ಕಾರ್ಯದರ್ಶಿಯವರಲ್ಲಿ ಕೊಟ್ಟು ರಿಜಿಸ್ಟರ್ ಮಾಡಿಸಬೇಕಾಗಿ ಸಂಘದ ಕಾರ್ಯದರ್ಶಿಯವರು ಕೋರಿರುತ್ತಾರೆ.

ಆಫ್ರಿಕದ ಜನರ ಬಗ್ಗೆ ಕ್ರೌರ್ಯಕ್ಕಾಗಿ ೫ ವರ್ಷ ಸಜಾ

ಕನ್ಯದ ಆಫ್ರಿಕದ ಜನರ ಬಗ್ಗೆ ಕ್ರೌರ್ಯದಿಂದ ನಡೆದುಕೊಂಡುದರಿಂದು ನೈರೋಬಿಯಲ್ಲಿರುವ ಬ್ರಿಟಿಷ್ ಸೈನ್ಯದ ಕ್ಯಾಪ್ಟನ್ ಗೆರಾಲ್ಡ್ ಗ್ರಿಫಿತ್ಸ್‌ರವರಿಗೆ ೫ ವರ್ಷ ಕಠಿಣ ಸಜವನ್ನು ವಿಧಿಸಲಾಗಿದೆ

ನೆಹರೂರವರಿಗೆ ಅಸ್ವಸ್ಥತೆ

ಪ್ರಧಾನಿ ನೆಹರೂರವರು ಸ್ವಲ್ಪ ಅಸ್ವಸ್ಥತೆಯಿಂದ ಕೂಡಿರುತ್ತಾರೆ. ಅವರು ನೆನ್ನೆ ಪಾರ್ಲಿಮೆಂಟ್ ಸಭೆಗೆ ಹೋಗಿರಲಿಲ್ಲ

ಬೆಂಗಳೂರಿನಲ್ಲಿ ಜಪಾನ್ ಉಪ ರಾಯಭಾರಿ ಕಛೇರಿ

ಬೆಂಗಳೂರಿನಲ್ಲಿ ಗೌರವ ಉಪ ರಾಯಭಾರಿ ಕಛೇರಿಯನ್ನು ಜಪಾನ್ ಸರ್ಕಾರದವರು ಸ್ಥಾಪಿಸಲಿರುವರು

೩,೦೦೦ ಜನ ಅಂಗವಿಕಲರಿಗೆ ಅನ್ನದಾನ

ರಾಜಧಾನಿಯ ಇಲವಾಲದ ರಸ್ತೆಯಲ್ಲಿರುವ ಚಿತ್ರರಂಜನ ಪ ಕಲಿನಲ್ಲಿ ಮೊನ್ನೆ ಶ್ರೀ ಮದ್ ಸ್ಟುಡಿಯೊವಿನ ಪ್ರಾರಂಭದ ಸಂಬಂಧವಾಗಿ ನೆನ್ನೆ ೩,೦೦೦ ಜನ ಅಂಗವಿಕಲರು ಮುಂತಾದ ಬಡವರಿಗೆ ಅನ್ನದಾನವನ್ನು ಏರ್ಪಡಿಸಲಾಗಿತ್ತು ಹವನ ಹೋಮಾದಿಗಳು ನಡೆದುವು ಬ್ರಹ್ಮ ಚೈತನ್ಯ ಶಿಲಾ ವಿಗ್ರಹದ ಪ್ರತಿಷ್ಠೆ

ರಾಜಧಾನಿಯ ಚಾಮುಂಡಿಪುರದ ವಿಠಲ ಚೈತನ್ಯ ಮಂದಿರದಲ್ಲಿ ಮೊನ್ನೆ ಶ್ರೀ ಗೋಂದಾವಲೇಕರ್ ಬ್ರಹ್ಮಚೈತನ್ಯರ ಶಿಲಾ ವಿಗ್ರಹವನ್ನು ಶ್ರೀ ಜ್ಞಾನಾನಂದ ಸ್ವಾಮಿಯವರ ನೇತೃತ್ವದಲ್ಲಿ ಸ್ಥಾಪಿಸಲಾಯಿತು ಶಿವರಾಂಪೇಟೆಯ ಶ್ರೀ ಸೋಮಯಾಜಿಗಳು ಆಚಾರ್ಯರಾಗಿದ್ದರು ಬ್ರಾಹ್ಮಣರ ಸಂತರ್ಪಣೆಯೂ ನಡೆಯಿತು

ಹರಿಜನರಿಗೆ ಕಿರುಕುಳವೇ ?

ಮೈಸೂರು ಜಿಲ್ಲಾ ಹರಿಜನರ ಯೋಗಕ್ಷೇಮದ ವ್ಯವಸ್ಥಾಪಕರಾದ ಶ್ರೀ ಕೇಶವರಾಂರವರು ಈ ರೀತಿ ಪತ್ರ ಬರೆದಿರುತ್ತಾರೆ — ಮೈಸೂರು ತಾಲ್ಲೂಕ ಜಯಪುರ ಹೋಬಳಿ ದೂರ ಗ್ರಾಮದ ವೀರಶೈವ ಮಠದ ಇಬ್ಬರು, ಗ್ರಾಮದ ಹರಿಜನರಿಗೆ ಆಹಾರದ ಅಭಾವದ ಕಾಲದಲ್ಲಿ ಕಲಾ ೧೦ ಸೇರಿನಂತೆ ದವಸ ಕೊಟ್ಟು, ಎರಡು ದಿನ ತಮ್ಮ ಹೊಲಗಳನ್ನು ಕೂಲಿ ಮಾಡುವಂತೆ ತಿಳಿಸಿ ಅವರ ತೆಯೇ ಹರಿಜನರು ಕೆಲಸ ಮಾಡಿದ್ದರೂ, ಅವರಿಂದ ಕಲಾಕ್ಕೆ ೬೦ ರಂತೆ ಹಣವನ್ನು ಕೇಳಿ ಅವರುಗಳ ಮನೆಗೆ ಕಂದಾಯವನ್ನೊಟ್ಟನ್ನು ನುಗ್ಗಿಸಿ, ಜಾನುವಾರುಗಳನ್ನು ಸಾಗಿಸಿಕೊಂಡುಹೋಗಲು ಪ್ರಯತ್ನಿಸಿ, ಇದನ್ನು ತಡೆಗಟ್ಟಲು ಬಂದ ಹರಿಜನರ ನ ಹಿರಿಯರನ್ನು ಅವಮಾನಗೊಳಿಸಿರುತ್ತಾರೆ ಇದನ್ನು ತಾಳಲಾರದೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಅರಿಕೆ ಮಾಡಿಕೊಳ್ಳಲಾಯಿತು ಅದಕ್ಕಾಗಿ ಮಹದೇವಪ್ಪ ಮತ್ತು ಮುನಿಯಪ್ಪ ಎಂಬ ಹೆಂಗಸರನ್ನು ಹೆದರಿಸಿ, ಅವರ ಬಗ್ಗೆ ಅಶ್ಲೀಲವಾಗಿ ನಡೆದುಕೊಂಡಿರುತ್ತಾರೆ ಹೀಗೆ ನಾನಾ ರೀತಿ ಹರಿಜನರಿಗೆ ಕಿರುಕುಳಗಳಾಗುತ್ತಿವೆ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ವಿಚಾರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ

ಮೈಸೂರು ಮೃಗಾಲಯಕ್ಕೆ ೩ ಚಿಂಪಾಂಜಿಗಳು

ಜರ್ಮನಿಯ ಹ್ಯಾನೋವರ್ ನಗರದಿಂದ ೫ ಚಿಂಪಾಂಜಿಗಳ (ಕಪಿಗಳ ಜಾತಿಗೆ ಸೇರಿದುವು) ನ್ನು ಕಲ್ಕತ್ತಾವಿಗೆ ವಿಮಾನದಲ್ಲಿ ತರಲಾಗಿದೆ. ಆ ಪೈಕಿ ಮೂರು ಪ್ರಾಣಿಗಳನ್ನು ಮೈಸೂರಿನ ಮೃಗಾಲಯಕ್ಕೂ ಉಳಿದ ಎರಡನ್ನು ತಿರುವನಂತಪುರಕ್ಕೂ ರವಾನಿಸಲಾಗುವುದು

ದುರ್ಗಾದೇವಿಯವರಿಗೆ ಮಂಗಳಾರತಿ

ರಾಜಧಾನಿಯ ನಜರ್‌ಬಾದ್ ಮೊಹಲ್ಲಾದಲ್ಲಿರುವ ಶ್ರೀ ದುರ್ಗಾದೇವಿಯವರ ಜಾತ್ರೆ ಸಂಬಂಧವಾಗಿ ಅಮ್ಮನವರಿಗೆ ಮಹಾ ಮಂಗಳಾರತಿಯು ಇದೇ ೧೬ ನೇ ತಾ|| ಮಂಗಳವಾರ ಸಂಜೆ ೭|| ಗಂಟೆಗೆ ಪೌರಸಭಾ ಕಮೀಷನರಾದ ಶ್ರೀ ಎಲ್ ಲಕ್ಷ್ಮಣರಾಯರ ನೇತೃತ್ವದಲ್ಲಿ ಏರ್ಪಾಡಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ವ ೨೮ ವಾರ್ತೆ ೨೦ ರೆಕಾರ್ಡ್ ಸಂಗೀತ ವ ಧ್ಯಾನ್ಯ ೧—೩೦ ಮತ್ತು ೧ ೫೦ ಪಿಟೀಲು ೨ ನಿವ ಮೆಚ್ಚಿನ ಗೀತಗಳು ಸಂಜೆ ೫ ೩೦ ಮತ್ತು ೭ ೫ ದಿ ಎಸ್ ರಾಘವನ್ ಸಂಗೀತ ೬ ಗಾನ ವಿಹಾರ ೬ ೧೫ ನೃತ್ಯ ಮತ್ತು ನಮ್ಮವರು ೭—೩೦ ನೃತ್ಯ ಗೀತ ೮ ಚಂದ್ರ ವೈದ್ಯನಾಥ ಭಾಗವತರ್ ಸಂಗೀತ ೯ ರೆಕಾರ್ಡ್ ಸಂಗೀತ ೯ ೩೦ ಕೆ ವಿ ಪುಟ್ಟಪ್ಪನವರ ಕನ್ನಡ ನಾಟಕ—ಬಿರುಗಾಳಿ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಆ
ಕಡಲೆಕಾಯಿ	೧೬ ೮ ೦	೨೩ ೪ ೦
ಹರಳುಬೀಜ	೨೫ ೦ ೦	೩೦ ೮ ೦
ಹುಚ್ಚೆಳ್ಳು	೪೦ ೦ ೦	೪೫ ೮ ೦
ಹೊಂಗೇಬೀಜ	೧೫ ೧೪ ೦	೨೪ ೧೨ ೦
ಹುರುಳಿ	೨೭ ೬ ೦	೨೮ ೮ ೦
ಹೆಸರು	೩೭ ೮ ೦	೪೨ ೨ ೦
ಹಲಸಂದೆ	೩೬ ೦ ೦	೪೪ ೨ ೦
ಅವರೆ	೩೬ ೧೨ ೦	
ಧನಿಯ	೨೭ ೨ ೦	೨೨ ೧೨ ೦
ಕೊಬರಿ	೨೩ ೦ ೦	
ಸಾಸಿವೆ ಬೀಜ	೨೪ ೨ ೦	೩೦ ೮ ೦
ಹುಣಸೇಬೀಜ	೧೨ ೧೦ ೦	೧೩ ೪ ೦
ಹುಣಸೇಹಣ್ಣು	೭ ೫ ೦	೯ ೧೫ ೦
ಸೀಗೆಕಾಯಿ	೨ ೨ ೦	೫ ೦ ೦
ಮೆಣಸಿನಕಾಯಿ	೨೭ ೪ ೦	
ತೆಂಗಿನಕಾಯಿ ೧೦೦೦	೨೦೭ ೦ ೦	೨೬೦ ೦ ೦

ಡಿ. ಬನುಮಯ್ಯನವರ ಪ್ರೌಢಶಾಲೆಯ ರಜತೋತ್ಸವ

ಮೈಸೂರು ೧೩

ರಾಜಧಾನಿಯ ಡಿ ಬನುಮಯ್ಯನವರ ಪ್ರೌಢಶಾಲೆಯ ರಜತೋತ್ಸವವು ಇಂದು ಮತ್ತು ನಾಳೆದ್ದು ಶಾಲೆಯಲ್ಲಿ ನೆರವೇರುವುದು. ಈ ಸಂಜೆ ೫ ಗಂಟೆಗೆ ಶ್ರೀಮನ್ ಮಹಾರಾಜರು ಉತ್ಸವವನ್ನು ನೆರವೇರಿಸುವರು ವಿಜ್ಞಾನ ವಿಭಾಗದ ಕಟ್ಟಡದ ಅಸ್ತಿಭಾರವನ್ನು ಶ್ರೀಮನ್ ಮಹಾರಾಜರವರು ಹಾಕುವರು ನಾಳೆ ಸಂಜೆ ೫ ಗಂಟೆಗೆ ಬೆಂಗಳೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಟಿ ರಂಗಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯುವುದು.

ನಾಳಿದ್ದು ಸಂಜೆ ೫ ಗಂಟೆಗೆ ಶಾಲಾ ಸ್ಥಾಪಕರ ದಿನಾಚರಣೆಯು ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ವಯಸ್ಕರ ಶಿಕ್ಷಣ ಕೇಂದ್ರದ ಆರಂಭೋತ್ಸವ

ನಗರದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಕೃಷ್ಣರಾಜ ಮೊಹಲ್ಲೆಯ ಹೊಸ ಕೇರಿಯಲ್ಲಿ ಒಂದು ಕೇಂದ್ರವನ್ನು ತೆರೆಯಲಾಗಿದೆ ಅದರ ಆರಂಭೋತ್ಸವವನ್ನು ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿ ನಡೆಸಿಕೊಟ್ಟರು. ಪ್ರಾರ್ಥನೆಯಾದನಂತರ ನಗರ ವಯಸ್ಕರ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದರು ಆನಂತರ ವಯಸ್ಕರ ಶಿಕ್ಷಣ ಕೇಂದ್ರದ ಕೆಲಸ ಕಾರ್ಯಗಳ ವಿವರಣೆಯನ್ನೂ, ಅದರ ಉದ್ದೇಶವನ್ನೂ ಪ್ರಾಂತಾಧಿಕಾರಿಗಳಾದ ಶ್ರೀ ಬಿ. ವಿ ಸತ್ಯನಾರಾಯಣರಾವರು ವಿವರಿಸಿದರು ಮೈಸೂರು ಆಕ್ಸನ ಬಳಗದ ಶ್ರೀಮತಿ ಪುಟ್ಟತಾಯಮ್ಮನವರು ಕೇಂದ್ರದ ಆರಂಭೋತ್ಸವವನ್ನು ನಡೆಸಿದರು ಅಧ್ಯಕ್ಷರು ಮಾತನಾಡಿ, ಕೇವಲ ಐದು ತಿಂಗಳೊಳಗಾಗಿ ವಯಸ್ಕರ ಶಿಕ್ಷಣದ ಪದ್ಧತಿಯಂತೆ ಅತಿ ಸುಲಭವಾಗಿ ವಯಸ್ಕರು ಅಕ್ಷರಸ್ಥರಾಗಬಹುದೆಂದೂ, ವಯಸ್ಕರೆಲ್ಲರೂ ಅಕ್ಷರಸ್ಥರಾಗಬೇಕೆಂದೂ ತಿಳಿಸಿದರು ವಯಸ್ಕರ ಶಿಕ್ಷಣ ಸಮಿತಿಯವರಿಂದ ಚಲನ ಚಿತ್ರ ಪ್ರದರ್ಶನವಾದನಂತರ ಸಮಾರಂಭವು ಮುಕ್ತಾಯಗೊಂಡಿತು

ನೋಟಿಫಿಕೇಷನ್

ನಂ ಸಿ 2-124 53 ಮುಕ್ಕಾಂ 8-3-54

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಜಿಲ್ಲೆಯಲ್ಲಿ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಿಗೆ ಸೇರಿದ ಕೆಳಗೆ ಪಟ್ಟಿಯಲ್ಲಿ ಕಂಡ ಅಮೃತಮಹಲ್ ಕಾವಲು ಜಮೀನುಗಳು ರೈತರಿಗೆ ಕಾಲಾವಧಿ ಗುತ್ತಿಗೆಗೆ ಕೊಡಲಾಗುತ್ತವೆ ಆ ಜಮೀನುಗಳು ವ್ಯವಸಾಯಕ್ಕೆ ಕೊಡಲ್ಪಡುತ್ತವೆ ಸಾಗುವಳಿಗೆ ಜಮೀನು ಪಡೆಯಲು ಇಷ್ಟಪಡುವ ಕೆಳಗೆ ಕಂಡ ಐದು ವರ್ಗಕ್ಕೆ ಸೇರಿದವರು ಮಾತ್ರ "ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಿಗೆ" ವಿಧಾಯಕವಾಗಿರುವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು ಅರ್ಜಿ ಸಲ್ಲಿಸಲು ಅರ್ಹರು ಯಾರೆಂದರೆ ——

1) ಜಮೀನು ಹೊಂದಲು ಅರ್ಹರು ಪಡೆದಿರುವ ನಿವೃತ್ತ ಸೈನಿಕರು 2) ಜಮೀನು ಇಲ್ಲದ ರೈತರು 3) ಹಿಮ್ಮ ವರ್ಗಕ್ಕೆ ಸೇರಿದವರು 4) ಸಾಕಷ್ಟು ಜಮೀನು ಇಲ್ಲದವರು 5) ರಾಜಕೀಯದಲ್ಲಿ ನೊಂದ ಮೈಸೂರು ಡಿಸ್ಟ್ರಿಕ್ಟ್‌ನವರು 6) ಮುಳುಗಡೆ ಜಮೀನು ರೈತರು

ಅರ್ಜಿಯನ್ನು ಈ ತಾರೀಖು ಮೊದಲ್ಗೊಂಡು ಒಂದು ತಿಂಗಳ ಒಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್‌ರವರಿಗೆ ಹಾಕಿಕೊಳ್ಳಬೇಕು ಅರ್ಜಿದಾರರು ಕೇಳಬಹುದಾದ ಯಾವ ಒಂದು ಕಾವಲಿನಲ್ಲಿ ಜಮೀನು ಇಲ್ಲದೆ ಹೋಗಬಹುದು ಆದ್ದರಿಂದ ಪ್ರತಿಯೊಬ್ಬ ಅರ್ಜಿದಾರರೂ ಅವರು ತಮ್ಮ ಮೊಟ್ಟಮೊದಲ ಪಸಂದ್ ಮಾಡುವ ಜಮೀನು ಕಾವಲ್ ಹೆಸರನ್ನು ಮೊದಲು ಸ್ಥಾನದಲ್ಲಿಯೂ, ಅಲ್ಲಿ ಜಮೀನು ಇಲ್ಲದಿದ್ದರೆ ಅವರು ಇಷ್ಟಪಡುವ ಇತರ ಕಾವಲುಗಳ ಹೆಸರನ್ನು 2-3 ನೆಯ ಸ್ಥಾನಗಳಲ್ಲಿಯೂ ಸೂಚಿಸಬೇಕು ಮುಗಿದ ಗಡುವಿನನಂತರ ಬರತಕ್ಕ ಅರ್ಜಿಗಳಿಗೆ ಗಮನ ಕೊಡಲಾಗುವುದಿಲ್ಲ ವಿಧಾಯಕವಾದ ಅರ್ಜಿ ಫಾರಂ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರ ಆಫೀಸಿನಲ್ಲಾಗಲೀ ಮೈಸೂರು ಮತ್ತು ನಂಜನಗೂಡು ಸಬ್ ಡಿವಿಜನ್ ಆಫೀಸುಗಳಲ್ಲಿಯಾಗಲೀ ಅಥವಾ ಮೈಸೂರು ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿಯಾಗಲೀ ನೋಡಬಹುದು ದರಖಾಸ್ತುದಾರರು ಈ ಫಾರಂ ಅನ್ನು ನಕಲು ಮಾಡಿಕೊಳ್ಳಬಹುದೇ ಹೊರತು ಫಾರಂ ಸಪ್ಲೈ ಮಾಡಲಾಗುವುದಿಲ್ಲ

ಈ ಮೊದಲೇ ಈ ಕಾವಲುಗಳಲ್ಲಿ ಜಮೀನುಗಳನ್ನು ಅಪೇಕ್ಷಿಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಸದರಿ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ ಆದಕಾರಣ ಅರ್ಜಿ ಕೊಟ್ಟವರು ಹೊಸ ಫಾರಂ ರೀತ್ಯಾ ಪುನಃ ಅರ್ಜಿಯನ್ನು ಸಲ್ಲಿಸಬೇಕು ಹೆಚ್ಚಿನ ವಿವರಗಳನ್ನು ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಗಳಲ್ಲಿ ಪಡೆಯಬಹುದು

—: ಕಾವಲುಗಳ ಹೆಸರು :—

1 ಅಸ್ವತ್ಥ ಕಾವಲು 2 ಉದ್ಬೂರು ಕಾವಲು 3 ಮೋದೂರು ಬೆಟ್ಟೂರು ಕಾವಲು. 4 ಮುರೂರು ಕಾವಲು. 5. ಹೊಸಕೋಟೆ ಕಾವಲು 6 ತಿಂಮನಹಳ್ಳಿ ಕಾವಲು 7 ಕಲ್ಲಹಳ್ಳಿ ಕಾವಲು, ಹುಣಸೂರು ತಾಲ್ಲೂಕು 8 ಹನುಮನಕೋಟೆ ಕಾವಲು, ಹೆಗ್ಗಡದೇವನಕೋಟೆ ತಾಲ್ಲೂಕು

ಎಂ ಎಸ್. ಸ್ವಾಮಿನಾಥನ್,

ಡೆಪ್ಯುಟಿ ಕಮೀಷನರ್ ಮೈಸೂರು ಡಿಸ್ಟ್ರಿಕ್ಟ್

SRI CHAMUNDESWARI BHAVAN

YELWAL ROAD MYSORE

FROM 3-3-1954

Special Arrangements for HOT SEASON at Up stairs, Specially Decorated Hall

Daily from 4 P M to 7 P M

Fruit Salad Ice-Cream Banana Vanilla Almond and Gulab Ice-Creams

Almond Cool Fruit Juices Pineapple Orange, Lemon Tomato and Grape

Milk Syrups, Sweet Curds Syrups Vegetable Cutlets, Sandwiches Toast Butter and Potato Chips

★

OUR PLANTATION 'A' COFFEE A SPECIALITY

★ Our Special Set Dosa available in the Mornings & Evenings

★ Special Menus in Meals to suit Hot Weather

★ Concession to permanent Boarders in Meals Section

Edited, Printed and Published by A R Nagarajan at Sadhvi Press, D.Subbiah Road, Mysore

ಟೆಲಿಫೋನ್ ನಂ. 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 6 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI . LEADING NATIONALIST DAILY OF MYSORE

ಸಂಪುಟ ೧೨] MYSORE : SUNDAY 14-3-1954 : ಮೈಸೂರು : ಭಾನುವಾರ ೧೪-೩-೧೯೫೪ [ಸಂಚಿಕೆ ೨೦೨

ಅಮೆರಿಕದ ಅಣು ಕೇಂದ್ರದಿಂದ ರಹಸ್ಯ ಪತ್ರಗಳ ಮಾಯ

ಹೋಟೇಲುಗಳ ಮೇಲೆ ಮಾರಾಟ ತೆರಿಗೆ ವಿಧಿಸಬಾರದು

ಸರ್ಕಾರಕ್ಕೆ ನಗರದ ಹೋಟೇಲು ಮಾಲೀಕರ ಮನವಿ

ಮೈಸೂರು ೧೩.

ರಾಜಧಾನಿಯ ಹೋಟೇಲುಗಳ ಮಾಲೀಕರ ಸಭೆಯು ಮೊನ್ನೆ ಬೊಂಬಾಯಿ ಆನಂದ ಭವನ ಹೋಟೇಲು ಮಾಲೀಕರಾದ ಶ್ರೀ ರೇವತಿ ಪ್ರಸಾದರ ಅಧ್ಯಕ್ಷತೆಯಲ್ಲಿ ನಡೆಯಿತು. ೭,೫೦೦ ರೂ ಗಿಂತ ಹೆಚ್ಚು ಆಗುವ ವ್ಯಾಪಾರದ ಮೇಲೆ ಶೇ|| ೧೦ ರಂತೆ ತೆರಿಗೆ ವಿಧಿಸಲು ಸರ್ಕಾರದವರು ಆಲೋಚಿಸಿರುವುದನ್ನು ಸಭೆಯು ಪರಿಶೀಲಿಸಿ, ಈಗಾಗಲೇ ಹೋಟೇಲುಗಳ ಮೇಲೆ ನಾನಾ ವಿಧವಾದ ತೆರಿಗೆ ಮತ್ತು ಸುಂಕಗಳನ್ನು ಹಾಕಲಾಗಿರುವುದರಿಂದ ಆಯವ್ಯಯ ಪಟ್ಟಿಯಲ್ಲಿ ಸೂಚಿಸಿರುವಂತೆ ಹೊಸ ತೆರಿಗೆಯನ್ನು ಹಾಕುವುದರಿಂದ ಮಾಲೀಕರಿಗೆ ತುಂಬಾ ನಷ್ಟವಾಗುವುದೆಂದು ಅಭಿಪ್ರಾಯಪಡಲಾಯಿತು. ನೂತನ ತೆರಿಗೆಯನ್ನು ವಿಧಿಸದಂತೆ ಸರ್ಕಾರವನ್ನು ಪ್ರಾರ್ಥಿಸಲು ಮನವಿಯೊಂದನ್ನು ಸಲ್ಲಿಸಬೇಕೆಂದು ನಿರ್ಧಾರವಾಯಿತು. ಹೊಸ ತೆರಿಗೆಯನ್ನು ವಿಧಾಯಕ ಮಾಡಿದರೆ ಹೋಟೇಲುಗಳನ್ನು ಮುಚ್ಚಬೇಕಾಗುವ ಪರಿಸ್ಥಿತಿ ಒದಗುವುದೆಂದೂ, ಈಗ ವಿಧಿಸಬೇಕೆಂದಿರುವಷ್ಟು ತೆರಿಗೆಯನ್ನು ಇಡೀ ಭಾರತದಲ್ಲೇ ಎಲ್ಲೂ ಹಾಕಿಲ್ಲವೆಂದೂ, ಸರ್ಕಾರದವರು ಹೋಟೇಲಿನವರ ಪರಿಸ್ಥಿತಿಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು

ಯುವತಿಯ ಆತ್ಮಹತ್ಯೆ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕೆಲಸಗಾರ ಶ್ರೀ ಚಿಕ್ಕತಿಮ್ಮಯ್ಯ ಎಂಬುವರ ಪತ್ನಿ ೧೭ ವರ್ಷದ ಪುಟ್ಟಮ್ಮನು ಕಳೆದ ಗುರುವಾರ ಗಂಡನು ಕೆಲಸಕ್ಕೆ ಹೋದನಂತರ ಊರಪ್ಪಗೆರೆಯಲ್ಲಿರುವ ತನ್ನ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ. ತೌರುಮನೆಗೆ ಬಹು ದಿನಗಳಿಂದಲೂ ತನ್ನನ್ನು ಕಳುಹಿಸಲಿಲ್ಲವೆಂದು ಜಿಗುಪ್ಸೆಗೊಂಡು ಯುವತಿಯು ತನ್ನ ಪ್ರಾಣ ತೆಗೆದುಕೊಂಡಿರುವುದಾಗಿ ಹೇಳಲಾಗಿದೆ

ಕರಾಚಿಗೆ ಇರಾಕ್ ದೊರೆಯ ಆಗಮನ

ಇರಾಕಿನ ದೊರೆ ಫೈಸಲ್‌ರವರು ೧೩ ದಿನಗಳ ಭೇಟಿಗಾಗಿ ಕರಾಚಿಗೆ ಆಗಮಿಸಿರುತ್ತಾರೆ ಅವರನ್ನು ಪಾಕಿಸ್ತಾನದ ಗೌರ್ನರ್ ಜನರಲ್ಲರು ಮೊನ್ನೆ ಸ್ವಾಗತಿಸಿದರು

ಮೈಸೂರು ರೈಲ್ವೆ ವರ್ಕ್‌ಷಾಪಿನಲ್ಲಿ ವರ್ಷಕ್ಕೆ ೧೨ ಗಾಡಿಗಳ ತಯಾರಿ

ಮೈಸೂರಿನಲ್ಲಿರುವ ರೈಲ್ವೆ ವರ್ಕ್‌ಷಾಪಿನಲ್ಲಿ ವರ್ಷಕ್ಕೆ ೧೨ ಪ್ರಯಾಣಿಕರ ಗಾಡಿಗಳನ್ನು ತಯಾರಿಸಲಾಗುತ್ತಿರುವುದೆಂದು ರೈಲ್ವೆ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ. ಮರದಿಂದಾದ ಗಾಡಿಯು ಸಾಮಾನ್ಯವಾಗಿ ೩೦ ವರ್ಷ ಬಾಳಿಕೆ ಬರುವುದಾಗಿಯೂ, ಪೂರ್ಣವಾಗಿ ಲೋಹದಿಂದಲೇ ಆದ ಗಾಡಿಗೆ ಮರದಿಂದಾದ ಗಾಡಿಗಿಂತ ೧೩ ಸಾವಿರ ರೂ ಹೆಚ್ಚು ಖರ್ಚಾಗುವುದೆಂದೂ ಅವರು ಹೇಳಿದರು

ಶಾಂತಿಯಿಂದ ವಿಶ್ವದ ಸಮಸ್ಯೆ ಸಾಧಿಸಲು ಮಾಲೆಂಕಾಫರ ಆಸೆ

ರಷ್ಯಕ್ಕೆ ಈಗ ಬೇಕಾಗಿರುವುದು ಪಾಶ್ಚಾತ್ಯ ರಾಷ್ಟ್ರಗಳೊಡನೆ ಆರ್ಥಿಕ ಸಹಕಾರವೇ ಹೊರತು ಒಳಗುದಿ ಯುದ್ಧವಲ್ಲವೆಂದ ರಷ್ಯದ ಪ್ರಧಾನಿ ಜಾರ್ಜ್ ಮಾಲೆಂಕಾಫರು ನುಡಿದಿರುತ್ತಾರೆ ಜಿನೀವಾದಲ್ಲಿ ಮುಂದಿನ ತಿಂಗಳು ಸೇರುವ ಸಮ್ಮೇಳನಕ್ಕೆ ರಷ್ಯವು ವಿಶೇಷ ಮಹತ್ವವನ್ನು ಕೊಡುವುದೆಂದ ಅವರು ಹೇಳಿರುತ್ತಾರೆ ಎಂತಹ ಕ್ಲಿಷ್ಟಕರವಾದ ಅಂತರ ರಾಷ್ಟ್ರೀಯ ಸಮಸ್ಯೆಯಿದ್ದರೂ ಅದನ್ನು ಶಾಂತ ರೀತಿಯಿಂದಲೇ ರಷ್ಯವು ಪರಿಹರಿಸಬೇಕೆಂದೂ ಅವರು ತಿಳಿಸಿರುತ್ತಾರೆ ರಷ್ಯದೊಡನೆ ವಿಶೇಷ ಸೌಹಾರ್ದ ಬೆಳೆಸಲು ಇಚ್ಛಿಸುತ್ತಿರುವ ಬ್ರಿಟನ್ನಿನ ಬಗ್ಗೆ ಅವರು ಪ್ರಶಂಸೆ ಮಾಡಿದ್ದಾರೆ

ಪರ್ಷಿಯದ ಮಾಜಿ ಮಂತ್ರಿಗೆ ಚೂರಿ ಇರಿತ

ಪರ್ಷಿಯದಲ್ಲಿ ಪದಚ್ಯುತ ಪ್ರಧಾನಿ ಡಾ|| ಮುಸಾದಿಕ್ಕರ ಮಂತ್ರಿಮಂಡಲದಲ್ಲಿ ವಿದೇಶಾಂಗ ಸಚಿವರಾಗಿದ್ದ ಹುಸೇನ್ ಫಾತೆಮಿಯವರನ್ನು ನೆನ್ನೆ ಬೆಳಿಗ್ಗೆ ಬಂಧಿಸಿ ರಾತ್ರಿ ಜೈಲಿಗೆ ಕರೆದೊಯ್ಯುತ್ತಿದ್ದಾಗ ಷಹಾರವರ ಹಲವು ಬೆಂಬಲಿಗರು ಫಾತೆಮಿಯವರನ್ನು ಚೀವರಿ ಮಾಡಿ ಎರಡು ಬಾರಿ ಚೂರಿಯಿಂದ ಇರಿದರೆಂದೂ, ಅದರ ಪರಿಣಾಮವಾಗಿ ಅವರ ದೇಹದಲ್ಲಿ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರೆಂದೂ ವರದಿಯಾಗಿದೆ ಮುಸಾದಿಕ್ಕರ ಪದಚ್ಯುತಿಯಾದಾಗಿನಿಂದಲೂ ಹುಸೇನ್ ಫಾತೆಮಿಯವರು ತಲೆಮರೆಸಿಕೊಂಡಿದ್ದು ಅವರನ್ನು ಹುಡುಕಲಾಗುತ್ತಿತ್ತೆಂದೂ, ಇತ್ತೀಚೆಗೆ ನಡೆದ ಪರ್ಷಿಯದ ಮಹಾ ಚುನಾವಣೆಯಲ್ಲಿ ಹಲವು ಪ್ರದರ್ಶನಕಾರರು, ಅಜ್ಞಾತವಾಸದಲ್ಲಿರುವ ಹುಸೇನ್ ಫಾತೆಮಿಯವರಿಗೆ ಬೆಂಬಲ ನೀಡಬೇಕೆಂದು ಪ್ರಚಾರ ನಡೆಸುತ್ತಿದ್ದರೆಂದೂ ಹೇಳಲಾಗಿದೆ

ಮುಂಬೈ ಬಳಿ ನೌಕೆ ಅಪಘಾತದಿಂದ ೨೦ ಜನರು ಪತ್ತೆಯಿಲ್ಲ

ಬೊಂಬಾಯಿ ರೇವಿಗೆ ಮೂರು ಮೈಲಿ ದೂರದಲ್ಲಿ ನೆನ್ನೆ ಜಾನಕಿ ಎಂಬ ಸಾಮಾನು ಸಾಗಿಸುವ ಹಡಗು ತಲೆಕೆಳಗಾಗಿ ಅದರಲ್ಲಿದ್ದ ೨೦ ಮಂದಿ ಸಿಬ್ಬಂದಿಯವರು ಪತ್ತೆಯಿಲ್ಲವಾಗಿರುತ್ತಾರೆ ಬೇರೊಂದು ಹಡಗು ೧೮ ಜನರನ್ನು ಸಂರಕ್ಷಿಸಿದೆ ಪತ್ತೆಯಿಲ್ಲದವರ ಶೋಧನೆ ಮಾಡಲಾಗುತ್ತಿದೆ

ಭಾರತದಲ್ಲಿ ಜೆಟ್ ವಿಮಾನ ತಯಾರಿಕೆ ಏರ್ಪಾಡು

ಭಾರತದಲ್ಲಿ ಜೆಟ್ ವಿಮಾನಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧವಾಗಿ ಇಂಗ್ಲೆಂಡಿನ ರೋಲ್ಸ್‌ರಾಯ್ಸ್ ಸಂಸ್ಥೆಯೊಡನೆ ಭಾರತ ಸರ್ಕಾರದವರು ಮಾತುಕತೆ ನಡೆಸುತ್ತಿರುವರೆಂದೂ, ಸಂಸ್ಥೆಯ ಪ್ರತಿನಿಧಿಗಳು ಶೀಘ್ರದಲ್ಲೇ ಭಾರತಕ್ಕೆ ಬರುವರೆಂದೂ ವರದಿಯಾಗಿದೆ ಭಾರತವು ಬ್ರಿಟನ್ ಮತ್ತು ಫ್ರಾನ್ಸುಗಳಿಂದ ಹೆಚ್ಚು ಜೆಟ್ ವಿಮಾನಗಳನ್ನು ಕೊಳ್ಳಲಿದೆ

ಅಮೆರಿಕದ ಅಣು ರಹಸ್ಯ ಪತ್ರಗಳು ಅದೃಶ್ಯ

ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿನ ಅಣು ಶಕ್ತಿ ಕೇಂದ್ರವೊಂದರಿಂದ ಅನೇಕ ರಹಸ್ಯ ಪತ್ರಗಳು ಮಾಯವಾಗಿರುವುವೆಂದು ರಿಪಬ್ಲಿಕನ್ ಪಕ್ಷದ ಪ್ರತಿನಿಧಿ ಥಾಮಸ್ ಪೆಲ್ಲಿಯವರು ತಿಳಿಸಿರುತ್ತಾರೆ ಈ ಬಗ್ಗೆ ತನಿಖೆ ನಡೆಸುವಂತೆಯೂ ಅವರು ಒತ್ತಾಯಪಡಿಸಿರುತ್ತಾರೆ ಅಮೆರಿಕದ ಶಾಸನ ಸಭೆಯ ಅಣು ಶಕ್ತಿ ಸಮಿತಿ ಅಧ್ಯಕ್ಷರು ತನಿಖೆ ನಡೆಸುವುದಕ್ಕೆ ಸಮ್ಮತಿಸಿರುವರೆಂದೂ ಹೇಳಲಾಗಿದೆ

ಹರಿಜನರಿಗೆ ಭೂದಾನ ಯಜ್ಞದ ಜಮೀನು

ಭೂದಾನ ಯಜ್ಞದಿಂದ ಬರುವ ಜಮೀನುಗಳ ಪೈಕಿ ಮೂರನೇ ಒಂದು ಭಾಗವನ್ನು ಹರಿಜನರಿಗೆ ಕೊಡಲಾಗುವುದೆಂದು ಆಚಾರ್ಯ ವಿನೋಬಾ ಭಾವೆಯವರು ಹೇಳಿರುತ್ತಾರೆ

ಸಿಂಗಪುರದ ಬಳಿ ವಿಮಾನ ಸಿಡಿದು ೩೨ ಜನರ ಮರಣ

ಬ್ರಿಟಿಷ್ ಓವರ್‌ಸೀಸ್ ಏರ್‌ವೇಸ್ ಕಾರ್ಪೊರೇಷನ್ನಿಗೆ ಸೇರಿದ ವಿಮಾನವೊಂದು ನೆನ್ನೆ ಸಿಂಗಪುರದ ಬಳಿ ಅಪಘಾತಕ್ಕೀಡಾಗಿ ಅದರಲ್ಲಿದ್ದ ೩೧ ಮಂದಿ ಪ್ರಯಾಣಿಕರೂ ಮತ್ತು ಒಬ್ಬ ವಿಮಾನ ನೌಕರನೂ ಮೃತಪಟ್ಟರು ಕಲ್ಲಾಂಗ್ ಎಂಬ ನಿಲ್ದಾಣದ ಬಳಿ ವಿಮಾನವು ಸಿಡಿದು ಅದರ ಮುಖದ ಭಾಗವು ಬೇರ್ಪಟ್ಟು ಬೆಂಕಿ ಹತ್ತಿಕೊಂಡಿತೆಂದೂ, ಒಳಗಿದ್ದವರು ಜ್ವಾಲೆ ಮತ್ತು ಹೊಗೆಗಳ ನಡುವೆ ಸಿಕ್ಕಿ ಬಿದ್ದರೆಂದೂ ಹೇಳಲಾಗಿದೆ ವಿಮಾನ ಸಿಬ್ಬಂದಿಯವರ ಪೈಕಿ ಜೀವಸಹಿತ ಬದುಕಿದ ಮತ್ತು ಗಾಯಗೊಂಡ ಎಂಟು ಮಂದಿಯನ್ನು ಆಂಬುಲೆನ್ಸ್ ವ್ಯಾನಿನಲ್ಲಿ ರಂಗೂನಿನ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ವ್ಯಾನಿಗೂ ಒಂದು ಲಾರಿಗೂ ಡಿಕ್ಕಿಯಾಯಿತೆಂದೂ, ಪ್ರಯಾಣಿಕರಿಗೆ ಹೆಚ್ಚಿನ ಜಖಂ ಏನೂ ಆಗಲಿಲ್ಲವೆಂದೂ ಗೊತ್ತಾಗಿದೆ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಎಂ ಟಿ ಸಿ ಚಿದಂಬರಂ ಚೆಟ್ಟಿಯಾರ್ ಮತ್ತು ಆಗ್ನೇಯ ಏಷ್ಯಾದಲ್ಲಿರುವ ಯುನೈಟೆಡ್ ಕಮರ್ಷಿಯಲ್ ಬ್ಯಾಂಕಿನ ರೀಜನಲ್ ಮ್ಯಾನೇಜರ್ ಶ್ರೀ ಸೇನ್ ಗುಪ್ತರವರು ಈ ಅಪಘಾತದಲ್ಲಿ ಮೃತಪಟ್ಟಿರುವರು.

ಜಪಾನಿಗೆ ಟಿ ಪ್ರಕಾಶಂ

ಜಪಾನಿನಲ್ಲಿ ಗೃಹ ಕೈಗಾರಿಕೆಗಳು ಅಭಿವೃದ್ಧಿಗೊಂಡಿರುವುದನ್ನು ಪರಿಶೀಲಿಸಲು ಆಂಧ್ರದ ಮುಖ್ಯ ಮಂತ್ರಿ ಟಿ ಪ್ರಕಾಶಂರವರು ಆ ದೇಶಕ್ಕೆ ಮುಂದಿನ ತಿಂಗಳು ಆಖೈರಿಗೆ ತೆರಳುವರೆಂದು ಹೇಳಲಾಗಿದೆ ಅಲ್ಲಿ ಜಮೀನು ಸಾಗುವಳಿ ಸ್ಥಿತಿಯನ್ನು ಅವರ ಪರಿಶೀಲಿಸುವರು

ಜಿಲ್ಲಾ ಕಾಂಗ್ರೆಸ್ಸಿಗೆ ಕಾಣಿಕೆ

ಮೈಸೂರು ತಾಲ್ಲೂಕು ಸಿದ್ದರಾಮೇಗೌಡನ ಹುಂಡಿಯ ಶ್ರೀ ಹೊಂಬೇಗೌಡರು ತಮ್ಮ ಕುಮಾರಿ ಮರಿತೊಂಬಮ್ಮನ ವಿವಾಹದ ಸಂಬಂಧದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ೨೫ ರೂಗಳ ಕಾಣಿಕೆ ಕೊಟ್ಟಿರುತ್ತಾರೆ

ಶ್ರೀ ಸಹಸ್ರ ಚಂಡಿ ಯಾಗದ ಪ್ರಾರಂಭೋತ್ಸವ

ಮೈಸೂರು ೧೪

ಕೋಟೇಶ್ವರದ ದೇವೀಭಕ್ತ ಶ್ರೀ ಬಿ. ಶ್ರೀನಿವಾಸರಾಯರು ಕೈಗೊಂಡಿರುವ ಶ್ರೀ ಸಹಸ್ರ ಚಂಡೀ ಮಹಾ ಯಾಗದ ಆರಂಭೋತ್ಸವವನ್ನು ಈ ದಿನ ಬೆಳಿಗ್ಗೆ ಚಾಮುಂಡೇಶ್ವರಿಬೆಟ್ಟದಲ್ಲಿ ಶ್ರೀಮನ್ಮಹಾರಾಜರು ನೆರವೇರಿಸಿದರು. ಈ ಸಮಾರಂಭಕ್ಕಾಗಿ ದೇವಸ್ಥಾನದ ಉತ್ತರ ಭಾಗದಲ್ಲಿ ದೊಡ್ಡ ಮಂಟಪವನ್ನು ನಿರ್ಮಿಸಲಾಗಿದೆ. ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ ರಾಮಚಂದ್ರರಾವ್, ಮಾಜಿ ಮಂತ್ರಿಗಳಾದ ಶ್ರೀಗಳು ಹೆಚ್ ಸಿ. ದಾಸಪ್ಪ ಮತ್ತು ಟಿ. ಸಿದ್ದಲಿಂಗಯ್ಯ, ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್ ಸ್ವಾಮಿನಾಥ, ಪೌರಸಭಾ ಅಧ್ಯಕ್ಷರಾದ ಶ್ರೀ ಎಲ್ ಲಕ್ಷ್ಮಣರಾವ್, ಮುಜರಾಯಿ ಕಾರ್ಯದರ್ಶಿಯವರಾದ ಶ್ರೀ ಹೆಚ್ ಎಸ್. ಪಾಳೇಗಾರ್ ಮತ್ತು ಇತರ ಅಧಿಕಾರಿ ವರ್ಗದವರೂ, ಧರ್ಮ ರತ್ನಾಕರ ಕೆ ನಂದೀಬಸಪ್ಪ, ಟಿ ತಮ್ಮಣ್ಣ, ಎಂ ಆರ್ ಸಿ ಬಸಪ್ಪ, ಎಂ. ಎಸ್ ಚನ್ನಬಸಪ್ಪ ಮುಂತಾದ ಅನೇಕ ದೊಡ್ಡ ಮನುಷ್ಯರೂ, ನೂರಾರು ಜನ ಮಹಿಳೆಯರೂ, ಮಹನೀಯರೂ ದಯಮಾಡಿಸಿದ್ದರು

ಶ್ರೀ ಶ್ರೀನಿವಾಸರಾಯರ ಪರವಾಗಿ ಶ್ರೀ ಎಂ ರಾಮಸ್ವಾಮಿಯವರು ಬಿನ್ನವತ್ತಳೆಯನ್ನು ಓದಿ ಪ್ರಭುಗಳಿಗೆ ಅರ್ಪಿಸಿದರು. ಸಕಲ ಅನಿಷ್ಟಗಳನ್ನೂ ನಿವಾರಿಸಿ ಇಷ್ಟಾರ್ಥಗಳನ್ನು ಕೊಡುವ ಈ ಮಹಾ ಯಾಗವು ಮೈಸೂರು ಸಂಸ್ಥಾನದಲ್ಲಿ ಹಿಂದೆ ನಡೆದ ಸಂದರ್ಭಗಳನ್ನು ಅವರು ವಿವರಿಸಿ ಈಗ ನಡೆಯಲಿರುವ ಈ ಮಹತ್ಕಾರ್ಯದಿಂದ ಲೋಕಕಲ್ಯಾಣವೂ, ನಾಡಿನ ಅಭ್ಯುದಯ ಸಾಧನೆಯೂ ಆಗುವುದೆಂದು ಅವರು ಅರಿಕೆ ಮಾಡಿದರು

ಅನಂತರ ಶ್ರೀಮನ್ಮಹಾರಾಜರು ಪರಿವಾರ ಸಮೇತರಾಗಿ ಯಾಗಮಂಟಪದ ಪ್ರದಕ್ಷಿಣ ಮಾಡಿದ ಮೇಲೆ ಕಲಶ ಪೂಜೆ ಮತ್ತು ಮಂಗಳಾರತಿಗಳು ನಡೆದುವು. ಋತ್ವಿಕರೂ, ವಿಪ್ರರೂ ಆದ ವಿದ್ವನ್ಮಣಿಗಳು ಕೈಗೊಂಡಿರುವ ಈ ಪವಿತ್ರ ಕಾರ್ಯಕ್ಕೆ ಜಗನ್ಮಾತೆಯು ಸಕಲ ಮಂಗಳವನ್ನೂ ಉಂಟುಮಾಡಲೆಂದು ಪ್ರಾರ್ಥಿಸುವುದಾಗಿ ಶ್ರೀಮನ್ಮಹಾರಾಜರು ತಿಳಿಸಿದರು.

೧೩೫ ಜನ ಋತ್ವಿಕರುಗಳು ಈ ಯಾಗದಲ್ಲಿ ಭಾಗವಹಿಸುತ್ತಿರುವರು ವೇ|| ಬ್ರ|| ಶ್ರೀಗಳಾದ ಮಲ್ಲಿಕಾರ್ಜುನಶಾಸ್ತ್ರಿಗಳೂ, ಮುಜರಾಯಿ ಇಲಾಖೆಯ ಕೃಷ್ಣದೀಕ್ಷಿತರೂ, ರಾಮಚಂದ್ರಶಾಸ್ತ್ರಿಗಳೂ, ಲಕ್ಷ್ಮೀನಾರಾಯಣ ಜೋಯಿಸರೂ ಯಾಗದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವರು

ಯಾಗದ ಅಂಗವಾಗಿ ನೆನ್ನೆ ಮಹಾಗಣಪತಿ, ಚಾಮುಂಡೇಶ್ವರಿ, ಮಹಾಬಲೇಶ್ವರ, ಲಕ್ಷ್ಮೀನಾರಾಯಣಸ್ವಾಮಿ ಮತ್ತು ನಂದೀಶ್ವರರ ಪೂಜೆಗಳಾದನಂತರ ಯಾಗ ಶಾಲಾ ಪ್ರವೇಶ ಮಹೋತ್ಸವವು ನಡೆಯಿತು ೧೮ ನೇ ತಾ|| ಗುರುವಾರ ಶ್ರೀ ಸಹಸ್ರ ಚಂಡೀಯಾಗದ ಪೂರ್ಣಾಹುತಿ ನಡೆಯುವುದು.

ವಾರ ಭವಿಷ್ಯ

ತಾ|| ೧೪-೩-೫೪ ರಿಂದ ೨೦-೩-೫೪ ರ ವರೆಗೆ

ಮೇಷ— ಆರೋಗ್ಯ, ಆರ್ಥಿಕ ಸ್ಥಿತಿ ಚಿಂತಾಜನಕ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಮೋಸ, ಪ್ರವಾಸ ಉಪಯೋಗವಿಲ್ಲ ತಾ|| ೧೪, ೧೫ ಹೆಚ್ಚು ಖರ್ಚು, ಅಗ್ನಿ ಭಯ

ವೃಷಭ— ಸ್ನೇಹಿತರ ಬಳಕೆ ಕುಂದ, ಆರೋಗ್ಯ ಉತ್ತಮ, ಅಸಹ್ಯ ಪ್ರಸಂಗ, ಸಂಸಾರ ತಾಪತ್ರಯ, ಆರ್ಥಿಕ ಮುಗ್ಗಟ್ಟು, ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳಿಂದ ಮತ್ತು ದೊಡ್ಡವರಿಂದ ತೊಂದರೆ ಪ್ರವಾಸದಲ್ಲಿ ವಿಘ್ನ ತಾ|| ೧೭, ೧೮ ಶುಭವಾರ್ತೆ, ಮಿತ್ರ ಸಹಾಯ.

ಮಿಥುನ— ಆರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ, ಪ್ರವಾಸ ಸುಖಕರ, ತಾ|| ೧೭, ೧೮ ಅಲ್ಪ ಪ್ರವಾಸ, ಮಿತ್ರಭೇಟಿ

ಕರ್ಕ— ಆರೋಗ್ಯ ಆರ್ಥಿಕ ಸ್ಥಿತಿ ತೃಪ್ತಿಕರ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಶತ್ರುಗಳು ಮಿತ್ರರಾಗುವರು ಪ್ರವಾಸದಲ್ಲಿ ಲಾಭ, ಆದಾಯ ಹೆಚ್ಚು ತಾ|| ೧೭ ೧೮ ಬಂಧುರ ಭೇಟಿ, ಅಲ್ಪ ಪ್ರವಾಸ

ಸಿಂಹ—ಆರೋಗ್ಯ, ಆರ್ಥಿಕ ಸ್ಥಿತಿ ಕಷ್ಟಕರ, ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ತೊಂದರೆ ಮತ್ತು ಭಯ ತಾ|| ೧೪ ೧೫ ಬೆಂಕಿಯಿಂದ ಹಾನಿ, ಗೃಹಚಿಂತೆ

ಕನ್ಯಾ—ವ್ಯಾಪಾರ ಉದ್ಯೋಗ, ನೌಕರಿ ಪ್ರವಾಸದಲ್ಲಿ ಲಾಭ ಆರೋಗ್ಯ ಆರ್ಥಿಕ ಸ್ಥಿತಿ, ಆನಂದಕರ ಸಟ್ಟಾ, ಲಾಟರಿಯಲ್ಲಿ ಜಯ ಆದರೆ ಎಚ್ಚರಿಕೆ ಬೇಕು ತಾ|| ೧೪ ೧೫ ಬಂಧು ಮಿತ್ರ ಭೇಟಿ

ತುಲಾ— ಆರೋಗ್ಯ, ಉತ್ತಮ ಆರ್ಥಿಕ ಸ್ಥಿತಿ ತಾಪಕರ, ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಆಟ ತಾ|| ೧೭, ೧೮ ಸಟ್ಟಾ ರೇಸ್, ಲಾಭ

ವೃಶ್ಚಿಕ— ಆರೋಗ್ಯಕ್ಕೆ ಗಮನ ಕೊಡಿ ಸಾಂಪತ್ತಿಕ ಸ್ಥಿತಿ ತಾಪಕರ, ವ್ಯಾಪಾರ, ಉದ್ಯೋಗ ನೌಕರಿ, ಪ್ರವಾಸದಲ್ಲಿ ಭಯ ಮತ್ತು ವಿಘ್ನ, ಕೋರ್ಟು ಹತ್ತುವ ಪ್ರಸಂಗ ತಾ|| ೧೪, ೧೫, ಚಿಂತೆ, ಮಹತ್ವ ಪತ್ರಾಗಮನ

ಧನು— ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಮೋಸದ ಸಂಭವ, ಆರೋಗ್ಯ ಆರ್ಥಿಕ ಸ್ಥಿತಿ ಸಾಧಾರಣ, ಪ್ರವಾಸದಲ್ಲಿ ವಿಘ್ನ ಪರೀಕ್ಷೆಯಲ್ಲಿ ಜಯ ತಾ|| ೧೪ ೧೫ ಅತಿಥಿಗಳ ಆಗಮನ, ಹೆಚ್ಚು ಖರ್ಚು

ಮಕರ— ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳ ಆಟ ಸಾಗದು ಪ್ರಗತಿ ಆರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರ ಪ್ರವಾಸ ಮತ್ತು ಕೋರ್ಟ್ ಕಾರ್ಯದಲ್ಲಿ ಯಶಸ್ಸು ತಾ|| ೧೭ ೧೮ ಗಲಾಟೆ, ಮಹತ್ವದ ಪತ್ರ

ಕುಂಭ—ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ಲಾಭ ಮತ್ತು ಪ್ರಗತಿ, ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ತಾ|| ೧೫, ೧೬ ಮಂಗಳ ಕಾರ್ಯ, ಹೆಚ್ಚು ಖರ್ಚು

ಮೀನ— ಆರೋಗ್ಯ, ಆರ್ಥಿಕ ಮಾನಸಿಕ ಸ್ಥಿತಿ ತೃಪ್ತಿಕರ, ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ತೊಂದರೆ ಇಲ್ಲ ಪ್ರವಾಸ ಸುಗಮ, ನೌಕರಿಯಲ್ಲಿ ಬಡ್ತಿ ತಾ|| ೧೭ ೧೮ ಮಿತ್ರ ಭೇಟಿ, ಮೃಷ್ಟಾನ್ನ ಭೋಜನ

ಹತ್ತು ಜನ ಮೊರಾಕೊ ದೇಶಸ್ಥರಿಗೆ ಗಲ್ಲು ಶಿಕ್ಷೆ

ಕಳೆದ ವರ್ಷದ ಮೊರಾಕೊವಿನ ಫೆಜ್‌ಗ್ ನಗರದಲ್ಲಿ ಅನೇಕ ನಾಗರೀಕರನ್ನು ಕೊಲೆ ಮಾಡಿದರೆ ೧೦ ಜನ ಮೊರಾಕೋ ದೇಶಸ್ಥರಿಗೆ ಮರಣ ದಂಡನೆ ವಿಧಿಸಲಾಗಿದೆ ಇಬ್ಬರಿಗೆ ಜೀವಾವಧಿ ಸಜಾ ಕೊಡಲಾಗಿದೆ ಆಪಾದಿತರಲ್ಲಿ ಅನೇಕರ ಆಫ್ರಿಕನ್ ಸ್ವಾತಂತ್ರ್ಯ ಚಳುವಳಿಯ ಪಕ್ಷಕ್ಕೆ ಸೇರಿದವರು

○ ಜಾವಾ ಪ್ರಾಂತದ ಪಶ್ಚಿಮದ ಗ್ರಾಮಗಳಿಗೆ ೧೫೦ ಜನ ಸಶಸ್ತ್ರ ವಿರೋಧಿಗಳ ೩ ಗುಂಪುಗಳ ನುಗ್ಗಿ ನೂರ ಮನೆಗಳನ್ನು ಸುಟ್ಟು ಮೂರು ೧೧ ಜನರನ್ನು ಕೊಂದಿವೆ ಎರಡು ಮಸೀದಿಗಳ ನಾಶವಾಗಿವೆ ನಗರಾಭ್ಯಗಳನ್ನು ದೋಚಿದೆ

ಶಾರದಾವಿಲಾಸ ಹೈಸ್ಕೂಲ್ ವಾರ್ಷಿಕೋತ್ಸವ

ವಿಶ್ವೇಶ್ವರಯ್ಯನವರ ಭಾವಚಿತ್ರದ ಅನಾವರಣ

ಮೈಸೂರು ೧೪

ಶಾರದಾ ವಿಲಾಸ ಹೈಸ್ಕೂಲಿನ ಮೂವತ್ತೈದನೆಯ ವಾರ್ಷಿಕೋತ್ಸವವು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಬಹಳ ವೈಭವದಿಂದ ನಡೆಯಿತು ಶಾಲೆಯ ಆವರಣದಲ್ಲಿ ಸುಂದರವಾದ ಚಪ್ಪರಕ್ಕೆ ವಿದ್ಯುದ್ದೀಪಾಲಂಕಾರಗಳ ಏರ್ಪಾಟಾಗಿದ್ದುವು ಸಾವಿರಾರು ಜನ ಅತಿಥಿಗಳು ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಬಂದಿದ್ದರು

ಶ್ರೀಮತಿ ಮಾಲತಿಯವರಿಂದ ಪ್ರಾರ್ಥನೆ ನಡೆದನಂತರ, ಸರಸ ಕವಿ ಭಾರತಿಯವರು ತಂಗಳ ಪದ್ಯ ಪಠನೆ ಮಾಡಿದ ಮೇಲೆ ಶಾಲೆಯ ಹಳೇ ವಿದ್ಯಾರ್ಥಿಯೂ, ಜಿಲ್ಲಾಧಿಕಾರಿಗಳೂ ಆದ ಶ್ರೀ ಎಂ ಎಸ್ ಎಸ್ಪಿನಾರಾಯಣರವರು ಸ್ವಾಗತ ಭಾಷಣ ಮಾಡಿ, ಶಾಲೆಯಲ್ಲಿ ತಾವು ಅಭ್ಯಾಸ ಮಾಡಿದ ಉತ್ತಮ ವಿಷಯಗಳನ್ನು, ಒಳ್ಳೆಯ ನಡತೆಯನ್ನು ವಿವರಿಸಿದರು

ವಿದ್ಯಾರ್ಥಿಗಳಿಂದ ಭಾವಗೀತೆ, ಶ್ರೀಮತಿ ಆರ್ ಸಿದ್ಧಮ್ಮನವರಿಂದ ಸುಶ್ರಾವ್ಯವಾದ ಗಾಯನವಾದನಂತರ ಉಪಾಧ್ಯಾಯರಾದ ಶ್ರೀ ಬಿ ರಾಮಣ್ಣನವರು ಶಾಲಾ ವರದಿಯನ್ನು ಒಪ್ಪಿಸಿದರು ನೂರ ವರ್ಷದ ಹಿಂದೆ ಈ ಶಾಲೆಯು ಸಣ್ಣ ಪ್ರಮಾಣದಲ್ಲಿ ಆರಂಭವಾಗಿ ಇಂದು ಅನೇಕ ಸಂಸ್ಥೆಗಳನ್ನು ಒಳಗೊಂಡಿರುವುದೆಂದು ಶಾಲೆ ಇದಕ್ಕೆ ಸಾರ್ವಜನಿಕರ ಉದಾರಾಶ್ರಯವು ಬೇಕೆಂದು ತಿಳಿಸಿದರು ಇನ್ನು ಮುಂದೆಯೂ ಸಾರ್ವಜನಿಕರೂ ಸರ್ಕಾರದವರೂ ಸಂಪೂರ್ಣ ನೆರವು ನೀಡಬೇಕೆಂದು ಕೋರಿದರು

ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದನಂತರ ಮಾಜಿ ದಿವಾನರಾದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿದರು

ಶಾಲೆಯು ಹೊಂದುತ್ತಿರುವ ಪ್ರಗತಿಗಾಗಿ ಮುಖ್ಯ ಮಂತ್ರಿಗಳು ಅಭಿನಂದನೆಯನ್ನು ಸಲ್ಲಿಸಿ, ಇದಕ್ಕೆ ಸಕಲ ಯಶಸ್ಸುಂಟಾಗಲೆಂದು ಹಾರೈಸಿದರು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ವಾರ್ಷಿಕವಾಗಿ ಕೋಟಿ ರೂ ವೆಚ್ಚ ಮಾಡುತ್ತಿರುವುದರಿಂದ ವಿದ್ಯಾ ಶಾಲೆಗಳಿಗೆ ಇನ್ನೂ ಹೆಚ್ಚಿನ ಧನ ಸಹಾಯ ಮಾಡಲು ಸಾಧ್ಯವಿಲ್ಲವೆಂದು ಅವರು ನುಡಿದರು ಇತರ ಪ್ರಾಂತಗಳಲ್ಲಿರುವಂತೆ ಇಲ್ಲಿಯೂ ಶ್ರೀಮಂತ ಮಹನೀಯರು ಮುಂದೆ ಬಂದು ಹೆಚ್ಚು ಹೆಚ್ಚಾಗಿ ವಿದ್ಯಾಭಿವೃದ್ಧಿಗೆ ನೆರವು ನೀಡಬೇಕೆಂದು ಕೋರಿದರು ಶಾಲೆಗಳಿಗಾಗಿ ನಿವೇಶನಗಳನ್ನು ಕೊಡಲು ಸರ್ಕಾರದವರು ಆಲೋಚಿಸುವರೆಂದೂ ಹೇಳಿದರು

ಶಾರದಾ ವಿಲಾಸ ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿಯವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೧೯ ೬ ೦	೨೪ ೧೪ ೦
ಎಳ್ಳು	೬೩ ೮ ೦	
ಹರಳುಬೀಜ	೨೬ ೦ ೦	೨೮ ೧೨ ೦
ಹುಚ್ಚೆಳ್ಳು	೪೮ ೮ ೦	೪೪ ೦ ೦
ಹೊಂಗೆಬೀಜ	೧೬ ೦ ೦	೨೩ ೪ ೦
ಕುಸುಬೆ	೨೭ ೧೨ ೦	೨೯ ೦ ೦
ಹೆಸರು	೩೯ ೪ ೦	೩೮ ೧೨ ೦
ಹಲಸಂದೆ	೩೬ ೧೪ ೦	೩೭ ೧೪ ೦
ಅವರೆ	೩೦ ೧೦ ೦	
ತೊಗರಿ	೨೨ ೨ ೦	೨೩ ೨ ೦
ಕಡಲೆ	೪೦ ೦ ೦	
ಸೂರ್ಯದಿನ ಬೀಜ	೨೭ ೧೪ ೦	೩೧ ೦ ೦
ಹುಣಸೇಬೀಜ	೧೩ ೨ ೦	೧೩ ೪ ೦
ಹುಣಸೇಹಣ್ಣು	೪ ೮ ೦	೯ ೧೦ ೦
ಸೀಗೆಕಾಯಿ	೪ ೬ ೦	೪ ೧೪ ೦
ಮೆಣಸಿನಕಾಯಿ	೨೬ ೧೨ ೦	೨೬ ೧೪ ೦
ತೆಂಗಿನಕಾಯಿ ೧೧೦೦	೨೦೫ ೦ ೦	೨೨೪ ೦ ೦

ಬಲ್ಲಿದರ ಸಹಾಯ ದೊರೆತರೆ ಸಾಮಾಜಿಕ ಪ್ರಗತಿ ಜಾಗ್ರತೆ ಆಗಲು ಸಾಧ್ಯ

ಬನುಮಯ್ಯನವರ ಪ್ರೌಢಶಾಲಾ ರಜತೋತ್ಸವದಲ್ಲಿ ಮಹಾರಾಜರ ಭಾಷಣ

ಮೈಸೂರು ೧೪

ಶ್ರೀ ಬನುಮಯ್ಯನವರಂತಹ ದಾನಿಗಳು ಮಾಡುವ ಔದಾರ್ಯ ಕಾರ್ಯಗಳಿಗಾಗಿ ನಮ್ಮ ಪ್ರಶಂಸೆಗೆ ಅರ್ಹರಾಗುವುದು ಮಾತ್ರವಲ್ಲದೆ ಸಾರ್ವಜನಿಕ ಸೇವೆಯ ಧ್ಯೇಯದಿಂದೊಡಗೂಡಿರುವ ಅಂತಹವರ ನಿದರ್ಶನಕ್ಕಾಗಿ ಅವರುಗಳು ಪ್ರಶಂಸಾರ್ಹರಾಗಿರುವರು ಬಡತನ ಮತ್ತು ಮುಂದುವರಿಯಲು ಅವಕಾಶ ದೊರೆಯದಿರುವುದು ಇವೇ ಮುಂತಾದ ಅಡಚಣೆಗಳನ್ನು ನಾಡಿನ ಬಲ್ಲಿದರು ತಮಗಿಂತಲೂ ಚಿಕ್ಕವರಾದವರಿಗೆ ಸಹಾಯ ಮಾಡಲು ಮುಂದೆ ಬಂದರೆ ಅದರಿಂದ ಸಾಮಾಜಿಕ ಪ್ರಗತಿಯು ಜಾಗ್ರತೆಯಿಂದ ಸಾಗಲು ಸುಲಭವಾಗುವುದು ಎಂದು ಶ್ರೀಮನ್ಮಹಾರಾಜರು ನೆನ್ನೆ ಡಿ ಬನುಮಯ್ಯನವರ ಪ್ರೌಢಶಾಲೆಯ ರಜತೋತ್ಸವದ ಆರಂಭ ಮಾಡುತ್ತಾ ತಿಳಿಸಿದರು

ಶಾಲಾ ವಿದ್ಯಾರ್ಥಿ ಶ್ರೀ ಆರ್ ಕೆ ಸೂರ್ಯನಾರಾಯಣರವರಿಂದ ಪ್ರಾರ್ಥನೆಯಾದನಂತರ ಉತ್ಸವದ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಸ್ವಾಗತ ಭಾಷಣ ಮಾಡಿ, ಡಿ ಬನುಮಯ್ಯನವರ ಶಾಲೆಯು ಮೈಸೂರು ರಾಜಮನೆತನದ ವಿಶೇಷ ಪ್ರೀತಿ ಆದರಗಳಿಗೆ ಪಾತ್ರವಾಗಿರುವುದೆಂದು ತಿಳಿಸಿದರು ಡಿ ಬನುಮಯ್ಯನವರ ನಾನಾ ಸಂಸ್ಥೆಗಳಿಗೆ ಉದಾರವಾಗಿ ದಾನ ಮಾಡಿರುವರೆಂದು ಹೇಳಿದರು

ಅವರು ಗಾಂಧೀಜಿಯವರ ಭಕ್ತರಾಗಿದ್ದು ನಗರದಲ್ಲಿ ಖಾದಿ ಕೇಂದ್ರವೊಂದನ್ನು ಸ್ಥಾಪಿಸಿದ್ದರೆಂದೂ ಅವರು ಇಂದು ರಾಜಕೀಯದಲ್ಲಿ ಮುಂದಾಳಾಗಿರುವ ಅನೇಕರಿಗೆ ಅವರು ಮಾರ್ಗದರ್ಶಿಗಳಾಗಿದ್ದರೆಂದೂ ತಿಳಿಸಿದರು ಅವರ ಧರ್ಮ ಕಾರ್ಯಗಳಲ್ಲಿ ಮುಖ್ಯವಾದ ಈ ವಿದ್ಯಾ ಸಂಸ್ಥೆಯ ಕಟ್ಟಡವನ್ನು ಅವರು ೧|| ಲಕ್ಷ ರೂ ವೆಚ್ಚದಲ್ಲಿ ಕಟ್ಟಿಸಿ, ೫೦ ಸಾವಿರ ರೂ ಬೆಲೆಯ ಸಾಮಗ್ರಿಗಳನ್ನೂ ೩೦ ಸಾವಿರ ರೂ ಮೂಲ ಧನವನ್ನೂ ಒದಗಿಸಿರುವರೆಂದೂ ಶ್ರೀ ಚೆನ್ನಯ್ಯನವರು ತಿಳಿಸಿದರು

ಶ್ರೀ ಆರ್ ಕೆ ಶ್ರೀಕಂಠನ್ ಮತ್ತು ಪಾರ್ಟಿಯವರ ಸಂಗೀತವಾದನಂತರ ಡಿ ಸುಬ್ಬಣ್ಣ ವಿಜ್ಞಾನ ವಿಭಾಗದ ಛಾತ್ರರಿಂದ ಶ್ರೀ ಎಸ್ ನಾರಾಯಣ್ ಮತ್ತು ಶ್ರೀ ನಾಗಪ್ಪನವರು ಶ್ರೀಮನ್ಮಹಾರಾಜರಿಗೆ ಬೆಳ್ಳಿ ತಟ್ಟೆಯೊಂದನ್ನು ಅರ್ಪಿಸಿದರು ಶಾಲಾ ಧರ್ಮದರ್ಶಿಗಳ ಸಮಿತಿಯ ಸರವಾಗಿಯೂ ರಾಜಪ್ರಮುಖರಿಗೆ ಬಿನ್ನವತ್ತಳೆಯನ್ನು ಒಪ್ಪಿಸಲಾಯಿತು

ನಂತರ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಬಿ ವಿ ಬನುಮಯ್ಯನವರು ಶಾಲೆಯ ಪ್ರಗತಿ ಬಗ್ಗೆ ವಿವರವಾದ ವರದಿಯ ನ್ನೊಪ್ಪಿಸಿದರು

ಶಾಲೆಗೆ ಬಹು ದಿನಗಳಿಂದಲೂ ಸೇವೆ ಸಲ್ಲಿಸಿದ ಹೆಡ್ಮಾಸ್ಟರ್ ಶ್ರೀ ಕೆ ವಿ ಶ್ರೀನಿವಾಸಮೂರ್ತಿ, ಉಪಾಧ್ಯಾಯರಾದ ಶ್ರೀ ಎಂ ಶೇಷಗಿರಿರಾವ್ ಮತ್ತು ಶ್ರೀ ಪಾಪಯ್ಯನವರುಗಳಿಗೆ ಶ್ರೀಮನ್ಮಹಾರಾಜರು ರಜತೋತ್ಸವದ ಸ್ಮಾರಕ ಬಹುಮಾನಗಳನ್ನು ಹಂಚಿದರು

ನಂತರ ರಾಜಪ್ರಮುಖರು ಭಾಷಣ ಮಾಡಿ ಡಿ ಬನುಮಯ್ಯನವರ ಗುಣಗಾನ ಮಾಡಿದರು ಅವರು ಬಡವರಾಗಿದ್ದು ಸ್ವತಃ ಕಷ್ಟಪಟ್ಟು ಅಭಿವೃದ್ಧಿಗೆ ಬಂದರೆಂದೂ, ಐಶ್ವರ್ಯವಂತರಾದ ಮೇಲೆ ದಾನಗಳನ್ನು ಮಾಡಿದರೆಂದೂ ತಿಳಿಸಿದರು ಶಾಲೆಯು ಸರ್ವತೋಮುಖವಾಗಿ ಬೆಳೆಯಲು ಶ್ರೀ ಡಿ ಬಿ ವಿಶ್ವಂಭರಯ್ಯ ಮತ್ತು ಬನುಮಯ್ಯನವರ ಮನೆತನದವರು ಸಲ್ಲಿಸುತ್ತಿರುವ ಸೇವೆಗಾಗಿ ಅಭಿನಂದಿಸಿದರು ಉತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಶಾಲೆಯ ಬಗ್ಗೆ ತೋರಿಸುತ್ತಿರುವ ವಿಶೇಷ ಆಸಕ್ತಿಗಾಗಿ ಅವರನ್ನು ಪ್ರಶಂಸಿಸಿದರು ವಿಜ್ಞಾನ ವಿಭಾಗದ ಕಟ್ಟಡವನ್ನು ಕಟ್ಟಿಸಲು ಮುಂದೆ ಬಂದ ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಶ್ರೀ ಎಸ್ ನಾರಾಯಣ್ ಮತ್ತು ಶ್ರೀ ನಾಗಪ್ಪನವರನ್ನೂ ಅವರು ಹೊಗಳಿದರು ಶಾಲೆಗೆ ಹೆಚ್ಚು ಧನ ಸಹಾಯ ಮಾಡಬೇಕೆಂದು ಸಮಿತಿಯವರು ಮಾಡಿರುವ ಕೋರಿಕೆಯನ್ನು ಮಹಾರಾಜರು ಪುರಸ್ಕರಿಸಿದರು

ನಂತರ ವಿಜ್ಞಾನ ವಿಭಾಗ ಕಟ್ಟಡದ ಶಂಕುಸ್ಥಾಪನೆಯನ್ನು ರಾಜಪ್ರಮುಖರು ನೆರವೇರಿಸಿದರು.

ರಾಷ್ಟ್ರಗೀತೆ ಮತ್ತು ಸುಂಧೋಪಸುಂದ್ರ ನಾಟಕಾಭಿನಯವಾದನಂತರ ಸಮಾರಂಭವು ಮುಕ್ತಾಯವಾಯಿತು

ಆಕಾಶವಾಣಿ ಶಾಲೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ ೭-೩೦ ಬಿ ಎನ್ ಸೀತಾರಾಮಯ್ಯ ನಾಗಸ್ವರ ಮಧ್ಯಾಹ್ನ ೧-೪೦ ಮತ್ತು ೧ ೫೦ ರಿಕಾರ್ಡುಗಳು ೩ ೮ ಹಾಗಮ್ಮ ಸಂಗೀತ ಸಂಜೆ ೫ ೪೦ ಬಿ ಎನ್ ಸೀತಾರಾಮಯ್ಯ ನಾಗಸ್ವರ ೬ ಗಾನ ವಿಹಾರ ೬-೧೫ ವಿ ಕೆ ಶಾಗಮಂತ್ರ ವಿಶಾಲಾಕ್ಷಿಯ ಹಾಡುಗಳು ೭-೫ ಮತ್ತು ೯ ೪೦ ಆರ್ ಕೆ ಮನೋಹರ ಸಂಗೀತ ೭-೪೦ ನಾಟಕ ಕೃಷ್ಣಮೂರ್ತಿ ವಿಶ್ವ ಸಾಹಿತ್ಯ ಕೀರ್ತನ ೮ ವಚನ ಗಾನ ೮-೧೫ ಮೈಸೂರಿನ ಶ್ರೀ. ಸಾವಿತ್ರಿ ಅಮ್ಮಾಳ್ ಗೋಟುವಾದ್ಯ ೯ ೫ ಶಿ ಮಹಮದ್ ಇಮಾಂ ಇಸ್ಲಾಂ ಬಗ್ಗೆ ಇಂಗ್ಲಿಷ್ ಭಾಷಣ

○ ಸೂಯೆಜ್ ಪ್ರದೇಶದಲ್ಲಿರುವ ಇಸ್ಮೇಲಿಯಾ ನಗರದಲ್ಲಿ ಕಳೆದ ಗುರುವಾರ ರಾತ್ರಿ ಬ್ರಿಟಿಷ್ ಸೈನಿಕರಿಗೂ ಈಜಿಪ್ಟಿನ ಕಾರ್ಮಿಕರಿಗೂ ಘರ್ಷಣೆಯಾದಾಗ ಅದನ್ನು ತಡೆಯಲು ಹೋದ ಈಜಿಪ್ಟಿನ ಪೋಲೀಸು ಅಧಿಕಾರಿಗೆ ಗುಂಡಿನೇಟು ಬಿದ್ದು ಆತನು ಮಡಿದನು

PALACE MARAMATH DEPARTMENT

ABSTRACT NOTIFICATION

Dated 12 March 1954

Sealed Tenders are called for constructing Six Houses in the open space to the South of Jaganmohan Palace along Laxmivilas Agrahar Road. Last date for receiving quotations is 22ND MARCH 1954 upto 3 30 p m. and the earnest money to be deposited is Rs. 2,800 only Further intimations can be had from the office.

E K. PANDITARADHYA.
Palace Engineer

ರಾಜಕಮಲ್ ಟಾಕೀಸ್, ಮೈಸೂರು

12-2-54 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಆಟಗಳು

ಹದಿನೆಂಟು ಲಕ್ಷ ರೂ ವ್ಯಯ ಮಾಡಿ ಅನೇಕ ವರ್ಷಗಳಿಂದ ಶ್ರಮಪಟ್ಟು ತಯಾರಿಸಿರುವ ಮನೋಹರ ಜೆಮಿನಿ ಸ್ಟುಡಿಯೋದವರ ತಮಿಳು ಚಿತ್ರ

★ ಮನೋಹರ ★

ಭೂಮಿಕೆ — ಶಿವಾಜಿ ಗಣೇಶನ್, ಕನ್ನಾಂಬ, ಟಿ. ಆರ್ ರಾಜಕುಮಾರಿ, ಪಂಢರಿಬಾಯಿ, ಗಿರಿಜ, ಟಿ ಕೆ ಸರಸ್ವತಿ ಮುಂತಾದವರು

ಆರು ವಾರಗಳ ಕಾಲ ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

Edited, Printed and Published by A R Nagarajan at Sadhvi Press, D. Subbiah Road, Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE MONDAY 15-3-1954 . ಮೈಸೂರು : ಸೋಮವಾರ ೧೫-೩-೧೯೫೪ [ಸಂಚಿಕೆ ೫೦೩

ಮದುವೆ ಜವಳಿ!
ಎಲ್ಲಾ ರಕಮಿಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು ಫೋನ್ 446

ತಿರುವಾಂಕೂರಿನಲ್ಲಿ ವಾಮಪಕ್ಷ ಸರ್ಕಾರ ಸ್ಥಾಪನೆಯೋ?

ಪತ್ರಿಕೋದ್ಯಮದ ಆದರ್ಶ

ಕಾಲೇಜಿನಲ್ಲಿ ಡಿ ವಿ ಗುಂಡಪ್ಪನವರ ಭಾವಚಿತ್ರದ ಅನಾವರಣ

ಮೈಸೂರು ೧೪

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ವಾರ್ಷಿಕ ಉತ್ಸವದ ಭಾಷಣವನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮೊನ್ನೆ ಮಹಾರಾಜಾ ಕಾಲೇಜಿನಲ್ಲಿ ಮಾಡಿ ಹಿರಿಯ ಪತ್ರಿಕೋದ್ಯಮಿಗಳೂ ಶ್ರೇಷ್ಠ ಸಾಹಿತಿಗಳೂ ಆದ ಶ್ರೀ ಡಿ ವಿ ಗುಂಡಪ್ಪನವರ ಭಾವಚಿತ್ರವನ್ನು ಅನಾವರಣ ಮಾಡಿದರು. ಪ್ರಿನ್ಸಿಪಾಲರಾದ ಶ್ರೀ ವಿ ಎಲ್ ಡಿಸೋಜಾರವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯನಂತರ, ಸಂಘದ ಅಧ್ಯಕ್ಷರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರ ಸ್ವಾಗತ ಭಾಷಣ ಮಾಡಿ ಪತ್ರಿಕೋದ್ಯಮ ಶಿಕ್ಷಣವು ಮೈಸೂರು ವಿಶ್ವವಿದ್ಯಾಲಯದಲ್ಲಿ ಯಶಸ್ವಿಯಾಗಿ ಸಾಗುತ್ತಿರುವ ಅಂಶಗಳನ್ನು ವಿವರಿಸಿದರು. ಕಾರ್ಯದರ್ಶಿಗಳು ಸಂಘದ ವರದಿಯನ್ನೊಪ್ಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಶ್ರೀ ಹನುಮಂತಯ್ಯನವರು ಬಹುಮಾನಗಳನ್ನು ಹಂಚಿದರು.

ಮುಖ್ಯ ಮಂತ್ರಿಗಳು ಭಾಷಣ ಮಾಡಿ ಪತ್ರಿಕೋದ್ಯೋಗಿಗಳು ತಮ್ಮ ವೃತ್ತಿಯ ಉನ್ನತ ಆದರ್ಶಗಳನ್ನರಿತುಕೊಂಡು ಆವಶ್ಯಕವಾದ ಶಿಕ್ಷಣವನ್ನು ಪಡೆದು ಅನಂತರ ದೇಶಸೇವಾ ಕಾರ್ಯದಲ್ಲಿ ತೊಡಗಬೇಕೆಂದು ಸೂಚಿಸಿದರು.

ಹಿಂದೆ ಯಾವ ಶಿಕ್ಷಣವೂ ಇಲ್ಲದೆ ಸ್ವಂತ ಪರಿಶ್ರಮದಿಂದ ಅನೇಕರು ಪತ್ರಿಕೆಗಳನ್ನು ಹೊರಡಿಸುತ್ತಿದ್ದರು. ಅವುಗಳಲ್ಲಿ ಅನೇಕರು ಯಶಸ್ವಿಯಾಗಿ ಸೇವೆ ಮಾಡಿರುವರು. ಇನ್ನು ಕೆಲವರು ಅಷ್ಟು ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿರುವುದಿಲ್ಲ. ಈಗಿನ ಕಾಲದಲ್ಲಿ ಪತ್ರಿಕೋದ್ಯಮವನ್ನು ಜಯಪ್ರದವಾಗಿ ನಿರ್ವಹಿಸಬೇಕಾದರೆ ಒಳ್ಳೆಯ ಶಿಕ್ಷಣವು ಬಹುಮಟ್ಟಿಗೆ ಸಹಕಾರಿಯಾಗುವುದು. ಸತ್ಯ ಮತ್ತು ನಿಷ್ಪಕ್ಷಪಾತವನ್ನೇ ಗುರಿಯಾಗಿಟ್ಟುಕೊಂಡು ಪತ್ರಿಕೋದ್ಯೋಗಿಗಳು ತಮ್ಮ ಪವಿತ್ರವಾದ ಕಾರ್ಯದಲ್ಲಿ ತೊಡಗಬೇಕು ಎಂದು ಶ್ರೀ ಹನುಮಂತಯ್ಯನವರು ನುಡಿದರು.

ಶ್ರೀ ವಿ ವೆಂಕಟಪ್ಪನವರು ಭಾಷಣ ಮಾಡಿ ಶ್ರೀಮಾನ್ ಡಿ ವಿ ಗುಂಡಪ್ಪನವರ ಗುಣಾತಿಶಯಗಳನ್ನು ವಿವರಿಸಿದರು. ನಮ್ಮ ನಾಡಿನ ಅತ್ಯಂತ ಶ್ರೇಷ್ಠ ದೇಶಭಕ್ತರಲ್ಲಿ ಗುಂಡಪ್ಪನವರೂ ಒಬ್ಬರೆಂದು ಅವರು ಹೇಳಿ, ಅವರ ಸಾಹಿತ್ಯ ಸೇವೆ ಪತ್ರಿಕಾ ಸಂಚಾಲನ ಮತ್ತು ರಾಜನೀತಿ ನೈಪುಣ್ಯಗಳನ್ನು ಪ್ರಶಂಸಿಸಿದರು.

ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ, ಸರ್ ಮಿರ್ಜಾ ಇಸ್ಮೇಲ್ ಮುಂತಾದವರು ಗುಂಡಪ್ಪನವರ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದ ಅಂಶಗಳನ್ನು ವಿವರಿಸಿದರು. ಜವಾಬ್ದಾರಿ ಸರ್ಕಾರ ಸ್ಥಾಪನೆಗೂ ಸಂಸ್ಥಾನಗಳ ಸ್ಥಿತಿಗತಿಗಳ ಪರಿಷ್ಕಾರಕ್ಕೂ ಶ್ರೀ ಗುಂಡಪ್ಪನವರು ಅಸ್ತಿಭಾರ ಹಾಕಿದವರೆಂದು ತಿಳಿಸಿದರು.

ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಗಿಯಿತು.

ತಿರುವಾಂಕೂರಿನಲ್ಲಿ ವಾಮಪಕ್ಷದ ಸರ್ಕಾರಕ್ಕೆ ಪ್ರಜಾ ಸೋಷಲಿಸ್ಟರ ಬೆಂಬಲ

ತಿರುವಾಂಕೂರ ಕೊಚ್ಚಿ ಸಂಸ್ಥಾನದ ಶಾಸನ ಸಭೆಯ ಪ್ರಜಾ ಸೋಷಲಿಸ್ಟ್ ಪಕ್ಷದ ಸಭೆಯು ನೆನ್ನೆ ರಾತ್ರಿ ನಡೆದು ಸಂಸ್ಥಾನದ ವಾಮಪಕ್ಷವು ಎಲ್ಲಿಯವರೆಗೆ ಪ್ರಜಾ ಸಮಾಜವಾದಿ ಪಕ್ಷದ ಧ್ಯೇಯಧೋರಣೆಗಳನ್ನು ಪಾಲಿಸಿಕೊಂಡು ಬಂದು ಸಂಸ್ಥಾನದ ಹಿತ ಸಾಧನೆ ಮಾಡುತ್ತಿರುವುದೋ ಅದುವರೆಗೆ ಆ ಪಕ್ಷಕ್ಕೆ ಬೆಂಬಲ ನೀಡಿ ಸಂಸ್ಥಾನದಲ್ಲಿ ಆ ಪಕ್ಷಕ್ಕೆ ಸರ್ಕಾರ ರಚಿಸಲು ಸಹಕಾರವೀಯಲು ನಿರ್ಧರಿಸಿತು. ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಪಟ್ಟಂ ತಾನುಪಿಳ್ಳೆಯವರೂ ಮತ್ತು ಮಂದಿ ಸದಸ್ಯರೂ ಸಭೆಯಲ್ಲಿ ಭಾಗವಹಿಸಿ ಮೇಲ್ಕಂಡಂತೆ ಸರ್ವಾನುಮತದ ನಿರ್ಣಯ ಮಾಡಿದರು. ಕಾಂಗ್ರೆಸ್ಸು ಅಧಿಕಾರಕ್ಕೆ ಬರದಂತೆ ತಡೆಗಟ್ಟುವ ಉದ್ದೇಶದಿಂದಲೇ ಈ ನಿರ್ಧಾರಕ್ಕೆ ಬರಲಾಯಿತೆಂದು ಹೇಳಲಾಗಿದೆ. ವಾಮ ಪಕ್ಷದ ನಾಯಕರಾದ ಶ್ರೀ ಟಿ ವಿ ಥಾಮಸ್‌ರವರು ಸಂಸ್ಥಾನದಲ್ಲಿ ಸರ್ಕಾರ ರಚಿಸಲು ಒಪ್ಪಿ ಪ್ರಜಾ ಸೋಷಲಿಸ್ಟ್ ಪಕ್ಷದ ಬೆಂಬಲವನ್ನು ಕೋರಿ ಪತ್ರ ಬರೆದಿದ್ದರು. ಪಿ ಎಸ್ ಪಿ ಯ ಮೇಲ್ಕಂಡ ನಿರ್ಧಾರವನ್ನು ಶ್ರೀ ಥಾಮಸ್‌ರವರಿಗೆ ತಿಳಿಸಲಾಗಿದೆ. ಶ್ರೀ ಥಾಮಸ್‌ರವರು ಈ ದಿನ ರಾಜಪ್ರಮುಖರನ್ನು ಭೇಟಿ ಮಾಡಿ, ತಾವು ಸರ್ಕಾರವನ್ನು ರಚಿಸುವ ವಿಷಯವನ್ನು ಕುರಿತು ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ಕಂದಾಯದ ಏರಿಕೆಯನ್ನು ವಿರೋಧಿಸುವವರಿಗೆ ಮುಖ್ಯ ಮಂತ್ರಿಗಳ ಸವಾಲು

ಮಂಡ್ಯದ ಬಳಿ ಬೂಕನಕೆರೆಯಲ್ಲಿ ಶ್ರೀ ದೊಡ್ಡ ಸಿದ್ದೇಗೌಡರ ಸಹಾಯದಿಂದ ಸ್ಥಾಪಿತವಾಗಲಿರುವ ಪ್ರಾಥಮಿಕ ಶಾಲೆಯ ಕಟ್ಟಡದ ಶಂಕು ಸ್ಥಾಪನೆ ಮತ್ತು ಅವರ ಜಯಲಕ್ಷ್ಮಿ ಅಕ್ಕಿ ಗಿರಣಿಯ ಆರಂಭೋತ್ಸವಗಳನ್ನು ಮೊನ್ನೆ ದಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆರವೇರಿಸಿದರು. ಆ ಸಂದರ್ಭದಲ್ಲಿ ಅವರು ಭಾಷಣ ಮಾಡಿ ಸಂಸ್ಥಾನದಲ್ಲಿ ವಿದ್ಯಾಭ್ಯಾಸ, ಆರೋಗ್ಯ ಮತ್ತು ಇತರ ಕಾರ್ಯಗಳಿಗಾಗಿ ಅಗಾಧ ಹಣವನ್ನು ವೆಚ್ಚಮಾಡಬೇಕಾಗಿರುವುದರಿಂದ ಭೂ ಕಂದಾಯವನ್ನು ಹೆಚ್ಚಿಸುವುದು ಅನಿವಾರ್ಯವೆಂದೂ, ಯಾರೇ ಆಗಲಿ ಹೊಸ ಕಂದಾಯವನ್ನು ವಿಧಿಸದೆ ಸರ್ಕಾರವನ್ನು ನಡೆಸಲು ಮುಂದೆ ಬಂದಲ್ಲಿ ತಾವು ಅಧಿಕಾರ ಬಿಟ್ಟುಕೊಡಲು ಸಿದ್ಧವಿರುವುದಾಗಿಯೂ ತಿಳಿಸಿದರು. ಮಾಜಿ ಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಏಪ್ರಿಲ್ ೧ ರಿಂದ ಸಾವಿರ ರೂ. ನೋಟುಗಳ ಚಲಾವಣೆ

ಬರುವ ತಿಂಗಳು ೧ ನೇ ತಾ|| ನಿಂದ ಭಾರತದ ರಿಸರ್ವ್ ಬ್ಯಾಂಕಿನವರು ಒಂದು ಸಾವಿರ, ಐದು ಸಾವಿರ ಮತ್ತು ಹತ್ತು ಸಾವಿರ ರೂಗಳ ನೋಟುಗಳನ್ನು ಮತ್ತೆ ಚಲಾವಣೆಗೆ ತರುವರು.

ಸರ್ಕಾರದ ಉಪಯೋಗಕ್ಕಾಗಿ ಕೈ ಮಗ್ಗದ ಬಟ್ಟೆ

ಮೈಸೂರು ೧೪

ರಾಜಧಾನಿಯ ಟೌನ್‌ಹಾಲಿನಲ್ಲಿ ನಡೆದ ಕೈ ಮಗ್ಗದ ಸಪ್ತಾಹದ ಪರಿಸಮಾಪ್ತಿ ಭಾಷಣವನ್ನು ಮೊನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾಡಿದರು. ಕೈ ಮಗ್ಗದ ಕೈಗಾರಿಕೆಗೆ ತಮ್ಮ ಸರ್ಕಾರವು ಪೂರ್ಣ ಬೆಂಬಲ ಕೊಡುವುದೆಂದೂ, ಸರ್ಕಾರದ ಉಪಯೋಗಕ್ಕಾಗಿ ಮುಂದೆ ಕೈ ಮಗ್ಗದ ಬಟ್ಟೆಯನ್ನೇ ಕೊಳ್ಳಬೇಕೆಂದು ತಾವು ಆಜ್ಞೆ ಹೊರಡಿಸಿರುವುದಾಗಿಯೂ ಅವರು ನುಡಿದರು. ಸಾರ್ವಜನಿಕರೂ ಈ ಕೈಗಾರಿಕೆಗೆ ಪ್ರೋತ್ಸಾಹ ನೀಡಬೇಕೆಂದು ಅವರು ಕೋರಿದರು. ಈ ಸಂಬಂಧದಲ್ಲಿ ಕೈ ಮಗ್ಗದ ಬಟ್ಟೆಗಳ ಒಂದು ಪ್ರದರ್ಶನವೂ ಸಹ ಏರ್ಪಾಡಾಗಿದ್ದಿತು.

ಉತ್ತರ ಕರ್ನಾಟಕ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ನಗರದಲ್ಲಿರುವ ಉತ್ತರ ಕರ್ನಾಟಕ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ನೆನ್ನೆ ವಾಸವೀಮಹಲ್‌ನಲ್ಲಿ ನಡೆಯಿತು. ಗೌರವಾಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರ್ಥನೆಯಾದನಂತರ ಕಾರ್ಯದರ್ಶಿಗಳಾದ ಶ್ರೀ ಪಿ ಎಲ್ ಸೌಕಾರರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ ಎ ಕುಲಕರ್ಣಿಯವರು ವರದಿಯನ್ನೊಪ್ಪಿಸಿದರು. ವಿವಿಧ ವಿನೋದಾವಳಿಗಳಾದನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಶಿಕ್ಷಣವನ್ನು ಮುಗಿಸಿಕೊಂಡು ತೆರಳಲಿರುವ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ಕೋರಲಾಯಿತು. ಯಾವುದೇ ಕ್ಷೇತ್ರದಲ್ಲಿರಲಿ ಪ್ರತಿಯೊಬ್ಬರೂ ನಾಡಿನ ಅಭ್ಯುದಯವನ್ನೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡಬೇಕೆಂದು ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಸೂಚಿಸಿ ಭಾಷಣ ಮಾಡಿದರು. ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಚಿಕ್ಕಬಳ್ಳಾಪುರದ ವಕೀಲರಿಂದ ನ್ಯಾಯಾಸ್ಥಾನಕ್ಕೆ ಬಹಿಷ್ಕಾರ

ಚಿಕ್ಕಬಳ್ಳಾಪುರದ ವಿಶೇಷ ಪ್ರಥಮ ವರ್ಗ ನ್ಯಾಯಾಧೀಶರ ಮೇಲೆ ಕಕ್ಷಿಗಾರರ ಮತ್ತು ಲಂಚ ಮುಂತಾದ ವಿಷಯಗಳ ಬಗ್ಗೆ ತಮ್ಮ ಸಂಘವು ದೂರು ಕೊಟ್ಟು, ಅವರ ತನಿಖೆ ನಡೆದಾದಮೇಲೂ ಇನ್ನೂ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳದಿರುವುದನ್ನು ಪ್ರತಿಭಟಿಸುವ ಸಲುವಾಗಿ ಕಳೆದ ಬುಧವಾರದಿಂದಲೂ ಅಲ್ಲಿನ ವಕೀಲರು ಮೇಲ್ಕಂಡ ನ್ಯಾಯಾಸ್ಥಾನದ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ಬಹಿಷ್ಕರಿಸಿರುವರೆಂದು ವರದಿಯಾಗಿದೆ.

ಇಲಿಗಳ ಕಾಟ ಹೆಚ್ಚಿ ೭೩,೦೦೦ ಸಂಸಾರಗಳಿಗೆ ಆಹಾರದ ಕೊರತೆ

ಫಿಲಿಪ್ಪೈನ್ ದ್ವೀಪಸ್ತೋಮದ ಮಿಂಡನಾವೊ ಎಂಬಲ್ಲಿ ಇಲಿಗಳ ಕಾಟ ವಿಪರೀತ ಹೆಚ್ಚಿ ಆಹಾರದ ಅಭಾವವುಂಟಾಗಿ ಜನರು ಉಪವಾಸವಿರಬೇಕಾದ ಪರಿಸ್ಥಿತಿಯುಂಟಾಗಿರುವುದೆಂದೂ, ಇದರಿಂದ ೭೩ ಸಾವಿರ ಸಂಸಾರಗಳು ತೊಂದರೆಗೀಡಾಗಿರುವುವೆಂದೂ ಗೊತ್ತಾಗಿದೆ.

ಸಂಸ್ಕೃತಿ ಪ್ರಸಾರಕ್ಕಾಗಿ ೪೯,೨೬೫ ರೂ. ವೆಚ್ಚವಾಗಿದೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಫೋ|] ಬೆಂಗಳೂರು ೧೪

ಸಂಸ್ಕೃತಿ ಪ್ರಸಾರದ ವಿಚಾರವಾಗಿ ಈ ದಿನ ಶಾಸನ ಸಭೆಯಲ್ಲಿ ಬಂದ ಪ್ರಶ್ನೆಗೆ ವಿದ್ಯಾ ಮಂತ್ರಿಗಳು ಉತ್ತರವಿತ್ತು, ಅದಕ್ಕಾಗಿ ಇದುವರೆಗೆ ೪೯,೨೬೫ ರೂ ವೆಚ್ಚವಾಗಿದೆಯೆಂದು ತಿಳಿಸಿದರು. ಸಂಸ್ಕೃತಿ ಪ್ರಸಾರದಿಂದ ಒಳ್ಳೆ ಬುದ್ಧಿ, ದೈವ ಭಕ್ತಿ, ಸಾಕ್ಷಾತ್ಕಾರಗಳಾಗುವುವೆಂದು ಅವರು ಹೇಳಿದರು. ಎಷ್ಟು ಜನ ಮಂತ್ರಿಗಳಿಗೆ ಸಾಕ್ಷಾತ್ಕಾರವಾಗಿದೆಯೆಂದು ಬಂದ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ಲಾಡು, ಚಿರೋಟಿ ಹಂಚಲಾಗುತ್ತಿದೆಯೇ ಎಂದು ಶ್ರೀ ನಾಗಯ್ಯ ರೆಡ್ಡಿಯವರು ಕೇಳಲು ಧರ್ಮಾರ್ಥರು ಕೊಟ್ಟರೆ ಅದನ್ನು ಮಾಡಬಹುದೆಂದು ತಿಳಿಸಲಾಯಿತು. ಜನರಿಗೆ ಈ ಪ್ರಸಾರ ಕಾರ್ಯವು ಸಮ್ಮತವಿಲ್ಲವೆಂಬ ಅಂಶವೂ ತಿಳಿಯದೆಂದು ಸಚಿವರು ನುಡಿದರು.

ನಾಲ್ಕು ಮುನ್ಸೀಫರುಗಳು ನಿವೃತ್ತರಾಗುವರೆಂದೂ ೧೨ ಜನ ಹೊಸ ಮುನ್ಸೀಫರುಗಳನ್ನು ನೇಮಿಸುವ ವಿಚಾರದಲ್ಲಿ ಹೈಕೋರ್ಟಿನೊಡನೆ ಸಮಾಲೋಚನೆ ನಡೆಯುತ್ತಿದೆಯೆಂದೂ ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

○ ವಿಧಾನ ಸೌಧದ ಕಟ್ಟಡದ ಪರಿಶೀಲನೆಯ ಕಾಲದಲ್ಲಿ ಮುಖ್ಯಮಂತ್ರಿಗಳ ಮೇಲೆ ಕೈ ಮಾಡಿದ ವ್ಯಕ್ತಿಯ ಮೊಕದ್ದಮೆಯಲ್ಲಿ ಈ ದಿನ ಮುಖ್ಯ ಮಂತ್ರಿಗಳ ಅಂಗ ರಕ್ಷಕ ನಾಯಕ್ ಲಿಂಗಪ್ಪ, ಕಾನ್ಸ್ಟೇಬಲ್ ನರಸಿಂಹಯ್ಯ ಮತ್ತು ರಾಚಪ್ಪನೆಂಬುವರ ಸಾಕ್ಷಿ ನಡೆದು ೨೭ ಕ್ಕೆ ಮುಂದುವರಿಸಲ್ಪಟ್ಟಿತು.

ದನಗಳ ಪ್ರದರ್ಶನದಲ್ಲಿ ಕತ್ತೆಗೂ ಬಹುಮಾನ

ಕೂಡನೂರಿನಲ್ಲಿ ನಡೆದ ದನಗಳ ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭದಲ್ಲಿ ಪ್ರದರ್ಶನಕ್ಕಾಗಿ, ಚೆನ್ನಾಗಿ ಬೆಳೆಸಿ ತಂದಿದ್ದ ಕತ್ತೆಯೊಂದಕ್ಕೆ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಬಹುಮಾನವನ್ನು ಕೊಟ್ಟರೆಂದು ಗೊತ್ತಾಗಿದೆ. ಕೋಳಿ ಮೊಟ್ಟೆಯು ಒಡೆಯದ ರೀತಿಯಲ್ಲಿ ಅದಕ್ಕೆ ಮೊಳೆಯನ್ನು ಹೊಡೆದು ಪ್ರದರ್ಶಿಸಿದ ಮತ್ತೊಬ್ಬರಿಗೂ ಬಹುಮಾನವನ್ನು ಕೊಡಲಾಯಿತು.

ಪೂರ್ವ ಪಾಕಿಸ್ತಾನದಲ್ಲಿ ಗೌರ್ನರರ ಆಡಳಿತ

ಪೂರ್ವ ಪಾಕಿಸ್ತಾನದ ಶಾಸನ ಸಭೆಯ ಅವಧಿಯು ನೆನ್ನೆ ಮಧ್ಯ ರಾತ್ರಿಗೆ ಅಂತ್ಯವಾದುದರಿಂದ ಅಲ್ಲಿ ಇಂದಿನಿಂದ ಗವರ್ನರರ ಆಡಳಿತವನ್ನು ಜಾರಿಗೆ ತರಲಾಗಿದೆ. ಅಲ್ಲಿ ಈಗ ನಡೆದಿರುವ ಮಹಾ ಚುನಾವಣೆಯ ಫಲಿತಾಂಶಗಳು ಇಂದು ಹೊರಬೀಳುವುವೆಂದೂ, ಹೊಸ ಸರ್ಕಾರದ ರಚನೆಯಾಗುವವರೆಗೆ ಅಲ್ಲಿ ಗವರ್ನರರ ಆಡಳಿತವು ಮುಂದುವರಿಯುವುದೆಂದೂ ಗೊತ್ತಾಗಿದೆ.

ಹೋಟೇಲು ನೋಲಿ ಮಾರಾಟ ತೆರಿಗೆ ಹೆಚ್ಚಿಸುವುದನ್ನು ನಿಲ್ಲಿಸಬೇಕು

ಮುಖ್ಯ ಮಂತ್ರಿಗಳಲ್ಲಿ ಹೋಟೇಲು ಮಾಲೀಕರ ಮನವಿ

ಮೈಸೂರು ೧೫

ನಗರದ ಹೋಟೇಲುಗಳ ಮಾಲೀಕರು ಮಾರಾಟ ತೆರಿಗೆಯನ್ನು ಶೇ|| ೧೦ ರಷ್ಟು ಹೆಚ್ಚಿಸಲಿರುವುದನ್ನು ಕೂಡಲೇ ಕೈಬಿಡುವಂತೆ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವ ನಿರ್ಣಯವನ್ನು ಕಳೆದ ಶುಕ್ರವಾರ ನಡೆದ ಸಭೆಯಲ್ಲಿ ಅಂಗೀಕರಿಸಿರುತ್ತಾರೆ ಈಗ ಹೆಚ್ಚಿಸಲಿರುವ ದರವು ಆಶ್ಚರ್ಯಕರವೂ ಮತ್ತು ಅಯುಕ್ತವೂ ಆಗಿರುವುದೆಂದು ಸಭೆಯ ಅಭಿಪ್ರಾಯಪಟ್ಟಿದೆ ಬಜೆಟ್ಟಿನಲ್ಲಿ ಕಂಡುಬಂದ ಭಾರಿ ಮೋಸವನ್ನು ಭರ್ತಿ ಮಾಡುವ ಕಾತರತೆಯಲ್ಲಿ ಹೋಟೇಲುಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ಎಣಿಸದೆ, ತೆರಿಗೆಯನ್ನು ಹೆಚ್ಚಿಸಿರುವರೆಂದೂ ಆಂಧ್ರ ಮತ್ತು ಮದ್ರಾಸ್ ಪ್ರಾಂತಗಳಲ್ಲೂ ಭಾರಿ ಮೋಸಗಳಿದ್ದರೂ ಸಹ ಅಲ್ಲಿನ ಸರ್ಕಾರದವರು ಹೋಟೆಲುಗಳ ಗೊಡವೆಗೆ ಹೋಗಿಲವೆಂದೂ ತಿಳಿಸಲಾಗಿದೆ

ಸರ್ಕಾರದವರು ಹೋಟೇಲು ವ್ಯಾಪಾರ ಬಗ್ಗೆ ಸ್ವಲ್ಪವಾದರೂ ಪರಿಚಯ ಹೊಂದಿರಬೇಕೆಂದು ... ಶಾಸಿನ ಮಾರಾಟ ತೆರಿಗೆ ವಿಧಿಸುವುದಕ್ಕೆ ... ಕರಗಳು ಹೇಳಿರುತ್ತಾರೆ

ಹೋಟೇಲುಗಳ ಮೇಲೆ ಈಗ ವಿಧಿಸಿರುವ ತೆರಿಗೆ ... ದರವು ... ರಷ್ಟು ಹೆಚ್ಚಿಸಲ್ಪಟ್ಟರೆ ... ದುಬಾರಿಯೆಂದೂ, ಕಾಫಿ ಕಾಸಿನೂಟ ... ಕ್ರಮವಾಗಿ ... ಅವರ ಎಲ್ಲ ಸೌಲಭ್ಯಗಳನ್ನೂ ಉಳಿಸಲಾಗಿರುವುದೆಂದೂ, ಹೋಟೇಲು ವ್ಯಾಪಾರವನ್ನು ಕೈಗಾರಿಕೆಯೆಂದು ಭಾವಿಸಿ ಅದರಂತೆ ನಡೆಸಿಕೊಳ್ಳಲಾಗುತ್ತಿರುವುದೆಂದೂ ಸಭೆಯಲ್ಲಿ ತಿಳಿಸಲಾಗಿದೆ ಮುಖ್ಯರ ಮಾಲೀಕರು ಮತ್ತು ನಿರಾಶ್ರಿತರ ಬಗ್ಗೆ ಅನುಕೂಲ ... ವ್ಯಾಪಾರವು ಕುಗ್ಗಿಹೋಗಿರುವುದಾಗಿ ಹೇಳಲಾಗಿದೆ

ದೇಶದಲ್ಲಿ ಹೆಚ್ಚು ಹೋಟೇಲುಗಳು ಆಗುತ್ತಿರುವುದರಿಂದ ವ್ಯಾಪಾರದಲ್ಲಿ ಲಾಭವಿರಬಹುದೆಂದು ಭಾವಿಸಬಾರದೆಂದೂ ಹೆಚ್ಚು ಮಂದಿ ನಿರುದ್ಯೋಗಿಗಳು ಆದರೆ ಎಷ್ಟು ಲಾಭವೋ ಅದರಂತೆ ಹೋಟೇಲಿನವರ ಸ್ಥಿತಿಯೂ ಆಗದೆಯೆಂದೂ ನಿರ್ಣಯವು ತಿಳಿಸಿರುತ್ತದೆ

ಏಪ್ರಿಲ್ ಒಂದಕ್ಕೆ ಮೊದಲು ಈಗಿನ ದರದಂತೆ ಮಾರಾಟ ತೆರಿಗೆ ಕೊಡಬೇಕಾಗುವುದೆಂದೂ, ಹೊಸ ದರದಿಂದ ಅದು ಏಪ್ರಿಲ್ ನಿಂದ ಆಗುವುದೆಂದೂ ಲೆಕ್ಕ ಹಾಕಲಾಗಿದೆ ಹೋಟೇಲುಗಳಿಗೆ ಬಹುತೇಕವಾಗಿ ಬರುವ ಒಬ್ಬೊಬ್ಬರೇ ಗಿರಾಕಿಗಳು ಹಲವು ಅಡಿಗೆಗಳನ್ನು ಮಾತ್ರ ವ್ಯಾಪಾರ ಮಾಡುವ ... ಹೋಟೇಲಿನವರು ತೆರಿಗೆಯನ್ನು ವಸೂಲು ಮಾಡುತ್ತಿರುವರೆಂದು ಸೂಚಿಸಿ, ಹೆಚ್ಚು ತೆರಿಗೆಯು ಹೋಟೇಲುಗಳು ಮುಚ್ಚಿ ಅಲ್ಲಿನ ನೌಕರರ ಒನರು ನಿರುದ್ಯೋಗಿಗಳಾಗುವರೆಂದು ನಿರ್ಣಯವು ಹೇಳಿರುತ್ತದೆ

ಸರ್ಕಸ್ ಪ್ರದರ್ಶನ

ಬೊಂಬಾಯಿ ... ಸರ್ಕಸ್ ಸಂಸ್ಥೆಯವರು ರಾಜಧಾನಿಯ ಟೌನ್ ಹಾಲ್ ಮೈದಾನದಲ್ಲಿ ನೆನ್ನೆಯಿಂದ ಪ್ರದರ್ಶನಗಳನ್ನು ಆರಂಭಿಸಿರುತ್ತಾರೆ ಕ್ರೂರ ಮೃಗವಾದ ಹುಲಿಯೊಡನೆ ನಡೆಸುವ ಸಾಹಸ ಕಾರ್ಯಗಳ, ಆನೆ, ಕುದುರೆಗಳಿಂದ ಪ್ರದರ್ಶನ, ನೃತ್ಯ ಮೊದಲಾದ ... ಒಂದೇ ಕಾಲದಲ್ಲಿ ಇಬ್ಬರು ಮೋಟಾರುಬೈಸಿಕಲ್ಲುಗಳನ್ನು ನಡೆಸುವ ಸಾಹಸವು ಆಕರ್ಷಕವಾಗಿದೆ ಸಂಸ್ಥೆಯವರಿಗೆ ಸಂಪೂರ್ಣ ಪ್ರೋತ್ಸಾಹ ದೊರೆಯುವುದೆಂದು ಆಶಿಸುತ್ತೇವೆ

ಸಹಸ್ರ ಚಂಡೀ ಮಹಾಯಾಗ

ಮಹಾ ಜನರಲ್ಲಿ ವಿನಂತಿ

ಮೈಸೂರು ೧೫

ಯುದ್ಧ ಕ್ಷಾಮ ಡಾಮರಾದಿಗಳಿಂದ ಬಳಲಿರುವ ಈ ಪ್ರಪಂಚದಲ್ಲಿ ಶಾಶ್ವತವಾದ ಸುಖ ಶಾಂತಿಗಳು ನೆಲೆಸುವಂತೆ ಇದೇ ಮಾರ್ಚಿ ೧೯ನೇ ತಾರೀಖಿನಿಂದ ೨೮ನೇ ತಾರೀಖು ಪೂರಾ ಮೈಸೂರು ಚಾಮುಂಡಿಬೆಟ್ಟದ ಮೇಲೆ "ಸಹಸ್ರ ಚಂಡೀ ಮಹಾ ಯಾಗ"ವನ್ನು ಮಾಡಿ ಜಗನ್ಮಾತೆಯ ಅನುಗ್ರಹವನ್ನು ಪಡೆಯಲು ವಿಶೇಷ ಸಿದ್ಧತೆಗಳನ್ನು ಮಾಡಲಾಗಿದೆ ಶ್ರೀ ... ಮಹಾಸ್ವಾಮಿಯವರು ದಯಮಾಡಿ ಈ ಮಹಾಯಾಗದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾರೆ ಲೋಕ ಕಲ್ಯಾಣ ಸಾಧಕವಾದ ಈ ಪವಿತ್ರ ಕಾರ್ಯಕ್ಕೆ ಅನೇಕ ಶ್ರೀಮಂತರು ವರ್ತಕರು ಮತ್ತು ಅಧಿಕಾರಿಗಳು ಉದಾರವಾಗಿ ಸಹಾಯ ಮಾಡಿದ್ದಾರೆ

ಈ ಮಹಾ ಯಾಗಾಂಗವಾಗಿ ಪ್ರತಿನಿತ್ಯವೂ ಸಹಸ್ರಾರು ಜನರಿಗೆ ಅನ್ನದಾನವು ... ಯಾಗದ ಕಡೆಯ ದಿನ (ತಾ|| ೨೮ನೇ ಗುರುವಾರ) ಹತ್ತು ಸಹಸ್ರ ಜನರಿಗೆ ಮಹಾ ಸಂತರ್ಪಣೆ ನಡೆಸಲು ಸಂಕಲ್ಪವಾಗಿದೆ ... ದವಸ ಧಾನ್ಯ ... ಮತ್ತು ... ದ್ರವ್ಯ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ

ಸಹಾಯ ದ್ರವ್ಯವನ್ನು ಈ ಕೆಳಗೆ ನಮೂದಿಸಿರುವವರಲ್ಲಿ ಕಳುಹಿಸಬಹುದು ... ದವಸ ಧಾನ್ಯ ಮೊದಲಾದ ಪದಾರ್ಥಗಳನ್ನು ... ದಯಮಾಡಿ ಬೆಟ್ಟದ ಮೇಲೆ ಯಾಗ ಶಾಲೆಗೆ ತಲುಪಿಸಬೇಕಾಗಿ ವಿನಂತಿ

೧ ಧರ್ಮರತ್ನಾಕರ ಶ್ರೀ ... ನವರು ಮಹಾ ಯಾಗ ಸಮಿತಿಯ ಅಧ್ಯಕ್ಷರು ... ಮೈಸೂರು

೨ ರಾಜಕಾರ್ಯ ಪ್ರಸಕ್ತ ... ಬಹದ್ದೂರ್ ಎಂ ... ಸ್ವಾಮಿಯವರು ... ಮೈಸೂರು

೩ ಎಂ ... ನವರು, ಮೈಸೂರು

೪ ... ಶ್ರೀನಿವಾಸರಾಯರು ಯಾಗ ಕಾರ್ಯದರ್ಶಿಗಳು, ಚಾಮುಂಡಿಬೆಟ್ಟ ಮೈಸೂರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ... ಮಧ್ಯಾಹ್ನ ... ಸಂಜೆ ... ಕಾರ್ಯಕ್ರಮ

ಹೋಟೇಲು ಕೆಲಸಗಾರರ ಸಂಘ

ರಾಜಧಾನಿಯ ಹೋಟೇಲು ಕೆಲಸಗಾರರ ಸಂಘದ ಸರ್ವ-ಸದಸ್ಯರ ಸಭೆಯು ಕಳೆದ ಶುಕ್ರವಾರ ನಡೆದ, ಹೊಸದಾಗಿ ಚುನಾಯಿತವಾಗಿರುವ ಎಡಳಿತ ಮಂಡಳಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು ಬೊಂಬಾಯಿ ಆನಂದಭವನದ ಮಾಲೀಕರು ವಿಶ್ರಾಂತಿ ಕೆಲಸಗಾರರಿಗೆ ಕೆಲಸ ಕೊಡುವ ಉದ್ದೇಶದಿಂದ ಅವರಿಗೆ ... ಮತ್ತು ... ನಿರ್ಣಯವು ಅಂಗೀಕರಿಸಲ್ಪಟ್ಟಿತು

ಹಿಂದಿ ತರಗತಿಗಳು

ನಂಜನಗೂಡಿನ ಶ್ರೀ ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿನಲ್ಲಿ ಬೇಸಿಗೆ ರಜಾ ಕಾಲದಲ್ಲಿ ಹಿಂದಿ ಪ್ರಚಾರ ಸಭೆಯವರಿಂದ ಪ್ರಾಥಮಿಕ ಮತ್ತು ಮಾಧ್ಯಮ ತರಗತಿಗಳು ತೆರೆಯಲ್ಪಡುವುವು ವಿದ್ಯಾರ್ಥಿಗಳು ಮತ್ತು ಪೋಷಕರು ಪಡೆದುಕೊಳ್ಳುವಂತೆ ಇನ್ಸ್ಟಿಟ್ಯೂಟಿನವರು ಕೋರಿರುತ್ತಾರೆ

ರಷ್ಯದ ಪ್ರಧಾನಿಯಿಂದ ನೆಹರೂರವರ ಪ್ರಶಂಸೆ

ರಷ್ಯದ ಪ್ರಧಾನಿ ಮಾಲೆಂಕಾಫ್‌ರವರು ಮಾಸ್ಕೊವಿನಲ್ಲಿ ಭಾಷಣ ಮಾಡಿ ಪ್ರಪಂಚದ ಶಾಂತಿಗಾಗಿ ಭಾರತವು ಮಹತ್ತರ ಶ್ರಮಿಸುತ್ತಿರುವುದೆಂದು ಹೇಳುತ್ತಾರೆ ರಷ್ಯದ ಆಕ್ರಮಣಕ್ಕಾಗಿ ನಡೆದ ಪ್ರಯತ್ನಗಳನ್ನೆಲ್ಲಾ ಭಾರತದ ಮುಖಂಡರು ಎದುರಿಸಿ ನಿಂತಿದ್ದುದಾಗಿಯೂ ರಷ್ಯದ ರಾಷ್ಟ್ರಗಳಾವುವೂ ಯಾವುದೇ ವಿದೇಶೀಯ ಆಕ್ರಮಣಕ್ಕಾಗಿ ಒಳಗಾಗಬೇಕಿಲ್ಲವೆಂದು ಪ್ರಧಾನಿ ನೆಹರೂರವರು ಹೇಳಿರುವ ಮಾತುಗಳಲ್ಲಿ ತುಂಬಾ ಅರ್ಥವಿರುವುದೆಂದೂ ಅವರು ಹೇಳಿದರು

ಇನಾಂದಾರರುಗಳ ಸಭೆ

ಸರ್ಕಾರದವರು ಇನಾಂ ಗ್ರಾಮಗಳನ್ನು ರದ್ದುಪಡಿಸಲು ಈಗ ತಂದಿರುವ ಮಸೂದೆಯು ಈಗಿನ ಶಾಸನ ಸಭೆಯಲ್ಲಿ ಮಂಜೂರಾಗಿರುವಂತೆ ಶಾಸನವಾಗಿ ಜಾರಿಗೆ ಬಂದಲ್ಲಿ ಅನೇಕ ಇನಾಂದಾರರುಗಳಿಗೆ ಬಹಳ ಪೆಟ್ಟಾಗಿ ತೊಂದರೆ ಮತ್ತು ನಷ್ಟ ಉಂಟಾಗುವುದರಿಂದ ಈ ವಿಷಯ ಬಗ್ಗೆ ಮುಂದಿನ ನಡವಳಿಕೆ ಬಗ್ಗೆ ಆಲೋಚಿಸಲು ಮೈಸೂರು ನಗರ ಮೈಸೂರು ಪ್ಯಾಲೇಸ್ ರಸ್ತೆಯಲ್ಲಿರುವ ಜಹಗೀರ್‌ದಾರ್ ಶ್ರೀ ಕೃಷ್ಣರಾಯರ ಬಂಗಲೆಯಲ್ಲಿ ತಾ|| ೧೮-೩-೫೪ ನೇ ಗುರುವಾರ ಸಾಯಂಕಾಲ ೫ ಗಂಟೆಗೆ ಒಂದು ಸಭೆಯನ್ನು ನಡೆಸುವಂತೆ ಏರ್ಪಾಡು ಮಾಡಿರುವುದರಿಂದ ಸಕಲ ಸದಸ್ಯರೂ ಮತ್ತು ಇತರರೂ ಆಸಕ್ತಿ ಉಳ್ಳವರೂ ಸಹ ಇದೇ ಆಹ್ವಾನವೆಂದು ಭಾವಿಸಿ ಸಕಾಲಕ್ಕೆ ದಯಮಾಡಿಸಿ ತಮ್ಮ ಸಲಹೆಗಳನ್ನು ಕೊಡಬೇಕಾಗಿ ಇನಾಂದಾರರ ಸಂಘದ ಕಾರ್ಯದರ್ಶಿ ಶ್ರೀ ಪಿ ವೆಂಕಟಸುಬ್ಬಯ್ಯನವರು ಪ್ರಾರ್ಥಿಸಿರುತ್ತಾರೆ

PALACE MARAMATH DEPARTMENT

ABSTRACT NOTIFICATION

Dated 12 March 1954

Sealed Tenders are called for constructing Six Horses in the open space to the South of Jaganmohan Palace along Ramavilas Agrahar Road Last date for receiving quotations is 22ND MARCH 1954 upto 3 30 p m and the earnest money to be deposited is Rs 2 800 only Further intimations can be had from the office

H K PANDITARADHYA
Palace Engineer

SOUTHERN RAILWAY
TENDER NOTIFICATION

SEALED TENDERS IN THE PRESCRIBED FORM ARE INVITED BY THE WORKS MANAGER C W S, S R, MYSORE SOUTH FOR

1 Picking up and delivering to the Railway, Cinders ½ and above Purchasing by the Contractor of all Cinders below ½

3 Removing slag and Cleaning of ash in the Central Railway Workshop MYSORE SOUTH from 1 4 54 to end of 31-3 1955

The Tenders are received up to 2 M on or before 25th March 54

The intending tenderers should send the tenders duly sealed enclosing the receipts granted by Regional Accounts Officer Southern Railway Mysore for having remitted an earnest money of Rs 200

Prescribed Tender Forms can be had at Rupee One only each (Re 1 0 0) in the office of the undersigned

B H Sreekantaiah
Works Manager
Southern Railway Workshop
Mysore South

ನೋಟಿಫಿಕೇಷನ್

ನಂ ಸಿ 2-124/53 ಮೈಸೂರು 8-3 54

ಈ ಮ ... ಸಹ ಸ್ವ ... ಜನರೂ ತಿಳಿಯಬಹುದೇನೆಂದರೆ

ಮೈಸೂರು ಜಿಲ್ಲೆಯಲ್ಲಿ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ... ದರಖಾಸ್ತು ... ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಿಗೆ ... ಅರ್ಜಿಯನ್ನು ಸಲ್ಲಿಸಬೇಕು ಅರ್ಜಿ ಸಲ್ಲಿಸಲು ಅರ್ಹತೆಯುಳ್ಳವರು ಯಾರೆಂದರೆ ——

1) ಜಮೀನು ಹೊಂದಲು ಅರ್ಹರು ಪಡೆದಿರುವ ಭೂಸ್ವತ್ತುಳ್ಳ ಕೃಷಿಕರು 2) ಜಮೀನು ಇಲ್ಲದ ಕೃಷಿಕರು 3) ಹಿಂದುಳಿದ ವರ್ಗಕ್ಕೆ ಸೇರಿದವರು 4) ಸಾಕಾದಷ್ಟು ಜಮೀನು ಇಲ್ಲದವರು 5) ರಾಜಕೀಯ ... ಮೈಸೂರು ಡಿಸ್ಟ್ರಿಕ್ಟ್‌ನವರು 6) ಮನುಷ್ಯರಾದ ಜಮೀನು ಕೃಷಿಕರು

ಅರ್ಜಿಯನ್ನು ಈ ತಾರೀಖಿನಿಂದ ... ಒಂದು ತಿಂಗಳ ಒಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಿಗೆ ಹಾಕಿಕೊಳ್ಳಬೇಕು ... ಅರ್ಜಿದಾರರು ... ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರ ಆಫೀಸಿನಲ್ಲಿಗಾಗಲೀ ... ಪಡೆಯಬಹುದು ...

ಈ ಮೊದಲೇ ಈ ತಾಲ್ಲೂಕುಗಳಲ್ಲಿ ಜಮೀನುಗಳನ್ನು ಅಪೇಕ್ಷಿಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ... ಹೆಚ್ಚಿನ ವಿವರಗಳನ್ನು ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಗಳಲ್ಲಿ ಪಡೆಯಬಹುದು

—: ಗ್ರಾಮಗಳ ಹೆಸರು —

1 ... ಗ್ರಾಮ 2 ... ಗ್ರಾಮ 3 ... ಗ್ರಾಮ 4 ... ಗ್ರಾಮ 5 ... ಗ್ರಾಮ 6 ... ಗ್ರಾಮ 7 ... ಗ್ರಾಮ, ಹುಣಸೂರು ತಾಲ್ಲೂಕು 8 ... ಗ್ರಾಮ ಹೆಗ್ಗಡದೇವನಕೋಟೆ ತಾಲ್ಲೂಕು

ಎಂ ಎಸ್ ಸ್ವಾಮಿನಾಥನ್,
ಡೆಪ್ಯುಟಿ ಕಮೀಷನರ್ ಮೈಸೂರು ಡಿಸ್ಟ್ರಿಕ್ಟ್

Edited, Printed and Published by A R Nagarajan at Sadhvi Press, D Subbiah Road Mysore

ಟೆಲಿಫೋನ್ ನಂ 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದು ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE TUESDAY 16-3-1954 . ಮೈಸೂರು : ಮಂಗಳವಾರ ೧೬-೩-೧೯೫೪ [ಸಂಚಿಕೆ ೩೦೪

ತಿರು-ಕೊಚ್ಚಿ ಸಮಾಜವಾದಿ ಸರ್ಕಾರಕ್ಕೆ ಕಾಂ|| ಬೆಂಬಲ

ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯ ಬಳಕೆ

ಹಿರಿಯ ಶಾಸನ ಸಭೆಯಲ್ಲಿ ನಿರ್ಣಯ ವಾಪಸು

ಬೆಂಗಳೂರು ೧೬

ಸಂಸ್ಥಾನದ ನ್ಯಾಯಾಲಯಗಳ ಮತ್ತು ಆಡಳಿತದ ವ್ಯವಹಾರಗಳು ಪ್ರಾದೇಶಿಕವಾದ ಕನ್ನಡ ಭಾಷೆಯಲ್ಲಿ ನಡೆಯುವಂತಾಗಬೇಕೆಂದು ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರು ನಿರ್ಣಯವೊಂದನ್ನು ತಂದಿದ್ದರು. ಸಾಕ್ಷ್ಯಗಳನ್ನು ಕನ್ನಡದಲ್ಲೇ ರಿಕಾರ್ಡ್ ಮಾಡಿಕೊಳ್ಳುವ ತೆಹ್ಸೀಲ್ ಕೋರ್ಟಿಗೆ ತಿಳಿಸುವುದಾಗಿಯೂ ಆಡಳಿತದ ವ್ಯವಹಾರದಲ್ಲಿ ಕನ್ನಡವನ್ನು ಬಳಸುವುದರಿಂದ ತೊಂದರೆಯಿರುವುದೆಂದೂ ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಹೇಳಿದನಂತರ ನಿರ್ಣಯವನ್ನು ಸೂಚಕರು ವಾಪಸು ತೆಗೆದುಕೊಂಡರು.

ಕಿರಿಯ ಸಭೆಯಲ್ಲಿ, ವಿದ್ಯುಚ್ಛಕ್ತಿ ಬಳಕೆಯ ಮೇಲೆ ಹೆಚ್ಚು ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದ ತಿದ್ದುಪಡಿ ಮಸೂದೆಯು ಅಂಗೀಕೃತವಾಯಿತು. ಇದರಿಂದ ೧೨ ಲಕ್ಷ ರೂ. ಹೆಚ್ಚು ವರಮಾನ ಬರುವ ನಿರೀಕ್ಷೆಯಿದೆ.

ಮಸೂದೆಯು ವ್ಯಾಪ್ತಿಗೆ ಗೃಹಗಳು ಮತ್ತು ನೀರಾವರಿ ಪಂಪುಗಳಿಗೆ ಸಂಬಂಧಿಸಿದ ವಿದ್ಯುಚ್ಛಕ್ತಿ ದರವು ಅನ್ವಯಿಸುವುದಿಲ್ಲವೆಂದು ವ್ಯವಸಾಯ ಮಂತ್ರಿ ಡಾ|| ಎಚ್. ನಾಗನಗೌಡರು ಹೇಳಿರುವರು. ಆಯವ್ಯಯ ಪತ್ರವನ್ನು ಮಂಡಿಸಲು ತಂದಿರುವ ಹೊಸ ತೆರಿಗೆ ಸಲಹೆಗಳ ಪೈಕಿ ಇದು ಮೊದಲನೆಯ ಮಸೂದೆಯಾಗಿದೆ.

ಚರ್ಚೆಯ ಕಾಲದಲ್ಲಿ ಶ್ರೀ ಎ. ಭೀಮಪ್ಪ ನಾಯಕರು ಕ್ರಿಯಾಲೋಪವೆತ್ತಿ ಪ್ರತಿಯೊಂದು ಮಸೂದೆಗೂ ಸಂಬಂಧಿಸಿದಂತೆ ಹಣಕಾಸಿನ ಮಸೂದೆಯೊಂದನ್ನು ಸಭೆಯ ಮುಂದಿಡಬೇಕೆ ಹಣಕಾಸಿಗೆ ಸಂಬಂಧಿಸಿದಂತೆ ಮಸೂದೆಗಳನ್ನು ತರಬೇಕೆಂದು ಹೇಳಿದರು.

ಮುಖ್ಯಮಂತ್ರಿಯವರು ಉತ್ತರವಿತ್ತು, ತೇರಿಜು ಆದ ನಿಧಿಗಳಿಂದ ವೆಚ್ಚಮಾಡಬೇಕಾದ ಸಂದರ್ಭಗಳಲ್ಲಿ ಮನವಿಗಳನ್ನು ಸಲ್ಲಿಸಬೇಕೆಂದೂ, ಸಭೆಯ ಮುಂದಿರುವುದು ಆದಾಯಕ್ಕೆ ಸಂಬಂಧಿಸಿದುದೆಂದೂ ಹೇಳಿದರು. ಕ್ರಿಯಾಲೋಪವನ್ನು ತಳ್ಳಿಹಾಕಲಾಯಿತು.

ಬೇರೆ ನ್ಯಾಯಾಧೀಶರಿಂದ ರಾಮನಗರದ ಕಂಟೆಂಪ್ಟ್ ಮೊಕದ್ದಮೆ ವಿಚಾರಣೆ

ರಾಮನಗರದ ಕಂಟೆಂಪ್ಟ್ ಆಫ್ ಕೋರ್ಟ್ ಪ್ರಕರಣದ ಮೊಕದ್ದಮೆಯನ್ನು ಶ್ರೀ ಎಚ್. ಹುಚ್ಚಪ್ಪನವರ ಬೆಂಚಿಗೆ ವಿಚಾರಣೆಗಾಗಿ ಹಾಕಲಾಗಿದೆ. ಬೇರೊಂದು ಕೋರ್ಟಿಗೆ ತನ್ನ ಮೊಕದ್ದಮೆಯನ್ನು ವರ್ಗಾಯಿಸಬೇಕೆಂದು ಶ್ರೀ ವಿ. ನಂಜಪ್ಪನವರು ಅರ್ಜಿಯನ್ನು ಸಲ್ಲಿಸಿದ್ದರು.

ಕಾಡಾನೆಯಿಂದ ತುಳಿಯಲ್ಪಟ್ಟು ಮರಣ

ಕೊಯಮತ್ತೂರಿನ ಬಳಿ ವಲಯಾರ್ ಎಂಬ ಕಾಡಿನಲ್ಲಿ ಕಳೆದ ಶುಕ್ರವಾರ ಹಲವರು ಮರ ಕಡಿಯುತ್ತಿದ್ದಾಗ ಕಾಡಾನೆಯೊಂದು ಅವರನ್ನು ಅಟ್ಟಿಸಿಕೊಂಡುಹೋಗಿ ಒಬ್ಬನನ್ನು ತುಳಿದು ಸಾಯಿಸಿತೆಂದು ವರದಿಯಾಗಿದೆ.

ಹೋಟೇಲುಗಳ ಮೇಲಿನ ಮಾರಾಟ ತೆರಿಗೆ ನೂರಕ್ಕೆ ೩ ರೂ ೨ ಆಣೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ನಿರ್ಧಾರ

ಸ್ವಂ. ಸು. ಫೋ.] ಬೆಂಗಳೂರು ೧೬

ಈ ದಿನ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಆಯವ್ಯಯ ಅಂದಾಜಿನ ಪಟ್ಟಿಯು ಚರ್ಚಿಸಲ್ಪಟ್ಟು ಹೋಟೇಲುಗಳ ಮೇಲೆ ಮಾರಾಟ ತೆರಿಗೆಯನ್ನು ೫|| ೧೨ಕ್ಕೆ ಹೆಚ್ಚಿಸುವುದರ ಬದಲು ನೂರಕ್ಕೆ ೩ ರೂಪಾಯಿ ೨ ಆಣೆಯಂತೆ ಹೆಚ್ಚಿಸಲು ನಿರ್ಧಾರವಾಯಿತೆಂದು ತಿಳಿದುಬಂದಿದೆ.

○ ಕಿರಿಯ ಶಾಸನ ಸಭೆಯ ಸದಸ್ಯ ಸ್ಥಾನಕ್ಕೆ ಮಂಡ್ಯದ ಶ್ರೀ ಕೆ. ವಿ. ಶಂಕರೇಗೌಡರು ರಾಜೀನಾಮೆ ಸಲ್ಲಿಸಿರುವರೆಂದೂ ಅವರ ಸ್ಥಾನಕ್ಕೆ ಉಪ ಚುನಾವಣೆ ನಡೆಸಲಾಗುವುದೆಂದೂ ತಿಳಿದುಬಂದಿದೆ.

ನಿರುದ್ಯೋಗಿಗಳ ಸಂಘ

ಬೆಂಗಳೂರಿನ ಮಲ್ಲೇಶ್ವರಪುರದಲ್ಲಿ ನಿರುದ್ಯೋಗಿಗಳ ಸಂಘ ಮತ್ತು ಸಾಮೂಹಿಕ ಪರಿಹಾರ ಕೇಂದ್ರ ಎಂಬ ಸಂಘವನ್ನು ಕಳೆದ ಜನವರಿ ತಿಂಗಳಲ್ಲಿ ಸ್ಥಾಪಿಸಲಾಯಿತು. ಉದ್ಯೋಗಗಳನ್ನು ಕಲ್ಪಿಸಲೂ ನಿರುದ್ಯೋಗಿಗಳ ಬಗ್ಗೆ ಗಣತಿಯನ್ನು ತೆಗೆದುಕೊಳ್ಳಲೂ ಉದ್ದೇಶಿಸಲಾಗಿದೆ. ನೌಕರಿಗಳನ್ನು ಕೊಡಿಸಲು ವೃತ್ತಿಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸಲೂ ಆಲೋಚಿಸಲಾಗಿದೆ. ಈ ಸಂಘದ ಸದಸ್ಯತ್ವವು ಉಚಿತವೆಂದೂ, ಪ್ರವೇಶಧನವಿರುವುದಿಲ್ಲವೆಂದೂ ಸೇರಲಿರುವವರು ವಿಧ್ಯುಕ್ತವಾದ ಮತ್ತು ೧|| ಆಣೆ ಬೆಲೆಯ ಅರ್ಜಿ ನಮೂನೆಯಲ್ಲಿ ಬರೆದುಕೊಡಬೇಕೆಂದೂ ತಿಳಿಸಲಾಗಿದೆ. ಮೈಸೂರು ನಗರಕ್ಕೆ ಸಂಘದ ಸಂಚಾಲಕರಾದ ಶ್ರೀ ಗೋವಿಂದರಾಜಲು ಶೆಟ್ಟರು ಬಂದಿರುತ್ತಾರೆ. ಕುಂಬಾರಗೇರಿಯ ಚಲುವರಾಜು ಶೆಟ್ಟರ ಛತ್ರದಲ್ಲಿ ಸಂಜೆ ೬ ರಿಂದ ೮ ರವರೆಗೆ ಅವರನ್ನು ಕಂಡು ಅರ್ಜಿ ನಮೂನೆಯನ್ನು ಪಡೆಯಬಹುದಾಗಿದೆ. ಅವರು ೧೮ನೇ ತಾ|| ವರೆಗೆ ಇಲ್ಲಿರುವರು.

ತಿರುವಾಂಕೂರಿನಲ್ಲಿ ಪ್ರಜಾ ಸಮಾಜವಾದಿ ಸರ್ಕಾರಕ್ಕೆ ಕಾಂಗ್ರೆಸ್ಸಿನ ಬೆಂಬಲ

ತಿರುವಾಂಕೂರಿನಲ್ಲಿ ಕಮ್ಯೂನಿಸ್ಟರೇ ಪ್ರಾಮುಖ್ಯರಾಗುಳ್ಳ ಸಂಯುಕ್ತ ಪಕ್ಷವು ಸರ್ಕಾರ ರಚಿಸಿದರೆ ಅದಕ್ಕೆ ಅಲ್ಲಿನ ಪ್ರಜಾ ಸಮಾಜವಾದಿ ಪಕ್ಷದವರು ಬೆಂಬಲ ನೀಡಬೇಕೆಂದು ಹೇಳಲಾದ ನಿರ್ಧಾರವನ್ನು ಕುರಿತು ಅಖಿಲ ಭಾರತ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ತಮ್ಮ ಅಭಿಪ್ರಾಯವನ್ನು ಸೂಚಿಸಿ, ಆ ನಿರ್ಧಾರವು ಸರಿಯಾದುದಲ್ಲವೆಂದೂ, ಈ ವಿಷಯವನ್ನು ನಿರ್ಧರಿಸಲು ತಮಗೆ ಅಧಿಕಾರ ಕೊಡಲಾಗಿದೆಯೇ ಹೊರತು ಪ್ರಾಂತದ ಸಮಾಜವಾದಿಗಳಿಗೆ ಕೊಟ್ಟಿರುವುದಿಲ್ಲವೆಂದೂ ಹೇಳಿರುತ್ತಾರೆ. ಅಸಲಾಗಿ ಪ್ರಜಾ ಸಮಾಜವಾದಿ ಪಕ್ಷದವರು ಸರ್ಕಾರ ರಚಿಸುವುದಾದರೆ ಅವರಿಗೆ ತಮ್ಮ ಪಕ್ಷವು ಸಾಮಾನ್ಯ ಬೆಂಬಲ ಮತ್ತು ಸಹಕಾರ ಕೊಡುವುದಾಗಿ ತಿರುವಾಂಕೂರಿನ ಕಾಂಗ್ರೆಸ್ ಪಕ್ಷದ ನಾಯಕರಾದ ಪಾನಂಪಳ್ಳಿ ಗೋವಿಂದ ಮೆನನ್ನರು ಹೇಳಿರುತ್ತಾರೆ.

ಶೃಂಗೇರಿ ಜಹಗೀರಿಯ ರದ್ದಿಗೆ ಅರ್ಕಾಟರ ವಿರೋಧ

ಮೈಸೂರಿನ ಮಾಜಿ ದಿವಾನರಾದ ಎ. ರಾಮಸ್ವಾಮಿ ಮೊದಲಿಯಾರರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿ ಮಠದ ಜಹಗೀರನ್ನು ರದ್ದುಗೊಳಿಸುವುದು ಉಚಿತವಲ್ಲವೆಂದು ತಿಳಿಸಿರುತ್ತಾರೆ. ವಿಜಯನಗರದ ಸಾಮ್ರಾಟರಿಂದ ಕೊಡಲಾದ ಜಹಗೀರನ್ನು ರದ್ದುಗೊಳಿಸುವ ಪ್ರಸಂಗವು ಬರುವುದೆಂದು ತಾವು ಕನಸಿನಲ್ಲೂ ಸಹ ಕಂಡಿರಲಿಲ್ಲವೆಂದು ಅವರು ಹೇಳಿರುವರು.

ಚಹಾ ಕಾರ್ಖಾನೆ ಸುಟ್ಟು ಆರು ಲಕ್ಷ ರೂ. ನಷ್ಟ

ಚಿಕ್ಕಮಗಳೂರು ಜಿಲ್ಲೆಯ ಕಳಸದ ಬಳಿ ಗುಮ್ಮನ ಕಾಡಿನಲ್ಲಿರುವ ಭಾರಿ ಚಹಾ ಕಾರ್ಖಾನೆಗೆ ಕಳೆದ ೧೧ನೇ ತಾ|| ಬೆಂಕಿ ತಗುಲಿ ಪೂರ್ಣವಾಗಿ ಸುಟ್ಟುಹೋಯಿತೆಂದೂ, ಸುಮಾರು ೬ ಲಕ್ಷ ರೂ. ನಷ್ಟವಾಗಿರುವುದೆಂದೂ ವರದಿಯಾಗಿದೆ. ವಿದ್ಯುಚ್ಛಕ್ತಿಯ ಷಾರ್ಟ್ ಸರ್ಕ್ಯೂಟಿನಿಂದ ಅನಾಹುತವು ಸಂಭವಿಸಿರುವುದಾಗಿ ಹೇಳಲಾಗಿದೆ. ಸಾವಿರ ಜನ ಕೆಲಸಗಾರರಿರುವ ಈ ಕಾರ್ಖಾನೆಯಲ್ಲಿ ಯಾರಿಗೂ ಅಪಾಯವಾಗದಂತೆ ವ್ಯವಸ್ಥಾಪಕರು ಎಚ್ಚರಿಕೆ ವಹಿಸಿದ್ದರು.

ಜೂಜಾಟದ ಶಿಕ್ಷೆ

ರಾಜಧಾನಿಯ ನಜರ್‌ಬಾದ್ ಮೊಹಲ್ಲಾ ಮಸೀದಿ ರಸ್ತೆಯಲ್ಲಿರುವ ಶ್ರೀ ಗಿರಿಯಪ್ಪನವರ ಮನೆಯಲ್ಲಿ ನೆನ್ನೆ ಜೂಜಾಡುತ್ತಿದ್ದರೆಂದು ಗಿರಿಯಪ್ಪ, ರಾಜು, ವೆಂಕಟಪ್ಪ, ಕಾಳಯ್ಯ ಎಂಬ ನಾಲ್ಕು ಜನರನ್ನು ಪೋಲೀಸು ಸಬ್‌ಇನ್ಸ್‌ಪೆಕ್ಟರ್ ಶ್ರೀ ಎ. ಸಿ. ನಂಜಪ್ಪ ಮತ್ತು ದಫೇದಾರ್ ಶ್ರೀ ವೀರರಾಜೇ ಅರಸಿನವರು ಬಂಧಿಸಿ, ಅವರುಗಳ ಮೇಲೆ ಎರಡನೇ ನಗರ ನ್ಯಾಯಸ್ಥಾನದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಅಲ್ಲಿ ದೊರಕಿದ ೨೨ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಗ್ರಾಮ ಕಲೆಗಳ ಹಬ್ಬ

ನಗರದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಗ್ರಾಮ ಕಲೆಗಳ ಹಬ್ಬವನ್ನು ಏರ್ಪಡಿಸಲಾಗಿದೆ. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾದ ಡಾ|| ಎಂ. ಸಿದ್ಧಲಿಂಗಯ್ಯನವರು ಆರಂಭೋತ್ಸವವನ್ನು ನೆರವೇರಿಸುವರು. ಶ್ರೀ ಎಲ್. ಭದ್ರಯ್ಯನವರು ಅಧ್ಯಕ್ಷತೆ ವಹಿಸುವರು.

ಸಿನಿಮಾ ರಹದಾರಿಗಳ ನಿರ್ಬಂಧ ರದ್ದು

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ವೈ. ಧರ್ಮಪ್ಪನವರ ಪ್ರಶ್ನೆಗೆ ಉತ್ತರವಾಗಿ, ಗೃಹಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಸಿನಿಮಾಗಳಿಗೆ ರಹದಾರಿ ಕೊಡಲು ನಿಷೇಧವೇನೂ ಈಗ ಇಲ್ಲವೆಂದೂ ಪ್ರತಿಯೊಂದು ವಿಷಯವನ್ನೂ ಅದರದರ ಗುಣಾವಗುಣಗಳ ಮೇಲೆ ಪರಿಶೀಲಿಸಲಾಗುವುದೆಂದೂ ತಿಳಿಸಿದರು.

ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಕಬಾರದೆಂಬ ಸೂಚನೆಯನ್ನು ಕೊಡಲಾಗಿರುವುದೆಂದೂ ಅಲ್ಲಿ ರಾಷ್ಟ್ರಗೀತೆ ಹಾಕುವಂತೆ ಒತ್ತಾಯಪಡಿಸುವ ಯಾವ ನಿರ್ಬಂಧನೆಯೂ ಇಲ್ಲವೆಂದೂ ತಿಳಿಸಿದರು.

ಗೃಹ ಮಂತ್ರಿಗಳಿಂದ ಶಾಸನ ಸಭಾ ಸದಸ್ಯರಿಗೆ ಬೆದರಿಕೆಯೇ

ಶಾಸನ ಸಭೆಯಲ್ಲಿ ಪ್ರಶ್ನೆಗೆ ಸಿದ್ಧವೀರಪ್ಪನವರ ನಿರಾಕರಣೆ

ಸ್ವಂ. ಸು. ಫೋ.] ಬೆಂಗಳೂರು ೧೬

ಈ ದಿನ ಕಿರಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಬಂದೂಕದ ರಹದಾರಿಗಳ ಬಗ್ಗೆ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ಹಲವು ಪ್ರಶ್ನೆಗಳನ್ನು ಕೇಳಿದರು. ಶ್ರೀ ಎಂ. ಪಿ. ರಾಮರಾಯರು ಉಪ ಪ್ರಶ್ನೆ ಮಾಡಿ, ಶಾಸನ ಸಭಾ ಸದಸ್ಯರೊಬ್ಬರನ್ನು ಗುಂಡಿನಿಂದ ಹೊಡೆದುಹಾಕುವುದಾಗಿ ಗೃಹ ಮಂತ್ರಿಗಳು ಬೆದರಿಸಿದರೆಂದು ತಿಳಿಸುವ ಅರ್ಜಿಯೊಂದು ಸರ್ಕಾರಕ್ಕೆ ಬಂದಿರುವುದಿಲ್ಲವೇ ಎಂದು ಕೇಳಿದರು. ಶ್ರೀ ಸಿದ್ದವೀರಪ್ಪನವರು ಉತ್ತರವಿತ್ತು ಅಂತಹ ಅರ್ಜಿಯು ಬಂದಿರುವುದಿಲ್ಲವೆಂದೂ, ತಾವು ಆ ಆಪಾದನೆಯನ್ನು ನಿರಾಕರಿಸುವುದಾಗಿಯೂ ತಿಳಿಸಿದರು. ಪುನ: ಅದೇ ವಿಷಯವಾಗಿ ಉಪ ಪ್ರಶ್ನೆಗಳನ್ನು ಕೇಳಲಾಗಿ, ವಿದ್ಯಾಮಂತ್ರಿಗಳು ಈ ಉಪ ಪ್ರಶ್ನೆಗಳು ಮೂಲ ಪ್ರಶ್ನೆಗೆ ಸಂಬಂಧಿಸಿರುವುದಿಲ್ಲವೆಂದು ತಿಳಿಸಿದರು.

ಅವು ಮೂಲ ಪ್ರಶ್ನೆಗೆ ಪೂರ್ಣವಾಗಿ ಸಂಬಂಧಿಸಿಲ್ಲವೆಂದು ಕೇಳುವುದಕ್ಕಾಗುವುದಿಲ್ಲವೆಂದು ಸಭಾಧ್ಯಕ್ಷರು ತಿಳಿಸಿದರು.

ಆಪಾದನೆಗೆ ಸಂಬಂಧಿಸಿದಂತೆ ಯಾವ ಅರ್ಜಿಯೂ ಬಂದಿಲ್ಲವೆಂದೂ, ಈ ಬಗ್ಗೆ ವಿಚಾರಣೆ ನಡೆಸಲಾಗುವುದೆಂದೂ ಸಚಿವರು ಉತ್ತರವಿತ್ತರು.

ಚನ್ನಪಟ್ಟಣದ ಅರಸಪ್ಪ ರೇಷ್ಮೆ ಕಾರ್ಖಾನೆಯಲ್ಲಿ ಮುಖ್ಯವಾಗಿ ೧,೦೦೦ ಜನರಿಗೆ ಕೆಲಸವಿಲ್ಲದಿರುವ ವಿಷಯವನ್ನು ಕುರಿತು ತರಲಾದ ನಿಲುವಳಿ ಸೂಚನೆಯು ಸರ್ಕಾರಕ್ಕೆ ನೇರವಾಗಿ ಸಂಬಂಧಿಸಿದ ಮತ್ತು ಜರೂರಲ್ಲದ ವಿಷಯವೆಂದು ಹೇಳಿ ಅಧ್ಯಕ್ಷರು ತಳ್ಳಿಹಾಕಿದರು.

ಕೋಳ ಬಾಲಕನನ್ನು ವರಿಸಲು ವಿದೇಶೀ ಹುಡುಗಿಯ ಆಶೆ

ಲಕ್ನೋವಿನ ಬಲರಾಮಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಕೋಳ ಬಾಲಕ ರಾಮುವನ್ನು ವಿವಾಹ ಮಾಡಿಕೊಳ್ಳುವುದಾಗಿ ವಿದೇಶೀ ಹುಡುಗಿಯೊಬ್ಬಳು ಮುಂದೆ ಬಂದಿರುವಳೆಂದು ವರದಿಯಾಗಿದೆ.

ಆನೆಗಳಿಂದ ವ್ಯವಸಾಯ

ಆನೆಗಳಿಂದ ವ್ಯವಸಾಯ ಮಾಡಲು ಸಾಧ್ಯವಾಗುವ ನೇಗಿಲು ಮುಂತಾದ ಸಾಧನಗಳು ಆಸ್ಟ್ರೇಲಿಯಾದಿಂದ ಉತ್ತರ ಪ್ರದೇಶ ಸರ್ಕಾರದವರು ತರಿಸಿಕೊಳ್ಳಲಿರುವರು.

ಸೇಂದಿ ಅಂಗಡಿ ಬಳಿ ಹೊಡೆದಾಟ

ರಾಜಧಾನಿಯ ಜೀವನರಾಯನಕಟ್ಟೆ ಬಳಿಯಿರುವ ಸೇಂದಿ ಅಂಗಡಿ ಹತ್ತಿರ ಕಳೆದ ೧೨ನೇ ತಾ|| ಸಂಜೆ ಸೀಸೆಯೊಂದರ ವಿಷಯವಾಗಿ ಸಿದ್ದರಾಮಯ್ಯ ಎಂಬುವನನ್ನು ನಾರಾಯಣ ಮತ್ತು ಗೋಪಾಲ್ ಎಂಬುವರು ಹೊಡೆದರೆಂದು ಅವರ ಮೇಲೆ ದೇವರಾಜ ಪೋಲೀಸರು ಮೊಕದ್ದಮೆ ದಾಖಲು ಮಾಡಿಕೊಂಡಿರುತ್ತಾರೆ. ಸಿದ್ದರಾಮಯ್ಯನನ್ನು ಆಸ್ಪತ್ರೆಗೆ ಸೇರಿಸಿ ಡಿಸ್ಚಾರ್ಜ್ ಮಾಡಲಾಗಿದೆ.

ರೈಲ್ವೆ ನೌಕರರನ್ನು ರಿವರ್ಟ್ ಮಾಡಿದುದಕ್ಕೆ ಪ್ರತಿಭಟನೆ

ಮೈಸೂರು ೧೬

ದಕ್ಷಿಣ ರೈಲ್ವೆಯ ನೌಕರರ ಸಂಘದ ಮೈಸೂರು ಪ್ರದೇಶ ಕಾರ್ಯದರ್ಶಿ ಶ್ರೀ ಕೆ ಟಿ. ರಾಮಸ್ವಾಮಿ ಅಯ್ಯಂಗಾರ್ಯರು ಮದ್ರಾಸಿಗೆ ತೆರಳಿ ಭಾರತದ ರೈಲ್ವೆ ನೌಕರರುಗಳ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಗುರುಸ್ವಾಮಿಯವರನ್ನು ಭೇಟಿ ಮಾಡಿ ಮೈಸೂರು ರೈಲ್ವೆ ವರ್ಕ್‌ಷಾಪಿನಲ್ಲಿರುವ ಮಾಜಿ ಮೈಸೂರು ರೈಲ್ವೆ ಕೆಲಸಗಾರರ ಪೈಕಿ ಹಲವರನ್ನು ರಿವರ್ಟ್ ಮಾಡಿರುವುದನ್ನು ತಿಳಿಸಿ ಈ ಬಗ್ಗೆ ನೌಕರರು ತೆಗೆದುಕೊಳ್ಳಬೇಕಾದ ಕ್ರಮವನ್ನು ಕುರಿತು ಚರ್ಚಿಸಿದರು. ಬೆಂಗಳೂರು ನಗರದ ಸ್ಪೇಷಲ್ ಸೂಪರಿಂಟೆಂಡೆಂಟರಾದ ಶ್ರೀ ಓಬಳಪ್ಪನವರನ್ನು ಟ್ರಾಫಿಕ್ ಇನ್ಸ್‌ಪೆಕ್ಟರಾಗಿ ರಿವರ್ಟ್ ಮಾಡಿ ಅವರ ಸ್ಥಾನಕ್ಕೆ ಎಂ ಎಸ್ ಎಂ ರೈಲಿನ ಜೂನಿಯರ್ ಒಬ್ಬರನ್ನು ನೇಮಿಸಿರುವುದು ಮತ್ತು ಮೈಸೂರು ರೈಲ್ವೆಯ ಸ್ಪೆಷಲ್ ವರ್ಕ್‌ಷಾಪ್ ಮತ್ತು ಸಂಟರುಗಳ ನ್ಯಾಯಬದ್ಧ ಹಕ್ಕುಗಳನ್ನು ಕಡೆಗಣಿಸಿ ಬೇರೆ ಕ್ರೈವರುಗಳನ್ನು ಆರಿಸಿರುವುದನ್ನು ಶ್ರೀ ಗುರುಸ್ವಾಮಿಯವರು ವಿರೋಧಿಸಿ ಇದನ್ನು ಪ್ರತಿಭಟಿಸುವಂತೆ ... ಹೇಳಲಾಗಿದೆ ಶ್ರೀ ಓಬಳಪ್ಪನವರ ರಿವರ್ಷನ್ ತಪ್ಪಿಸಲು ಶ್ರೀ ಗುರುಸ್ವಾಮಿಯವರು ಸೂಕ್ತ ಕ್ರಮ ಕೈಗೊಂಡಿರುತ್ತಾರೆಂದು ಗೊತ್ತಾಗಿದೆ

ಹೊಟೇಲು ಮಾಲೀಕರ ಮನೆ ಬಳಿ ಸತ್ಯಾಗ್ರಹ ೧ ವಾರ ಮುಂದಕ್ಕೆ

ರಾಜಧಾನಿಯ ಕೈಲ್ವೆ ಸ್ಟೋರ್ ಹೊಟೇಲು ಮಾಲೀಕರ ಮನೆ ಮುಂದೆ ನಾಳೆಯಿಂದ ನಗರದ ಹೊಟೇಲು ಕೆಲಸಗಾರರ ಸಂಘದವರು ಹೂಡಬೇಕೆಂದಿದ್ದ ಮುಷ್ಕರವನ್ನು ಒಂದು ವಾರ ಮುಂದಕ್ಕೆ ಹಾಕಿರುತ್ತಾರೆ ಕೈಗಾರಿಕಾ ನ್ಯಾಯಾಲಯದ ತೀರ್ಪನ್ನು ಮಾಲೀಕರು ಜಾರಿಗೆ ಕೊಡದಿರುವ ಬಗ್ಗೆ ಅವರ ಮೇಲೆ ಕ್ರಮ ಜರುಗಿಸುವುದಾಗಿ ಸರ್ಕಾರದವರು ಭರವಸೆ ಕೊಟ್ಟಿರುವುದೇ ಇದಕ್ಕೆ ಕಾರಣ

ಶ್ರೀ ರೇಣುಕ ಸಂಘ

ರಾಜಧಾನಿಯ ಕೆ.ಆರ್ ಮೊಹಲ್ಲದಲ್ಲಿರುವ ಮೇಲ್ಕಂಡ ಸಂಘದವರ ಚಂದಾ ವಸೂಲಿ ಪುಸ್ತಕ ಮತ್ತು ಇನೇ ನಂ. ೧೦೧ ರಿಂದ ೧೫೦ರ ವರೆಗೆ ಇರುವ ರಸೀತಿ ಪುಸ್ತಕವು ನೆನ್ನೆ ದಿನ ಜನರಲ್ ಪೋಸ್ಟ್ ಆಫೀಸ್ ಬಳಿ ಕಳೆದು ಹೋಗಿದೆ ಸಿಕ್ಕಿದವರು ದಯವಿಟ್ಟು ಸಂಘಕ್ಕೆ ತಲುಪಿಸಬೇಕಾಗಿಯೂ ಮತ್ತು ಇದರ ರಸೀತಿ ಪುಸ್ತಕಕ್ಕೆ ಯಾರೂ ಚಂದಾ ಕೊಡಕೂಡದೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ವಾರ್ತೆಗಳು ೭-೩೦ ರಿಂದ ... ಹಿಂದಿ ಸಂಗೀತ ಮಧ್ಯಾಹ್ನ ೧-೩೦ ... ಕರ್ನಾಟಕ ಸಂಗೀತ ... ಹಿಂದಿ ವಾರ್ತೆ ೬-೧೫ ಕನ್ನಡ ವಾರ್ತೆ ... ಎಸ್ ರಾಮಸ್ವಾಮಿ ... ಸುಗಮ ಸಂಗೀತ ... ವೀಣೆ ... ಬಗ್ಗೆ ಇಂಗ್ಲಿಷ್ ಭಾಷಣ ... ಲಕ್ಷ್ಮಣ ನಾಟಕ

SRI GANESHA

TALKIES

From 17-3-54 • For 2 Days

Universal's

SALLE AND ST. ANNE

Starring - Ann Blyth and Edmund Gwenn

— NEXT CHANGE —

AFFAIRS OF MESSALINA

Edited, Printed and Published by A R Nagarajan at Sadhvi Press, D Subbiah Road, Mysore

ಕಮ್ಯೂನಿಸಂ ವಿರುದ್ಧವಾಗಿ ಒಂದು ವಿಶ್ವ ಸಂಘದ ಸ್ಥಾಪನೆ

ಪ್ರಪಂಚದಲ್ಲಿ ಕಮ್ಯೂನಿಸವನ್ನು ಬಹಿಷ್ಕರಿಸಲು ಒಂದು ವಿಶ್ವ ಸಂಘವನ್ನು ಸ್ಥಾಪಿಸುವ ಸಲುವಾಗಿ ಬರುವ ಡಿಸೆಂಬರಿನಲ್ಲಿ ಸಿಂಹಳದಲ್ಲಿ ಒಂದು ಸಮ್ಮೇಳನವನ್ನು ಕರೆಯಲಾಗುವುದೆಂದೂ, ಅಲ್ಲಿನ ಪ್ರಧಾನಿ ಕೊಟಲಾವಾಲಾರವರು ಅದರ ಆರಂಭೋತ್ಸವವನ್ನು ನೆರವೇರಿಸುವರೆಂದೂ ವರದಿಯಾಗಿದೆ

ಪುರುಷನಿಗಿಂತ ಸ್ತ್ರೀ ಕ್ರೂರಳು !

ಮಾನವರಲ್ಲಿ ಪುರುಷರಿಗಿಂತ ಸ್ತ್ರೀಯರೇ ಕ್ರೂರಿಗಳೆಂಬುದು ಇಂಗ್ಲೆಂಡಿನ ಸುಪ್ರಸಿದ್ಧ ಸ್ಕಾಟ್ಲೆಂಡ್ ಯಾರ್ಡ್ ಪೊಲೀಸರ ಅಭಿಪ್ರಾಯವಾಗಿದೆ ಪೊಲೀಸರ ಮುಖ್ಯಸ್ಥರಾದ ಡಾ|| ಸಿ ಹೆಚ್ ಹ್ಯಾಥೆರಿಲ್‌ರವರ ಅಭಿಪ್ರಾಯದಲ್ಲಿ ಪುರುಷನು ಮತ್ತೊಬ್ಬನನ್ನು ಕ್ಷಣಾರ್ಧ ಮತ್ತು ಸಮಯಾರ್ಥ ಹೃದಯ ದಿಂದಲೇ ಕೊಲ್ಲುವನೆಂದೂ ಆ ಹೆಳೆಯು ಯಾರನ್ನಾದರೂ ವಧಿಸಲು ನಿರ್ಧರಿಸಿದರೆ ಅಕೆ ... ಸಮಾನ್ಯವಾಗಿ ವಿಷವನ್ನು ಕೊಟ್ಟು ಆತನು ... ಸಂಕಟ ಪಡುವುದನ್ನು ಸ್ವಲ್ಪವೂ ಕನಿಕರವಿಲ್ಲದೆ ಆಥವಾ ಪಶ್ಚಾತ್ತಾಪ ಪಡದೆ ನೋಡುತ್ತಾ ... ಕೆ ದೂ ಗೊತ್ತಾಗಿದೆ

ಚಾಮರಾಜನಗರದಲ್ಲಿ ಕರ್ನಾಟಕ ಸಂಘದ ಸ್ಥಾಪನೆ

ಚಾಮರಾಜನಗರದ ಶ್ರೀ ಚಾಮುಂಡೇಶ್ವರಿ ಧರ್ಮಶಾಲೆಯ ಶ್ರೀ ತಾಲ್ಲೂಕು ... ಶ್ರೀ ಎ ಆರ್ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಮೊನ್ನೆ ಕರೆಯಲಾಗಿತ್ತು ಸಭೆಯ ಉದ್ದೇಶದಂತೆ ಕರ್ನಾಟಕ ಸಂಘವನ್ನು ಸ್ಥಾಪಿಸಲಾಯಿತು ಶ್ರೀ ಪಿ ಎ ವೆಂಕಟೇಶರವರನ್ನು ಅದರ ಅಧ್ಯಕ್ಷರನ್ನಾಗಿಯೂ, ವಿದ್ವಾನ್ ಹೆಚ್ ಸಿ ನಾರಾಯಣಯ್ಯಂಗಾರ್ ಮತ್ತು ಆರವಿಂದ ಹಿಂದೀ ಮಂದಿರದ ವ್ಯವಸ್ಥಾಪಕರಾದ ಶ್ರೀ ಟಿ ಎ ವೆಂಕಟಕೃಷ್ಣಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಿ ಹತ್ತು ಮಂದಿಯುಳ್ಳ ಒಂದು ಕಾರ್ಯನಿರ್ವಾಹಕ ಮಂಡಲಿಯನ್ನು ಚುನಾಯಿಸಲಾಯಿತು ಇಲ್ಲಿಯ ಕರ್ನಾಟಕ ಸಂಘವು ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾಗಿರಬೇಕೆಂದು ನಿರ್ಧರಿಸಿ, ಸಂಘದ ಉದ್ದೇಶ, ಕಾರ್ಯ ಚಟುವಟಿಕೆಗಳನ್ನು ತೀರ್ಮಾನಿಸಲಾಯಿತು ವಂದನಾರ್ಪಣೆಯಾದನಂತರ ಸಭೆಯು ಮುಕ್ತಾಯವಾಯಿತು.

SOUTHERN RAILWAY
TENDER NOTIFICATION

SEALED TENDERS IN THE PRESCRIBED FORM ARE INVITED BY THE WORKS MANAGER, C W S, S R MYSORE SOUTH, FOR

1 Picking up and delivering to the Railway, Cinders ½ and above

2 Purchasing by the Contractor of all Cinders below ½

3 Removing ashes and Cleaning yard in the Central Railway Workshops MYSORE SOUTH from 1-4-54 to end of 31-3-1955

The Tenders are received up to 2 P M on or before 25th March 54

The intending tenderers should send the tenders duly sealed enclosing the receipts granted by Regional Accounts Officer, Southern Railway Mysore for having remitted an earnest money of Rs 200

Prescribed Tender Forms can be had at Rupee One only, each (Re: 1 each) in the office of the undersigned

B H Sreekantaiah,
Works Manager
Southern Railway Workshop,
Mysore South

ಪಾರ್ಲಿಮೆಂಟಿನಲ್ಲಿ ನವರೋಜಿಯವರ ಭಾವಚಿತ್ರದ ಅನಾವರಣ

ಭಾರತದ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಜಿ ವಿ ಮಾವಲಂಕರರು ಮೊನ್ನೆ ಪಾರ್ಲಿಮೆಂಟ್ ಭವನದಲ್ಲಿ ಭಾರತದ ವೃದ್ಧ ಪಿತಾಮಹ ದಾದಾಭಾಯಿ ನವರೋಜಿಯವರ ಭಾವಚಿತ್ರದ ಅನಾವರಣ ಮಾಡಿದರು ಭಾವಚಿತ್ರವನ್ನು ಬೊಂಬಾಯಿನ ಪಾರ್ಸಿ ಜನಾಂಗದವರ ಪರವಾಗಿ ಶ್ರೀ ವಾಡಿಯಾರವರು ಪಾರ್ಲಿಮೆಂಟಿಗೆ ಸಮರ್ಪಿಸಿದ್ದರು

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೧೮ ೦ ೦	೨೩ ೧೨ ೦
ಎಳ್ಳು	೬೭ ೧೪ ೦	
ಹರಳುಬೀಜ	೨೬ ೦ ೦	೪೩ ೦ ೦
ಹುಚ್ಚೆಳ್ಳು	೪೬ ೮ ೦	೪೩ ೧೦ ೦
ಹೊಂಗೆಬೀಜ	೧೭ ೦ ೦	೨೨ ೧೨ ೦
ಹುರುಳಿ	೨೩ ೦ ೦	೨೯ ೨ ೦
ಹೆಸರು	೩೬ ೧೪ ೦	೪ ೮ ೦
ಕಲಸಂದೆ	೩೬ ೪ ೦	೪೯ ೨ ...
ಉದ್ದು	೬೦ ೮ ೦	
ಧನಿಯ	೨೫ ೦ ೦	೪೮ ೨ ೦
ತೊಗರಿ	೨೪ ೨ ೦	೨೪ ೧೦ ೦
ಕಡಲೆ	೪೪ ೪ ೦	
ಹುಣಸೇಬೀಜ	೧೩ ೪ ೦	೧೩ ೮ ೦
ಹುಣಸೇಹಣ್ಣು	೭ ೮ ೦	೯ ೮ ೦
ಹುಣಸೇಬೀಜ	೪ ೧ ೦	೪ ೧೦ ೦
ಮೆಣಸಿನಕಾಯಿ	೨೫ ೮ ೦	೨೭ ೨ ೦
ತೆಂಗಿನಕಾಯಿ ೧೧೦೦	೧೫೫ ೦ ೦	೩೭೦ ೦ ೦

ಶ್ರೀ ಚಾಮುಂಡೇಶ್ವರಿ

ಟಾಕೀಸ್

17-3-54 ರಿಂದ ಅಮೋಘ 3ನೇ ವಾರ

ಪ್ರತಿದಿನ 3 ಪ್ರದರ್ಶನಗಳು

ಜಲದುರ್ಗ

ಕನ್ನಡ ಚಿತ್ರ

ಲಿಂಗರಾಜ್‌ರವರ ದಿಗ್ದರ್ಶನ

ಇಂಡೋಚೀನಾದ ಕಾಳಗದಲ್ಲಿ ಫ್ರೆಂಚರ ಹಿಂದೋಟ

ಇಂಡೋಚೀನಾದ ಲಾವೋಸ್ ಸಂಸ್ಥಾನ ಹೋಗಲು ದಾರಿಯಲ್ಲಿರುವ ಡಿಯೆನ್ ಬಿಯೆನ್ ಫು ಎಂಬ ಪ್ರಮುಖ ಸ್ಥಳದಿಂದ ಫ್ರೆಂಚ್ ಸೈನ್ಯವು ವಿಯಟ್ಮಿನ್ನರ ಪಟ್ಟನ್ನು ತಾಳಲಾರದೆ ಹಿಂದೆ ಸರಿಯುತ್ತಾರೆ. ಎರಡು ಕಡೆಯವರಿಗೂ ಭಯಂಕರವಾದ ಹೋರಾಟ ನಡೆಯುತ್ತಿರುವುದಾಗಿ ಹೇಳಲಾಗಿದೆ ವಿಯಟ್ಮಿನ್ನರ ಪೈಕಿ ಅನೇಕ ವಿಪರೀತ ಸಾವುನೋವುಗಳಾಗಿವೆಯೆಂದು ಫ್ರೆಂಚರು ಹೇಳುತ್ತಾರೆ.

ಗುಂಡಿನೇಟಿನಿಂದ ಗ್ರಾಮದ ಪಟೇಲರ ಕೊಲೆ

ಹೊನ್ನಾಳಿ ತಾಲ್ಲೂಕಿನ ಜೀನಹಳ್ಳಿ ಗ್ರಾಮದ ಪಟೇಲರಾದ ಶ್ರೀ ಈಶ್ವರಪ್ಪ ಎಂಬುವರನ್ನು ಯಾರೋ ಗುಂಡಿಟ್ಟು ಕೊಲೆ ಮಾಡಿದ್ದಾರೆಂದೂ, ಅವರ ದೇಹವು ಜಮೀನಿನಲ್ಲಿ ಬಿದ್ದಿತ್ತೆಂದೂ ತಿಳಿದು ಬಂದಿದೆ

WANTED

One Manager cum Cashier for a licensed Cross word Office Mysore Branch Intending candidate must furnish cash security of Rs 300 Salary Rs 70 per month Apply before 19-3-54

"PRAJAHITA,"
C/o Sadhvi, Mysore

SRI GAYATHRI

TALKIES

From 16 3 54 For 2 Days

M.G.M's

SCARAMOUCHE

(In Technicolor)

With Stewart Granger

ಶ್ರೀ ಚಾಮುಂಡೇಶ್ವರಿ ಭವನ

ಇರ್ವಿನ್ ರಸ್ತೆ ಮೈಸೂರು

ತಾರೀಕು 3—3—1954 ರಿಂದ

ಬೇಸಿಗೆ ಕಾಲಕ್ಕಾಗಿ ಭವನದ ಮಹಡಿ ಮೇಲೆ ಅಪೂರ್ವ ರೀತಿಯಲ್ಲಿ ಶೃಂಗರಿಸಲ್ಪಟ್ಟಿರುವ ಅಂಗಳ

ಪ್ರತಿ ದಿನ ಸಂಜೆ 4 ರಿಂದ 7 ಘಂಟೆ ವರೆಗೆ

ಫ್ರೂಟ್ ಸಲಾಡ್ ಐಸ್-ಕ್ರೀಂ, ಬನಾನಾ, ವನಿಲ್ಲಾ, ಬಾದಾಮ್ ಮತ್ತು ಗುಲಾಬ್ ಐಸ್‌ಕ್ರೀಮುಗಳು

ಬಾದಾಮ್ ಕೋಲ್ಡ್, ಫ್ರೂಟ್ ಜ್ಯೂಸುಗಳು ಪೈನಾಪಲ್, ಆರೆಂಜ್, ಲೆಮನ್, ಟೊಮ್ಯಾಟೊ ಮತ್ತು ಗ್ರೇಪ್

ಹಾಲಿನ ಷರಬತ್ತು, ಸಿಹಿ ಮೊಸರಿನ ಷರಬತ್ತು, ವೆಜಿಟಬಲ್ ಕಟ್ಲೆಟ್ಟುಗಳು, ಸಾಂಡ್‌ವಿಚ್ಚುಗಳು, ಟೋಸ್ಟ್ ಬಟರ್ ಮತ್ತು ಆಲೂಗೆಡ್ಡೆ ಉಪ್ಪೇರಿ

★

ನಮ್ಮ ಪ್ಲಾಂಟೇಷನ್ 'ಎ' ಕಾಫಿ ಒಂದು ವಿಶೇಷ

★

ಬೆಳಗ್ಗೆ ಮತ್ತು ಸಂಜೆ ಸ್ಪೆಷಲ್ ಸೆಟ್ ದೋಸೆಗಳು ಸಿಕ್ಕುತ್ತವೆ

★

★ ಬೇಸಿಗೆ ಕಾಲಕ್ಕನುಗುಣವಾದ ವಿಶೇಷ ಭೋಜನದ ತಯಾರಿಕೆ

★ ಭೋಜನ ಶಾಲೆಯಲ್ಲಿ ಬಾಯಂ ಬೋರ್ಡರುಗಳಿಗೆ ರಿಯಾಯಿತಿ

ಪ್ರಾರಂಭ ! ಪ್ರಾರಂಭ !!

ಮಲಬಾರ್ ಹ್ಯಾಂಡ್ಲೂಂ ಕಾರ್ಪೊರೇಷನ್

(ಕೋಆಪರೇಟಿವ್ ಹ್ಯಾಂಡ್‌ಲೂಂ ಸಹ್ಯ)

14 ನೇ ಕ್ರಾಸ್, ಅಶೋಕಾ ರಸ್ತೆ, ಮೈಸೂರು

—'0'—

ಮೇಲ್ಕಂಡ ಹೋಲ್‌ಸೇಲ್ ಡಿಪೋದ ಪ್ರಾರಂಭೋತ್ಸವವನ್ನು

ತಾ|| 17—3—54 ನೇ ಬುಧವಾರ

ಬೆಳಗ್ಗೆ 10 30 ಗಂಟೆಗೆ ನೆರವೇರಿಸಲಾಗುವುದು

ತಾವೆಲ್ಲರೂ ದಯಮಾಡಿಸಿ ಪ್ರೋತ್ಸಾಹಿಸಬೇಕಾಗಿ ವಿನಯಪೂರ್ವಕ ವಿನಂತಿ

ಟೆಲಿಫೋನ್ ನಂ 792

|| ವಂದೇ ಮಾತರಂ ||

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಬಿ ವ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 146

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI . LEADING NATIONALIST DAILY OF MYSORE

ಸಂಪುಟ ೦೨] MYSORE WEDNESDAY 17-3-1954 :. ಮೈಸೂರು : ಬುಧವಾರ ೧೭-೩-೧೯೫೪ [ಸಂಚಿಕೆ ೨೦೫

ಸಂಸ್ಥಾನದಲ್ಲಿ ಕೋರ್ಟು ಮತ್ತು ಸ್ಟ್ಯಾಂಪು ದರ ಹೆಚ್ಚುವುದು

ಏಪ್ರಿಲ್ಲಿನಿಂದ ಕೋರ್ಟು ಫೀ ಮತ್ತು ಸ್ಟ್ಯಾಂಪು ರುಸುಂ ಹೆಚ್ಚುವುದು

ಶಾಸನ ಸಭೆಯಲ್ಲಿ ಮಸೂದೆಯು ಅಂಗೀಕಾರ

ಬೆಂಗಳೂರು ೧೬

ಬಳ್ಳಾರಿ ಜಿಲ್ಲೆಯಲ್ಲಿರುವ ಸ್ಟ್ಯಾಂಪು ಮತ್ತು ಕೋರ್ಟು ಫೀಯ ಮಟ್ಟದಷ್ಟು ಸಂಸ್ಥಾನದ ಉಳಿದ ಜಿಲ್ಲೆಗಳಲ್ಲಿ ಅವನ್ನು ಹೆಚ್ಚಿಸುವ ತಿದ್ದುಪಡಿ ಮಸೂದೆಗಳು ನೆನ್ನೆ ಕೆಳಗಿನ ಶಾಸನ ಸಭೆಯಲ್ಲಿ ಅಂಗೀಕೃತವಾದುವು ಸಂಸ್ಥಾನದಲ್ಲಿ ಈ ದರಗಳು ಇತರ ಕಡೆಗಳಿಗಿಂತಲೂ ಕಡಿಮೆಯಾಗಿವೆ.

ಸದಸ್ಯರುಗಳು ಮಾತನಾಡಿ, ಹಣಕಾಸಿಗೆ ಸಂಬಂಧಿಸಿದ ಮಸೂದೆಗಳ ಪರಿಶೀಲನೆಗೆ ಹೆಚ್ಚು ಅವಕಾಶವು ಬೇಕೆಂದು ಕೇಳಿದರು ಶ್ರೀ ಎ ಭೀಮಪ್ಪನಾಯಕರು ಮಾತನಾಡಿ ಸಭೆಯ ವಿರೋಧ ಪಕ್ಷದವರು ತಮ್ಮ ಅಭಿಪ್ರಾಯವನ್ನು ತಿಳಿಸಲು ಕಾಲವು ಹೆಚ್ಚಾಗಿ ದೊರೆಯಬೇಕೆಂದು ಹೇಳಿದರು ಮುಂದಿನ ತಿಂಗಳು ಹಣಕಾಸಿನ ಮಸೂದೆಯು ಪರಿಶೀಲನೆಗೆ ಅವಕಾಶವಿರುವುದೆಂದು ಶ್ರೀ ಮರಿಯಪ್ಪನವರು ತಿಳಿಸಿದರು

ಮುಖ್ಯ ಮಂತ್ರಿಗಳು ಉತ್ತರವಿತ್ತು, ಏಪ್ರಿಲ್ ೧ ರೊಳಗೆ ಮಸೂದೆಯು ಅಂಗೀಕೃತವಾಗದಿದ್ದರೆ ಸರ್ಕಾರಕ್ಕೆ ವರಮಾನವು ನಷ್ಟವಾಗುವುದೆಂದು ಹೇಳಿದರು

ಪಟ್ಟಂ ತಾನುಪಿಳ್ಳೆ ನಾಯಕತ್ವದಲ್ಲಿ ತಿರುವಾಂಕೂರು ಸರ್ಕಾರ

ತಿರುವಾಂಕೂರು ಕೊಚ್ಚಿ ಶಾಸನ ಸಭೆಯ ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಪಟ್ಟಂ ತಾನುಪಿಳ್ಳೆಯವರನ್ನು ಅಲ್ಲಿನ ರಾಜಪ್ರಮುಖರು ಮುಖ್ಯ ಮಂತ್ರಿಗಳಾಗಿ ನೇಮಿಸಿರುತ್ತಾರೆ ನೆನ್ನೆ ಮಧ್ಯಾಹ್ನವೇ ಅವರು ಪ್ರಮಾಣ ವಚನ ತೆಗೆದುಕೊಂಡು ಅಧಿಕಾರಕ್ಕೆ ಬಂದರು. ಸುಭದ್ರವಾದ ಮಂತ್ರಿಮಂಡಲವನ್ನು ಅವರು ರಚಿಸಬಲ್ಲರೆಂದು ದೃಢಪಡಿಸಿಕೊಂಡನಂತರ ರಾಜಪ್ರಮುಖರು ಅವರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿದರು ಪಟ್ಟಂ ತಾನು ಪಿಳ್ಳೆಯವರು ಶೀಘ್ರದಲ್ಲಿಯೇ ಒಂದು ಹೇಳಿಕೆಯೊಂದನ್ನಿತ್ತು ತಮಗೆ ಶಾಸನ ಸಭೆಯ ಎಲ್ಲ ಪಕ್ಷಗಳ ಬೆಂಬಲವೂ ದೊರಕುವುದೆಂದೂ, ಸಮಾಜವಾದಿ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಅಡಕವಾಗಿರುವ ಕಾರ್ಯಕ್ರಮವನ್ನು ಜಾರಿಗೆ ತರಲು ತಾವು ಪ್ರಯತ್ನಿಸುವುದಾಗಿಯೂ ಹೇಳಿರುತ್ತಾರೆ

ದೇಶದಲ್ಲಿ ಪ್ರಜಾ ಸಮಾಜವಾದಿ ಪಕ್ಷವು ಅಧಿಕಾರ ವಹಿಸಿರುವುದು ಇದೇ ಮೊದಲು ಮಂತ್ರಿಮಂಡಲದ ಪಟ್ಟಿಯನ್ನು ಎರಡು ದಿನಗಳಲ್ಲೇ ತಾನು ಪಿಳ್ಳೆಯವರು ಪ್ರಕಟಿಸುವರೆಂದು ಹೇಳಲಾಗಿದೆ

ಅಂಗಡಿ ಕಾನೂನು ಉಲ್ಲಂಘನೆಗಾಗಿ ದಂಡ

ರಾಜಧಾನಿಯ ಕಬ್ಬನ್ ರಸ್ತೆಯಲ್ಲಿರುವ ನಟರಾಜ್ ಹೋಟೆಲಿನ ಮಾಲೀಕರಾದ ಶ್ರೀ ಅಮಾಜ್ ಶೆಟ್ಟಿಯವರು ಅಂಗಡಿ ಸಿಬ್ಬಂದಿ ಶಾಸನವನ್ನು ಉಲ್ಲಂಘಿಸಿದರೆಂದು ಅವರಿಗೆ ನಗರದ ಎರಡನೇ ನ್ಯಾಯಾಧೀಶರು ೬ ರೂ ದಂಡವನ್ನು ವಿಧಿಸಿರುತ್ತಾರೆ

ಶ್ರೀ ಸಹಸ್ರ ಚಂಡೀ ಮಹಾ ಯಾಗದ ಪೂರ್ಣಾಹುತಿ

ಮೈಸೂರು ೧೫

ಲೋಕ ಕಲ್ಯಾಣಾರ್ಥವಾಗಿ ಇದೇ ತಿಂಗಳು ೧೩ ನೇ ತಾ|| ನಿಂದ ಚಾಮುಂಡಿಬೆಟ್ಟದ ಮೇಲೆ ಶ್ರೀ ಸಹಸ್ರ ಚಂಡೀ ಮಹಾ ಯಾಗವು ನಡೆಯುತ್ತಿರುವುದು ಸರಿಯಷ್ಟೆ ತಾ|| ೧೮ ನೇ ಗುರುವಾರ ಬೆಳಿಗ್ಗೆ ೧೧-೩೦ ಘಂಟೆಗೆ ಪೂರ್ಣಾಹುತಿ ಮತ್ತು ಮಹಾ ಮಂಗಳಾರತಿಗಳೊಡನೆ ಯಾಗವು ಸಮಾಪ್ತಿಯಾಗುವುದು ಆ ದಿವಸ ಸಕಲರೂ ಚಾಮುಂಡಿಬೆಟ್ಟಕ್ಕೆ ಬಂದು ಯಾಗ ಮಹೋತ್ಸವದಲ್ಲಿ ಭಾಗಿಗಳಾಗಿ, ಪ್ರಸಾದವನ್ನು ಸ್ವೀಕರಿಸಿ ಜಗನ್ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಮಹಾ ಯಾಗದ ಸಮಿತಿಯವರು ಅಪೇಕ್ಷಿಸುತ್ತಾರೆ

ಪೂರ್ವ ಬಂಗಾಳ ಚುನಾವಣೆಯಲ್ಲಿ ಮುಸ್ಲಿಂ ಲೀಗಿಗೆ ಭಾರಿ ಸೋಲು

ಮುಖ್ಯ ಮಂತ್ರಿ ಮತ್ತು ಇನ್ನಿಬ್ಬರು ಮಂತ್ರಿಗಳ ಪರಾಜಯ

ಪೂರ್ವ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಇದುವರೆಗೆ ೫೭ ಸ್ಥಾನಗಳ ಫಲಿತಾಂಶ ತಿಳಿದಿದ್ದು ಸಂಯುಕ್ತ ಪಕ್ಷಕ್ಕೆ ಬಂದಿವೆ ಮುಸ್ಲಿಂ ಲೀಗಿನವರು ೨ ಸ್ಥಾನಗಳನ್ನು ಮಾತ್ರ ಗಳಿಸಿರುತ್ತಾರೆ ೪ ಸ್ಥಾನಗಳು ಸ್ವತಂತ್ರರಿಗೆ ಹೋಗಿವೆ ೧೦ ಜನ ಲೀಗ್ ಉಮೇದುವಾರರು ಠೇವಣಿ ಕಳೆದುಕೊಂಡಿರುವರು ೩೦೯ ಜನ ಸದಸ್ಯರಿರುವ ಸಭೆಯಲ್ಲಿ ಸಂಯುಕ್ತ ಪಕ್ಷದವರು ೨೨೭ ಸ್ಥಾನಗಳಿಗೆ ಸ್ಪರ್ಧಿಸಿದ್ದರು ಅಲ್ಪಸಂಖ್ಯಾತರಿಗೂ ೭೨ ಸ್ಥಾನಗಳು ಬಿಡಲ್ಪಟ್ಟಿವೆ ಇದುವರೆಗೂ ಮುಖ್ಯ ಮಂತ್ರಿಗಳಾಗಿದ್ದ ನೂರುಲ್ ಅಮೀನ್‌ರವರು ಮತ್ತು ಇನ್ನಿಬ್ಬರು ಮಂತ್ರಿಗಳು ಪರಾಜಿತರಾಗಿದ್ದಾರೆ

ಭಾರತೀಯರ ಅಂಗಡಿಗಳಿಗೆ ಸಿಂಹಳದಲ್ಲಿ ಬಹಿಷ್ಕಾರವೇ?

ಭಾರತೀಯರ ಅಂಗಡಿಗಳು ಮತ್ತು ವ್ಯಾಪಾರಗಳ ವಿರುದ್ಧವಾಗಿ ಸಾರ್ವತ್ರಿಕ ಬಹಿಷ್ಕಾರವನ್ನು ಹಾಕಬೇಕೆಂದು ಸಿಂಹಳದ ಪಾರ್ಲಿಮೆಂಟಿನ ವಿರೋಧ ಪಕ್ಷದ ಮುಖಂಡರಾದ ಭಂಡಾರ ನಾಯಕೆಯವರು ಹೇಳಿರುತ್ತಾರೆ ಭಾರತ ಸಿಂಹಳಗಳ ನಡುವೆ ಆಗಿರುವ ಒಪ್ಪಂದವನ್ನು ಖಂಡಿಸಲು ನಡೆದ ಸಭೆಯೊಂದರಲ್ಲಿ ಅವರು ಭಾಷಣ ಮಾಡಿ ಹಾಗೆ ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೮ ವಾರ್ತೆ ೭-೧೦ ಕೆ ಆರ್ ಇಂದಿರಮ್ಮ ಸಂಗೀತ ಮಧ್ಯಾಹ್ನ ೧೨-೩೦ ಮತ್ತು ೧-೩೦ ಕ್ಲಾರಿಯೋನೆಟ್ ಸ ೬-೩೦ ಮೃತ್ಯುಂಜಯ ಎ ವಿ ಕೃಷ್ಣಮಾಚಾರ್ ಪಿಟೀಲು ೬ ಹಿಂದಿ ವಾರ್ತೆ ೬-೧೫ ಬಿ ಎಸ್ ಶ್ರೀನಿವಾಸಯ್ಯ ೭-೪ ರೇಡಿಯೋ ಸಂಗೀತ ೭ ೩೦ ನೋಹನ ಕುಮಾರ್ ಹಿಂದೀ ಗೀತೆ ೮-೩೦ ಮೈಸೂರಿನ ರಂಗ ೯-೧೫ ರಿಟ್ರೈಬ ಸಿತಾರ್ ಮತ್ತು ಸರೋದ್ ೯-೩೦ ಸಿನಿಮಾ ಮೆಚ್ಚಿನ ಗೀತೆಗಳು

ಯೋಗದ ಮೇಲೆ ಮಹಾರಾಜರ ಗ್ರಂಥ

ಯೋಗದ ವಿಷಯವಾಗಿ ೫೦೦ ಪುಟಗಳ ಒಂದು ಇಂಗ್ಲಿಷ್ ಗ್ರಂಥವನ್ನು ಶ್ರೀಮನ್ಮಹಾರಾಜರು ಬರೆದಿರುತ್ತಾರೆ ಅದು ಶೀಘ್ರದಲ್ಲೇ ಪ್ರಕಟವಾಗಲಿದೆ

ಸಂಸ್ಥಾನದ ಗಡಿಯೊಳಗೆ ಆಂಧ್ರ ಅಧಿಕಾರಿಗಳ ಅಕ್ರಮ ವರ್ತನೆ

ಮುಖ್ಯ ಮಂತ್ರಿಯವರ ಟೀಕೆ

ಬೆಂಗಳೂರು ೧೬

ಆಂಧ್ರ ದೇಶದ ಕೆಲವು ಮಂತ್ರಿಗಳ ಮತ್ತು ಶಾಸನ ಸಭಾ ಸದಸ್ಯರ ಪ್ರೇರಣೆಯ ಮೇರೆ ಅಲ್ಲಿನ ಅಧಿಕಾರಿಯೊಬ್ಬರು ಕೋಲಾರ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಸಂಚರಿಸಿ, ಅಲ್ಲಿನ ತೆಲುಗರ ಬಗ್ಗೆ ಅಂಕಿಅಂಶಗಳನ್ನು ಅಕ್ರಮವಾಗಿ ಸಂಗ್ರಹಿಸಿದ ವಿಚಾರವನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಶಾಸನ ಸಭೆಯಲ್ಲಿ ನೆನ್ನೆ ತೀವ್ರವಾಗಿ ಖಂಡಿಸಿ, ಇದು ಅಶೋಭನೀಯ ಪರಮಾವಧಿಯೆಂದು ಹೇಳಿದರು

ಮುಖ್ಯ ಮಂತ್ರಿಗಳ ಸವಾಲಿಗೆ ಇ ಮಾ ಮು ರ ಒಪ್ಪಿಗೆ

ಹೊಸ ತೆರಿಗೆಗಳನ್ನು ಹಾಕದೆ, ಸರ್ಕಾರವನ್ನು ಯಾರಾದರೂ ನಡೆಸುವುದಾದರೆ ತಾವು ರಾಜೀನಾಮೆ ಕೊಡಲು ಸಿದ್ಧವಾಗಿರುವುದಾಗಿ ಮುಖ್ಯ ಮಂತ್ರಿಯವರು ಕೇಳಿರುವ ವಿಷಯವನ್ನು ಕುರಿತು ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್ ಎಂ ಇಮಾಮರು ಮಾತನಾಡಿ, ತಾವು ಮತ್ತು ತಮ್ಮ ಪಕ್ಷದವರು ಆ ರೀತಿ ಸರ್ಕಾರ ನಡೆಸಬಲ್ಲರೆಂದು ಹೇಳಿ ಮುಖ್ಯ ಮಂತ್ರಿಯವರ ಸವಾಲನ್ನು ಅಂಗೀಕರಿಸಿದರು ಸರ್ಕಾರವ ತೆರಿಗೆ ಹಾಕದೆ ಜನರನ್ನು ನಿಂದಿಸಿಕೊಳ್ಳುವುದಾಗಿಯೂ ಅವರು ತಿಳಿಸಿದರು

ಬ್ಲಿಟ್ಸ್ ಸಂಪಾದಕರಿಗೆ ೧೦,೦೦೦ ರೂ. ದಂಡ

ಬೊಂಬಾಯಿನ ಬ್ಲಿಟ್ಸ್ ಪತ್ರಿಕೆ ಸಂಸ್ಥೆ ಮತ್ತು ಅದರ ಸಂಪಾದಕ ಕರಂಜಿಯಾರವರು ದೆಹಲಿಯ ಹಿಂದೂಸ್ಥಾನ್ ಟೈಂಸ್ ಪತ್ರಿಕೆ ಮತ್ತು ಅದರ ವ್ಯವಸ್ಥಾಪಕ ಸಂಪಾದಕ ದೇವದಾಸ್ ಗಾಂಧಿಯವರ ಬಗ್ಗೆ ಅವಮಾನಕರವಾದ ವಿಷಯಗಳನ್ನು ೧೯೫೦ ರಲ್ಲಿ ಪ್ರಕಟಿಸಿದ ಸಂಬಂಧವಾಗಿ ಹೂಡಲಾಗಿದ್ದ ಮಾನ ನಷ್ಟ ಮೊಕದ್ದಮೆಯಲ್ಲಿ ಬ್ಲಿಟ್ಸ್ ಸಂಪಾದಕರು ೧೦,೦೦೦ ರೂ ಪರಿಹಾರ ದ್ರವ್ಯವನ್ನು ಕೊಡುವಂತೆ ಆಜ್ಞೆ ಮಾಡಲಾಗಿದೆ ಮೊಕದ್ದಮೆಯ ವೆಚ್ಚವನ್ನೂ ಕೊಡುವಂತೆ ಆಜ್ಞೆಯಾಗಿದೆ

ಮುದುಕಿಯನ್ನು ನರಿ ತಿಂದು ಹಾಕಿದ ಪ್ರಸಂಗ

ಮಂಗಳೂರಿನ ಬಳಿ ಕೊಡಕ್ಕಾಡಿನಲ್ಲಿ ೭೦ ವರ್ಷದ ಒಬ್ಬ ವೃದ್ಧಳನ್ನು ಎರಡು ನರಿಗಳು ಜೀವಸಹಿತ ತಿಂದುಹಾಕಿದ ಸುದ್ದಿಯು ವರದಿಯಾಗಿದೆ ಆಕೆಯು ಅಶಕ್ತಳಾದವಳು ಗುಡಿಸಿಲಿನಿಂದ ಹೊರಗೆ ಕೇಳಬಲ್ಲಿಲ್ಲವೆ ದೂ, ನೀರು ತರಲು ಹೋಗಿದ್ದ ಆಕೆಯ ಮಗಳು ವಾಪಸು ಬಂದಾಗ ನರಿಗಳು ಆಕೆಯನ್ನು ಕಿತ್ತು ತಿನ್ನುತ್ತಿರುವ ಘೋರ ದೃಶ್ಯವು ಕಣ್ಣಿಗೆ ಬಿದ್ದು, ತಾಯಿಯನ್ನು ಬದುಕಿಸುವ ಆಸೆಯಿಂದ ಆಕೆಯು ಆ ಮೃಗಗಳೊಡನೆ ಕಾದಾಡಿ ಅವುಗಳಿಂದ ಕಡಿಸಿಕೊಂಡಳೆಂದೂ ಹೇಳಲಾಗಿದೆ ಆಕೆಯ ಕೂಗಾಟವನ್ನು ಕೇಳಿ ಇತರ ಜನರು ಓಡಿಬಂದು ಒಂದು ನರಿಯನ್ನು ಗುಂಡಿನಿಂದ ಕೊಂದರು ಮತ್ತೊಂದು ಪರಾರಿಯಾಯಿತು ಮಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ಬ್ಲಿಟ್ಸ್ ಪತ್ರಿಕೆಯ ೧,೦೦೦ ಪ್ರತಿಗಳ ಹಂಚಿಕೆ

ಸರ್ಕಾರದ ನಡವಳಿಕೆ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ಸು ಪೋರ್] ಬೆಂಗಳೂರು ೧೬

ಈ ದಿನ ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪ್ರಶ್ನೆಗಳಿಗೆ ಉತ್ತರವಿತ್ತು, ಬ್ಲಿಟ್ಸ್ ಪತ್ರಿಕೆಯ ೧,೦೦೦ ಪ್ರತಿಗಳನ್ನು ಸರ್ಕಾರದವರು ಕೊಂಡು ಶಾಖಾ ಇಲಾಖೆ ಮತ್ತು ಶಾಲೆಗಳಿಗೆ ಹರಡುವರೆಂದು ಹೇಳಿದರು ಅದರಲ್ಲಿ ಮುಖ್ಯ ಮಂತ್ರಿಯವರನ್ನು ಟಿಪ್ಪು ಸುಲ್ತಾನರಿಗೆ ಹೋಲಿಸಲಾಗಿದೆಯೆಂದೂ ನಿಜಾಮರವರಂತೆ ಅವರು ಪ್ರಭಾವಶಾಲಿಗಳೆಂದು ಬರೆಯಲಾಗಿದೆಯೆಂದೂ ಅವರು ಹೇಳಿದರು ಮುಖ್ಯ ಮಂತ್ರಿಯವರ ಹೋಲಿಕೆಯು ಸರಿಯೇ ಎಂದು ಕೇಳಲಾಗಿ ಸದಸ್ಯರು ಹೇಗೆ ಭಾವಿಸಿದರೆ ಹಾಗೆ ಆಗಬಹುದೆಂದು ಮಂತ್ರಿಗಳು ಹೇಳಿದರು ಇತರ ಯಾವ ಪತ್ರಿಕೆಯನ್ನೂ ಕೊಂಡು ಹಂಚಿಲ್ಲವೆಂದು ಅವರು ತಿಳಿಸಿದರು

ನ್ಯಾಯಾಂಗ ಮತ್ತು ಆಡಳಿತಾಂಗವನ್ನು ಪ್ರತ್ಯೇಕಿಸುವ ಕಾರ್ಯವು ಹಣದ ಮುಗ್ಗಟ್ಟಿನಿಂದ ತಡವಾಗಿದೆಯೆಂದೂ ಅವರು ತಿಳಿಸಿದರು.

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳವರು ಅರ್ಜಿ ಹಾಕಿಕೊಳ್ಳದೆ ಇದ್ದುದರಿಂದ ಅವರಿಗೆ ವಿಧಾನ ಆಹ್ವಾನವನ್ನು ಕೊಟ್ಟಿಲ್ಲವೆಂದೂ ಸಹ ತಿಳಿಸಿದರು

ಮುಳಬಾಗಿಲು ತಾಲ್ಲೂಕಿನಲ್ಲಿ ಕಂದಾಯ ನಿರಾಕರಣೆಯೇ?

ಭೂ ಕಂದಾಯವನ್ನು ಸರ್ಕಾರದವರು ಹೆಚ್ಚಿಸಿದರೆ ಮುಳಬಾಗಿಲು ತಾಲ್ಲೂಕಿನಲ್ಲಿ ಕಂದಾಯ ನಿರಾಕರಣಾ ಚಳುವಳಿಯನ್ನು ನಡೆಸಬೇಕೆಂದು ತಾಲ್ಲೂಕಿನ ಕಮ್ಯೂನಿಸ್ಟ್ ಪಕ್ಷದವರು ನಿರ್ಧರಿಸಿರುತ್ತಾರೆ ಮುಖ್ಯ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳಲ್ಲಿ ರೈತರುಗಳ ನಿಯೋಗಗಳನ್ನು ಕೋಲಾರ, ಬಂಗಾರಪೇಟೆ ಮತ್ತು ಮುಳಬಾಗಿಲು ತಾಲ್ಲೂಕುಗಳಿಂದ ಕಳುಹಿಸುವಂತೆಯೂ ನಿರ್ಧರಿಸಲಾಗಿದೆ

ಸಾವಿನ ಭಾವಿ

ತಿರುಚೂರಿನ ಒಂದು ಭಾವಿಯಿಂದ ಹೊರಟ ವಿಷ ವಾಯುವಿನ ಪರಿಣಾಮವಾಗಿ ಇಬ್ಬರು ಮಡಿದಿರುತ್ತಾರೆ ಭಾವಿಯಲ್ಲಿದ್ದ ಸಣ್ಣ ಗಿಡಗಳನ್ನು ಕಿತ್ತುಹಾಕಲು ಒಬ್ಬ ಆಳು ಇಳಿದನೆಂದೂ, ಅವನು ಹಾಗೆಯೇ ಕೆಳಗೆ ಬಿದ್ದನೆಂದೂ, ಮಾಲೀಕನು ಅವನ ಸಹಾಯಕ್ಕಾಗಿ ಬಂದು ಅವನೂ ಮಡಿದನೆಂದೂ ಅನಂತರ ಇತರರು ಕಟ್ಟೆಯೊಂದರಲ್ಲಿ ಕುಳಿತು ಇಳಿಯಲು ಹೊರಟಾಗ ಅರ್ಧದಷ್ಟು ಇಳಿಯುತ್ತಲೇ ಉಸಿರು ಕಟ್ಟಿಕೊಂಡಂತಾಗಿ ಅವರು ಮೇಲಕ್ಕೆ ಬಂದರೆಂದೂ ವರದಿಯಾಗಿದೆ. ಸತ್ತವರ ಶವಗಳನ್ನು ಹೊರಕ್ಕೆ ತೆಗೆಯಲಾಗಿದೆ

○ ಫ್ರೆಡರಿಕ್ ದಿ ಗ್ರೇಟ್ ಎಂದು ಕರೆಯಲಾಗುವ, ಈಜಿಪ್ಟಿನ ಮಾಜಿ ದೊರೆಯ ರಕ್ಷಾಕವಚ ಮೈನ್ಯದ ತಪ್ಪಿಯನ್ನು ಹರಾಜು ಹಾಕಿದಾಗ ಅದನ್ನು ಅವರಿಗೆ ಹಿಂದೆ ಮಾರಿದ ತಿಕ್ಕಸಾಲೆ ರೋಸ್ ನಗರದ ಬಕ್ಲರಿಯಂಬುವನು ೧೫೩ ಸಾವಿರ ಪೌಂಡ ಗಳಿಗೆ ಕೊಂಡಿರುತ್ತಾನೆ

ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ರಜತೋತ್ಸವ

ಮೈಸೂರು ೧೬

ಮಹಾರಾಜಾ ಕಾಲೇಜಿನ ಇತಿಹಾಸ ಸಂಘವು ಸ್ಥಾಪನೆಯಾಗಿ ೨೫ ವರ್ಷಗಳು ಸಂದಿರುತ್ತವೆ. ಈ ಕಾಲಾವಧಿಯಲ್ಲಿ ಸಂಘವು ಅನೇಕ ಶ್ಲಾಘನೀಯ ಕಾರ್ಯಗಳನ್ನು ಮಾಡುತ್ತಿದೆ. ಸಂಘದ ಸದಸ್ಯರಿಂದ ಅನೇಕ ಸಂಶೋಧನೆಗಳ ಫಲವಾಗಿ ಬಹಳ ಉಪಯುಕ್ತವಾದ ವಿಷಯಗಳು ಪುಸ್ತಕ ರೂಪದಲ್ಲಿ ಹೊರಬಿದ್ದಿವೆ. ನಮ್ಮ ದೇಶದ ಪುರಾತನ ಇತಿಹಾಸ, ಸಂಸ್ಕೃತಿ ಮುಂತಾದ ವಿಷಯಗಳ ಬಗ್ಗೆ ಆಳವಾದ ಶೋಧನೆಗಳು ನಡೆದು, ಅವುಗಳ ಮಹತ್ವ ಜನಸಾಮಾನ್ಯರ ಮನಸ್ಸಿನಲ್ಲಿ ಹೆಚ್ಚಾಗುವಂತೆ ಮಾಡಿದೆ. ಪ್ರಸಿದ್ಧವಾದ ಚಂದ್ರವಳ್ಳಿ ಶಾಸನದ ವಿಷಯವನ್ನು ಬೆಳಕಿಗೆ ತಂದ ಯಶಸ್ಸು ಸಂಘದ ಹಳೆಯ ಸದಸ್ಯರಾಗಿದ್ದ ಪ್ರೊ॥ ಎಂ. ಹೆಚ್. ಕೃಷ್ಣರವರಿಗೆ ಸಲ್ಲುತ್ತದೆ.

ಇಂತಹ ಸಂಘವು ೧೯೨೮ರಲ್ಲಿ ಆಗ ಚರಿತ್ರೆ ಪ್ರಾಧ್ಯಾಪಕರಾಗಿದ್ದ ಪ್ರೊ॥ ಎಸ್. ಶ್ರೀಕಂಠಯ್ಯನವರಿಂದ ರಚಿಸಲ್ಪಟ್ಟಿತು. ಆಗ ಅದರ ಸದಸ್ಯರಾಗಿದ್ದವರ ಸಂಖ್ಯೆ ಹೆಚ್ಚು. ಅವರ ನಂತರ ಪ್ರಾಧ್ಯಾಪಕರಾಗಿದ್ದವರು ದಿವಂಗತರಾದ ಶ್ರೀ ಎಂ. ಎಲ್. ಕೃಷ್ಣರಾವ್, ಎಂ. ಎ. ಬಿ. ಟಿ. ಮತ್ತು ಇತರರು ಈ ಸಂಘದ ಪ್ರಗತಿಗೆ ಶ್ರಮಿಸಿದರು. ಅಲ್ಲದೆ ಸಾಮ್ರಾಜ್ಯ ಚರಿತ್ರೆ ಮತ್ತು ಪಾಶ್ಚಾತ್ಯ ಚರಿತ್ರೆ ಅಧ್ಯಾಪಕರುಗಳ ನೆರವು ಆಗಿನ ಕಾಲಕ್ಕೆ ದೊರೆತಿದ್ದವು.

ಪ್ರೊ॥ ಶ್ರೀಕಂಠಯ್ಯನವರು ೧೯೩೦ರಲ್ಲಿ ಚರಿತ್ರೆ ವಿಭಾಗದ ಮುಖ್ಯಸ್ಥರಾಗಿದ್ದರು. ಅವರ ಜೊತೆಯಲ್ಲಿ ಎಂ. ಎ. ತರಗತಿಗಳಿಗೆ ಪ್ರೊ॥ ಎಂ. ಹೆಚ್. ಕೃಷ್ಣರಾಯರು ಸಂಘದ ಸದಸ್ಯರಾಗಿದ್ದರು.

ಅನಂತರ ಪ್ರೊ॥ ಸಿ. ಆರ್. ರೆಡ್ಡಿಯವರ ಇತಿಹಾಸ ಶಾಖೆಯ ಪ್ರಾಧ್ಯಾಪಕರಾಗಿ ಬಂದರು. ಇಂದಿನ ಜಿ॥ ವೆಂಕಟರಾಮಯ್ಯ, ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್, ಪ್ರೊ॥ ಹೆಚ್. ಸುಬ್ಬರಾಯರು ಆಗ ಸದಸ್ಯರಾಗಿದ್ದರು. ಈ ಕಾಲಾವಧಿಯಲ್ಲಿ ಸಂಶೋಧನಾ ಇತಿಹಾಸವು ಬಹಳವಾಗಿ ಪ್ರಾದುರ್ಭಾವದಲ್ಲಿತ್ತು.

ಅನಂತರ ೧೯೩೭ರಲ್ಲಿ ಪ್ರೊ॥ ರಂಗಾಚಾರ್ಯರು ಮುಖ್ಯಸ್ಥರಾದರು. ಚರಿತ್ರೆ ಪ್ರಾಧ್ಯಾಪಕರಾಗಿ ನಮ್ಮ ದೇಶದ ಇತಿಹಾಸದ ಪ್ರಥಮ ಸ್ಥಾನವು ಆರಂಭವಾಯಿತು. ಭಾರತೀಯ ಇತಿಹಾಸದಲ್ಲಿ ಹೆಚ್ಚಿನ ಶ್ರದ್ಧೆ ಮೂಲಗ್ರಂಥಗಳನ್ನು ವ್ಯಾಸಂಗಮಾಡಿದರು. ಆದ್ದರಿಂದ ಪ್ರಾಚೀನ ಭಾರತದ ಸ್ಥಳೀಯ ಸ್ವರಾಜ್ಯ ಎಂಬ ಪುಸ್ತಕವನ್ನು ಪ್ರಕಟಿಸಿದರು. ಅಲ್ಲದೆ ಭಾರತದ ಗುಲಾಮ ಸಂಸ್ಕೃತಿಯ ತತ್ವವನ್ನು ಪ್ರತಿಪಾದಿಸಿ ಹೆಚ್ಚಿನ ಪ್ರಚಾರಕ್ಕೆ ತಂದರು. ನಮ್ಮ ಇತಿಹಾಸದ ಹಿರಿಮೆಯನ್ನು ಜನರಿಗೆ ಮನದಟ್ಟು ಮಾಡಿಸಿದರು.

ಅವರ ನಂತರ ೧೯೪೭ರ ವರೆಗೆ ಪ್ರಾಧ್ಯಾಪಕರಾಗಿದ್ದ ಪ್ರೊ॥ ಎಸ್. ವಿ. ವೆಂಕಟೇಶ್ವರಯ್ಯಂಗಾರರವರು ವೇದ ಪುರಾತನ ತತ್ವ ಮತ್ತು ಸಾಹಿತ್ಯದಲ್ಲಿ ಘನವಾದ ಪಾಂಡಿತ್ಯವನ್ನು ಹೊಂದಿದ್ದರು. ಇವರು ಪುರಾತನ ಸಂಸ್ಕೃತಿಯ ಇತಿಹಾಸವನ್ನು ಪ್ರತಿಪಾದಿಸಿದರು. ಇತಿಹಾಸದಲ್ಲಿ ಸಂಸ್ಕೃತಿ ಎಂಬ ಗ್ರಂಥವನ್ನು ಪ್ರಕಟಿಸಿ ಭಾರತೀಯ ಸಂಸ್ಕೃತಿಯ ವ್ಯಾಪಕ ಚರಿತ್ರೆಯನ್ನು ವಿವರಿಸಿದ್ದಾರೆ.

೧೯೪೭ರಲ್ಲಿ ಪ್ರೊ॥ ಎಂ. ಹೆಚ್. ಕೃಷ್ಣರವರು ಇತಿಹಾಸದ ಮತ್ತೊಂದು ಪ್ರಾಚ್ಯ ಶೋಧನೆಯ ಕಾರ್ಯವನ್ನು ಕೈಗೊಂಡರು. ಇದರ ಫಲವಾಗಿ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಗಣಿಯ ಇತಿಹಾಸವು ಬೆಳಕಿಗೆ ಬಂದಿತು. ಆಗಿನಿಂದ ಈ ಸಂಶೋಧನಾ ಕಾರ್ಯವು ಮುಂದುವರಿಯಲು ಆರಂಭವಾಯಿತು. ಇದರಿಂದ ಇತಿಹಾಸದ ಪ್ರತಿಪಾದನೆಗೆ ಒಳ್ಳೆಯ ತಳಹದಿಯು ದೊರೆತ ಹಾಗಾಯಿತು. ಮುಂದೆ ನಮ್ಮ ಸಂಸ್ಥಾನದ ಇತಿಹಾಸದ ಅನೇಕ ವಿಷಯಗಳು ಬೆಳಕಿಗೆ ಬರಲು ಕಾರಣವಾಯಿತು. ಈಗಲೂ ಕಾಲೇಜಿನಲ್ಲಿ ಉಪಪ್ರಾಧ್ಯಾಪಕರಾಗಿರುವ ಡಾ॥ ಶ್ರೀಕಂಠಶಾಸ್ತ್ರಿ ಮತ್ತು ಇತರರು ಮೈಸೂರಿನ ಇತಿಹಾಸದ ಬಗ್ಗೆ ನಡೆಸಿದ ಸಂಶೋಧನೆಗಳಿಂದ ಸಂಸ್ಥಾನದ ಚರಿತ್ರೆಯು ಬೆಳವಣಿಗೆಗೆ ಸಹಕಾರಿಯಾಯಿತು. ಈಗ ಉಪಪ್ರಾಧ್ಯಾಪಕರಾದ ಡಾ॥ ಕೆ. ಎ. ನೀಲಕಂಠ ಶಾಸ್ತ್ರಿಗಳು ಬರೆದ ಭಾರತದ ಇತಿಹಾಸವನ್ನು ಕಬ್ಬಿಣ ಮತ್ತು ಮಸ್ಕಿ ಎಂಬ ಪುಸ್ತಕದಲ್ಲಿ ಚರ್ಚಿಸಿದರು. ಅಲ್ಲದೆ ಡಾ॥ ಎಂ. ಶೇಷಾದ್ರಿಯವರು ಶಿಲಾಯುಗದಲ್ಲಿನ ಶಿಲ್ಪಕಲೆ ಎಂಬ ಪುಸ್ತಕವನ್ನು ಪ್ರಕಟಿಸಿದರು.

ಈಗಿನ ಸಂಘದ ಸದಸ್ಯರುಗಳು ಅನೇಕ ವಿಷಯಗಳ ಮೇಲೆ ಶ್ಲಾಘನೀಯವಾದ ಸಂಶೋಧನೆಗಳನ್ನು ನಡೆಸಿದ್ದಾರೆ. ಪ್ರೊ॥ ಎಂ. ವಿ. ಕೃಷ್ಣರಾಯರು ಹೊಯ್ಸಳ ಮತ್ತು ಆಧುನಿಕ ಚರಿತ್ರೆಗಳನ್ನು ಸಿದ್ಧಪಡಿಸುತ್ತಿರುವರು.

ಕಂಚಿ ಕಾಮಕೋಟಿ ಪೀಠದ ಮುಂದಿನ ಗುರುಗಳು

ಕಂಚಿ ಕಾಮಕೋಟಿ ಪೀಠದ ಉತ್ತರಾಧಿಕಾರ ಸ್ಥಾನಕ್ಕೆ ತಮ್ಮ ಶಿಷ್ಯರಾಗಿ ನೇಮಕಮಾಡಿಕೊಂಡಿರುವ ೧೯ ವರ್ಷ ವಯಸ್ಸಿನ ಸುಬ್ರಹ್ಮಣ್ಯಂರವರನ್ನು ಈಗಿನ ಗುರುಗಳು ಆರಿಸಿರುತ್ತಾರೆ. ಇವರಿಗೆ ಇದೇ ೨೨ನೇ ತಾ॥ ದೀಕ್ಷೆಯು ಕೊಡಲಾಗುವುದು. ಪೀಠಕ್ಕೆ ವಟುವನ್ನು ಆರಿಸುವುದು ಇದು ಎರಡನೇ ಬಾರಿ. ಇದುವರೆಗೆ ಕನ್ನಡಿಗರೇ ಬರುತ್ತಿದ್ದರು.

ರು ಉತ್ತಮ ಪುಸ್ತಕಗಳನ್ನು ಪ್ರಕಟಪಡಿಸಿರುತ್ತಾರೆ. ಅವರ ವಿದ್ಯಾರ್ಥಿಯೂ ಆದ ಪ್ರಾಚ್ಯ ಸಂಶೋಧನಾ ಇಲಾಖೆಯ ಡೈರೆಕ್ಟರ್ ಶ್ರೀ ಕೆ. ನಾರಾಯಣ ಅಯ್ಯಂಗಾರ್ಯರೂ, ಮತ್ತು ಶ್ರೀಗಳಾದ ಬಿ. ಎಸ್. ಅಚ್ಯುತರಾವ್, ಎ. ವಿ. ವೆಂಕಟರತ್ನಂ, ಷೇಕ್ ಅಲಿ ಮುಂತಾದವರೂ ಸಹ ಅನೇಕ ಸಂಶೋಧನೆಗಳನ್ನು ನಡೆಸಿದ್ದಾರೆ.

ಇಷ್ಟು ಮಹತ್ವದ ಕಾರ್ಯಗಳನ್ನು ಮಾಡಿ ದೇಶಸೇವೆ ಮತ್ತು ವಿದ್ಯಾರ್ಥಿವೇತನ ಸೇವೆಯನ್ನು ಸಲ್ಲಿಸಿರುವ ಮತ್ತು ಅತ್ಯಂತ ಪುರಾತನವೂ ಹಿರಿದಾದುದೂ ಎನಿಸಿದ ಈ ಸಂಘದ ರಜತ ಮಹೋತ್ಸವವು ಇಂದು ನಡೆಯುವುದು ನಿಜವಾಗಿಯೂ ಒಂದು ಆನಂದದಾಯಕವಾದ ಸಂಗತಿಯೇ ಸರಿ.

ಬೇಕಾಗಿದ್ದಾರೆ

ಆಫೀಸಿನಲ್ಲಿ ಜವಾನರ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಬಹುದು.

ವ್ಯವಸ್ಥಾಪಕ ಸಾಧ್ವಿ ಮೈಸೂರು

ರಾಜ್ಯಾಂಗ ಸಭೆಯಲ್ಲಿ ಸ್ತ್ರೀಯರಿಗೆ ಸ್ಥಾನಕ್ಕಾಗಿ ಉಪವಾಸ ಮುಷ್ಕರ

ಈಜಿಪ್ಟಿನ ರಾಜ್ಯಾಂಗ ಸಭೆಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿಲ್ಲದಿರುವುದನ್ನು ಪ್ರತಿಭಟಿಸಿ, ಅದರ ಸಾಧನೆಗಾಗಿ ಆಮರಣಾಂತ ಉಪವಾಸ ಕೈಗೊಳ್ಳಲು ನಿರ್ಧರಿಸಿ ಕೈರೋವಿನ ಪತ್ರಿಕೆಯೊಂದರ ಸಂಪಾದಕಿ ಡೋರಿಯಾ ಶಫಿಕ್ ಎಂಬಾಕೆಯು ಕಳೆದ ಶುಕ್ರವಾರದಿಂದ ನಿರಶನ ಮುಷ್ಕರವನ್ನು ಆರಂಭಿಸಿರುವರೆಂದೂ, ಇತರ ೨೦ ಮಹಿಳೆಯರೂ ಅವರೊಡನೆ ಸೇರಿರುವರೆಂದೂ ಗೊತ್ತಾಗಿದೆ. ಈ ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಿ ತಿಳಿಸಿ ಇನ್ನೂ ಅನೇಕ ಮಂದಿ ಮಹಿಳೆಯರು ಡೋರಿಯಾ ಶಫಿಕರಿಗೆ ತಿಳಿಸಿರುವರೆಂದೂ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆ ಪೈ	ರೂ ಆ ಪೈ
ಕಡಲೆಕಾಯಿ	೨೦ ೦ ೦	೨೪ ೨ ೦
ಹರಳುಬೀಜ	೩೩ ೦ ೦	೩೮ ೪ ೦
ಉಚ್ಚೆಳ್ಳು	೪೫ ೦ ೦	೪೪ ೨ ೦
ಹೊಂಗೇಬೀಜ	೧೭ ೦ ೦	೨೨ ೨ ೦
ಹುರುಳಿ	೨೩ ೦ ೦	೨೯ ೦ ೦
ಹೆಸರು	೪೬ ೧೪ ೦	೪೯ ೦ ೦
ಹಲಸಂದೆ	೩೦ ೦ ೦	೪೭ ೦ ೦
ಧನಿಯ	೨೬ ೪ ೦	೩೦ ೦ ೦
ತೊಗರಿ	೨೧ ೦ ೦	೨೪ ೧೦ ೦
ರಾಗಿ	೪೦ ೬ ೦	೪೪ ೪ ೦
ಸೇಂದ್ರಿ ಬೀಜ	೨೯ ೧೩ ೦	೩೦ ೪ ೦
ಹುಣಸೇಬೀಜ	೧೪ ೬ ೦	೧೬ ೧೩ ೦
ಹುಣಸೇಹಣ್ಣು	೬ ೧೩ ೦	೯ ೧೪ ೦
ಸೀಗೆಕಾಯಿ	೪ ೧ ೦	೪ ೧೩ ೦
ಮೆಣಸಿನಕಾಯಿ	೨೪ ೦ ೦	
ಬೆಲ್ಲ	೪ ೮ ೦	
ತೆಂಗಿನಕಾಯಿ ೧೦೦೦	೧೬೯ ೦ ೦	೨೪೪ ೦ ೦

ಜೀವ ವಿಮೆ

ಗಂಡನ ಕರ್ತವ್ಯವೂ ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ ಸೇವೆ ಸಹಕಾರ ಸಲ್ಲಿಸಿದೆ
ಪೂರ್ಣ ಭದ್ರತೆ— ಅತಿ ಕಡಿಮೆ ವೆಚ್ಚ ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು! ಅತ್ಯನುಕೂಲವಾದ ಪ್ರೀಮಿಯಂ ದರ ಸುಲಭ ಸಾಲ ಸೌಕರ್ಯ ತಡವಿಲ್ಲದ ವಿಮಾ ಮೊಬಲಗಿನ ಸಂದಾಯ ಪ್ರಜೆಗಳ ಶಾಶ್ವತ ಸ್ಥಿರನಿಧಿ ವಿಮೆ ಮಾಡಲು ಇಂದೇ ನಿರ್ಧರಿಸಿ

ಮೈಸೂರು ಸರ್ಕಾರದ ವಿಮಾ ಇಲಾಖೆ, ಬೆಂಗಳೂರು

ನೋಟಿಫಿಕೇಷನ್

ನಂ. ಸಿ. ೨ 124 53 ತಾರೀಖು 8-3-54

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಜಿಲ್ಲೆಯಲ್ಲಿ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಿಗೆ ಸೇರಿದ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಅಮೃತಮಹಲ್ ಕಾವಲು ಜಮೀನುಗಳು ರೈತರಿಗೆ ಸಾಗುವಳಿಗೆ ದೊರಕುವ ಹಾಗಿರುತ್ತವೆ. ಆ ಜಮೀನುಗಳು ವ್ಯವಸಾಯಕ್ಕೆ ಯೋಗ್ಯವಾಗಿರುತ್ತವೆ. ಸಾಗುವಳಿಗೆ ಜಮೀನು ಪಡೆಯಲು ಇಚ್ಛಿಸುವ ಕೆಳಗೆ ಕಂಡ ಆರು ವರ್ಗಕ್ಕೆ ಸೇರಿದವರು ಮಾತ್ರ "ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಿಗೆ" ವಿಧಾಯಕವಾಗಿರುವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಹಕ್ಕುಳ್ಳವರು ಯಾರೆಂದರೆ ——

1) ಜಮೀನು ಹೊಂದಲು ಅರ್ಹರಾಗಿರುವ ನಿವೃತ್ತ ಸೈನಿಕರು 2) ಜಮೀನು ಇಲ್ಲದ ರೈತರು 3) ಹಿಂದುಳಿದ ವರ್ಗಕ್ಕೆ ಸೇರಿದವರು 4) ಸಾಕಷ್ಟು ಜಮೀನು ಇಲ್ಲದವರು 5) ಆ ಹಳ್ಳಿಯ ಪಕ್ಕದಲ್ಲಿ ಸೇರಿದ ಮೈಸೂರು ಡಿಸ್ಟ್ರಿಕ್ಟ್‌ನವರು 6) ಸಣ್ಣ ಹಿಡುವಳಿದಾರ ರೈತರು

ಅರ್ಜಿಯನ್ನು ಈ ತಾರೀಖು ಆದಾಗಿನಿಂದ ೩೦ ದಿವಸಗಳ ಒಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಿಗೆ ಕಳುಹಿಸಿಕೊಡಬೇಕು. ಅರ್ಜಿದಾರರು ಕೇಳಬಹುದಾದ ಯಾವ ಒಂದು ಕಾವಲಿನಲ್ಲಿ ಜಮೀನು ಅಲ್ಲದೆ ಹೋದ ಪಕ್ಷದಲ್ಲಿ ಅದ್ದರಿಂದ ಪ್ರತಿಯೊಬ್ಬ ಅರ್ಜಿದಾರರೂ ಅವರು ಕೇಳುವ ಜಮೀನು ದೊರೆಯುವ ಕಾವಲ್ ಹೆಸರನ್ನು ಮೊದಲು ಸೂಚಿಸಿ, ಅಲ್ಲಿ ಜಮೀನು ಇಲ್ಲದಿದ್ದರೆ ಅವರು ಇಷ್ಟಪಡುವ ಇತರ ಕಾವಲುಗಳ ಹೆಸರನ್ನು 2 3 ವಗೈರೆ ಸ್ಥಾನಗಳಲ್ಲಿಯೂ ಸೂಚಿಸಬೇಕು. ಮೇಲೆ ತಿಳಿಸಿದ ಗಡುವು ಮುಗಿದನಂತರ ಬರತಕ್ಕ ಅರ್ಜಿಗಳಿಗೆ ಗಮನ ಕೊಡಲಾಗುವುದಿಲ್ಲ. ವಿಧಾಯಕವಾದ ಅರ್ಜಿ ಫಾರಂ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರ ಆಫೀಸಿನಲ್ಲಾಗಲೀ ಮೈಸೂರು ಮತ್ತು ನಂಜನಗೂಡು ಸಬ್ ಡಿವಿಷನ್ ಆಫೀಸುಗಳಲ್ಲಿಯಾಗಲೀ ಅಥವಾ ಮೈಸೂರು ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿಯಾಗಲೀ ನೋಡಬಹುದು. ಅರ್ಜಿದಾರರು ಈ ಫಾರಂ ಅನ್ನು ನಕಲು ಮಾಡಿಕೊಳ್ಳಬಹುದೇ ಹೊರತು ಫಾರಂ ಸಪ್ಲೈ ಮಾಡಲಾಗುವುದಿಲ್ಲ.

ಈ ಮೊದಲೇ ಈ ಕಾವಲುಗಳಲ್ಲಿ ಜಮೀನುಗಳನ್ನು ಅಪೇಕ್ಷಿಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಆದಕಾರಣ ಅರ್ಜಿ ಕೊಟ್ಟವರು ಹೊಸ ಫಾರಂ ರೀತ್ಯಾ ಪುನಃ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಆಫೀಸುಗಳಲ್ಲಿ ತಿಳಿಯಬಹುದು.

— ಕಾವಲುಗಳ ಹೆಸರು —

1 ಅಕ್ಕಿಕೆರೆ ಕಾವಲು 2 ಉಳ್ಳೂರು ಕಾವಲು 3 ಹೋಬಳಿರು ಬೆಟ್ಟರು ಕಾವಲು 4 ಮರೂರು ಕಾವಲು 5 ಹೊಡಕೆಕಟ್ಟೆ ಕಾವಲು 6 ತಿಂಬಹಳ್ಳಿ ಕಾವಲು 7 ಕಿರಿಕಲ್ಲು ಕಾವಲು, ಹುಣಸೂರು ತಾಲ್ಲೂಕು 8 ಹಡುವಕೋಟೆ ಕಾವಲು ಹೆಗ್ಗಡದೇವನಕೋಟೆ ತಾಲ್ಲೂಕು

ಎಂ. ಎಸ್. ಸ್ವಾಮಿನಾಥನ್,
ಡೆಪ್ಯುಟಿ ಕಮೀಷನರ್ ಮೈಸೂರು ಡಿಸ್ಟ್ರಿಕ್ಟ್

ಪ್ರಭುದೇವಾ ಥಿಯೇಟರ್ :: ಪದ್ಮಾ ಟಾಕೀಸ್

19—3—1954ನೇ :: ಶುಕ್ರವಾರದಿಂದ :: ಅಮೋಘ ಪ್ರಾರಂಭ :: ಪ್ರತಿ ದಿನ 3 ಆಟಗಳು

ನಿರುಪೇದಲು ★ ನಿರುಪೇದಲು

(ಕಡು ಬಡವರು) :: :: (ತೆಲುಗು ಚಿತ್ರ)

ಪಾತ್ರ.— ನಾಗೇಶ್ವರರಾವ್, ಜಮುನ, ಬಾಲಸರಸ್ವತಿ ಮುಂತಾದವರು

Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ 793

॥ ವಂದೇ ಮಾತರಂ ॥

ಬಿಡಿ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ೨ ರೂ.
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೩] MYSORE THURSDAY 18-3-1954 : ಮೈಸೂರು : ಗುರುವಾರ ೧೮-೩-೧೯೫೪ [ಸಂಚಿಕೆ ೨೦೬

– ಮಧ್ಯಪೂರ್ವ ಕಮ್ಯೂನಿಸ್ಟರ ಕೇಂದ್ರದ ಮೇಲೆ ಧಾಳಿ –

ಕಾಲೇಜು ಇತಿಹಾಸ ಸಂಘದ ವಜ್ರ ಮಹೋತ್ಸವ

ನಾಲ್ಕು ಕುದುರೆ ಸಾರೋಟಿನಲ್ಲಿ ಶ್ರೀಮನ್ ಮಹಾರಾಜರ ವೈಭವದ ಸವಾರಿ

ಮೈಸೂರು ೧೭

ಇಲ್ಲಿನ ಮಹಾರಾಜಾ ಕಾಲೇಜಿನ ವಿಶ್ವ ವಿದ್ಯಾಲಯದ ಇತಿಹಾಸ ಸಂಘದ ವಜ್ರ ಮಹೋತ್ಸವವನ್ನು ನೆನ್ನೆ ಶ್ರೀಮನ್ ಮಹಾರಾಜರು ಆರಂಭಗೊಳಿಸಿ ಭಾಷಣ ಮಾಡಿ, ಅನಿಶ್ಚಿತ ಮತ್ತು ಮಹತ್ವಾತಗೇರುವ ಈಗಿನ ಕಾಲದಲ್ಲಿ ಜನರಿಗೆ ಚರಿತ್ರೆಯು ಅನುಭವ ಸಾರವುಳ್ಳ ಅನೇಕ ವಿವೇಕಪೂರಿತ ಎಚ್ಚರಿಕೆಗಳನ್ನು ಕೊಡಬಲ್ಲದೆಂದು ತಿಳಿಸಿದರು. ಪ್ರಜಾಶಕ್ತಿಯಲ್ಲಿ ಐಕ್ಯತೆ ಸಾಧ್ಯವಿಲ್ಲವೆಂದು ಚರಿತ್ರೆಯು ತಿಳಿಸಿರುತ್ತದೆ. ಹೊರ ಶತ್ರುಗಳಿಗಿಂತಲೂ ಆಂತರಿಕ ಒಡಕುಗಳಿಂದ ಅನೇಕ ರಾಜ್ಯಗಳು ನಾಶವಾಗಿವೆ. ಮಾನವರನ್ನು ಒಂದುಗೂಡಿಸಬಲ್ಲ ಪ್ರಭಾವಶಾಲಿ ಶಕ್ತಿಗಳಾದ ವರ್ಣ, ಮತ, ಭಾಷೆ ಇವುಗಳು ಜನರನ್ನು ಒಟ್ಟುಗೂಡಿಸುವುದಕ್ಕಿಂತಲೂ ಹೆಚ್ಚಾಗಿ ಭೇದ ಹುಟ್ಟಿಸಬಲ್ಲವೆಂಬುದೂ ಚರಿತ್ರೆಯಿಂದ ಗೊತ್ತಾಗುವುದು. ಐಶ್ವರ್ಯ ಮತ್ತು ಅಧಿಕಾರ-ಇವುಗಳು ಹೃದಯಗಳನ್ನು ಕಠಿಣಗೊಳಿಸಿ ಬುದ್ಧಿಯನ್ನು ಮಂದವಾಗಿ ಮಾಡಬಲ್ಲವು. ಸಮಾಜದ ಅಭಿವೃದ್ಧಿಗಿಂತಲೂ ಯುದ್ಧಕಲೆಯಲ್ಲಿ ಪ್ರಗತಿಯು ವಿಶೇಷ ಪ್ರಮಾಣದಲ್ಲಿ ಈಗ ಹೆಚ್ಚುತ್ತಿದೆ. ಪ್ರಪಂಚದ ಅತ್ಯುತ್ತಮ ಬುದ್ಧಿಶಾಲಿಗಳೆಂದೆನಿಸಿರುವವರ ವೈಖರಿ ಬಾಂಬು ಮತ್ತು ಷೆಲ್ಲುಗಳನ್ನು ಪರಿಷ್ಕರಿಸುತ್ತಿರುವ ಹಲವರು ಪ್ರತಿಯೊಂದು ಯುದ್ಧದಿಂದಲೂ ಮತ್ತೊಂದು ರಕ್ತಧಾರೆ ಮತ್ತು ಮಾತಾಪಿತೃಗಳ ಕಣ್ಣೀರು ಹರಿಯುವುದೆಂಬುದನ್ನೂ ಮತ್ತು ಎರಡು ತಲೆಮಾರು ಜನರು ನಷ್ಟ ಹೊಂದುವರೆಂಬುದನ್ನೂ ಚರಿತ್ರೆಯಿಂದ ಅರಿಯಬಹುದು. ಅದರ ಪಾಠವನ್ನು ಕಲಿತು ಶಾಂತಿ ಸಂಧಾನ ನಡೆಸುವವರೇ ಧನ್ಯರು ಎಂದು ಅವರು ಹೇಳಿದರು.

ನಾಯಕತ್ವ ಮತ್ತು ಪ್ರಭಾವ ಬೀರಬಲ್ಲ ಸ್ಥಾನಗಳನ್ನು ವಹಿಸುವ ಜನರು ಚರಿತ್ರೆ ಮತ್ತು ಅದರ ಪಾಠವನ್ನು ಶ್ರದ್ಧೆ ಮತ್ತು ವಿವೇಚನೆಯಿಂದ ಅಭ್ಯಾಸ ಮಾಡಿ, ಗೀತೆ ಮತ್ತು ಉಪನಿಷತ್ತುಗಳ ಬೋಧೆಯನ್ನು ಸ್ಮರಿಸಿಕೊಂಡರೆ ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದವು ಸ್ಥಾಪಿಸಲ್ಪಡುವುದರಲ್ಲಿ ಸಂದೇಹವೇ ಇರುವುದಿಲ್ಲವೆಂದೂ, ಅವರಲ್ಲಿ ಸಮದೃಷ್ಟಿ ಮತ್ತು ಸಮನ್ವಯವು ಬೆಳೆಯಬೇಕೆಂದೂ, ನಾಗರೀಕತೆ ಮತ್ತು ಸಂಸ್ಕೃತಿಯ ಮೇಲೆ ಚರಿತ್ರೆಯು ಬೀರಬಲ್ಲ ಬೆಳಕಿನ ಸಹಾಯದಿಂದ ನಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಬಹುದೆಂದೂ ಅವರು ಹೇಳಿದರು.

ಸಮಾರಂಭಕ್ಕೆ ಶ್ರೀಮನ್ ಮಹಾರಾಜರು, ನಾಲ್ಕು ಕುದುರೆಗಳಿಂದ ಕೂಡಿದ ದಿವ್ಯ ರಥದಲ್ಲಿ ಅಶ್ವಾರೋಹಿ ಪಡೆಗಳ ಮಧ್ಯದಲ್ಲಿ ಆಗಮಿಸಿದರು. ಪ್ರಮುಖರ ಪರಿಚಯವಾದ ನಂತರ ವೈದಿಕರಿಂದ ವೇದಘೋಷ ಮತ್ತು ಪೂರ್ಣಕುಂಭದ ಸಮರ್ಪಣೆಗಳಾದುವು. ಕಾಲೇಜಿನ ವಿದ್ಯಾರ್ಥಿನಿಯರು ಮಹಾರಾಜರಿಗೆ ಆರತಿಯನ್ನು ಬೆಳಗಿದರು. ಶ್ರೀಮನ್ ಮಹಾರಾಜರು ನಂತರ ಕಾಲೇಜು ಮುಂಭಾಗದಲ್ಲಿ ಅಶೋಕ ಸ್ತಂಭದ ಪ್ರತಿಕೃತಿ

ಸಬ್ ಡಿವಿಜನ್ ಅಧಿಕಾರಿಗಳ ಹುದ್ದೆ ರದ್ದಿನ ಬಗ್ಗೆ ಆಲೋಚನೆ

ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳ ಹೇಳಿಕೆ

ಬೆಂಗಳೂರು ೧೭

ಕಿರಿಯ ಶಾಸನ ಸಭೆಯಲ್ಲಿ ಆಯವ್ಯಯ ಪಟ್ಟಿ ಪರಿಶೀಲನೆ ಅಂಗವಾಗಿ ಬಂದ ಬೇಡಿಕೆಗಳ ನಿರ್ಣಯಗಳನ್ನು ನೆನ್ನೆ ಚರ್ಚಿಸುತ್ತಿದ್ದಾಗ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಮಾತನಾಡಿ, ಸಬ್ ಡಿವಿಜನ್ ಅಧಿಕಾರಿಗಳ ಹುದ್ದೆ ರದ್ದು ಮಾಡುವ ವಿಷಯವನ್ನು ಪರ್ಯಾಲೋಚಿಸಲಾಗುವುದೆಂದು ಹೇಳಿದರು.

ಸರ್ಕಾರಕ್ಕೆ ಬರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಆರು ತಿಂಗಳೊಳಗೆ ಅಧಿಕಾರದ ವಿಕೇಂದ್ರೀಕರಣ ಮಾಡಲಾಗುವುದೆಂದು ಸಚಿವರು ತಿಳಿಸಿದರು.

ಮಂತ್ರಿಗಳ ವರ್ಗದಲ್ಲಿನ ಕೆಲಸವನ್ನು ಕಡಿಮೆ ಮಾಡುವ ಉದ್ದೇಶದಿಂದ ರೆವಿನ್ಯೂ ಬೋರ್ಡನ್ನು ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಅವರ ಉತ್ತರವಿತ್ತರು.

ಸಂಸ್ಥಾನದ ಪತ್ರಿಕೋದ್ಯೋಗಿಗಳಿಗೆ ಮಾನ್ಯತೆ ಕೊಡುವ ಪದ್ಧತಿಯು ಸಂಸ್ಥಾನದಲ್ಲಿ ಜಾರಿಯಲ್ಲಿಲ್ಲವೆಂದೂ, ಈ ಪದ್ಧತಿ ತರಲು ಪತ್ರಿಕೆಗಳವರ ಸಹಕರಿಸಲಿಲ್ಲವೆಂದೂ ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿದರು.

ನೂತನವಾಗಿ ನಿರ್ಮಿಸಲ್ಪಟ್ಟಿರುವ ನೀರಿನ ಫೌಂಟೇನ್ ಮತ್ತು ವಿದ್ಯುದ್ದೀಪಗಳ ಆರಂಭೋತ್ಸವವನ್ನು ನೆರವೇರಿಸಿದರು.

ಶ್ರೀಮತಿ ಹೆಚ್. ಆರ್. ಲೀಲಾವತಿಯವರಿಂದ ಸ್ವಾಗತ ಗೀತೆಯೊಡನೆ ಸಮಾರಂಭವು ಆರಂಭವಾಯಿತು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ. ಎಲ್. ಡಿಸೋಜರವರಿಂದ ಸ್ವಾಗತ ಭಾಷಣವಾದನಂತರ ಅವರೂ ಮತ್ತು ಕಾರ್ಯದರ್ಶಿ ಶ್ರೀ ಹೆಚ್. ನಾರಾಯಣ್‌ರವರೂ ರಾಜೇಂದ್ರಪ್ರಸಾದ್, ರಾಜಗೋಪಾಲಾಚಾರಿ, ಕೆ. ಹನುಮಂತಯ್ಯ, ಸಾಲತೋರಿ, ಸಿ. ಪಿ. ರಾಮಸ್ವಾಮಿ ಅಯ್ಯರ್ ಮುಂತಾದವರಿಂದ ಬಂದಿದ್ದ ಸಂದೇಶಗಳನ್ನು ಓದಿದರು.

ಕಾಲೇಜಿನ ಉಪಾಧ್ಯಾಯರಾದ ಶ್ರೀ ಎಂ. ಎ. ನರಸಿಂಹಾಚಾರ್ಯರ ನೇತೃತ್ವದಲ್ಲಿ ಶ್ರೀಮತಿಗಳಾದ ಎಂ. ಬಿ. ಪ್ರೇಮಲತಾ, ಎ. ವಿ. ಮನೋರಮಾ, ಎ. ವಿ. ಉಷಾ, ವಿ. ಟಿ. ಪದ್ಮ, ವತ್ಸಲಾಬಾಯಿ, ವಸಂತಕುಮಾರಿ, ಆರ್. ರಾಜೇಶ್ವರಿ ಮತ್ತು ಶ್ರೀ ಎಂ. ಎ. ರಂಗಾಚಾರ್‌ರವರ ಗಾನ ಗೋಷ್ಠಿಯು ಸುಶ್ರಾವ್ಯವಾಗಿ ನಡೆಯಿತು.

ಕಾಲೇಜಿನ ಪ್ರೊಫೆಸರ್ ಡಾ॥ ಎಂ. ವಿ. ಕೃಷ್ಣರಾಯರು ಬಿನ್ನವತ್ತಳೆಯನ್ನು ಮಹಾರಾಜರಿಗೆ ಗಂಧ ಮತ್ತು ದಂತದಲ್ಲಿ ಕೆತ್ತಿದ ಕರಂಡದಲ್ಲಿ ಅರ್ಪಿಸಿದರು. ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಎಂ. ಜಯಲಕ್ಷ್ಮಮ್ಮನವರು ವಜ್ರೋತ್ಸವದ ಸ್ಮಾರಕ ಗ್ರಂಥವನ್ನು ಪ್ರಭುಗಳಿಗೆ ಅರ್ಪಿಸಿದರು.

ಉತ್ಸವ ಸಮಿತಿಯ ಉಪಾಧ್ಯಕ್ಷ ಶ್ರೀ ಜಿ. ಪುಟ್ಟಸ್ವಾಮಿಯವರಿಂದ ವಂದನಾರ್ಪಣೆ, ಜಹಾಂಗೀರ್ ಎಂಬ ನಾಟಕ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕೋಲಾರದ ಚಿನ್ನದ ಗಣಿ ಕಾರ್ಮಿಕರಿಂದ ಮುಷ್ಕರದ ನಿರ್ಧಾರ

ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಕೋಲಾರದ ಚಿನ್ನದ ಗಣಿಗಳ ಪೈಕಿ ಚಾಂಪಿಯನ್ ರೀಫ್ ಮತ್ತು ಮೈಸೂರು ಗಣಿಗಳ ಕಾರ್ಮಿಕರು ಮುಷ್ಕರ ಹೂಡುವುದೊಂದೇ ಮಾರ್ಗವೆಂದು ನಿರ್ಧರಿಸಿರುವರು. ಈ ಬಗ್ಗೆ ತೆಗೆದುಕೊಳ್ಳಲಾದ ರಹಸ್ಯ ಬ್ಯಾಲೆಟ್ಟಿನಲ್ಲಿ ಶೇ॥ ೮೧ ರಷ್ಟು ಜನರು ಮುಷ್ಕರ ಹೂಡಬೇಕೆಂದೂ ಶೇ॥ ೩೧ ಮಂದಿ ಅದರ ವಿರುದ್ಧವಾಗಿಯೂ ತಮ್ಮ ಅಭಿಮತ ಕೊಟ್ಟಿರುವರು. ೧೯೫೦ರ ಬೋನಸನ್ನು ಕೊಡಬೇಕು, ನಿವೃತ್ತಿ ಕಾಲಕ್ಕೆ ಗ್ರ್ಯಾಚುಯಿಟಿ ಸೌಲಭ್ಯ ಸಿಗಬೇಕು ಮತ್ತು ತುಟ್ಟಿಭತ್ಯ, ಕೂಲಿ ದರ ಇವುಗಳ ಪುನರ್ವಿಮರ್ಶೆಯಾಗಬೇಕು ಎಂಬ ಮುಖ್ಯ ಬೇಡಿಕೆಗಳನ್ನು ಕಾರ್ಮಿಕರ ಮಂಡಿಸಿರುವರು.

ಕಾಶ್ಮೀರ ಪ್ರಶ್ನೆ ಬಗ್ಗೆ ಇಂಡೋನೇಷ್ಯದಿಂದ ಮಧ್ಯಸ್ತಿಕೆ?

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರದ ಬಗ್ಗೆ ನಡೆಯುತ್ತಿರುವ ವ್ಯಾಜ್ಯವನ್ನು ಪರಿಹರಿಸಲು ಇಂಡೋನೇಷ್ಯವು ಅಪೇಕ್ಷಿಸುತ್ತಿರುವುದೆಂದು ವರದಿಯಾಗಿದೆ. ದಿಲ್ಲಿ, ಕರಾಚಿಯೂ ಮತ್ತು ಇತರ ಕೇಂದ್ರಗಳಲ್ಲಿರುವ ಇಂಡೋನೇಷ್ಯದ ರಾಯಭಾರಿಗಳು ಈ ವಿಷಯವನ್ನು ಕುರಿತು ಚರ್ಚೆ ನಡೆಸುತ್ತಿರುವರೆಂದು ಹೇಳಲಾಗಿದೆ.

ಬೆಂಕಿ ಅನಾಹುತದಲ್ಲಿ ೪ ಲಕ್ಷ ರೂ. ನೋಟುಗಳು ಭಸ್ಮ

ಪೂರ್ವ ಪಂಜಾಬಿನ ಕಾಂಗ್ರಾ ಕಣಿವೆಯ ಪಾಲಂಪೂರಿನಲ್ಲಿ ಕಳೆದ ಶುಕ್ರವಾರ ಭಾರಿ ಬೆಂಕಿಯುಂಟಾಗಿ ಹಲವಾರು ಲಕ್ಷ ರೂ. ಗಳ ನೋಟುಗಳು ಸುಟ್ಟುಹೋಗಿವೆ. ೧೫೦ ಸಂಸಾರಗಳು ನಿರಾಶ್ರಿತವಾಗಿವೆ.

ಆನೆ ಕೊಂಬುಗಳುಳ್ಳ ನಾಯಿ ಮರಿಗಳು

ಆಗ್ರದ ಬಳಿ ಬಾಸ್ತ್ರಾ ಎಂಬ ಒಂದು ಗ್ರಾಮದಲ್ಲಿ ಹೆಣ್ಣು ನಾಯಿಯೊಂದಕ್ಕೆ ಆನೆಗಿರುವಂತಹ ಕೊಂಬುಗಳುಳ್ಳ ಎರಡು ಮರಿಗಳು ಹುಟ್ಟಿವೆ. ಈ ವಿಚಿತ್ರ ಪ್ರಾಣಿಗಳ ಬಗ್ಗೆ ತಾಯಿಯು ತನ್ನ ಸ್ವಾಭಾವಿಕ ಪ್ರೇಮವನ್ನು ತೋರಿಸುತ್ತಾ, ಸಲಹುತ್ತಿರುವುದೆಂದು ಹೇಳಲಾಗಿದೆ.

ಬಟ್ಟೆ ಮೇಲೆ ತೆರಿಗೆ ಪರ ಕಡಿಮೆ

ಸಂಸ್ಥಾನದ ಮಿಲ್ ಮತ್ತು ವಿದ್ಯುಚ್ಛಕ್ತಿ ಮಗ್ಗಗಳ ಬಟ್ಟೆಗಳ ಮೇಲೆ ರೂಪಾಯಿಗೆ ೩ ಆಣೆಯಂತೆ ಒಂದೇ ಘಟ್ಟದಲ್ಲಿ ಮಾರಾಟ ತೆರಿಗೆ ವಿಧಿಸಲು ಸರ್ಕಾರದವರು ತಂದಿದ್ದ ಸಲಹೆಯನ್ನು ಶಾಸನ ಸಭಾ ಕಾಂಗ್ರೆಸ್ ಪಕ್ಷವು ಪರಿಶೀಲಿಸಿ, ಅತಿ ನಯವಾದ ಬಟ್ಟೆಗೆ ೧॥ ಆಣೆ, ನಯವಾದ ಬಟ್ಟೆಗೆ ೧ ಆಣೆ ಮತ್ತು ಸಾಮಾನ್ಯ ಬಟ್ಟೆಗೆ ೯ ಕಾಸು ಮತ್ತು ಒರಟು ಬಟ್ಟೆಗೆ ೬ ಕಾಸುಗಳಂತೆ ತೆರಿಗೆ ವಿಧಿಸಲು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಮಹಾರಾಣಿ ಕಾಲೇಜು ಕ್ರೀಡಾ ದಿನಾಚರಣೆ

ರಾಜಧಾನಿಯ ಮಹಾರಾಣಿ ಕಾಲೇಜಿನ ಕ್ರೀಡಾ ದಿನಾಚರಣೆಯು ಇದೇ ತಿಂಗಳ ೨೦ನೇ ಶನಿವಾರ ಸಂಜೆ ೪-೩೦ಕ್ಕೆ ಬೆಂಗಳೂರಿನ ಮಹಾರಾಣಿ ಕಾಲೇಜು ಹಾಸ್ಟೆಲಿನ ಆಟದ ಬಯಲಿನಲ್ಲಿ ನಡೆಯುವುದು.

ಬಿ. ಎಸ್. ಗೋಪಾಲರಾಯರ ಶಿಕ್ಷೆ ಖಾಯಂ

ಸ್ವಂ ಸು ಪ್ರೋ] ಬೆಂಗಳೂರು ೧೭

ಶ್ರೀಗಳಾದ ಕೆ. ಎಸ್. ರಾಜಯ್ಯ, ಕಲ್ಯಾಣಿ ಮತ್ತು ಹುಂಡ್ಯದ ಶ್ರೀ ಶಿವಪ್ಪನವರನ್ನು ಕೊಲೆಗೈದುದಕ್ಕಾಗಿ ಶ್ರೀ ಬಿ. ಎಸ್. ಗೋಪಾಲರಾಯರಿಗೆ ವಿಧಿಸಲಾಗಿದ್ದ ಜೀವಾವಧಿ ಶಿಕ್ಷೆಯ ವಿರುದ್ಧವಾಗಿ ಹೂಡಲಾಗಿದ್ದ ಅಪೀಲಿನಲ್ಲಿ ಈ ದಿನ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಬಿ. ವಾಸುದೇವಮೂರ್ತಿಯವರು ತೀರ್ಪಿತ್ತು, ಸೆಷನ್ಸ್ ಕೋರ್ಟಿನ ಶಿಕ್ಷೆಯನ್ನು ಖಾಯಂ ಮಾಡಿದರು. ಶಿಕ್ಷೆಗಳನ್ನು ಏಕ ಕಾಲದಲ್ಲಿ ಅನುಭವಿಸುವಂತೆ ಆಜ್ಞೆ ಮಾಡಲಾಗಿದೆ.

ಶಾಸನ ಸಭಾ ಕಾರ್ಯಕ್ರಮ

ಈ ದಿನ ಕಿರಿಯ ಶಾಸನಸಭೆಯಲ್ಲಿ ಶ್ರೀ ಎಸ್. ಶಿವಪ್ಪನವರ ಪ್ರಶ್ನೆಗೆ ಉತ್ತರವಾಗಿ ಮುಖ್ಯಮಂತ್ರಿಯವರು ಭಾಷಾವಾರು ಪ್ರಾಂತ ರಚನಾ ಸಮಿತಿಯ ಮುಂದೆ ಅಂಕಿ ಅಂಶಗಳನ್ನು ಸಂಸ್ಥಾನ ಸರ್ಕಾರದ ಪರವಾಗಿ ಇಡಲು ಸಮಿತಿಯೊಂದನ್ನು ನೇಮಿಸಲಾಗುವುದೆಂದು ಹೇಳಿದರು. ಹೊಸ ವರ್ಷದಲ್ಲಿ ೧೮ ಆಸ್ಪತ್ರೆಗಳನ್ನು ತೆರೆಯಲಾಗುವುದೆಂದೂ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಂಗವಾಗಿ ಹಳ್ಳಿಗಳಲ್ಲಿ ಹೊಸ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದೂ ತಿಳಿಸಲಾಯಿತು.

ಹಿರಿಯ ಶಾಸನ ಸಭೆಯಲ್ಲಿ ಶ್ರೀ ಜಿ. ಎಸ್. ರಾಮರಾಯರ ಪ್ರಶ್ನೆಗೆ ಉತ್ತರವಾಗಿ ಇತರ ಸಂಸ್ಥಾನಗಳಲ್ಲಿ ವೈದ್ಯ ಸೌಕರ್ಯಗಳನ್ನು ಸರ್ಕಾರಿ ನೌಕರರು ಮತ್ತು ಅವರ ಕುಟುಂಬದವರಿಗೆ ಒದಗಿಸಿರುವಂತೆ ಮೈಸೂರಿನಲ್ಲಿ ಕೊಡಲು ಸಾಧ್ಯವಿಲ್ಲವೆಂದೂ, ಅದಕ್ಕೆ ಹೆಚ್ಚು ವೆಚ್ಚವಾಗುವುದೆಂದೂ ತಿಳಿಸಲಾಯಿತು.

ಮಧ್ಯ ಪೂರ್ವದ ಕಮ್ಯೂನಿಸ್ಟರ ಪ್ರಧಾನ ಕೇಂದ್ರದ ಶೋಧನೆ

ಈಜಿಪ್ಟಿನ ಅಲೆಕ್ಸಾಂಡ್ರಾ ನಗರದಲ್ಲಿರುವ ಮಧ್ಯ ಪೂರ್ವ ಪ್ರದೇಶದಲ್ಲಿ ಕಮ್ಯೂನಿಸ್ಟರ ಚಟುವಟಿಕೆಗಳ ಪ್ರಧಾನ ಕೇಂದ್ರದ ಮೇಲೆ ಪೋಲೀಸರು ಕಳೆದ ಸೋಮವಾರ ಧಾಳಿ ನಡೆಸಿದರೆಂದು ವರದಿಯಾಗಿದೆ. ಗ್ರೀಕ್ ದೇಶದವರೆಂದು ಹೇಳಲಾದ ಏಳು ಜನ ಪುರುಷರು ಮತ್ತು ಇಬ್ಬರು ಸ್ತ್ರೀಯರು ಅಲ್ಲಿದ್ದುಕೊಂಡು ಈಜಿಪ್ಟಿನಲ್ಲಿರುವ ಗ್ರೀಕ್ ಜನರಲ್ಲಿ ಕಮ್ಯೂನಿಸ್ಟರ ಧ್ಯೇಯಗಳನ್ನು ಪ್ರಚುರಪಡಿಸುತ್ತಿದ್ದರೆಂದೂ, ಇದಲ್ಲದೆ ಪೂರ್ವ ರಾಷ್ಟ್ರಗಳಲ್ಲಿರುವ ಎಲ್ಲಾ ಕಮ್ಯೂನಿಸ್ಟರ ಚಟುವಟಿಕೆಗಳನ್ನೂ ಅವರು ಹತೋಟಿಯಲ್ಲಿಟ್ಟುಕೊಂಡಿದ್ದರೆಂದೂ ಹೇಳಲಾಗಿದೆ.

ತಿರುವಾಂಕೂರು-ಕೊಚ್ಚಿಯ ಹೊಸ ಮಂತ್ರಿಗಳು

ತಿರುವಾಂಕೂರು ಕೊಚ್ಚಿಯ ಮಂತ್ರಿಮಂಡಲಕ್ಕೆ ಮುಖ್ಯ ಮಂತ್ರಿ ತಾನು ಪಿಳ್ಳೆಯವರು ಪಿ. ಎಸ್. ನಟರಾಜ ಪಿಳ್ಳೆ, ಎ. ಅಚ್ಯುತನ್ ಮತ್ತು ಪಿ. ಕೆ. ಕುಂಜುರವರನ್ನು ಮಂತ್ರಿಗಳಾಗಿ ತೆಗೆದುಕೊಂಡಿರುವರು. ಅವರೆಲ್ಲರೂ ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರು.

○ ಬೆಂಗಳೂರು ನಗರದಲ್ಲಿರುವ ಸಿಟಿ ಬಸ್ಸು ಕಂಪೆನಿಯನ್ನು ಸರ್ಕಾರದವರೇ ವಹಿಸಿಕೊಳ್ಳುವ ವಿಷಯವು ಪರ್ಯಾಲೋಚನೆಯಲ್ಲಿ ಇರುವುದೆಂದು ತಿಳಿದುಬಂದಿದೆ.

ಆಂಧ್ರ ಅಧಿಕಾರಿಯಿಂದ ಸಂಸ್ಥಾನದಲ್ಲಿ ಅಕ್ರಮ ಪರಿಶೀಲನೆ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳಿಂದ ಖಂಡನೆ

ಬೆಂಗಳೂರು ೧೭

ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೊನ್ನೆ ಹೇಳಿಕೆಯೊಂದನ್ನಿತ್ತು, ಆಂಧ್ರದ ಹಲವು ಮಂತ್ರಿಗಳು ಮತ್ತು ಶಾಸನ ಸಭಾ ಸದಸ್ಯರು ಮೈಸೂರು ಸರ್ಕಾರಕ್ಕೆ ತಿಳುವಳಿಕೆ ಕೊಡದೆ ಸಂಸ್ಥಾನದಲ್ಲಿ ಹಲವು ಅಕ್ರಮ ಕಾರ್ಯಗಳನ್ನು ಮಾಡಿರುವರೆಂದೂ, ಅದಕ್ಕಾಗಿ ತಂವು ವಿಷಾದಪಡಬೇಕಾಗಿರುವುದೆಂದೂ ತಿಳಿಸಿದರು. ಆಂಧ್ರ ಸರ್ಕಾರಕ್ಕೆ ಬೇಕಾಗಿದ್ದರೆ, ಮೈಸೂರು ಸರ್ಕಾರದವರು ಯಾವ ವಿಷಯದ ಬಗ್ಗೆಯಾದರೂ ಅಂಕಿ ಅಂಶಗಳನ್ನು ಒದಗಿಸುತ್ತಿದ್ದುದಾಗಿಯೂ ಆಂಧ್ರ ಸರ್ಕಾರದವರು ಹಾಗೆ ಮಾಡದೆ ಒಬ್ಬ ಅಧಿಕಾರಿಯನ್ನು ಸಂಸ್ಥಾನಕ್ಕೆ ತನಿಖೆಗಾಗಿ ಕಳುಹಿಸಿದ್ದು ಅನುಚಿತವೆಂದೂ ಅವರು ನುಡಿದರು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಾವು ಎರಡು ಪತ್ರಗಳನ್ನು ಬರೆದಿರುವುದಾಗಿಯೂ ಶ್ರೀ ಹನುಮಂತಯ್ಯನವರು ಹೇಳಿದರು.

ಹೊರಗಿನ ಜನರು ಮೈಸೂರಿಗೆ ಸೇರುವುದನ್ನು ಇಲ್ಲಿನವರು ಸ್ವಾಗತಿಸುವರೆಂದೂ, ಆದರೆ ಕೇವಲ ಭಾಷಾ ದೃಷ್ಟಿಯಿಂದಲೇ ಮೈಸೂರು ಸರ್ಕಾರದವರು ಈ ರೀತಿಯ ಸೇರ್ಪಡೆಗೆ ಆಸ್ಪದನೀಯುತ್ತಿಲ್ಲವೆಂದೂ, ಆಂಧ್ರ ಸರ್ಕಾರದವರು ಭಾಷಾ ದೃಷ್ಟಿಯನ್ನೇ ಪ್ರಾಧಾನ್ಯವಾಗಿಟ್ಟುಕೊಂಡಿರುವರೆಂದೂ ತಾವು ವೈಯಕ್ತಿಕವಾಗಿಯೂ, ತಮ್ಮ ಗಿರಿಯ ಅಧಿಕಾರದ ಬಲದಿಂದಲೂ ಭಾಷಾವಾರು ಆಧಾರದ ಬಗ್ಗೆ ಪ್ರಾಂತ ರಚನೆಗೆ ವಿರೋಧವಿರುವುದಾಗಿಯೂ ಶ್ರೀ ಹನುಮಂತಯ್ಯನವರು ನುಡಿದರು.

ಒಂದು ಸರ್ಕಾರದವರು ಮತ್ತೊಂದು ಸರ್ಕಾರಕ್ಕೆ ತಿಳಿಸದೆ ತಮ್ಮ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿದರೆ ಅದು ಅಸೌಜನ್ಯತೆಯ ಪರಮಾವಧಿಯೆಂದು ಮುಖ್ಯ ಮಂತ್ರಿಗಳ ಅಭಿಪ್ರಾಯವಿತ್ತು. ಕೋಲಾರ ಜಿಲ್ಲೆಯಲ್ಲಿ ತೆಲುಗರಲ್ಲದೆ ಇತರರೂ ಇರುವರೆಂದೂ ಅಲ್ಲಿ ಪರಸ್ಪರ ಸೌಹಾರ್ದ ಮತ್ತು ಪ್ರೇಮವು ಬೆಳೆದುಬಂದಿರುವುದೆಂದೂ, ಮೈಸೂರು ಸಂಸ್ಥಾನದಲ್ಲಿ ಭಾಷಾವಾರು ಆಧಾರದ ಮೇಲೆ ಯಾರಿಗೂ ಪ್ರಾಶಸ್ತ್ಯಗಳೇ ಇಲ್ಲವೆಂದೂ ಹೇಳಿದರು.

ಹೋಟೇಲು ತೆರಿಗೆ ಇಳಿಸಲು ಒಪ್ಪಿಗೆ

ಹಿರಿಯ ಶಾಸನ ಸಭೆಯಲ್ಲಿ ಶ್ರೀ ಡಿ ವೆಂಕಟರಾಮಯ್ಯನವರು ಅರ್ಥವ್ಯಯ ವಿಷಯ ಪ್ರಸ್ತಾಪಿಸುತ್ತಾ ಮಾತನಾಡಿ ಹೋಟೇಲುಗಳ ಮೇಲೆ ವಿಧಿಸಿರುವ ಮಾರಾಟ ತೆರಿಗೆಯು ವಿಪರೀತವೆಂದು ಹೇಳಲು ಮುಖ್ಯಮಂತ್ರಿಗಳು ಸುತ್ತರವಿತ್ತು ಎಷ್ಟರ ಮಟ್ಟಿಗೆ ತೆರಿಗೆ ಕಡಿಮೆಮಾಡಬೇಕೆಂದು ಸದಸ್ಯರನ್ನು ಕೇಳಲು ಶೇಕಡ ೩ರಿಂದ ೨ಕ್ಕೆ ಇಳಿಸಬೇಕೆಂದು ಸದಸ್ಯರು ಹೇಳಿದಾಗ, ಶ್ರೀ ಹನುಮಂತಯ್ಯನವರು ಸಭೆಯ ಕಡೆಯ ಅವರ ಸಲಹೆಯನ್ನು ತಾವು ಒಪ್ಪುವುದಾಗಿ ತಿಳಿಸಿದರು.

ವಿದ್ಯಾ ಮಂತ್ರಿಗಳು ಮಾತನಾಡಿ ಸಂಸ್ಕೃತ ಮತ್ತು ಸಾಹಿತ್ಯ ಪ್ರಚಾರದ ಯೋಜನೆಯ ವಿವರ ಮತ್ತು ಕಾರ್ಯಕ್ರಮವನ್ನು ಸರ್ಕಾರದವರು ತಯಾರಿಸುತ್ತಿರುವುದಾಗಿ ತಿಳಿಸಿದರು.

ಸಂಸ್ಥಾನಕ್ಕೆ ೧೦ ಸಾವಿರ ಟನ್ ಕೆಂಪು ಜೋಳ

ಮೈಸೂರು ಸರ್ಕಾರದ ಕೋರಿಕೆಯಂತೆ ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ೧೦ ಸಾವಿರ ಟನ್ ಕೆಂಪು ಜೋಳವನ್ನು ಈ ವರ್ಷದಲ್ಲಿ ಒದಗಿಸಲಿರುವರು.

ಭದ್ರಾವತಿ ಕಬ್ಬಿಣದ ಕಾರ್ಖಾನೆ ಮಾಜಿ ನೌಕರನ ಉಪವಾಸ

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಮಾಜಿ ನೌಕರರಾದ ಮಸ್ತಾನ್ ಎಂಬುವರು ಕಳೆದ ಶನಿವಾರದಿಂದ ಆಮರಣಾಂತ ಉಪವಾಸ ಕೈಗೊಂಡಿರುತ್ತಾರೆ. ಅವರು ಈಗಾಗಲೇ ಎರಡು ಬಾರಿ ಉಪವಾಸ ಮುಷ್ಕರ ಹೂಡಿದ್ದರು. ತಮ್ಮ ಮೇಲೆ ಕಳ್ಳತನದ ದೂರು ಬಂದು ತಮ್ಮನ್ನು ಕೆಲಸದಿಂದ ತೆಗೆದುಹಾಕಿದ ಬಗ್ಗೆ ತನಿಖೆ ನಡೆಯುವಂತೆ ಅವರು ಕೋರಿ ಉಪವಾಸ ಕೈಗೊಂಡರು.

ಬಸ್ ಅಪಘಾತದಲ್ಲಿ ಇಬ್ಬರು ಮಹಿಳಾ ಯಾತ್ರಿಕರ ಮರಣ

ಹಾಸನದಿಂದ ಧರ್ಮಸ್ಥಳಕ್ಕೆ ಯಾತ್ರೆ ಹೋಗಿದ್ದ ೩೫ ಜನರ ಪ್ರಯಾಣ ಮಾಡುತ್ತಿದ್ದ ಬಸ್ಸು ಮಂಗಳೂರಿಗೆ ೬ ಮೈಲಿ ದೂರದಲ್ಲಿ ೩೦ ಅಡಿ ಕೆಳಗೆ ಹೊಲಕ್ಕೆ ಮಗುಚಿಕೊಂಡುದರಿಂದ ಆ ಹೊತ್ತಿಗೆ ಒಳಗಾಗಿ ಇಬ್ಬರು ಮಹಿಳೆಯರು ಮಡಿದಿರುತ್ತಾರೆ. ಇನ್ನಿಬ್ಬರು ಮಹಿಳೆಯರು ಉತ್ಕಟಾವಸ್ಥೆಯಲ್ಲಿ ಮಂಗಳೂರು ಆಸ್ಪತ್ರೆಯಲ್ಲಿರುತ್ತಾರೆ. ಇತರರಿಗೂ ಗಾಯವಾಗಿ ಅವರು ಉಪಚರಿಸಿಕೊಳ್ಳುತ್ತಿರುವರು.

ಪಾಕ್ ಜಲಸಂಧಿಯನ್ನು ಈಜಿ ದಾಟುವ ಸಾಹಸ

ಭಾರತ ಮತ್ತು ಸಿಂಹಳಗಳ ನಡುವೆ ೩೦ ಮೈಲಿ ಅಂತರದ ಸಮುದ್ರವನ್ನು ೮೮ ಗಂಟೆಗಳಲ್ಲಿ ಈಜಿ ದಾಟಲು ಸಿಂಹಳದ ೪೪ ವರ್ಷದ ಉರುಗಾಪಿಳ್ಳೆ ನವರತ್ನಸ್ವಾಮಿ ಯವರು ಆಲೋಚಿಸಿರುತ್ತಾರೆ. ಇವರು ಈ ಸಾಹಸದಲ್ಲಿ ಗೆದ್ದರೆ ಪ್ರಪಂಚದ ರೆಕಾರ್ಡನ್ನು ಸ್ಥಾಪಿಸಿದಂತಾಗುತ್ತದೆ. ಪಾಕ್ ಜಲಸಂಧಿಯು ಇಂಗ್ಲಿಷ್ ಕಡಲ್ ಗಾಲುವೆಯ ಡೋವರ್ ಜಲಸಂಧಿಗಿಂತ ೧೨ ಮೈಲಿ ಹೆಚ್ಚಾಗಿದೆ. ಅವರು ಈಜುತ್ತಾ ಭಾರತಕ್ಕೆ ಹೊರಟಿರುತ್ತಾರೆ. ಅವರೊಡನೆ ಪೋಲೀಸು ಮತ್ತು ಸುಂಕದ ಅಧಿಕಾರಿಗಳೂ ಪತ್ರಿಕೋದ್ಯಮಿಗಳೂ ಒಂದು ದೋಣಿಯಲ್ಲಿ ಹೊರಟಿರುವರು.

ದೇವರ ನಾಮ ಮತ್ತು ಸಣ್ಣ ಕತೆಗಳ ಸ್ಪರ್ಧೆ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಭಾರತೀ ಶ್ರೀ ಸಮಾಜದವರು ಇದೇ ತಿಂಗಳು ೩೧ ಭಾನುವಾರ ಮಧ್ಯಾಹ್ನ ೩ ಗಂಟೆಗೆ ದೇವರನಾಮ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ೮ರಿಂದ ೧೪ ವರ್ಷದೊಳಗಿರುವವರು ಅವರ ಪೋಷಕರ ಮೂಲಕ ಸಮಾಜದ ಕಾರ್ಯದರ್ಶಿಯವರಿಗೆ ಹೆಸರು ಕೊಡಬಹುದು. ಪ್ರವೇಶಧನವಿಲ್ಲ. ಪ್ರವೇಶಧನ ನಾಲ್ಕು ಆಣೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಬೆಳ್ಳಿ ಬಟ್ಟಲುಗಳನ್ನು ಬಹುಮಾನವಾಗಿ ಕೊಡಲಾಗುವುದು. ಇದಲ್ಲದೆ ಸಣ್ಣ ಕತೆಗಳ ಸ್ಪರ್ಧೆ ಯನ್ನೂ ಸಹ ಏರ್ಪಡಿಸಲಾಗಿದೆ. ಒಂದೇ ಕಡೆಯಲ್ಲಿ ಬರೆದು ಹೆಸರು ವಿಳಾಸ ಮುಂತಾದ ವಿವರಗಳೊಡನೆ ಇದೇ ೨೫ನೇ ತಾ|| ಸೋಮವಾರದೊಳಗೆ ಸಮಾಜದ ಗೌರವ ಕಾರ್ಯದರ್ಶಿಯವರಿಗೆ ಕಳುಹಿಸಬೇಕು. ಸ್ವತಂತ್ರ ಕತೆಗಳಾಗಲಿ ಅನುವಾದ ಕತೆಗಳಾಗಲಿ ಆಗಬಹುದು. ಸ್ವತಂತ್ರ ಕತೆಗಳಿಗೆ ಹೆಚ್ಚು ಮನ್ನಣೆ ಇರುವುದು. ಪ್ರವೇಶಧನ ೪ ಆಣೆ.

ಹಿಂದಿ ತರಗತಿಗಳು

ಬರುವ ಆಗಸ್ಟ್ ತಿಂಗಳಿನ ಹಿಂದಿ ಪರೀಕ್ಷೆಗಳಿಗಾಗಿ ಮೊದಲಿನ ಹೊಸ ತರಗತಿಗಳು ರಾಜಧಾನಿಯ ಒಂಟಿಕೊಪ್ಪಲು ಭಾರತೀ ಶ್ರೀ ಸಮಾಜದಲ್ಲಿ ಆರಂಭವಾಗಿವೆ. ೨೦ ವರ್ಷಗಳಿಂದಲೂ ಮಹಿಳೆಯರಿಗಾಗಿ ನಡೆಸುತ್ತಾ ಬಂದಿರುವ ಈ ಸಂಸ್ಥೆಯ ಆ ಪ್ರದೇಶಕ್ಕೆಲ್ಲಾ ಪ್ರಥಮ ಸಂಸ್ಥೆಯಾಗಿದೆ.

ಕೊಟ್ಟಿದ ಅಕ್ಕಿ ತಯಾರಿಕೆ ಶಿಕ್ಷಣ

ಮೈಸೂರಿನ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ ಎಲ್ ಸೂರ್ಯನಾರಾಯಣರಾಯರು ಬೊಂಬಾಯಿ ಸಂಸ್ಥಾನದ ಸೂರತ್ ಜಿಲ್ಲೆಯ ನವಸಾರ್ ನಗರದಲ್ಲಿ ಏರ್ಪಡಿಸಲಾಗಿರುವ ಕೊಟ್ಟಿದ ಅಕ್ಕಿ ತಯಾರಿಸುವ ನೂತನ ವಿಧಾನದ ಶಿಕ್ಷಣ ಪಡೆಯಲು ಅಲ್ಲಿಗೆ ತೆರಳಿರುತ್ತಾರೆ. ಅವರನ್ನು ಸಂಸ್ಥಾನದ ಗ್ರಾಮೋದ್ಯೋಗಗಳ ಸಮಿತಿ ಉಪಾಧ್ಯಕ್ಷರಾದ ಶ್ರೀ ಎಂ ಹೆಚ್ ಷಾರವರು ಚುನಾಯಿಸಿ ಕಳುಹಿಸಿದುವರು. ಇತರ ಪ್ರಾಂತಗಳಿಂದಲೂ ಹಲವಾರು ಮಂದಿ ಶಿಕ್ಷಣಕ್ಕಾಗಿ ಅಲ್ಲಿಗೆ ಹೋಗಿರುವರು.

ಕೃತಕ ಗರ್ಭಾದಾನದ ಬಗ್ಗೆ ಪ್ರಾಣಿಗಳಿಗೂ ಮನುಷ್ಯರಿಗೂ ವ್ಯತ್ಯಾಸ

ಪ್ರಜೋತ್ಪತ್ತಿಯ ವಿಷಯದಲ್ಲಿ ಪ್ರಾಣಿಗಳ ಪಂಚಕಕ್ಕೂ ಮಾನವ ವರ್ಗಕ್ಕೂ ಅಜಗಜಾಂತರ ವ್ಯತ್ಯಾಸವಿರುವುದಾಗಿಯೂ ಅವುಗಳಿಗೆ ಹೋಲಿಕೆ ಇರುವುದಿಲ್ಲವೆಂದೂ ರಾಜಾಜಿಯವರು ತಿಳಿಸಿರುತ್ತಾರೆ. ಪ್ರಾಣಿಗಳನ್ನು ಮನುಷ್ಯನ ತನ್ನ ದಾಸ್ಯ ವೃತ್ತಿಗೆ ಅಳವಡಿಸಿಕೊಂಡು ಅದರಿಂದ ಕೆಲಸ ತೆಗೆದುಕೊಳ್ಳುತ್ತಿರುವುದರಿಂದ ಗೂಳಿಗಳ ಬೀಜವನ್ನು ಒಡೆದು ಹದಮಾಡಲಾಗುತ್ತಿರುವುದೆಂದೂ ಅವರು ಹೇಳಿರುತ್ತಾರೆ. ಹೋರಿಗಳು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಕೃತಕ ಗರ್ಭಾದಾನ ಮಾಡಿಸಬೇಕಾಗಿರುವುದೆಂದೂ ಇದಲ್ಲದೆ ಬೇರೆ ವಿಧಾನವಿಲ್ಲವೆಂದೂ ಪಶುಸಂವೃದ್ಧಿ ಖಾತಾ ಮಂತ್ರಿ ಶ್ರೀ ಪಿ ಸಿ ಪಳನಿಸ್ವಾಮಿ ಗೌಂಡರರು ತಿಳಿಸಿರುತ್ತಾರೆ. ಕೊಳ್ಳೇಗಾಲದಲ್ಲಿ ಕೃತಕ ಗರ್ಭಾದಾನದ ಕೇಂದ್ರವನ್ನು ಏರ್ಪಡಿಸಲು ಆಲೋಚಿಸಲಾಗುತ್ತಿರುವುದೆಂದು ಅವರು ನುಡಿದರು.

ವಿವಾಹ ಮಹೋತ್ಸವ

ರಾಜಧಾನಿಯಲ್ಲಿರುವ ನಿವೃತ್ತ ಎಕ್ಸಿಕ್ಯೂಟಿವ್ ಇಂಜನಿಯರರಾದ ಶ್ರೀ ಟಿ ರಾಮರಾಯರು ತಮ್ಮ ದ್ವಿತೀಯ ಕುಮಾರ ಚಿ|| ರಾ|| ಟಿ ಶ್ರೀನಿವಾಸಮೂರ್ತಿಯವರಿಗೆ ಚಿಕ್ಕಮಗಳೂರಿನ ವಕೀಲರಾದ ಶ್ರೀ ಟಿ ಸೀತಾರಾಮಯ್ಯನವರ ಮಗಳು ಸೌ|| ಪದ್ಮಾವತಿಯನ್ನು ತಂದುಕೊಂಡು ನೆನ್ನೆ ಚಾಮರಾಜಪುರದಲ್ಲಿರುವ ತಮ್ಮ ಮನೆಯಲ್ಲಿ ವಿವಾಹವನ್ನು ನೆರವೇರಿಸಿದರು.

ರಾಜಧಾನಿಯ ಮಾಡರ್ನ್ ಪಬ್ಲಿಕ್ ಲೈಬ್ರರಿ ಹೋಟೆಲ್ ಮಾರ್ಕೆಟ್ ಅಂಗಡಿ ಮಾಲೀಕರಾದ ಶ್ರೀ ಎನ್ ಕೃಷ್ಣಯ್ಯಂಗಾರ್ಯರು ತಮ್ಮ ಕುಮಾರಿ ಸೌ|| ವೇದವನ್ನು ಹಾಸನದ ಶ್ರೀ ಬಿ ಕೇಶವಯ್ಯಂಗಾರ್ಯರ ಮಗ ಶ್ರೀ ವೆಂಕಟರಾಮಯ್ಯಂಗಾರ್ಯರಿಗೆ ಕೊಟ್ಟು ತಮ್ಮ ಮನೆಯಲ್ಲಿ ವಿವಾಹವನ್ನು ಜರುಗಿಸಿದರು.

ಪ್ರಸನ್ನ ನಂಜುಂಡೇಶ್ವರಸ್ವಾಮಿ ರಥೋತ್ಸವ

ರಾಜಧಾನಿಯ ಸಂತೆಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ರಥೋತ್ಸವವು ನಾಳೆ ಬೆಳಿಗ್ಗೆ ನಡೆಯುವುದು.

ರಣಹದ್ದಿನಿಂದ ವಿಮಾನಕ್ಕೆ ಜಖಂ

ಬಿಹಾರಿನಿಂದ ಕಲ್ಕತ್ತದ ಡಂಡಂ ವಿಮಾನಾಲಯಕ್ಕೆ ಕಳೆದ ಭಾನುವಾರ ಹೊರಟ ಖಾಸಗೀ ಡಕೋಟಾ ವಿಮಾನವೊಂದರ ಇಂಜನ್ನಿಗೆ ಒಂದು ರಣಹದ್ದು ಬಡಿದು ಅದನ್ನು ಜಖಂಗೊಳಿಸಿತೆಂದೂ, ಮತ್ತೊಂದು ಇಂಜನ್ನಿನ ಸಹಾಯದಿಂದ ವಿಮಾನವು ತೂರಾಡುತ್ತಾ, ವಿಮಾನಾಲಯವನ್ನು ಸುರಕ್ಷಿತವಾಗಿ ಸೇರಿತೆಂದೂ ವರದಿಯಾಗಿದೆ. ರಣಹದ್ದು ಬಡಿದ ನಂತರ ವಿಮಾನವು ವಿಮಾನಾಲಯಕ್ಕೆ ಅಪಾಯದ ಸುದ್ದಿಯನ್ನು ವೈರ್ಲೆಸ್ ಮೂಲಕ ತಿಳಿಸಿದ್ದಿತು.

ಹಯಗ್ರೀವ ವಿದ್ಯಾರ್ಥಿ ಮಂದಿರದ ವಾರ್ಷಿಕೋತ್ಸವ

ರಾಜಧಾನಿಯ ವೈಸರಾಯ್ ರಸ್ತೆಯಲ್ಲಿರುವ ಹಯಗ್ರೀವ ವಿದ್ಯಾರ್ಥಿ ಮಂದಿರದಲ್ಲಿ ನಿಲಯದ ವಿದ್ಯಾರ್ಥಿಗಳು ಸಂಘದ ವಾರ್ಷಿಕೋತ್ಸವವನ್ನು ಮೊನ್ನೆ ವಿಜೃಂಭಣೆಯಿಂದ ನೆರವೇರಿಸಿದರು. ಡಾ|| ಎಸ್ ಶ್ರೀಕಂಠಶಾಸ್ತ್ರಿಯವರು ಹಯಗ್ರೀವಸ್ವಾಮಿಯ ಮೂರ್ತಿ ಸ್ವರೂಪದ ಸಂಕೇತಾರ್ಥವನ್ನು ಕುರಿತು ಭಾಷಣ ಮಾಡಿದರು. ಶ್ರೀಗಳಾದ ಎಂ ಯಾಮುನಾಚಾರ್ಯರವರು ಮತ್ತು ಪಿ ಕೆ ಶ್ರೀನಿವಾಸನ್‌ರವರು ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡಿದರು. ಶ್ರೀಗಳಾದ ನಂಜುಂಡಸ್ವಾಮಿ ಕೃಷ್ಣಮೂರ್ತಿ, ರಾವ ಚಂದ್ರಾಚಾರ್ ಇವರುಗಳಿಂದ ಸೊಗಸಾದ ಸಂಗೀತ ಕಛೇರಿ ಜರುಗಿತು. ಸರಸ್ವತಿ ಮಂಗಳಾರತಿಯಿಂದ ಸಭೆಯ ಕಾರ್ಯಕಲಾಪ ಮುಗಿಯಿತು.

ಸಂಗೀತ ಮತ್ತು ದೇವರನಾಮ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿ ಶ್ರೀ ವ್ಯಾಸರಾಯಸ್ವಾಮಿಗಳವರ ಮಠದ ಎದುರಿನಲ್ಲಿರುವ ಶ್ರೀ ತ್ಯಾಗರಾಜ ಸಂಗೀತ ಪಾಠಶಾಲೆಯ ಆರನೇ ಮಹಿಳಾ ಶಾಖೆಯಲ್ಲಿ ಪ್ರತಿ ಶುಕ್ರವಾರ ಸಂಜೆ ೭ ಗಂಟೆಗೆ ವಿದ್ವಾಂಸರುಗಳಿಂದ ಸಂಗೀತ ಮತ್ತು ದೇವರನಾಮ ಕೀರ್ತನೆಗಳು ನಡೆಯುವುವು. ಸರ್ವರೂ ದಯಮಾಡಿಸುವಂತೆ ಕೋರಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಮಂಗಳವಾದ್ಯ ೭-೩೦ ರೆಕಾರ್ಡು ಮಧ್ಯಾಹ್ನ ೧-೪೦ ಮತ್ತು ೧-೫೦ ಸಂಗೀತ ೨ ವನಿತಾ ವಿಹಾರ: ಶಾಮ ದೇವನ ಬಗ್ಗೆ ಕಥನ, ಶಾಮ ದಹನ-ಸಂಭಾಷಣೆ, ಕಾಮನ ಕಥೆ, ಇತ್ಯಾದಿ ಸಂಜೆ ೫-೪೦ ಟಿ ಆರ್ ಚಂದ್ರಶೇಖರರ ಕೊಳಲು ೬ ಹಿಂದಿ ಪಾಠ ೬ ೧೫ ಕನ್ನಡ ಗೀತೆಗಳು ೭ ೫ ಮತ್ತು ೮-೪೦ ವೇದವ್ಯಾಸ ಶಿಂಗ್ರಾಚಾರ್ ಸಂಗೀತ ೭-೪೦ ಕನ್ನಡ ಜನಪದ ಗೀತೆ ೮ ಎಂ ವಿ ವರಹಾಸ್ವಾಮಿ ಗೋಟುವಾದ್ಯ ೯-೧೫ ರೆಕಾರ್ಡು ಭಜನೆ ೯-೪೦ ಹರಿಕಥೆ

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	[illegible]
ಹೊಂಗೇಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅಲಸಂದೆ	[illegible]	
ಧನಿಯ	[illegible]	
ತೊಗರಿ	[illegible]	[illegible]
ಕಡಲೆ	[illegible]	[illegible]
ಹುಣಸೇಬೀಜ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

ಪ್ರಭಾ — 19-3-54 ರಿಂದ ಅಮೋಘ ಪ್ರಾರಂಭ — ಪ್ರತಿದಿನ 3 ಆಟಗಳು

ಪಹಿಲ್, ಸಮಾಧಿ ಚಿತ್ರಗಳನ್ನು ನಿರ್ದೇಶಿಸಿರುವ ಶ್ರೀ ರಮೇಶ್ ಸೈಗಾಲ್ ರವರ ಹಿಂದಿ ಚಿತ್ರ

ಶಿಕಸ್ತ್

ತಾರೆ: ನಳಿನಿ ಜಯವಂತ್, ದಿಲೀಪ್‌ಕುಮಾರ್, ಕೆ ಎನ್ ಸಿಂಗ್, ದುರ್ಗಾಖೋಟೆ, ಓಂ ಪ್ರಕಾಶ್

ಸಂಗೀತ — ಶಂಕರ್ ಜೈಕಿಷನ್

ಬೆಳಗಿನ ಪ್ರದರ್ಶನ 19-3-54 ರಿಂದ ಪ್ರತಿ ಭಾನುವಾರ ದಿನಗಳು

ದೇವಾನಂದ್ ಕಲ್ಪನಾ ಕಾರ್ತಿಕ್ ನಟಿಸಿರುವ ನವಕೇತನರ ಆಂಧಿಯಾನ್

ಪ್ರಭುದೇವಾ ಥಿಯೇಟರ್ (ಸದ್ಯಾ ಟಾಕೀಸ್)

19-3-54 ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ

★ ನಿರುಪೇದಲು ★

(ಕಡು ಬಡವರು) — ಪ್ರತಿದಿನ 3 ಆಟಗಳು — (ತೆಲುಗು ಚಿತ್ರ)

ತಾರೆ: ... ಗೀಸ್ವರಿ ... ಜಮುನ ... ಲಕ್ಷ್ಮಿ ... ರ ...

SRI GANESHA TALKIES

From 19-3-54 Daily 3 Shows

Columbia Pictures Present

THE AFFAIRS OF MESSALINA

Featuring — Maria Felix and Georges Marchall

(The History of a Woman Unmatched in Evil)

Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ 792

ಶಿವಂ ಸುಂದರಂ ||

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಮುಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದು ನೋಡಿ
M. V. ಭೋಜಯ್ಯ
ಬಿ ಎ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೦೨] MYSORE FRIDAY 19-3-1954 :: ಮೈಸೂರು : ಶುಕ್ರವಾರ ೧೯-೩-೧೯೫೪ [ಸಂಚಿಕೆ ೨೦೭

ಪಾಕಿಸ್ತಾನ್ ರಾಜ್ಯಾಂಗ ಸಭೆಯ ವಿಸರ್ಜನೆಗೆ ಹಕ್ಕರ ಕರೆ

ಇತಿಹಾಸ ಸಂಘವು ಮೈಸೂರಿನ ಮೇಲ್ಮೆಗಾಗಿ ದುಡಿಯಬೇಕು

ವಜ್ರೋತ್ಸವದಲ್ಲಿ ಮಾಜಿ ಮಂತ್ರಿ ಮಹಮೂದ್ ಷರೀಫರ ಭಾಷಣ

ಮೈಸೂರು ೧೯

ಮಹಾರಾಜಾ ಕಾಲೇಜು ಇತಿಹಾಸ ಸಂಘದ ವಜ್ರ ಮಹೋತ್ಸವದ ಅಂಗವಾಗಿ ನೆನ್ನೆ ಬೆಳಿಗ್ಗೆ ಸದಸ್ಯರಿಂದ ಕ್ರೀಡಾ ಸ್ಪರ್ಧೆಗಳು ನಡೆದುವು ಉತ್ಸವಕ್ಕೆ ಸಂಬಂಧಿಸಿದಂತೆ ವಸ್ತು ಪ್ರದರ್ಶನವೊಂದನ್ನು ಉಪ ಪ್ರಾಧ್ಯಾಪಕ ಡಾ|| ಬಿ ಎಲ್ ಮಂಜುನಾಥರವರು ಮಧ್ಯಾಹ್ನ ಆರಂಭಗೊಳಿಸಿದರು ಅದರಲ್ಲಿ ಪ್ರಾಚ್ಯ ಸಂಶೋಧನೆಯಲ್ಲಿ ದೊರೆತ ವಸ್ತುಗಳು ಇಡಲ್ಪಟ್ಟಿದ್ದುವು ಅನಂತರ ಕ್ರಾಫರ್ಡ್ ಭವನದಲ್ಲಿ ಸಂತೋಷ ಕೂಟವು ಏರ್ಪಾಡಾಗಿತ್ತು

ಸಂಜೆ ಮಹಾರಾಜಾ ಕಾಲೇಜಿನ ಒಳ ಅಂಗಳದಲ್ಲಿ ಮಾಜಿ ಮಂತ್ರಿ ಮಹಮೂದ್ ಷರೀಫ್ ರವರ ಅಧ್ಯಕ್ಷತೆಯಲ್ಲಿ ಸಮಾರಂಭವು ಜರುಗಿತು ಪ್ರಾರ್ಥನೆಯಾದನಂತರ ಶ್ರೀ ಹೆಚ್ ಕೃಷ್ಣರಾಯರು ಸ್ವಾಗತ ಭಾಷಣ ಮಾಡಿದರು ಅನ್ಯವಾಚನವಾದ ಮೇಲೆ ವಿ|| ದೊರೆಸ್ವಾಮಿ ಅಯ್ಯಂಗಾರ್ಯರಿಂದ ವೀಣಾ ವಾದನವು ಜರುಗಿತು ಶ್ರೀಗಳಾದ ಕೆ ರಾಮರಾಜಯ್ಯಂಗಾರ್ ಮತ್ತು ಎಸ್ ಶ್ರೀನಿವಾಸಮೂರ್ತಿಗಳವರು ದ ಕಾಲೇಜಿನ ಹಳೆಯ ಸಂಗತಿಗಳ ನೆನಪುಗಳನ್ನು ತಂದುಕೊಟ್ಟರು

ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿನಿಯೋಗ ಮಾಡಿದನಂತರ ಅಧ್ಯಕ್ಷರು ಭಾಷಣ ಮಾಡಿ ಕಳೆದ ೬೦ ವರ್ಷಗಳಿಂದಲೂ ಇತಿಹಾಸ ಸಂಘವು ಸತತವಾಗಿ ಐತಿಹಾಸಿಕ ಘಟನೆಗಳ ಬಗ್ಗೆ ನಡೆಸಿದ ಕಾರ್ಯವನ್ನು ಪ್ರಶಂಸಿಸಿದರು ಸ್ವಾತಂತ್ರ್ಯದ ಕಾಲವಾದ ಇಂದು ಈ ಸಂಘವು ಮೈಸೂರಿನ ಮೇಲ್ಮೆಗೆ ಪ್ರಯತ್ನ ಮಾಡಿ ದೇಶೋನ್ನತಿಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸಬೇಕೆಂದು ನುಡಿದರು

ಚರಿತ್ರೆಯೆಂದರೆ ಐತಿಹಾಸಿಕ ಘಟನೆಗಳ ಸಾಮಾನ್ಯ ಪಟ್ಟಿಯೆಂದು ಜನರು ಭಾವಿಸಿದಂತಿದೆ ಅದು ತಪ್ಪು ಅಭಿಪ್ರಾಯ ಇತಿಹಾಸವು ಒಳ್ಳೆಯದನ್ನು ಹೇಗೋ ಹಾಗೆ ಕೆಟ್ಟದ್ದನ್ನೂ ಸಹ ತಿಳಿಸುವುದು ಎಷ್ಟೋ ರಾಜ್ಯಗಳ ಮತ್ತು ವ್ಯಕ್ತಿಗಳ ಉನ್ನತಿಯನ್ನೂ ನಾಶವನ್ನೂ ಮತ್ತು ಎಷ್ಟೋ ಭಾವಗಳ ಮತ್ತು ಅಭಿಪ್ರಾಯಗಳ ಬೆಳವಣಿಗೆಗಳನ್ನೂ ಅದು ತೋರಿಸಿದೆ ಆದುದರಿಂದ ಹಿಂದೆ ನಡೆದ ವಿಷಯಗಳಿಂದ ಇಂದಿನ ಮತ್ತು ಮುಂದಿನ ಜನರಿಗೆ ಅದು ಮಾರ್ಗದರ್ಶನ ನೀಡುವ ಸಾಧನವಾಗಿರುತ್ತದೆ ಜನರು ಚರಿತ್ರೆಯಲ್ಲಿ ಅಡಗಿರುವ ನೀತಿ ಮತ್ತು ತತ್ವಗಳನ್ನು ಸರಿಯಾಗಿ ಅರಿತು ಪ್ರಯೋಜನ ಹೊಂದುವುದು ಅತ್ಯವಶ್ಯಕ—ಎಂಬುದಾಗಿ ಅಧ್ಯಕ್ಷರು ಹೇಳಿದರು

ಭರತ ನಾಟ್ಯ ಮತ್ತು ನಾಟಕಾಭಿನಯಗಳಾದನಂತರ ಶ್ರೀಮತಿ ಪಿ ಎ ಕಾವೇರಿಯಮ್ಮನವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

○ ಉತ್ತರ ಪ್ರದೇಶ ಶಾಸನ ಸಭೆಯಲ್ಲಿ ರಾಮಕೃಷ್ಣ ಜಯಸ್ವಾಲ್ ಎಂಬ ಸದಸ್ಯರೊಬ್ಬರು ನಿಮಿಷಕ್ಕೆ ೨೦೦ ಪದಗಳಂತೆ ಭಾಷಣ ಮಾಡಿದರೆಂದು ಹೇಳಲಾಗಿದೆ

ಆಂಧ್ರ ಪ್ರಾಥಮಿಕ ವಿದ್ಯಾಭ್ಯಾಸ ಸಲಹಾ ಸಮಿತಿ ಅಧ್ಯಕ್ಷರು

ಡಾ|| ಕುಪ್ಪುಸ್ವಾಮಿಯವರ ನೇಮಕ

ಮೈಸೂರು ೧೯

ಆಂಧ್ರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಸುಧಾರಣೆ ಸಂಬಂಧವಾಗಿ ಸಲಹೆ ಕೊಡಲು ಸಮಿತಿಯೊಂದನ್ನು ಅಲ್ಲಿನ ಸರ್ಕಾರದವರು ಏರ್ಪಡಿಸಲಿರುವರಷ್ಟೆ ಅದರ ಅಧ್ಯಕ್ಷರಾಗಿ ಮೈಸೂರು ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಪ್ರಾಧ್ಯಾಪಕರಾದ ಡಾ|| ಬಿ ಕುಪ್ಪುಸ್ವಾಮಿಯವರನ್ನು ನೇಮಿಸಲಾಗಿದೆ ಅವರು ಏಪ್ರಿಲ್ ೧ ನೇ ತಾ|| ನಿಂದ ಹೊಸ ಅಧಿಕಾರವನ್ನು ವಹಿಸಿಕೊಳ್ಳುವರು ಇದಕ್ಕೆ ಮುಂಚೆ ಆ ಹುದ್ದೆಗೆ ಮೈಸೂರು ಸಂಸ್ಥಾನದಿಂದ ಮೂವರನ್ನು ಆಹ್ವಾನಿಸಿ ಅವರ್ಯಾರೂ ನಿರಾಕರಿಸಿದ್ದರೆಂದು ಹೇಳಲಾಗಿದೆ

ಮಾವಿನಕೆರೆ ಬೆಟ್ಟದ ಬಳಿ ಬಂಡೆ ಕೆಳಗೆ ಈಶ್ವರ ವಿಗ್ರಹ

ಅಲ್ಲಿ ದೊರೆತ ತಂಬಿಗೆಯಿಂದ ನೀರು ತುಂಬಲು ಹೋದ ಬಾಲಕಿಗೆ ಮೂರ್ಛೆ

ಹೊಳೇನರಸೀಪುರಕ್ಕೆ ಎಂಟು ಮೈಲಿ ದೂರವಿರುವ ಮಾವಿನಕೆರೆ ಬೆಟ್ಟದ ಉತ್ತರ ಭಾಗದಲ್ಲಿ ಬಂಡೆಯೊಂದರ ಕೆಳಗೆ ಬೆಳ್ಳಿಯ ಈಶ್ವರ ವಿಗ್ರಹ, ಅದರ ಎರಡು ಪಕ್ಕಗಳಲ್ಲೂ ಲಿಂಗಾಕಾರದ ಎರಡು ವಿಗ್ರಹಗಳು, ಅಂದವಾದ ಚಿತ್ರಗಳಿಂದೊಡಗೂಡಿದ ಎರಡು ಧೂಪಾರತಿಗಳು, ಒಂದು ಪ್ರಸೂನ ಉದ್ಧರಣೆ, ತ್ರಿಶೂಲ ಮತ್ತು ತಾಮ್ರದ ತಂಬಿಗೆಯೊಂದು ದೊರೆತಿವೆ ಕಲ್ಲು ಹೊಡೆಯಲು ಹೋದ ಒಡ್ಡರು ಬಂಡೆಯನ್ನು ಉರುಳಿಸಲು ಕೆಳಗಡೆ ಈ ಅಪೂರ್ವ ವಸ್ತುಗಳನ್ನು ಅವರು ಕಂಡರೆಂದು ಹೇಳಲಾಗಿದೆ ಕೆಲಸಗಾರರು ತಂಬಿಗೆಯನ್ನು ತೆಗೆದು ಹರಿಜನ ಬಾಲಕಿಯೊಬ್ಬಳಿಗೆ ಕೊಟ್ಟು ಅದರಲ್ಲಿ ನೀರು ತರುವಂತೆ ಹೇಳಲು ಆಕೆಯು ಹತ್ತಿರದ ಕೆರೆಯಲ್ಲಿ ನೀರನ್ನು ತುಂಬಿ ಎತ್ತಿದಾಗ ಅದು ಬರಬರುತ್ತಾ ಭಾರವಾಗಿ, ಆಕೆಯು ನೀರಿನೊಳಗೆ ಎಳೆಯುವಂತೆ ಭಾಸವಾಯಿತೆಂದೂ, ಹುಡುಗಿಯು ತಂಬಿಗೆಯನ್ನು ಬಿಟ್ಟುಬಿಟ್ಟಳೆಂದೂ, ಅನಂತರ 'ಸಾಧು' ಎಂದು ಕೂಗುತ್ತಾ ರಕ್ತ ಕಾರಿ ಪ್ರಜ್ಞೆ ತಪ್ಪಿದಳೆಂದೂ ವರದಿಯಾಗಿದೆ ಆಕೆಯನ್ನು ಊರಿಗೆ ಕರೆದೊಯ್ದು ಉಪಚರಿಸಿದರೂ ಅದೇ ರೀತಿ ಕೂಗುತ್ತಾ ಇದ್ದಳೆಂದೂ ಹೇಳಲಾಗಿದೆ ಈಗ ಆಕೆಯು ಆರೋಗ್ಯವಾಗಿರುತ್ತಾಳೆ

ಊರಿನ ಜನರು ವಿಗ್ರಹಕ್ಕೆ ಪೂಜೆ ಸಲ್ಲಿಸುತ್ತಿರುವರೆಂದು ಗೊತ್ತಾಗಿದೆ

ಮೈಸೂರು ಮತ್ತು ಕೊಡಗುಗಳ ನಡುವೆ ರೈಲು ರಸ್ತೆ

ಹುಣಸೂರು ಮೂಲಕ ಕೊಡಗಿಗೆ ರೈಲು ರಸ್ತೆಯನ್ನು ಹಾಕಿಸಲು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡುವಂತೆ ಕಳೆದ ಆಯವ್ಯಯ ಅಧಿವೇಶನದಲ್ಲಿ ಆದ ನಿರ್ಣಯದ ಪ್ರಕಾರ ಕೇಂದ್ರ ಸರ್ಕಾರದವರಿಗೆ ತಿಳಿಸಲಾಗಿದೆಯೆಂದು ರೈಲ್ವೆ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿ, ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ಈ ವಿಷಯವನ್ನು ಸೇರಿಸಲು ಪ್ರಯತ್ನಿಸಲಾಗುವುದೆಂದು ಹೇಳಿರುತ್ತಾರೆ

ಸಂಸ್ಥಾನದಲ್ಲಿ ಅಕ್ಕಿ ದರ ಇಳಿಯುವುದೇ ?

ಬೆಂಗಳೂರು ೧೯

ಈ ಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಕೆ ಆರ್ ಶೇಷಾಚಾರ್ಯರು ಕೊಟ್ಟ ಲಿಖಿತ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ಸಂಸ್ಥಾನದಲ್ಲಿ ಅಕ್ಕಿಯ ದರವನ್ನಿಳಿಸುವ ಸಲಹೆಯನ್ನು ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ತಿಳಿಸಿದರು ಈ ವರ್ಷ ಅಕ್ಕಿಯ ವಿಷಯವಾಗಿ ಸಂಸ್ಥಾನವು ಸ್ವಾವಲಂಬಿಯಾಗಿರುವುದೆಂದೂ, ಇತರ ಧಾನ್ಯಗಳ ಪರಿಸ್ಥಿತಿಯೂ ತೃಪ್ತಿಕರವಾಗಿರುವುದೆಂದೂ ಅವರು ಹೇಳಿದರು ಧಾನ್ಯ ಶೇಖರಣೆ ಮಾಡಿದಾಗ ಕಡಿಮೆ ಬೆಲೆಗೆ ಕೊಂಡುದರಿಂದ ಅದನ್ನು ಮಾರುವಾಗಲೂ ಕಡಿಮೆ ದರದಲ್ಲಿ ಕೊಡುವ ವಿಷಯವನ್ನು ಪರಿಶೀಲಿಸಲಾಗುತ್ತಿರುವುದೆಂದು ಅವರು ತಿಳಿಸಿದರು

○ ಹೊಸ ವರ್ಷದಲ್ಲಿ ಮೈಸೂರು-ನೀಲಗಿರಿ, ಬೆಂಗಳೂರು ಬಳ್ಳಾರಿ, ಚಿತ್ರದುರ್ಗ ಬಳ್ಳಾರಿ, ತುಮಕೂರು – ಪಾವಗಡ ಬಳ್ಳಾರಿ ತಿರುಪತಿ ಮತ್ತು ಬೆಂಗಳೂರು ಮದನಪಲ್ಲಿಗಳಿಗೆ ಸರ್ಕಾರಿ ಬಸ್ಸುಗಳನ್ನು ಬಿಡಲು ಆಲೋಚಿಸಲಾಗಿದೆಯೆಂದು ಗೃಹ ಮಂತ್ರಿಗಳು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ

ಪೂರ್ವ ಬಂಗಾಳದಲ್ಲಿ ಲೀಗಿನ ಪೂರ್ಣ ಪರಾಜಯ

ಪೂರ್ವ ಬಂಗಾಳಾ ಚುನಾವಣೆಯಲ್ಲಿ, ಅಧಿಕಾರವಹಿಸಿರುವ ಮುಸ್ಲಿಂ ಲೀಗಿಗೆ ಅತ್ಯಂತ ಭಾರಿ ಸೋಲುಂಟಾಗಿದೆ ಪ್ರಕಟವಾದ ೧೬೭ ಫಲಿತಾಂಶಗಳಲ್ಲಿ ಲೀಗಿನವರಿಗೆ ೪ ಸ್ಥಾನಗಳು ಮಾತ್ರ ಬಂದಿವೆ ಸಂಯುಕ್ತ ಪಕ್ಷದವರು ೧೧೯ ಸ್ಥಾನಗಳಿಗೆ ಆರಿಸಲ್ಪಟ್ಟಿರುತ್ತಾರೆ ಲೀಗಿನವರ ಕಡೆ ೨೦ ಉಮೇದುವಾರರು ಠೇವಣಿ ಕಳೆದುಕೊಂಡಿರುತ್ತಾರೆ ಒಟ್ಟು ೧೧೧ ಜನ ಸ್ಪರ್ಧಿಗಳ ಠೇವಣಿ ಹೋಗಿದೆ ಮತ್ತೊಬ್ಬ ಸಚಿವರೂ ಪರಾಜಿತರಾಗಿ, ಇದುವರೆಗೆ ಐದು ಮಂತ್ರಿಗಳು ಸೋತಿರುವರು ಒಬ್ಬ ಸಚಿವರಾದರೂ ಜಯಗಳಿಸಿಲ್ಲ ಇಡೀ ಪಾಕಿಸ್ತಾನದ ಪ್ರಜಾ ಸಂಖ್ಯೆಯಲ್ಲಿ ಪೂರ್ವ ಬಂಗಾಳದಲ್ಲೇ ಅಧಿಕ ಸಂಖ್ಯೆಯಿರುವುದರಿಂದ, ಈಗಿನ ಚುನಾವಣಾ ಫಲಿತಾಂಶದಿಂದ ದೇಶದ ಮೇಲೆ ತೀವ್ರ ಪರಿಣಾಮವುಂಟಾಗುವುದೆಂದೂ, ಅಲ್ಲಿನ ರಾಜ್ಯಾಂಗ ಸಭೆಗೆ ಪ್ರಾಯಶಃ ವಿರೋಧ ಪಕ್ಷದ ನಾಯಕರಾಗುವ ಫಜಲುಲ್ ಹಕ್‌ರವರು ರಾಜ್ಯಾಂಗ ಸಭೆಯನ್ನು ವಿಸರ್ಜಿಸಲು, ಈಗಾಗಲೇ ಸೂಚಿಸಿ, ಹೊಸ್ತು ಪ್ರಜಾ ಪ್ರಾತಿನಿಧ್ಯವುಳ್ಳ ಹೊಸ ರಾಜ್ಯಾಂಗ ಸಭೆಯು ರಚಿಸಲ್ಪಡಬೇಕೆಂದು ಹೇಳುವರೆಂದೂ ಗೊತ್ತಾಗಿದೆ.

● ಸಹಸ್ರ ಚಂಡೀ ಯಾಗದ ಪೂರ್ಣಾಹುತಿ

ಚಾಮುಂಡಿ ಬೆಟ್ಟದಲ್ಲಿ ಕಳೆದ ೧೩ನೇ ತಾ|| ನಿಂದ ನಡೆಯುತ್ತಿರುವ ಶ್ರೀ ಸಹಸ್ರ ಚಂಡೀ ಯಾಗದ ಪೂರ್ಣಾಹುತಿಯು ನೆನ್ನೆ ಮಧ್ಯಾಹ್ನ ನೆರವೇರಿತು ಶ್ರೀ ಮನ್ಮಹಾರಾಜರು, ಮಹಾರಾಣಿಯವರು ಮತ್ತು ರಾಜಕುಮಾರಿ ಕುಮಾರಿಯರು ಮತ್ತು ಕವೇಂಡರ್ ಮಹಾರಾಣಿಯವರು ಅದಿಗೆ ತೆರಳಿದ್ದರು ಸಹಸ್ರಾರು ಜನರಿಗೆ ಅನ್ನ ಸಂತರ್ಪಣೆಯು ನಡೆಯಿತು

ಕುಂಡವಾಳು ಮರಿಯಪ್ಪನವರ ಮೇಲಿನ ಮೊಕದ್ದಮೆ

ಪುನಃ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ವರ್ಗ

ಬೆಂಗಳೂರು ೧೯

ಹಿರಿಯೂರು ಪಟ್ಟಣದ ಶಾಸನ ಸಭಾ ಸದಸ್ಯ ಶ್ರೀ ಕುಂಡವಾಳು ಮರಿಯಪ್ಪ ಮತ್ತು ಇತರೆ ೭ ಜನರ ಮೇಲೆ ಮೈಸೂರು ನಗರದ ನ್ಯಾಯಾಧೀಶರ ಮುಂದೆ ನಡೆಯುತ್ತಿದ್ದ ಮೊಕದ್ದಮೆಯನ್ನು ಪುನಃ ರಾಜಧಾನಿಯ ಮುನ್ಸಿಫ್ ಮ್ಯಾಜಿಸ್ಟ್ರೇಟರ ಮುಂದೆ ಮೈಸೂರಿನಲ್ಲಿ ವಿಚಾರಣೆಯಾಗುವಂತೆ ನೆನ್ನೆ ಹೈಕೋರ್ಟ್ ನ್ಯಾಯಾಧೀಶ ಶ್ರೀ ಪಿ ಮೇದಪ್ಪ ಮತ್ತು ಶ್ರೀ ಎಸ್ ಬಾಲಕೃಷ್ಣಯ್ಯನವರು ಆಜ್ಞೆ ಮಾಡಿದರು

ಅಪಾದಿತರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿ, ತಮ್ಮ ಮೊಕದ್ದಮೆಯನ್ನು ಹುಣಸೂರು ಕೋರ್ಟಿನಿಂದ ಬೇರೊಂದು ಕೋರ್ಟಿಗೆ, ಜಿಲ್ಲಾ ಮ್ಯಾಜಿಸ್ಟ್ರೇಟರು ವರ್ಗ ಮಾಡಿರುವುದನ್ನು ವಜಾ ಮಾಡಬೇಕೆಂದು ಕೋರಿದ್ದರು ವರ್ಗ ಮಾಡಲು ಜಿಲ್ಲಾ ಮ್ಯಾಜಿಸ್ಟ್ರೇಟರು ಕೊಟ್ಟಿರುವ ಕಾರಣವು ಅಸಮಂಜಸವೂ ಮತ್ತು ನ್ಯಾಯ ಸಮ್ಮತವಲ್ಲದ್ದೆಂದೂ, ಅವರ ಅಭಿಪ್ರಾಯಕ್ಕೆ ಯಾವ ಮನ್ನಣೆಯನ್ನೂ ಕೊಡಲು ಸಾಧ್ಯವಿಲ್ಲವೆಂದೂ ಹೈಕೋರ್ಟಿನವರು ತಿಳಿಸಿದ್ದಾರೆ. ಹುಣಸೂರು ನ್ಯಾಯಾಧೀಶರ ಪಕ್ಷಪಾತದ ಬಗ್ಗೆ ಕೊಡಲಾಗಿರುವ ಅಭಿಪ್ರಾಯವು ಸರಿಯಲ್ಲದುದೂ ಆಧಾರ ರಹಿತವೂ ಮತ್ತು ಉದಾತ್ತವಲ್ಲದುದೂ ಆಗಿರುವುದೆಂದು ನ್ಯಾಯಾಧೀಶರು ತಿಳಿಸಿದರು

೧೯೫೦ ರಿಂದ ೫೨ರ ವರೆಗೆ ಅಪಾದಿತರು ೧೭,೩೦೦ ರೂ ಅಷ್ಟು ಸರ್ಕಾರಿ ಮರಮುಟ್ಟುಗಳನ್ನು ಕದ್ದು ಸಾಗಿಸಿದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ

ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಪ್ರಾಸಿಕ್ಯೂಷನ್ನಿನವರು ಅರ್ಜಿ ಕೊಟ್ಟು, ಅಪಾದಿತ ಶ್ರೀ ಮರಿಯಪ್ಪನವರಿಗೂ ಶ್ರೀ ಎಸ್ ಚೆನ್ನಯ್ಯನವರಿಗೂ ಸಂಬಂಧವಿದೆಯೆಂದೂ, ಹಾಗೆಯೇ ಇತರರಿಗೂ ಅವರಲ್ಲಿ ಆಸಕ್ತಿ ಇದೆಯೆಂದೂ ತಿಳಿಸಿದ್ದರು ಅಪಾದಿತರು ತಮ್ಮ ಅರ್ಜಿಯಲ್ಲಿ ತಮ್ಮ ಮೇಲೆ ರಾಜಕೀಯ ಕಾರಣಕ್ಕಾಗಿ ಕ್ರಮ ಜರುಗಿಸಲಾಗುತ್ತಿದೆಯೆಂದೂ ತಿಳಿಸಿದ್ದರು

ಹಾಸನದ ಯಂತ್ರ ಸಾಮಗ್ರಿ ಕಾರ್ಖಾನೆಗೆ ಹೆಚ್ಚು ಬಂಡವಾಳ

ಸ್ವಂ ಸು. ಪ್ರೋ(ಃ) ಬೆಂಗಳೂರು ೧೯

ಈ ದಿನ ಶಾಸನ ಸಭೆಯಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಹಾಸನದ ಯಂತ್ರ ಸಾಮಗ್ರಿಗಳ ಕಾರ್ಖಾನೆಯಲ್ಲಿ ಕೆಲಸವು ಇನ್ನೂ ಚೆನ್ನಾಗಿ ನಡೆಯಲು ೫ ಲಕ್ಷ ರೂ ಹೆಚ್ಚು ಬಂಡವಾಳವನ್ನು ಹಾಕಲಾಗುವುದೆಂದು ತಿಳಿಸಿದರು

ಥರ್ಮೋಮ್ಯಾಂಗನೀಸ್ ಕಾರ್ಖಾನೆ ಸ್ಥಾಪಿಸುವ ಸಂಬಂಧದಲ್ಲಿ ದೇಶದಲ್ಲಿ ದೊರೆಯುವ ಮ್ಯಾಂಗನೀಸ್ ಸಾಮಗ್ರಿಗಳನ್ನು ಕುರಿತು ಪರೀಕ್ಷಿಸಲು ಸಮಿತಿಯೊಂದನ್ನು ನೇಮಿಸಲಾಗುವುದೆಂದು ಅವರು ಹೇಳಿದರು

ಆಂಧ್ರದ ಅಧಿಕಾರಿ ನಡವಳಿಕೆ ಗುಟ್ಟಿನದಲ್ಲ

ಮುಖ್ಯಮಂತ್ರಿಯವರಿಗೆ ಆಂಧ್ರ ಸಚಿವರ ಉತ್ತರ

ಬೆಂಗಳೂರು ೧೭

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಶಾಸನ ಸಭೆಯಲ್ಲಿ ಹೇಳಿಕೆಯೊಂದನ್ನಿತ್ತು ಕೋಲಾರ ಜಿಲ್ಲೆಯಲ್ಲಿ ಆಂಧ್ರದ ಅಧಿಕಾರಿಯೊಬ್ಬರು ನಡೆಸಿದ ಕೆಲಸವನ್ನು ಖಂಡಿಸಿದುದಕ್ಕೆ ಆಂಧ್ರದ ಮಂತ್ರಿ ಓ ಶಿವಸ್ವಾಮಿರೆಡ್ಡಿಯವರು ಉತ್ತರವಿತ್ತು ಅಧಿಕಾರಿಯು ಗುಟ್ಟಿನಲ್ಲಿ ಕೆಲಸ ನಡೆಸುವಂತೆ ತಿಳಿಸಿಲ್ಲವೆಂದು ಹೇಳುತ್ತಾರೆ. ಅವರ ನೇಮಕವು ಸಾರ್ವಜನಿಕರಿಗೆ ಗೊತ್ತಿದ್ದಿತೆಂದೂ, ಆಂಧ್ರದ ಗಡಿ ಬಳಿ ಪ್ರದೇಶಗಳಿಗೆ ಹೋಗಿ ಅಲ್ಲಿನ ನಿಜಸ್ಥಿತಿಯನ್ನು ತಿಳಿದು ವರದಿ ಮಾಡುವಂತೆ ಸೂಚಿಸಲಾಗಿದ್ದಿತೆಂದೂ ಅವರು ಹೇಳುತ್ತಾರೆ. ಮದ್ರಾಸನ್ನು ವಿಭಜಿಸಿದಾಗ ಬಳ್ಳಾರಿಯನ್ನು ತಾತ್ಕಾಲಿಕವಾಗಿ ಮದ್ರಾಸಿನಲ್ಲಾಗಲಿ, ಆಂಧ್ರದಲ್ಲಾಗಲಿ ಸೇರಿಸಬಾರದಾಗಿದ್ದಿತೆಂದೂ ಆಗ ಮೈಸೂರು ಮತ್ತು ಆಂಧ್ರದ ತಿಕ್ಕಾಟವಿರುತ್ತಿರಲಿಲ್ಲವೆಂದೂ ಅಭಿಪ್ರಾಯಪಡುತ್ತಾರೆ. ನೆರೆಯ ಸರ್ಕಾರಗಳೊಡನೆ ಸೌಹಾರ್ದದಿಂದ ಇರಲು ಆಂಧ್ರವು ಇಚ್ಛಿಸುತ್ತಿರುವುದೆಂದೂ, ಒಂದೇ ರಾಷ್ಟ್ರಕ್ಕೆ ಸೇರಿದವರು ಒಂದರಿಂದ ಮತ್ತೊಂದು ಸಂಸ್ಥಾನಕ್ಕೆ ಹೋಗಲು ಅವಕಾಶವಿಲ್ಲವೆಂದು ಹೇಳುವುದನ್ನು ಯಾರೂ ನಂಬುವುದಿಲ್ಲವೆಂದೂ ತಮ್ಮ ಅಭಿಪ್ರಾಯಪಟ್ಟು ರಾಜಕಾರಣಿಗಳು ರಾಷ್ಟ್ರೀಯವನ್ನು ಮರೆತು ಅಹಂಕಾರವನ್ನು ಪ್ರದರ್ಶಿಸಿ ಅಭಿವೃದ್ಧಿಗೊಳಿಸುವುದರಲ್ಲಿ ತೊಡಗಬೇಕೆಂದು ತಿಳಿಸಿದರು. ಅವರು ಇಲ್ಲಿಗೆ ಖಾಸಗಿ ಕೆಲಸಕ್ಕಾಗಿ ಬಂದಿರುವರು.

ಡಿ ಎಸ್ ಕೃಷ್ಣಯ್ಯ ಶೆಟ್ಟರ ಆಮರಣಾಂತ ಉಪವಾಸ

ಬೆಂಗಳೂರು ಅರಮನೆ ರಸ್ತೆಯಲ್ಲಿ ಸೆಂಟ್ರಲ್ ಟೆ ಭವನದ ಪಕ್ಕದಲ್ಲಿ ಡಿ ಎಸ್ ಕೃಷ್ಣಯ್ಯಶೆಟ್ಟರು ಮತ್ತು ಸ್ನೇಹಿತರ ಸಹಾಯದಿಂದ ಕಟ್ಟಿಸಿದ ಶ್ರೀ ಮುನೇಶ್ವರ ದೇವಾಲಯ, ಅದಕ್ಕೆ ಸೇರಿದ ಅರ್ಚಕರ ಮನೆ ಇವೆ. ವಿಚಾರಣೆ ಇಲ್ಲದೆ ಬಲಾತ್ಕಾರ ಪೋಲೀಸರು ಇತರ ಸಿಬ್ಬಂದಿಯೊಡನೆ ಅರ್ಚಕರ ಮನೆಯನ್ನು ನೆಲಸಮ ಮಾಡಿದರು. ಅಧಿಕಾರಿಗಳ ಈ ವರ್ತನೆಯನ್ನು ಖಂಡಿಸಿ ಶ್ರೀ ಕೃಷ್ಣಯ್ಯಶೆಟ್ಟರು ಮೊನ್ನೆಯಿಂದ ಆಮರಣಾಂತ ಉಪವಾಸ ಕೈಗೊಂಡಿದ್ದಾರೆ.

೨೦ ಮೈಲಿ ಸಮುದ್ರವನ್ನು ಈಜಿ ವಾಪಸು

ಭಾರತ ಮತ್ತು ಸಿಂಹಳಗಳ ನಡುವಣ ಪಾಕ್ ಜಲಸಂಧಿಯನ್ನು ಈಜಿ ದಾಟುವ ಸಾಹಸ ಕಾರ್ಯದಲ್ಲಿ ತೊಡಗಿದ್ದ ಮಿಹಿರಸೇನ್ ನವರು ಸ್ವಾಮಿಯವರು ೨೦ ಮೈಲಿಯ ಸಮುದ್ರವನ್ನು ೨೩॥ ಗಂಟೆಗಳಲ್ಲಿ ಈಜಿ, ಮುಂದೆ ಈಜಲು ಪ್ರತಿಕೂಲವಾದುದರಿಂದ ಹಿಂತಿರುಗಿದರು.

ಪೋರ್ಚುಗಲ್ಲಿಗೆ ಭಾರತದ ಪ್ರತಿಭಟನೆ

ಗೋವಾಗಳಲ್ಲಿ ಜನರ ಸ್ವಾತಂತ್ರ್ಯವನ್ನು ಕ್ರೂರವಾಗಿ ದಂಡಿಸುತ್ತಾ ಬರುತ್ತಿರುವುದರ ಬಗ್ಗೆ ಭಾರತ ಸರ್ಕಾರದವರು ಆತಂಕವನ್ನು ಸೂಚಿಸಿ ಅಲ್ಲಿನ ಪ್ರಮುಖ ವೈದ್ಯರಾದ ಡಾ॥ ಗೈತೊಂಡೆಯವರನ್ನು ದಸ್ತಗಿರಿ ಮಾಡಿರುವ ಬಗ್ಗೆ ಪೋರ್ಚುಗಲ್ಲಿಗೆ ಪ್ರತಿಭಟನೆ ಸೂಚಿಸಿರುತ್ತಾರೆ. ಗೈತೊಂಡೆಯವರನ್ನು ವಿಚಾರಣೆಗಾಗಿ ಪೋರ್ಚುಗಲ್ಲಿಗೆ ಕಳುಹಲಾಗಿದೆ. ಗೋವಾದಲ್ಲಿ ನಡೆಯುತ್ತಿರುವ ದಬ್ಬಾಳಿಕೆಯನ್ನು ನೋಡುತ್ತಾ ಭಾರತ ಸರ್ಕಾರದವರು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲವೆಂದೂ ಇಂತಹ ಕ್ರೂರತನದಿಂದ ಭಾರತದಲ್ಲಿ ಪ್ರತಿಕ್ರಿಯೆಗಳಾಗುತ್ತಿರುವುದಾಗಿಯೂ ತಿಳಿಸಲಾಗಿದೆ.

ಫ್ರೆಂಚರಿಂದ ೩ ಸಾವಿರ ವೀಟ್ಮಿನ್ ಸೈನಿಕರ ಸಂಹಾರ

ಇಂಡೋಚೀಣದ ಡಿರ್ಪೀಫು ಪ್ರದೇಶದಲ್ಲಿ ನಡೆದ ೨೦ರ ಸಮಯದಲ್ಲಿ ವೀಟ್ಮಿನ್ನರ ಕಡೆ ೩ ಸಾವಿರ ಸೈನಿಕರನ್ನು ಫ್ರೆಂಚರು ಕೊಂದಿರುವರೆಂದು ವರದಿಯಾಗಿದೆ. ರಣಕ್ಷೇತ್ರದಲ್ಲಿ ಸಹಸ್ರಾರು ಹೆಣಗಳು ಬಿದ್ದಿದ್ದರೂ ಲಕ್ಷಿಸದೆ ವಿಟ್ಮಿನ್ನರು ಹೋರಾಡುತ್ತಿದ್ದಾಗ ಸೇನಾ ತುಕಡಿಗಳನ್ನು ಸಾಗಿಸುತ್ತಿರುವ ಅವರ ಕಡೆ ೩೦-೪೦ ಸಾವಿರ ಯೋಧರು ಈ ಕಾಳಗದಲ್ಲಿ ಭಾಗವಹಿಸುತ್ತಿರುವ ವಿಟ್ಮಿನ್ನರ ಫಿರಂಗಿಗಳು ಫ್ರೆಂಚರ ಕೋಟೆಯ ಪ್ರದೇಶದ ಮೇಲೆ ಪ್ರಕಾರವಾಗಿ ಗುಂಡು ಹಾರಿಸುತ್ತಿವೆ. ಫ್ರೆಂಚರಿಗೆ ಕದನವು ಅಳಿವು ಉಳಿವಿನ ಹೋರಾಟವಾಗಿದೆ ಎಂದು ಹೇಳಲಾಗಿದೆ.

ಸಣ್ಣ ಕಾನೂನುಗಳ ಬಗ್ಗೆ ಪ್ರಶ್ನೋತ್ತರ

ಸಕಲೇಶಪುರದಲ್ಲಿ ಶ್ರೀ ಎಸ್ ಅನಂತಾಚಾರರವರು ರಚಿಸಿರುವ ಕ್ವೆಶ್ಚನ್ಸ್ ಅಂಡ್ ಆನ್ಸರ್ಸ್ ಆನ್ ಮೈನರ್ ಆಕ್ಟ್ಸ್ ಎಂಬ ಶಿರೋನಾಮೆಯ ಗ್ರಂಥದ ಪ್ರತಿಯೊಂದನ್ನು ನಾವು ಸ್ವೀಕರಿಸಿರುತ್ತೇವೆ. ರೆವಿನ್ಯೂ ಇಲಾಖೆಯ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಅನುಕೂಲಿಸುವಂತಹ ಪ್ರಶ್ನೋತ್ತರಗಳು ಅದರಲ್ಲಿ ಕೊಡಲ್ಪಟ್ಟಿವೆ. ೧೯೪೫ ರಿಂದ ೧೯೫೩ ರ ನವೆಂಬರ್ ವರೆಗೆ ಇದ್ದ ಪರೀಕ್ಷೆಗಳ ಪ್ರಶ್ನೆ ಮತ್ತು ಉತ್ತರಗಳನ್ನು ಇದರಲ್ಲಿ ಕೊಡಲಾಗಿದೆ. ಪುಸ್ತಕವನ್ನು ಮುದ್ರಿಸಿರುವ ಸಕಲೇಶಪುರದ ಶ್ರೀ ಕೃಷ್ಣಾ ಪವರ್ ಪ್ರೆಸ್ಸಿನ ಮಾಲೀಕರಾದ ಶ್ರೀ ಎಸ್ ಚಲುವರಾಯರ್‌ರವರಲ್ಲಿ ಇವು ದೊರೆಯುವುವು. ಬೆಲೆ ೧ ೪ ೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಿಟಿಲೋ ೭-೨೦ ಎಸ್ ಬಿ ಕೀರ್ತನಮೂರ್ತಿ, ಸೇವರ ನಾದ ಮಧ್ಯಾಹ್ನ ೧-೪೦ ಮತ್ತು ೧ ೫೦ ರಾಜದುರ್ಗದ ಎ ಬಾಲ ಆಗಸ ಸಂಜೆ ೫-೪೦ ಎಸ್ ಬಿ ಕೇಶವಮೂರ್ತಿ ಸಂಗೀತ ೬ ಹಿಂದಿ ವಾರ್ತೆ ೬ ೧೫ ಕನ್ನಡ ಗೀತೆ ೭-೫ ಮುತ್ತು ೮-೧೫ ನಾಗಸ್ವರ ೮-೩೫ ಬೈಬಲ್ಲಿನ ಸಂದೇಶ ಕನ್ನಡದಲ್ಲಿ ಭಾಷಣ ೯ ಕಥೆ ೯ ಕಾಮನ್ನ ಶೀರ್ಷಿಕೆ ವಧೆ ಪರಿಕಥೆ ೯-೪೦ ರಾಷ್ಟ್ರೀಯ ಕಾರ್ಯಕ್ರಮ

ಡಿಪ್ಪೋಗಳಲ್ಲಿ ೧ ವಾರಕ್ಕಾಗುವ ಜೋಳ ಮಾತ್ರ ಇದೆ

ಮೈಸೂರು ೧೯

ರಾಜಧಾನಿಯ ಡಿಪ್ಪೋಗಳಲ್ಲಿ ೧ ವಾರಕ್ಕೆ ಆಗುವಷ್ಟು ಮಾತ್ರ ಜೋಳವಿರುವುದೆಂದೂ, ದಾಸ್ತಾನ ತೀರಿದನಂತರ ಜೋಳವು ದೊರೆಯುವುದಿಲ್ಲವೆಂದೂ ರಾಜಧಾನಿಯ ರೇಷನಿಂಗ್ ಅಧಿಕಾರಿಗಳು ತಿಳಿಸಿರುತ್ತಾರೆ. ಗೋಧಿಯ ದಾಸ್ತಾನೂ ತೀರಿರುವುದರಿಂದ ಅದೂ ಸಹ ಸಿಗುವುದಿಲ್ಲವೆಂದೂ ಅವರು ಹೇಳಿರುವರು. ಅವುಗಳನ್ನು ಬಹಿರಂಗ ಮಾರುಕಟ್ಟೆಯಲ್ಲಿ ಸಾರ್ವಜನಿಕರು ಕೊಳ್ಳುವಂತೆ ಕೋರಿರುತ್ತಾರೆ.

ಉದಾರ ಸಹಾಯ

ರಾಜಧಾನಿಯಲ್ಲಿರುವ ಕಣಿಯರ ಸೇವಾ ಸಮಾಜದ ಶಾಖೆಯವರು ಕಟ್ಟಿಸುತ್ತಿರುವ ಶ್ರೀ ವೆಂಕಟೇಶ ಭಜನ ಮಂದಿರ ಮತ್ತು ಉಚಿತ ವಾಚನಾಲಯಕ್ಕಾಗಿ, ಅಶೋಕಾ ರಸ್ತೆಯ ೩೩ನೇ ಕ್ರಾಸ್ ರಸ್ತೆಯಲ್ಲಿ ಎವಿ ಶ್ರೀ ಬಿ. ನಂಜಪ್ಪಮಾರ್‌ರವರು ೧೫೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ.

ವಿಧಾನ ಸೌಧಕ್ಕೆ ಶಾಸನ ಸಭಾ ಸದಸ್ಯರ ಭೇಟಿ

೫೦ ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ವಿಧಾನ ಸೌಧ ಕಟ್ಟಡದ ಕಾರ್ಯವನ್ನು ಮೊನ್ನೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯ ಮತ್ತು ಹಿರಿಯ ಶಾಸನ ಸಭಾಧ್ಯಕ್ಷ ಶ್ರೀ ಕೆ ಟಿ. ಭಾಷ್ಯಂರೊಡನೆ ಶಾಸನ ಸಭಾ ಸದಸ್ಯರು ಪರಿಶೀಲಿಸಿದರು. ಅವರಿಗೆ ಕಟ್ಟಡದ ಸೂಪರಿಂಟೆಂಡಿಂಗ್ ಇಂಜನಿಯರರು ಅಧ್ಯಕ್ಷನವಿತ್ತರು. ೧೧೦೦ ಜನ ಕಲ್ಲು ಕೆಲಸಗಾರರ ಸಹಿತವಾಗಿ ೧ ವಷ ಅಲ್ಲಿ ಕೆಲಸ ಮಾಡುವರು.

ಬಳ್ಳಾರಿ ಹತ್ತಿ ಕಾರ್ಖಾನೆಗೆ ಬೆಂಕಿ

ಬಳ್ಳಾರಿಯ ಹತ್ತಿ ಕಾರ್ಖಾನೆಯೊಂದಕ್ಕೆ ಬೆಂಕಿ ಬಿದ್ದು ೩ ಲಕ್ಷ ರೂ ನಷ್ಟವಾಗಿದೆ. ೩೫೦ ಬೇಲುಗಳಷ್ಟು ಹತ್ತಿಯು ಸುಟ್ಟಿದೆ.

ಮೈಸೂರು ಮತ್ತು ಬೆಂಗಳೂರು ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಕಾರ್ಯ

ಮೈಸೂರು, ಬೆಂಗಳೂರು ಮತ್ತು ಮಾರಿಕುಪ್ಪ ರೈಲ್ವೆ ಸ್ಟೇಷನ್ನುಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕೆಂದು ಹುಬ್ಬಳ್ಳಿಯಲ್ಲಿ ಸೇರಿದ್ದ ಪ್ರಾದೇಶಿಕ ರೈಲ್ವೆ ಉಪಯೋಗದ ಸಲಹಾ ಸಮಿತಿಯಲ್ಲಿ ನಿರ್ಧರಿಸಲಾಗಿದೆ. ಹಣ ಒದಗಿದ ನಂತರ ಈ ಕಾರ್ಯವನ್ನು ನಡೆಸಲಾಗುವುದು. ರೈಲ್ವೆ ನಿಲ್ದಾಣಕ್ಕೆ ಬರುವ ರಸ್ತೆಗೆ ಕಾಂಕ್ರೀಟ್ ಹಾಕುವುದು, ನಿಲ್ದಾಣದ ಆಶ್ರಯ ಸ್ಥಳಗಳನ್ನು ವಿಸ್ತರಿಸುವುದು ಇವೇ ಮುಂತಾದ ಕಾರ್ಯಗಳನ್ನು ನಡೆಸಲಾಗುವುದು.

ಸಿಂಧ್ ಪ್ರಾಂತದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು

ಸಿಂಧ್ ಪ್ರಾಂತದ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗಿದೆ. ಅಲ್ಲಿನ ಮುಖ್ಯ ಮಂತ್ರಿ ಪೀರ್ಜಾದಾ ಅಬ್ದುಲ್ ಸತ್ತಾರ್‌ರವರು ರಾಜೀನಾಮೆ ಕೊಡಲು ಮುಂದೆ ಬಂದಿದ್ದರೆಂದೂ, ಆದರೆ ಇದೇ ೨೬ನೇ ತಾ॥ ವರೆಗೂ ಅದನ್ನು ತಡೆಹಿಡಿಯಲಾಗಿದೆಯೆಂದೂ ಹೇಳಲಾಗಿದೆ. ಆಯವ್ಯಯದಲ್ಲಿ ಮೋಟಾ ನಿರ್ಣಯಗಳನ್ನು ತಂದು ಮುಖ್ಯ ಮಂತ್ರಿಯವರನ್ನು ಓಡಿಸಬೇಕೆಂದು ಅಲ್ಲಿನ ಶಾಸಕದ ಪಕ್ಷವಾದ ಲೀಗು ಪ್ರಯತ್ನಪಟ್ಟುದೇ ಬಿಕ್ಕಟ್ಟಿಗೆ ಕಾರಣವಾಗಿದೆ.

ಅಂಗಡಿ ಸಿಬ್ಬಂದಿ ಕಾನೂನಿಗೆ ತಿದ್ದುಪಡಿ

ಅಂಗಡಿ ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಇರುವ ಕಾನೂನಿನಲ್ಲಿ ಕಂಡುಬಂದ ನ್ಯೂನತೆಗಳನ್ನು ಹೋಗಲಾಡಿಸಲು ತಿದ್ದುಪಡಿ ತರುವ ಬಗ್ಗೆ ಸಂಸ್ಥಾನ ಮತ್ತು ಕೇಂದ್ರ ಸರ್ಕಾರಗಳ ನಡುವೆ ಪತ್ರ ವ್ಯವಹಾರವು ನಡೆಯುತ್ತಿರುವುದೆಂದು ನ್ಯಾಯಾಂಗ ಸಚಿವರು ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗೆ ದಂಡ

ಅಂಗಡಿ ಸಿಬ್ಬಂದಿ ಕಾನೂನನ್ನು ಉಲ್ಲಂಘಿಸಿದರೆಂದು ರಾಜಧಾನಿಯ ಅಂಗಡಿ ಸಿಬ್ಬಂದಿ ಇನ್ಸ್‌ಪೆಕ್ಟರಾದ ಶ್ರೀ ಎಸ್ ನಾಗಪ್ಪನವರು ಹೂಡಿದ್ದ ಮೊಕದ್ದಮೆಗಳಲ್ಲಿ ಕೆಳಗೆ ಕಂಡ ಮಾಲೀಕರಿಗೆ ಈ ರೀತಿ ದಂಡವನ್ನು ವಿಧಿಸಲಾಗಿದೆ — ದೇವರಾಜ ಮಾರ್ಕೆಟ್ಟಿನ ದಾಮೋದರ ಮಿಠಾಯಿ ಸಾಮಾನುಗಳ ಅಂಗಡಿಯ ಮಾಲೀಕ ಶ್ರೀ ಎ. ಎಸ್ ಕಾಮತ್ ೫ ರೂ. ಮಾರ್ಕೆಟ್ ಹಿಂಭಾಗದ ರಸ್ತೆ ದಿನಸಿ ಅಂಗಡಿಯ ಶ್ರೀ ಕೆ. ಸಿ ಅಬ್ದುಲ್ ರಹೀಂ ೩ ರೂ. ಅಶೋಕಾ ರಸ್ತೆಯ ಇರಾನಿ ಫಲಾಹಾರ ಮಂದಿರದ ಶ್ರೀ ಕೆ ಪಿ ಹಸನ್ ೮ ರೂ.

ಬೆಳ್ಳೂರು ಗ್ರಾಮದಲ್ಲಿ ವಿಶೇಷ ಪ್ರಾಣಿ ಬಲಿಯೇ?

ನಾಗಮಂಗಲ ತಾಲ್ಲೂಕು ಬೆಳ್ಳೂರಿನ ಗೋಸೇವಕರಾದ ಶ್ರೀ ಬಿ ಎಂ ಎ ಖಾದರ್‌ರವರು ಪತ್ರವೊಂದನ್ನು ಬರೆದು ಏಪ್ರಿಲ್ ತಿಂಗಳು ೧ ನೇ ತಾ॥ ಮಾರಿಯಮ್ಮನ ಉತ್ಸವದ ಸಂಭದಲ್ಲಿ ಅನೇಕ ಕೋಣ, ಕುರಿ, ಮೇಕೆ ಮತ್ತು ಕೋಳಿಗಳನ್ನು ಬಲಿ ಕೊಡಲಾಗುವುದೆಂದು ತಿಳಿಸಿರುತ್ತಾರೆ. ಕಾನೂನು ಜಾರಿಯಲ್ಲಿ ಇಂತಹ ಘೋರವಾದ ಪ್ರಾಣಿಹತ್ಯೆಯನ್ನು ನಿಲ್ಲಿಸುವಂತೆ ಅವರು ಸರ್ಕಾರವನ್ನೂ ಸಾರ್ವಜನಿಕರನ್ನೂ ಪ್ರಾರ್ಥಿಸುತ್ತಾರೆ.

Edited, Printed and Published by A R Nagarajan at Sadhvi Press D Subbiah Road, Mysore

SRI CHAMUNDESWARI BHAVAN

YELWAL ROAD MYSORE

FROM 3-3-1954

Special Arrangements for HOT SEASON at Up stairs, Specially Decorated Hall

Daily From 4 P M to 7 P M

Fruit Salad Ice Cream Banana, Vanilla Almond and Gulab Ice-Creams
Almond Cold, Fruit Juices Pineapple Orange, Lemon
Tomato and Grape
Milk Syrups, Sweet Curds Syrups Vegetable Cutlets Sandwiches
Toast Butter and Potato Chips

★

OUR PLANTATION 'A' COFFEE A SPECIALITY

Our Special Set Dosa available in the Mornings & Evenings

★ Special Menus in Meals to suit Hot Weather

★ Concession to permanent Boarders Meal Section

ಪ್ರಭುದೇವಾ ಥಿಯೇಟರ್

(ಸದ್ದಾ ಟಾಕೀಸ್)

19-3-54 ನೇ :: ಶುಕ್ರವಾರದಿಂದ : ಅಮೋಘ ಪ್ರಾರಂಭ

★ **ನಿರುಪೇದಲು** ★

(ಕಡು ಬಡವರು) — ಪ್ರತಿ ದಿನ 3 ಆಟಗಳು — (ತೆಲುಗು ಚಿತ್ರ)

ಪಾತ್ರ — ನಾಗೇಶ್ವರರಾವ್, ಜಮುನ, ಬಾಲಸರಸ್ವತಿ ಮುಂತಾದವರು

ಲಕ್ಷ್ಮೀ ಟಾಕೀಸ್ ★ ತಾ॥ 20 3.54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಪ್ರಸಿದ್ಧ ಕಲೋಪಾಸಕ ವಿ ನಾಗಯ್ಯನವರ ಉನ್ನತ ಕಾಣಿಕೆ

ನ್ಯಾಷನಲ್ ಪ್ರೊಡಕ್ಷನ್ಸ್ ರವರ ತಮಿಳು ಚಿತ್ರ ★ **ವಿಡುದಲೈ** VIDUDALAI

ಸಹಾಯಕ ವರ್ಗದಲ್ಲಿ :- ಕೃಷ್ಣಕುಮಾರಿ ಮನೋಹರ್, ಕುಮುದಿನಿ, ಮೋಹನ, ಬಾಲಸುಬ್ರಹ್ಮಣ್ಯಂ, ಗಣಪತಿ ಭಟ್ ಮುಂತಾದವರು

ನಿರ್ದೇಶನ :— ರಾಮನಾಥ್

ಟೆಲಿಫೋನ್ ನಂ. 792 ‖ ವಂದೇ ಮಾತರಂ ‖ ಬಿಡಿಪ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಬಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE SATURDAY 20 3-1954 : ಮೈಸೂರು : ಶನಿವಾರ ೨೦-೩-೧೯೫೪ [ಸಂಚಿಕೆ ೨೧೮

ಭಾರತದಲ್ಲಿ ಫ್ರೆಂಚ್ ಸ್ವಾಸ್ಥ್ಯಗಳ ಐಕ್ಯಕ್ಕೆ ಸಚಿವರ ಒತ್ತಾಯ

ಮೈಸೂರಿನ ಮೃಗಾಲಯಕ್ಕೆ ಜಿರಾಫೆ ಮತ್ತು ಉಷ್ಟ್ರ ಪಕ್ಷಿಗಳು

ಮೈಸೂರು ೨೦

ಮೈಸೂರಿನಿಂದ ವಿದೇಶಗಳಿಗೆ ಕಳುಹಿಸಲಾದ ಆನೆಗಳಿಗೆ ಪ್ರತಿಯಾಗಿ ಇಲ್ಲಿನ ಮೃಗಾಲಯಕ್ಕೆ ಆಫ್ರಿಕದ ಟಾಂಗನೀಕದಿಂದ ಮೂರು ಜಿರಾಫೆಗಳು, ಮೂರು ಉಷ್ಟ್ರ ಪಕ್ಷಿಗಳು ಮತ್ತು ಮೂರು ಏಲಾಂಡ್‌ಗಳನ್ನ ತರಿಸಲಾಗಿದೆಯೆಂದೂ, ಅವು ಈಗಾಗಲೇ ಮದರಾಸಿಗೆ ಹಡಗಿನಲ್ಲಿ ಬಂದಿಳಿದಿರುವುವೆಂದೂ ಗೊತ್ತಾಗಿದೆ

ಕಾಂಗ್ರೆಸ್ ಸದಸ್ಯತನದ ಪುಸ್ತಕಗಳ ವಾಪಸಾತಿಗೆ ಸೂಚನೆ

ಮೈಸೂರು ಪ್ರದೇಶ ಕಾಂಗ್ರೆಸ್ ಮತ್ತು ನಗರ ಕಾಂಗ್ರೆಸ್ ಸಮಿತಿಗಳಿಂದ ಪಡೆದಿರುವ ಕಾಂಗ್ರೆಸ್ ಸದಸ್ಯತನದ ಪುಸ್ತಕಗಳನ್ನು ಆಯಾ ವಾರ್ಡುಗಳ ಸಮಿತಿ ಕಾರ್ಯದರ್ಶಿಯವರಿಗೆ ಹಣದ ಸಮೇತ ಕೂಡಲೇ ವಾಪಸು ಮಾಡುವಂತೆ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯವರಾದ ಶ್ರೀ ಟಿ ವೆಂಕಟರಮಣಯ್ಯನವರು ತಿಳಿಸಿರುತ್ತಾರೆ

ಫಜಲೂಲ್ ಹಕ್ಕರು ಪೂರ್ವ ಬಂಗಾಳದ ಮುಖ್ಯ ಮಂತ್ರಿಯೇ

ಪೂರ್ವ ಬಂಗಾಳದ ಸಾರ್ವತ್ರಿಕ ಚುನಾವಣೆಯಲ್ಲಿ ೩೦೯ ಸ್ಥಾನಗಳ ಪೈಕಿ ಇದುವರೆಗೆ ೧೭೦ ಸ್ಥಾನಗಳ ಫಲಿತಾಂಶಗಳು ಹೊರಬಿದ್ದು ಸಂಯುಕ್ತ ರಂಗದ ಪಕ್ಷಕ್ಕೆ ೧೪೭, ಮುಸ್ಲಿಂ ಲೀಗಿಗೆ ೪ ಮತ್ತು ಸ್ವತಂತ್ರರಿಗೆ ೮ ಸ್ಥಾನಗಳು ಲಭಿಸಿವೆ ಅಲ್ಪಸಂಖ್ಯಾತರ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗೆ ೩, ಗಣತಂತ್ರ ದಳಕ್ಕೆ ೨, ಅಲ್ಪ ಸಂಖ್ಯಾತರ ಸಂಯುಕ್ತ ದಳಕ್ಕೆ ೧ ಮತ್ತು ಪರಿಗಣಿತ ಕೋಮಿನ ಫೆಡರೇಷನಿಗೆ ೬ ಸ್ಥಾನಗಳು ಸಿಕ್ಕಿವೆ ಯುನೈಟೆಡ್ ಫ್ರಂಟ್ ಪಕ್ಷಕ್ಕೆ ಸಂಪೂರ್ಣ ಬಹುಮತ ದೊರೆಯಲು ಇನ್ನು ಎಂಟು ಸ್ಥಾನಗಳು ಮಾತ್ರ ದೊರೆಯಬೇಕಾಗಿದೆ ಆ ಪಕ್ಷದ ನಾಯಕರಾಗಿ ಆರಿಸಿಬರಲಿರುವ ಶ್ರೀ ಫಜಲೂಲ್ ಹಕ್‌ರವರೇ ಪೂರ್ವ ಬಂಗಾಳದ ಮುಖ್ಯ ಮಂತ್ರಿಗಳಾಗುವರೆಂದು ಗೊತ್ತಾಗಿದೆ. ಪಶ್ಚಿಮ ಪಾಕಿಸ್ತಾನ ಸರ್ಕಾರದಲ್ಲೂ ಸಹ ಹಲವು ಬದಲಾವಣೆಗಳಾಗುವ ಸಂಭವವಿರುವುದೆಂದೂ ಹೇಳಲಾಗುತ್ತಿದೆ

ಪುದುಚೇರಿಯನ್ನು ಭಾರತದಲ್ಲಿ ಐಕ್ಯಗೊಳಿಸುವಂತೆ ಕರೆ

ಪುದುಚೇರಿ ಮುಂತಾದ ಫ್ರೆಂಚ್ ಪ್ರದೇಶವನ್ನು ಭಾರತಕ್ಕೆ ಕೂಡಲೇ ಸೇರಿಸಬೇಕೆಂದೂ, ಈ ಬಗ್ಗೆ ಜನಾಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿಲ್ಲವೆಂದೂ ಫ್ರೆಂಚ್ ಭಾರತದ ಎಂಟು ಪೌರಸಭೆಗಳಲ್ಲಿ ನಿರ್ಣಯ ಮಾಡಿ ಫ್ರೆಂಚ್ ಸರ್ಕಾರವನ್ನು ಒತ್ತಾಯಪಡಿಸಿವೆ

ನಾಲ್ಕು ಕಾಲುಗಳ ಕೋಳಿ ಮರಿ

ಸಿಂಹಳ ದ್ವೀಪದ ಮನ್ನಾರ್ ಎಂಬ ಊರಿನ ಒಬ್ಬ ರೈತನ ಮನೆಯಲ್ಲಿ ನಾಲ್ಕು ಕಾಲುಗಳ ಕೋಳಿ ಮರಿಯು ಹುಟ್ಟಿದೆ ಮಾಮೂಲಾಗಿರುವ ಕಾಲುಗಳ ಜೊತೆಗೆ ಇರುವ ಇನ್ನೆರಡು ಕಾಲುಗಳು ತೋರಾಡುತ್ತಿವೆಯೆಂದೂ, ಅದರಿಂದ ಅದಕ್ಕೆ ಬಾಧಕವೇನೂ ಆಗಿಲ್ಲವೆಂದೂ ಹೇಳಲಾಗಿದೆ.

ರೂಪಾಯಿಗೆ ೧॥ ಸೇರು ಸಣ್ಣಕ್ಕಿ ಮತ್ತು ೨॥ ಸೇರು ದಪ್ಪಕ್ಕಿ

ನಾಳಿದ್ದಿನಿಂದ ಜಾರಿಗೆ

ಬೆಂಗಳೂರು ೨೦

ಡಿಪೋಗಳಲ್ಲಿ ರೂಪಾಯಿಗೆ ೧॥ ಸೇರು ಸಣ್ಣ ಅಕ್ಕಿಯನ್ನೂ, ೨॥ ಸೇರು ದಪ್ಪಕ್ಕಿಯನ್ನೂ ಮಾರುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಎರಡನೇ ರಮಿ ಅಕ್ಕಿಯಲ್ಲಿ ಉತ್ತಮವಾದುದಕ್ಕೆ ಸೇರಿಗೆ ೭॥ ಆಣೆ ಮತ್ತು ಅದಕ್ಕಿಂತ ಕಡಿಮೆಯದಕ್ಕೆ ಆರೂವರೆ ಆಣೆಯಂತೆ ಧಾರಣೆಯನ್ನು ಗೊತ್ತುಪಡಿಸಲಾಗಿದೆ ಈ ಧಾರಣೆಯು ನಾಳಿದ್ದಿನಿಂದ ಜಾರಿಗೆ ಬರುವುದು

ರಾಗಿ ಮತ್ತು ಜೋಳಗಳ ಬೆಲೆಯಲ್ಲಿ ಬದಲಾವಣೆಯಿರುವುದಿಲ್ಲ

ಕಾಮನ ಹಬ್ಬದಲ್ಲಿ ಸಬ್‌ಇನ್ಸ್‌ಪೆಕ್ಟರ ಕೊಲೆ

ಗ್ವಾಲಿಯರಿನಲ್ಲಿ ನೆನ್ನೆ ಕಾಮನ ಹಬ್ಬದ ಸಂಬಂಧವಾಗಿ ಗಲಭೆ ನಡೆದು ಜನರ ಗುಂಪು ಗೌತಮಶರ್ಮ ಎಂಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಕಲ್ಲಿನಿಂದ ಹೊಡೆದು ಕೊಂದ ದಾಗಿ ವರದಿಯಾಗಿದೆ

ದಕ್ಷಿಣ ಕೊರಿಯಕ್ಕೆ ಅಮೆರಿಕದ ಭರವಸೆ

ಕಮ್ಯೂನಿಸ್ಟರು ದಕ್ಷಿಣ ಕೊರಿಯಕ್ಕೆ ತೊಂದರೆ ಕೊಟ್ಟರಾಗಲಿ ಅಥವಾ ಅದನ್ನು ಹಿಂದಕ್ಕೆ ತಳ್ಳಿದರಾಗಲಿ ಆಗ ಆ ದೇಶದೊಡನೆ ಅಮೆರಿಕವು ಕೊರಿಯಾ ರಾಜಕೀಯ ಸಮ್ಮೇಳನದಿಂದ ಹೊರಕ್ಕೆ ಬರುವುದಾಗಿ ಭರವಸೆ ಕೊಡಲಾಗಿದೆಯೆಂದು ವರದಿಯಾಗಿದೆ

ಪಾರ್ಲಿಮೆಂಟ್ ಸದಸ್ಯರಿಗೆ ೪೦೦ ರೂ. ವೇತನ, ೧೫ ರೂ. ದಿನ ಭತ್ಯ

ಕೇಂದ್ರ ಪಾರ್ಲಿಮೆಂಟಿನ ಸದಸ್ಯರಿಗೆ ಇನ್ನು ಮುಂದೆ ತಿಂಗಳಿಗೆ ೪೦೦ ರೂ ಸಂಬಳ ಮತ್ತು ಸಭಾ ಕಾಲದಲ್ಲಿ ೧೫ ರೂ ದಿನ ಭತ್ಯ ಕೊಡುವ ವಿಷಯವು ಭಾರತ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಹೇಳಲಾಗಿದೆ ಅಲ್ಲದೆ ಅವರಿಗೆ ತಬ್ಬಲ್ ಸೆಕೆಂಡ್ ಕ್ಲಾಸಿನ ಅಖಿಲ ಭಾರತ ರೈಲ್ವೆ ಪಾಸು ಮತ್ತು ಫಸ್ಟ್ ಕ್ಲಾಸಿನ ಒಂದು ಪಾಸನ್ನೂ ಕಾಂಪ್ಲಿಮೆಂಟರಿಯಾಗಿ ಕೊಡಲಾಗುವುದೆಂದೂ ವರದಿಯಾಗಿದೆ ಈಗ ಅವರಿಗೆ ೪೦ ರೂ. ದಿನ ಭತ್ಯ ಮತ್ತು ೧ ೩/೫ರಷ್ಟು ಫಸ್ಟ್ ಕ್ಲಾಸ್ ರೈಲ್ವೆ ದರವನ್ನು ಕೊಡಲಾಗುತ್ತಿದೆ ಹೊಸ ಯೋಜನೆಯಿಂದ ಪ್ರತಿಯೊಬ್ಬ ಸದಸ್ಯರಿಗೂ ವರ್ಷವೊಂದಕ್ಕೆ ೭,೫೪೫ ರೂ ಸಲ್ಲುವುದೆಂದೂ, ಹಾಲಿ ಇರುವ ವ್ಯವಸ್ಥೆಯಿಂದ ೬,೯೨೦ ರೂ ಬರುತ್ತಿದ್ದಿತೆಂದೂ ಗೊತ್ತಾಗಿದೆ. ಸದಸ್ಯರಿಗೆ ದೆಹಲಿಯಲ್ಲಿ ಉಚಿತ ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದಿಲ್ಲವೆಂದೂ ಹೇಳಲಾಗಿದೆ

ಕೆಲ್ಲೋಡಿನಲ್ಲಿ ಸಿಮೆಂಟ್ ಕಾರ್ಖಾನೆ

ಹೊಸದುರ್ಗ ತಾಲ್ಲೂಕು ಕೆಲ್ಲೋಡಿನಲ್ಲಿ ಸಿಮೆಂಟ್ ಕಾರ್ಖಾನೆ ಸ್ಥಾಪಿಸುವ ವಿಷಯವು ಸರ್ಕಾರದ ಗಮನದಲ್ಲಿರುವುದೆಂದು ಕೈಗಾರಿಕಾ ಮಂತ್ರಿ ಶ್ರೀ ಸಿದ್ಧವೀರಪ್ಪನವರ ತಿಳಿಸಿರುತ್ತಾರೆ.

ಭಾರತದಲ್ಲಿ ಫ್ರೆಂಚ್ ಸ್ವಾಸ್ಥ್ಯಗಳ ಐಕ್ಯಕ್ಕೆ ಒತ್ತಾಯ

ಸಚಿವರಿಂದ ಅಹಿಂಸಾಯುತ ಚಳುವಳಿ ಬಗ್ಗೆ ಸೂಚನೆ

ಫ್ರೆಂಚ್ ಭಾರತದ ಮಂತ್ರಿ ಎಂ ಎಡ್ವರ್ಡ್ ಗೋಬರ್ಟ್ ಮತ್ತು ಇತರ ನಾಲ್ವರು ಮಂತ್ರಿಗಳು ನೆನ್ನೆ ಪುದುಚೇರಿಯಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳನ್ನು ಜನಾಭಿಪ್ರಾಯ ಪಡೆಯದೆಯೇ ಭಾರತದಲ್ಲಿ ಐಕ್ಯಗೊಳಿಸಬೇಕೆಂದೆ ಘೋಷಿಸಿರುತ್ತಾರೆ

ಅಲ್ಲಿನ ಎಂಟು ಪೌರಸಭೆಗಳು ಮಾಡಿರುವ ನಿರ್ಣಯಕ್ಕೆ ತಾವು ಬೆಂಬಲ ನೀಡುವುದಾಗಿಯೂ, ಸ್ವಾಸ್ಥ್ಯಗಳನ್ನು ಐಕ್ಯಗೊಳಿಸುವ ಬಗ್ಗೆ ಫ್ರಾನ್ಸಿನ ಸರ್ಕಾರವು ಜರೂರು ಕ್ರಮಗಳನ್ನು ಕೈಗೊಳ್ಳಬೇಕೆಂದೂ ಅವರು ತಿಳಿಸಿದರು. ಮೇಲ್ಕಂಡ ನಿರ್ಣಯದ ಪ್ರತಿಗಳನ್ನು ಫ್ರಾನ್ಸ್ ಸರ್ಕಾರಕ್ಕೂ ಮತ್ತು ಅಲ್ಲಿನ ಅಧ್ಯಕ್ಷರಿಗೂ ಮತ್ತು ಭಾರತದ ಪ್ರಧಾನಿ ನೆಹರೂರವರಿಗೂ ಕಳುಹಿಸಲಾಗಿದೆ

ಎಂ ಗೌಬರ್ಟ್‌ರವರು ಒಂದು ಹೇಳಿಕೆಯಿತ್ತು ಇನ್ನೊಂದು ವಾರದೊಳಗಾಗಿ ಮಂತ್ರಿಮಂಡಲದ ಸಭೆ ಸೇರಿ ಫ್ರೆಂಚ್ ಸ್ವಾಸ್ಥ್ಯಗಳನ್ನು ಜನಾಭಿಪ್ರಾಯವಿಲ್ಲದೆ ಭಾರತದೊಡನೆ ಐಕ್ಯಗೊಳಿಸುವಂತೆ ಸೂಚಿಸಿ, ಸರ್ವಾನುಮತದ ನಿರ್ಣಯ ಮಾಡಲಾಗುವುದೆಂದೂ, ಯಾವ ರೀತಿಯ ಪರಿಣಾಮವನ್ನೊದಗಿದರೂ ಈ ತೀರ್ಮಾನವನ್ನು ಬದಲಾಯಿಸುತ್ತಿಲ್ಲವೆಂದೂ ತಿಳಿಸಿದರು ಈ ಗುರಿಯನ್ನು ಸಾಧಿಸಲು ಫ್ರೆಂಚ್ ಭಾರತದ ಮಂತ್ರಿಗಳು ಶಾಂತಿಯುತವಾದ ಮತ್ತು ಅಹಿಂಸಾತ್ಮಕವಾದ ಚಳುವಳಿಯನ್ನು ಹೂಡಲೂ ಸಿದ್ಧವಿರುವುದಾಗಿ ಅವರು ಹೇಳಿದರು

ಹಾಸನ ಮತ್ತು ಮಂಗಳೂರುಗಳ ನಡುವೆ ಬ್ರಾಡ್‌ಗೇಜು ರೈಲು

ಹಾಕಲು ಒತ್ತಾಯ ಮಾಡಲಾಗಿದೆ ಎಂದು ಮುಖ್ಯ ಮಂತ್ರಿಗಳು

ಸ್ವಂ ಸು ಫೋನ್] ಬೆಂಗಳೂರು ೨೦

ಈ ದಿನ ಹಿರಿಯ ಶಾಸನ ಸಭೆಯಲ್ಲಿ ಆಯವ್ಯಯದ ಟೀಕೆಗಳಿಗೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು, ಹಾಸನ ಮತ್ತು ಮಂಗಳೂರುಗಳ ನಡುವೆ ಬ್ರಾಡ್‌ಗೇಜ್ ರೈಲನ್ನು ಹಾಕುವಂತೆ ತಾವು ರೈಲ್ವೆ ಮಂತ್ರಿಗಳನ್ನು ಒತ್ತಾಯಮಾಡಿರುವುದಾಗಿ ತಿಳಿಸಿದರು

ಶ್ರೀ ಬಿ ಟಿ ರಾಮಯ್ಯನವರು ಕಾಂಗ್ರೆಸ್ ಪಕ್ಷದಲ್ಲಿರುವ ಒಡಕನ್ನು ಟೀಕೆಮಾಡಿದ ಬಗ್ಗೆ ಉತ್ತರ ಹೇಳುತ್ತಾ ಮುಖ್ಯಮಂತ್ರಿಯವರು ಸೂಪರ್ಜ್ ಮಂತ್ರಿಮಂಡಲವನ್ನಾಗಲಿ ಉರುಳಿಸುವ ಉದ್ದೇಶದಿಂದ ಉದ್ರೇಕವಾಗುವಂತಹ ಭಾಷಣಗಳನ್ನು ಮಾಡಬಾರದೆಂದು ತಿಳಿಸಿದರು.

ಸಭೆಯು ಪ್ರಾರಂಭದಲ್ಲಿ ಸಚಿವರು ೫ ನಿಮಿಷ ತಡವಾಗಿ ಬಂದರು ಈ ಬಗ್ಗೆ ಅಧ್ಯಕ್ಷರು ಆಕ್ಷೇಪಿಸಿದರು.

ಪ್ರಶ್ನೋತ್ತರ ಕಾಲದಲ್ಲಿ ಮೈಸೂರು ನಗರದಲ್ಲಿ ನೀರಿನ ವ್ಯವಸ್ಥೆಯನ್ನು ಉತ್ತಮಗೊಳಿಸುವ ಬಗ್ಗೆ ತಯಾರಾಗಿರುವ ಹೊಸ ಯೋಜನೆ

ಮೇಕೆದಾಟು ಯೋಜನೆಗೆ ೪,೪೦,೦೦,೦೦೦ ರೂ. ಅಂದಾಜು

ಕಿರಿಯ ಶಾಸನ ಸಭೆಯಲ್ಲಿ ಸಚಿವ ನಾಗನಗೌಡರ ಹೇಳಿಕೆ

ಸ್ವಂ ಸು ಫೋನ್] ಬೆಂಗಳೂರು ೨೦

ಈ ದಿನ ಕಿರಿಯ ಶಾಸನ ಸಭೆಯಲ್ಲಿ ವ್ಯವಸಾಯ ಮಂತ್ರಿ ಡಾ॥ ನಾಗನಗೌಡರು ಶ್ರೀ ೮ ಕೃಷ್ಣನವರ ಪ್ರಶ್ನೆಗೆ ಉತ್ತರವಾಗಿ, ಮೇಕೆದಾಟಿನ ವಿದ್ಯುದ್ಯೋಜನೆಯ ಸರ್ವೇಗಾಗಿಯೇ ೯೭,೬೩೨ ರೂ ವೆಚ್ಚವಾಗಿರುವುದೆಂದೂ, ಅಲ್ಲಿ ವಿದ್ಯುತ್ಕೇಂದ್ರವನ್ನು ಸ್ಥಾಪಿಸಲು ೪ ಕೋಟಿ ೪೦ ಲಕ್ಷ ರೂ ಬೇಕಾಗುವುದೆಂದೂ ಈ ವಿಷಯವನ್ನು ಮದ್ರಾಸು ಸರ್ಕಾರಕ್ಕೆ ತಿಳಿಸಲಾಗಿದೆಯೆಂದೂ ಹೇಳಿದರು.

ಮಲೆನಾಡು ಅಭಿವೃದ್ಧಿಗಾಗಿ ಹಂಚ ವಾರ್ಷಿಕ ಯೋಜನೆ [ಸಂಬಂಧದಲ್ಲಿ ಒಂದು ಕೋಟಿ ರೂ ತೆಗೆದಿಡಲಾಗಿದೆಯೆಂದು ತಿಳಿಸಲಾಯಿತು.

ಅನಂತರ ಆಯವ್ಯಯದ ಗ್ರಾಂಟುಗಳನ್ನು ಮಂಜೂರು ಮಾಡಲಾಯಿತು. ನ್ಯಾಯಾಂಗ ಇಲಾಖೆಗೆ ೩೭,೯೫ ೯೦೦ ರೂ., ಸೈಲು ಇಲಾಖೆಗೆ ೧೫,೫೨,೦೦೦ ರೂ ಮತ್ತು ಪೋಲೀಸು ಇಲಾಖೆಗೆ ೧೯,೪೦,೫೦೦ ರೂ. ಬೇಡಿಕೆಗಳು ಮಂಜೂರಾದವು ಪೋಲೀಸು ಇಲಾಖೆ ಬೇಡಿಕೆ ಸಂಬಂಧವಾಗಿ ಶ್ರೀ ಜಿ ತಿಮ್ಮಪ್ಪನವರು ಕೋತಾ ನಿರ್ಣಯವನ್ನು ತಂದು, ಸರ್ಕಾರದವರಿಗೂ ಪೋಲೀಸು ಇಲಾಖೆಯ ಮುಖ್ಯಾಧಿಕಾರಿಗಳಿಗೂ ವಿರಸ ಇರಕೂಡದೆಂದು ಹೇಳಿದರು.

ಸದಸ್ಯರುಗಳು ಮಾತನಾಡಿ ಸರ್ಕಾರದವರು ಪೋಲೀಸು ಇಲಾಖಾ ಧೈರಗಳನ್ನು ತರಿಸಿಕೊಳ್ಳುವುದು ಮುಂತಾದುವನ್ನು ಮಾಡಕೂಡದೆಂದು ಹೇಳಿದರು

ಮುಖ್ಯ ಮಂತ್ರಿಯವರು ಉತ್ತರವಿತ್ತು, ಆ ರೀತಿ ಪ್ರವೇಶ ಮಾಡಿಲ್ಲವೆಂದು ತಿಳಿಸಿದರು

ಯಿಂದ ನಗರದ ಮಧ್ಯ ಭಾಗಕ್ಕೆ ಸರಬರಾಜು ಉತ್ತಮಗೊಳ್ಳುವುದೆಂದೂ, ಬಡಾವಣೆಗಳಿಗೆ ಅಷ್ಟು ಅನುಕೂಲವಾಗುವುದಿಲ್ಲವೆಂದೂ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಶ್ರೀ ಸಿ ಗೋಪಾಲಕೃಷ್ಣಶೆಟ್ಟಿಗೆ ಉತ್ತರವಿತ್ತರು

ಕುರುಡ ಮೂಗರ ಶಾಲೆಯಲ್ಲಿ ಸಂಗೀತ ಕಛೇರಿ

ರಾಜಧಾನಿಯ ಕುರುಡಮೂಗರ ಪಾಠಶಾಲೆಯ ಭಜನೆ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ವಿದ್ವಾನ್ ವಿ ರಾಮರತ್ನಂರವರ ಸಂಗೀತವು, ಅ॥ ವಿ॥ ಟೆಚ್ ವಿ ರಾಮರಾಯರ ಪಿಟೀಲು, ವಿ॥ ಎಂ ಎಸ್ ರಾಮಯ್ಯನವರ ಮೃದಂಗ, ವಿ॥ ಎಂ ಅನಂತಸ್ವಾಮಿಯವರ ಘೋಲಕ್ ಮತ್ತು ವಿ॥ ಎಂ ಎಸ್. ರಾಮಣ್ಣನವರ ಘಟಗಳೊಡನೆ ಮಾಜಿ ಪೌರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದೆ.

ಹರಿಜನರ ದಿನಾಚರಣೆ

ರಾಜಧಾನಿಯ ಪೌರಸಭೆಯ ಕಮೀಷನರ್ ಶ್ರೀ ಎಲ್ ಲಕ್ಷ್ಮಣರಾಯರು ಒಂದು ಪ್ರಕಟಣೆ ಹೊರಡಿಸಿ ಇದೇ ತಿಂಗಳು ೨೭ನೇ ತಾ॥ ನಗರದಲ್ಲಿ ಹರಿಜನ ದಿನಾಚರಣೆಯನ್ನು ನಡೆಯಿಸಲಾಗುವುದೆಂದು ತಿಳಿಸಿರುತ್ತಾರೆ

ಗ್ರಾಮ ಕಲೆಗಳ ಹಬ್ಬ

ಮೈಸೂರು ೧೯

ನಗರದ ವಯಸ್ಕರ ಶಿಕ್ಷಣ ಸಮಿತಿಯವರು ಟೌನ್ ಹಾಲಿನಲ್ಲಿ ಮೊನ್ನೆ ಗ್ರಾಮ ಕಲೆಗಳ ಹಬ್ಬವನ್ನು ಏರ್ಪಡಿಸಿದ್ದರು ಸಾಹಿತಿಗಳಾದ ಶ್ರೀ ಎ. ಭದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆ, ನಗರ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ಕೆ ಎಸ್ ಸೂರ್ಯನಾರಾಯಣರವರಿಂದ ಸ್ವಾಗತವಾದ ನಂತರ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾದ ಡಾ॥ ಎಂ ಸಿದ್ದಲಿಂಗಯ್ಯನವರು ಸಮಾರಂಭದ ಆರಂಭೋತ್ಸವವನ್ನು ನೆರವೇರಿಸಿದರು ಶ್ರೀ ಎ ಭದ್ರಯ್ಯನವರು ಭಾಷಣ ಮಾಡಿ, ಗ್ರಾಮ ಕಲೆಗಳ ಹಿಂದಿನ ಮತ್ತು ಈಗಿನ ಸ್ಥಾನಗಳನ್ನು ವಿವರಿಸಿದರು ಗ್ರಾಮ ಕಲೆಗಳನ್ನು ಅಭಿವೃದ್ಧಿಪಡಿಸುವುದರಿಂದ ಜನಜೀವನದ ನೈತಿಕ ಮಟ್ಟವು ಉತ್ತಮಗೊಳ್ಳುವುದೆಂದೂ, ಭಾರತದ ಸಂಸ್ಕೃತಿಗೆ ಪುನರ್ಜೀವನ ಬರುವುದೆಂದೂ ತಿಳಿಸಿದರು ಹಲವು ಗ್ರಾಮ ಕಲೆಗಳ ಪ್ರದರ್ಶನಗಳಾದುವು

ಶುಭಾಶಯ

ಮೈಸೂರು ರೈಲ್ವೆಗಳ ಸಿಗ್ನಲ್ ಇಂಜನಿಯರರಾದ ಶ್ರೀ ವೈ ಕೆ ರಾಮಚಂದ್ರರಾಯರು ತಮ್ಮ ೭೩ನೇ ಜನ್ಮದಿನವಾದ ಇಂದು ತಮ್ಮ ಸನ್ಮಿತ್ರರಿಗೆಲ್ಲಾ ಶುಭಾಶಯವನ್ನು ಕೋರಿರುತ್ತಾರೆ

ಆಕಾಶವಾಣಿಯಲ್ಲಿ ಹಳ್ಳಿಹಾಡುಗಳ ಹಬ್ಬ

ಮೈಸೂರಿನ ರೇಡಿಯೋದವರು ನಾಳೆಯಿಂದ ೨೬ ನೇ ತಾ॥ ಶುಕ್ರವಾರದವರೆಗೆ ಪ್ರತಿ ಸಂಜೆ ೭ ೫ ನಿಮಿಷಕ್ಕೆ ಹಳ್ಳಿ ಹಾಡುಗಳ ಹಬ್ಬವನ್ನು ಇಟ್ಟುಕೊಂಡಿರುತ್ತಾರೆ.

ವಾರ್ಷಿಕೋತ್ಸವ

ರಾಜಧಾನಿಯ ದಳವಾಯಿ ಪ್ರೌಢ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಎರಡನೇ ವಾರ್ಷಿಕೋತ್ಸವವು ನಾಳೆ ಸಂಜೆ ೫॥ ಘಂಟೆಗೆ ಶಾಲೆಯಲ್ಲಿ ನೆರವೇರುವುದು ಮಹಾರಾಜಾ ಕಾಲೇಜಿನ ಹಿಂದಿ ಉಪಾಧ್ಯಾಯರಾದ ಶ್ರೀ ಎನ್ ನಾಗಪ್ಪನವರು ಅಧ್ಯಕ್ಷತೆ ವಹಿಸುವರು. ಹಳೆಯ ವಿದ್ಯಾರ್ಥಿಗಳೂ, ಸಾರ್ವಜನಿಕರೂ ಸಮಾರಂಭಕ್ಕೆ ಬರುವಂತೆ ಪ್ರಾರ್ಥಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ ೭-೨೦ ಅರಿಯಕುಡಿ ಸಂಗೀತ ಮಧ್ಯಾಹ್ನ ೧ ೪೦ ಮತ್ತು ೧-೫೦ ಸಿತಾರ್ ತಮ್ಮ ಜಿ ಟ್ಯೂನ ಗೀತೆಗಳು ಸಂಜೆ ೫ ೪೦ ಮತ್ತು ೯ ೦೫ ಎಸ್ ಡಿ ಶ್ರೀರಂಗಮ್ಮ ಸಂಗೀತ ೬ ಗಾನ ವಿಹಾರ ೬ ೧೫ ನಾವು ಮತ್ತು ನಮ್ಮವರು ೭ ೫ ಸೋಲಿಗರು ಮತ್ತು ಕಾಡು ಕುರುಬರ ಸಂಗೀತ ೭ ೪೦ ಪತ್ರಿಕೋದ್ಯಮ ಬಿ ವಿ ನೇಸರ್‌ಗಾದಾದ ಕೇಳಲು ೯-೩೦ ಮನೆ ಗೀತೆ-ನಾಟಕ

ಅಣು ಬಾಂಬಿಗಿಂತ ಹೆಚ್ಚಿನ ಪ್ರಭಾವದ ಜಲಜನಕ ಬಾಂಬು

ಅಮೇರಿಕವು ಕಳೆದ ೧ ನೇ ತಾ॥ ಶಾಂತಿ ಸಾಗರದ ಮಾರ್ಷಲ್ ದ್ವೀಪದಲ್ಲಿ ಸಿಡಿಸಿದ ಜಲಜನಕ ಬಾಂಬು ಹಿರೋಷಿಮಾ ನಗರದಲ್ಲಿ ಹಾಕಿದ ಅಣು ಬಾಂಬಿಗಿಂತಲೂ ೬೦೦ ರಷ್ಟು ಪ್ರಭಾವಶಾಲಿಯಾದುದೆಂದು ಹೇಳಲಾಗಿದೆ ಹಿರೋಷಿಮಾದಲ್ಲಿ ಹಾಕಿದ ಬಾಂಬಿನಿಂದ ೭೦ ಸಾವಿರ ಜನರು ಮಡಿದಿದ್ದರು

ರಾಮಾಯಣ ಮುಟ್ಟಿ ಪ್ರಮಾಣ ಮಾಡಿ ಡಿಕ್ರಿ ಪಡೆದ ಪ್ರಸಂಗ

ರಂಗೂನಿನಲ್ಲಿರುವ ರಾಮನಾಥ್ ಎಂಬುವರಿಂದ ೧೧೦೦ ರೂ ಬೆಲೆಯ ಹರಳುಗಳನ್ನು ಕೊಟ್ಟಿದ್ದ ಸಂಬಂಧವಾಗಿ ತಮ್ಮ ಹಣವನ್ನು ಅವರಿಗೆ ತಪ್ಪು ವಂಚನೆ ಮಾಡಿದ್ದುದೆಂದು ಕುಂಭಕೋಣದ ಸಬ್ ಕೋರ್ಟಿನಲ್ಲಿ ಶ್ರೀ ಪಿ. ಆರ್ ಶ್ರೀನಿವಾಸಯ್ಯಂಗಾರ್ ಎಂಬುವರು ರಾಮಾಯಣ ಗ್ರಂಥವನ್ನು ಹಿಡಿದು ಪ್ರಮಾಣ ಮಾಡಿದರು ನ್ಯಾಯಾಧೀಶರು ಅವರ ಪರವಾಗಿ ತೀರ್ಪು ಕೊಟ್ಟಿರುತ್ತಾರೆ ಹರಳುಗಳನ್ನು ವರ್ತಕರು ತಮಗೆ ಕೊಡಲಿಲ್ಲವೆಂದೂ, ದುಡ್ಡನ್ನು ಸಹ ವಾಪಸ ಮಾಡಲಿಲ್ಲವೆಂದೂ ಅವರು ಕೋರ್ಟಿಗೆ ತಿಳಿಸಿದ್ದರು

ಹಿರಿಯ ಶಾಸನಸಭಾ ಸದಸ್ಯರ ಬಗ್ಗೆ ಆಕ್ಷೇಪ

ಸದಸ್ಯರ ಭಾಷಣದ ಬಗ್ಗೆ ಆಕ್ಷೇಪಣೆ

ಬೆಂಗಳೂರು ೧೯

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಬಿ ವಿ ನಾರಾಯಣರೆಡ್ಡಿಯವರು ಕೌನ್ಸಿಲ್ಲಿನ ಸದಸ್ಯರ ಬಗ್ಗೆ ಆಡಿದ ಮಾತುಗಳನ್ನು ಕುರಿತು ಹಿರಿಯ ಶಾಸನ ಸಭೆಯಲ್ಲಿ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ನಿಲುವಳಿ ಸೂಚನೆ ಕಳುಹುವುದಾಗಿ ಹೇಳಿ ಅವರ ಭಾಷಣವು ಸದಸ್ಯರ ಗೌರವಕ್ಕೆ ಧಕ್ಕೆತರುವುದೆಂದು ತಿಳಿಸಿದ್ದರು ಈ ಬಗ್ಗೆ ಅಧ್ಯಕ್ಷರು ಮಾತನಾಡಿ, ಶ್ರೀ ಬಿ ವಿ ನಾರಾಯಣರೆಡ್ಡಿಯವರ ಭಾಷಣದ ಭಾಗವನ್ನು ಸ್ಪೀಕರು ತೆಗೆದುಹಾಕಿರುವರೆಂದು ತಿಳಿಸಿದರು

ಮೈಸೂರುಬ್ಯಾಂಕ್ ಡೈರೆಕ್ಟರ ಚುನಾವಣೆ

ಮೈಸೂರು ಬ್ಯಾಂಕಿನ ಡೈರೆಕ್ಟರುಗಳ ಮಂಡಲಿಯ ಎರಡು ಸ್ಥಾನಗಳಿಗೆ ಬೆಂಗಳೂರಿನ ಶ್ರೀ ಎಂ ವಿ ವೀರಪ್ಪ ಮತ್ತು ಶ್ರೀ ಕೆ ಬಿ ಸುಬ್ಬರಾಮರವರು ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ

ಸೀತಾರಾಮರವರು ಉಪವಾಸ ಮುಕ್ತಾಯ ಮಾಡುವುದಿಲ್ಲ

ಸ್ವಾಮಿ ಸೀತಾರಾಮರವರು ಉಪವಾಸವನ್ನು ಮುಕ್ತಾಯ ಮಾಡ ಲ್ಲಿದಿಲ್ಲವೆಂದು ಹೇಳಲಾಗಿದೆ ಅವರು ಅದನ್ನು ನಿಲ್ಲಿಸ ಬೇಕೆಂದು ಸೂಚಿಸಿ ರಾಜೇಂದ್ರಪ್ರಸಾದ್ ರಾಜಾಜಿ ಮುಂತಾದವರು ತಂತಿ ಕಳುಹಿಸಿದ್ದರು

ಬೆಂಕಿ ಅನಾಹುತದಲ್ಲಿ ೧೦೫ ವರ್ಷದ ವೃದ್ಧನ ಮರಣ

ಬಿ ಸಾವರದ ಸಣ್ಣಾಜ್ಜ ಎಂಬ ೧೦೫ ವರ್ಷದ ವೃದ್ಧನು ತನ್ನ ತೋಟದ ಗುಡಿಸಿಲಿನ ಬಳಿ ಬೆಂಕಿ ಹಾಕಿಕೊಂಡು ಕಳಿತಿದ್ದಾಗ ಆಕಸ್ಮಾತ್ತಾಗಿ ಗುಡಿಸಿಲಿಗೆ ಕಿಡಿ ತಗುಲಿ ಅದು ಹತ್ತಿಕೊಂಡು ಸುಟ್ಟುಹೋಯಿತಲ್ಲದೆ ಅವನೂ ಮೃತಪಟ್ಟನೆಂದು ವರದಿಯಾಗಿದೆ

ದಾವ್ರೂದ್ ದಂಪತಿಗಳ ಸಭೆಗೆ ಹುಬ್ಬಳ್ಳಿ ಅಧಿಕಾರಿಗಳ ನಿಷೇಧ

ಪ್ರಾರ್ಥನೆಯ ಮೂಲಕ ಆಶ್ಚರ್ಯಕರವಾದ ಚಿಕಿತ್ಸೆ ನಡೆಸುವುದಾಗಿ ಹೇಳಿ, ಸಾರ್ವಜನಿಕ ಸಭೆಗಳನ್ನು ನಡೆಸುತ್ತಿರುವ ಅಮೇರಿಕದ ದಾವ್ರೂದ್ ದಂಪತಿಗಳ ಬಗ್ಗೆ ಸಾರ್ವಜನಿಕರ ಪ್ರತಿಭಟನೆಯ ಕಾರಣ, ಅವರ ಸಭೆಯನ್ನು ಹುಬ್ಬಳ್ಳಿಯ ಪೌರಸಭಾಧಿಕಾರಿಗಳು ಪ್ರತಿಬಂಧಿಸಿದ್ದಾರೆ

ಬೆಂಕಿ ಆರಿಸುವ ಆತುರದಲ್ಲಿ ಮಗುವನ್ನು ಮರೆತರು

ಚನ್ನಪಟ್ಟಣದಲ್ಲಿ ಮೊನ್ನೆ ಮಟ್ಟೆಯ ಮೇಲ್ಛಾವಣಿಯಿದ್ದ ಒಂದು ಮನೆಗೆ ಬೆಂಕಿ ಬೀಳಲಾಗಿ ಒಳಗಿದ್ದವರೆಲ್ಲರೂ ಹೊರಕ್ಕೆ ಓಡಿಬಂದು ಬೆಂಕಿಯನ್ನು ಆರಿಸುವುದರಲ್ಲಿ ನಿರತರಾಗಿದ್ದರೆಂದೂ, ಬೆಂಕಿ ಆರಿದ ಬಳಿಕ ಒಳಗೆ ತೊಟ್ಟಿಲಿನಲ್ಲಿದ್ದ ಆರು ತಿಂಗಳ ಶಿಶುವು ಅವರ ಜ್ಞಾಪಕಕ್ಕೆ ಬಂದು ನೋಡಲಾಗಿ ಅದರ ದೇಹವು ಸುಟ್ಟು ಹೋಗಿದ್ದ, ಆಸ್ಪತ್ರೆಯಲ್ಲಿ ಅದು ಮೃತಪಟ್ಟಿತೆಂದೂ ವರದಿಯಾಗಿದೆ.

ಬ್ರಿಟಿಷ್ ರಾಣಿಯವರನ್ನು ಕೊಲೆ ಮಾಡುವುದಾಗಿ ಬೆದರಿಕೆ

ಬ್ರಿಟನ್ನಿನ ರಾಣಿ ಎಲಿಜಬೆತ್ತರು ಜಿಬ್ರಾಲ್ಟರ್ ನಗರಕ್ಕೆ ಬಂದರೆ ಅವರನ್ನು ಕೊಲ್ಲಲಾಗುವುದೆಂದು ತಿಳಿಸುವ ಬೆದರಿಕೆ ಪತ್ರವು ಬ್ರಿಟಿಷ್ ಪಾರ್ಲಿಮೆಂಟಿನ ಲಿಬರಲ್ ಪಕ್ಷದ ಮುಖಂಡರಾದ ಕ್ಲೆಮೆಂಟ್ ಡೇವಿಸ್‌ರವರಿಗೆ ಬಂದಿರುತ್ತದೆ ಪತ್ರದ ಲಕೋಟೆ ಮೇಲೆ ಲಂಡನ್ನಿನ ಅಂಚೆ ಗುರುತು ಇದೆ ರಾಣಿಯವರು ಜಿಬ್ರಾಲ್ಟರಿಗೆ ಭೇಟಿ ಕೊಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿರುತ್ತಾರೆ

ಪ್ರಾದೇಶಿಕ ಸೈನ್ಯದಲ್ಲಿ ಸರ್ಕಾರಿ ನೌಕರರಿಂದ ಕಡ್ಡಾಯದ ಸೇವೆ

ಸೂಕ್ತವಾದ ವಯೋಮಿತಿಯುಳ್ಳ ಸರ್ಕಾರಿ ನೌಕರರು ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿರುವ ಕೆಲಸಗಾರರು ಪ್ರಾದೇಶಿಕ ಸೇನೆಯಲ್ಲಿ ಸೇವೆ ಸಲ್ಲಿಸುವಂತೆ ಗೊತ್ತುಪಡಿಸುವ ಕಾನೂನನ್ನು ಮಾಡಲಾಗುವುದೆಂದು ಭಾರತದ ರಕ್ಷಣಾ ಮಂತ್ರಿ ಮಹಾವೀರ ತ್ಯಾಗಿಯವರು ಹೇಳಿರುತ್ತಾರೆ

ಫ್ರಾನ್ಸಿನಲ್ಲೂ ಅಣು ಅಸ್ತ್ರಗಳ ತಯಾರಿ

ಫ್ರಾನ್ಸು ಅಣು ಶಸ್ತ್ರಾಸ್ತ್ರಗಳನ್ನು ತಯಾರಿಸಲು ಯೋಚಿಸಬೇಕಾಗಿದೆಯೆಂದು ಅಲ್ಲಿನ ರಕ್ಷಣಾ ಮಂತ್ರಿ ರೇನೆಪ್ಲೆವೀನರು ಹೇಳಿರುತ್ತಾರೆ.

ರಷ್ಯದ ಮಹಿಳೆಯರಿಂದ ಬ್ರಿಟಿಷ್ ಗಂಡಂದಿರ ವಿಚ್ಛೇದನ

ಬ್ರಿಟಿಷ್ ಪ್ರಜೆಗಳನ್ನು ವರಿಸಿರುವ ಹನ್ನೊಂದು ಮಂದಿ ರಷ್ಯಾ ಮಹಿಳೆಯರು ಬ್ರಿಟನ್ನಿಗೆ ಹೋಗಲು ರಹದಾರಿಯು ಸಿಗದಿರುವ ಪ್ರಯುಕ್ತ ಅವರುಗಳು ದಾಂಪತ್ಯ ವಿಚ್ಛೇದನ ಮಾಡಿಕೊಂಡಿರುತ್ತಾರೆ ಯುದ್ಧ ಕಾಲದಲ್ಲಿ ರಷ್ಯಕ್ಕೆ ಹೋದ ಬ್ರಿಟಿಷ್ ಪ್ರಜೆಗಳನ್ನು ಹಲಮಂದಿ ರಷ್ಯಾ ಮಹಿಳೆಯರು ವಿವಾಹವಾಗಿದ್ದರೆಂದೂ, ಆ ಪೈಕಿ ೧೫ ಮಂದಿ ಹೆಂಡತಿಯರು ತಮ್ಮ ದೇಶದಿಂದ ಹೋಗಿದ್ದರೆಂದೂ, ಉಳಿದವರಲ್ಲಿ ಹಲವರು ರಹದಾರಿ ದೊರೆಯದವರು, ಇತರರು ಅದೃಶ್ಯರಾದವರು ಮತ್ತು ಇನ್ನಿತರರು ವಿಚ್ಛೇದನ ಮಾಡಿಕೊಂಡವರು ಇರುವರೆಂದೂ ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಆ
ಒಣಕೊಬ್ಬರಿ	೧೯ ೧೪ ೦	೨೫ ೧೪ ೦
ಎಳ್ಳು	೬೩ ೧೪ ೦	
ಹರಳುಬೀಜ	೩೪ ೧೪ ೦	೩೮ ೨ ೦
ಹುಚ್ಚೆಳ್ಳು	೪೯ ೪ ೦	೪೦ ೧೪ ೦
ಹೊಂಗೆಬೀಜ	೧೬ ೮ ೦	೨೦ ೮ ೦
ಹುರುಳಿ	೨೬ ೧೦ ೦	೨೮ ೬ ೦
ಹೆಸರು	೩೭ ೬ ೦	೪೦ ೦ ೦
ಅಲಸಂದೆ	೩೩ ೧೪ ೦	೪೩ ೮ ೦
ಧನಿಯ	೨೭ ೨ ೦	೨೯ ೦ ೦
ತೊಗರಿ	೨೪ ೦ ೦	೨೫ ೮ ೦
ಕಡಲೆ	೪೧ ೮ ೦	೪೩ ೧೨ ೦
ಕಡಲೆ ಬೀಜ	೨೨ ೦ ೦	೨೯ ೦ ೦
ಹುಣಸೇಬೀಜ	೧೩ ೪ ೦	೧೩ ೬ ೦
ಹುಣಸೇಹಣ್ಣು	೫ ೦ ೦	೧೧ ೦ ೦
ಸೀಗೆಕಾಯಿ	೯ ೮ ೦	೪ ೧೫ ೦
ಮೆಣಸಿನಕಾಯಿ	೨೫ ೬ ೦	
ತೆಂಗಿನಕಾಯಿ ೧೧೦೦ಕ್ಕೆ	೩೮೦ ೦ ೦	೩೧೨ ೦ ೦

ಲಕ್ಷ್ಮೀ ಟಾಕೀಸ್ ✱ ತಾ॥ 20-3-54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಪ್ರಸಿದ್ಧ ಕಲೋಪಾಸಕ ವಿ ನಾಗಯ್ಯನವರ ಉತ್ಕೃಷ್ಟ ಕಾಣಿಕೆ

ನ್ಯೂ ಟೋನ್ ಪ್ರೊಡಕ್ಷನ್ಸ್ ರವರ ತಮಿಳು ಚಿತ್ರ ★ ವಿಡುದಲೈ VIDUDALAI

ಸಹಾಯಕ ವರ್ಗದಲ್ಲಿ :- ಕೃಷ್ಣಕುಮಾರಿ ಮನೋಹರ್, ಕುಮುದಿನಿ, ಮೋಹರ್, ಬಾಲಸುಬ್ರಹ್ಮಣ್ಯಂ, ಗಣಪತಿ ಭಟ್ ಮುಂತಾದವರು

ನಿರ್ದೇಶನ :— ರಾಮನಾಥ್

Edited, Printed and Published by A R Nagarajan at Sadhvi Press, D Subaian Road, Mysore

ಹಿರಿಯ ಶಾಸನ ಸಭೆಯ ರದ್ದಿಯಾತಿಗೆ ಒತ್ತಾಯ

ಮಾಸಿಕಸಲ್ಲೀ ಹೋಟಾ ನಿರ್ಣಯದ ಮುಕ್ತಾಯ

ಬೆಂಗಳೂರು ೧೯

ಹಿರಿಯ ಶಾಸನ ಸಭೆಯು ಒಂದು ಭಾರದ ಬಿಳಿಯ ಆನೆಯಂತಿರುವುದೆಂದೂ, ಕೇವಲ ಭೋಷಣಪ್ರಾಯವಾದ ಮತ್ತು ಆಡಂಬರಯುಕ್ತವಾದ ಈ ಸಭೆಯಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಅದನ್ನು ರದ್ದುಗೊಳಿಸುವುದರಿಂದ ವರ್ಷಕ್ಕೆ ೨ ಲಕ್ಷ ರೂ. ಉಳಿತಾಯವಾಗುವುದೆಂದೂ ಶ್ರೀ ಬಿ ವಿ ನಾರಾಯಣ ರೆಡ್ಡಿಯವರು ನೆನ್ನೆ ಕಿರಿಯ ಸಭೆಯಲ್ಲಿ ಹೋಟಾ ನಿರ್ಣಯವನ್ನು ಮಂಡಿಸಿ ಭಾಷಣ ಮಾಡಿದರು ಹೋಟಾ ಆಯವ್ಯಯ ಪಟ್ಟಿಯನ್ನು ಮುಂದಿಟ್ಟುಕೊಂಡು ಅಂತಹ ಪರಿಸ್ಥಿತಿಯಲ್ಲಿ ಕೌನ್ಸಿಲನ್ನು ಮುಂದುವರಿಸಿಕೊಂಡುಹೋಗುವುದು ನ್ಯಾಯವೇ ಎಂದು ಅವರು ಪ್ರಶ್ನಿಸಿದರು

ಹಿರಿಯ ಸಭೆಯ ರದ್ದಿಯಾತಿ ಕಾಲವು ಬಂದಿರುವುದಾಗಿ ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರೂ ಬೊಂಬಾಯಿಯಲ್ಲಿ ಮೇಲ್ಮನೆಯು ರದ್ದಿಯಾತಿಯಾಗಿರುವಂತೆ ಇಲ್ಲಿಯೂ ಆಗಬೇಕೆಂದು ಶ್ರೀ ಎಸ್ ಗೋಪಾಲಗೌಡರೂ, ಈಗಿನ ಸಭೆಯ ಐದು ವರ್ಷದ ಅವಧಿಯು ಮುಗಿಯುವ ವೇಳೆಗೆ ಈ ಪ್ರಶ್ನೆಯನ್ನು ಪರಿಶೀಲಿಸಬೇಕೇ ಹೊರತು ಈಗಲೇ ಅದಕ್ಕೆ ಆತುರಪಟ್ಟು ಪ್ರಯೋಜನವಿಲ್ಲವೆಂದು ಶ್ರೀ ಎ ಭೀಮಪ್ಪನಾಯಕರೂ ತಿಳಿಸಿದರು ನಿರ್ಣಯಕ್ಕೆ ಗೊತ್ತುಪಡಿಸಿದ್ದ ಕಾಲವು ಮೀರಿದುದರಿಂದ ಚರ್ಚೆಗೆ ಸಚಿವರು ಉತ್ತರವೀಯಲಿಲ್ಲ

ಹೋಟಾ ನಿರ್ಣಯಕ್ಕೆ ಮೂಲವಾದ ವಿಧಾನಸಭೆಗಳ ಚುನಾವಣೆ ಬಾಬಿನ ೧೩೭,೫೦೦ ರೂ ಬೇಡಿಕೆಯು ಅಂಗೀಕೃತವಾಯಿತು

೧೦ ಸಾವಿರ ಕ್ರೈಸ್ತರು ಹಿಂದೂ ಮತಕ್ಕೆ ವಾಪಸು

ಕುಂಭಕೋಣದ ಬಳಿ ತಿರುಪನಂದಾಳ್ ಮಠದ ವಿದ್ವಾನ್ ಆರ್ಮುಗ ನಾವಲಾರ್‌ರವರು ೧೦ ೨೦೦ ಜನ ಕ್ರೈಸ್ತರನ್ನು ಹಿಂದೂ ಮತಕ್ಕೆ ಪುನಃ ಸೇರಿಸಿರುವುದಾಗಿ ತಿಳಿದುಬಂದಿದೆ ಹಿಂದೂ ಸಮಾಜದ ಮುಖಂಡರು ಮತ್ತು ಮಠಗಳು ಉತ್ತೇಜನವಿತ್ತರೆ ಇನ್ನೂ ಅನೇಕರನ್ನು ತಾವು ವಾಪಸು ಕರೆತರಬಲ್ಲರೆಂದು ಅವರು ಹೇಳಿರುತ್ತಾರೆ

ಗ್ರಾಜುಯೇಟ್ಸ್ ಸೊಸೈಟಿಯ ಕಟ್ಟಡದ ಬೀಗ ಒಡೆದ ಪ್ರಸಂಗ

ರಾಜಧಾನಿಯ ನಾರಾಯಣ ರಸ್ತೆಯಲ್ಲಿರುವ ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿಯ ಬಾಗಿಲಿನ ಬೀಗದ ಕೊಂಡಿಯನ್ನು ನೆನ್ನೆ ರಾತ್ರಿ ಯಾರೋ ಮುರಿದು ಒಳಗೆ ನುಗ್ಗಿದ್ದರೆಂದೂ, ಆದರೆ ಬೆಲೆಯುಳ್ಳ ಯಾವ ಸಾಮಾನುಗಳೂ ಅಪಹರಿಸಲ್ಪಟ್ಟಿಲ್ಲವೆಂದೂ ತಿಳಿದುಬಂದಿದೆ ಕೃಷ್ಣರಾಜ ಪೊಲೀಸಿನವರು ತನಿಖೆ ನಡೆಸುತ್ತಿರುವರು

ಮಂತ್ರಿಗಳ ಪ್ರವಾಸ ಯೋಜನಾಬದ್ಧವಾಗಿರಬೇಕು

ಸದಸ್ಯರ ಸಲಹೆಗೆ ಮುಖ್ಯ ಮಂತ್ರಿಗಳ ಒಪ್ಪಿಗೆ

ಬೆಂಗಳೂರು ೨೦

ಒಂದೇ ದಿನ ೩೦೦-೪೦೦ ಮೈಲಿಯ ಪ್ರವಾಸವನ್ನು ಮಂತ್ರಿಗಳು ಕೈಗೊಂಡರೆ ಯಾವ ಪ್ರಯೋಜನವೂ ಆಗದೆಂದೂ, ಅವರು ಯೋಜನಾಬದ್ಧವಾಗಿಯೂ, ಜನೋಪಯುಕ್ತವಾಗುವ ರೀತಿಯಲ್ಲೂ ಪ್ರವಾಸ ಮಾಡಬೇಕೆಂದೂ ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಹೋಟಾ ನಿರ್ಣಯ ತರುತ್ತಾ ತಿಳಿಸಿದರು ಸಲಹೆಯನ್ನು ಮುಖ್ಯ ಮಂತ್ರಿಯವರು ಒಪ್ಪಿ, ಈ ಬಗ್ಗೆ ಇತರ ಮಂತ್ರಿಗಳಿಗೆಲ್ಲಾ ತಾವು ಸೂಚನೆ ಕೊಟ್ಟಿರುವುದಾಗಿಯೂ, ಅದನ್ನು ಮತ್ತೆಗೆ ಅದರಂತೆ ನಡೆದುಕೊಳ್ಳಲಾಗುವುದೆಂದೂ ಭರವಸೆಯಿತ್ತನಂತರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಇಂದಿನ ಪತ್ರಿಕೆ 6 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI : LEADING NATIONALIST DAILY OF MYSORE

ಸಂಪುಟ ೧೫] MYSORE SUNDAY 21-3-1954 : ಮೈಸೂರು : ಭಾನುವಾರ ೨೧-೩-೧೯೫೪ [ಸಂಚಿಕೆ ೭೦೯

ಪೂರ್ವ ಬಂಗಾಳದಲ್ಲಿ ಬೇಗನೆ ಸಂಯುಕ್ತ ಪಕ್ಷದ ಸರ್ಕಾರ

ಕರ್ನಾಟಕ ಪ್ರಾಂತ ರಚನೆಗೆ ಒತ್ತಾಯಕ್ಕಾಗಿ ನಿಜಲಿಂಗಪ್ಪನವರ ಕೋರಿಕೆ

ಮೈಸೂರು ಶಾಸನ ಸಭೆಗಳ ಸದಸ್ಯರ ಗೌರವಾರ್ಥವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಸತ್ಕಾರಕೂಟವೊಂದನ್ನು ಮೊನ್ನೆ ಬೆಂಗಳೂರಿನಲ್ಲಿ ಏರ್ಪಡಿಸಿ ಸದಸ್ಯರುಗಳು ಕರ್ನಾಟಕ ಪ್ರಾಂತ ರಚನೆಗೆ ಸಹಾಯ ಮಾಡುವಂತೆ ಕೋರಿದರು. ಬೆಂಗಳೂರು ಕನ್ನಡ ನಾಡಿನ ರಾಜಧಾನಿಯಾಗಿಯೂ ಶ್ರೀ ಮಹಾರಾಜರು ರಾಜಪ್ರಮುಖರಾಗಿಯೂ ಇರುವ ಹೊಸ ಪ್ರಾಂತ್ಯದ ರಚನೆ ತತ್ವವನ್ನು ಮೈಸೂರು ಸಂಸ್ಥಾನವು ಒಪ್ಪಿಕೊಂಡಿರುವುದೆಂದೂ ಅವರು ಹೇಳಿದರು. ಶ್ರೀ ಎ ಭೀಮಪ್ಪನಾಯಕ್ ಮತ್ತು ಶ್ರೀ ಎಸ್ ಗೋಪಾಲಗೌಡರು ಭಾಷಣ ಮಾಡಿ ಕರ್ನಾಟಕ ಪ್ರಾಂತ ರಚನೆಗೆ ಬೆಂಬಲ ಸೂಚಿಸಿದರು

ಭಾರತದ ವಿಮಾನ ದಳದ ೨೧ ನೇ ವಾರ್ಷಿಕೋತ್ಸವ

ಬರುವ ತಿಂಗಳು ೧ ನೇ ತಾ|| ಭಾರತದ ನಾನಾ ವಿಮಾನ ಕೇಂದ್ರಗಳಲ್ಲಿ ವೈಮಾನಿಕ ದಳದ ೨೧ ನೇ ವಾರ್ಷಿಕೋತ್ಸವವು ಜರುಗುವುದು. ಅಂದು ಏರ್ ಮಾರ್ಷಲ್ ಮುಖರ್ಜಿಯವರು ಜನರಲ್ ಗಿಬ್ಸ್‌ರವರಿಂದ ವಿಮಾನ ಬಲದ ದಂಡನಾಯಕತ್ವವನ್ನು ವಹಿಸಿಕೊಳ್ಳುವರು. ರಾಷ್ಟ್ರಾಧ್ಯಕ್ಷರು ವಿಮಾನ ದಳಕ್ಕೆ ಸರ್ವ ವರ್ಣರಂಜಿತ ಧ್ವಜವನ್ನು ನೀಡುವರು. ಈ ಉತ್ಸವದ ಅಂಗವಾಗಿ ದೆಹಲಿಯ ಬಳಿ ವಿಮಾನ ದಳದವರು "ವೈಮಾನಿಕ ಯುದ್ಧ" ದ ಪ್ರದರ್ಶನವೊಂದನ್ನು ಏರ್ಪಡಿಸಲಿರುವರು. ಇಂತಹ ಪ್ರದರ್ಶನವು ಇದುವರೆಗೆ ಎಂದೂ ಜರುಗಿರಲಿಲ್ಲವೆಂದು ಹೇಳಲಾಗಿದೆ

ಭಾರತದ ನೌಕೆಗಳ ಪ್ರಥಮ ಭಾರತೀಯ ಮುಖ್ಯಾಧಿಕಾರಿ

ಭಾರತದ ನೌಕೆಯಲ್ಲಿರುವ ಕ್ಯಾಪ್ಟನ್ ಆರ್ ಡಿ. ಕಟಾರಿಯವರು ನೌಕಾ ದಳ ಕಛೇರಿಯ ಮುಖ್ಯಾಧಿಕಾರಿಯಾಗಿಯೂ ಮತ್ತು ಡೆಪ್ಯುಟಿ ಕಮ್ಯಾಂಡರ್ ಇನ್ ಚೀಫರಾಗಿಯೂ ನೇಮಿಸಲ್ಪಟ್ಟಿದ್ದಾರೆ. ಅವರು ಆ ಸ್ಥಾನಕ್ಕೆ ಬಂದವರಲ್ಲಿ ಮೊದಲನೆ ಭಾರತೀಯರು

ಮುಖ್ಯ ಮಂತ್ರಿಯವರಲ್ಲಿ ಅಗರಬತ್ತಿ ಮಾಲೀಕರ ನಿಯೋಗ

ಸಂಸ್ಥಾನದಲ್ಲಿ ಅಗರಬತ್ತಿ ಕೈಗಾರಿಕೆಯನ್ನು ಗೃಹ ಕಸಬೆಂದು ಪರಿಗಣಿಸಿ ಅದಕ್ಕೆ ಮಾರಾಟ ತೆರಿಗೆ ವಿನಾಯಿತಿಯನ್ನು ಕೊಡಬೇಕೆಂದೂ, ಇಲ್ಲವಾದರೆ ಆ ಉದ್ಯೋಗದಲ್ಲಿ ತೊಡಗಿರುವವರಿಗೆ ತುಂಬಾ ಕಷ್ಟವಾಗುವುದೆಂದೂ ತಿಳಿಸಲು ಮುಖ್ಯ ಮಂತ್ರಿಗಳ ಬಳಿ ಮೈಸೂರಿನ ಅಗರಬತ್ತಿ ಕಾರ್ಖಾನೆಗಳ ಮಾಲೀಕರಾದ ಶ್ರೀಗಳು ಟಿ.ಎಲ್ ಎಸ್ ಉಪಾಧ್ಯಾಯ, ಎಲ್ ನರಸಿಂಹಯ್ಯ, ಅಬ್ದುಲ್ ಅಜೀಜ್, ಲಕ್ಷ್ಮಿಚಂದ್, ಜೆಹ್ ಎ. ಅಯ್ಯ, ಕೆ ರಾಮಕೃಷ್ಣಪ್ಪ ಮತ್ತು ಎಸ್.ಎಸ್ ಶಾಸ್ತ್ರಿಯವರು ನಿಯೋಗ ಹೋಗಿರುತ್ತಾರೆ

ಅಮೆರಿಕಕ್ಕೆ ಟೇನ್ಸಿಂಗರ ಪ್ರಯಾಣಕ್ಕೆ ಪ್ರತಿಬಂಧಕ?

ಅಮೆರಿಕದ ನ್ಯೂಯಾರ್ಕ್ ನಗರದಲ್ಲಿರುವ ಎಕ್ಸ್‌ಪ್ಲೋರರ್ಸ್ ಕ್ಲಬ್ಬಿನವರು ಏರ್ಪಡಿಸಿದ್ದ ಭೋಜನ ಕೂಟಕ್ಕೆ ಗೌರೀಶಂಕರ ಶಿಖರವನ್ನು ಹತ್ತಿದ ಟೇನ್ಸಿಂಗ್‌ರವರಿಗೆ ಕೊಟ್ಟ ಆಹ್ವಾನವನ್ನು ಮನ್ನಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂದೂ ಅವರು ಅಮೆರಿಕಕ್ಕೆ ಹೋಗಲು ಭಾರತದ ಅಧಿಕಾರಿಗಳು ಅನುಮತಿ ಕೊಡಲಿಲ್ಲವೆಂದೂ ಕ್ಲಬ್ಬಿನ ಅಧ್ಯಕ್ಷ ಡಾ|| ಎಡ್ವರ್ಡ್ ಮೆಯರ್‌ರವರು ಹೇಳಿದ್ದಾರೆ

ತುರ್ಕಿ ಮತ್ತು ಪಾಕಿಸ್ತಾನ ಒಪ್ಪಂದದ ಬಗ್ಗೆ ರಷ್ಯದ ಆಕ್ಷೇಪ

ಪಾಕಿಸ್ತಾನ ಮತ್ತು ತುರ್ಕಿಗಳ ನಡುವೆ ಆಗಿರುವ ಒಪ್ಪಂದದ ಬಗ್ಗೆ ರಷ್ಯವು ತುರ್ಕಿಗೆ ಪತ್ರ ಬರೆದು, ಮೇಲ್ಕಂಡ ಕ್ರಮದಿಂದ ರಷ್ಯಾ ಮತ್ತು ತುರ್ಕಿಗಳ ಸಂಬಂಧಕ್ಕೆ ತುಂಬಾ ತೊಂದರೆಯಾಗುವುದೆಂದು ತಿಳಿಸುತ್ತದೆ. ಸಮೀಪ ಮತ್ತು ಮಧ್ಯ ಪೂರ್ವ ರಾಷ್ಟ್ರಗಳನ್ನು ಒಂದುಗೂಡಿಸಿ ಏಕೈಕ ಮಿಲಿಟರಿ ವ್ಯೂಹ ರಚನೆಗಾಗಿ ನಡೆಸುವ ಪ್ರಯತ್ನವನ್ನು ರಷ್ಯವು ಪ್ರತಿಭಟಿಸಿ, ಈ ಬಗ್ಗೆ ತುರ್ಕಿಯೇ ಎಲ್ಲ ಪರಿಣಾಮಗಳಿಗೂ ಜವಾಬ್ದಾರಿ ಹೊರಬೇಕಾಗುವುದೆಂದು ತಿಳಿಸಿರುತ್ತದೆ

ಫ್ರೆಂಚ್ ಭಾರತದ ವಿಮೋಚನೆಗಾಗಿ ೨೭ ರಿಂದ ಸತ್ಯಾಗ್ರಹ

ಭಾರತದಲ್ಲಿರುವ ಫ್ರೆಂಚ್ ವಸಾಹತುಗಳ ವಿಮೋಚನೆಗಾಗಿ ಇದೇ ತಿಂಗಳು ೨೭ ನೇ ತಾ|| ನಿಂದ ಸತ್ಯಾಗ್ರಹವನ್ನು ಹೂಡಲು ಕಾರಿಕಲ್ಲಿನ ಯುವಕರ ಕಾಂಗ್ರೆಸ್ ಸಂಸ್ಥೆಯು ನಿರ್ಧರಿಸಿರುತ್ತದೆ. ಬ್ರಿಟಿಷರು ಸ್ನೇಹ ಸೌಹಾರ್ದದಿಂದ ಭಾರತವನ್ನು ಬಿಟ್ಟು ಹೋಗಿ ಈಗ ಭಾರತದವರ ಮಿತ್ರರಾಗಿರುವರೆಂದೂ, ಅದೇ ಆದರ್ಶವನ್ನು ಫ್ರೆಂಚರು ಅನುಕರಣೆ ಮಾಡಬೇಕೆಂದೂ ಕಾಂಗ್ರೆಸ್ಸು ಸೂಚಿಸಿರುತ್ತದೆ

ಉಪನ್ಯಾಸ

ಪ್ರಖ್ಯಾತ ಸಂಸ್ಕೃತ ವಿದ್ವಾಂಸರೂ, ಶ್ರೇಷ್ಠ ಲೇಖಕರೂ ಏಲ್ ವಿಶ್ವವಿದ್ಯಾನಿಲಯದ ಸುಪ್ರಸಿದ್ಧ ಸಂಸ್ಕೃತ ಪ್ರಾಧ್ಯಾಪಕರೂ ಆದ ಪ್ರೊಫೆಸರ್ ಫ್ರಾಂಕ್ಲಿನ್ ಎಡ್ಗರ್ಟನ್‌ರವರು "ಪಾಶ್ಚಾತ್ಯರ ದೃಷ್ಟಿಯಲ್ಲಿ ಭಗವದ್ಗೀತೆ" ಎಂಬ ವಿಷಯವಾಗಿ ಇದೇ ೨೩ ನೇ ತಾ|| ಮಂಗಳವಾರ ಸಂಜೆ ೬ ಗಂಟೆಗೂ ಮತ್ತು 'ಬೌದ್ಧರ ಮಿಶ್ರ ಸಂಸ್ಕೃತದ ರೀತಿ' ಎಂಬ ವಿಷಯವಾಗಿ ಇದೇ ೨೫ ನೇ ತಾ|| ಗುರುವಾರ ಸಂಜೆ ೬ ಗಂಟೆಗೂ ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಸ್ವಾಗತವಿದೆ

ರೇಷನ್ ಕಾರ್ಡುದಾರರಿಗೆ ೧೨ ಔನ್ಸ್ ಅಕ್ಕಿ

ಸಂಸ್ಥಾನದಲ್ಲಿ ಎಲ್ಲಾ ವರ್ಗದ ರೇಷನ್ ಕಾರ್ಡುದಾರರಿಗೂ ಅಕ್ಕಿಯ ಪಡಿತರವನ್ನು ೧೨ ಔನ್ಸುಗಳಿಗೆ ಹೆಚ್ಚಿಸಲಾಗಿದೆಯೆಂದೂ, ಈಗಿರುವ ರಾಗಿ, ಜೋಳ ಮುಂತಾದ ಧಾನ್ಯಗಳ ದಾಸ್ತಾನು ಮುಗಿದನಂತರ ಅವನ್ನು ಸಾರ್ವಜನಿಕರು ಬಹಿರಂಗ ಮಾರ್ಕೆಟ್ಟಿನಲ್ಲಿ ಪಡೆಯಬೇಕೆಂದೂ, ಡಿಪೋಗಳಲ್ಲಿ ಅವನ್ನು ಮಾರುವುದಿಲ್ಲವೆಂದೂ ಆಹಾರ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿರುತ್ತಾರೆ

ವಿದ್ಯಾವಂತ ನಿರುದ್ಯೋಗಿಗಳ ಪ್ರಶ್ನೆ

ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳ ವಿವರಣೆ

ಬೆಂಗಳೂರು ೨೧

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಟಿ ಆರ್ ರಾಮಯ್ಯನವರ ಪ್ರಶ್ನೆಗೆ ಉತ್ತರವಿತ್ತು, ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ೫೨ ೫೩ ನೇ ಸಾಲಿನಲ್ಲಿ ೧೩,೫೬೫ ಮಂದಿ ಸ್ತ್ರೀ ಪುರುಷರಿಂದ ಸರ್ಕಾರಿ ನೌಕರಿಗಳಿಗಾಗಿ ಅರ್ಜಿಗಳು ಬಂದಿದ್ದುವೆಂದೂ, ೫೩ ನೇ ಏಪ್ರಿಲ್ಲಿನಿಂದ ೫೪ ನೇ ಫೆಬ್ರವರಿ ೧೯ ನೇ ತಾ|| ವರೆಗೆ ೪೩,೬೮೬ ಮಂದಿ ಅರ್ಜಿಗಳನ್ನು ಹಾಕಿದ್ದರೆಂದೂ ಈ ಸಂಖ್ಯೆಗಳಲ್ಲಿ ಸ್ತ್ರೀಯರೆಷ್ಟು ಮತ್ತು ಪುರುಷರೆಷ್ಟು ಎಂಬ ವಿವರಗಳು ದೊರೆಯುವುದಿಲ್ಲವೆಂದೂ ಹೇಳಿದರು. ೨೨೫೩ ಜನರನ್ನು ಭೇಟಿಗಾಗಿ ಕರೆಸಲಾಗಿದ್ದಿತೆಂದೂ ಕೆಳ ದರ್ಜೆ ನೌಕರಿಗಳಿಗೆ ೨೧೯ ಜನರನ್ನೂ, ಗೆಜೆಟೆಡ್ ನೌಕರಿಗಳಿಗೆ ೧೪ ಜನರನ್ನೂ ಶಿಫಾರಸು ಮಾಡಲಾಗಿದ್ದಿತೆಂದೂ ಅವರು ಹೇಳಿದರು. ಈ ಅಂಕಿ ಅಂಶಗಳಿಂದ ಸಂಸ್ಥಾನದಲ್ಲಿ ನಿರುದ್ಯೋಗ ಹೆಚ್ಚುತ್ತಿರುವುದಿಲ್ಲವೇ ಎಂದು ಕೇಳಲಾಗಿ ಸರ್ಕಾರದವರು ಉತ್ತರವೀಯಲಿಲ್ಲ.

ಬೆಂಗಳೂರು ಹಾಸನದ ಮಾರ್ಗವಾಗಿ ಮದ್ರಾಸು-ಮಂಗಳೂರು ರೈಲು

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಆಯವ್ಯಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡುತ್ತಾ, ಮದರಾಸು ಮತ್ತು ಮಂಗಳೂರು ರೇವು ಪಟ್ಟಣಗಳನ್ನು ಒಂದುಗೂಡಿಸುವಂತಹ ಒಂದು ಬ್ರಾಡ್ ಗೇಜ್ ರೈಲು ಮಾರ್ಗವನ್ನು ನಿರ್ಮಿಸುವ ವಿಷಯವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದೂ, ಆ ಮಾರ್ಗದಲ್ಲಿ ಬೆಂಗಳೂರು ಮತ್ತು ಹಾಸನಗಳನ್ನು ಸೇರಿಸಲಾಗುವುದೆಂದೂ, ಈ ಕಾರ್ಯವನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆ ಅಥವಾ ಕೇಂದ್ರ ಸರ್ಕಾರದ ಮುಂದಿನ ವರ್ಷದ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗುವುದೆಂದೂ ಹೇಳಿದರು. ಬಳ್ಳಾರಿ ಜಿಲ್ಲೆಯಲ್ಲಿ ಕೊಟ್ಟೂರುವರೆಗೆ ಹಾಕಲ್ಪಟ್ಟು ನಿಂತುಹೋಗಿರುವ ರೈಲು ರಸ್ತೆಯನ್ನು ದಾವಣಗೆರೆವರೆಗೂ, ರಾಯದುರ್ಗದಿಂದ ಮತ್ತೊಂದು ರಸ್ತೆಯನ್ನು ಚಿತ್ರದುರ್ಗದವರೆಗೂ ಹಾಕಬಹುದೆಂದೂ ಅವರು ಹೇಳಿದರು

ಪೂರ್ವ ಬಂಗಾಳದಲ್ಲಿ ಸಂಯುಕ್ತ ಪಕ್ಷಕ್ಕೆ ಸ್ಪಷ್ಟ ಬಹುಮತ

ಪೂರ್ವ ಬಂಗಾಳದ ಚುನಾವಣೆಯಲ್ಲಿ ಸಂಯುಕ್ತ ಪಕ್ಷಕ್ಕೆ ಇದುವರೆಗೆ ೧೮೩ ಸ್ಥಾನಗಳು ಲಭಿಸಿ ಅದು ಸ್ಪಷ್ಟ ಬಹುಮತ ಪಡೆದಿದೆ. ವಾಣಿಜ್ಯ ಮತ್ತು ಕೈಗಾರಿಕಾ ಶಾಖಾ ಸಚಿವ ಎಸ್ ಎ ಸಲೀಂ ರವರೂ ಸೋತು ಠೇವಣಿಯನ್ನು ಕಳೆದುಕೊಂಡಿರುತ್ತಾರೆ. ಅವರು ಪ್ರಾಂತದ ಮುಸ್ಲಿಂ ಲೀಗಿನ ಖಜಾಂಚಿಗಳಾಗಿಯೂ ಇರುವರು. ಚುನಾವಣೆಯಲ್ಲಿ ಲೀಗಿಗೆ ಕೇವಲ ೭ ಸ್ಥಾನಗಳು ದೊರೆತಿವೆ

ಪೂರ್ವ ಬಂಗಾಳದಲ್ಲಿ ಸಂಯುಕ್ತ ರಂಗದ ಸರ್ಕಾರ ಸ್ಥಾಪನೆ

ಪಾಕಿಸ್ತಾನ ಪ್ರಧಾನಿಯ ಹೇಳಿಕೆ

ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ನೆನ್ನೆ ಅಲ್ಲಿನ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ, ಪೂರ್ವ ಬಂಗಾಳದ ಚುನಾವಣೆಗಳಲ್ಲಿ ಬಹು ಮತಗಳಿಸಿರುವ ಸಂಯುಕ್ತ ಪಕ್ಷವು ಅಲ್ಲಿನ ಸರ್ಕಾರ ರಚಿಸುವಂತೆ ತಿಳಿಸಲಾಗುವುದೆಂದು ಹೇಳಿದರು. ಅದಕ್ಕೆ ಕೇಂದ್ರ ಸರ್ಕಾರವು ಪೂರ್ಣ ಸಹಕಾರ ನೀಡುವುದೆಂದೂ ಅವರು ತಿಳಿಸಿದರು. ಆದರೆ ಒಂದು ಪ್ರಾಂತದ ಚುನಾವಣೆ ಫಲಿತಾಂಶಗಳ ಆಧಾರದಮೇಲೆ ಇಡೀ ರಾಷ್ಟ್ರದ ರಾಜ್ಯಾಂಗ ಸಭೆಯನ್ನು ವಿಸರ್ಜಿಸಲು ರಾಜ್ಯಾಂಗದಲ್ಲಿ ಅವಕಾಶವಿಲ್ಲವೆಂದೂ ಅವರು ನುಡಿದರು

ಪೂರ್ವ ಬಂಗಾಳದ ಬಹು ಸಂಖ್ಯಾತ ಪಕ್ಷದ ನಾಯಕರು ಆರಿಸಲ್ಪಟ್ಟಕೂಡಲೇ ಅವರಿಗೆ ಅಧಿಕಾರವನ್ನು ವಹಿಸಿ, ಗವರ್ನರರ ಆಳಿಕೆಯನ್ನು ರದ್ದು ಮಾಡಲಾಗುವುದೆಂದು ಅಲ್ಲಿನ ಗವರ್ನರರಾದ ಖಾಲಿಕ್ ಉಜ್ಜಮಾನ್‌ರವರು ಹೇಳಿರುವರು

ಕ್ರೈಸ್ತ ಪಾದ್ರಿಗಳಿಂದ ೧೫ ಲಕ್ಷ ಆದಿವಾಸಿಗಳ ಮತಾಂತರ?

ಮಧ್ಯ ಪ್ರದೇಶ ಪ್ರಾಂತದಲ್ಲಿರುವ ಆದಿವಾಸಿಗಳ ಪೈಕಿ ೧೫ ಲಕ್ಷ ಜನರನ್ನು ಕ್ರೈಸ್ತ ಮತಕ್ಕೆ ಪಾದ್ರಿಗಳು ಸೇರಿಸಿರುವರೆಂದು ಸಂತ ತುಕೋಜಿ ಮಹಾರಾಜ್ ಎಂಬ ಪ್ರಸಿದ್ಧ ಸಮಾಜ ಸುಧಾರಕರು ತಿಳಿಸಿದ್ದಾರೆ. ಅದನ್ನು ತಡೆಗಟ್ಟುವಂತೆ ಅವರು ತಿಳಿಸಿ ಈ ವರ್ಷ ಈ ಕೆಲಸಕ್ಕಾಗಿ ೨೦ ಲಕ್ಷ ಡಾಲರ್ ಹಣವನ್ನು ತರಿಸಿಕೊಳ್ಳಲಾಗಿರುವುದೆಂದು ಹೇಳಿರುತ್ತಾರೆ.

ತಿರುವಾಂಕೂರು ಶಾಸನ ಸಭಾಧ್ಯಕ್ಷತೆಗೆ ಸ್ಪರ್ಧೆ

ತಿರುವಾಂಕೂರು ಶಾಸನ ಸಭೆಯ ಅಧ್ಯಕ್ಷಸ್ಥಾನಕ್ಕೆ ಪ್ರಜಾ ಸಮಾಜವಾದಿ ಪಕ್ಷದ ಗಂಗಾಧರ ಮತ್ತು ಕಮ್ಯೂನಿಸ್ಟ್ ಮತ್ತು ಯು. ಎಫ್. ಎಲ್ ಪಕ್ಷದ ಪರವಾಗಿ ಕೆ ಸಿ ಜಾರ್ಜರವರು ಸ್ಪರ್ಧಿಸಿರುತ್ತಾರೆ.

ಸಕ್ಕರೆ,ಕಬ್ಬಿಣ ಮತ್ತು ಕಾಗದದ ಕಂಪೆನಿಗಳ ಡೈರೆಕ್ಟರ್ ಹುದ್ದೆಗೆ ರಾಜೀನಾಮೆ

ಶಾಸನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿರುವ ಮಂಡ್ಯದ ಶ್ರೀ ಕೆ. ವಿ. ಶಂಕರೇಗೌಡರು ಮೈಸೂರು ಸಕ್ಕರೆ ಕಂಪೆನಿ, ಭದ್ರಾವತಿ ಕಬ್ಬಿಣ ಮತ್ತು ಕಾಗದದ ಕಾರ್ಖಾನೆಗಳ ಕಂಪೆನಿ ಡೈರೆಕ್ಟರ್ ಹುದ್ದೆಗಳಿಗೂ, ವಿಶ್ವೇಶ್ವರಯ್ಯ ನಾಲಾ ಸಮಿತಿ ಸದಸ್ಯತ್ವಕ್ಕೂ ಮತ್ತು ಸರ್ಕಾರದವರು ತಮ್ಮನ್ನು ನೇಮಕ ಮಾಡಿರುವ ಇತರ ಎಲ್ಲಾ ಸಮಿತಿಗಳ ಸದಸ್ಯ ಸ್ಥಾನಗಳಿಗೂ ರಾಜೀನಾಮೆ ಕೊಟ್ಟಿರುತ್ತಾರೆ. ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯತ್ವವನ್ನು ಮಾತ್ರ ಅವರು ಉಳಿಸಿಕೊಂಡಿರುವರು

○ ದಕ್ಷಿಣ ಭಾರತಕ್ಕಾಗಿ ೪೫ ಲಕ್ಷ ಟನ್ ಬರ್ಮಾ ಅಕ್ಕಿಯನ್ನು ದಾಸ್ತಾನು ಮಾಡಲು ಭಾರತ ಸರ್ಕಾರದವರು ನಿಶ್ಚಯಿಸಿರುವರೆಂದು ವರದಿಯಾಗಿದೆ

ವಾರ ಭವಿಷ್ಯ

ತಾ|| [illegible] ರಿಂದ [illegible] ರ ವರೆಗೆ

ಮೇಷ— ಆರೋಗ್ಯಕ್ಕೆ ಕ್ಲೇಶ ಪ್ರವಾಸದಲ್ಲಿ ಅಪಘಾತ ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳ ಮೇಲುಗೈ ತಾ|| [illegible], [illegible] ಖರ್ಚು ಹೆಚ್ಚು ಅಗ್ನಿ ಭಯ

ವೃಷಭ— ಆರೋಗ್ಯ, ಆರ್ಥಿಕ ಸ್ಥಿತಿ ತಾಪದಾಯಕ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳ ಕಾಟ, ಪ್ರವಾಸ ಬೇಡ, ಸಟ್ಟಾ ಲಾಟರಿಗೆ ಕೈ ಹಾಕಬೇಡಿ. ತಾ|| [illegible], [illegible] ಅಶುಭ ವಾರ್ತೆ, ವಿರಹ

ಮಿಥುನ— ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಇಲ್ಲದಿದ್ದರೂ ಗುಪ್ತ ಬಾಧೆ ಪ್ರವಾಸ ಸಾಧಾರಣ ತಾ|| [illegible], [illegible] ವಿಶ್ರಾಂತಿ, ಖರ್ಚು ಹೆಚ್ಚು

ಕರ್ಕ— ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಪ್ರತಿಸ್ಪರ್ಧಿಗಳು ತಣ್ಣಗೆ ಆಗುವರು ಪ್ರವಾಸ ಉತ್ತಮ. ತಾ|| [illegible], [illegible] ಗಲಾಟೆ ಭಯ

ಸಿಂಹ— ಆರೋಗ್ಯ, ಆರ್ಥಿಕ ಸ್ಥಿತಿಯು ಸಾಧಾರಣ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ತೊಂದರೆ, ಮಹತ್ವದ ಕೆಲಸವನ್ನು ಮುಗಿಸಿರಿ. ತಾ|| [illegible] [illegible] ಚಿಂತೆ, ಖರ್ಚು ಹೆಚ್ಚು

ಕನ್ಯಾ— ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರಗತಿ ಮುಂದಿನ ವಾರ ಎಲ್ಲ ಪ್ರಸಂಗಗಳಿಗೂ ಎದೆಗೊಡಬೇಕಾಗುವುದು ಈ ವಾರದಲ್ಲಿ ಪ್ರವಾಸ ಮಾಡಿಕೊಳ್ಳಿರಿ ತಾ|| [illegible] [illegible] ಧನ ಲಾಭ, ಶುಭ ಕಾರ್ಯ

ತುಲಾ— ಎಲ್ಲಿ ವಿಚಾರಿಸಿ ಹೆಜ್ಜೆ ಆರೋಗ್ಯ ಆರ್ಥಿಕ ಸ್ಥಿತಿ ಸಾಧಾರಣ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಿತಶತ್ರು ಬಾಧೆ, ಪ್ರವಾಸ ಉತ್ತಮ ತಾ|| [illegible] [illegible] ಧನ ಲಾಭ ಶುಭ ವಾರ್ತೆ

ವೃಶ್ಚಿಕ— ವಿರೋಧಿಗಳ ಕಾಟ ಆರೋಗ್ಯ ಆರ್ಥಿಕ ಸ್ಥಿತಿ ತೃಪ್ತಿಯಿಲ್ಲ ವ್ಯಾಪಾರ, ಉದ್ಯೋಗ, ನೌಕರಿಗಳ ಸ್ಥಿತಿ ಚಿಂತಾಜನಕ ಪ್ರವಾಸದಲ್ಲಿ ವಿಘ್ನ ತಾ|| [illegible], [illegible] ಆಕಸ್ಮಿಕ ಖರ್ಚು, ಅಲ್ಪರ ಸಹವಾಸ.

ಧನು— ವಿಚಿತ್ರ ಮಾನಸಿಕ ಸ್ಥಿತಿ ಆರೋಗ್ಯಕ್ಕೆ ತಾಪ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಮೋಸ, ಪ್ರವಾಸದಲ್ಲಿ ವಿಘ್ನ ತಾ|| [illegible], [illegible] ದುರ್ಘಟನೆ, ಅಪಘಾತ ಭಯ, ವ್ಯಸನ ವೃತ್ತಿ

ಮಕರ— ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಪ್ರಗತಿ ಪ್ರವಾಸದಲ್ಲಿ ಶುಭ ತಾ|| [illegible], [illegible] ಅಪ್ತರ ಭೇಟಿ, ಧನ ಲಾಭ.

ಕುಂಭ— ಸ್ವೀಕೃತ ಕಾರ್ಯ ಜಯ, ಆರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ, ಪ್ರವಾಸದಲ್ಲಿ ಸುಖ. ತಾ|| [illegible], [illegible] ಶುಭವಾರ್ತೆ, ಧನ ಲಾಭ

ಮೀನ— ಪ್ರವಾಸ, ದಾನ ಧರ್ಮ, ಶುಭ ಕಾರ್ಯಗಳಲ್ಲಿ ಖರ್ಚು ಮಂಗಳ ಕಾರ್ಯ ತಾ|| [illegible], [illegible] ನಿದ್ರಾ ನಾಶ, ವಿರಹ

ನಾಟಾಗಳ ಕಳ್ಳ ರವಾನೆ ನಿಲ್ಲಲಿ

ಅರಣ್ಯಾಧಿಕಾರಿಗಳ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಬೆಂಗಳೂರು [illegible]

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೈಸೂರು ಅರಣ್ಯಾಧಿಕಾರಿಗಳ ಸಮ್ಮೇಳನವನ್ನು ಮೊನ್ನೆ ರಾತ್ರಿ ಆರಂಭಿಸಿ, ಸಂಸ್ಥಾನದ ಅರಣ್ಯಗಳಿಂದ ನಾಟಾ ಮುಂತಾದುವನ್ನು ಕಳ್ಳತನದಲ್ಲಿ ರವಾನಿಸುವುದನ್ನು ತಪ್ಪಿಸುವಂತೆ ನಿರ್ದೇಶಿಸಿದರು ಅನೇಕ ಶಾಸನ ಸಭಾ ಸದಸ್ಯರಿಂದ ನೂರಾರು ದೂರುಗಳು ಬರುತ್ತಿರವುವೆಂದೂ, ಅವುಗಳಲ್ಲಿ ಸತ್ಯಾಂಶವಿರಬೇಕೆಂದೂ ಈ ಸಿಕವನ್ನು ಉಪೇಕ್ಷೆಯಿಂದ ತಳ್ಳಲಾಗದೆಂದೂ ಅವರು ಹೇಳಿದರು.

ಅರಣ್ಯ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಮುತ್ತಣ್ಣನವರು ಮಾತನಾಡಿ ಕಳೆದ ನಾಲ್ಕು ವರ್ಷಗಳಿಂದಲೂ ಅರಣ್ಯಗಳ ಉತ್ಪತ್ತಿಯು ಹೆಚ್ಚಿರುವುದೆಂದೂ ವರ್ಷಕ್ಕೆ [illegible] ಲಕ್ಷ ರೂ ವರಮಾನ ಬರುತ್ತಿರುವುದಾಗಿಯೂ ಹೇಳಿದರು

ಸಂಸ್ಥಾನಕ್ಕೆ ಇಂಡೊನೇಷ್ಯದ ಪತ್ರಿಕಾ ನಿಯೋಗ

ಇಂಡೊನೇಷ್ಯದ [illegible] ಜನ ಪತ್ರಿಕೋದ್ಯಮಿಗಳ [illegible] ಭಾರತದ [illegible] ವಾರ ಸಂಚಾರಕ್ಕಾಗಿ [illegible] ಈ ನಿಯೋಗದವರು ಮೈಸೂರು ಮತ್ತು ಬೆಂಗಳೂರುಗಳಿಗೂ ಭೇಟಿ ಕೊಡಲಿರುವರು

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಈ ತಿಂಗಳು [illegible] ಮತ್ತು [illegible] ತಾ|| ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಸೇರಿ [illegible] ದವರು ವಿಧಿಸಬೇಕೆ ದಿರುವ ಹೊಸ ತೆರಿಗೆಗಳನ್ನು ಕುರಿತು ಪರಿಶೀಲನೆ ನಡೆಸಲಿದೆ

ಈಜಿಪ್ಟಿನ ಮಹಿಳೆಯರ ಉಪವಾಸ ಮುಕ್ತಾಯ

ಈಜಿಪ್ಟಿನ [illegible] ಸಭೆಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ದೊರಕಿಸಿಕೊಡಬೇಕೆಂದು ಒತ್ತಾಯ ಮಾಡಿ ಕಳೆದ ಒಂದು ವಾರದಿಂದ ಉಪವಾಸ ಸತ್ಯಾಗ್ರಹ ಹೂಡಿದ್ದ ಕೈರೋವಿನ ಪತ್ರಿಕಾ ಸಂಪಾದಕಿ ಡೋರಿಯಾ ಷಫಿಕ್ ಮತ್ತು ಆಕೆಯ ಏಳು ಮಂದಿ ಸಹೋದ್ಯೋಗಿಗಳ ಸ್ಥಿತಿಯು ಕ್ಷೀಣವಾಗಿ [illegible] ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು ಈಜಿಪ್ಟಿನ ಅಧ್ಯಕ್ಷ ನಗೀಬರು ಮಹಿಳೆಯರ ಬೇಡಿಕೆ ಬಗ್ಗೆ ಸೂಕ್ತ ಭರವಸೆಯಿತ್ತುದರಿಂದ ಅವರು ಮೊನ್ನೆ ಉಪವಾಸವನ್ನು ಮುಕ್ತಾಯ ಮಾಡಿದರೆಂದು ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ನಾಗಸ್ವರ [illegible] ಕೃಷ್ಣ [illegible] ಸಂಗೀತ [illegible] ನಾಗಸ್ವರ [illegible] ಗಾನ ವಿಹಾರ [illegible] ಹಾಡುಗಳು [illegible] ಕೃಷ್ಣಮೂರ್ತಿಯವರಿಂದ [illegible] ಕರ್ನಾಟಕ ಸಂಗೀತ [illegible] ಭಾಷಣ

ನದಿಯಿಂದ ನೀರು ತರುತ್ತಿದ್ದ ತರುಣಿಯ ಮೇಲೆ ಅತ್ಯಾಚಾರ

ಹೆಗ್ಗಡದೇವನಕೋಟೆ ತಾಲ್ಲೂಕು [illegible] ಹಳ್ಳಿ ಗ್ರಾಮದ [illegible] ಅಣ್ಣಮ್ಮ ಎಂಬ [illegible] ವರ್ಷದ ಹುಡುಗಿಯು ಹೊಳೆಯಿಂದ ನೀರನ್ನು ತರುತ್ತಿದ್ದಾಗ ಆಕೆಯ ಮೇಲೆ ಅತ್ಯಾಚಾರ ನಡೆಯಿತೆಂದು ವರದಿಯಾಗಿದೆ ಈ ಸಂಬಂಧವಾಗಿ ಸಿದ್ಧ [illegible] ದೇವ ಮತ್ತು [illegible] ಎಂಬುವರನ್ನು ದಸ್ತಗಿರಿ ಮಾಡಲಾಗಿದೆ ಹುಡುಗಿಯು ಏಕಾಂಗಿಯಾಗಿ ಬರುತ್ತಿದ್ದಾಗ ಆಕೆಯನ್ನು ಅವರುಗಳು ಮರೆಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅತ್ಯಾಚಾರ ನಡೆಸಿದರೆಂದು ಹೇಳಲಾಗಿದೆ ಹುಡುಗಿಯನ್ನು ಮೈಸೂರಿನ ಚೆಲುವಾಂಬಾ ಆಸ್ಪತ್ರೆಗೆ ಕಳುಹಲಾಗಿರುವುದೆಂದೂ ಗೊತ್ತಾಗಿದೆ

ಪಾರ್ಲಿಮೆಂಟಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದಿದ ಸದಸ್ಯ

ಪಾರ್ಲಿಮೆಂಟಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಮಾತ್ರ ಓದಿದ ಸದಸ್ಯರೊಬ್ಬರಿರುವರೆಂದು ಶ್ರೀ ಎಂ ಎಸ್ ಗುರುಪಾದಸ್ವಾಮಿಯವರ, ಒದಗಿಸಿರುವ ಅಂಕಿಅಂಶಗಳಿಂದ ವ್ಯಕ್ತವಾಗಿದೆ. [illegible] ಜನರು ಮಾಧ್ಯಮಿಕ ಶಾಲೆಯಲ್ಲಿ ಓದಿದವರೆಂದೂ [illegible] ಮಂದಿ ಸ್ಕೂಲ್ ಫೈನಲ್, [illegible] ಜನರ ಇಂಟರ್ ಓದಿದವರೆಂದೂ [illegible] ಸ್ನಾತಕ ಪದವೀಧರನ್ನು ಪಡೆದವರೆಂದೂ [illegible] ಜನರಿಗೆ ವಿದೇಶಗಳಲ್ಲಿ ಶಿಕ್ಷಣ ದೊರೆತಿದೆಯೆಂದೂ ಅವರು ಹೇಳುತ್ತಾರೆ ಸಭೆಯು [illegible] ಸದಸ್ಯರಲ್ಲಿ [illegible] ಮಂದಿ ಶಾಸನ ಸಭೆ ಮತ್ತು ಪೌರಸಭೆಗಳಲ್ಲಿನ ಅನುಭವವುಳ್ಳವರಾಗಿರುವರೆಂದು ಗೊತ್ತಾಗಿದೆ

ಮಹಾರಾಣಿ ಕಾಲೇಜಿನ ಕ್ರೀಡಾ ದಿನೋತ್ಸವ

ನೆನ್ನೆ ಸಂಜೆ ಮಹಾರಾಣಿ ಕಾಲೇಜಿನ ಕ್ರೀಡಾ ದಿನಾಚರಣೆಯು ಡಾ|| ಅದಿಕೇಶವಲುರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಮತಿ ಎಸ್ ಪಾರ್ವತಿಯವರಿಂದ ಪ್ರಾರ್ಥನೆಯಾದಮೇಲೆ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಕೆ ಜಯಲಕ್ಷ್ಮಮ್ಮಣ್ಣಿಯವರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಕೆ ವಸಂತರವರು ವಾರ್ಷಿಕ ವರದಿಯನ್ನು ಓದಿದರು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿ ಅಧ್ಯಕ್ಷರು ಭಾಷಣ ಮಾಡಿ ಸ್ತ್ರೀಯರು ಕ್ರೀಡೆಗಳ ವಿಷಯದಲ್ಲಿ ಮುಂದುವರಿಯುತ್ತಿರುವುದಕ್ಕೆ ಸಂತೋಷಿಸಿ ಅವರುಗಳು ವಿಶ್ವವಿದ್ಯಾನಿಲಯದ ಶಿಕ್ಷಣದಿಂದ ತಮ್ಮ ತಮ್ಮ ಮನೆಗಳಲ್ಲಿ ಸುಖ ಸಂತೋಷಗಳನ್ನು ತುಂಬಿಸಲು ಅರ್ಹರಾಗಬೇಕೆಂದು ಹಿತೋಕ್ತಿಗಳನ್ನಾಡಿದರು ವಂದನಾರ್ಪಣೆ ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಮಾರಾಟ ತೆರಿಗೆ ಮೊಕದ್ದಮೆಗಳು

ಅಪಾದಿತರ ಹೇಳಿಕೆಗಳನ್ನು ಪಡೆಯಬೇಕೆಂದು ಶಗಡೂರರ ಮನವಿ

ಶ್ರೀ ಶಗಡೂರು ರಾಮಚಂದ್ರರಾಯರು ಪತ್ರವೊಂದನ್ನು ಬರೆದು ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟುಗಳ ಗಮನವನ್ನು ಮದರಾಸಿನ ಹೈಕೋರ್ಟಿನಲ್ಲಿ ಆಗಿರುವ ತೀರ್ಪಿನ ಕಡೆಗೆ ಸೆಳೆದಿರುತ್ತಾರೆ [illegible] ರವರ ಜನ ಚರ್ಮದ ವ್ಯಾಪಾರಿಗಳು ವ್ಯಾಪಾರದ ತೆರಿಗೆ ಕೊಡಲಿಲ್ಲವೆಂದು ಅಲ್ಲಿನ ನ್ಯಾಯಾಧೀಶರ ಮುಂದೆ ತೆರಿಗೆ ಅಧಿಕಾರಿಗಳು ಹೂಡಿದ್ದ ಮೊಕದ್ದಮೆಯಲ್ಲಿ ತೆರಿಗೆಗಳ ವಿಚಾರ ಮಾಡಲು ಕ್ರಿಮಿನಲ್ ಕೋರ್ಟಿಗೆ ಅಧಿಕಾರವಿಲ್ಲವೆಂದು ವ್ಯಾಪಾರಿಗಳು ಹೇಳಿದುದನ್ನು ಗಣನೆಗೆ ತೆಗೆದುಕೊಳ್ಳದೆ ಅವರಿಗೆ ದಂಡವನ್ನು ವಿಧಿಸಿದ ಸಂಬಂಧದಲ್ಲಿ ಅವರು ಹೈಕೋರ್ಟಿಗೆ ರಿವಿಷನ್‌ಗಾಗಿ ಅರ್ಜಿ ಹಾಕಲಾಗಿ ಜಸ್ಟಿಸ್ ಗೋವಿಂದ ಮೆನನ್ ಮತ್ತು ಜಸ್ಟಿಸ್ ಬಷೀರ್ ಅಹಮದ್ ಸೈಯಾದ್‌ರವರು ತೀರ್ಪಿತ್ತು ಅಪಾದಿತರು ತಾವು ಅಪರಾಧಿಗಳಲ್ಲವೆಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹಕ್ಕಿರುವುದಾಗಿಯೂ, ಅವರ ಹೇಳಿಕೆಯನ್ನು ತೆಗೆದುಕೊಂಡು ವಿಮರ್ಶೆ ಮಾಡಿ ತೀರ್ಮಾನ ಕೊಡಬೇಕೆಂದು ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ತಿಳಿಸಲಾಗಿದೆಯೆಂದೂ, ಮಾರಾಟ ತೆರಿಗೆ ಶಾಸನದ ಅಪರಾಧಗಳ ಬಗ್ಗೆ ತಾವು ನಿರಪರಾಧಿಗಳೆಂದು ಸಮರ್ಥಿಸಿಕೊಳ್ಳಲು ಹಕ್ಕನ್ನು ಕೊಡದಿರುವುದು ಪಕ್ಷಪಾತವಾಗುವುದೆಂದೂ, ಆದ್ದರಿಂದ ಮದ್ರಾಸಿನ ಮಾರಾಟ ತೆರಿಗೆ ಶಾಸನದ [illegible] ವಿಧಿಯು ರಾಜ್ಯಾಂಗ ಬಾಹಿರವೆಂದೂ ತೀರ್ಮಾನಿಸಿರುತ್ತಾರೆ ಮ್ಯಾಜಿಸ್ಟ್ರೇಟರು ವಿಧಿಸಿದ್ದ ದಂಡವನ್ನು ರದ್ದುಗೊಳಿಸಿರುತ್ತಾರೆ

ಈ ಅಂಶವನ್ನು ಮೈಸೂರು ನ್ಯಾಯಾಧೀಶರುಗಳು ಗಮನಿಸಬೇಕೆಂದು ಶ್ರೀ ಶಗಡೂರರು ತಿಳಿಸಿರುತ್ತಾರೆ

ಪಾಕಿಸ್ತಾನದ ರಾಜ್ಯಾಂಗ ಸಭೆಯಲ್ಲಿ ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರು ಮಾತನಾಡಿ ಪಾಕಿಸ್ತಾನಕ್ಕೆ ತಮ್ಮ ನಿಷ್ಠೆಯ ಬಗ್ಗೆ ಅಲ್ಲಿನ ಸರಕಾರಕ್ಕೆ ಸಂಶಯವಿದ್ದರೆ ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವಂತೆ ಒತ್ತಾಯಪಡಿಸಿರುತ್ತಾರೆ

ಶಂಕರ ಸ್ಯಾನಿಟೋರಿಯಂ ಇನ್ಸ್ಟಿಟ್ಯೂಟ್ ನಂಜನಗೂಡು

ಬೇಸಿಗೆ ಹಿಂದಿ ಶಿಕ್ಷಣ ತರಗತಿಗಳು

ನಂಜನಗೂಡಿನಲ್ಲಿರುವ ಶ್ರೀ ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿನಲ್ಲಿ ಬೇಸಿಗೆ, ಪ್ರಾಥಮ ಮತ್ತು ಮಾಧ್ಯಮ ಹಿಂದೀ ತರಗತಿಗಳನ್ನು ತೆರೆಯಲಾಗುವುದು ವಿದ್ಯಾರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ

ರಾಜಕಮಲ್ ಟಾಕೀಸ್, ಮೈಸೂರು

19-3-54 ರಿಂದ : ಅಮೋಘ 2ನೇ ವಾರ . ಪ್ರತಿ ದಿನ 3 ಪ್ರದರ್ಶನಗಳು

ಮುಖವತ್ತು ಲಕ್ಷ ರೂಪಾಯಿ ವೆಚ್ಚ ಮಾಡಿ ಅನೇಕ ವರ್ಷಗಳಿಂದ ಶ್ರಮಪಟ್ಟು, ತಯಾರಿಸಿರುವ

ಮನೋಹರ [illegible]

★ ಮನೋಹರ ★

ಭೂಮಿಕೆ — ಶಿವಾಜಿ ಗಣೇಶನ್ [illegible] ರಾಜಕುಮಾರಿ,

[illegible] ಗಿರಿಜ, [illegible] ಮುಂತಾದವರು

ಒಲಂಪಿಯಾ ❋ 25 3 54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು

ಅಲ್ಹಾದ್ ಚಿತ್ರಾರವರ ಹಿಂದಿ ವಾಕ್ಚಿತ್ರ ❋ ಮಹಾತ್ಮಾ ❋

ಪಾತ್ರ [illegible] ಮದನಮೋಹನ ಕೃಷ್ಣ, ಡೇವಿಡ್ ಮತ್ತು ರೇಖಾ

ನಿರ್ದೇಶಕ ದತ್ತಾ ಧರ್ಮಾಧಿಕಾರಿ (ಪ್ರಭಾತ್ ಪ್ರಖ್ಯಾತ)

ಇದರ ಜೊತೆಯಲ್ಲಿ "ಆಗಾ ಗೋಸ್ ಟು ಆಫೀಸ್" ಎಂಬ ಹಾಸ್ಯಮಯ

ಎರಡು ರೀಲುಗಳನ್ನು ಪ್ರದರ್ಶಿಸಲಾಗುತ್ತದೆ

ಕಡೆಯ 4 ದಿನಗಳು ಮಾತ್ರ ★ ಪರಿಣೀತಾ ★

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ನಾಶವಾಗಬೇಡಿರಿ !

TRADE MARK

ಪಂಡಿತ ಅಂಬಲೆ ರಾಮಸ್ವಾಮಿ ಅಯ್ಯಂಗಾರ್‌ರವರ

ಸಂತಾನ ಸಿಂಧೂರ (ಭಸ್ಮ ಮಹಿಳೆಯರಿಗೆ)

ಮದನ ವಿಲಾಸ (ಗುಳಿಗೆ ಪುರುಷರಿಗೆ)

ಪಂಡಿತ ಅಯ್ಯಂಗಾರ್‌ರವರು

★ ಭಸ್ಮವು ಬಿಳಿಸೆರಗು ಸಂಬಂಧದ ಹೊಟ್ಟೆನೋವು, ಇದರಿಂದಾಗುವ ಸೊಂಟ ನೋವು, ಕೈ ಕಾಲು, ಸೊಂಟ ನೋವುಗಳನ್ನು ಗುಣಪಡಿಸಿ, ಮಾಸಿಕವನ್ನು ಕ್ರಮಪಡಿಸಿ, ಗರ್ಭಕೋಶದ ರೋಗಗಳನ್ನು ನಿವಾರಿಸುತ್ತದೆ ★ ಗುಳಿಗೆಗಳು ಅಶಕ್ತತೆಯನ್ನು ಕಳೆದು ಸಂತಾನಬಾಹುಳ್ಯಕವಾದ ವೀರ್ಯಾಣುಗಳನ್ನು ವೃದ್ಧಿಪಡಿಸಿ ಸಂತಾನಶಕ್ತಿಯನ್ನು ಹೆಚ್ಚಿಸುತ್ತದೆ

ಹೊಟ್ಟೆನೋವು ಇತ್ಯಾದಿಗಳು ಗುಣವಾಗಿ ಶಾಸ್ತ್ರೋಕ್ತ ಸಂತಾನ ಫಲ ಬೇಕಾದರೆ ಸಂತಾನ ಗಳಿಲ್ಲದವರು 8 ಪೊಟ್ಟಣ ಭಸ್ಮ ಮತ್ತು 1 ಗುಳಿಗೆಗಳ 1 ಸೀಸೆಯನ್ನು ಸೇವಿಸಿರಿ ಬೆಲೆ ರೂ 6 ದಂಪತಿಗಳು ಜೀವನವನ್ನು ಸುಖವಾಗಿ 16-18 ವರ್ಷ ಮಕ್ಕಳಿಲ್ಲದವರೂ ಶಾಸ್ತ್ರೋಕ್ತವಾಗಿ ಪಡೆದಿದ್ದಾರೆ

ತಯಾರಕರು :- ಎ. ರಾಮಸ್ವಾಮಿ ಅಯ್ಯಂಗಾರ್ ಸನ್ ಅಂಡ್ ಕಂಪೆನಿ,

[illegible]

Edited Printed and Published by A R Nagarajan at Sadhvi Press D Subbiah Road, Mysore

ರಿಜಿಸ್ಟರ್ ನಂ 792

|| ವಂದೇ ಮಾತರಂ ||

ಬಿಡಿ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದು ನೋಡಿ
M. V. ಭೋಜಯ್ಯ
ಬಿ.ಎ.
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE : MONDAY 22-3-1954 : ಮೈಸೂರು : ಸೋಮವಾರ ೨೨-೩-೧೯೫೪ [ಸಂಚಿಕೆ ೨೩೦

ಪಾಕಿಸ್ತಾನದ ಪ್ರಧಾನಿ ಮಹ್ಮದಾಲಿ ರಾಜೀನಾಮೆಯೇ?

ಪಾಕಿಸ್ತಾನದ ಪ್ರಧಾನಿಯವರ ರಾಜೀನಾಮೆಯೇ

ಮುಸ್ಲಿಂ ಲೀಗಿನಲ್ಲಿ ಒಡಕು, ಹೊಸ ಪಕ್ಷದ ಉದ್ಭವದ ಸಂಭವ

ಪೂರ್ವ ಬಂಗಾಳದ ಚುನಾವಣೆಯಲ್ಲಿ ಮುಸ್ಲಿಂ ಲೀಗಿಗೆ ಉಂಟಾದ ತೀವ್ರ ಪರಾಜಯದಿಂದ ಕೇಂದ್ರ ಸರ್ಕಾರದ ಮೇಲಾಗಲೀ ಅಥವಾ ದೇಶದ ರಾಜ್ಯಾಂಗದ ಮೇಲಾಗಲೀ ಯಾವ ಪರಿಣಾಮವೂ ಆಗಲಾರದೆಂದು ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ಮೊನ್ನೆ ಹೇಳಿಕೆಯಿತ್ತ ಬಗ್ಗೆ ಮುಸ್ಲಿಂ ಲೀಗಿನಲ್ಲಿ ಭಾರಿ ಬಿಕ್ಕಟ್ಟು ಸಂಭವಿಸಿರುವುದೆಂದೂ, ಅಲ್ಲಿನ ರಾಜಕೀಯದಲ್ಲಿ ಗಮನಾರ್ಹವಾದ ಬದಲಾವಣೆಗಳಾಗಿ ಲೀಗಿನ ವಿರುದ್ಧ ಹೊಸ ರಾಜಕೀಯ ಪಕ್ಷವೊಂದು ಉದಯಿಸಬಹುದೆಂದೂ, ಇಲ್ಲವಾದರೆ ಲೀಗಿನಲ್ಲೇ ಪ್ರಬಲ ಪಂಗಡಗಳಾಗಬಹುದೆಂದೂ ಹೇಳಲಾಗಿದೆ. ಮಹಮದಾಲಿಯವರ ಹೇಳಿಕೆಯ ಬಗ್ಗೆ ಹಲವು ಪ್ರಮುಖ ಮುಸ್ಲಿಂ ಲೀಗಿನವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುವರೆಂದು ಗೊತ್ತಾಗಿದೆ. ಅದರ ಪರಿಣಾಮವಾಗಿ ಪ್ರಧಾನಿಯವರಿಗೆ ದಿಕ್ಕು ತೋರದೆ ಅವರು ಗವರ್ನರ್ ಜನರಲ್ಲರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರೆಂದೂ ಹೇಳಲಾಗುತ್ತಿದೆ.

ಕಾಪಿ ಮಾಡಲು ಅವಕಾಶ ಬೇಡಿ ಪ್ರಿನ್ಸಿಪಾಲರಿಗೆ ಬೆದರಿಕೆ ಪತ್ರ

ಓಂಗೋಲಿನ ಸಿ ಎಸ್ ಆರ್ ಶರ್ಮರ ಕಾಲೇಜಿನ ಪ್ರಿನ್ಸಿಪಾಲರಾದ ಪ್ರಕಾಶಗಿರಿ ರಾಮಮೂರ್ತಿಗಾರುರವರಿಗೆ ಕಳೆದ ೧೬ನೇ ತಾ|| ಬಂದಿರುವ ಪತ್ರದಲ್ಲಿ ಅಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡಲು ಅಥವಾ ಆ ಬಗ್ಗೆ ಇತರ ವಿಧಾನದ ಸಹಾಯ ಹೊಂದಲು ಅವಕಾಶ ಕೊಡಬೇಕೆಂದೂ, ಇಲ್ಲವಾದರೆ ಪ್ರಿನ್ಸಿಪಾಲರನ್ನು ಖೂನಿ ಮಾಡಲಾಗುವುದೆಂದೂ ತಿಳಿಸಲ್ಪಟ್ಟಿದೆ.

ಡಿ. ಎ. ಕೃಷ್ಣಯ್ಯಶೆಟ್ಟರ ಉಪವಾಸ ಮುಕ್ತಾಯ

ಬೆಂಗಳೂರಿನ ಮುನೀಶ್ವರ ದೇವಾಲಯದ ಅರ್ಚಕರ ಮನೆಯನ್ನು ಮರಾಮತ್ತು ಇಲಾಖೆಯವರು ಒಡೆದುಹಾಕಿದ ಸಂಬಂಧದಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡಿದ್ದ ಶ್ರೀ ಡಿ ಎ ಕೃಷ್ಣಯ್ಯ ಶೆಟ್ಟರು ಮೊನ್ನೆ ತಮ್ಮ ನಿರಶನ ವ್ರತವನ್ನು ಮುಕ್ತಾಯ ಮಾಡಿದರು. ಮರಾಮತ್ತು ಇಲಾಖಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಹಲವು ಶಾಸನ ಸಭಾ ಸದಸ್ಯರೊಡನೆ ಬಂದು ಅವರಿಗೆ ಸೂಕ್ತ ಭರವಸೆಯಿತ್ತರು.

ವಿಶ್ವವಿದ್ಯಾಲಯದ ಪಠ್ಯ ಪುಸ್ತಕಗಳ ಪ್ರದರ್ಶನ

ವಿಶ್ವವಿದ್ಯಾಲಯದ ಪಠ್ಯ ಪುಸ್ತಕಗಳ ಪ್ರದರ್ಶನವನ್ನು ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಾಳೆಯಿಂದ ೨೭ ನೇ ತಾ|| ವರೆಗೆ ಪ್ರತಿದಿನ ಬೆಳಗ್ಗೆ ೯|| ಗಂಟೆಯಿಂದ ಸಂಜೆ ೭ ರ ವರೆಗೆ ಮುದ್ರಾಶಿನಲ್ಲಿರುವ ಬ್ರಿಟಿಷ್ ಪುಸ್ತಕಗಳ ಪ್ರಕಾಶಕರು ಏರ್ಪಡಿಸಿರುತ್ತಾರೆ.

ಪಾಕಿಸ್ತಾನದ ಮುಸ್ಲಿಂ ಲೀಗಿನ ವಿಸರ್ಜನೆಗೆ ಗಫಾರ್‌ಖಾನ್ ಕರೆ

ಪಾಕಿಸ್ತಾನದ ರಾಜ್ಯಾಂಗ ಸಭೆಯಲ್ಲಿ ಮೊನ್ನೆ ಖಾನ್ ಅಬ್ದುಲ್ ಗಫಾರ್ ಖಾನರು ಭಾಷಣಮಾಡಿ, ಪಾಕಿಸ್ತಾನದ ಸ್ಥಾಪನೆಯಾದ ವೇಳೆ ಮುಸ್ಲಿಂ ಲೀಗಿನ ಅವಶ್ಯಕತೆ ಇರಲಿಲ್ಲವೆಂದು ತಾವು ಹಿಂದೆಯೇ ಹೇಳಿದುದಾಗಿಯೂ ಈಗ ಪೂರ್ವ ಬಂಗಾಳದಲ್ಲಿ ಚುನಾವಣೆಯಾಗಿ ಮುಸ್ಲಿಂ ಲೀಗಿಗೆ ಆಗಿರುವ ಭಾರಿ ಸೋಲಿನಿಂದ ಆ ಸಂಸ್ಥೆಯು ಪಾಕಿಸ್ತಾನಕ್ಕೆ ಬೇಡವೆಂಬುದು ವ್ಯಕ್ತವಾಗಿರುವುದೆಂದೂ ಹೇಳಿದರು. ಪಾಕಿಸ್ತಾನಕ್ಕೆ ತಮ್ಮ ನಿಷ್ಠೆ ಕುರಿತು ಸಂಶಯಗ್ರಸ್ತರಾದ ಹಲವರ ಬಗ್ಗೆ ಮಾತನಾಡಿ ತಮ್ಮ ಇಡೀ ಜೀವಮಾನವನ್ನೇ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವುದರಲ್ಲೇ ಕಳೆದ ಬಾಯಿತೆಂದೂ, ಅದರಿಂದ ಪಾಕಿಸ್ತಾನವು ಸೃಷ್ಟಿಯಾಯಿತೆಂದೂ, ಬ್ರಿಟಿಷರು ದೇಶವನ್ನು ಬಿಟ್ಟು ಹೋಗುವಂತೆ ತಾವುಗಳು ಮಾಡದಿದ್ದರೆ ಪಾಕಿಸ್ತಾನವು ಸ್ಥಾಪನೆಯಾಗುತ್ತಲೇ ಇರಲಿಲ್ಲವೆಂದೂ ಅವರು ಹೇಳಿ ಇಷ್ಟೊಂದು ಅಗಾಧವಾದ ಸೇವೆ ಮಾಡಿರುವ ತಾವು ಪಾಕಿಸ್ತಾನಕ್ಕೆ ದ್ರೋಹಿಯೇ ಎಂದು ಪ್ರಶ್ನಿಸಿದರು.

ಪಾಕಿಸ್ತಾನವು ತನ್ನ ಪಕ್ಕದಲ್ಲಿರುವ ಪೂರ್ವ ಪಶ್ಚಿಮ ರಾಷ್ಟ್ರಗಳೊಡನೆ ಸ್ನೇಹಪೂರ್ಣ ಸಂಬಂಧವನ್ನು ಹೊಂದಬೇಕೆಂದೂ, ವ್ಯಾಜ್ಯಗಳಿದ್ದರೆ ಪರಸ್ಪರ ಮಾತುಕತೆಗಳಿಂದ ಪರಿಹರಿಸಿಕೊಳ್ಳಬೇಕೆಂದೂ ಅವರು ತಿಳಿಸಿದರು.

ಶೃಂಗೇರಿ ಮಠದ ನೂತನ ಧರ್ಮಾಧಿಕಾರಿ

ಶೃಂಗೇರಿ ಆಸ್ಥಾನ ಪುರೋಹಿತ ವೇ|| ಬ್ರ|| ಅಷ್ಟೆಂಕಲು ವೆಂಕಟಸುಬ್ಬಾವಧಾನಿಯವರನ್ನು ದಿವಂಗತ ವಿದ್ವಾನ್ ಕೆ ಶೇಷಶಾಸ್ತ್ರಿಯವರ ಸ್ಥಾನದಲ್ಲಿ ಶೃಂಗೇರಿ ಮಠದ ಧರ್ಮಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ.

ಅಮೆರಿಕಾ ವಿಮಾನ ಮುರಿದು ೧೪ ಜನರ ಮರಣ

ಅಮೆರಿಕದ ಮಿನ್ನಿಯಾಪೊಲಿಸ್ ಎಂಬಲ್ಲಿ ಆ ದೇಶದ ವಿಮಾನವೊಂದು ಮೊನ್ನೆ ಮುರಿದು ಸುಟ್ಟುಹೋದ ಪರಿಣಾಮವಾಗಿ ಹನ್ನೆರಡು ಜನ ಪ್ರಯಾಣಿಕರು ಮತ್ತು ೭ ಮಂದಿ ಚಾಲಕರು ಮೃತಪಟ್ಟಿರುತ್ತಾರೆ.

ಫ್ರೆಂಚ್ ಭಾರತ ಚಳುವಳಿಯ ದಮನಕ್ಕೆ ಉಗ್ರ ಕ್ರಮ

ಭಾರತದಲ್ಲಿರುವ ಫ್ರೆಂಚ್ ಸ್ವಾಸ್ತ್ಯಗಳನ್ನು ಭಾರತದೊಡನೆ ಐಕ್ಯಗೊಳಿಸುವ ಬಗ್ಗೆ ಚಳುವಳಿಯನ್ನು ಮಟ್ಟ ಹಾಕಲು ಹೆಚ್ಚಿನ ಪೋಲೀಸ್ ಅಧಿಕಾರಿಗಳು ಮತ್ತು ಕಾನ್ಸ್ಟೇಬಲ್ಲುಗಳನ್ನು ನೇಮಿಸಿಕೊಳ್ಳಲಾಗಿರುವುದೆಂದೂ ಜನರನ್ನು ಹೆದರಿಸಲಾಗುತ್ತಿರುವುದೆಂದೂ, ಮೂರು ಮಂದಿಗಿಂತ ಹೆಚ್ಚು ಜನರು ಒಂದು ಕಡೆ ಸೇರುವುದನ್ನು ನಿಷೇಧಿಸಲಾಗಿದೆಯೆಂದೂ ವರದಿಯಾಗಿದೆ. ಚಳುವಳಿಗಾರರಿಗೆ ಚಿತ್ರಹಿಂಸೆ ಕೊಡುತ್ತಿರುವ ಬಗ್ಗೆ ಭಾರತ ಸರ್ಕಾರದವರು ಫ್ರಾನ್ಸ್ ಸರ್ಕಾರಕ್ಕೆ ತೀವ್ರವಾದ ಪ್ರತಿಭಟನೆಯನ್ನು ಸೂಚಿಸಲಿರುವರೆಂದೂ ಹೇಳಲಾಗಿದೆ.

ಪೌರಸಭೆಗಳಿಗೆ ನೀರು ಸರಬರಾಜು ಆಡಳಿತ ವ್ಯವಸ್ಥೆ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಬೆಂಗಳೂರು ೨೨

ಮೊನ್ನೆ ಹಿರಿಯ ಶಾಸನ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ ಚನ್ನಯ್ಯನವರು ಮಾತನಾಡಿ, ಮರಾಮತ್ತು ಇಲಾಖೆಯವರ ವಶದಲ್ಲಿರುವ ನೀರು ಸರಬರಾಜು ಆಡಳಿತದ ಬಾಬನ್ನು ಆಯಾ ಪೌರ ಸಭೆಗಳಿಗೆ ವಹಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿಸಿದರು.

ಪೂರ್ವ ಬಂಗಾಳದಲ್ಲಿ ಮತ್ತೊಬ್ಬ ಸಚಿವರ ಠೇವಣಿ ಹೋಯಿತು

ಪೂರ್ವ ಬಂಗಾಳದ ಚುನಾವಣೆಯಲ್ಲಿ ಸಂಯುಕ್ತ ಪಕ್ಷಕ್ಕೆ ಇದ ವರೆಗೆ ಒಟ್ಟು ೧೮೦ ಸ್ಥಾನಗಳು ದೊರೆತಿವೆ. ಅಲ್ಲಿನ ಸರ್ಕಾರದ ಪರಿಗಣಿತ ಕೋಮಿನ ಪಕ್ಷದ ಸಚಿವ ಪಿ ಎ ಬರ್ಮನ್‌ರಿಯವರೂ ಸೋತು, ಠೇವಣಿಯನ್ನೂ ಕಳೆದುಕೊಂಡಿರುವರು. ಮುಸ್ಲಿಂ ಲೀಗಿಗೆ ಕೇವಲ ಏಳು ಸ್ಥಾನಗಳು ದೊರೆತಿವೆ. ಮಹಮದೀಯ ಮಹಿಳೆಯರಿಗಾಗಿ ಮೀಸಲಾಗಿದ್ದ ೯ ಸ್ಥಾನಗಳೂ ಸಂಯುಕ್ತ ಪಕ್ಷಕ್ಕೇ ಹೋಗಿರುವುದಾಗಿ ಗೊತ್ತಾಗಿದೆ.

ಸ್ವಾಮಿ ಸೀತಾರಾಮರ ಚಿಂತಾಜನಕ ಸ್ಥಿತಿ

ರೈಲ್ವೆ ರಸ್ತೆ ಬಳಿ ತಂತಿ ಕತ್ತರಿಸಿದ ಪ್ರಸಂಗ

ಆಂಧ್ರದಲ್ಲಿ ಪಾನ ನಿರೋಧ ಕ್ರಮವನ್ನು ರದ್ದು ಮಾಡಕೂಡದೆಂಬ ಬಗ್ಗೆ ಗುಂಟೂರಿನಲ್ಲಿ ೧೭ ದಿನಗಳಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಿರುವ ಸ್ವಾಮಿ ಸೀತಾರಾಮರವರ ಸ್ಥಿತಿಯು ಮತ್ತಷ್ಟು ವಿಷಮಿಸಿ ಅವರ ಬಾಯಿಂದ ಮಾತುಗಳು ಸ್ಪಷ್ಟವಾಗಿ ಹೊರಡುತ್ತಿಲ್ಲವೆಂದು ವರದಿಯಾಗಿದೆ. ಅವರಿಗೆ ಮೂರ್ಛೆಯುಂಟಾಗಿ, ಮೂತ್ರವು ಕಟ್ಟಿರುವುದೆಂದೂ ಹೇಳಲಾಗಿದೆ. ಅವರು ಇದ ವಲ್ಲಿಗೆ ಗಾಂಧೀಜಿಯವರ ಶಿಷ್ಯರಾದ ಪ್ರೊ|| ಭನ್ಸಾಲಿಯವರು ಹೊರಟಿದ್ದಾರೆ. ಅವರು ಉಪವಾಸದ ವಿಷಯವನ್ನು ಕೇಂದ್ರ ನಾಯಕರೊಡನೆ ಚರ್ಚಿಸುವರು.

ಅವರ ದೇಹಸ್ಥಿತಿಯು ವಿಷಮಿಸಿರುವ ಸುದ್ದಿಯನ್ನು ಕೇಳಿದ ಕೆಲವರು ವಿಜಯವಾಡ-ಗುಂತಕಲ್ ರೈಲು ಮಾರ್ಗದಲ್ಲಿ ಕಂಬಂ ನಿಲ್ದಾಣದ ಬಳಿ ಸುಮಾರು ಎರಡು ಫರ್ಲಾಂಗು ದೂರ ಟೆಲಿಗ್ರಾಫ್ ಕಂಭಗಳನ್ನು ಕೆಡವಿ ತಂತಿಗಳನ್ನು ಕಡಿದುಹಾಕಿರುವರೆಂದೂ, ಈ ಕಾರಣದಿಂದ ಮೇಲ್ಕಂಡ ಮಾರ್ಗದಲ್ಲಿ ರೈಲು ಸಂಚಾರವನ್ನು ನಿಲ್ಲಿಸಲಾಗಿದೆಯೆಂದೂ ಗೊತ್ತಾಗಿದೆ. ಕರ್ನೂಲು ಜಿಲ್ಲಾ ಪೋಲೀಸ್ ಅಧಿಕಾರಿಗಳು ಶಸ್ತ್ರ ಸಜ್ಜಿತ ಪೋಲೀಸ್ ಪಡೆಯೊಡನೆ ನಂದ್ಯಾಲ್ ಮತ್ತು ಕಂಬಂ ನಿಲ್ದಾಣಗಳಿಗೆ ತೆರಳಿರುವರೆಂದೂ ವರದಿಯಾಗಿದೆ.

○ ಹಾಲೆಂಡಿನಲ್ಲಿ ಶಾಂತಿ ಕಾಲದಲ್ಲೂ ಅಮೆರಿಕದವರು ನೆಲೆಗಳನ್ನು ಸ್ಥಾಪಿಸಿಕೊಳ್ಳುವುದರ ಬಗ್ಗೆ ರಷ್ಯಾವು ಹಾಲೆಂಡಿಗೆ ಪ್ರತಿಭಟನೆಯನ್ನು ಸೂಚಿಸುತ್ತದೆ.

ಹೊಸ ತೆರಿಗೆಗಳ ಬಗ್ಗೆ ಸಂಸ್ಥಾನಾದ್ಯಂತ ಪ್ರತಿಭಟನೆ

ಹೋಟೇಲು ಮಾಲೀಕರ ಸಮ್ಮೇಳನದಲ್ಲಿ ನಿರ್ಣಯ

ಬೆಂಗಳೂರು ೨೨

ಅಖಿಲ ಮೈಸೂರು ಹೋಟೇಲು ಮಾಲೀಕರ ಸಮ್ಮೇಳನದ ಆರಂಭೋತ್ಸವವು ನೆನ್ನೆ ಇಲ್ಲಿ ಶ್ರೀ ಪಾಮಿಡಿ ಸುಬ್ಬರಾಮ ಶೆಟ್ಟರಿಂದ ನೆರವೇರಿಸಲ್ಪಟ್ಟಿತು. ೨೦೦ ಜನ ಪ್ರತಿನಿಧಿಗಳು ಸಭೆಗೆ ಬಂದಿದ್ದರು. ಶ್ರೀ ಕೆ ಟಿ ಅಪ್ಪಣ್ಣನವರು ಅಧ್ಯಕ್ಷತೆ ವಹಿಸಿದ್ದರು. ೭,೫೦೦ ರೂ ಗೆ ಮೀರಿದ ವ್ಯಾಪಾರದ ಮೇಲೆ ಶೇಕಡ ೧೨ ರ ತೆರಿಗೆ ವಿಧಿಸಲು ಸರ್ಕಾರದವರು ಮಾಡಿರುವ ಸಲಹೆಯನ್ನು ಪ್ರತಿಭಟಿಸುವುದೇ ಸಮ್ಮೇಳನದ ಉದ್ದೇಶವಾಗಿತ್ತು. ಶ್ರೀ ಶೆಟ್ಟರು ತಮ್ಮ ಭಾಷಣದಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ದೊರೆಯಬೇಕಾದುದೇ ಪ್ರಜಾಪ್ರಭುತ್ವದಲ್ಲಿರುವ ಧರ್ಮವೆಂದೂ, ಸರ್ಕಾರದವರ ತೆರಿಗೆ ಸಲಹೆಗಳು ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಪ್ರಾಣಾಂತಕ ಪೆಟ್ಟನ್ನು ಕೊಡುವಂತಹುವೆಂದೂ ತಿಳಿಸಿದರು. ಹಲಕೆಲವು ವರ್ಷಗಳ ಹಿಂದೆ ಸಿನಿಮಾ ಮತ್ತು ಹೋಟೇಲುಗಳು ಇದ್ದ ಸ್ಥಿತಿಯಲ್ಲಿ ಈಗ ಇಲ್ಲವೆಂದು ಅವರು ಹೇಳಿದರು. ಗೋಧಿಯಿಂದ ತಯಾರಾಗುವ ಬ್ರೆಡ್ಡಿಗೆ ಮಾರಾಟ ತೆರಿಗೆಯಿಲ್ಲವೆಂದೂ ಆದರೆ ಅದರಿಂದ ಆದ ಇಡ್ಲಿ ಮತ್ತು ದೋಸೆಗೆ ತೆರಿಗೆ ವಿಧಿಸಿರುವುದು ಸರಿಯಲ್ಲವೆಂದೂ ಅವರು ಅಭಿಪ್ರಾಯಪಟ್ಟರು.

○ ಸಂಸ್ಥಾನದಲ್ಲಿ ಆಯವ್ಯಯದ ಕೊರತೆಯನ್ನು ಸರಿದೂಗಿಸಲು ವಿಧಿಸಬೇಕೆಂದಿರುವ ಹೊಸ ಮತ್ತು ಹೆಚ್ಚಿನ ತೆರಿಗೆಗಳನ್ನು ಕುರಿತು ಪರಿಶೀಲನೆ ನಡೆಸಲು ಉಭಯ ಶಾಸನ ಸಭೆಗಳ ಜಂಟಿ ಸಮಿತಿಯು ರಚನೆಯಾಗಲಿದೆ.

ಸಿಂಧ್ ಪ್ರಾಂತ್ಯದ ಮರಾಮತ್ತು ಸಚಿವರ ವಜಾ

ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಗವರ್ನರು ಅಲ್ಲಿನ ಮರಾಮತ್ತು ಶಾಖಾ ಸಚಿವ ಖಾಜಿ ಅಬ್ದುಲ್ ಮನ್ನಾನರವರನ್ನು ನೆನ್ನೆ ವಜಾ ಮಾಡಿದರೆಂದು ವರದಿಯಾಗಿದೆ. ಇದೇ ೨೬ನೇ ತಾ|| ಸೇರಬೇಕಾಗಿದ್ದ ಪ್ರಾಂತ್ಯದ ಶಾಸನ ಸಭೆಯನ್ನು ಅವರ ಅನಿರ್ದಿಷ್ಟಕಾಲದವರೆಗೆ ಮುಂದಕ್ಕೆ ಹಾಕಿರುವರೆಂದೂ ಗೊತ್ತಾಗಿದೆ. ಕಳೆದ ವಾರ ಪ್ರಾಂತ್ಯದ ಶಾಸನ ಸಭೆಯಲ್ಲಿ ಆಯವ್ಯಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ, ಸಭೆಯ ೧೧೧ ಸದಸ್ಯರ ಪೈಕಿ ೭೨ ಜನರು ಅಲ್ಲಿನ ಪೀರ್ ಜಾದಾ ಮಂತ್ರಿಮಂಡಲದ ರಾಜೀನಾಮೆಗೆ ಒತ್ತಾಯಪಡಿಸಿದರೆಂದೂ, ಆದರೆ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ಸಮಾಧಾನ ಹೇಳಿ ಆಯವ್ಯಯವನ್ನು ಅಂಗೀಕರಿಸಬೇಕೆಂದು ತಿಳಿಸಿ, ಇದೇ ೨೬ನೇ ತಾರೀಖು ಮತ್ತೆ ಸಭೆ ಸೇರಿಸಿ ಅಂದು ಪೀರ್ ಜಾದಾರವರು ವಿಶ್ವಾಸದ ಮತ ಕೇಳಬೇಕು ಇಲ್ಲವೇ ಬೇರೆ ಮಂತ್ರಿಮಂಡಲದ ರಚನೆಗೆ ಅವಕಾಶ ಕೊಡಬೇಕೆಂದು ಸಲಹೆ ಮಾಡಿದಾಗ ಅದನ್ನು ಒಪ್ಪಲಾಗಿತ್ತೆಂದೂ ಗೊತ್ತಾಗಿದೆ. ಪ್ರಾಂತದ ಗವರ್ನರು ನೆನ್ನೆಯ ಘಟನೆಯಿಂದ ಪೀರ್ ಜಾದಾ ಮಂತ್ರಿಮಂಡಲಕ್ಕೆ ಒದಗಿದ್ದ ಸಂಕಟವು ತಪ್ಪಿ ಇರ್ಬಹುದೆಂದು ಹೇಳಲಾಗುತ್ತಿದೆ.

ಮುಂದಿನ ವರ್ಷ ಕರ್ನಾಟಕ ಪ್ರಾಂತದ ಆರಂಭ

ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೨೧

ಮುಂದಿನ ವರ್ಷದೊಳಗೆ ಕರ್ನಾಟಕ ಪ್ರಾಂತವು ರಚನೆಯಾಗಿ ಕೆಲಸದಲ್ಲಿ ತೊಡಗುವುದೆಂದೂ, ಪ್ರಾಂತದ ಸ್ಥಾಪನೆಗಾಗಿ ಸತ್ಯಾಗ್ರಹ ಮತ್ತು ಉಪವಾಸಗಳು ನಡೆಯಕೂಡದೆಂದೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಹೇಳುತ್ತಾರೆ. ಪ್ರಾಂತ ವಿಂಗಡಣಾ ಸಮಿತಿ ಮುಂದೆ ಮಂಡಿಸಬೇಕಾಗುವ ಮನವಿಯು ಕರಡನ್ನು ಬರುವ ತಿಂಗಳು ಮಧ್ಯಭಾಗದಲ್ಲಿ ದಾವಣಗೆರೆಯಲ್ಲಿ ಸೇರುವ ವಿವಿಧ ರಾಜಕೀಯ ಪಕ್ಷಗಳ ಸದಸ್ಯರ ಕೂಟದಲ್ಲಿ ಚರ್ಚಿಸಲಾಗುವುದೆಂದು ಅವರು ಹೇಳಿದರು

ಹೈದರಾಬಾದಿನ ವಿಭಜನೆಯಿಂದ ನಿಜಾಮರು ಆಂಧ್ರ ಸಂಸ್ಥಾನದ ರಚನೆ ಸ್ವಲ್ಪ ಸುಲಭವಾಗುವುದೆಂದು ಅವರು ಅಭಿಪ್ರಾಯಪಟ್ಟಿರುವರು. ಸಂಸ್ಥಾನಗಳ ಪುನರ್ರಚನೆಯಾದಾಗ ಕೊಡಗು ಸಂಸ್ಥಾನವು ಅನ್ಯಥಾ ಆಗುವುದೆಂದೂ, ಅದು ಮೈಸೂರಿಗೆ ಸೇರಬೇಕೆಂದೂ ಅವರು ಹೇಳಿದರು

ಮೈಸೂರಿನಲ್ಲಿ ಆಡಳಿತ ಸ್ಥಿತಿ ... ಸರಿಯಾಗಿಲ್ಲವೆಂದು ಅವರು ಹೇಳಿ ಕಾವೇರಿ ... ವಿಚಾರಣೆ ನಡೆಯುವುದಿಲ್ಲವೆಂದೂ, ... ಇಂತಹ ಪರಿಸ್ಥಿತಿಗಳು ಉಂಟಾಗಲು ಜವಾಬ್ದಾರರಾದವರನ್ನು ಮಾತ್ರ ತಾವು ದೂಷಿಸಬೇಕಾಗಿದೆಯೆಂದೂ ತಿಳಿಸಿದರು

ಶ್ವಾಸಕೋಶದ ವ್ಯಾಧಿ ಬಗ್ಗೆ ಸಿಗರೇಟ್ ಕಂಪೆನಿ ಮೇಲೆ ದಾವಾ

ಅಮೇರಿಕದ ಮಿಸ್ಸೌರಿ ನಗರದ ಇರಾಲಿಗ ಎಂಬ ವಿದ್ಯುಚ್ಛಕ್ತಿ ಕೆಲಸಗಾರನು ಅಲ್ಲಿನ ೯ ಹೊಗೆಸೊಪ್ಪು ಕಂಪೆನಿಗಳ ಮೇಲೂ ಹಲವು ಅಂಗಡಿಗಳ ಮೇಲೂ ೯೦ ಸಾವಿರ ಡಾಲರುಗಳ ಪರಿಹಾರಕ್ಕಾಗಿ ದಾವಾ ಹೂಡಲಿರುವನೆಂದು ಗೊತ್ತಾಗಿದೆ. ಕಂಪೆನಿಗಳ ಸಿಗರೇಟುಗಳನ್ನು ಸೇದಿ ತನಗೆ ಶ್ವಾಸಕೋಶದಲ್ಲಿ ವ್ರಣವಾಗಿರುವುದೆಂದೂ ಅವು ಅಪಾಯಕರವಲ್ಲವೆಂದು ಕಂಪೆನಿಯವರು ಭರವಸೆ ಕೊಟ್ಟಿದ್ದರೆಂದೂ ಆತನು ಹೇಳುತ್ತಾನೆ. ೧೯೫೨ರಲ್ಲಿ ಆತನ ಶ್ವಾಸಕೋಶದ ಬಲ ಭಾಗವನ್ನು ತೆಗೆದುಹಾಕಲಾಯಿತೆಂದೂ, ಅದಕ್ಕೆ ಮೊದಲು ಅವನು ದಿನಕ್ಕೆ ೪೦ ಸಿಗರೇಟುಗಳನ್ನು ಸೇದುತ್ತಿದ್ದನೆಂದೂ ಹೇಳಲಾಗಿದೆ. ಈಗ ತನ್ನ ದೇಹಸ್ಥಿತಿ ಕೆಟ್ಟು ಸಂಪಾದನಾ ಶಕ್ತಿಹೀನನಾಗಿ ೨ ವರ್ಷಗಳಿಂದ ವೇತನ ಸಿಗುತ್ತಿಲ್ಲವೆಂದೂ ಔಷಧಿ ಪಥ್ಯಕ್ಕಾಗಿ ೬೦೦ ಡಾಲರು ವೆಚ್ಚವಾಗಿದೆಯೆಂದೂ ಆತನು ಹೇಳಿರುವನು

ಸತ್ಯನಾರಾಯಣ ವ್ರತ ಮತ್ತು ಹೋಮ ಕುಂಡದ ಶುದ್ಧಿ

ಚಾಮುಂಡಿಬೆಟ್ಟದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಶ್ರೀ ಸಹಸ್ರ ಚಂಡೀ ಮಹಾಯಾಗವು ಸಾಂಗವಾಗಿ ನೆರವೇರಿದ ಸಂತೋಷಾರ್ಥವಾಗಿ ನೆನ್ನೆ ಬೆಟ್ಟದ ಮೇಲೆ ಶ್ರೀ ಸತ್ಯನಾರಾಯಣ ಸ್ವಾಮಿ ವ್ರತ ಮತ್ತು ಹೋಮ ಕುಂಡದ ಶುದ್ಧಿ ಕಾರ್ಯಗಳು ನೆರವೇರಿದುವು. ತರುವಾಯ ಭೋಜನ ಕೂಟವು ಏರ್ಪಾಡಾಗಿತ್ತು. ಸಂಸ್ಥಾನದ ಗೃಹ ಸಚಿವ ಶ್ರೀ ಎಚ್ ಸಿದ್ದವೀರಪ್ಪನವರೂ, ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್ ಮೊದಲಾದ ಅಧಿಕಾರಿ ಮತ್ತು ಸಾರ್ವಜನಿಕ ಪ್ರಮುಖರೂ ಆಗಮಿಸಿದ್ದರು. ಕೋಟೆ ಪ್ರಾಂತದ ದೇವೀ ಭಕ್ತ ಶ್ರೀ ವಿ ಶ್ರೀನಿವಾಸರಾಯರು, ಶ್ರೀ ಎಂ ಆರ್ ಸಿ ಬಸಪ್ಪ, ರಾಜಧಾನಿಯ ಮಾಜಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಜಿ ಜನಾರ್ಧನಾಯ್ಯಂಗಾರ್ ಅಭ್ಯಾಗತರನ್ನು ಸ್ವಾಗತಿಸಿದರು

ಉಪನಯನ

ರಾಜಧಾನಿಯಲ್ಲಿರುವ ನಿವೃತ್ತ ಅಬ್ಕಾರಿ ಗುಮಾಸ್ತೆ ಶ್ರೀ ಬಿ ವೆಂಕಟೇಶಯ್ಯನವರು ತಮ್ಮ ಮೊಮ್ಮಗ ಚಿ|| ರಾ|| ಸ. ವೆಂಕಟಸುಬ್ಬಯ್ಯನಿಗೆ ನೆನ್ನೆ ನಾಗಮಂಗಲದಲ್ಲಿ ಉಪನಯನವನ್ನು ನಡೆಸಿದರು

ಶೃಂಗೇರಿ ಜಹಗೀರಿನ ರದ್ದಿಯಾತಿಗೆ ವಿರೋಧ

ಬೊಂಬಾಯಿ ಸಮಿತಿ ಅಧ್ಯಕ್ಷರ ಹೇಳಿಕೆ

ಬೊಂಬಾಯಿನ ಶೃಂಗೇರಿ ರಕ್ಷಣಾ ಸಮಿತಿ ಅಧ್ಯಕ್ಷರಾದ ಶ್ರೀ ಎನ್ ಎಸ್ ಗಬ್ಬೂರುರವರು ಪತ್ರಿಕಾ ಸಮ್ಮೇಳನ ನಡೆಸಿ, ಮೈಸೂರು ಸರಕಾರದವರು ಶೃಂಗೇರಿ ಜಹಗೀರು ರದ್ದಿಯಾತಿ ಶಾಸನವನ್ನು ತರಕೂಡದೆಂದು ಹೇಳಿದ್ದಾರೆ. ಎಷ್ಟೇ ಪುರಾತನ ಕಾಲದ್ದಾದರೂ, ಎಂತಹ ಸಂಸ್ಥೆಯನ್ನಾದರೂ ಯಾವ ಸರ್ಕಾರವಾದರೂ ಕಿತ್ತುಹಾಕಬಹುದೆಂದೂ, ಆದರೆ ಅಂತಹ ಸಂಸ್ಥೆಗಳನ್ನು ಕಟ್ಟುವುದು ಕಷ್ಟಸಾಧ್ಯವೆಂದೂ ಅವರು ಹೇಳುತ್ತಾರೆ. ಇಡೀ ಭಾರತದಲ್ಲೇ ಪರಿಗಣಿತವಾಗಿ ... ಶೃಂಗೇರಿಯ ದರಂತಹ ಪ್ರಾಚೀನ ಸಂಸ್ಥೆಗಳ ಭವಿಷ್ಯವನ್ನು ಶಾಸನ ಶಕ್ತಿಯ ಬಹುಸಂಖ್ಯೆಯಿಂದ ನಿರ್ಧರಿಸಬಾರದೆಂದೂ, ಇದು ಬರಲು ... ಸಂಸ್ಥೆಗಳ ಮೂಲಕ ಭಾರತದಲ್ಲೆಲ್ಲಾ ಹಿಂದೂ ವೇದಾಂತ ಮತ್ತು ಸಂಸ್ಕೃತಿಯನ್ನು ಪ್ರಚುರ ಪಡಿಸಬೇಕೆಂದೂ ಅವರು ಸಲಹೆ ಮಾಡಿದ್ದಾರೆ

ಪೆರಂಬೂರಿನಲ್ಲಿ ರೈಲ್ವೆ ಗಾಡಿ ಕಾರ್ಖಾನೆ ಶಾಲೆ

ಮದ್ರಾಸು ಬಳಿ ಪೆರಂಬೂರಿನಲ್ಲಿ ರೈಲ್ವೆ ಗಾಡಿಗಳ ತಯಾರಿಕಾ ಕಾರ್ಖಾನೆಯ ಜೊತೆಗೆ ಅದಕ್ಕೆ ಸಂಬಂಧಿಸಿದ ಶಿಕ್ಷಣ ಶಾಲೆಯ ಪ್ರಾರಂಭೋತ್ಸವವನ್ನು ಕೇಂದ್ರ ರೈಲ್ವೆ ಮಂತ್ರಿ ಅಳಗೇಶನ್‌ರವರು ನೆರವೇರಿಸಿದರು. ಅಲ್ಲಿ ೭ ಗಂಟೆಯೊಳಗೆ ಒಂದು ಗಾಡಿ ... ವರ್ಷಕ್ಕೆ ೩೫೦ ಗಾಡಿಗಳನ್ನು ತಯಾರಿಸುವುದೆಂದು ಹೇಳಲಾಗಿದೆ

೧೨೫ ಕೋಟಿ ರೂ. ಮುಚ್ಚಿಟ್ಟ ವರಮಾನದ ಪತ್ತೆ

೧೯೫೦ರ ನಂತರ ಸಂಪಾದಿಸಿದ ರಹಸ್ಯ ವರಮಾನಗಳ ಬಗ್ಗೆ ಪತ್ತೆ ಕರುಹಾಗಿಯೇ ಸ್ವಾಧೀನ ಮಾಡಬೇಕೆಂದು ಭಾರತ ಸರ್ಕಾರದವರು ನಡೆಸಿದ ಚಳುವಳಿ ... ಯಾಗಿ ಇದುವರೆಗೆ ೧೨೫ ಕೋಟಿ ರೂ ಗಳಷ್ಟರ ವಿಷಯವು ಪತ್ತೆಯಾಗಿರುವುದೆಂದು ವರದಿಯಾಗಿದೆ. ಈ ಸಂಬಂಧವಾಗಿ ರಚಿತವಾಗಿರುವ ಸಮಿತಿಯು ಒಟ್ಟು ೧೬೬೬ ವಿದ್ಯಮಾನಗಳಲ್ಲಿ ೧೦೦೦ ಗಳನ್ನು ಇತ್ಯರ್ಥಗೊಳಿಸಿದೆ

ಆತ್ಮ ವಿಚಾರ

ಮೈಸೂರು ಆತ್ಮ ವಿಚಾರ ಮಂದಿರದ ಅಧ್ಯಕ್ಷರಾದ ಶ್ರೀ ಎಂ. ಎಲ್ ನಾಗಣ್ಣನವರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಆತ್ಮ ವಿಚಾರ ಎಂಬ ಕನ್ನಡದ ಮಾಸ ಪತ್ರಿಕೆಯ ೧ನೇ ಸಂಪುಟದ ೯ನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಮೈಸೂರಿನಲ್ಲಿ ಸಂಸ್ಕೃತಿ ಪ್ರಚಾರ ಕಾರ್ಯಕ್ರಮ ಕೈಗೊಂಡಿರುವುದನ್ನು ಪ್ರಶಂಸಿಸಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಿಗೆ ಶ್ರೀ ನಾಗಣ್ಣನವರು ಬರೆದಿರುವ ಪತ್ರವು ಅದರಲ್ಲಿ ಪ್ರಕಟವಾಗಿದೆ. ಇತರ ವಿಷಯಗಳ ಜೊತೆಗೆ ವೀರಶೈವ ಮತ್ತು ಆದರ ಮಠೀಯರ ವಿಮರ್ಶೆ ಎಂಬ ಸಂಪಾದಕೀಯ ಲೇಖನವೂ ಇದೆ

ಅಭ್ಯುದಯ

ರಾಜಧಾನಿಯ ಮಹಾಜನ ಹೈಸ್ಕೂಲಿನ ವಿದ್ಯಾರ್ಥಿ ಸಂಘದವರು ಪ್ರಕಟಿಗೊಳಿಸುವ ಅಭ್ಯುದಯ ಎಂಬ ಕನ್ನಡ ಪತ್ರಿಕೆಯು ನಮ್ಮ ಕೈ ಸೇರಿದೆ. ಪುಸ್ತಕ ರೂಪದಲ್ಲಿರುವ ಈ ಸಂಚಿಕೆಯಲ್ಲಿ ೨೨ ವಿಷಯಗಳ ಬಗ್ಗೆ ಲೇಖನ, ಕವನ, ಕಥೆ ಮುಂತಾದವು ಇವೆ. ಶ್ರೀ ಜಿ ... ಸುಬ್ಬರಾಯರು ಇದರ ಸಂಪಾದಕರು. ಬೆಲೆ ೪ ಆಣೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭–೫ ಕೊಳಲು ೭–೩೦ ರಿಕಾರ್ಡು ಸಂಗೀತ ಮಧ್ಯಾಹ್ನ ೧–೪೦ ಮತ್ತು ೧–೫೦ ಸಿಟೀಲು. ೨ ಮಹಿಳಾ ವಿಚಾರ ಕನ್ನಡದಲ್ಲಿ ಚರ್ಚೆ—ಕಾಮೇಶ್ವರಮ್ಮ, ಎ ಟಿ ಅಕ್ಕಮ್ಮ, ಮುಂತಾದವರು ವಿರಾಮ ವಿಚಾರ ಇತ್ಯಾದಿ. ಸಂಜೆ ೯–೧೦ ಮತ್ತು ೯–೧೫ ಎಂ, ಬಿ ಮೂರ್ತಿ ವೀಣೆ ೬ ಬಾಲ ಜಗತ್ತು ೭–೫ ಹಳ್ಳಿ ಹಾಡುಗಳ ಜಟ್ಟ ೮ ಮತ್ತು ೯–೩೦ ಅಳಿಕಾದತ್ತ-ಸಂಗೀತ ೫–೩೦ ದೇಶ ರಾಗ ಮಾಲಿಕೆ

ಅಧ್ಯಕ್ಷ ಚುನಾವಣೆಯಲ್ಲಿ ಚಿಯಾಂಗರ ಪರಾಜಯ

ರಾಷ್ಟ್ರೀಯ ಚೀಣದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಮೊದಲನೇ ಎಣಿಕೆಯಲ್ಲಿಯೇ ಈಗಿನ ಅಧ್ಯಕ್ಷರಾಗಿರುವ ಮಾರ್ಷಲ್ ಚಿಯಾಂಗ್ ಕೈಷೇಕರು ಪರಾಜಿತರಾಗಿರುವರು

ವಿಶ್ವದ ಭಾಷೆಗಳ ಗಣನೆ

ಜಗತ್ತಿನಲ್ಲಿ ಸಮಾರು ೩ ಸಾವಿರ ಭಾಷೆಗಳಿವೆಯೆಂದೂ ಭಾಷೆಗಳ ಸಂಖ್ಯೆಯು ಹೆಚ್ಚುತ್ತಾ ಇದೆಯೆಂದು ಯುನೆಸ್ಕೊ ಪತ್ರಿಕೆಯೊಂದು ವರದಿ ಮಾಡಿದೆ ೧೩ ಪ್ರಮುಖ ಭಾಷೆಗಳ ಪೈಕಿ ಚೀನೀ ಭಾಷೆಯು ಅತ್ಯಧಿಕ ಜನರು ಮಾತಾಡುವ ಭಾಷೆಯಾಗಿರುತ್ತದೆ. ಎರಡನೆಯ ಸ್ಥಾನ ಇಂಗ್ಲಿಷಿಗಿದೆ. ಬಳಿಕ ಅನುಕ್ರಮವಾಗಿ ಹಿಂದಿ, ಉರ್ದು ರಷ್ಯ ಸ್ಪಾನಿಷ್, ಜರ್ಮನ್, ಜಪಾನಿ ಮತ್ತು ಫ್ರೆಂಚ್ ಭಾಷೆಗಳಿಗೆ ಪ್ರಾಧಾನ್ಯತೆ ಇದೆ. ಇಂಗ್ಲಿಷ್, ಫ್ರೆಂಚ್, ರಷ್ಯ ಮತ್ತು ಚೀನೀ ಭಾಷೆಗಳು ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಾಗಿರುತ್ತವೆ

ರಾಜೀನಾಮೆ ಕೊಡದಂತೆ ಲೀಗ್ ಸದಸ್ಯರಿಗೆ ಸೂಚನೆ

ಪೂರ್ವ ಬಂಗಾಳದಲ್ಲಿ ಮುಸ್ಲಿಂ ಲೀಗ್ ಪಕ್ಷಕ್ಕೆ ಭಾರೀ ಸೋಲುಂಟಾಗಿರುವುದರಿಂದ ಪಾಕಿಸ್ತಾನದ ರಾಜ್ಯಾಂಗ ಸಭೆಯಲ್ಲಿರುವ ಪೂರ್ವ ಬಂಗಾಳದ ಲೀಗ್ ಸದಸ್ಯರು ರಾಜೀನಾಮೆ ಕೊಡದಂತೆ ಲೀಗಿನ ಕಾರ್ಯಕಾರಿ ಸಮಿತಿಯು ಸೂಚಿಸಿರುತ್ತದೆ. ೭೫ ಮಂದಿ ಸದಸ್ಯರಲ್ಲಿ ಪೂರ್ವ ಬಂಗಾಳದವರು ೪೪ ಜನರು ಇರುವರು

ವಿವಾಹ ಮಹೋತ್ಸವಗಳು

ಶ್ರೀ ಅರಸ ಗಂಗಯ್ಯನವರು ತಮ್ಮ ಸಹೋದರರಾದ ಶ್ರೀ ಎ ಆರ್ ರಾಮಯ್ಯನವರ ಕುಮಾರ ಚಿ|| ರಾ|| ಸುಬ್ರಹ್ಮಣ್ಯನಿಗೆ ಅರಕೆರೆ ತಾಲ್ಲೂಕು ಮಾಗಡಿನ ಶ್ರೀ ನಾಗಸುಬ್ರಹ್ಮಣ್ಯಂರವರ ಜ್ಯೇಷ್ಠ ಕುಮಾರಿ ಸೌ|| ನಾರಾಯಣಿರವರನ್ನು ತಂದುಕೊಂಡು ನೆನ್ನೆ ಮಾಂಗಲ್ಯನಲ್ಲಿ ವಿವಾಹವನ್ನು ನೆರವೇರಿಸಿದರು

ಪೂರ್ವ ಪಂಜಾಬಿನ ರಾಜಧಾನಿ ಚಂಡೀಘಡದಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರ್‌ರಾಗಿರುವ ಶ್ರೀ ಎಸ್ ಎ ಶಿಕ್ಕೇರಿಯವರು ತಮ್ಮ ಕುಮಾರಿ ಸೌ|| ವಿಜಯಾರವರನ್ನು ತುಮಕೂರಿನ ಶ್ರೀ ಎ ಕೃಷ್ಣಪ್ಪನವರ ಪುತ್ರ ... ಮತ್ತು ಭಾರತದ ವರಮಾನ ತೆರಿಗೆ ಇಲಾಖೆ ಅಧಿಕಾರಿಗಳೂ ಆದ ಶ್ರೀ ಎ ಕೆ ರಾಮಚಂದ್ರಪ್ರಭುರವರಿಗೆ ಕೊಟ್ಟು ನೆನ್ನೆ ವಾಣಿವಿಲಾಸ ಮೊಹಲ್ಲೆಯ ಶಿಕ್ಕೇರಿ ಹೌಸ್ ಭವನದಲ್ಲಿ ವಿವಾಹವನ್ನು ನೆರವೇರಿಸಿದರು.

ವಯಸ್ಕರ ಶಿಕ್ಷಣ ಕೇಂದ್ರ

ರಾಜಧಾನಿಯ ಅಶೋಕಪುರದಲ್ಲಿ ಕಳೆದ ಗುರುವಾರ ನಗರದ ವಯಸ್ಕರ ಶಿಕ್ಷಣ ಸಮಿತಿಯವರು ಒಂದು ಶಿಕ್ಷಣ ಕೇಂದ್ರವನ್ನು ಆರಂಭಿಸಿದರು. ಪೌರಸಭಾ ಸಭಾಸದರು ಅಧ್ಯಕ್ಷತೆ ವಹಿಸಿ ಅದರ ಆರಂಭೋತ್ಸವವನ್ನು ನೆರವೇರಿಸಿದರು. ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಕೆ. ಸಿದ್ದಯ್ಯನವರು ಸ್ವಾಗತ ಭಾಷಣ ಮಾಡಿದರು. ಶಿಕ್ಷಣ ಸಮಿತಿಯ ಪ್ರಾಂತಾಧಿಕಾರಿಗಳಾದ ಶ್ರೀ ಬಿ ವಿ ಸತ್ಯನಾರಾಯಣರವರು ಕೇಂದ್ರದ ಕೆಲಸಕಾರ್ಯಗಳನ್ನು ವಿವರಿಸಿದರು. ಶ್ರೀಗಳಾದ ಜಿ ಎಸ್. ರಾಮಕೃಷ್ಣಯ್ಯ ಮತ್ತು ತಿರುಮಲಯ್ಯನವರು ಮಾತನಾಡಿದ ನಂತರ, ಸಂಗೀತ ಗೋಷ್ಠಿಯೂ ನಡೆಯಿತು.

ಪ್ರಥಮ ಪಂಚವಾರ್ಷಿಕ ಯೋಜನೆ

(ಸರಳ, ಸರಸ ಕನ್ನಡದಲ್ಲಿ ಅದರ ಪರಿಚಯ)

ಪ್ರೊ|| ಜಿ ಎನ್ ಕೃಷ್ಣಮೂರ್ತಿಯವರಿಂದ

★

ಕಾಲೇಜು ವಿದ್ಯಾರ್ಥಿಗಳಿಗೂ, ಸಾರ್ವಜನಿಕರಿಗೂ ಉಪಯುಕ್ತವಾದ ಪುಸ್ತಕ ಬೆಲೆ ಹನ್ನೆರಡಾಣೆ

ಕೃಷ್ಣಾ ಕಂಪೆನಿ

ನೂರಡಿ ರಸ್ತೆ, ಮೈಸೂರು

ಉಪಾಧ್ಯಾಯರ ಕಾಲೇಜಿನಲ್ಲಿ 'ಮೈಸೂರು ಪ್ರಾಜೆಕ್ಟ್' ಪ್ರದರ್ಶನ

ಮೈಸೂರು ೨೧

ಪಾಠ ಪ್ರವಚನಗಳನ್ನು ಅಭ್ಯಸಿಸಲು ಸ್ವತಃ ವಿಷಯ ಸಂಗ್ರಹಣೆ ಮತ್ತು ಸುಲಭ ರೀತಿಯಲ್ಲಿ ತಕ್ಕ ಉಪಕರಣಗಳನ್ನು ತಯಾರಿಸಿಕೊಳ್ಳುವುದು ಮುಂತಾದುವುಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವೀಯಲು ನಗರದ ಉಪಾಧ್ಯಾಯರ ಕಾಲೇಜಿನವರು ಕಳೆದ ಸೆಪ್ಟೆಂಬರಿನಿಂದ ಮೈಸೂರು ಪ್ರಾಜೆಕ್ಟ್ ಎಂಬ ಒಂದು ಯೋಜನೆಯನ್ನು ಕೈಗೊಂಡಿದ್ದರು. ಇದರ ಅಂಗವಾಗಿ ವಿದ್ಯಾರ್ಥಿಗಳು ನಗರದ ಅನೇಕ ಶಾಲೆಗಳ ಮತ್ತು ಸಂಸ್ಥಾನದ ಕೈಗಾರಿಕೆ ವಾಣಿಜ್ಯ ಮುಂತಾದ ವಿಷಯಗಳ ಅಂಕಿ ಅಂಶಗಳ ಸಂಗ್ರಹಣೆಯನ್ನು ಮಾಡಿದರು. ಅಲ್ಲದೆ ಪುರಸಭೆ, ಕೋರ್ಟು ಮುಂತಾದ ಸ್ಥಳಗಳಿಗೆ ಭೇಟಿಯಿತ್ತು ಅಲ್ಲಿನ ಕಾರ್ಯಕಲಾಪಗಳನ್ನು ಸ್ವತಃ ಪರಿಚಯ ಮಾಡಿಕೊಂಡರು. ಅವರ ಎಲ್ಲ ಪರಿಶ್ರಮದ ಫಲವಾಗಿ ನೆನ್ನೆ ಒಂದು ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ ಸಿ ದೇವೇಗೌಡರು ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅದನ್ನು ತೋರಿಸಿದರು. ವಿವಿಧ ಕ್ಷೇತ್ರಗಳಲ್ಲಿ ಮೈಸೂರಿನ ಪ್ರಗತಿಯನ್ನು ಮನವರಿಕೆಯಾಗುವಂತೆ ವಿದ್ಯಾರ್ಥಿಗಳು ಸ್ವತಃ ಬರೆದ ಚಿತ್ರಗಳ ಮೂಲಕ ಪ್ರದರ್ಶಿಸಿದ್ದರು. ಗಣಿತದ ಅನೇಕ ಕಠಿಣವಾದ ಪ್ರಶ್ನೆಗಳಿಗೆ ಸುಲಭವಾದ ರೀತಿಯಲ್ಲಿ ಉತ್ತರಗಳನ್ನು ತಿಳಿಸುವ ಸಾಧನಗಳನ್ನೂ ಪ್ರದರ್ಶನದಲ್ಲಿ ಇಡಲಾಗಿತ್ತು

ತಿರುವಾಂಕೂರಿನಲ್ಲಿ ಮಾಧ್ಯಮಿಕ ಶಾಲಾ ಶುಲ್ಕ ರದ್ದು

ತಿರುವಾಂಕೂರು - ಕೊಚ್ಚಿ ಸಂಸ್ಥಾನದಲ್ಲಿ ಮಾಧ್ಯಮಿಕ ಶಾಲಾ ಶುಲ್ಕವನ್ನು ರದ್ದು ಮಾಡುವ ವಿಷಯವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ವರದಿಯಾಗಿದೆ

ಗಾಂಧಿ ಕೇಂದ್ರಕ್ಕೆ ಗೃಹ ದಾನ

ಒರಿಸ್ಸಾ ಪ್ರಾಂತದ ಗೌರ್ನರಾದ ಪಿ ಎಸ್ ಕುಮಾರಸ್ವಾಮಿ ರಾಜಾರವರು ರಾಜಪಾಳಯದಲ್ಲಿರುವ ತಮ್ಮ ಗೃಹವನ್ನು ಗಾಂಧಿ ಕಲಾ ಮಂದಿರಕ್ಕೆ ದಾನವಾಗಿ ಒಪ್ಪಿಸಿಕೊಡುವ ಸಮಾರಂಭವು ನೆನ್ನೆ ನಡೆದು ಮದರಾಸಿನ ಗೌರ್ನರ್ ಶ್ರೀಪ್ರಕಾಶರು ಈ ಬಗ್ಗೆ ಒಂದು ದಾನದ ಶಿಲಾ ಸ್ಥಾಪನೆ ಮಾಡಿದರು. ಕೇಂದ್ರ ವಾಣಿಜ್ಯ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಅಧ್ಯಕ್ಷತೆ ವಹಿಸಿದ್ದರು. ಆ ಗೃಹದಲ್ಲಿ ಸಂಸ್ಕೃತಿಯ ಕೇಂದ್ರವನ್ನು ಸ್ಥಾಪಿಸಿ ಆ ಮೂಲಕ ಗಾಂಧೀಜಿಯವರ ಸಂದೇಶಗಳನ್ನು ಸಾರಲು ಏರ್ಪಡಾಗಿದೆ

ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟ್ ನಂಜನಗೂಡು

ಬೇಸಿಗೆ ಹಿಂದಿ ಶಿಕ್ಷಣ ತರಗತಿಗಳು

ನಂಜನಗೂಡಿನಲ್ಲಿರುವ ಶ್ರೀ ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟನಲ್ಲಿ ಬೇಸಿಗೆ, ಪ್ರಾಥಮ ಮತ್ತು ಮಾಧ್ಯಮ ಹಿಂದೀ ತರಗತಿಗಳನ್ನು ತೆರೆಯಲಾಗುವುದು. ವಿದ್ಯಾರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ.

ನರಿ ಕಾಮ ಕೆಮ್ಮಿಗೆ ಖಾತರಿಯಾದ ಔಷಧಿ

o o o

(Whooping Cough Remedy)

ಕಾಯಿಕೆಮ್ಮಿಗೆ ಖಾತರಿಯಾದ ಔಷಧ ದೊರೆಯುತ್ತದೆ. ಬೆಲೆ ರೂ 2-8-0

ಆರ್. ಎಸ್. ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ಅಗ್ರಹಾರ, ಮೈಸೂರು

Edited, Printed and Published by A. R. Nagarajan at Sadhvi Press D.Subbaiah Road, Mysore

ಟೆಲಿಫೋನ್ ನಂ 792

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಬಂದೇನೋಡಿ
M. V. ಭೋಜಯ್ಯ
ಬಿ ವಿ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

|| ವಂದೇ ಮಾತರಂ ||

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI · LEADING NATIONALIST DAILY OF MYSORE

ಸಂಪುಟ ೮೨] MYSORE · TUESDAY 23-3-1954 : ಮೈಸೂರು : ಮಂಗಳವಾರ ೨೩-೩-೧೯೫೪ [ಸಂಚಿಕೆ ೨೩೦

ಕೇಂದ್ರ ಸರ್ಕಾರದಿಂದ ತೆರಿಗೆ ರಿಯಾಯಿತಿ-ವಿನಾಯಿತಿ

ಮೈಸೂರಿನಲ್ಲಿ ಪ್ರಖ್ಯಾತ ಟೆನಿಸ್ ಆಟಗಾರರ ಪಂದ್ಯಗಳು

ಮೈಸೂರು ೨೧

ಬರುವ ತಿಂಗಳು ೫ ರಿಂದ ೨೫ ನೇ ತಾ|| ವರೆಗೆ ಮೈಸೂರಿನ ಕಾಸ್ಮಾಪಾಲಿಟನ್ ಕ್ಲಬ್ಬಿನವರು ಟೆನಿಸ್ ಪಂದ್ಯಗಳನ್ನು ಏರ್ಪಡಿಸಿರುವರು. ೫ ರಿಂದ ೧೫ ನೇ ತಾ|| ವರೆಗೆ ನಾನ್‌ಮೆಚಲಿಸ್ಟ್ ಆಟಗಾರರ ಮತ್ತು ೧೫ ರಿಂದ ೨೫ನೇ ತಾ|| ವರೆಗೆ ಮೊದಲಿಸ್ಟರ ಪಂದ್ಯಗಳನ್ನು ನಡೆಸಲು ಯೋಚಿಸಲಾಗಿದೆ. ಈ ವರ್ಷ ಪ್ರಥಮವಾಗಿ ಮಹಿಳೆಯರ ಪಂದ್ಯಗಳನ್ನೂ ಏರ್ಪಡಿಸಲಾಗುವುದು. ಇದರಲ್ಲಿ ಅಖಿಲ ಭಾರತ ಪ್ರಖ್ಯಾತಿಯ ಸುಮಂತ ಮಿಶ್ರ, ಆರ್ ಕೃಷ್ಣನ್ ಮತ್ತು ಸ್ಥಳೀಯ ಛಾಂಪಿಯನ್ನರುಗಳು ಭಾಗವಹಿಸಲಿದ್ದಾರೆಂಬುದಾಗಿ ಸಂಚಾಲಕರಾದ ಡಾ|| ಸಂಜೀವರಾವ್ ಮತ್ತು ಎ ವಿ ಶ್ರೀಕಂಠಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ಕಳ್ಳತನ

ದೇವರಾಜ ಮೊಹಲ್ಲಾ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಬಟ್ಟೆ ಮತ್ತು ಹೊಲಿಯುವ ಅಂಗಡಿಯನ್ನು ಇಟ್ಟುಕೊಂಡಿರುವ ಪುರಸಭಾ ಸದಸ್ಯ ಶ್ರೀ ಎಂ ಕೆ ಲಿಂಗಯ್ಯನವರ ಮಳಿಗೆಗೆ ನೊನ್ನೆ ರಾತ್ರಿ ಕಳ್ಳರು ನುಗ್ಗಿ ಒಂದು ಬೈಸಿಕಲ್ ಮತ್ತು ಹೊಲಿಯುವುದಕ್ಕಾಗಿ ಇಡಲಾಗಿದ್ದ ಬಟ್ಟೆಯನ್ನು ಅಪಹರಿಸಿರುವರೆಂದು ವರದಿಯಾಗಿದೆ

ಕುದುರೆ ಜೂಜು

ರಾಜಧಾನಿಯಲ್ಲಿ ಮೇ ತಿಂಗಳು ೨೨, ೨೬, ೩೦ ಮತ್ತು ಜೂನ್ ೨, ೬, ೯ರಲ್ಲಿ ಕುದುರೆ ಜೂಜುಗಳು ನಡೆಯುವುವು. ಬೆಂಗಳೂರಿನಲ್ಲಿ ಜುಲೈ ೪, ೭, ೧೧, ೧೪ ೧೮, ೨೧, ೨೫, ೨೮ ಮತ್ತು ಆಗಸ್ಟ್ ೧ ಮತ್ತು ೪ನೇ ತಾ|| ಗಳಲ್ಲಿ ಜೂಜು ಇದೆ.

ತಿರುವಾಂಕೂರು ಶಾಸನ ಸಭಾಧ್ಯಕ್ಷರು

ತಿರುವಾಂಕೂರು ಕೊಚ್ಚಿ ಶಾಸನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಪ್ರಜಾ ಸಮಾಜವಾದಿ ಪಕ್ಷದ ಎ ಗಂಗಾಧರನ್‌ರವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಕೆ ಸಿ ಜಾರ್ಜ್‌ರವರನ್ನು ೬೩–೪೯ ಓಟುಗಳಿಂದ ಸೋಲಿಸಿ ಚುನಾಯಿತರಾಗಿರುವರು

ನಿವೃತ್ತ ಅಧಿಕಾರಿಯ ಮೇಲೆ ಕ್ರಮ

ಕಳೆದ ಆಗಸ್ಟಿನಲ್ಲಿ ನಿವೃತ್ತಿಗೊಳಿಸಲಾದ ಅಸಿಸ್ಟೆಂಟ್ ಕಮಿಷನರ್ ಶ್ರೀ ಬಿ. ರಾಘವೇಂದ್ರರಾಯರ ಬಗ್ಗೆ ಹಿರಿಯ ಶಾಸನ ಸಭೆಯಲ್ಲಿ ಮಾಡಲಾದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಮುಖ್ಯ ಮಂತ್ರಿಯವರು ಎಯುಕನ್ನು ವ್ಯಾತ್ಯಾಕ ಕೊಟ್ಟ ಅಧಿಕಾರಿಗಳ ನಿವೃತ್ತಿ ಬಗ್ಗೆ ಸರ್ಕಾರದವರು ಅನ್ಯಾಯವಾಗಿ ನಡೆದುಕೊಂಡಿಲ್ಲವೆಂದೂ ಯಾರ ಮೇಲೂ ದುರಭಿಪ್ರಾಯಪಡದೆ ಈ ವಿಷಯವನ್ನು ಇತ್ಯರ್ಥಗೊಳಿಸಲಾಗಿದೆಯೆಂದೂ ಈ ರೀತಿ ನಿವೃತ್ತರಾದ ಒಬ್ಬ ಅಧಿಕಾರಿಯು ಶಾಸನ ಸಭಾಧ್ಯಕ್ಷರು ಮತ್ತು ಸದಸ್ಯರುಗಳ ಬಳಿ ಸುಳ್ಳು ಸರ್ಕಾರಕ್ಕೆ ತೊಂದರೆ ಕೊಡುತ್ತಿರುವರೆಂದೂ, ಅವರ ಮೇಲೆ ಕ್ರಮವನ್ನೇಕೆ ಜರುಗಿಸಬಾರದೆಂದು ಸರ್ಕಾರವು ಆಲೋಚಿಸುತ್ತಿರುವುದೆಂದೂ ಹೇಳಿದರು

ಹಿರಿಯ ಶಾಸನ ಸಭೆಗೆ ಚುನಾಯಿತರಾದ ಸ್ಪರ್ಧಿಗಳು

ಬೆಂಗಳೂರು ೨೩

ಕಿರಿಯ ಶಾಸನ ಸಭೆಯಿಂದ ಹಿರಿಯ ಸಭೆಯ ಐದು ಸ್ಥಾನಗಳಿಗೆ ನೆನ್ನೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸ್ಪರ್ಧಿಗಳಾದ ಶ್ರೀಗಳಾದ ವ ರಿಸ್ವಾಮಯ್ಯ ಮರಡ ಪಾಟೀಲ್, ಎಲ್ ಹೆಚ್. ತಿಮ್ಮಾಬೋವಿ ಸಿ ತಿರುಮಲೇಗೌಡ ಮತ್ತು ಎಂ ಪಲ್ಲೂರಿಯಪ್ಪ, ಪ್ರಜಾ ಸಮಾಜವಾದಿ ಪಕ್ಷದ ಶ್ರೀ ಬಿ ಕೆ ಪುಟ್ಟರಾಮಯ್ಯನವರೂ ಆರಿಸಲ್ಪಟ್ಟಿರುತ್ತಾರೆ

ಅಸ್ಸಾಂ, ಬಿಹಾರ್, ಬಂಗಾಳ ಮತ್ತು ಒರಿಸ್ಸಾಗಳಲ್ಲಿ ಭೂಕಂಪ

ಕಟ್ಟಡಗಳಿಗೆ ಜಖಂ, ಜನರಿಗೆ ಗಾಬರಿ

ಈಶಾನ್ಯ ಭಾರತದಲ್ಲಿರುವ ಅಸ್ಸಾಂ ಪಶ್ಚಿಮ ಬಂಗಾಳ, ಬಿಹಾರ್ ಮತ್ತು ಒರಿಸ್ಸಾ ಪ್ರಾಂತಗಳ ಹಲವು ಕಡೆಗಳಲ್ಲಿ ನೆನ್ನೆ ಮುಂಜಾನೆ ೫| ಗಂಟೆ ಸುಮಾರಿನಲ್ಲಿ ಭೂಕಂಪವಾಯಿತು. ಪೂರ್ವ ಪಾಕಿಸ್ತಾನದಲ್ಲೂ ಸಹ ಭೂಮಿಯು ನಡುಗಿತು. ಗೌಹಾತಿಯಲ್ಲಿ ೧ ನಿಮಿಷ ಕಾಲ ಎರಡು ಬಾರಿಯೂ, ಶಿಲ್ಲಾಂಗಿನಲ್ಲಿ ಮೂರು ನಿಮಿಷ ಕಾಲವೂ ಭೂಮಿ ನಡುಗಿತು. ಅಲ್ಲಿನ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳಿಗೆ ಜಖಂ ಆಗಿದೆ. ನೀರು ಸರಬರಾಜು ವ್ಯವಸ್ಥೆಯು ಕೆಟ್ಟಿದೆ. ಮನೆಗಳಲ್ಲಿ ಸುಖ ನಿದ್ರೆಯಲ್ಲಿದ್ದ ಸ್ತ್ರೀ ಪುರುಷರು ಮತ್ತು ಮಕ್ಕಳು ಗಾಬರಿಯಿಂದ ಹೊರಕ್ಕೆ ಓಡಿಹೋದರು. ಭೂದೇವಿಯು ಕೋಪಗೊಂಡಿರುವಳೆಂದು ಭಾವಿಸಿ ಅವಳ ಕೋಪವನ್ನು ಸಮಾಧಾನ ಪಡಿಸಲು ಒಂದು ಕಡೆ ಹೆಂಗಸರು ಉಲ್ಲಾಳಿಗವನ್ನು ಹಾಡಿದರೆಂದು ಹೇಳಲಾಗಿದೆ

ಬಿರುಸಾದ ಭೂಕಂಪದಿಂದ ಮೊದಲನೆಯ ಏದುರುವಿಕೆಗೆ ಶಿಲ್ಲಾಂಗಿನ ಭೂಕಂಪ ಮಾಪಕ ಯಂತ್ರವು ಕೆಟ್ಟುಹೋಗಿದೆ

ಗೌಹಾತಿ ಬಳಿ ಬ್ರಹ್ಮಪುತ್ರಾ ನದಿಯಲ್ಲಿ ತೆರೆಗಳು ಎದ್ದಿವೆ. ದೋಣಿಗಳು ಕೊಚ್ಚಲ್ಪಟ್ಟಿವೆ. ಭೂಮಿಯನ್ನು ನದಿಯು ಕೊರೆದುಹಾಕಿದೆ. ಈ ರೀತಿ ಕರೀಂಗಂಜ್, ದಿಬ್ರುಗಢ, ಕಲ್ಕತ್ತಾ, ಒರಿಸ್ಸಾದ ರಾಜಧಾನಿ ಕಟಕ್, ಮಣಿಪುರ, ಪಾಟ್ನಾ, ಪೂರ್ಣಿಯಾ ಮುಜಫರ್ ನಗರಗಳಲ್ಲಿ ಭೂಮಿ ನಡುಗಿದ ವಾರ್ತೆ ಬಂದಿದೆ. ಪೂರ್ವ ಬಂಗಾಳದ ಢಾಕಾ ನಗರದಲ್ಲೂ ಆಗಿದೆ. ಎಲ್ಲಿಂದಲೂ ಪ್ರಾಣಹಾನಿಯ ಬಗ್ಗೆ ವರದಿಗಳು ಬಂದಿರುವುದಿಲ್ಲ

ಹೋದ ವರ್ಷ ಅಸ್ಸಾಮಿನಲ್ಲಿ ಸಿಲ ಭೂಕಂಪಗಳಾಗಿದ್ದುವು. ಈ ಸಾರಿಯ ಭೂಕಂಪವು ೧೯೫೦ ರಲ್ಲಿ ಆದ ಭೂಕಂಪದ ಪ್ರಮಾಣಕ್ಕೆ ಹೋಲುತ್ತದೆಂದು ಹೇಳಲಾಗಿದೆ

ವಿದ್ಯುಚ್ಛಕ್ತಿ ಕಂಬಗಳೂ ಟೆಲಿಫೋನ್ ಸಾಕ ರ್ಯಗಳೂ ಹಾಳಾಗಿವೆ

ಚಿಯಾಂಗರೇ ಮತ್ತೆ ಅಧ್ಯಕ್ಷರು

ರಾಷ್ಟ್ರೀಯ ಚೀಣದ ಅಧ್ಯಕ್ಷ ಸ್ಥಾನಕ್ಕೆ ಚಿಯಾಂಗ್ ಕೈಷೇಕರು ಪುನಃ ಆರು ವರ್ಷದ ಅವಧಿಗಾಗಿ ಚುನಾಯಿಸಲ್ಪಟ್ಟಿರುತ್ತಾರೆ. ಮೊದಲನೇ ಬ್ಯಾಲೆಟ್ಟಿನಲ್ಲಿ ಅವರು ಸರಾಸರಿ ಹೊಂದಿ ಏಕಪಕ್ಷೀಯವಾಗಿ ಗೆದ್ದಿರುವರು

ಭಾಷಾ ಪಾಠಗಳನ್ನು ಮಾಡಲು ಪದವೀಧರರಿಗೆ ಸಮಾನಾವಕಾಶ

ಪ್ರಾಜೆಕ್ಟ್ ದಿನಾಚರಣೆಯಲ್ಲಿ ಮಲ್ಲಾರಾಧ್ಯರ ಭಾಷಣ

ಮೈಸೂರು ೨೩

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಮತ್ತು ಮರಿಮಲ್ಲಪ್ಪನವರ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ಆಶ್ರಯದಲ್ಲಿ ನೆನ್ನೆ ಸಂಜೆಯಲ್ಲಿ ಮೈಸೂರು ಪ್ರಾಜೆಕ್ಟ್ ದಿನಾಚರಣೆಯು ವಿದ್ಯಾ ಇಲಾಖೆ ಅಧಿಕಾರಿಗಳಾದ ಶ್ರೀ ಜಿ ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು

ಮಧ್ಯಾಹ್ನ ಪ್ರಾಜೆಕ್ಟಿನ ಸಂಬಂಧವಾದ ಪ್ರದರ್ಶನವೂ, ಸಂಜೆ ಸಭೆಯೂ ನಡೆದುವು. ಪ್ರಾರ್ಥನೆ ಉಪಾಧ್ಯಾಯರ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎ ಸಿ. ದೇವೇಗೌಡರ ಸ್ವಾಗತ ಭಾಷಣವಾದನಂತರ ವರದಿಯು ಸಲ್ಲಿಸಲಾಯಿತು

ಅಧ್ಯಕ್ಷರು ಭಾಷಣ ಮಾಡಿ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಪ್ರಾಜೆಕ್ಟ್ ಬಗ್ಗೆ ನಡೆಸಿರುವ ಕಾರ್ಯಕ್ರಮವನ್ನು ಪ್ರಶಂಸಿಸಿದರು. ಶಾಲೆಗಳಲ್ಲಿ ಕನ್ನಡ ಮತ್ತು ಇತರ ಸ್ಥಳೀಯ ಭಾಷೆಗಳ ಉಪಾಧ್ಯಾಯರಾಗಿರುವ ಪಂಡಿತರು ಪಾಠಗಳಿಗೇ ಮೀಸಲಾದವರು. ಉತ್ತಮ ರೀತಿಯಲ್ಲಿ ಪಾಠ ಹೇಳಿಕೊಡಬಲ್ಲವರಾಗಿರುವುದರಿಂದ ಅವರ ಸ್ಥಾನದಲ್ಲಿ ಪದವೀಧರರನ್ನ ನೇಮಿಸಿಕೊಳ್ಳುವುದಾಗಲಿ, ಪದವೀಧರರಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವುದಾಗಲಿ ಸರಿಯಲ್ಲವೆಂದೂ, ಬೇಕಾದರೆ ವೃತ್ತಿಯಲ್ಲಿ ಪದವೀಧರರನ್ನು ಬೇಕಾದರೆ ಸೇರಿಸಿಕೊಳ್ಳಬಹುದೆಂದೂ ಹೇಳಿದರು. ಸಂಸ್ಥಾನದಲ್ಲಿ ವ್ಯಾಯಾಮ ಶಿಕ್ಷಣ ಕಾಲೇಜೊಂದನ್ನು ಸ್ಥಾಪಿಸಬೇಕೆಂದು ಅವರು ತಿಳಿಸಿದರು

ಸ್ಕೌಟುಗಳ ಮತ್ತು ಗರ್ಲ್ ಗೈಡ್ ಗಳ ಚಳುವಳಿಗೆ ಪ್ರಾಶಸ್ತ್ಯವಿರುವುದೆಂದೂ, ಅದಕ್ಕೆ ಶಾಲೆಗಳಲ್ಲಿ ಹೆಚ್ಚಿನ ಉತ್ತೇಜನವೀಯಬೇಕೆಂದೂ ಪ್ರಧಾನಿ ನೆಹರೂರವರು ಚಳುವಳಿಯ ಮಹತ್ವವನ್ನ ಅರಿತು ಅದನ್ನು ಪ್ರೋತ್ಸಾಹಿಸುವಂತೆ ತಿಳಿಸಿರುವರೆಂದೂ ಹೇಳಿದರು

ನಾಟಕ, ಟಾಬ್ಲೊ ಪ್ರದರ್ಶನ, ಮೇಳ ಮತ್ತು ಸಂಭಾಷಣೆಗಳಾದನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಆಂಧ್ರದಲ್ಲಿ ಸಿಹಿ ಹೆಂಡದ ಸೇವನೆಗೆ ಅವಕಾಶ

ಆಂಧ್ರ ಪ್ರಾಂತದಲ್ಲೆಲ್ಲಾ ನೀರಾ ಎಂಬ ಸಿಹಿ ಹೆಂಡವನ್ನು ಇಳಿಸಲು, ಮಾರಲು ಮತ್ತು ಕುಡಿಯಲು ಅಲ್ಲಿನ ಸರ್ಕಾರದವರು ಅವಕಾಶ ಕೊಟ್ಟಿರುವರು

ತೊಟ್ಟಿಲಿಗೆ ಬೆಂಕಿ ತಗುಲಿ ಮಗುವಿಗೆ ಅಪಮೃತ್ಯು

ರಾಜಧಾನಿಯ ಚಾಮರಾಜ ಮೊಹಲ್ಲಾ ಅಗಸರ ಬೀದಿಯ ಶ್ರೀ ಕಪ್ಪಯ್ಯಗೌಡರ ಮನೆಯಲ್ಲಿ ನೊನ್ನೆ ರಾತ್ರಿ ಎಲ್ಲರೂ ಮಲಗಿದ್ದಾಗ ಪಕ್ಕದಲ್ಲಿದ್ದ ದೀಪದಿಂದ ಬೆಂಕಿಯು ತೊಟ್ಟಿಲಿಗೆ ತಗುಲಿ ಅದರಲ್ಲಿ ಮಲಗಿದ್ದ ಮೂರು ತಿಂಗಳ ಮಗುವಿಗೆ ಅಪಮೃತ್ಯು ಸಂಭವಿಸಿತು.

ಕೇಂದ್ರ ಮತ್ತು ಸಂಸ್ಥಾನಗಳಿಗೆ ಹಿಂದಿಯಲ್ಲೇ ಪತ್ರ ವ್ಯವಹಾರ

ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಸ್ವಂ ವ. ಫೋ] ಬೆಂಗಳೂರು ೨೪

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಒಂದು ಸ್ವಾರಸ್ಯವಾದ ಪ್ರಕರಣವು ನಡೆಯಿತು. ವಿದ್ಯಾ ಇಲಾಖೆಗಾಗಿ ೩೬,೭೯,೦೦೦ ರೂ ಗ್ರಾಂಟು ಕೇಳಿದ ಸಂಬಂಧದಲ್ಲಿ ಶ್ರೀ ಜಿ ಶಿವಪ್ಪನವರು ಖೋತಾ ನಿರ್ಣಯವನ್ನು ತಂದು, ಹಿಂದಿಗೆ ಪ್ರೋತ್ಸಾಹಬೇಕೆಂದು ತಿಳಿಸಿ ತಾವು ಹಿಂದಿ ಭಾಷೆಯಲ್ಲೇ ಮಾತನಾಡಿದರು.

ಅಧ್ಯಕ್ಷರು ಮಾತನಾಡಿ ಸಭೆಯಲ್ಲಿ ಅನೇಕರಿಗೆ ಹಿಂದಿಯು ಗೊತ್ತಿಲ್ಲದಿರುವುದರಿಂದ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಮಾತನಾಡುವಂತೆ ಸಲಹೆ ಮಾಡಿದರು

ಸದಸ್ಯರು ಮಾತನಾಡಿ ಹಿಂದಿ ರಾಷ್ಟ್ರಭಾಷೆಯೆಂದೂ, ಅದನ್ನು ಮಾತನಾಡಲು ರಾಜ್ಯಾಂಗದ ಪ್ರಕಾರ ಹಕ್ಕಿರುವದೆಂದೂ ತಿಳಿಸಿದರು.

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಹಿಂದಿಯಲ್ಲೂ ಇಂಗ್ಲಿಷಿನಲ್ಲೂ ಉತ್ತರವಿತ್ತು, ಮೈಸೂರು ವಿಶ್ವವಿದ್ಯಾಲಯದಲ್ಲಿ ಹಿಂದಿ ಭಾಷೆಗೆ ಒಬ್ಬ ಪ್ರೊಫೆಸರರನ್ನು ನೇಮಿಸುವ ವಿಷಯವನ್ನು ಪರಿಶೀಲಿಸಲಾಗುತ್ತಿದೆಯೆಂದು ಹೇಳಿದರು. ಇನ್ನು ೧೫ ವರ್ಷಗಳ ನಂತರ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ನಡುವೆ ಇಂಗ್ಲಿಷಿನ ಬದಲು ಹಿಂದಿಯಲ್ಲಿ ಪತ್ರವ್ಯವಹಾರ ನಡೆಯಬೇಕಾದದ್ದೆಂದು ಕೇಂದ್ರದಿಂದ ಸೂಚನೆ ಬಂದಿರುವುದಾಗಿ ಅವರು ತಿಳಿಸಿದರು. ಖೋತಾ ನಿರ್ಣಯವು ವಾಪಸಾಯಿತು

ಕೇಂದ್ರ ಸರ್ಕಾರದಿಂದ ಕೃತಕ ರೇಷ್ಮೆ, ಸಾಬೂನು ಬಗ್ಗೆ ಸುಂಕದ ರಿಯಾಯಿತಿ

ಹೊಸ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಸೂಚಿಸಲ್ಪಟ್ಟಿದ್ದ ಹೆಚ್ಚಿನ ಸುಂಕದ ಬಗ್ಗೆ ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಮಾತನಾಡಿ, ಪಾದರಕ್ಷೆ, ಸಾಬೂನು ಮತ್ತು ಕೃತಕ ರೇಷ್ಮೆಗಳಿಗೆ ರಿಯಾಯಿತಿ ಕೊಡುವುದಾಗಿ ಹೇಳಿರುತ್ತಾರೆ. ೪೫ ಜನ ಕೆಲಸಗಾರರ ವರೆಗೆ ಇರುವ, ವಿದ್ಯುಚ್ಛಕ್ತಿಯಿಲ್ಲದೆ ಕೆಲಸ ನಡೆಯುವ ಕಾರ್ಖಾನೆಗಳ ಬಗ್ಗೆ ಸುಂಕದ ವಿನಾಯಿತಿ ಮಟ್ಟವನ್ನು ಈ ಕೂಡಲೇ ನೆಚ್ಚಿಸುವುದಾಗಿ ಅವರು ಹೇಳಿ, ಪ್ರತಿ ವರ್ಷ ೧೨೫ ಟನ್ ಬಟ್ಟೆಯ, ಸಾಬೂನು ಮತ್ತು ೨೫ ಟನ್ ಮೈ ಸಾಬೂನು ತಯಾರಾಗುವ ಮತ್ತು ತೆರಿಗೆ ವಿಧಾಯಕವಾಗುತ್ತಿರುವ ಕಾರ್ಖಾನೆಗಳಿಗೆ ಸುಂಕದ ವಿನಾಯಿತಿಯು ಏಪ್ರಿಲ್ ೧ ರಿಂದ ದೊರೆಯುವುದೆಂದು ಹೇಳಿದರು. ಮಧ್ಯಮ ವರ್ಗದ ಅನೇಕ ಕಾರ್ಖಾನೆಗಳು ವರ್ಷಕ್ಕೆ ೧೫೦ ಟನ್ ನಷ್ಟು ತಯಾರಿಸದಿರುವುದರಿಂದ ಅವುಗಳಿಗೆ ಸುಂಕವೇ ಇರುವುದಿಲ್ಲ

ಕೃತಕ ರೇಷ್ಮೆ ಬಗ್ಗೆ ಸೂಚಿಸಲಾಗಿರುವ ೧|| ಆಣೆ ಸುಂಕದ ದರವನ್ನು ೧ ಆಣೆಗೆ ಇಳಿಸಲಾಗುವುದೆಂದೂ ಅವರು ಹೇಳಿರುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ೪೦ ಲಕ್ಷ ರೂ ನಷ್ಟವಾಗುವುದೆಂದು ಅವರು ತಿಳಿಸಿದರು

ಭಾರತ ಸಂಸ್ಕೃತಿಯ ವಿಕಾಸ ಮಹಿಳೆಯರಿಂದ ಆಗಬೇಕು

ಮಹಿಳಾ ಸದನದ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳ ಭಾಷಣ

ಮೈಸೂರು, ೨೨

ರಾಜಧಾನಿಯ ಮಹಿಳಾ ಸದನದಲ್ಲಿ ಮೊನ್ನೆ ದಿವಂಗತ ಎಂ. ಟಿ. ಗೋಪಾಲಾಚಾರ್ಯರ ಸ್ಮಾರಕ ಸ್ಪರ್ಧೆಗಳ ಬಹುಮಾನ ವಿತರಣೋತ್ಸವವು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ನಗರದ ನಾನಾ ಸ್ತ್ರೀ ಸಂಸ್ಥೆಗಳ ಪ್ರತಿನಿಧಿಗಳೂ, ಸದನದ ಸದಸ್ಯರ, ವಿದ್ಯಾರ್ಥಿನಿಯರೂ ಹಾಜರಿದ್ದರು.

ಪ್ರಾರ್ಥನೆಯ ನಂತರ ಶ್ರೀ ಕೆ. ವಿ. ಶ್ರೀಕಂಠಯ್ಯನವರು ಸ್ವಾಗತ ಭಾಷಣ ಮಾಡಿದರು. ವಿದ್ಯಾರ್ಥಿನಿಯರಿಂದ ವೀಣಾವಾದನ, ಕಾರ್ಯದರ್ಶಿ ಶ್ರೀಮತಿ ಹೆಚ್. ಎ. ಜಾನಕಿಯವರಿಂದ ಸ್ಮಾರಕ ಸ್ಪರ್ಧೆಗಳ ವರದಿಗಳಾದನಂತರ ಅಧ್ಯಕ್ಷರು ಪರ್ಯಾಯ ಪಾರಿತೋಷಕ ಮತ್ತು ಇತರ ಬಹುಮಾನಗಳನ್ನು ಹಂಚಿದರು.

ಅವರು ಭಾಷಣ ಮಾಡಿ, ದೇಶದಲ್ಲಿ ಆರ್ಥಿಕ ಏಳಿಗೆಯ ಜೊತೆಯಲ್ಲಿಯೇ ನೈತಿಕ ಬೆಳವಣಿಗೆಯೂ ಆಗಬೇಕೆಂದು ತಿಳಿಸಿ, ಮಹಿಳೆಯರಿಂದ ಸನಾತನ ಧರ್ಮದ ರಕ್ಷಣೆ ಮತ್ತು ಭಾರತೀಯ ಸಂಸ್ಕೃತಿಯ ವಿಕಾಸವಾಗಬೇಕೆಂದು ತಿಳಿಸಿದರು. ಸದನದಲ್ಲಿ ಶಾಸ್ತ್ರಬದ್ಧವಾದ ಸಂಗೀತದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಅವರು ಮೆಚ್ಚಿದರು. ಕೇಂದ್ರ ಸರ್ಕಾರದವರು ಕೊಟ್ಟಿರುವ ೨ ಸಾವಿರ ರೂಗಳ ಗ್ರಾಂಟನ್ನು ಸದುಪಯೋಗಪಡಿಸಬೇಕೆಂದು ಅವರು ತಿಳಿಸಿದರು.

ಶ್ರೀ ಎಸ್. ಎಸ್. ವೆಂಕಟಸುಬ್ಬರಾಯರಿಂದ ವಿದ್ಯಾರ್ಥಿನಿ ರಾಜ್ಯತ್ಯಾಗ ಎಂಬ ಏಕಪಾತ್ರ ನಾಟಕಾಭಿನಯ, ವಿದ್ಯಾರ್ಥಿನಿಯರಿಂದ 'ಸಂಬಂಧ ಸಮಸ್ಯೆ' ಎಂಬ ನಾಟಕವೂ ಆದಮೇಲೆ ಶ್ರೀಮತಿ ಸಾವಿತ್ರಮ್ಮನವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ ೭-೩೦ ಅಬ್ದುಲ್ ರಹೀಂ ಸಿತಾರ್ ಮಧ್ಯಾಹ್ನ ೧-೪೦ ಮತ್ತು ... [illegible] ... ಕನ್ನಡ ನಾಟಕ

೫೦೦ ವರ್ಷದ ಹಿಂದೆ ಮಡಿದ ರಾಜಕುಮಾರಿ ದೇಹ ಕೆಡದೆ ಇದೆ

ಆಂಡೀಸ್ ಪರ್ವತದಲ್ಲಿ ದೊರೆತ ಶವ

ದಕ್ಷಿಣ ಅಮೆರಿಕದ ಆಂಡೀಸ್ ಪರ್ವತ ಶ್ರೇಣಿಯ ಒಂದು ಗುಹೆಯೊಳಗಿರುವ ಪವಿತ್ರ ಮಂದಿರದಲ್ಲಿ ೫೦೦ ವರ್ಷಗಳ ಹಿಂದೆ ಮಡಿದ ಇಂಕಾ ವಂಶದ ೧೨ ವರ್ಷದ ರಾಜಕುಮಾರಿಯ ದೇಹವು ಸ್ವಲ್ಪವೂ ಕೆಡದೆ ಮಂಜಿನ ಗಡ್ಡೆಯ ನಡುವೆ ಇದ್ದಿತೆಂದು ವರದಿಯಾಗಿದೆ. ಅದನ್ನು ಈಗ ಚಿಲಿ ದೇಶದ ವಿಶ್ವವಿದ್ಯಾಲಯದ ಶರೀರಶಾಸ್ತ್ರದ ಶಾಲೆಯಲ್ಲಿಡಲಾಗಿದೆ. ಆ ದೇಹವು ಕೈಕಟ್ಟಿಕೊಂಡು ಕುಳಿತು ಒಹು ಮದ್ದಾಗಿ ಕಾಣುತ್ತಿರುವುದೆಂದೂ ಮುಖವನ್ನು ಕೈಯಿಂದ ಮುಟ್ಟಿದಾಗ ಫೇಸ್ ಪೌಡರ್ ಹಚ್ಚಿದ್ದು ಗೊತ್ತಾಯಿತೆಂದೂ ಹೇಳಲಾಗಿದೆ. ಆಕೆಯ ಮೈಮೇಲೆ ಉಣ್ಣೆಯ ಬಟ್ಟೆ ಮತ್ತು ಚರ್ಮದ ಉಡುಪುಗಳನ್ನು ಧರಿಸಿ ಬೆಳ್ಳಿಯ ನಗಗಳನ್ನು ತೊಡಿಸಲಾಗಿದ್ದಿತು. ಆಕೆಯನ್ನು ನೋಡಿದರೆ ಜೀವಂತವಾಗಿರುವಂತೆಯೇ ಕಾಣುತ್ತಿದ್ದಳೆಂದೂ, ಕಣ್ಣಿನ ಗುಡ್ಡೆಗಳು ಸರಿಯಾಗಿವೆ ಎಂದೂ ಹೇಳಲಾಗಿದೆ.

ಕೈಗಳಲ್ಲಿ ಒಂದು ಚೀಲವಿದ್ದು, ಅದರಲ್ಲಿ ಕೆಂಪು ಗಿಣಿಗಳ ಪುಕ್ಕಗಳಿದ್ದುವೆಂದೂ ಮತ್ತು ಉಗುರು ಕತ್ತರಿಸುವ ಸಾಧನಗಳಿದ್ದುವೆಂದೂ ಹೇಳಲಾಗಿದೆ. ಈ ಸಾಧನದಿಂದ ಆಕೆಯು ಆಗಿನ ಕಾಲದ ದುಷ್ಟಶಕ್ತಿ ಕೆಲಸದ ಅಪಾಯದಿಂದ ಪಾರಾಗಬಹುದೆಂಬ ನಂಬಿಕೆ ಇತ್ತು.

ಆಕೆಯ ಅಕ್ಕಪಕ್ಕಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ವಿಗ್ರಹಗಳಿದ್ದುವು. ರಾಜಕುಮಾರಿಯ ... ವು ದೇವತೆಗಳೆಂದು ಹೇಳಲಾಗಿದೆ.

ಗಾಯತ್ರಿ ಲಲಿತ ಕಲಾ ಸಂಘ

ರಾಜಧಾನಿಯ ಕೆಂಪನಂಜಾಂಬ ಅಗ್ರಹಾರದ ೫೦೫ನೇ ನಂಬರ ಮನೆಯಲ್ಲಿ ನೆನ್ನೆ ಮೇಲ್ಕಂಡ ಸಂಘವನ್ನು ಸ್ಥಾಪಿಸಲಾಯಿತು. ಅರಮನೆ ಇಲಾಖೆಯ ಶ್ರೀ ಎಂ. ಎಸ್. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಂಗರಾಜುರವರಿಂದ ಪ್ರಾರ್ಥನೆ, ಶ್ರೀ ಕೇಶವಮೂರ್ತಿಯವರಿಂದ ಸ್ವಾಗತಗಳಾದನಂತರ ಅಧ್ಯಕ್ಷರು ಭಾಷಣ ಮಾಡಿ ಸಂಘಕ್ಕೆ ಯಶಸ್ಸನ್ನು ಕೋರಿದರು. ನಂತರ ಅಧಿಕಾರ ವರ್ಗದ ಚುನಾವಣೆ ನಡೆದು ಶ್ರೀ ಎಸ್. ಎಂ. ತಿರುಮಲೆ ಅಯ್ಯಂಗಾರ್ಯರು ಅಧ್ಯಕ್ಷರು, ಎನ್. ಕೇಶವಮೂರ್ತಿಯವರು ಕಾರ್ಯದರ್ಶಿಗಳು, ಶ್ರೀ ಎಂ. ಎಲ್. ನಾರಾಯಣಶೆಟ್ಟರು ಖಜಾಂಚಿ, ಶ್ರೀ ರಂಗರಾಜುರವರು ಸಹಾಯ ಕಾರ್ಯದರ್ಶಿ ಮತ್ತು ಎಂ. ಎಸ್. ಕೃಷ್ಣಮೂರ್ತಿ ನಾಟಕಗಳ ವ್ಯವಸ್ಥಾಪಕರಾಗಿ ಆರಿಸಲ್ಪಟ್ಟರು. ಸಂಗೀತ, ನಾಟಕ ಮುಂತಾದ ಲಲಿತ ಕಲೆಗಳನ್ನು ಅಭಿವೃದ್ಧಿಗೊಳಿಸಲು ಸಂಘವು ಪ್ರಯತ್ನಪಡುವುದು.

ಭಾರತದ ಪ್ರತಿಭಟನೆಗೆ ಪೋರ್ಚುಗಲ್ಲಿನ ತಿರಸ್ಕಾರ

ಗೋವದಲ್ಲಿ ಭಾರತೀಯರ ಮೇಲೆ ನಡೆಸಲಾಗುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ, ಭಾರತವು ಪೋರ್ಚುಗಲ್ಲಿಗೆ ಕೊಟ್ಟ ಪ್ರತಿಭಟನೆಯನ್ನು ಪೋರ್ಚುಗೀಸ್ ಸರ್ಕಾರವು ತಿರಸ್ಕರಿಸಿದೆ.

ಸನ್ಮಾನ ಸಮಾರಂಭ

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಆರಿಸಲ್ಪಟ್ಟಿರುವ ಶ್ರೀ ಹೆಚ್. ಸಿ. ದಾಸಪ್ಪ ಮತ್ತು ಜಿಲ್ಲಾಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರನ್ನು ಸನ್ಮಾನಿಸಲು ಕೃಷ್ಣರಾಜನಗರ ತಾಲ್ಲೂಕಿನ ಸಾಲಿಗ್ರಾಮದ ಹೋಬಳಿ ಮಹಾಜನರು ನಾಳೆ ಮಧ್ಯಾಹ್ನ ೩ ಗಂಟೆಗೆ ಸಾಲಿಗ್ರಾಮದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೧೯ ೧೪ ೦	೨೪ ೧೪ ೦
ಹರಳುಬೀಜ	೨೬ ೮ ೦	೨೭ ೪ ೦
ಹುಚ್ಚೆಳ್ಳು	೪೭ ೧೦ ೦	೪೨ ೧೪ ೦
ಹೊಂಗೇಬೀಜ	೧೪ ೮ ೦	೨೨ ೮ ೦
ಹುರುಳಿ	೨೬ ೧೨ ೦	೨೮ ೧೦ ೦
ಹೆಸರು	೪೫ ೦ ೦	೪೦ ೨ ೦
ಅಲಸಂದೆ	೨೬ ೨ ೦	೪೫ ೨ ೦
ಅವರೆ	೪೩ ೦ ೦	೩೬ ೮ ೦
ಧನಿಯ	೩೮ ೦ ೦	೪೦ ೬ ೦
ತೊಗರಿ	೨೪ ೧೪ ೦	
ಕಡಲೆ	೩೯ ೦ ೦	೪೩ ೮ ೦
ಸೆಣಬಿನ ಬೀಜ	೨೧ ೧೪ ೦	೨೯ ೬ ೦
ಹುಣಸೆಬೀಜ	೧೩ ೮ ೦	೧೩ ೧೦ ೦
ಹುಣಸೇಹಣ್ಣು	೭ ೬ ೦	೯ ೪ ೦
ಸೀಗೆಕಾಯಿ	೪ ೬ ೦	೫ ೧ ೦
ಮೆಣಸಿನಕಾಯಿ	೨೫ ೨ ೦	
ತೆಂಗಿನಕಾಯಿ ೧೦೦೦	೧೫೨ ೦ ೦	೨೨೦ ೦ ೦

ವಿವಾಹ ಮಹೋತ್ಸವ

ರಾಜಧಾನಿಯ ಅಡ್ವೊಕೇಟರಾದ ಶ್ರೀ ವಿ. ಎಲ್. ಶ್ರೀಕಂಠಯ್ಯನವರು ತಮ್ಮ ಕುಮಾರ ಶ್ರೀ ವಿ. ಎಸ್. ಸುಬ್ಬರಾಯರಿಗೆ ಬೆಂಗಳೂರು ವ್ಯವಸಾಯ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಬಿ. ದಾಸಪ್ಪನವರ ಸಹೋದರರ ಪುತ್ರಿ ಸೌ|| ಲಕ್ಷ್ಮಮ್ಮನವರನ್ನು ತಂದುಕೊಂಡು ನೆನ್ನೆ ಭದ್ರಾವತಿಯಲ್ಲಿ ವಿವಾಹವನ್ನು ನಡೆಸಿದರು.

ಮೈಸೂರಿನ ನಿವೃತ್ತ ಪಶುವೈದ್ಯ ಅಧಿಕಾರಿಗಳಾದ ಶ್ರೀ ಎ. ಕೃಷ್ಣಮೂರ್ತಿರಾಯರು ತಮ್ಮ ಕುಮಾರಿ ಸೌ|| ಅಂಬುಜರವರನ್ನು ಚಿಕ್ಕಮಗಳೂರಿನಲ್ಲಿ ಮೈಸೂರು ಬ್ಯಾಂಕಿನ ಮ್ಯಾನೇಜರ್ ಆಗಿರುವ ಶ್ರೀ ಹೆಚ್. ನಾರಾಯಣರಾಯರ ಪುತ್ರ ಶ್ರೀ ಎ. ರಾಮಚಂದ್ರರಾಯರಿಗೆ ಕೊಟ್ಟು ನೆನ್ನೆ ಮೈಸೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಚಿತ್ರ ಮಂದಿರಗಳಲ್ಲಿ ಧೂಮಪಾನ ತಪ್ಪಿಸಬೇಕು

ರಾಜಧಾನಿಯ ಸಿನಿಮಾ ಮಂದಿರಗಳಲ್ಲಿ ಈಚೆಗೆ ಧೂಮಪಾನ ಜಾಸ್ತಿಯಾಗುತ್ತಿದೆ. ಸರ್ಕಾರದ ಕಾನೂನಿನ ಭಯ ಸ್ವಲ್ಪವೂ ಇರುವುದಿಲ್ಲ. ಇದರಿಂದ ಪ್ರೇಕ್ಷಕರಲ್ಲಿ ಅನೇಕರಿಗೆ ತುಂಬಾ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಇಲಾಖೆಯವರು ಮುತುವರ್ಜಿ ವಹಿಸಿದರೆ ಪ್ರೇಕ್ಷಕರಿಗೆ ಸುಖವಾಗುವುದಲ್ಲದೆ ಸರ್ಕಾರಿ ಆಜ್ಞೆಗೆ ಬೆಲೆ ದೊರೆತಂತಾಗುತ್ತದೆ.

ಕೆಲವು ಚಿತ್ರ ಮಂದಿರಗಳಲ್ಲಿ ಭಾರತೀಯ ವರ್ತಮಾನಗಳ ಡಾಕ್ಯುಮೆಂಟರಿಗಳನ್ನು ತೋರಿಸುತ್ತಿಲ್ಲ. ಈ ಬಗ್ಗೆಯೂ ಸರ್ಕಾರದವರು ಗಮನಿಸಬೇಕು—ಎಂಬುದಾಗಿ ನಗರದ ಸಿನಿಮಾ ಪ್ರೇಕ್ಷಕರೊಬ್ಬರು ಪತ್ರ ಬರೆದಿರುತ್ತಾರೆ.

SRI GANESHA
TALKIES
From 24 3 54 For 3 Days
Columbia's
THIEF OF DAMASCUS
featuring Paul Henreid
and Patricia Medina

ಶ್ರೀ ಚಾಮುಂಡೇಶ್ವರಿ
ಟಾಕೀಸ್
24 3-54 ರಿಂದ ಅಮೋಘ 4ನೇ ವಾರ
ಜಲದುರ್ಗ
ಕನ್ನಡ ಚಿತ್ರ
ಕೆಂಪರಾಜ್‌ರವರ ದಿಗ್ದರ್ಶನ

ಒಲಂಪಿಯಾ
25-3-54 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ಮಾನವನ ಜೀವನಮಾನದಲ್ಲಿ ಏಕೆ ಪ್ರಕಾರವಾಗಿ ಉದ್ಭವಿಸುವ ತೊಂದರೆಗಳನ್ನು ಅನುಭವಿಸಿ ನಮ್ಮನ್ನು ಮನುಷ್ಯನನ್ನು ಮಹಾತ್ಮನೆಂದು ಸಾರುವ ಉತ್ತಮ ಚಿತ್ರ
ಮಹಾತ್ಮ
(ಹಿಂದಿ)
ಖ್ಯಾತಿಯಾದ "ನಷ್ಟ ಮುನ್ನ" ಚಿತ್ರ ನಿರ್ದೇಶಕ
ದತ್ತಾ ಧರ್ಮಾಧಿಕಾರಿಯವರ ಜ್ಞಾನಮಯ ಚಿತ್ರಾಮೃತ
ಭೂಮಿಕೆಯಲ್ಲಿ ಜ ಗಿರ್ದಾರ್ ಮನಮೋಹನ ಕೃಷ್ಣ ದೇವಿಕ್ ರಾಜ ಸೇನೆ ಮತ್ತು ರೇಖಾ
ಇದರ ಜೊತೆಯಲ್ಲಿ "ಆಗಾ ಗೋಸ್ ಟು ಆಫೀಸ್" ಎಂಬ ಹಾಸ್ಯಮಯ
ಎರಡು ರೀಲುಗಳನ್ನು ಪ್ರದರ್ಶಿಸಲಾಗುತ್ತದೆ

ಯುಗಾದಿಯ ಶುಭಾಶಯಗಳು!
ಮಲಬಾರ್ ಹ್ಯಾಂಡ್‌ಲೂಂ ಕಾರ್ಪೊರೇಷನ್
(ಹೋಲ್‌ಸೇಲ್ ಹ್ಯಾಂಡ್‌ಲೂಮ್ ಕ್ಲಾತ್ ಡಿಪೋ)
34 ಈಸ್ಟ್ ಕ್ರಾಸ್, ಅಶೋಕಾ ರೋಡ್, ಮೈಸೂರು
(ಸೆಂಟ್ರಲ್ ಪೊಲೀಸ್ ಸ್ಟೇಷನ್ ಬಳಿ)
ಕಡಿಮೆ ಬೆಲೆ! ಉತ್ತಮ ದರ್ಜೆ ಬಟ್ಟೆಗಳು!
ಯುಗಾದಿ ಹಬ್ಬಕ್ಕಾಗಿ
ಈ ಕೆಳಗೆ ಕಂಡ ಹ್ಯಾಂಡ್‌ಲೂಮ್ ಕಂಪೆನಿಗಳಲ್ಲಿ ತಯಾರಾದ ಉತ್ತಮ ದರ್ಜೆಯ ಬಟ್ಟೆಗಳನ್ನೂ, ಬೆಡ್‌ಶೀಟ್, ಪಿ. ಕೆ. ಷರ್ಟಿಂಗ್, ಕೋಟಿಂಗ್, ಟವಲ್ಲು, ಧೋತಿ ಮುಂತಾದುವನ್ನೂ ಬಹಳ ಕಡಿಮೆ ಬೆಲೆಯಲ್ಲಿ ಕೊಡುತ್ತೇವೆ
1 ವಿಷ್ಣು ವೀವಿಂಗ್ ವರ್ಕ್ಸ್ ಚೊವ್ವ,
2 ಸೀತಾರಾಂ ವೀವಿಂಗ್ ವರ್ಕ್ಸ್ ಕಣ್ಣನೂರು,
3 ಮಿಷನ್ ಕ್ರಿ ಟೆಕ್ಸ್‌ಟೈಲ್ಸ್ ಕಣ್ಣನೂರು
4 ಕನಕವಲ್ಲಿ ಟೆಕ್ಸ್‌ಟೈಲ್ಸ್, ಚೊವ್ವ
ಇಂಡಿಯಾ ಮತ್ತು ಮೈಸೂರು ಸರ್ಕಾರದ ಸೂಚನೆಯಂತೆ ಸರ್ವರೂ ಈ ಹ್ಯಾಂಡ್‌ಲೂಮ್ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದು ಕೋರುತ್ತೇವೆ
ಕಡಿಮೆ ಬೆಲೆ ಅಧಿಕ ಗುಣವುಳ್ಳ ವಿವಿಧವಾದ ನಮ್ಮ ಬಟ್ಟೆಗಳನ್ನು ನೋಡಲು ಮತ್ತು ಕೊಳ್ಳಲು ಮೇಲ್ಕಂಡ ನಮ್ಮ ಅಂಗಡಿಗೆ ಇಂದೇ ಭೇಟಿ ಕೊಟ್ಟು ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ
ಟಿ. ಕುಮಾರನ್,
ಮ್ಯಾನೇಜಿಂಗ್ ಏಜೆಂಟ್

ಶ್ರೀ ಚಾಮುಂಡೇಶ್ವರಿ ಭವನ
ಇರ್ವಿನ್ ರಸ್ತೆ ಮೈಸೂರು
ತಾರೀಕು 3—3—1954 ರಿಂದ
ಬೇಸಿಗೆ ಕಾಲಕ್ಕಾಗಿ ಭವನದ ಮಹಡಿ ಮೇಲೆ ಅಪೂರ್ವ ರೀತಿಯಲ್ಲಿ
ಶೃಂಗರಿಸಲ್ಪಟ್ಟಿರುವ ಅಂಗಳ
ಪ್ರತಿ ದಿನ ಸಂಜೆ 4 ರಿಂದ 7 ಘಂಟೆ ವರೆಗೆ
ಫ್ರೂಟ್ ಸಲಾಡ್ ಐಸ್-ಕ್ರೀಂ, ಬನಾನಾ, ವೆನಿಲ್ಲಾ, ಬಾದಾಮ್ ಮತ್ತು ಗುಲಾಬ್ ಐಸ್‌ಕ್ರೀಮುಗಳು
ಬಾದಾಮ್ ಕೋಲ್ಡ್ ಫ್ರೂಟ್ ಜ್ಯೂಸುಗಳು, ಪೈನಾಪಲ್, ಆರೆಂಜ್, ಲೆಮನ್, ಟೊಮ್ಯಾಟೊ ಮತ್ತು ಗ್ರೇಪ್
ನಾರಿಂಗ ಷರಬತ್ತು, ನಿಂಬೆ ಮೊಸರಿನ ಷರಬತ್ತು, ವೆಜಿಟೆಬಲ್ ಕಟ್ಲೆಟ್ಟುಗಳು, ಸ್ಯಾಂಡ್‌ವಿಚ್ಚುಗಳು, ಟೋಸ್ಟ್ ಬಟರ್ ಮತ್ತು ಅಲೂಗೆಡ್ಡೆ ಉಪ್ಪೇರಿ
★
ನಮ್ಮ ಪ್ಲಾಂಟೇಷನ್ 'ಎ' ಕಾಫಿ ಒಂದು ವಿಶೇಷ
★
ಬೆಳಗ್ಗೆ ಮತ್ತು ಸಂಜೆ ಸ್ಪೆಷಲ್ ಸೆಟ್ ದೋಸೆಗಳು ಸಿಕ್ಕುತ್ತವೆ
★
★ ಬೇಸಿಗೆ ಕಾಲಕ್ಕನುಗುಣವಾದ ವಿಶೇಷ ಭೋಜನದ ತಯಾರಿಕೆ
★ ಭೋಜನ ಶಾಲೆಯಲ್ಲಿ ಖಾಯಂ ಬೋರ್ಡರುಗಳಿಗೆ ರಿಯಾಯಿತಿ

Edited, Printed and Published by A R Nagarajan at Sadhvi
D. S[illegible] Road, Mysore

ಟೆಲಿಫೋನ್ ನಂ 792

॥ ವಂದೇ ಮಾತರಂ ॥

ಇಂದಿನ ಪತ್ರಿಕೆ 3 ಕಾಸು

ಮದುವೆ ಜವಳಿ!
ಎಲ್ಲಾ ರಕಂಗಳಲ್ಲಿಯೂ
ರೇಷ್ಮೆ ಸೀರೆಗಳು
ನಮ್ಮಲ್ಲಿ ಬಂದಿವೆ, ಇಂದೇ ನೋಡಿ
M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ಸಾಧ್ವಿ

ಚಂದಾದರೆ
ಏಜಂಟರುಗಳ ಮೂಲಕ
ತಿಂಗಳಿಗೆ ೫೦ ಕಾಸು
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

SADHVI LEADING NATIONALIST DAILY OF MYSORE

ಸಂಪುಟ ೧೨] MYSORE WEDNESDAY 24-3-1954 ಮೈಸೂರು : ಬುಧವಾರ ೨೪-೩-೧೯೫೪ [ಸಂಚಿಕೆ ೨೩೨

ಈಜಿಪ್ಟ್ ಮತ್ತು ಅರಬ್ ರಾಜ್ಯಗಳಿಗೆ ರಷ್ಯದ ಎಚ್ಚರಿಕೆ

ಬಾಬುರೆಡ್ಡಿ ಪೋಲೀಸು ಕ್ಲಬ್ಬಿನ ಬಗ್ಗೆ ಪ್ರಶ್ನೋತ್ತರ

ಬೆಂಗಳೂರು ೨೩

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಎಂ ಚಿಕ್ಕಲಿಂಗಯ್ಯನವರ ಪ್ರಶ್ನೆಗೆ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಉತ್ತರಿಸುತ್ತಾ ಬೆಂಗಳೂರಿನಲ್ಲಿ ಗೆಜೆಟೆಡ್ ಪೋಲೀಸು ಅಧಿಕಾರಿಗಳ ಉಪಯೋಗಕ್ಕಾಗಿ ಬಾಬುರೆಡ್ಡಿ ಪೋಲೀಸ್ ಕ್ಲಬ್ ಎಂಬುದ ಏರ್ಪಾಡಾಗಿರುವುದೆಂದೂ, ಅದು ರಿಜಿಸ್ಟರ್ಡ್ ಕ್ಲಬ್ಬೆಂದೂ ತಿಳಿಸಿದರು. ಕ್ಲಬ್ಬಿಗೆ ಅಧಿಕಾರಿಯ ಹೆಸರನ್ನಿಡಲು ಸರ್ಕಾರದವರ ಅನುಮತಿ ಇಲ್ಲವೆಂದೂ ಆ ಹೆಸರನ್ನು ಇಡಲು ಪೋಲೀಸು ಇಲಾಖೆಯ ಹಲವು ಗೆಜೆಟೆಡ್ ಅಧಿಕಾರಿಗಳು ಅಪೇಕ್ಷಿಸಿದ್ದರಿಂದ ಸಚಿವರು ತಿಳಿಸಿದರು. ಕ್ಲಬ್ಬಿನ ಸಜ್ಜುಗೊಳಿಸಲು ೧೦,೦೦೦ ರೂ ಕೊಟ್ಟಿರುವಿರಾ ಎಂದು ಕೇಳಿದ ದಕ್ಕೆ ಅಲ್ಲಿ ಕಾರ್ಡ್ ಮೇಜು ಮುಂತಾದುವು ಇರುವುವೆಂಬುದು ಗೊತ್ತೆಂದೂ ಅವರ ವೆಚ್ಚವೆಷ್ಟಾಗಿರುವುದೆಂಬುದು ತಿಳಿದಿಲ್ಲವೆಂದೂ ಹೇಳಿದರು. ಸರ್ಕಾರವು ಕ್ಲಬ್ಬಿನ ಕಟ್ಟಡಕ್ಕಾಗಿ ೧೪ ಸಾವಿರ ರೂ ವೆಚ್ಚ ಮಾಡಿರುವುದೆಂದೂ, ಅಲ್ಲಿ ಮಾದಕ ಪದಾರ್ಥ ಅಥವಾ ಕಾಫಿ ಟೀ ಬಳಸುವುದೂ, ಇಲ್ಲವೆಂದೂ ಮಾಜಿ ನಿವೃತ್ತ ಅಧಿಕಾರಿಗಳನ್ನು ಅಲ್ಲಿಂದ ಹೊರಕ್ಕೆ ಹಾಕಿದ ವಿಷಯವು ತಮಗೆ ತಿಳಿಯದೆಂದೂ ಸಚಿವರು ಹೇಳಿದರು. ಅಲ್ಲಿ ನಡೆಯುವ ಕಾಕ್‌ಟೇಲ್ ಸಮಾರಂಭಗಳಿಗೆ ಅಧಿಕಾರಿಗಳ ಪತ್ನಿಯರ ಜೊತೆ ದೊಡ್ಡ ಬೀಳಿಂದ ಬಯಸುವವರುಂಟೇ ಎಂಬುದು ತಿಳಿದಿಲ್ಲವೆಂದೂ ಹೇಳಿದರು.

ವೇಣುಗೋಪಾಲಕೃಷ್ಣಸ್ವಾಮಿ ವರ್ಧಂತ್ಯುತ್ಸವ

ನಂಜನಗೂಡು ೨೩

ಇಲ್ಲಿನ ಶ್ರೀ ರಾಘವೇಂದ್ರಸ್ವಾಮಿಗಳ ಕಲ್ಯಾಣ ಮಂಟಪದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ವೇಣುಗೋಪಾಲಕೃಷ್ಣಸ್ವಾಮಿಯವರ ಪ್ರಥಮ ವರ್ಧಂತ್ಯುತ್ಸವವು ನಾಳೆ ಮತ್ತು ನಾಳಿದ್ದು ವ್ಯಾಸರಾಜ ಮಠದ ಶ್ರೀ ಪ್ರಸನ್ನ ತೀರ್ಥ ಶ್ರೀಪಾದಂಗಳವರಿಂದ ನೆರವೇರಿಸಲ್ಪಡುವುದು. ನಾಳೆ ಸಂಜೆ ೫ ಘಂಟೆಗೆ ಸ್ವಾಮಿಗಳವರು ಸಕಲ ಮರ್ಯಾದೆಗಳೊಡನೆ ಪುರಪ್ರವೇಶ ಮಾಡುವರು. ೬ ಘಂಟೆಗೆ ಕಲ್ಯಾಣ ಮಂಟಪದಲ್ಲಿ ಅವರಿಗೆ ಸ್ವಾಗತವೂ ಮತ್ತು ಅವರಿಂದ ಆಶೀರ್ವಾದ ಭಾಷಣವೂ ಜರುಗಿದನಂತರ ೭ ಘಂಟೆಗೆ ವಿ|| ಬಿ ಕೆ ಪದ್ಮನಾಭರಾಯರ ಗಾಯನವು ವಿ|| ಎ ವಿ ಕೃಷ್ಣಮಾಚಾರ್ಯರ ಪಿಟೀಲು ಮತ್ತು ವಿ|| ಹರಿಶ್ಚಂದ್ರರವರ ಮೃದಂಗದೊಡನೆ ನಡೆಯುವುದು. ನಾಳಿದ್ದು ಪ್ರಾತಃಕಾಲ ೭ ಘಂಟೆಗೆ ಶ್ರೀಗಳವರಿಂದ ಭಗವದ್ಗೀತೋಪದೇಶವೂ, ೯ ಘಂಟೆಗೆ ಭಕ್ತ ಮಂಡಲಿಯಿಂದ ಪಾದ ಪೂಜೆಯೂ, ಮಧ್ಯಾಹ್ನ ೪ ಘಂಟೆಗೆ ವಿದ್ವಾಂಸರಿಂದ ಉಪನ್ಯಾಸವೂ, ರಾತ್ರಿ ೮|| ಘಂಟೆಗೆ ಸ್ವಾಮಿಗಳಿಗೆ ಬಿನ್ನವತ್ತಳೆಯ ಸಮರ್ಪಣೆ ಮತ್ತು ವಿ|| ಸ್ವರಮೂರ್ತಿ ವೆಂಕಟನಾರಾಯಣರಾಯರಿಂದ ಗಾಯನವೂ ವಿ|| ಎ ವಿ ಕೃಷ್ಣಮಾಚಾರ್ಯರ ಪಿಟೀಲು ಮತ್ತು ವಿ|| ಹರಿಶ್ಚಂದ್ರರವರ ಮೃದಂಗದೊಡನೆ ನಡೆಯುವುವು.

ಸ್ವಾಮಿ ಸೀತಾರಾಮರವರ ಉಪವಾಸ ನಿಲ್ಲುವುದು

ಸ್ವಾಮಿ ಸೀತಾರಾಮರವರು ಈ ದಿನ ಉಪವಾಸ ಮುಕ್ತಾಯ ಮಾಡುವರು.

ವಿಧಾನ ಸೌಧದ ನಿರ್ಮಾಣದ ವಿರುದ್ಧವಾಗಿ ಉಪವಾಸ

ಕೆ ವೆಂಕಟರಾಮ ರೆಡ್ಡಿಯವರಿಗೆ ದೇವರ ಪ್ರೇರೇಪಣೆ

ಬೆಂಗಳೂರು ೨೩

ಇಲ್ಲಿ ಸರ್ಕಾರದವರು ವಿಧಾನ ಸೌಧವನ್ನು ಸುಮಾರು ಒಂದು ಕೋಟಿ ರೂ ವೆಚ್ಚದಲ್ಲಿ ನಿರ್ಮಿಸುತ್ತಿರುವುದರ ವಿರುದ್ಧವಾಗಿ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಸಹೋದರರಾದ ಶ್ರೀ ಕೆ ವೆಂಕಟರಾಮ ರೆಡ್ಡಿಯವರು ಮೊನ್ನೆಯಿಂದ ಇಲ್ಲಿ ಉಪವಾಸ ಸತ್ಯಾಗ್ರಹವನ್ನಾರಂಭಿಸಿರುವರು. ಈ ಸ್ಥಾನವಲಿ ಹಾಕಾರಿನ ಅಧಿಪತಿಯವರಿಗೆ ವಿಧಾನ ಸೌಧದ ನಿರ್ಮಾಣವು ನ್ಯಾಯಸಮ್ಮತವಲ್ಲವೆಂದೂ ಇದಕ್ಕೆ ಕಾರಣಕರ್ತರಾದ ಹಲವರ ಹೃದಯ ಪರಿವರ್ತನೆಗಾಗಿ ತಾವು ಈ ಕಾರ್ಯ ಕೈಗೊಳ್ಳಬೇಕಾಯಿತೆಂದೂ ಶ್ರೀ ವೆಂಕಟರಾಮ ರೆಡ್ಡಿಯವರು ತಿಳಿಸಿರುವರು. ಮೊನ್ನೆ ಬೆಳಗ್ಗೆ ಕನ್ಯಾಸಂಕ್ರಮಣದಲ್ಲಿ ತಾವು ದೇವಸ್ಥಾನಕ್ಕೆ ಹೋದಾಗ ಮೇಲ್ಕಂಡ ಕಾರಣಕ್ಕಾಗಿ ಉಪವಾಸದ ತಪಸ್ಸನ್ನಾಚರಿಸಲು ದೇವರಿಂದ ಪ್ರೇರಣೆಯಾಗಿ ತಮಗೆ ಸ್ಫೂರ್ತಿಯುಂಟಾಯಿತೆಂದೂ ಗುರುವಾರದಿಂದ ಒಂದು ವಾರದ ನಂತರ ಉಪವಾಸವನ್ನು ಮುಕ್ತಾಯ ಮಾಡುವುದಾಗಿ ಶ್ರೀ ರೆಡ್ಡಿಯವರು ತಿಳಿಸಿರುವರು.

ಓಟು ಎಣಿಕೆ ಕಾಲದಲ್ಲಿ ಸಿ ಜಿ ಕೆ ರೆಡ್ಡಿಯವರಿಗೆ ಪ್ರಜ್ಞೆ ತಪ್ಪಿತು

ಆಂಧ್ರ ಶಾಸನ ಸಭೆಯ ಕ್ಷೇತ್ರದಿಂದ ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ಉಮೇದುವಾರರಾಗಿ ನಿಂತಿದ್ದ ಮೈಸೂರು ಸಂಸ್ಥಾನದ ಶ್ರೀ ಸಿ ಜಿ ಕೆ ರೆಡ್ಡಿಯವರು ಅಧಿಕೃತ ಕಾಂಗ್ರೆಸ್ ಉಮೇದುವಾರರಾದ ಷೇಕ್ ಗಲೀಬ್‌ರವರಿಂದ ಸೋಲಿಸಲ್ಪಟ್ಟರು. ಓಟು ಎಣಿಕೆಯಾಗುತ್ತಿದ್ದಾಗಲೇ ಅವರಿಗೆ ಪ್ರಜ್ಞೆ ತಪ್ಪಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು.

ಹೋಟೇಲು ಕೆಲಸಗಾರರಿಬ್ಬರ ಆಮರಣಾಂತ ಉಪವಾಸ

ರಾಜಧಾನಿಯ ರೈಲ್ವೆ ಸ್ಟೇಷನ್ ಹೋಟೇಲಿನ ಮಾಲೀಕರು ಕೈಗಾರಿಕಾ ನ್ಯಾಯಾಲಯದ ತೀರ್ಪಿನಂತೆ ಶ್ರೀ ಕೆ ಎಸ್ ವಾಸುಶೆಟ್ಟಿಯವರನ್ನು ಕೆಲಸಕ್ಕೆ ಪುನಃ ತೆಗೆದುಕೊಳ್ಳದಿರುವ ಸಂಬಂಧದಲ್ಲಿ ಸರ್ಕಾರದವರು ಕೈಗೊಳ್ಳಬೇಕಾಗಿರುವ ಕ್ರಮವನ್ನು ಜರುಗಿಸದೇ ಇರುವುದಕ್ಕಾಗಿಯೂ ಹೋಟೇಲಿನ ಕಂಟ್ರಾಕ್ಟು ಇದೇ ತಿಂಗಳು ೩೧ನೇ ತಾರೀಕಿಗೆ ಮುಕ್ತಾಯವಾಗಲಿರುವುದಕ್ಕಾಗಿಯೂ ಹೊಸ ಕೆಲಸಗಾರರು ತಮಗೆ ಯಾವ ಪರಿಹಾರವೂ ಸಿಕ್ಕದಿರುವ ಪ್ರಯುಕ್ತ ಈ ದಿನದಿಂದ ಕಾರ್ಮಿಕ ಶಾಸನದರ ಕಛೇರಿ ಬಳಿ ಆಮರಣಾಂತ ಉಪವಾಸ ಕೈಗೊಂಡಿರುವರು. ಸರ್ಕಾರದವರು ೨೪ ಘಂಟೆಯೊಳಗೆ ಈ ಸಂಬಂಧವಾಗಿ ಯಾವ ತೀರ್ಮಾನವನ್ನೂ ಮಾಡದಿದ್ದರೆ ನಗರದ ಹೋಟೇಲು ಕೆಲಸಗಾರರ ಸಂಘದ ಅಧ್ಯಕ್ಷರೂ ಸಹ ಅವರೊಡನೆ ಉಪವಾಸ ಕೈಗೊಳ್ಳಲಿರುವರೆಂದು ತಿಳಿದಿದೆ.

○ ಕಾಶಿಯ ವಿಶ್ವನಾಥ ದೇವಾಲಯಕ್ಕೆ ಹರಿಜನರು ಹೋಗಲು ಅವಕಾಶ ದೊರಕಿಸಿಕೊಡದಿದ್ದರೆ ಶಾಂತಿಯುತವಾದ ಸತ್ಯಾಗ್ರಹ ಹೂಡಲು ಮೊನ್ನೆ ಕಾಶಿಯಲ್ಲಿ ಸೇರಿದ್ದ ಹರಿಜನರ ಮತ್ತು ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ನಿರ್ಧರಿಸಲಾಯಿತು.

ಅರಬ್ ರಾಜ್ಯಗಳು ಮತ್ತು ಈಜಿಪ್ಟಿಗೆ ರಷ್ಯದ ಎಚ್ಚರಿಕೆ

ಪಾಶ್ಚಾತ್ಯ ರಾಷ್ಟ್ರಗಳು ಏರ್ಪಾಡು ಮಾಡುತ್ತಿರುವ ಮಧ್ಯ ಪ್ರಾಚ್ಯ ಮಿಲಿಟರಿ ಒಪ್ಪಂದದಲ್ಲಿ ಈಜಿಪ್ಟ್ ಮತ್ತು ಅರಬ್ ರಾಷ್ಟ್ರಗಳು ಸೇರಿದಲ್ಲಿ ಅಂತಹ ನಡವಳಿಕೆಗಳು ರಷ್ಯದ ಸ್ನೇಹಕ್ಕೆ ವಿರುದ್ಧವಾಗುವುದೆಂದೂ ಮತ್ತು ಶತ್ರುತ್ವ ಸಾಧನೆಯ ಕೃತ್ಯಗಳೆಂದೂ ಪರಿಗಣಿಸುವುದಾಗಿ ರಷ್ಯವು ನೆನ್ನೆ ಮೇಲ್ಕಂಡ ರಾಷ್ಟ್ರಗಳಿಗೆ ತಿಳಿಸಿರುವುದಾಗಿ ಗೊತ್ತಾಗಿದೆ.

ಮೈಸೂರು ಆಯುರ್ವೇದ ಕಾಲೇಜಿನ ವರ್ಗಾವಣೆ?

ಬೆಂಗಳೂರು ೨೩

ಹಿರಿಯ ಶಾಸನ ಸಭೆಯ ಪ್ರಶ್ನೋತ್ತರ ಸಮಯದಲ್ಲಿ ನೆನ್ನೆ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ಶ್ರೀ ಎ ಎಂ ರಾಮರಾಯರ ಪ್ರಶ್ನೆಗೆ ಉತ್ತರವಿತ್ತು ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಇಲ್ಲಿಗೆ ವರ್ಗಾಯಿಸುವ ವಿಷಯವು ಪರಿಶೀಲನೆಯಲ್ಲಿರುವುದೆಂದೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಕ್ಲಿನಿಕಲ್ ಸೌಲಭ್ಯವನ್ನು ಒದಗಿಸಿ ಕಾಲೇಜಿನ ದರ್ಜೆಯನ್ನು ಇನ್ನೂ ಹೆಚ್ಚಿಸಲು ಉದ್ದೇಶಿಸಲಾಗಿದೆಯೆಂದೂ ತಿಳಿಸಿದರು.

ಈ ಸ್ಥಾನದಲ್ಲಿ ಸರ್ಕಾರಕ್ಕೆ ಸಂಬಂಧಿಸಿದ ಒಂದು ಕಾಲೇಜನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರವನ್ನು ಕೋರುವ ಅಥವಾ ಸಂಸ್ಥಾನ ಸರ್ಕಾರದವರೇ ಈ ಬಗ್ಗೆ ಕ್ರಮ ಕೈಗೊಳ್ಳುವ ವಿಷಯವನ್ನು ಪರಿಶೀಲಿಸಲಾಗುವುದೆಂದು ವ್ಯವಸಾಯ ಮಂತ್ರಿ ಡಾ|| ನಾಗನಗೌಡರು ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರಿಗೆ ತಿಳಿಸಿದರು.

ಸಂಸ್ಥಾನದ ಹಲವೆಡೆಗಳಲ್ಲಿ ಪರೀಕ್ಷಾರ್ಥವಾಗಿ ಟ್ಯೂಬ್ ಬಾವಿ ತೋಡಲಾಗುವುದೆಂದೂ ತಿಳಿಸಲಾಯಿತು.

ನೌಕರರಿಗೆ ಮನೆ ಕಟ್ಟುವುದಕ್ಕೆ ಮುಂಗಡ ಹಣ ತಪ್ಪಿಸಲಾಗದು

ಶಾಸನಸಭೆಯಲ್ಲಿ ಮುಖ್ಯ ಮಂತ್ರಿಯವರ ಉತ್ತರ

ಸ್ವಂ ಸು ಫೋನ್] ಬೆಂಗಳೂರು ೨೩

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಮುಖ್ಯ ಮಂತ್ರಿಯವರು ಉತ್ತರವಿತ್ತು ಸರ್ಕಾರಿ ನೌಕರರಿಗೆ ಮನೆ ಕಟ್ಟಲು ಕಳೆದ ೫೨-೫೩ನೇ ಸಾಲಿನಲ್ಲಿ ಮುಂಗಡವಾಗಿ ೩,೫೪,೫೫೬ ರೂ ಮತ್ತು ೫೩ ಸಾಲಿನಲ್ಲಿ ೪,೫೭,೬೧೪ ರೂ ಅನ್ನು ಕೊಡಲಾಯಿತೆಂದು ಹೇಳಿದರು. ಧನಾಭಾವಕ್ಕಾಗಿ ಪ್ರತಿವರ್ಷ ಕೊಡಲಾಗುವ ಈ ಮುಂಗಡವಾಗಿ ಕೊಡುವುದನ್ನು ನಿಲ್ಲಿಸಬಾರದೇ ಎಂದು ಕೇಳಲಾಗಿ ಅದು ಸಾಧ್ಯವಿಲ್ಲವೆಂದೂ ಎಲ್ಲಾ ಪ್ರಾಂತ ಸರ್ಕಾರಗಳೂ ಮತ್ತು ಕೇಂದ್ರ ಸರ್ಕಾರವೂ ಅದನ್ನು ಕೊಡುತ್ತಿವೆಯೆಂದೂ ಹೇಳಿದರು.

○ ರಾಜಧಾನಿಯ ಹಂಟರ್ಸ್ ಫುಟ್‌ಬಾಲ್ ಕ್ಲಬ್ಬಿನ ಆಟಗಾರರಾದ ಶ್ರೀ ನೂರುಲ್ಲಾ ಷರೀಫ್ ಮತ್ತು ಇತರ ೧೮ ಜನರು ಸಂಸ್ಥಾನದ ಫುಟ್‌ಬಾಲ್ ಸಂಘಕ್ಕೆ ಸೇರದ ಮಂಡ್ಯ ಮತ್ತು ನಂಜನಗೂಡುಗಳ ಟೂರ್ನಮೆಂಟುಗಳಲ್ಲಿ ಭಾಗವಹಿಸಿದುದಕ್ಕಾಗಿ ಸಂಸ್ಥಾನ ಸಂಘದ ಮೈಸೂರು ಸಮಿತಿಯವರು ಶ್ರೀ ಷರೀಫರನ್ನು ಒಂದು ವರ್ಷ ಕಾಲ ಡಿಬಾರ್ ಮಾಡಿರುವರು. ಉಳಿದವರು ಮುಂದಿಗೆ ಎಚ್ಚರಿಕೆ ವಿಧಿಸಲಾಗಿದೆ.

ವಿಧಾನ ಸೌಧದ ಬಗ್ಗೆ ಉಪವಾಸ

ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ ಸು ಫೋನ್] ಬೆಂಗಳೂರು ೨೩

ವಿಧಾನ ಸೌಧ ನಿರ್ಮಾಣಕ್ಕಾಗಿ ಆಕ್ಷೇಪಿಸಿ ಶ್ರೀ ಕ್ಯಾಸಂಬಳ್ಳಿ ವೆಂಕಟರಾಮ ರೆಡ್ಡಿಯವರು ಮೊನ್ನೆಯಿಂದ ಕೈಗೊಂಡಿರುವ ಉಪವಾಸದ ಬಗ್ಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಹೇಳಿಕೆಯೊಂದನ್ನಿತ್ತು, ಉಪವಾಸ ಮಾಡುವ ಮುಂಚೆ ಶ್ರೀ ರೆಡ್ಡಿಯವರು ತಮ್ಮನ್ನು ಕೇಳಿದ್ದರೆ ಚೆನ್ನಾಗಿತ್ತೆಂದು ಹೇಳುತ್ತಾರೆ. ಕಟ್ಟಡದ ನಿರ್ಮಾಣಕ್ಕಾಗಿ ವೆಚ್ಚವಾಗುವ ಹಣವು ೧ ಕೋಟಿ ರೂ ಅಲ್ಲವೆಂದೂ, ೫೦ ಲಕ್ಷವೆಂದೂ ಅವರು ಹೇಳಿ, ಶ್ರೀ ಕೆ ಸಿ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಆ ಸೌಧದ ನಿರ್ಮಾಣವು ಯೋಚಿಸಲ್ಪಟ್ಟು, ಆಗಲೇ ಪ್ರಧಾನಿ ನೆಹರೂರವರು ಅದರ ಗುದ್ದಲಿಪೂಜೆಯನ್ನು ಮಾಡಿದ್ದರಿಂದೂ, ವಿಧಾನ ಸೌಧಕ್ಕೆ ಹಿಂದೆ ೩೩.೬೪ ಲಕ್ಷ ರೂ ವೆಚ್ಚದ ಅಂದಾಜು ಇದ್ದಿತೆಂದೂ, ಈಗ ಅದನ್ನು ೫೦ ಲಕ್ಷಕ್ಕೆ ಹೆಚ್ಚಿಸಲಾಗಿದೆಯೆಂದೂ ಹೇಳಿದರು.

ಸರ್ಕಾರಿ ಕಛೇರಿಗಳಲ್ಲಿ ಸ್ಥಳಾಭಾವವುಂಟಾಗಿರುವುದೆಂದೂ, ಇಂಜಿನಿಯರಿಂಗ್ ಇಲಾಖೆಯು ದೊಡ್ಡದಾಗುತ್ತಿರುವುದೆಂದೂ, ಅವುಗಳಿಗೆ ಸ್ಥಳ ಕಲ್ಪಿಸಲು ಸಾಧ್ಯವಾಗುವಂತೆ ವಿಧಾನ ಸೌಧಕ್ಕೆ ಅರಾರಾ ಕಛೇರಿಯನ್ನು ವರ್ಗಾಯಿಸಲು ಆಲೋಚಿಸಿ ಅದರಂತೆ ೫೨ ಸಾಲಿನಲ್ಲಿ ಕಟ್ಟಡಕ್ಕೆ ೧೨ ಲಕ್ಷ ರೂ ವೆಚ್ಚ ಮಾಡಲಾಯಿತೆಂದೂ, ೫೪ ೫೫ರಲ್ಲಿ ೨೫ ಲಕ್ಷ ರೂ ತೆಗೆದಿಟ್ಟಿದೆಯೆಂದೂ ಶ್ರೀ ಹನುಮಂತಯ್ಯನವರು ಹೇಳಿದರು.

ಅಲ್ಲಿ ೧೫೦ ಜನ ಪಾರಿಭಾಷಿಕ ಪ್ರವೀಣರೂ, ೧,೬೦೦ ಜನ ಕೆಲಸಗಾರರೂ ಕೆಲಸ ಮಾಡುತ್ತಿರುವರೆಂದೂ ಇಂತಹ ಕಾರ್ಯಗಳು ನಿರುದ್ಯೋಗವನ್ನು ಕಡಿಮೆ ಮಾಡಲು ಸಾಧಕವೆಂದೂ ನಿರುದ್ಯೋಗ ನಿವಾರಣೆಗಾಗಿ ಜನರಿಂದ ಬೇಡಿಕೆಗಳು ಬರುತ್ತಿರುವುವೆಂದೂ ಹೇಳಿದರು.

ಈ ವೆಚ್ಚಕ್ಕೆ ಶಾಸನ ಸಭೆಯ ಒಪ್ಪಿಗೆಯು ದೊರೆತು ಅವನ್ನು ಪ್ರಜಾ ಸತ್ತಾತ್ಮಕ ರೀತಿಯಿಂದ ಮಾಡಲಾಗುತ್ತಿರುವುದೆಂದೂ, ವೆಚ್ಚವು ಅನ್ಯಾಯವಲ್ಲವೆಂದೂ ಮುಖ್ಯ ಮಂತ್ರಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಹಿರಿಯ ಶಾಸನ ಸಭೆಗೆ ಉಮೇದುವಾರರು

ಮೈಸೂರು ೨೩

ಸಂಸ್ಥಾನದ ಹಿರಿಯ ಶಾಸನ ಸಭೆಗೆ ನಗರದ ಮಾಜಿ ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಕಾಂಗ್ರೆಸ್ಸಿನ ಪರವಾಗಿಯೂ, ಚಾಮರಾಜನಗರದ ಶ್ರೀ ಆರ್ ಪಿ. ರೇವಣ್ಣನವರು ಪ್ರಜಾ ಸಮಾಜವಾದಿ ಪಕ್ಷದ ಪರವಾಗಿಯೂ ಮತ್ತು ಶ್ರೀ ಬಿ ಎಂ ಎಸ್. ಆರಾಧ್ಯರು ಸ್ವತಂತ್ರವಾಗಿಯೂ ಈ ದಿನ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ೧ ಸ್ಥಾನಕ್ಕೆ ಜಿಲ್ಲಾಧಿಕಾರಿಗಳ ಬಳಿ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿದರು.

○ ಫ್ರೆಂಚ್ ಭಾರತದ ಮಂತ್ರಿಮಂಡಲವನ್ನು ಬೇಗನೆ ರದ್ದುಪಡಿಸಲಾಗುವುದೆಂದು ವರದಿಯಾಗಿದೆ. ಅಲ್ಲಿನ ಮಂತ್ರಿಗಳು ಭಾರತದೊಡನೆ ಸ್ವಾತಂತ್ರ್ಯ ಜನಮತಗಣನೆ ಇಲ್ಲದೆ ವಿಲೀನವಾಗಬೇಕೆಂಬ ಪ್ರಸ್ತಾಪಕ್ಕೆ ಬೆಂಬಲವಿತ್ತಿದ್ದಾರೆ.

ಶಿವಮೊಗ್ಗದಲ್ಲಿ ಪ್ರಥಮ ದರ್ಜೆ ಕಾಲೇಜು

ವಿದ್ಯಾ ಮಂತ್ರಿಗಳ ಸೂಚನೆ

ಬೆಂಗಳೂರು ೨೩

ಶಿವಮೊಗ್ಗೆಯಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸುವ ವಿಷಯವು ಪರ್ಯಾಲೋಚನೆಯಲ್ಲಿರುವುದಾಗಿ ಹಿರಿಯ ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸಿರುತ್ತಾರೆ

ವಿದ್ಯುಚ್ಛಕ್ತಿಯ ಮೇಲೆ ಸರ್ ಚಾರ್ಜು ಮತ್ತು ಸ್ಟಾಂಪು ದರವನ್ನು ಹೆಚ್ಚಿಸುವ ಬಗ್ಗೆ ಬಂದ ತಿದ್ದುಪಡಿ ಮಸೂದೆಗಳನ್ನು ಸಭೆಯು ಒಪ್ಪಿರುತ್ತದೆ ಇದರಿಂದ ವಿದ್ಯುಚ್ಛಕ್ತಿಯ ಸರ್ ಚಾರ್ಜು ಯೂನಿಟ್ಟಿಗೆ ೨ ಕಾಸಿನಿಂದ ೪ ಕಾಸಿಗೆ ಹೆಚ್ಚುವುದು ಮತ್ತು ಸ್ಟಾಂಪು ದರವು ಸಾವಿರ ರೂ. ಗೆ ೧೨॥ ರೂ ನಿಂದ ೨೫ಕ್ಕೆ ಹೆಚ್ಚಲಿದೆ ಮೊದಲನೆಯದರಿಂದ ಸರ್ಕಾರಕ್ಕೆ ೧೨ ಲಕ್ಷ ಮತ್ತು ಎರಡನೆಯ ದರಿಂದ ೩೧ ಲಕ್ಷ ರೂ. ವರಮಾನ ಬರುವ ನಿರೀಕ್ಷೆಯಿದೆ

ತಿರುವಾಂಕೂರಿನಲ್ಲಿ ಭೂ ಸುಧಾರಣೆ

ಭೂ ಸುಧಾರಣೆಯ ವಿಷಯವನ್ನು ತಮ್ಮ ಸರ್ಕಾರದವರು ಪ್ರಥಮವಾಗಿ ಪರಿಶೀಲಿಸುವರೆಂದೂ, ಗೇಣಿದಾರರಿಗೆ ರಕ್ಷಣೆ ಕೊಡಲು ಸೂಕ್ತ ಶಾಸನವನ್ನು ತರಲಾಗುವುದೆಂದೂ ತಿರುವಾಂಕೂರು–ಕೊಚ್ಚಿಯ ರಾಜಪ್ರಮುಖರು ನೆನ್ನೆ ಆರಂಭವಾದ ಅಲ್ಲಿನ ಶಾಸನ ಸಭೆಯನ್ನು ದ್ದೇಶಿಸಿ ಭಾಷಣ ಮಾಡಿ ತಿಳಿಸಿದರು. ಒಬ್ಬ ಮನುಷ್ಯನು ಎಷ್ಟು ಭೂಮಿಯನ್ನು ಹೊಂದಿರಬಹುದೆಂಬುದಕ್ಕೆ ಸಹ ಗೊತ್ತುಪಡಿಸಲು ಆಲೋಚಿಸಲಾಗುವುದೆಂದೂ ಅವರು ಹೇಳಿದರು ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡಲೂ ಯೋಚಿಸಲಾಗುವುದೆಂದೂ, ೧೪ ವಯಸ್ಸಿನೊಳಗಿರುವ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಲಾಗುವುದೆಂದೂ ರಾಜಪ್ರಮುಖರು ಹೇಳಿದರು.

ಮಹಾರಾಜರೊಡನೆ ಭೇಟಿ

ರಾಜಧಾನಿಯ ಶ್ರೀಗಳಾದ ಎಂ. ಆರ್ ಸಿ ಬಸಪ್ಪ ಮತ್ತು ಎ ಕೃಷ್ಣಮೂರ್ತಿರಾಯರು ನೆನ್ನೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ ಹಾರ್ಡಿಜ್ ಫಾರಂ ಬಳಿ ಹೊಸದಾಗಿ ಕಟ್ಟಲಾಗಿರುವ ದೇವಾಲಯದ ಆರಂಭೋತ್ಸವವನ್ನು ನೆರವೇರಿಸುವಂತೆ ಕೋರಿದರು

ರಾಜಪ್ರಮುಖರಿಗೆ ತಗಡೂರರ ಪತ್ರ

ಶ್ರೀ ತಗಡೂರು ರಾಮಚಂದ್ರರಾಯರು ಮತ್ತು ವಕೀಲರಾದ ಶ್ರೀ ಎ.ಎಸ್ ರಾಮಯ್ಯನವರು ರಾಜಪ್ರಮುಖರಾದ ಶ್ರೀಮನ್ಮಹಾರಾಜರಿಗೆ ಒಂದು ಪತ್ರಬರೆದು ಕೋರ್ಟ್ ಫೀ ಸ್ಟಾಂಪಿನ ದರವನ್ನು ಗೊತ್ತುಪಡಿಸುವ ತಿದ್ದುಪಡಿ ಮಸೂದೆಯು ಶಾಸನ ಸಭೆಯಲ್ಲಿ ಅಂಗೀಕಾರವಾಗಿ ಪ್ರಭುಗಳ ರುಜುವಿಗೆ ಕಳುಹಿಸಲ್ಪಟ್ಟಿರಬಹುದೆಂದೂ ಹಾಗೆಯೇ ಮಾರಾಟ ತಿದ್ದುಪಡಿ ಮಸೂದೆಯನ್ನೂ ಕಳುಹಿಸಬಹುದೆಂದೂ ಅವುಗಳು ರಾಜ್ಯಾಂಗಕ್ಕೆ ವಿರೋಧವಾಗಿರುವುದರಿಂದ ಆ ಬಗ್ಗೆ ಹೈಕೋರ್ಟಿಗೆ ರಿಟ್ ಅರ್ಜಿ ಹಾಕದೆ ಬೇರೆ ಮಾರ್ಗವಿಲ್ಲವೆಂದೂ, ಆದ್ದರಿಂದ ರಾಜಪ್ರಮುಖರು ಅವುಗಳಿಗೆ ರುಜು ಹಾಕಬಾರದೆಂದೂ ಕೋರಿರುತ್ತಾರೆ ಈ ಸಂಬಂಧವಾಗಿ ಕೆಳಗಿನ ಶಾಸನ ಸಭೆಯ ಅಧ್ಯಕ್ಷರಿಗೆ ಬರೆದಿರುವ ಪತ್ರದ ನಕಲನ್ನು ಪ್ರಭುಗಳ ಕಾರ್ಯದರ್ಶಿಗಳಿಗೆ ಕಳುಹಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭–೫ ವಾರ್ತೆ. ೭–೩೦ ಸುಂದರರಾಜ ಅಯ್ಯಂಗಾರ್ ಕೊಳಲು. ಮಧ್ಯಾಹ್ನ ೧–೪೦ ಮತ್ತು ೧–೫೧ ಕ್ಲಾರಿಯೊನೆಟ್. ೨ ಟಿ. ಸುಂದರರಾಜ ಅಯ್ಯಂಗಾರ್ ಪಿಟೀಲು. ಸಂಜೆ ೫–೪೦ ಎಸ್. ವೆಂಕಟರಮಣಯ್ಯ ವೀಣೆ. ೬ ಹಿಂದಿ ಪಾಠ. ೬–೧೫ ಭಜನ ಗಾನ. ೭–೫ ಹಳ್ಳಿ ಹಾಡುಗಳ ವಾದ್ಯಗೋಷ್ಠಿ ೭–೪೦ ಶಿವಪ್ರಸಾದ್ ರವರಿಂದ ರಾಮಾಯಣ ವಾಚನ. ೮ ವಿ. ದೊರೆಸ್ವಾಮಿ ಅಯ್ಯಂಗಾರ್ ರವರ ವೈವಿಧ್ಯ. ೯–೧೫ ರಾಗ, ತಾನ ಮತ್ತು ಪಲ್ಲವಿ ೯–೪೦ ತಿಮ್ಮ ಪೊಣ್ಣನ ೧೦–೧೫

ಆಂಧ್ರ ಶಾಸನ ಸಭೆಯಲ್ಲಿ ೭೨ ಸದಸ್ಯರ ಸಭಾ ತ್ಯಾಗ

ಆಡಳಿತಕ್ಕೆ ಸಂಬಂಧಿಸಿದ ಕೆಲವು ಕಾರ್ಯಗಳಲ್ಲಿ ಶಾಸನ ಸಭಾ ಸದಸ್ಯರು ಕೈಹಾಕಬಾರದೆಂದು ಆಂಧ್ರ ಶಾಸನ ಸಭೆಯ ಅಧ್ಯಕ್ಷರು ನೆನ್ನೆ ರೂಲಿಂಗ್ ಕೊಟ್ಟು ಕಮ್ಯೂನಿಸ್ಟ್ ಸದಸ್ಯರೊಬ್ಬರು ತಂದಿದ್ದ ಹಕ್ಕುಬಾಧ್ಯತಾ ಸೂಚನೆಯನ್ನು ತಳ್ಳಿಹಾಕಿದುದರಿಂದ ಸಭೆಯ ೭೦ ಮಂದಿ ವಿರೋಧ ಪಕ್ಷಗಳ ಸದಸ್ಯರು ಮತ್ತು ಇಬ್ಬರು ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು. ಒಬ್ಬ ಸದಸ್ಯರು ಶಾಸನ ಸಭೆಯಲ್ಲಿ ಪೊಲೀಸು ಅಧಿಕಾರಿಯೊಬ್ಬರ ವಿಷಯವಾಗಿ ಭಾಷಣ ಮಾಡಿದುದಕ್ಕಾಗಿ ಅಧಿಕಾರಿಯು ಸದರಿ ಸದಸ್ಯರನ್ನು ಬೆದರಿಸಿದರೆಂದು ಹಕ್ಕುಬಾಧ್ಯತಾ ಸೂಚನೆಯನ್ನು ತರಲಾಗಿತ್ತು

ಫ್ರೆಂಚ್ ಭಾರತದ ಪೊಲೀಸರಿಗೆ ಬಂದೂಕಗಳಿಲ್ಲ

ಭಾರತದ ಫ್ರೆಂಚ್ ಸ್ವಾಧೀನಗಳಲ್ಲಿರುವ ಪೊಲೀಸರು ಅಲ್ಲಿ ಚಳುವಳಿ ನಡೆಸುತ್ತಿರುವ ಜನರ ಕಡೆಗೆ ಸೇರುವರೆಂಬ ಸಂಶಯವಿರುವುದರಿಂದ ಫ್ರೆಂಚ್ ಭಾರತೀಯ ಅಧಿಕಾರಿಗಳು ನಂಬಿಕೆಗರ್ಹರಾದ ಹಲವರನ್ನು ಬಿಟ್ಟು ಮಿಕ್ಕೆಲ್ಲ ಪೊಲೀಸರಿಗೂ ಶಸ್ತ್ರಾಸ್ತ್ರ ಕೊಡುವುದನ್ನು ನಿಲ್ಲಿಸಿರುತ್ತಾರೆಂದು ವರದಿಯಾಗಿದೆ.

ಚಾಮರಾಜನಗರದಲ್ಲಿ ಹಗಲು ಕಳ್ಳತನ

ಚಾಮರಾಜನಗರದಲ್ಲಿ ಕಳೆದ ಒಂದು ವಾರದಿಂದ ಹಗಲು ಹೊತ್ತಿನಲ್ಲೇ ಮನೆಗಳ ಬೀಗ ಒಡೆದು ಕಳ್ಳತನ ಮಾಡುವುದು ಹೆಚ್ಚಾಗಿರುವುದೆಂದೂ, ಈ ಬಗ್ಗೆ ಪೊಲೀಸು ಇಲಾಖೆಯವರು ಹೆಚ್ಚು ಗಮನವಿತ್ತು ಇಂತಹ ದುಷ್ಕೃತ್ಯಗಳನ್ನು ತಪ್ಪಿಸಬೇಕೆಂದೂ ಅಲ್ಲಿನ ನಿವಾಸಿಯೊಬ್ಬರು ಕೋರಿರುತ್ತಾರೆ

ಪತ್ರಿಕೋದ್ಯಮ

ರಾಜಧಾನಿಯ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದವರು ಪತ್ರಿಕೋದ್ಯಮ ಎಂಬ ಪತ್ರಿಕೆಯ ಪ್ರಥಮ ವಾರ್ಷಿಕ ಸಂಚಿಕೆಯ ಪ್ರತಿಯೊಂದನ್ನು ನಮಗೆ ಕಳುಹಿಸಿರುತ್ತಾರೆ ಪತ್ರಿಕೋದ್ಯಮದ ವಿವಿಧ ಸಮಸ್ಯೆಗಳು, ಅಮೆರಿಕದ ಪತ್ರಿಕೋದ್ಯಮದ ಕಾಲೇಜು, ಡಿ.ವಿ ಗುಂಡಪ್ಪನವರು ಇವೇ ಮುಂತಾದ ವಿಷಯಗಳ ಮೇಲೆ ಲೇಖನಗಳನ್ನು ಬರೆಯಲಾಗಿದೆ. ಇಂಗ್ಲೀಷಿನ ಹಲವು ಲೇಖನಗಳೂ ಇವೆ. ಪತ್ರಿಕೋದ್ಯಮದಲ್ಲಿ ಆಸಕ್ತಿ ಹೊಂದಿರುವವರು ಇದನ್ನು ಅವಶ್ಯಕವಾಗಿ ಹೊಂದಿ ಅದರಲ್ಲಿರುವ ಉಪಯುಕ್ತವಾದ ವಿಷಯಗಳನ್ನು ಮನನ ಮಾಡುವುದು ಉಚಿತವಾಗಿದೆ

ಪಾಕಿಸ್ತಾನಕ್ಕೆ ಅಮೆರಿಕದ ಮಿಲಿಟರಿ ನಿಯೋಗದ ಆಗಮನ

ಪಾಕಿಸ್ತಾನಕ್ಕೆ ಅಮೆರಿಕದ ಮಿಲಿಟರಿ ಸಹಾಯದ ನಿರ್ಧಾರದ ಅಂಗವಾಗಿ ಬ್ರಿಗೇಡಿಯರ್ ಜನರಲ್ ಹೆಚ್. ಎಸ್ ಮೆಯರ್ ರವರ ನೇತೃತ್ವದಲ್ಲಿ ಅಮೆರಿಕದ ೧೧ ಜನರುಳ್ಳ ಮಿಲಿಟರಿ ನಿಯೋಗವು ನೆನ್ನೆ ಕರಾಚಿಗೆ ಆಗಮಿಸಿತು ಅದು ಪಾಕಿಸ್ತಾನದಲ್ಲಿ ೨ ವಾರಗಳ ವರೆಗೆ ಇರುವುದು. ಲಂಡನ್ನಿನಲ್ಲಿರುವ ಪಾಕಿಸ್ತಾನದ ರಕ್ಷಣಾ ಇಲಾಖಾ ಕಾರ್ಯದರ್ಶಿಗಳೊಡನೆ ನಿಯೋಗವು ಮಾತುಕತೆ ನಡೆಸಿರುತ್ತದೆ

ಭಾರತ ವಿಮಾನ ದಳದ ೨೧ ನೇ ವಾರ್ಷಿಕೋತ್ಸವ

ಏಪ್ರಿಲ್ ೧ ನೇ ತಾ|| ಭಾರತ ವಿಮಾನ ದಳದ ೨೧ ನೇ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬಹುಮಾನ ವಿನಿಯೋಗ ಮಾಡುವರು. ಬೆಳಗ್ಗೆ ಜಾಲಹಳ್ಳಿಯಲ್ಲಿ ಪೆರೇಡು ನಡೆಯುವುದು ನಂತರ ಸಾರ್ವಜನಿಕರಿಗೆ ವಿಮಾನ ದಳದ ಶಿಕ್ಷಣ ಕೇಂದ್ರದ ನಾನಾ ವಿಭಾಗಗಳನ್ನು ತೋರಿಸಲಾಗುವುದು ಏಪ್ರಿಲ್ ೪ ನೇ ತಾ|| ಯಲಹಂಕ ನಿಲ್ದಾಣದಲ್ಲಿ ರ್‍ಯಾಲಿ ಮತ್ತು ಕ್ರೀಡೆಗಳು ನಡೆಯುತ್ತವೆ

ತಿರುವಾಂಕೂರು ಮಂತ್ರಿಗಳ ಸಂಬಳದಲ್ಲಿ ಖೋತಾ

ತಿರುವಾಂಕೂರು-ಕೊಚ್ಚಿಯ ಹೊಸ ಮಂತ್ರಿಮಂಡಲದ ಸದಸ್ಯರು ತಮ್ಮ ವೇತನವನ್ನು ೨೫೦ ರೂ ನಷ್ಟು ಕಡಿಮೆ ಮಾಡಿಕೊಂಡು ೫೦೦ ರೂ. ತೆಗೆದುಕೊಳ್ಳಲು ನಿರ್ಧರಿಸಿರುವರೆಂದು ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

[illegible]	ರೂ ಇಂದ	ರೂ.ಗೆ
ಕಡಲೆಕಾಯಿ	೩೦ ೧೨ ೦	೩೪ ೧೪ ೦
ಎಳ್ಳು	೭೦ ೦ ೦	
ಹರಳುಬೀಜ	೨೬ ೬ ೦	೨೭ ೧೦ ೦
ಹುಚ್ಚೆಳ್ಳು	೪೨ ೨ ೦	೪೬ ೧೦ ೦
ಹೊಂಗೆಬೀಜ	೧೬ ೨ ೦	೨೨ ೧೦ ೦
ಹುರುಳಿ	೨೫ ೨ ೦	೨೮ ೮ ೦
ಹೆಸರು	೪೯ ೪ ೦	
ಅಲಸಂದೆ	೪೭ ೧೪ ೦	೪೬ ೦ ೦
ಅವರೆ	೪೬ ೦ ೦	
ಕಡಲೆ	೪೩ ೨ ೦	೪೬ ೨ ೬
[illegible] ಬೀಜ	೨೬ ೬ ೦	೪೧ ೪ ೦
ಹುಣಸೇಬೀಜ	೧೯ ೮ ೦	೧೪ ೪ ೦
ಹುಣಸೇಹಣ್ಣು	೬ ೮ ೦	೯ ೧೫ ೦
ಸೀಗೆಕಾಯಿ	೪ ೧೧ ೦	
ತೆಂಗಿನಕಾಯಿ ೧೦೦೦	೧೭೦ ೦ ೦	೨೪೧ ೦ ೦

ಫ್ರೆಂಚ್ ಭಾರತದಲ್ಲಿ ಜನಮತಗಣನೆಗಾಗಿ ನಿರ್ಧಾರ

ಭಾರತದಲ್ಲಿರುವ ಫ್ರೆಂಚ್ ಸ್ವಾಧೀನಗಳನ್ನು ಭಾರತದೊಡನೆ ಐಕ್ಯಗೊಳಿಸುವ ಸಂಬಂಧವಾಗಿ ಫ್ರೆಂಚ್ ಮಂತ್ರಿಮಂಡಲದ ನಾಯಕರು ಭಾರತಕ್ಕೆ ರಾಜತಾಂತ್ರಿಕ ಪತ್ರವೊಂದನ್ನು ಬರೆಯಲು ನಿರ್ಧರಿಸಿರುತ್ತಾರೆ ಪುದುಚೇರಿ, ಯಾನಾಂ, ಮಾಹಿ ಮತ್ತು ಕಾರಿಕಲ್ ಗಳಲ್ಲಿ ಜನಮತಗಣನೆಯನ್ನು ಏರ್ಪಡಿಸಲು ಫ್ರಾನ್ಸು ಸಿದ್ಧವಾಗಿರುವುದೆಂದೂ, ಅದನ್ನು ವ್ಯವಸ್ಥೆಗೊಳಿಸುವ ಮುಂಚೆ ಭಾರತವು ಸ್ವಾಧೀನಗಳ ಮೇಲೆ ಹಾಕಿರುವ ಆರ್ಥಿಕ ನಿರ್ಬಂಧವನ್ನು ತೆಗೆಯುವಂತೆ ಕೋರಲಾಗುವುದೆಂದು ಹೇಳಲಾಗಿದೆ

ಸ್ಕಾಟ್ಲೆಂಡಿನ ಮಹಿಳೆಗೆ ಅಂಟಿಕೊಂಡ ಅವಳಿ ಮಕ್ಕಳು

ಸ್ಕಾಟ್ಲೆಂಡಿನ ೨೪ ವರ್ಷದ ಮಹಿಳೆಯೊಬ್ಬಳಿಗೆ ಒಂದಕ್ಕೊಂದು ಅಂಟಿಕೊಂಡಿರುವ ಅವಳಿ ಮಕ್ಕಳು ಜನಿಸಿವೆ ಮಕ್ಕಳೂ, ತಾಯಿಯೂ ಸೌಖ್ಯದಿಂದಿರುವರು

ಅಂಚೆ ಮತ್ತು ತಂತಿ ಇಲಾಖೆಯ ಸಾಂಸ್ಕೃತಿಕ ಸಂಘ

ರಾಜಧಾನಿಯ ಅಂಚೆ ಮತ್ತು ತಂತಿ ಇಲಾಖೆಯ ಸಾಂಸ್ಕೃತಿಕ ಸಂಘದ ಆರಂಭೋತ್ಸವವು ನಾಳೆ ಸಂಜೆ ೭ ಗಂಟೆಗೆ ಟೌನ್‌ಹಾಲಿನಲ್ಲಿ ನೆರವೇರುವುದು. ಪ್ರಾದೇಶಿಕ ಪೋಸ್ಟ್ ಮಾಸ್ಟರ್ ಜನರಲ್ಲರಾದ ಶ್ರೀ ಕೆ. ಪಿ. ಸೇರವರು ಆರಂಭ ಮಾಡುವರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಬಿ ಎಲ್. ಮಂಜುನಾಥರವರು ಅಧ್ಯಕ್ಷತೆ ವಹಿಸುವರು

ಬಿ. ಎಸ್‌ಸಿ. ಮತ್ತು ಇಂಟರ್ ವಿದ್ಯಾರ್ಥಿಗಳ ತೊಂದರೆ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ಸೀನಿಯರ್ ಬಿ ಎಸ್ ಸಿ ಮತ್ತು ಇಂಟರ್ ವಿದ್ಯಾರ್ಥಿಗಳು ತಮ್ಮ ಫೀಯನ್ನು ಕಟ್ಟಿದ್ದರೂ ಸಹ ಅವರ ಪೈಕಿ ೩೦ ಮಂದಿಗೆ ಅಟೆಂಡೆನ್ಸ್ ಕಡಿಮೆಯಾಗಿರುವುದೆಂದು ಹೇಳಿ, ರಿಯಾಯಿತಿ ಕೊಡದೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವನ್ನು ತಪ್ಪಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು ಅವರಿಗೆ ಸೌಲಭ್ಯ ಕಲ್ಪಿಸಬೇಕೆಂದೂ ಕೋರಿ ಒಬ್ಬ ವಿದ್ಯಾರ್ಥಿಯು ಪತ್ರ ಬರೆದು ತಿಳಿಸಿರುತ್ತಾರೆ.

ವಿವಾಹ ಮಹೋತ್ಸವ

ರಾಜಧಾನಿಯ ಚಾಮರಾಜ ಮೊಹಲ್ಲಾ ಹೊಸ ಕುರುಬಗೇರಿಯಲ್ಲಿರುವ ಶ್ರೀ ಲಕ್ಕಯ್ಯನವರ ಪುತ್ರಿ ಸೌ|| ರತ್ನಮ್ಮನನ್ನು ಶ್ರೀರಂಗಪಟ್ಟಣದ ಶ್ರೀ ಹುಚ್ಚೇಗೌಡರ ಪುತ್ರರಾದ ಶ್ರೀ ಶ್ರೀನಿವಾಸಯ್ಯನವರಿಗೆ ಕೊಟ್ಟು ಶ್ರೀರಂಗಪಟ್ಟಣದಲ್ಲಿ ಈ ದಿನ ವಿವಾಹವು ನೆರವೇರಿಸಲ್ಪಟ್ಟಿತು

ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟ್, ನಂಜನಗೂಡು

ಬೇಸಿಗೆ ಹಿಂದಿ ಶಿಕ್ಷಣ ತರಗತಿಗಳು

ನಂಜನಗೂಡಿನಲ್ಲಿರುವ ಶ್ರೀ ಶಂಕರ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿನಲ್ಲಿ ಬೇಸಿಗೆ ಪ್ರಾಥಮ ಮತ್ತು ಮಾಧ್ಯಮ ಹಿಂದೀ ತರಗತಿಗಳನ್ನು ತೆರೆಯಲಾಗುವುದು ವಿದ್ಯಾರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ.

ಪ್ರಥಮ ಪಂಚವಾರ್ಷಿಕ ಯೋಜನೆ

(ಸರಳ, ಸರಳ ಕನ್ನಡದಲ್ಲಿ ಅದರ ಪರಿಚಯ)

ಪ್ರೊ|| ಜಿ. ಎಸ್ ಕೃಷ್ಣಮೂರ್ತಿಯವರಿಂದ

★

ಕಾಲೇಜು ವಿದ್ಯಾರ್ಥಿಗಳಿಗೂ, ಸಾರ್ವಜನಿಕರಿಗೂ ಉಪಯುಕ್ತವಾದ ಪುಸ್ತಕ ಬೆಲೆ : ಹನ್ನೆರಡಾಣೆ

ಕೃಷ್ಣಾ ಕಂಪೆನಿ

ಸಯ್ಯಾಜಿ ರಸ್ತೆ, ಮೈಸೂರು

GRAND AUCTION SALE

In a European's Bungalow, who is leaving India, under kind instructions from Mr. A. S Holmsberg at No 4624 Shivaji Road, N. R. Mohalla, Mysore, On SAT.27th & SUNDAY the 28th instant at 10 A. M daily. FURNITURE and HOUSEHOLD EFFECTS. For details please see our catalogues which are now in circulation GOODS ON VIEW ON FRIDAY from 9 A. M. to 6 P. M.

Messrs. A B I D S,

Civil & Govt. Auctioneers, Statue Square,

PHONE: 473 — — MYSORE

ಒಲಂಪಿಯಾ 25-3-54 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು

ಮನುಷ್ಯನ ಜೀವಮಾನದಲ್ಲಿ ಬಳ ಪ್ರಕಾರವಾಗಿ ಉಂಟಾಗುವ ತೊಂದರೆಗಳನ್ನು ಅನುಭವಿಸಿ ಮನುಷ್ಯನ ಮನುಷ್ಯನನ್ನು ಮಹಾತ್ಮನೆಂದು ಸಾರುವ ಉತ್ತಮ ಚಿತ್ರ

ಮಹಾತ್ಮ (ಹಿಂದಿ)

ಪ್ರಖ್ಯಾತರಾದ "ಶಕ್ತಿ ಮುನ್ಶಿ" ಚಿತ್ರ ನಿರ್ದೇಶಕ

ದತ್ತಾ ಧರ್ಮಾಧಿಕಾರಿಯವರ ಜ್ಞಾನಮಯ ಚಿತ್ರಾಮೃತ

ಭೂಮಿಕೆಯಲ್ಲಿ :- ಜಾಗೀರ್ದಾರ್, ಮನಮೋಹನ ಕೃಷ್ಣ, ಲೀಲಾ, ರಾಜಾಶೇಖರ ಮತ್ತು ಲೀಲಾ

ಇದರ ಜೊತೆಯಲ್ಲಿ "ಅಗಾ ಗೋಸ್ ಟು ಆಫೀಸ್" ಎಂಬ ಹಾಸ್ಯಮಯ ಎರಡು ರೀಲುಗಳನ್ನು ಪ್ರದರ್ಶಿಸಲಾಗುತ್ತದೆ

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟ್ರೀ ನಂ 792

॥ ವಂದೇಮಾತರಂ ॥

ಇಂದಿನ ಪತ್ರಿಕೆ 6 ಕಾಸು

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರ ಪಟ್ಟಿಗೆ ಬರೆಯಿರಿ

ಸಂಪುಟ : ೧೩] SADHVI SUNDAY 1-8-1954 ಮೈಸೂರು ಭಾನುವಾರ ೧-೮-೧೯೫೪ [ಸಂಚಿಕೆ : ೧

– ತಿರುವಾಂಕೂರು ಮಂತ್ರಿಮಂಡಲಕ್ಕೆ ಪರಾಜಯ –

ತಿರುವಾಂಕೂರು ಮಂತ್ರಿಮಂಡಲಕ್ಕೆ ಸೋಲು

ತಿರುವಾಂಕೂರಿನಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವ ಕುರಿತಾಗಿ ಇಬ್ಬರು ಸರ್ಕಾರಿ ವಕೀಲರನ್ನು ನೇಮಿಸಬೇಕೆಂಬ ಸರ್ಕಾರದ ಬೇಡಿಕೆಯನ್ನು ಅಲ್ಲಿನ ಶಾಸನ ಸಭೆಯು ೧೮ — ೩೪ ಮತಗಳಿಂದ ನೆನ್ನೆ ಸೋಲಿಸಿತು ೨೭ ಮಂದಿ ಸದಸ್ಯರು ತಟಸ್ಥರಾಗಿದ್ದರು. ಅಲ್ಲಿನ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷದ ಮುಖಂಡರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಈ ಕಾರಣದಿಂದ ಸರ್ಕಾರವು ರಾಜೀನಾಮೆ ಯನ್ನೇನು ಕೊಡಬೇಕಾಗಿಲ್ಲವೆಂದು ತಿಳಿಸಿರುತ್ತಾರೆ ಪ್ರಜಾ ಸಮಾಜವಾದಿ ಪಕ್ಷದ ನಾಯಕರು ಮುಖ್ಯ ಮಂತ್ರಿ ಸ್ಥಾನ ಬಿಟ್ಟುವವರನ್ನು ರಾಜೀನಾಮೆ ಕೊಡಲು ಒತ್ತಾಯ ಪಡಿಸುತ್ತಿದ್ದಾರೆಂದು ತಿಳಿದು ಬಂದಿದೆ

ಅಂಡಮಾನಿಗೆ ಹೊರಟ ಆನೆಗಳ ಪೈಕಿ ಎರಡರ ಮರಣ

ಅಂಡಮಾನಿನ ಕಾಡುಗಳಲ್ಲಿ ಕೆಲಸಕ್ಕೆ ಮದ್ರಾಸಿನಿಂದ ಒಯ್ಯಲ್ಪಡುತ್ತಿದ್ದ ೧೨ ಮೈಸೂರು ಆನೆಗಳು ಮದ್ರಾಸಿಗೆ ಮೊನ್ನೆ ರೈಲಿನಲ್ಲಿ ಹೋಗುತ್ತಿದ್ದಾಗ, ಎರಡು ಒಂದಾಗುತ್ತಲಿದ್ದು ಕೆಳಗೆ ಬಿದ್ದು ಮೃತಪಟ್ಟುವೆಂದೂ, ಈ ರೈಲು ಪ್ರಯಾಣ ಕಾಲದಲ್ಲಿ ಆಹಾರವನ್ನಾಗಲಿ, ನೀರನ್ನಾಗಲಿ ಸೇವಿಸಲಿಲ್ಲವೆಂದೂ ವರದಿಯಾಗಿದೆ ಮದ್ರಾಸಿನಲ್ಲಿ ಈಗಾಗಲೇ ಅಂಡಮಾನಿಗೆ ಸಾಗಿಸಲು ೮ ಆನೆಗಳನ್ನು ಕಳುಹಲಾಗಿದೆ ಅವೆಲ್ಲವನ್ನೂ ಹಡಗಿನಲ್ಲಿ ರವಾನಿಸಲಾಗುವುದು. ಆನೆಗಳ ಮರಣದ ಕಾರಣವು ತಿಳಿಬಂದಿಲ್ಲ ಅವುಗಳು ಕೆಳಗೆ ಬಿದ್ದಾಗ ಭಾರಿ ಪೆಟ್ಟಾಯಿತೆಂದು ಹೇಳಲಾಗಿದೆ

ಗೋವಾದಲ್ಲಿ ಹೊಸ ಪೋರ್ಚುಗೀಸ್ ಸೈನ್ಯ

ಗೋವಾಕ್ಕೆ ೧೧೦ ಮೈಲಿ ದೂರವಿರುವ ಆಂಜಿದಿವ್ ದ್ವೀಪದಲ್ಲಿ ಸಶಸ್ತ್ರಧಾರಿ ಮಿಲಿಟರಿಯವರು ಬಂದಿಳಿದಿರುವುದಾಗಿ ವರದಿಯಾಗಿದೆ ಅವರ ಚಲನವಲನಗಳನ್ನು ಕಾರವಾರದ ಬಳಿಯಿಂದ ದೈನಾಕ್ಯುಲರ್‌ಗಳ ಸಹಾಯದಿಂದ ವೀಕ್ಷಿಸಲಾಯಿತು

ಚಾಮುಂಡಿ ಬೆಟ್ಟಕ್ಕೆ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ಮೊನ್ನೆ ಶ್ರೀಮನ್ ಮಹಾರಾಜರೊಡನೆ ಚಾಮುಂಡಿ ಬೆಟ್ಟಕ್ಕೆ ತೆರಳಿ, ದೇವರಿಗೆ ಸೇವೆ ಸಲ್ಲಿಸಿದರು

ಅಗರಬತ್ತಿ ಕಾರ್ಖಾನೆಗೆ ಬೆಂಕಿಯಿಂದ ೧೫ ಸಾವಿರ ರೂ ಆಸ್ತಿ ನಷ್ಟ

ಬೆಂಗಳೂರಿನಲ್ಲಿ ಎಂಡರ್ ಸಾಹೇಬ್ ಗಲ್ಲಿಯಲ್ಲಿರುವ ಮೈಸೂರು ಅಗರಬತ್ತಿ ಕಾರ್ಖಾನೆಯಲ್ಲಿ ನೆನ್ನೆ ಬೆಳಗಿನ ಜಾವ ವಿದ್ಯುಚ್ಛಕ್ತಿ ಷಾರ್ಟ್ ಸರ್ಕ್ಯೂಟ್ ಆದುದರಿಂದಾಗಿ ಬೆಂಕಿ ಯುಂಟಾಗಿ ಸುಮಾರು ೧೫ ಸಾವಿರ ರೂ ನಷ್ಟ ಆಸ್ತಿ ನಷ್ಟವಾಗಿರುವುದಾಗಿ ಪೋಲೀಸರು ಪಂಚಾ ಪ್ರಯತ್ನದಿಂದ ಲಕ್ಷ ರೂ ಬೆಲೆ ಆಸ್ತಿಪಾಸ್ತಿಗಳನ್ನು ರಕ್ಷಿಸಲಾಗಿದೆ ಗೊತ್ತಾಗಿದೆ

ವ್ಯಾಖ್ಯಾನ ವಾಗೀಶ್ವರಿ

ರಾಜಕುಮಾರಿ ಪ್ರಭಾವತಿ ರಾಜೆಯವರು

ಪೋರ್ಚುಗೀಸ್ ಸರ್ಕಾರಕ್ಕೆ ಭಾರತದ ಎಚ್ಚರಿಕೆ

ಗೋವಾದಲ್ಲಿ ಪೋರ್ಚುಗೀಸ್ ಅಧಿಕಾರಿಗಳು ಶಾಂತಯುತ ಮತ್ತು ಅಹಿಂಸಾವಾದಿ ಸತ್ಯಾಗ್ರಹಿಗಳ ಮೇಲೆ ಬಲ ಪ್ರಯೋಗ ಮಾಡಿದರೆ, ಅದರಿಂದ ಗೋವಾ ಜನರಲ್ಲದೆ ಇಡೀ ಭಾರತದ ಪ್ರಜೆಗಳ ಮೇಲಿಲ್ಲಾ ಎಣಿಕೆಲಾರದಷ್ಟು ಪರಿಣಾಮವುಂಟಾಗುವುದೆಂದು ಭಾರತ ಸರ್ಕಾರದವರು ಪೋರ್ಚುಗೀಸ್ ಸರ್ಕಾರಕ್ಕೆ ಎಚ್ಚರಿಕೆಯಿತ್ತಿರುವರು ಪೋರ್ಚುಗೀಸರು ಗೋವಾ ಘಟನೆಗಳ ಬಗ್ಗೆ ಭಾರತದ ಮೇಲೆ ತಪ್ಪು ಹೊರಿಸಲು ನಡೆಸುತ್ತಿರುವ ಅಪಪ್ರಚಾರದಿಂದ ಜಗತ್ತು ಮೋಸ ಹೋಗಲಾರದೆಂದು ಸೂಚಿಸಲಾಗಿದೆ ಭಾರತದಲ್ಲಿ ಐಕ್ಯವಾಗಬೇಕೆಂಬ ಗೋವಾ ನಿವಾಸಿಗಳ ದೇಶ ಪ್ರೇಮದಿಂದ ಕೂಡಿರುವ ಪ್ರಯತ್ನವನ್ನು ದಮನ ಮಾಡುವ ದುರ್ನೀತಿಗೆ ಭಾರತದ ಜವಾಬ್ದಾರಿಯಿಲ್ಲವೆಂದೂ ತಿಳಿಸಲಾಗಿದೆ

ಬೆಂಗಳೂರಿಗೆ ದೇಶಮುಖ್ ದಂಪತಿಗಳು ವಾಪಸು

ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಸಿ ಡಿ ದೇಶಮುಖ್‌ರವರು ತಮ್ಮ ಪತ್ನಿ ಶ್ರೀಮತಿ ದುರ್ಗಾಬಾಯಿಯವರೊಡನೆ ಈ ಬೆಂಗಳೂರಿಗೆ ವಾಪಸು ಹೋದರು ಅವರ್ ನೆನ್ನೆ ಶ್ರೀಮನ್ ಮಹಾರಾಜರನ್ನು ಭೇಟಿ ಮಾಡಿದರು ಈ ಬೆಂಗಳೂರಿನ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಅವರುಗಳು ಭೇಟಿಯಿತ್ತರು.

ಸಂತಾಪ ಸೂಚನೆ

ಬನಶಂಕರಿಯ ಮಹಾರಾಣಿಯವರ ನಿಧನಕ್ಕಾಗಿ ಮೈಸೂರಿನ ಸೇವಾದಳದವರು ತುರ್ತು ಸಭೆ ನಡೆಸಿ, ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಿ, ಒಂದು ನಿಮಿಷದ ಮೌನವನ್ನು ಆಚರಿಸಿದರು.

ಬಂಗಾಳದಲ್ಲಿ ಪ್ರವಾಹದಿಂದ ೪೫ ಸಾವಿರ ಜನರಿಗೆ ತೊಂದರೆ

ಕಸ್ತೂರ ಬಾ [illegible] ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ [illegible] ಅರಸೀಕೆರೆ ಬಳಿ ಇರುವ [illegible] ಗ್ರಾಮ ಸೇವಿಕೆಯರ ಶಿಕ್ಷಣ ಕೇಂದ್ರದ ವ್ಯವಸ್ಥೆಯಾಗಿದೆ ಈ ಗ್ರಾಮ ಸೇವಿಕಾ [illegible] ಕೇಂದ್ರಕ್ಕೆ [illegible] ಬರುವ ಮತ್ತು [illegible] ಮಹಿಳೆಯರನ್ನು ಸೇರಿಸಿಕೊಳ್ಳಲಾಗುವುದು ಶಿಕ್ಷಣದ ಅವಧಿ ಒಂದು ವರ್ಷ [illegible] ಉಚಿತವಾಗಿ ಊಟ ಮತ್ತು [illegible] ಕೊಡಲಾಗುವುದು ಶಿಕ್ಷಣ ಮುಗಿದನಂತರ [illegible] ಮೇಲೆ ಅವರನ್ನು [illegible] ಟ್ರಸ್ಟಿನ ಆಶ್ರಯದಲ್ಲಿ ನಡೆಯುತ್ತಿರುವ ಗ್ರಾಮ ಸೇವಾ ಕೇಂದ್ರಗಳಿಗೆ [illegible] ಕಳುಹಿಸಲಾಗುವುದು ಶಿಕ್ಷಣ ಪಡೆದಮೇಲೆ [illegible] ಟ್ರಸ್ಟಿನಲ್ಲಿ ಕೆಲಸ ಮಾಡಬೇಕು [illegible] ಶ್ರೀಮತಿ [illegible] ಪ್ರತಿನಿಧಿ ಕಸ್ತೂರಬಾ ಗಾಂಧಿ ಸ್ಮಾರಕ ಟ್ರಸ್ಟ್, [illegible] ಈ ವಿಳಾಸಕ್ಕೆ ಇದೇ ಇಪ್ಪತ್ತೈದನೇ [illegible] ಅರ್ಜಿಗಳನ್ನು ಕಳುಹಿಸಬಹುದು

ಲಕ್ಷ್ಮಿ ★ 12—8—54 ನೇ

ಗುರುವಾರದಿಂದ

ಲಕ್ಷ್ಮಿ ಪ್ರದರ್ಶನ ಪ್ರಾರಂಭ

[illegible] ಪಕ್ಷಿರಾಜಾ ರವರ ತಮಿಳು ಚಿತ್ರ

* ಮಲೈಕ್ಕಳ್ಳನ್ *

[illegible] ಎಂ ಜಿ ರಾಮಚಂದ್ರನ್,

[illegible]

[illegible]

ಸಂಭಾಷಣೆ ಕರುಣಾನಿಧಿ

ನಿರ್ದೇಶನ ಶ್ರೀರಾಮುಲು ನಾಯ್ಡು

ಸ್ಟುಡಿಯೋ ಪಕ್ಷಿರಾಜಾ

4 ವಾರ [illegible] ಎಲ್ಲ ವಿಧವಾದ [illegible] ಮತ್ತು [illegible] ವನ್ನು [illegible]



ಜ್ಯೋತಿಶ್ಶಾಸ್ತ್ರ ವಿಚಾರ ಪ್ರಕಟಣೆ

ಕಳೆದ ಶನಿವಾರ ಮೈಸೂರು ಸಂಸ್ಕೃತ ಮಹಾಪಾಠಶಾಲೆಗೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರವರು ದಯಮಾಡಿಸಿದ್ದಾಗ ಕೊಳ್ಳೇಗಾಲದ, ಅಸ್ಥಾನ ವಿದ್ವಾನ್ [illegible] ಶಾಸ್ತ್ರಿಗಳವರು ಜ್ಯೋತಿಶ್ಶಾಸ್ತ್ರ ವಿಚಾರ ಪ್ರಕಟಣಾ ಎಂಬ ಸ್ವಂತ ಸಂಸ್ಕೃತ ಲೇಖನವನ್ನು ಸಮರ್ಪಿಸಿದರು ಅದರ ಸಾರಾಂಶವು ಹೀಗಿದೆ —

ಧರ್ಮಶಾಸ್ತ್ರ [illegible] ಕಾಲದಿಂದ [illegible] ಸ್ವಲ್ಪ [illegible] ಅದನ್ನು ಹಿಂದೆ ಆರ್ಯಭಟ ಭಾಸ್ಕರಾಚಾರ್ಯರೇ ಮೊದಲಾದವರು ವ್ಯಾಖ್ಯಾನ [illegible] ಸಂಸ್ಕರಿಸಿದರು ಅದು [illegible] ವರ್ಷಗಳಿಂದಲೂ ಈಗ ಆಂಗ್ಲೇಯರು ನಮ್ಮ ಶಾಸ್ತ್ರಗಳಲ್ಲಿ ಉಕ್ತವಾದ, ಶಾಸ್ತ್ರ [illegible] ಮತ್ತು [illegible] ಸಂಸ್ಕಾರಗಳನ್ನು [illegible] ಅದನ್ನು ಅನುಸರಿಸಿ ಕೇತಕರ ವೆಂಕಟೇಶ ಬಾಪೂ ದೀಕ್ಷಿತರು ಗ್ರಂಥ ನಿರ್ಮಿಸಿದ್ದಾರೆ

ಇವರ ಗ್ರಂಥದಲ್ಲಿ ಚಂದ್ರಸ್ಪಷ್ಟ ಪ್ರಕ್ರಿಯೆಯಲ್ಲಿ ಸಿದ್ಧಾಂತ [illegible] ಫಲ ಸಂಸ್ಕಾರವನ್ನು ಅಂಗೀಕರಿಸಿದ್ದಾರೆ ಮತ್ತು ವಿರುದ್ಧ [illegible] ಫಲ ಸಂಸ್ಕಾರವನ್ನು ಮಾಡುತ್ತಾರೆ [illegible] ಫಲವು ಸ್ವಾಭಾವಿಕವಾಗಿ ಚಂದ್ರನನ್ನು ಎಳೆಯುತ್ತದೆಯೆಂದು [illegible] ವಿರುದ್ಧ [illegible] ಫಲ ಎಂಬ [illegible] ಫಲದಿಂದಲೇ ಉತ್ಪನ್ನವಾಗುವ [illegible] ಫಲವು ಚಂದ್ರನನ್ನು [illegible] ಎಂದು [illegible] ಶಾಸ್ತ್ರಕ್ಕೂ ವಿರುದ್ಧವು

ಮಾಧ್ಯ [illegible] ಫಲಗಳ [illegible] ಚಂದ್ರನಲ್ಲಿ [illegible] ಫಲವನ್ನು [illegible] ಗ್ರಹಣವಾಗುತ್ತದೆ ಇವರು [illegible] ಹೇಳುತ್ತಾರೆ [illegible] ದುಷ್ಟವು

ಗ್ರಹಣಕ್ಕೂ [illegible] ಬೇರೆಬೇರೆ ವಿಧದಿಂದ ಚಂದ್ರಸ್ಪಷ್ಟವನ್ನು ಮಾಡುತ್ತಾರೆ ಇದು ಅಸಮಂಜಸವು ಮತ್ತು ಧರ್ಮಶಾಸ್ತ್ರಕ್ಕೆ ವಿರೋಧವು

[illegible] ಪಂಚಾಂಗದಲ್ಲಿ [illegible]

[illegible] ಶಾಸ್ತ್ರ ವಿರೋಧ

[illegible] ಜ್ಯೋತಿಶ್ಶಾಸ್ತ್ರ [illegible] ಸಂಶೋಧನ [illegible] ಶಾಸ್ತ್ರ [illegible] ಸ್ಪಷ್ಟಗಳನ್ನು [illegible] ಮಾಡಿಸಿದ ಲೇಖನವನ್ನು ಒಪ್ಪಿಸಿದರು

ಶಿರಿಯೂರ ಸಂಘ

ಕಳೆದ ೧ ನೇ ತಾ|| ಹಳೇ ಅಗ್ರಹಾರದ ಶಿರಿಯೂರ ಸಂಘದ ಕಾರ್ಯಕಾರಿ ಸಮಿತಿ ಅಧಿಕಾರ ವರ್ಗದ ಚುನಾವಣೆ ನಡೆದು ಶ್ರೀಮತಿ ಜಾನಕಮ್ಮ ಕೃಷ್ಣಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಎ ಸೀತಾರಾಮಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ ಎಂ ಎಸ್ ಸೀತಾರಾಮಯ್ಯನವರು ಮತ್ತು ವಸಂತಕುಮಾರರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಶ್ರೀ ಬಿ ಮಂಜುನಾಥರಾಯರು ಖಜಾಂಚಿಗಳಾಗಿ ಚುನಾಯಿತರಾದರು

ಶ್ರೀರಂಗಪಟ್ಟಣದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಇಲ್ಲ

ಶ್ರೀರಂಗಪಟ್ಟಣದಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಯು ಸಧ್ಯಕ್ಕೆ ಆಗುವುದಿಲ್ಲವೆಂದೂ, ಕಾವೇರಿಗೆ ೬ ಲಕ್ಷ ರೂ ವೆಚ್ಚದಿಂದ ಕಟ್ಟಬೇಕಾಗಿದ್ದ ಸೇತುವೆಯ ನಿರ್ಮಾಣ ಕಾರ್ಯವನ್ನು ಮುಂದೆ ಹಾಕಲಾಗಿದೆಯೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸುತ್ತಾರೆ ಅವರು ಶ್ರೀರಂಗಪಟ್ಟಣದಲ್ಲಿ ಶ್ರೀ ರಂಗನಾಥ ಆಂಜನೇಯಸ್ವಾಮಿ ದೇವಸ್ಥಾನಗಳಿಗೂ, ದರಿಯಾ ದೌಲತ್ತಿಗೂ ವಿದ್ಯಾಮಂತ್ರಿಗಳೊಡನೆ ಈಚೆಗೆ ಭೇಟಿಯಿತ್ತರು

ರಿಜಿಸ್ಟ್ರೀ ನಂ 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು



ಒಂದಿಡೀ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೨೩] SADHVI WEDNESDAY 11-8-1954 ಮೈಸೂರು ಬುಧವಾರ ೧೧-೮-೧೯೫೪ [ಸಂಚಿಕೆ : ೧೦

ಗೋವಾ ಪರಿಸ್ಥಿತಿ ತನಿಖೆ ಸಲಹೆಗೆ ಭಾರತದ ಒಪ್ಪಿಗೆ

ಘರ್ಷಣೆ ಮತ್ತು ಕಲಹಗಳಿಂದ ದೂರವಿರಬೇಕು

ಈದ್ ದಿನಾಚರಣೆಯಲ್ಲಿ ರಾಷ್ಟ್ರಾಧ್ಯಕ್ಷರ ಸಂದೇಶ

ಮೈಸೂರು ೧೧

ನೆನ್ನೆ ಈದ್ ದಿನಾಚರಣೆ ಸಂದರ್ಭದಲ್ಲಿ ಈದಿಗಾ ಮೈದಾನದಲ್ಲಿ ರಾಷ್ಟ್ರಾಧ್ಯಕ್ಷರು ಉರ್ದು ಭಾಷೆಯಲ್ಲಿ ಮಾತನಾಡಿ, ಭಾರತವು ಹಲವಾರು ವರ್ಷಗಳ ಕಷ್ಟಕರ ಹೋರಾಟ ನಡೆಸಿ ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡಿರುವುದಾಗಿಯೂ, ಈಗ ದೇಶಕ್ಕೆ ಸಂಬಂಧಿಸಿದ ನಾನಾ ಸಮಸ್ಯೆಗಳನ್ನೂ ಬಿಡಿಸಲಾಗದ ಸಮಸ್ಯೆಗಳನ್ನೂ ಎದುರಿಸಬೇಕಾಗಿರುವುದೆಂದೂ ಆದ್ದರಿಂದ ಭಾರತೀಯರು ಘರ್ಷಣೆ ಮತ್ತು ಕಲಹಗಳಿಂದ ದೂರವಿರಬೇಕೆಂದೂ ಹೇಳಿದರು. ಭಾರತದಲ್ಲಿ ವಿವಿಧ ಜಾತಿ ಮತ್ತು ಧ್ಯೇಯಗಳುಳ್ಳ ಕೋಟಿಗಟ್ಟಲೆ ಜನರು ಇರುವುದಾಗಿಯೂ ಅವರುಗಳಲ್ಲಿ ಪರಸ್ಪರ ಭ್ರಾತೃತ್ವ ಮತ್ತು ಸಹಕಾರ ಮನೋಭಾವವಿಲ್ಲದಿದ್ದರೆ ದೇಶವು ಸುಭಿಕ್ಷವಾಗಿರುವುದಿಲ್ಲವೆಂದೂ ಆ ದಿನದ ಭಾರತೀಯರು ಯಾವ ಮತವನ್ನಾದರೂ ಅನುಸರಿಸಲು ಸ್ವಾತಂತ್ರ್ಯವಿರುವುದೆಂದೂ ದೇಶದ ಪ್ರಗತಿ ಮಾರ್ಗದಲ್ಲಿ ಎಲ್ಲರೂ ಒಂದೇ ಮನಸ್ಸು ಮತ್ತು ಒಂದೇ ವಾಕ್ಯದಿಂದ ನಡೆಯಬೇಕೆಂದೂ ಸೂಚಿಸಿದರು. ಜಮೈಯತ್ [illegible] ಕಾರ್ಯದರ್ಶಿ ಶ್ರೀ ಅಂಬಾಲಾ [illegible] ಸಾಹೇಬ್‌ರವರು ರಾಷ್ಟ್ರಾಧ್ಯಕ್ಷರನ್ನು ಸ್ವಾಗತಿಸಿದರು.

ಜಿಲ್ಲಾ ನ್ಯಾಯಾಧೀಶರುಗಳಿಗೆ ಬಡ್ತಿ

ಸರ್ಕಾರದವರು ಕೆಳಗೆ ಕಂಡ ಜಿಲ್ಲಾ ನ್ಯಾಯಾಧೀಶರುಗಳಿಗೆ ಬಡ್ತಿ ಕೊಟ್ಟಿರುತ್ತಾರೆ. ಬಡ್ತಿ ಹೊಂದಿರುವವರ ಹೆಸರುಗಳು ಈ ರೀತಿ ಇವೆ — ನಿವೃತ್ತ ಶ್ರೀ ವಿ ವೇಣು ಗೋಪಾಲ ಮುದಲಿಯಾರರ ಸ್ಥಾನದಲ್ಲಿ ಎರಡನೇ ದರ್ಜೆಯ ಶ್ರೀ ಹೆಚ್ ಹೊಂಬೇಗೌಡರು ಮೊದಲನೇ ದರ್ಜೆಯಲ್ಲಿ ಖಾಯಂ. ನಿವೃತ್ತರಾದ ಶ್ರೀ ಟಿ ರಂಗಯ್ಯನವರ ಸ್ಥಾನದಲ್ಲಿ ಎರಡನೇ ದರ್ಜೆಯಲ್ಲಿ ಶ್ರೀ ಕೆ ವಿಶ್ವೇಶ್ವರಯ್ಯನವರು ಖಾಯಂ. ಹೊಂಬೇಗೌಡರ ಸ್ಥಾನದಲ್ಲಿ ಮೂರನೇ ದರ್ಜೆಯ ಶ್ರೀ ಸಿ ವಿ ಕೃಷ್ಣಪ್ಪನವರು ಖಾಯಂ, ಶ್ರೀ ಕೆ. ವಿಶ್ವೇಶ್ವರಯ್ಯನವರ ಮಾರ್ಚ್ ೧ ರಿಂದ ನಿವೃತ್ತಿ) ಸ್ಥಾನದಲ್ಲಿ ಮೂರನೇ ದರ್ಜೆಯಲ್ಲಿದ್ದ ಶ್ರೀ ಜಿ ನಟರಾಜ್ ೨ನೇ ದರ್ಜೆಯಲ್ಲಿ ಖಾಯಂ. ಶ್ರೀ ಎಂ ಮುನಿಸ್ವಾಮಯ್ಯನವರು ಮೂರನೇ ದರ್ಜೆಯಿಂದ ೨ನೇ ದರ್ಜೆಗೆ, ಶ್ರೀ ಸಿ ವಿ ಚನ್ನಪ್ಪನವರ ಸ್ಥಾನದಲ್ಲಿ ಶ್ರೀ ಕೆ ಗುಬ್ಬಯ್ಯನವರು ಮೂರನೇ ದರ್ಜೆಯಲ್ಲಿ ಖಾಯಂ. ಶ್ರೀ ನಟರಾಜುರವರ ಸ್ಥಾನದಲ್ಲಿ ಶ್ರೀ ಕೆ ಸದಾಶಿವಯ್ಯನವರು ಮೂರನೇ ದರ್ಜೆಯಲ್ಲಿ ಖಾಯಂ.

ರಾಷ್ಟ್ರಾಧ್ಯಕ್ಷರಿಗೆ ದೇಹಾಲಸ್ಯ

ರಾಷ್ಟ್ರಾಧ್ಯಕ್ಷರು ನೆನ್ನೆ ನಗರದಲ್ಲಿ ಮೆರವಣಿಗೆ ಹೊರಟ ಸಂಬಂಧವಾಗಿ ಅವರಿಗೆ ಸ್ವಲ್ಪ ಆಲಸ್ಯವಾಗಿದೆ. ಆದ್ದರಿಂದ ಅವರು ಸಾರ್ವಜನಿಕರಿಗೆ ಭೇಟಿ ಕೊಡುವ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ.

ರಾಷ್ಟ್ರಾಧ್ಯಕ್ಷರ ಮೆರವಣಿಗೆ

ಕಳೆದ ಸೋಮವಾರ ಡಾ॥ ರಾಜೇಂದ್ರ ಪ್ರಸಾದರ ನಗರದಲ್ಲಿ ಮೆರವಣಿಗೆ ಹೊರಟಾಗ ತೆಗೆದ ಚಿತ್ರ. ಶ್ರೀಮನ್ಮಹಾರಾಜರು ಅವರ ಎಡ ಭಾಗದಲ್ಲಿ ಆಸನಾರೂಢರಾಗಿರುವರು. ಹಿಂದೆ ಶ್ರೀ [illegible] ಇರುವುದು

ನಂಗಲಿ ಗುಂಡಿನ ಪ್ರಕರಣದ ಮೊಕದ್ದಮೆ ವಾಪಸು

ನಂಗಲಿಯಲ್ಲಿ ಕೆಲವು ತಿಂಗಳ ಹಿಂದೆ ಮದ್ರಾಸ್ ಪೋಲೀಸರ ಗುಂಡು ಹಾರಿಸಿದ ಸಂಬಂಧದಲ್ಲಿ ಆಂಧ್ರದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಎ ವಿ ರಾಘವಲು ಕಾನ್ಸ್‌ಟೇಬಲ್ ನಾರಾಯಣರೆಡ್ಡಿ ಮತ್ತು ಇನ್ನೊಬ್ಬ ಪೋಲೀಸನ ಮೇಲೆ ಹೂಡಲಾಗಿದ್ದ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಲಾಗಿದೆ. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಈ ಬಗ್ಗೆ ಅರ್ಜಿ ಸಲ್ಲಿಸಿ ಸರ್ಕಾರದ ಗೃಹ ಕಾರ್ಯದರ್ಶಿಯವರ ಪ್ರಮಾಣ ಪತ್ರಿಕೆಯನ್ನು ಒಪ್ಪಿಸಿದರು. ನ್ಯಾಯಾಧೀಶ ಶ್ರೀ ಕೃಷ್ಣಶೆಟ್ಟರು ಮೊಕದ್ದಮೆ ವಾಪಸಾತಿಗೆ ಒಪ್ಪಿ ಆಪಾದಿತರನ್ನು ಖುಲಾಸೆ ಮಾಡಿದರು. ಆಕ್ರಮವಾಗಿ ಹೆಂಡ ರವಾನೆ ಮಾಡಿ ಗಡಿದಾಟಿ ಮೈಸೂರಿಗೆ ಬಂದ ಸಂಬಂಧದಲ್ಲಿ ಗಲಿಬಿನ ಪ್ರಕರಣವು ನಡೆದಿತ್ತು. ಈ ಸಂದರ್ಭದಲ್ಲಿ [illegible] ಆಪಾದಿತರನ್ನು ಖುಲಾಸೆ ಮಾಡಲಾಯಿತು.

ದುಷ್ಕಾರ್ಯವೆಸಗಿದ್ದಾಗಿ ಮೊಕದ್ದಮೆ

ನಂಜನಗೂಡು ಶ್ರೀ ನಾರಾಯಣಾಚಾರ್ಯರ ಹೋಟೆಲು [illegible] ನೆನ್ನೆ ರಾತ್ರಿ ವ್ಯಾಪಾರ ನಡೆಸುತ್ತಿದ್ದರಿಂದ ಮಲವಾರಿನ ಲಕ್ಷ್ಮಣ ಮತ್ತು ಅಮ್ಮಣ್ಣಿ ಎಂಬುವರ ಮೇಲೆ [illegible] ಲಿ ಸರ ಮೊಕದ್ದಮೆ [illegible]

ಪೌರಸಭಾಧಿಕಾರಿಗಳಿಂದ ಮಂಡಿ ಮೊಹಲ್ಲಾ ಪರಿಶೀಲನೆ

ಮೈಸೂರು ೧೧

ಈ ದಿನ ಪ್ರಾತಃಕಾಲ ೭ ಗಂಟೆಗೆ ಪುರಸಭಾ ಅಧ್ಯಕ್ಷರೂ ಉಪಾಧ್ಯಕ್ಷರೂ ಕಮೀಷನರೂ ಆರೋಗ್ಯಾಧಿಕಾರಿಗಳೂ, ಇಂಜನಿಯರೂ ಮತ್ತು ಹಲವು ಸದಸ್ಯರೂ ಮಂಡಿ ಮೊಹಲ್ಲಾದಲ್ಲಿ ಸ್ಥಳ ಪರಿಶೀಲನೆ ಮಾಡಿ [illegible] ರಸ್ತೆಗಳನ್ನು ವಿಶಾಲ ಪಡಿಸಿಕೊಂಡರು ಮತ್ತು ಅವನ್ನು ಸರಿಪಡಿಸಲು ತಕ್ಷಣವೇ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಿದರು. ಅನಂತರ ಮಂಡಿ ಮಾರ್ಕೆಟ್ಟಿನ ಕಛೇರಿಗೆ ಬಂದು ಅಲ್ಲಿನ [illegible] ಅರ್ಜಿಗಳನ್ನು ಸ್ವೀಕರಿಸಿದರು. ಇದೇ [illegible] ಮಾರ್ಕೆಟ್ಟಿನಲ್ಲಿ ಕಛೇರಿ ತೆರೆಯಲಾಗುವುದು. ಜನರು ಅಲ್ಲಿ [illegible] ಅಹವಾಲುಗಳನ್ನು ಹೇಳಿಕೊಳ್ಳಬಹುದೆಂದು ತಿಳಿಸಲಾಗಿದೆ.

ಜೂಜಾಟದ ಪತ್ತೆ

ನೆನ್ನೆ ರಾತ್ರಿ ಮಂಡಿ ಮೊಹಲ್ಲಾ [illegible] ನ ಬೀದಿಯಲ್ಲಿ ರಾಜಾ [illegible] ಜನರು [illegible] ಜೂಜಾಡುತ್ತಿದ್ದವರನ್ನು ಪತ್ತೆ ಹಚ್ಚಿ ಅವರಿಂದ ೬॥ ರೂ ಗಳನ್ನು ಮತ್ತು [illegible] ಚೌಕದಲ್ಲಿ [illegible] ಮತ್ತಿತರ ೭ ಜನರು [illegible] ಆಡುತ್ತಿದ್ದುದನ್ನು ಪತ್ತೆ ಹಚ್ಚಿ [illegible] ೧೧ ರೂ ಗಳನ್ನು ಮಂಡಿ ಪೋಲೀಸರು ವಶಪಡಿಸಿಕೊಂಡು, ಆ ದಿನ [illegible] ಹೂಡಿರುವರು

★ [illegible]

ಸಂಶಯ ಮತ್ತು ತಪ್ಪು ಭಾವನೆಗೆ ಎಡೆ ಕೊಡಕೂಡದು

ಕ್ರೈಸ್ತ ಪಾದ್ರಿಗಳಿಗೆ ರಾಷ್ಟ್ರಾಧ್ಯಕ್ಷರ ಹಿತೋಕ್ತಿ

ಮೈಸೂರು ೧೧

ನೆನ್ನೆ ಸೇಂಟ್ ಫಿಲೋಮಿನಾ ಚರ್ಚಿನಲ್ಲಿ ಸೇರಿದ್ದ ರೋಮನ್ ಕ್ಯಾಥೊಲಿಕ್ ಮತದವರ ಸಭೆಯಲ್ಲಿ ರಾಷ್ಟ್ರಾಧ್ಯಕ್ಷರು ಭಾಷಣ ಮಾಡಿ, ಭಾರತದಲ್ಲಿನ ಕ್ರೈಸ್ತ ಪಾದ್ರಿಗಳು ಸಂಶಯ ಮತ್ತು ತಪ್ಪು ತಿಳುವಳಿಕೆಗೆ ಎಡೆ ಕೊಡುವಂತಹ ಕಾರ್ಯ ಚಟುವಟಿಕೆಗಳನ್ನು ನಡೆಸದಿರಬೇಕೆಂದು ಸೂಚಿಸಿದರು. ಪ್ರಜೆಗಳೆಲ್ಲರೂ ತಮ್ಮ ತಮ್ಮ ಮತವನ್ನು ಅನುಸರಿಸಲು ರಾಜ್ಯಾಂಗವು ಅವಕಾಶವಿತ್ತಿರುವುದಾಗಿಯೂ ಅವರು ಹೇಳಿದರು. ಪಾದ್ರಿಗಳ ಮಾನವೀಯ ಉಪಕಾರ ಕಾರ್ಯದಲ್ಲಿ ಪಾತ್ರ ತೊಡಗಬೇಕೆಂದು ಹೇಳಿದರು.

೨೨ ವರ್ಷಗಳ ಹಿಂದೆ ಮೈಸೂರಿನ ಮಹಾರಾಜರು ಈ ಚರ್ಚಿನ ಅಸ್ತಿಭಾರ ಶಿಲಾನ್ಯಾಸ ಮಾಡಿದಾಗ ಅವರು ಶತಮಾನಗಳಿಂದ ದೇಶದಲ್ಲಿ ನಡೆದು ಬರುವ ಪರಂಪರೆಯನ್ನು ಅನುಸರಿಸಿ ನಡೆದರೆಂದೂ, ೧೯೦೦ ವರ್ಷಗಳ ಹಿಂದೆ ಪಾದ್ರಿಗಳು ಭಾರತಕ್ಕೆ ಬಂದು ನೆಲಸಿ ತಮ್ಮ ಮತವನ್ನು ಅನುಸರಿಸಿಕೊಂಡು ಹೋಗುತ್ತಿದ್ದರೆಂದೂ, ಅದಾದನಂತರ ಮುಸ್ಲಿಮರು ಯುದ್ಧದಲ್ಲಿ ಜಯಿಸಿ ಈ ದೇಶದಲ್ಲಿ ನೆಲಸಿದರೆಂದೂ, ಪರಕೀಯರು ಮೊದಲು ವ್ಯಾಪಾರಸ್ಥರಾಗಿ ಬಂದು, ನಂತರ ರಾಜ್ಯಭಾರ ನಡೆಸಿದುದಾಗಿಯೂ ಅವರು ಹೇಳಿದರು. ಆಗಲೂ ಸಹ ಭಾರತೀಯರು ತಮ್ಮ ಹಿರಿಯರು ಹಾಕಿದ ಮಾರ್ಗವನ್ನೇ ಅವಲಂಬಿಸಿ ಪರಸ್ಪರ ಬಾಳ್ವೆಯು ಸುಗಮವಾಗಿರುವಂತೆ ನಡೆಯುತ್ತಿರುವುದಾಗಿ ನುಡಿದರು.

ಕ್ರೈಸ್ತ ಪಾದ್ರಿಗಳು ಅನೇಕ ಆಸ್ಪತ್ರೆ ಮತ್ತು ಶಾಲೆಗಳನ್ನು ಕಟ್ಟಿ ಸೇವೆ ಸಲ್ಲಿಸಿರುವುದನ್ನು ಅವರು ಪ್ರಶಂಸಿಸಿದರು. ಕ್ರೈಸ್ತರೂ ಭಾರತೀಯರೇ ಎಂದು ಹೇಳಿದರು. ರಾಜ್ಯಾಂಗವನ್ನು ಬರೆದಾಗ ಕ್ರೈಸ್ತರು ತಮಗೆ ವಿಶೇಷ ಹಕ್ಕುಬಾಧ್ಯತೆ ಕೇಳಲಿಲ್ಲವೆಂದೂ, ಇತರರಂತೆ ತಾವೂ ಇರುವುದರಲ್ಲಿ ತೃಪ್ತಿ ಹೊಂದಿರುವುದಾಗಿ ಹೇಳುದಾಗಿಯೂ ತಿಳಿಸಿದರು.

ಗೋವಾ ಪರಿಸ್ಥಿತಿ ತನಿಖೆ ಸಮಿತಿಗೆ ಭಾರತದ ಒಪ್ಪಿಗೆ

ಭಾರತದಲ್ಲಿರುವ ಪೋರ್ಚುಗೀಸರ ವಸಾಹತು ಗೋವಾ, ದಾಮನ್ ಮತ್ತು ಡಯೂಗಳಲ್ಲಿರುವ ಪರಿಸ್ಥಿತಿ ಬಗ್ಗೆ ನಿಷ್ಪಕ್ಷಪಾತವಾಗಿ ಪರಿಶೀಲನೆ ನಡೆಸಿ ವರದಿಯೊಪ್ಪಿಸುವ ಸಲುವಾಗಿ ವಿದೇಶೀ ವೀಕ್ಷಕರ ಸಮಿತಿಯ ರಚನೆಗೆ ಒಪ್ಪುವಂತೆ ಪೋರ್ಚುಗೀಸ್ ಸರ್ಕಾರದವರ ಭಾರತಕ್ಕೆ ಮಾಡಿರುವ ಸಲಹೆಯನ್ನು ಇಲ್ಲಿನ ಸರ್ಕಾರದವರು ಅಂಗೀಕರಿಸಿರುತ್ತಾರೆ. ಈ ಬಗ್ಗೆ ಭಾರತದ ಪ್ರತಿನಿಧಿ [illegible] ಚರ್ಚಿಸಲು ಪೋರ್ಚುಗೀಸ್ ಸರ್ಕಾರದವರು ತಮ್ಮ ಪ್ರತಿನಿಧಿಗಳನ್ನು ಕೂಡಲೇ ನೇಮಿಸುವಂತೆ [illegible]

ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ

ಲೇಖಕರು ಮೂಲ ರಘುಪತಿ

ಭಗವಂತನೂ, ಅವನ ಅಜ್ಞಾಧಾರಕರಾದ ದೇವತೆಗಳೂ ಮತ್ತು ಮಹಾಪುರುಷರೂ ಆಗಾಗ್ಗೆ ನಮ್ಮ ದೇಶದಲ್ಲಿ ಅವತಾರ ಮಾಡಿ ಧರ್ಮದ ಪುನರುದ್ಧಾರ ಮಾಡಿ, ತಮ್ಮ ನಡತೆಯಿಂದ ಜನತೆಗೆ ಮಾರ್ಗದರ್ಶನ ಮಾಡುವರೆಂಬ ದೃಢವಾದ ವಿಶ್ವಾಸ ಮೊದಲಿನಿಂದಲೂ ಬೆಳೆದುಬಂದಿದೆ. ಭಗವಂತನು ರಾಮಚಂದ್ರನಾಗಿ, ಕೃಷ್ಣನಾಗಿ ಅವತರಿಸಿ ಪಥಪ್ರದರ್ಶನ ಮಾಡಿರುವನು. ಇದರಂತೆ ವೈದಿಕ ಮತ ಪ್ರವರ್ತಕರುಗಳಾದ ಬೇರೆಬೇರೆ ಆಚಾರ್ಯರುಗಳು, ಬೇರೆಬೇರೆ ದೇವತೆಗಳ ಅವತಾರರೆಂದೇ ಆಯಾ ಮತಾನುಯಾಯಿಗಳು ಹೇಳುವರು.

ತಮ್ಮ ನಿತ್ಯ ಜೀವನದಲ್ಲಿ ಬದುಕಿನ ಚರಮ ಧ್ಯೇಯನಾದ ಭಗವಂತನಲ್ಲಿ ಭಕ್ತಿ ಮಾಡಿ, ಉದ್ಧಾರಕರಾದ ಅನೇಕ ಭಕ್ತರುಗಳ ಚರಿತ್ರೆಯನ್ನು ಭಾಗವತ ಮೊದಲಾದ ಪುರಾಣಗಳು ಸಾರುತ್ತವೆ. ಇಂತಹ ಭಗವದ್ಭಕ್ತರ ಗುಂಪಿನಲ್ಲಿ ಬಾಲಕ ಪ್ರಹ್ಲಾದನದು ಬಹಳ ದೊಡ್ಡ ಸ್ಥಾನ. ಭಗವದ್ಭಕ್ತಿಯನ್ನೇ ಜೀವನದ ಗುರಿಯನ್ನಾಗಿ ಮಾಡಿಕೊಂಡ ಪ್ರಹ್ಲಾದರು ಈ ಭೂಲೋಕದಲ್ಲಿ ೧೬ನೆಯ ಶತಮಾನದಲ್ಲಿ ನಮ್ಮ ಕರ್ನಾಟಕದಲ್ಲಿ ಹುಟ್ಟಿ, ವ್ಯಾಸರಾಜರೆಂದು ಹೆಸರಾದರು. ಕನ್ನಡ ಸಾಮ್ರಾಜ್ಯವಾದ ವಿಜಯನಗರದ ಕೃಷ್ಣದೇವರಾಯನಿಗೆ ಮುಖ್ಯ ರಾಜಗುರುಗಳಾದರು. ದೊಡ್ಡ ಪಂಡಿತರಾದ ಇವರು ಮಾಧ್ವಮತದಲ್ಲಿ ಅತ್ಯುಚ್ಚವೆನಿಸಿಕೊಂಡ ಗ್ರಂಥಗಳನ್ನು ರಚಿಸಿದರು. ಕರ್ನಾಟಕ ಹರಿದಾಸ ಪಿತಾಮಹರೆನಿಸಿದ ಪುರಂದರ ದಾಸರಿಗೆ ಗುರುಗಳಾಗಿ ಹರಿ ಭಕ್ತಿ ಪ್ರಚಾರದಿಂದ ಕನ್ನಡ ಜನತೆಯನ್ನುದ್ಧರಿಸಿ ಕನ್ನಡ ಸಾಹಿತ್ಯಕ್ಕೆ [illegible] ದೊಡ್ಡಿದರು.

ಈ ಮಹಾಮಹಿಮರೇ ಮತ್ತೆ ೧೭ನೆಯ ಶತಮಾನದಲ್ಲಿ ರಾಘವೇಂದ್ರ ಸ್ವಾಮಿಗಳಾದರು. ಇಂದಿಗೆ ಕರ್ನಾಟಕವಷ್ಟೇ ಏಕೆ, ಭಗವಂತನ ಭಕ್ತರಿರುವೆಡೆಯಲ್ಲೆಲ್ಲಾ ರಾಘವೇಂದ್ರ ಸ್ವಾಮಿಗಳ ಹೆಸರು ಸುಪ್ರಸಿದ್ಧವಾಗಿದೆ. ಅವರ ಭಾವಚಿತ್ರವನ್ನಿಟ್ಟು ಪೂಜಿಸಿದರೂ ಸಾಕು, ಎಂದೂ ವಾಸಿಯಾಗದ ಕುಷ್ಠ, ಮೂರ್ಛೆ ರೋಗ, ಹುಚ್ಚು ಮೊದಲಾದ ಪ್ರಬಲವಾದ ವ್ಯಾಧಿಗಳೂ ವಾಸಿಯಾಗುತ್ತವೆ. ಇಂತಹ ಮಹಾಪುರುಷರ ಚರಿತ್ರೆಯ ಒಂದೆರಡು ಅಂಶಗಳನ್ನು ತಿಳಿದರೆ ಇವರ ಮಹಿಮೆಯು ಅರಿವಾಗುವುದು.

ವಿಜಯನಗರದ ಕೃಷ್ಣದೇವರಾಯನ ಆಸ್ಥಾನದಲ್ಲಿ ಕೃಷ್ಣಭಟ್ಟರೆಂಬ ಮಾಧ್ವ ಪಂಡಿತರಿದ್ದರು. ಇವರು ಗೌತಮ ಗೋತ್ರದಲ್ಲಿ ಹುಟ್ಟಿದವರು. ವೀಣೆ ನುಡಿಸುವುದರಲ್ಲಿ ಇವರದು ಅದ್ವಿತೀಯ ಚಾತುರ್ಯ. ಚಕ್ರವರ್ತಿಯು ಇವರಿಂದ ವೀಣೆಯನ್ನು ಅಭ್ಯಾಸ ಮಾಡುತ್ತಿದ್ದ. ಅಂತಲೇ ಇವರಿಗೆ ವೀಣಾ ಕೃಷ್ಣಭಟ್ಟರೆಂದು ಹೆಸರು. ಇವರ ಮೊಮ್ಮಕ್ಕಳ ಹೆಸರು ವೀಣಾ ತಿಮ್ಮಣ್ಣಭಟ್ಟರು. ವಿಜಯನಗರವು ಶತ್ರುವಿನ ಪಾಲಾದ್ದರಿಂದ ರಾಜಾಶ್ರಯ ತಪ್ಪಿದ ತಿಮ್ಮಣ್ಣಭಟ್ಟರು ತಮಿಳುನಾಡಿನ ಕಾವೇರಿಪಟ್ಟಣದಲ್ಲಿ ನೆಲೆಸಿ ಬಡತನದ ಜೀವನ ನಡೆಸುತ್ತಿದ್ದರು. ತಿರುಪತಿ ವೆಂಕಟೇಶನಲ್ಲಿ ಬಹುಕಾಲ ಸೇವೆಗೈದ ಇವರಿಗೆ ವೆಂಕಮ್ಮ, ಗುರುರಾಜ, ವೆಂಕಣ್ಣ ಎಂಬ ಮೂರು ಮಕ್ಕಳಾದರು. ಇವರಲ್ಲಿ ವೆಂಕಣ್ಣ ಎಂಬ ಕೊನೆಯ ಮಗುವೇ ಮುಂದೆ ರಾಘವೇಂದ್ರಸ್ವಾಮಿಗಳಾದುದು.

ಮಹಾಪುರುಷರು ಸಾಮಾನ್ಯವಾಗಿ ಶುದ್ಧ ವಂಶವನ್ನೇ ಆರಿಸಿಕೊಂಡು ಹುಟ್ಟುವರು. ಬಾಲ್ಯದಲ್ಲಿ ತಂದೆಯವರು ತೀರಿಕೊಂಡಿದ್ದರಿಂದ ಬಾಲಕ ವೆಂಕಣ್ಣನು ತನ್ನ ಅಕ್ಕನ ಗಂಡಂದಿರಲ್ಲೇ ವಿದ್ಯಾಭ್ಯಾಸ ಮಾಡಿದ. ಪ್ರಾಪ್ತ ವಯಸ್ಕನಾಗುವುದರಲ್ಲೇ ಅತಿ ಸೂಕ್ಷ್ಮಮತಿಯಾದ್ದರಿಂದ ವೆಂಕಣ್ಣಭಟ್ಟರು ದೊಡ್ಡ ಪಂಡಿತರಾಗಿ ವೆಂಕಟ [illegible]ರೆಂದರು. ವೆಂಕಟಾಚಾರ್ಯರದು ಬಹಳ ಸಾತ್ವಿಕ ಸ್ವಭಾವ. ಒಬ್ಬರನ್ನೂ ಒಂದು ದಿನವೂ ನೋಯಿಸಿದವರಲ್ಲ, ಎಷ್ಟೇ ಕಷ್ಟದಲ್ಲಿದ್ದರೂ ಮುಖದಲ್ಲಿ ಅತಿ ಸಮಾಧಾನ ಛಾಯೆ, ದಟ್ಟ ದಾರಿದ್ರ್ಯದಲ್ಲಿದ್ದರೂ ದೇವರಲ್ಲೇ ಭಕ್ತಿ ಮಾಡಬೇಕು. ಭಗವಂತ ನಡೆಸಿದಂತಹ ಜೀವನ ನಡೆಸಬೇಕು. ಇನ್ನೊಬ್ಬರನ್ನು ದೈನ್ಯದಿಂದ ಕೈಚಾಚಿ ನಾಲ್ಕು ಕಾಸಿಗಾಗಿ, ತುತ್ತು ಅನ್ನಕ್ಕಾಗಿ, ಗೇಣು ಬಟ್ಟೆಗಾಗಿ ಬೇಡಬಾರದೆಂಬ ಅಚಲ ವಿಚಾರ ದೃಢವಾಗಿತ್ತು. ಇಷ್ಟು ಹೊತ್ತಿಗಾಗಲೇ ಉತ್ತಮ ಪಂಡಿತರಾದರೂ ಇನ್ನೂ ಹೆಚ್ಚಿನ ವಿದ್ಯಾರ್ಜನೆ ಮಾಡಬೇಕೆಂಬ ಹಂಬಲದಿಂದ ಹೆಂಡತಿ ಸರಸ್ವತಿ, ಒಬ್ಬನೇ ಮಗ ಲಕ್ಷ್ಮೀನಾರಾಯಣ ಇವರಿಬ್ಬರ ಸಂಸಾರದ ಹೊರೆ ಹೊತ್ತ ವೆಂಕಟಾಚಾರ್ಯರು ಮಧ್ವಾಚಾರ್ಯರ ಪೀಠದಲ್ಲಿ [illegible] ತಂಜಾವೂರ ನಾಯಕರಿಂದ ಪೂಜ್ಯರಾಗಿ ಕುಂಭಕೋಣೆಯಲ್ಲಿ ವಾಸಿಸುತ್ತಿದ್ದ ಶ್ರೀ ಸುಧೀಂದ್ರ ಸ್ವಾಮಿಗಳಲ್ಲಿ ಒಂದು ವ್ಯಾಕರಣ ಮಹಾಭಾಷ್ಯ, ತತ್ವಪ್ರಕಾಶ, ಚಂದ್ರಿಕಾದಿ ಪ್ರೌಢ ಗ್ರಂಥಗಳನ್ನು ಅಧ್ಯಯನ ಮಾಡಲಾರಂಭಿಸಿದರು. ಈ ಪ್ರೌಢ ವಿದ್ಯಾಭ್ಯಾಸ ಕಾಲದಲ್ಲೇ ಇವರು ಅನೇಕ ಜನ ಪಂಡಿತರನ್ನು ಶಾಸ್ತ್ರ ಚರ್ಚೆಯಲ್ಲಿ ಸೋಲಿಸಿದರು. ಸಂಸ್ಕೃತದಲ್ಲಿ ಗ್ರಂಥ ರಚಿಸಲು ಆರಂಭಿಸಿದರು.

ವೆಂಕಟಾಚಾರ್ಯರ ಪಾಂಡಿತ್ಯ, ಪ್ರತಿಭೆ, ಸಮಾಧಾನ, ನಿರಹಂಕಾರ ಸ್ವಭಾವ, ಅಚಲ ದೈವಭಕ್ತಿ, ಧರ್ಮನಿಷ್ಠೆಯನ್ನು ನೋಡಿ ಶ್ರೀ ಸುಧೀಂದ್ರ ಸ್ವಾಮಿಗಳು ಇವರಿಗೇ ಮುಂದೆ ಸನ್ಯಾಸ ಕೊಟ್ಟು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಬೇಕೆಂದು ಯೋಚಿಸಿ ತಮ್ಮ ಅಭಿಪ್ರಾಯವನ್ನು ವೆಂಕಟಾಚಾರ್ಯರಿಗೆ ತಿಳಿಸಿದರು. ಅವರು ಇದಕ್ಕೆ ಎಲ್ಲ ವಿಧದಿಂದಲೂ ಅರ್ಹತೆಯನ್ನು ಪಡೆದಿದ್ದರೂ ಈ ಮಾತಿಗೆ ಒಡಂಬಡಲಿಲ್ಲ. ಒಮ್ಮೆ ಸ್ವಪ್ನದಲ್ಲಿಯೇ ಒಂದು ದಿನ ಬೆಳಗಿನ ಜಾವದಲ್ಲಿ ವಿದ್ಯಾದೇವಿಯು ಇವರಿಗೆ ಪ್ರತ್ಯಕ್ಷಳಾಗಿ ಖಡಿತವಾಗಿ ಇವರು ಸನ್ಯಾಸಿಗಳಾಗಿ ಪೀಠಾಧಿಪತ್ಯ ವಹಿಸಿಕೊಂಡು ಮಧ್ವಶಾಸ್ತ್ರವನ್ನು ಗ್ರಂಥ ರಚನೆ ಮಾಡಿ ಬೆಳೆಸುವುದಲ್ಲದೆ ಸನಾತನ ಧರ್ಮವು ಖಿಲವಾಗುತ್ತಿರುವುದನ್ನು ತಡೆಯಬೇಕೆಂದು ಹೇಳಿ ಬೀಜಾಕ್ಷರವನ್ನು ಅನುಗ್ರಹಿಸಿ ಮರೆಯಾದಳು.

ತಂಜಾವೂರು ರಘುನಾಥ ಭೂಪಾಲನ ಎದುರಿಗೇ ಇವರಿಗೆ ಸುಧೀಂದ್ರ ಸ್ವಾಮಿಗಳು ಆಶ್ರಮ ಕೊಟ್ಟು ರಾಘವೇಂದ್ರರೆಂದು ಹೆಸರಿಟ್ಟು ರಾಮದೇವರಂತೆ ಕಲ್ಯಾಣ ಗುಣ[illegible]ಯಾಗಿ ಅವನ ಕರುಣೆಯಿಂದ ಯಾವಾಗಲೂ ಜಗತ್ತಿನ ಹಿತದಲ್ಲಿಯೇ ಮಗ್ನರಾಗಿರುವಂತೆ ಆಶೀರ್ವದಿಸಿದರು. ರಾಘವೇಂದ್ರ ಸ್ವಾಮಿಗಳು ಗುರುಗಳ ಆಜ್ಞೆಯನ್ನು ತಮ್ಮ ಜೀವಿತಕಾಲದಲ್ಲಿ ಮಾತ್ರ ಸಾರ್ಥಕಗೊಳಿಸದೆ ಈಗಲೂ ಸಾರ್ಥಕ ಮಾಡುತ್ತಿರುವರು.

ರಾಘವೇಂದ್ರ ಸ್ವಾಮಿಗಳು ಆಮೇಲೆ ಎರಡು ಸಲ ದಕ್ಷಿಣ ಭಾರತವನ್ನೆಲ್ಲ ಸಂಚರಿಸಿದರು. ಮೂರು ವೇದಗಳಿಗೂ ಭಾಷ್ಯ ಬರೆದರು. ಮೀಮಾಂಸಾದಿ ದರ್ಶನಗಳಲ್ಲೂ ಗ್ರಂಥ ರಚನೆ ಮಾಡಿದರು. ಮಧ್ವ ಶಾಸ್ತ್ರಕ್ಕೆ ಪರಿಮಳ, ಭಾವದೀಪ, ಪ್ರಕಾಶ ಮೊದಲಾದ ೩೦-೪೦ ಅಮೂಲ್ಯ ವ್ಯಾಖ್ಯಾನಗಳನ್ನು ಬರೆದರು. ಕನ್ನಡದಲ್ಲೂ ದೇವರ ನಾಮಗಳನ್ನು ರಚಿಸಿದರು. ತಂಜಾವೂರು ಪ್ರಾಂತ್ಯದಲ್ಲಿ ಕ್ಷಾಮ ಬಂದಾಗ ಧೃತಿಗೆಟ್ಟ ಜನರಿಗೆ ಅನ್ನದಾನ ಮಾಡಿದರು. ಶಿವಾಜಿಯ ತಂದೆ ಷಾಜಿಯೂ ಇವರ ತಪಃಪ್ರಭಾವಕ್ಕೆ ಒಗ್ಗಿ, ಇವರ ಶಿಷ್ಯನಾಗಿ ಇವರನ್ನು ಬಹುಕಾಲ ಕೊಲ್ಹಾಪುರದಲ್ಲಿಟ್ಟುಕೊಂಡಿದ್ದನು. ಬಿಜಾಪುರದ ಅದಿಲ್‌ಷಹನು ಇವರಿಗೆ [illegible] ಜಗದ್ಗುರುಗಳೆಂಬ ಪ್ರಶಸ್ತಿ ಕೊಟ್ಟನು. ಮೈಸೂರಿನ ದೊಡ್ಡ ರಾಜ ಒಡೆಯರು [illegible] ಗ್ರಾಮವನ್ನು ಇವರಿಗೆ [illegible] ಕೊಟ್ಟರು. ಇವರ ಶಾಸ್ತ್ರ ಪಾಂಡಿತ್ಯವು ಎಷ್ಟು ಪ್ರಗಲ್ಭವೋ, ಇವರ ಮಹಿಮೆಯೂ ಅಷ್ಟೇ ಅಗಾಧವಾದುದು. ಇವರನ್ನು [illegible]ವಾಗ ಒಬ್ಬ ಗೃಹಸ್ಥನ ಮಗು ಸಾರಿನ ಪಾತ್ರೆಯಲ್ಲಿ ಬಿದ್ದು ಸತ್ತು ಬಿಡಲು ಇವರ [illegible] ಬದುಕಿಸಿದರು. [illegible] ಬಿಸಿಲಿನಲ್ಲಿ [illegible] ತಮ್ಮ ತಪಃಪ್ರಭಾವದಿಂದ ನೆರಳನ್ನು ಮಾಡಿದರು. ಏನೂ ಅರಿಯದ ದಡ್ಡ ವೆಂಕಣ್ಣನೆಂಬ ದನಗಾಹಿ ಇವರ ಅನುಗ್ರಹದಿಂದಲೇ ಅದವಾನಿಯಲ್ಲಿ ಆ ಕಾಲದಲ್ಲಿ ನವಾಬನಾಗಿದ್ದ ಸಿದ್ದೀ ಮಸೂದ ಖಾನನ ದಿವಾನನಾದನು. ಸಿದ್ದೀ ಮಸೂದ ಖಾನನೂ ಇವರ ತಪಸ್ಸಿಗೆ ಮೆಚ್ಚಿ ಇವರಿಗೆ ಮಂತ್ರಾಲಯವೆಂಬ ಗ್ರಾಮವನ್ನು ಉಂಬಳಿ ಹಾಕಿಕೊಟ್ಟನು.

ರಾಘವೇಂದ್ರ ಸ್ವಾಮಿಗಳು ತುಂಗಭದ್ರೆಯ ದಡದಕ್ಷಿಣ ಮಂತ್ರಾಲಯದಲ್ಲಿ ಬೃಂದಾವನ ಒಂದನ್ನು ಮಾಡಿಸಿ ಅದರಲ್ಲಿ ಜೀವಂತ ಸಮಾಧಿಸ್ಥರಾದರು. ಅವರ ಶಿಷ್ಯರು ಅವರ ಅಪ್ಪಣೆಯಂತೆ ಆ ಬೃಂದಾವನವನ್ನು ಮುಚ್ಚಿದರು. ಅವರು ಬೃಂದಾವನಸ್ಥರಾಗಿ ಸುಮಾರು ೩೦೦ ವರ್ಷಗಳು ಸಂದರೂ ಇಂದಿಗೂ ಅನೇಕ ಭಕ್ತರಿಗೆ ಅವರ [illegible] ಮದರಾಸ್ ಸೆಟ್ಲ್‌ಮೆಂಟ್ ಆಫೀಸರಾದ ಸರ್ ಥಾಮಸ್ ಮನ್ರೋನೊಂದಿಗೆ ಬೃಂದಾವನದಿಂದ ಇವರು ಎದ್ದು ಬಂದು ಮಾತನಾಡಿ ಮಂತ್ರಾಕ್ಷತೆ ಅನುಗ್ರಹಿಸಿದ್ದು ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್‌ನಲ್ಲಿ ಪ್ರಕಟಿತವಾಗಿದೆ. ಇವರ ಮಹಿಮೆ ಮಂತ್ರಾಲಯದಲ್ಲಿ ಮಾತ್ರವಲ್ಲದೆ ಇವರ ಬೃಂದಾವನದಿಂದ ಮೃತ್ತಿಕೆ ತಂದು ಪೂಜಿಸಿದ ಸ್ಥಳದಲ್ಲೆಲ್ಲ ನಡೆಯುತ್ತವೆ. ಮೈಸೂರು, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಇವರ ಮೃತ್ತಿಕಾ ಬೃಂದಾವನ ಪ್ರತಿಷ್ಠಿತವಾಗಿ ಅನೇಕ ಭಕ್ತರುಗಳು ಅಲ್ಲಿ ಸೇವಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಿದ್ದಾರೆ. ಪ್ರತಿ ವರ್ಷ ಶ್ರಾವಣ ಕೃಷ್ಣ ಪಾಡ್ಯ, ಬಿದಿಗೆ, ತದಿಗೆ ಇವರ ಉತ್ಸವವು ಅನೇಕ ಸ್ಥಳಗಳಲ್ಲಿ ನಡೆಯುತ್ತದೆ. ಮಂತ್ರಾಲಯದಲ್ಲಂತೂ ಈ ಉತ್ಸವ ಕಾಲದಲ್ಲಿ [illegible] ಭಕ್ತರ ಸೇರಿ ಗುರುಗಳ ದರ್ಶನ ಪಡೆದು ಸೇವೆ ಮಾಡುತ್ತಾರೆ. ಈ ವರ್ಷ ಉತ್ಸವವು ಇದೇ ಆಗಸ್ಟ್ ೧೫, ೧೬, ೧೭ ಈ ಮೂರು ದಿನಗಳಲ್ಲಿ ಜರುಗುತ್ತದೆ.

ಅನೇಕ ಸದ್ಗ್ರಂಥಗಳನ್ನು ರಚಿಸಿ ಭಾರತ ತತ್ವಶಾಸ್ತ್ರ ಪ್ರಪಂಚಕ್ಕೆ ಅದ್ವಿತೀಯ ಉಪಕಾರ ಮಾಡಿದ ಈ ಮಹಾಮಹಿಮರು ಭಕ್ತರಿಗೆ ಸಂತಾನ, ಮಕ್ಕಳ, ಧನ, ಆರೋಗ್ಯ ಕೊಡುವ ಬರೀ ಪವಾಡ ಪುರುಷರೆಂದು ಭಾವಿಸುವುದು ತಪ್ಪು. ಇವರು ತೋರುತ್ತಿರುವ ಈ ಪವಾಡ, ಮಾಡುತ್ತಿರುವ ಈ ಲೌಕಿಕ ಅನುಗ್ರಹವು ಪಾಮರರಾಗಿ ಪ್ರಪಂಚದ [illegible]ದಲ್ಲಿ ಮುಳುಗಿ ತೊಳಲುತ್ತಿರುವ ಭಕ್ತರಿಗೆ ಅಲೌಕಿಕನಾದ ಭಗವಂತನತ್ತ ಮನ ಸೆಳೆಯುವುದೇ ಆಗಿದೆ.

ಲಕ್ಷ್ಮಿ ★ 12—8—54 ರಿಂದ ಪ್ರತಿ ದಿನ 3 ಆಟಗಳು

ಪಕ್ಷಿರಾಜಾರವರ ತಮಿಳು ಚಿತ್ರ **ಮಲೈಕ್ಕಳ್ಳನ್**

ಪಾತ್ರ—ಎಂ ಜಿ ರಾಮಚಂದ್ರನ್, ಪಿ ಭಾನುಮತಿ, ಏಳುಮಲೈ ಮತ್ತು ಡೊರೆರಾಜ್ ಮುಂತಾದವರು

ಸಂಭಾಷಣೆ ಕರುಣಾನಿಧಿ,

ನಿರ್ದೇಶನ ಶ್ರೀರಾಮುಲು ನಾಯ್ಡು

ಸ್ಟುಡಿಯೋ —ಪಕ್ಷಿರಾಜಾ

4 [illegible] ಎಲ್ಲ ವಿಧವಾದ [illegible] ಮತ್ತು [illegible]

HOUSE FOR SALE

Spacious bungalow "TULISI-VIHAR" in Narayana Sastry road, Lakshmipuram, ready for sale. Rs 45,000 or near offer

ಜಗದಂಬಾ ಶಿಶುವಿಹಾರ

585 ದಿವಾನರ ರಸ್ತೆ ಮೈಸೂರು

ಮೇಲ್ಕಂಡ ಶಿಶುವಿಹಾರದಲ್ಲಿ ಮಾಂಟಿಸ್ಸೋರಿ ಮತ್ತು ಕಿಂಡರ್‌ಗಾರ್ಟನ್ ವಿಧಾನದಲ್ಲಿ ಮಕ್ಕಳಿಗೆ ಮೂರನೇ ವಯಸ್ಸಿನಿಂದ ಆಟ ಪಾಟಗಳೊಡನೆ ಓದು ಬರಹವನ್ನು ಕಲಿಸಿ ೭ನೇ ವಯಸ್ಸಿಗೆ ಮಿಡಲ್ ಫಸ್ಟ್ ಇಯರ್ ತರಗತಿಗೆ ಸೇರಲು ಅರ್ಹರನ್ನಾಗಿ ಮಾಡಲಾಗುತ್ತೆ.

ಡಿ. ಕೃಷ್ಣಮೂರ್ತಿ, ಡೈರೆಕ್ಟರ್

ಗೋವಾ ಘಟನೆ ಬಗ್ಗೆ ಬ್ರಿಟನ್ನಿನ ಸಂಶಯಕ್ಕೆ ಪ್ರತ್ಯುತ್ತರ

ಗೋವಾದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳನ್ನು ಕುರಿತು ಬ್ರಿಟಿಷ್ ಸರ್ಕಾರದವರು ಇತ್ತ ಈ ವೇಳೆಯಲ್ಲಿ ಭಾರತದ ಬಗ್ಗೆ ಅನುಚಿತವಾದ ದೂಷಣೆಗಳನ್ನು ಮಾಡಿದ್ದಕ್ಕೆ ಉತ್ತರವಾಗಿ ಭಾರತ ಸರ್ಕಾರದವರು ದೆಹಲಿಯಲ್ಲಿರುವ ಬ್ರಿಟಿಷ್ ಹೈ ಕಮಿಷನರ್ ಅಲೆಕ್ಸಾಂಡರ್ ಕ್ಲಟರ್‌ಬಕ್ ರವರಿಗೆ ಪತ್ರವೊಂದನ್ನು ಕಳಿಸಿ, ಏಕ ಪಕ್ಷೀಯವಾದ ಸುದ್ದಿಗಳ ಆಧಾರದ ಮೇಲೆ ಬ್ರಿಟನ್ನು ತಳೆದಿರುವ ಅಭಿಪ್ರಾಯಕ್ಕಾಗಿ ವಿಷಾದವನ್ನು ಸೂಚಿಸಿ, [illegible] ಹಿಂಸೆಯನ್ನು ಉಪಯೋಗಿಸುವಾಗಲಿ ಅಥವಾ ಅದಕ್ಕೆ ಬೆಂಬಲವನ್ನು ಕೊಡುವುದಾಗಲಿ ಸರ್ಕಾರದವರು ಮಾಡದೆ, ಗೋವಾ ಸಮಸ್ಯೆಯನ್ನು ಶಾಂತಯುತವಾಗಿಯೇ ಪರಿಹರಿಸಲು ಭಾರತವು ನಿಶ್ಚಯ ಹೊಂದಿರುವುದೆಂದೂ, ಅದರಂತೆ ಪೋರ್ಚುಗೀಸ್ ಸರ್ಕಾರದವರೂ ವರ್ತಿಸುವುದಾಗಿ ಭಾವಿಸುವುದಾಗಿಯೂ ಭಾರತ ಸರ್ಕಾರದವರು ಬ್ರಿಟನ್ನಿಗೆ ತಿಳಿಸಿದ್ದಾರೆ.

ಮಾರ್ಕೆಟ್ ಹೂವಿನ ಮಾರಾಟಗಾರರಿಂದ ಹೆಚ್ಚು ಸುಂಕ ವಸೂಲಿಯೇ?

[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಭರತಪುರದ ಮಹಾರಾಜರ ಆಗಮನ

ಭರತಪುರದ ಮಹಾರಾಜರು ಈ ತಿಂಗಳು ೧೫ನೇ ತಾ|| ಮೈಸೂರಿಗೆ ಬರುವರೆಂದು ತಿಳಿದುಬಂದಿದೆ.

SREE GANESHA

TALKIES

From 12-8-54 For 3 Days

A Dramatic Thunderbolt from the Nobel Prize-winner's Story

THE SECRET LOVE

Featuring - Dolores Del Rio and Pedro Armendariz

— NEXT CHANGE —

GLENN MILLER STORY

SRI GAYATHRI

TALKIES

Daily 3 Shows

On 11th August 54

Warner's

DARK VICTORY

With - Betty Davis, Humphrey Bogart

On 12th August 54

Warner's

Stop You're Killing Me

(In Warner Color)

With - Broderick Crawford, Claire Trevor

Edited, Printed and Published by A. P. Nagarajan at Sadhvi Press, D. Subbiah Road, Mysore

ರಿಜಿಸ್ಟ್ರೇ ನಂ 792

ಒಂದು ಪ್ರತಿ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೩] SADHVI . THURSDAY 12-8-1954 ಮೈಸೂರು · ಗುರುವಾರ ೧೨-೮-೧೯೫೪ [ಸಂಚಿಕೆ : ೧೧

ಸ್ವಾತಂತ್ರ್ಯ ವಿಷಯಗಳ ವರ್ಗದ ಬಗ್ಗೆ ಫ್ರೆಂಚರ ವಾಗ್ದಾನ ಭಂಗವೇ ?

ಉದ್ಬೂರಿನಲ್ಲಿ ವಿದ್ಯುಚ್ಛಕ್ತಿ ದೀಪೋತ್ಸವದ ಆರಂಭ

ಮೈಸೂರು ೧೧

ಇದೇ ತಾಲ್ಲೂಕಿನ ಉದ್ಬೂರು ಗ್ರಾಮದಲ್ಲಿ ಮೊನ್ನೆ ಮುಖ್ಯಮಂತ್ರಿ ಕೆ ಹನುಮಂತಯ್ಯನವರು ವಿದ್ಯುಚ್ಛಕ್ತಿ ದೀಪಾರಂಭೋತ್ಸವವನ್ನು ನೆರವೇರಿಸಿದರು ತಿರಿಯ ಶಾಸನ ಸಭಾ ಸದಸ್ಯರಾದ ನಾಗನಹಳ್ಳಿ ಶ್ರೀ ಶಿವನಂಜೇಗೌಡರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಸೀತಮ್ಮನವರಿಂದ ಪ್ರಾರ್ಥನೆಯಾದನಂತರ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಗುರುಸ್ವಾಮಿ ಶಿವನ ಜಪ್ಪನವರು ಮಾನಪತ್ರವೊಂದನ್ನು ಗಂಧದ ಕರಂಡದಲ್ಲಿ ಮುಖ್ಯಮಂತ್ರಿಗಳಿಗೆ ಒಪ್ಪಿಸಿದರು

ವ್ಯವಸಾಯ ಮಂತ್ರಿ ಡಾ|| ನಾಗನಗೌಡರು ಭಾಷಣ ಮಾಡಿ, ರೈತರುಗಳಿಗೆ ಒದಗಿಸಿರುವ ವಿದ್ಯುಚ್ಛಕ್ತಿಯನ್ನು ಅವರು ಸದುಪಯೋಗಪಡಿಸಿಕೊಳ್ಳಬೇಕೆಂದೂ, ವ್ಯವಸಾಯಕ್ಕೂ ವಿದ್ಯುಚ್ಛಕ್ತಿಯ ಉಪಯೋಗವನ್ನು ಪಡೆಯಬಹುದೆಂದೂ ತಿಳಿಸಿದರು

ವಿಜಯ ಪತ್ರಿಕೆಯ ಸಂಪಾದಕರಾದ ಶ್ರೀ ಎ ರಾಮಣ್ಣನವರು ಭಾಷಣ ಮಾಡಿ, ಗ್ರಾಮಾಂತರ ಪ್ರದೇಶದ ಜನರ ಸ್ಥಿತಿ ಉತ್ತಮವಾಗಲು ಸರ್ಕಾರದವರು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು, ಅದನ್ನು ಜಾರಿಗೆ ತರಬೇಕೆಂದೂ, ಮೈಸೂರು ತಾಲ್ಲೂಕಿನಲ್ಲಿ ಹೆಚ್ಚು ವಿದ್ಯಾಭ್ಯಾಸ, ಮಾರ್ಗಾನುಕೂಲ ಸೌಕರ್ಯಗಳಿಲ್ಲದೆ ತಾಲ್ಲೂಕು ಹಿಂದೆ ಬಿದ್ದಿರುವುದೆಂದೂ ನುಡಿದರು

ಮುಖ್ಯ ಮಂತ್ರಿಯವರು ಮಾತನಾಡಿ, ಇಂದಿನ ಸರ್ಕಾರಗಳು ಹಳ್ಳಿಗಳ ಕಡೆಗೆ ಗಮನ ಕೊಡದೆ ಇರುವಂತಿಲ್ಲವೆಂದೂ, ಅದಕ್ಕೆ ಹೊಸ ಆಡಳಿತ ಪದ್ಧತಿಯೇ ಕಾರಣವೆಂದೂ, ಆದರೆ ಸರ್ಕಾರವು ಹಳ್ಳಿಗಳ ಏಳಿಗೆಗಾಗಿ ಪ್ರತಿಯೊಂದರಲ್ಲೂ ಸಹಾಯ ಮಾಡಲು ಸಾಧ್ಯವಿಲ್ಲವೆಂದೂ, ಈಗ ಪಟ್ಟಣಗಳಿಗೆ ಹಿಂದಿನ ಪ್ರಾಶಸ್ತ್ಯವನ್ನು ಕೊಡುತ್ತಿಲ್ಲವೆಂದೂ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಸರ್ಕಾರದವರು ೫೦ ಲಕ್ಷ ರೂ ಮಂಜೂರು ಮಾಡಿರುವರೆಂದೂ ಹೇಳಿದರು

ಅಧ್ಯಕ್ಷರು ಭಾಷಣ ಮಾಡಿ ಊರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿರುವುದಕ್ಕೆ ಸರ್ಕಾರಕ್ಕೆ ಕೃತಜ್ಞತೆಯನ್ನು ಸೂಚಿಸಿದರು ಶ್ರೀ ವಿ. ಕೆ ಶ್ರೀನಿವಾಸರವರು ವಂದನಾರ್ಪಣೆ ಮಾಡಿದ ನಂತರ ಸಮಾರಂಭವು ಮುಕ್ತಾಯವಾಯಿತು

ಜೂಜಾಡುತ್ತಿದ್ದವರ ಮೇಲೆ ಮೊಕದ್ದಮೆ

ನೆನ್ನೆ ಸಂಜೆ ಮೈಸೂರು ಬ್ಯಾಂಕ್ ಕಛೇರಿ ಕಟ್ಟಡದ ಹಿಂಭಾಗದಲ್ಲಿ ಜೂಜಾಡುತ್ತಿದ್ದ ಚಿಕ್ಕಸ್ವಾಮಾಚಾರಿ ಮತ್ತಿತರ ನಾಲ್ಕು ಮಂದಿಯನ್ನು ಬಂಧಿಸಿ ಅವರಿಂದ ೬|| ರೂ ಗಳನ್ನೂ ಮತ್ತು ಕಾನ್ವೆಂಟ್ ರಸ್ತೆಯಲ್ಲಿ ಜೂಜಾಡುತ್ತಿದ್ದ ಅಬ್ದುಲ್ ಜಬ್ಬಾರ್ ಮತ್ತಿತರ ೫ ಮಂದಿಯನ್ನು ಬಂಧಿಸಿ ಅವರಿಂದ ೨೦ ರೂ ಗಳನ್ನು ವಶಪಡಿಸಿಕೊಂಡು ಲಷ್ಕರ್ ಪೋಲೀಸರು ಅವರುಗಳ ಮೇಲೆ ಈ ಎರಡು ಮೊಕದ್ದಮೆ ಹೂಡಿರುವರು

ರಾಷ್ಟ್ರಾಧ್ಯಕ್ಷರ ಮೆರವಣಿಗೆಯ ಮತ್ತೊಂದು ದೃಶ್ಯ



ಡಾ|| ರಾಜೇಂದ್ರ ಪ್ರಸಾದರು ಶ್ರೀಮನ್ ಮಹಾರಾಜರು, ಮುಖ್ಯ ಮಂತ್ರಿಯವರು ಮತ್ತು ಎಡಿಸಿ ಸೆಕ್ರೆಟರಿ ಚಟರ್ಜಿಯವರೊಡನೆ ಸಾರೋಟಿನಲ್ಲಿ ಕುಳಿತಿರುವರು

ರಾಷ್ಟ್ರಾಧ್ಯಕ್ಷರೊಡನೆ ಪಾರ್ಲಿಮೆಂಟ್ ಸದಸ್ಯರ ಭೇಟಿ

ಮೈಸೂರು ೧೧

ಲೋಕ ಸಭೆಯ ಮೈಸೂರು ಸಂಸ್ಥಾನದ ಸದಸ್ಯರುಗಳು ನಾಳೆ ಬೆಳಗ್ಗೆ ೧೧|| ಗಂಟೆಗೆ ಲಲಿತಮಹಲಿನಲ್ಲಿ ರಾಷ್ಟ್ರಾಧ್ಯಕ್ಷರನ್ನು ಸಂದರ್ಶಿಸುವರು

ಶ್ರೀ ಲಕ್ಷ್ಮೀಹಯಗ್ರೀವ ಜಯಂತಿ

ಶ್ರೀ ಬ್ರಹ್ಮತಂತ್ರ ಪರಕಾಲ ಮಠದಲ್ಲಿ ಶ್ರೀ ಲಕ್ಷ್ಮೀ ಹಯಗ್ರೀವ ಜಯಂತಿ ಉತ್ಸವವು ನಾಳೆ ಬೆಳಗ್ಗೆ ೧೧ ಘಂಟೆಗೆ ನೆರವೇರುವುದು ರಕ್ತಪತಿ ಡೋಲೆಯಲ್ಲಿ ದೇವರನ್ನು ಅಲಂಕರಿಸಿ ಇಡಲಾಗುವುದು

ಕಾಂಗ್ರೆಸ್ ಸಂಸ್ಥೆ ಬಿಟ್ಟವರು ಪುನಃ ಸೇರಲು ಮನವಿ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯಾದಂತಹ ಶ್ರೀ ಡಿ ಸೂರ್ಯನಾರಾಯಣರವರು ಪ್ರಕಟಣೆಯೊಂದನ್ನು ಹೊರಡಿಸಿ, ಮಹಾ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯಿಂದ ಹೊರಕ್ಕೆ ಹೋದವರು ಪುನಃ ಸಂಸ್ಥೆಗೆ ಸೇರಿ ಅದನ್ನು ಬಲಪಡಿಸುವಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮಾಡಿರುವ ಮನವಿಯಂತೆ ನಡೆದುಕೊಳ್ಳಬೇಕೆಂದೂ ಹಾಗೆ ಸೇರಬಯಸುವವರು ಈ ತಿಂಗಳು ೨೦ ರೊಳಗೆ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಅರ್ಜಿ ಸಲ್ಲಿಸಿದರೆ ಅವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕಳುಹಲಾಗುವುದೆಂದೂ ತಿಳಿಸಿರುತ್ತಾರೆ

ಜೂಜಾಟಕ್ಕಾಗಿ ದಂಡ

ಮೊನ್ನೆ ಸಂಜೆ ಕಾಳಮ್ಮನಗುಡಿ ಬೀದಿಯಲ್ಲಿ ಜೂಜಾಡುತ್ತಿದ್ದುದಕ್ಕಾಗಿ ರಾಜು ಮತ್ತಿತರ ೩ ಜನರಿಗೂ ಮತ್ತು ಖುನ್ನಿ ಚೌಕದಲ್ಲಿ ಜೂಜಾಡುತ್ತಿದ್ದುದಕ್ಕಾಗಿ ಅಮೀರ್ ಸಾಬಿ ಮತ್ತಿತರ ೭ ಜನರಿಗೂ ನೆನ್ನೆ ತಲಾ ೫ ರೂ. ದಂಡವನ್ನು ವಿಧಿಸಲಾಯಿತು

ತುಂಗಭದ್ರೆಯಲ್ಲಿ ಪಕ್ಷದ ಸಭೆಗೆ ಕಾಂಗ್ರೆಸ್ ಸದಸ್ಯರ ವಿರೋಧ

ಸ್ವಂ ಸು ತಂತಿ] ಬೆಂಗಳೂರು ೧೧

ತುಂಗಭದ್ರಾ ಅಣೆಕಟ್ಟಿನಲ್ಲಿ ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯನ್ನು ನಡೆಸುವುದಕ್ಕೆ ೩೦ ಜನ ಸದಸ್ಯರು ವಿರೋಧಿಸಿರುತ್ತಾರೆ ಪಕ್ಷದ ಮುಂದಿನ ಸಭೆಯನ್ನು ಬೆಂಗಳೂರಿನಲ್ಲಿ ನಡೆಸುವಂತೆ ಅವರು ಸೂಚಿಸಿರುವರು

ಸೆಪ್ಟೆಂಬರ್ ಅಂತ್ಯದವರೆಗೆ ಅಪ್ಪಾಜಿಗೌಡರ ಅಧಿಕಾರಾವಧಿ

ಲಂಚ ನಿರೋಧ ಮತ್ತು ಪಕ್ಷಕೆ ತನಿಖೆ ಇಲಾಖಾ ಡೈರೆಕ್ಟರಾದ ಶ್ರೀ ಜೆ ಅಪ್ಪಾಜಿಗೌಡರ ಅಧಿಕಾರಾವಧಿಯನ್ನು ಇದೇ ಸೆಪ್ಟೆಂಬರ್ ತಿಂಗಳು ಅಖೈರುವರೆಗೂ ಹೆಚ್ಚಿಸಲಾಗಿದೆ ಅನಂತರ ಅವರನ್ನು ಸಂಸ್ಥಾನದ ರೆವಿನ್ಯೂ ಬೋರ್ಡ್ ಅಧ್ಯಕ್ಷರಾಗಿ ನೇಮಿಸಬಹುದೆಂದು ತಿಳಿದು ಬಂದಿದೆ

ಮಿಠಾಯಿ ಅಂಗಡಿಗೆ ಬೆಂಕಿ

ಮೈಸೂರು ೧೧

ರಾಜಧಾನಿಯ ಅಶೋಕಾ ರಸ್ತೆ ಬಳಿ ಸೇಂದಿ ಅಂಗಡಿ ಹತ್ತಿರದ ಮಿಠಾಯಿ ಅಂಗಡಿಯೊಂದಕ್ಕೆ ಈ ಮಧ್ಯಾಹ್ನ ೩ ಗಂಟೆಯಲ್ಲಿ ಬೆಂಕಿ ಬಿದ್ದಿತೆಂದೂ, ಅಗ್ನಿಶಾಮಕ ದಳವು ಬರುವುದರೊಳಗೆ ಅಂಗಡಿಯವರೇ ಆರಿಸಿದರೆಂದೂ ವರದಿಯಾಗಿದೆ.

ದನ ಕುಯ್ತ ಬಗ್ಗೆ ಅಪೀಲಿನಲ್ಲಿ ೨ ರಷ್ಟು ದಂಡ

ದನ ಕುಯ್ತ ಬಗ್ಗೆ ಕಳೆದ ವರ್ಷ ನಗರದ ಖಾಸಿಂ ಮತ್ತು ಲಿಯಾಕತ್‌ರವರಿಗೆ ವಿಧಿಸಲಾಗಿದ್ದ ೧೦೦ ರೂ. ದಂಡದ ವಿರುದ್ಧವಾಗಿ ಅವರು ಡಿಸ್ಟ್ರಿಕ್ಟ್ ಕೋರ್ಟಿಗೆ ಅಪೀಲು ಮಾಡಿದ ಸಂದರ್ಭದಲ್ಲಿ ಅವರುಗಳಿಗೆ ವಿಧಿಸಲಾಗಿದ್ದ ದಂಡವನ್ನು ೨೦೦ ರೂ ಗೆ ಹೆಚ್ಚಿಸಲಾಗಿದೆ.

ಜನಮತಗಣನೆ ಇಲ್ಲದೆ ಫ್ರೆಂಚ್ ಭಾರತ ವಸಾಹತುಗಳ ವರ್ಗವಿಲ್ಲ

ಫ್ರೆಂಚ್ ರಾಷ್ಟ್ರೀಯ ಸಭೆಯಲ್ಲಿ ನೆನ್ನೆ ಸಮುದ್ರಾಂತರ ಪ್ರದೇಶಗಳ ಮಂತ್ರಿ ರಾಬರ್ಟ್ ಬ್ಯುರೋರವರು ಮಾತನಾಡಿ, ಫ್ರೆಂಚ್ ಭಾರತದ ಪ್ರಜೆಗಳ ಅಭಿಪ್ರಾಯವನ್ನು ಪಡೆಯದೆ ವಸಾಹತುಗಳನ್ನು ಬಿಟ್ಟುಕೊಡುವುದಿಲ್ಲವೆಂದು ಹೇಳಿದರು ೧೯೪೮ ಮತ್ತು ೧೯೫೦ ರಲ್ಲಿ ಫ್ರೆಂಚರು ಮಾಡಿಕೊಂಡ ಅಂತರ ರಾಷ್ಟ್ರೀಯ ಒಪ್ಪಂದಗಳ ಪ್ರಕಾರ, ಆ ಪ್ರದೇಶಗಳಲ್ಲಿ ಫ್ರೆಂಚ್ ಸರ್ಕಾರವು ಮಿಲಿಟರಿ ಬಲ ಪ್ರಯೋಗಿಸಲು ಅಧಿಕಾರ ಹೊಂದಿಲ್ಲವೆಂದೂ, ಇದು ಪೋರ್ಚುಗೀಸ್ ಭಾರತದ ಸ್ಥಿತಿಗೆ ವ್ಯತಿರಿಕ್ತವೆಂದೂ ಅವರು ತಿಳಿಸಿರುವರು

ತಿರುವಾಂಕೂರಿನಲ್ಲಿ ಪೋಲೀಸರ ಗುಂಡಿನಿಂದ ನಾಲ್ವರ ಮರಣ

ದಕ್ಷಿಣ ತಿರುವಾಂಕೂರಿನ ಮಾರ್ತಾಂಡಂ ಎಂಬಲ್ಲಿ ಉದ್ರಿಕ್ತರಾದ ಜನರ ಗುಂಪಿನ ಮೇಲೆ ಪೋಲೀಸರು ನೆನ್ನೆ ಗುಂಡು ಹಾರಿಸಿದ ಪರಿಣಾಮವಾಗಿ ಮೂವರು ಮಡಿದಿರುತ್ತಾರೆ ಕಲ್ಲೇಟು ಬಿದ್ದು ಹಲವು ಪೋಲೀಸರಿಗೆ ಗಾಯವಾಗಿದೆ ಶಸ್ತ್ರಗಳಲ್ಲಿ ಅಡಗಿಸಿ ಒಡ್ಡಿದ್ದ ಸರ್ಕಾರಿ ಬಸ್ಸುಗಳನ್ನು ಜನರು ಸುಟ್ಟರು. ತಿರುವಾಂಕೂರು ತಮಿಳು ಕಾಂಗ್ರೆಸ್ಸಿನವರು ವಿಮೋಚನಾ ದಿನವನ್ನು ನಡೆಸಿದ ಸಂಬಂಧವಾಗಿ ಅಲ್ಲೂ ಇತರ ಕಡೆಗಳಲ್ಲೂ ಗಲಭೆಗಳಾದುವು. ಟೆಲಿಫೋನು ಲೈನನ್ನು ಕತ್ತರಿಸಲಾಗಿದೆ ಬೇರೆ ಕಡೆಗಳಲ್ಲೂ ಪೀರುಮೇಡಿನಲ್ಲೂ ೯೦ ಸಾವಿರ ತೋಟದ ಕೆಲಸಗಾರರು ಕೆಲಸಕ್ಕೆ ಹೋಗಲಿಲ್ಲ ಪುತ್ತಕಾಡಿನಲ್ಲೂ ಪೋಲೀಸರು ಗುಂಡು ಹಾರಿಸಿದರು ಅಲ್ಲಿಯೂ ಒಬ್ಬನು ಮಡಿದನು

ವಿಜಯನಗರಾಚಾರ್ಯರ ಜಯಂತ್ಯುತ್ಸವದಲ್ಲಿ ಸಂಗೀತ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯ ವೇದ ಮಂದಿರದಲ್ಲಿ ಶ್ರೀ ವಿಜಯನಗರಾಚಾರ್ಯರ ಜಯಂತ್ಯುತ್ಸವವು ನಾಳೆ ನಡೆಯುವುದು ಸಂಜೆ ೬ ಗಂಟೆಗೆ ಗಾನ ವಿಶಾರದ ಚಿಟ್ಟಿ ಕೃಷ್ಣಯ್ಯಂಗಾರ್ಯರ ಸಂಗೀತವು ಪಿಟೀಲು ಎಂ. ಎಸ್ ಸುಬ್ರಹ್ಮಣ್ಯಂರವರ ಪಿಟೀಲು ಮತ್ತು ವಿ|| ಎಂ ಎಸ್ ರಾಮಯ್ಯನವರ ಮೃದಂಗ ದೊಡನೆ ಜರುಗುವುದು ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ಊರುಬತ್ತಿ ಸಮರ್ಪಣೆ

ರಾಷ್ಟ್ರಾಧ್ಯಕ್ಷರು ಆಗಮಿಸಿದ ದಿನ ಸಂಜೆ ನಗರದಲ್ಲಿ ಮೆರವಣಿಗೆ ಹೊರಟಾಗ ದೇವರಾಜ ಅರಸು ಬಳಿ ಶ್ರೀ ಸತ್ಯನಾರಾಯಣ ಕರಿಬಸವ ಕಾರ್ಖಾನೆಯವರು ಡಾ|| ರಾಜೇಂದ್ರ ಪ್ರಸಾದರಿಗೆ ಉತ್ಕೃಷ್ಟವಾದ ಊದುಬತ್ತಿ ಮತ್ತು ಗಂಧದ ಹಾರ ಮುಂತಾದುವುಗಳನ್ನು ಅರ್ಪಿಸಿದರು. ರಾಷ್ಟ್ರಾಧ್ಯಕ್ಷರು ಅದನ್ನು ಸ್ವೀಕರಿಸಿ ಸಂತೋಷವನ್ನು ಸೂಚಿಸಿದರು ಶ್ರೀಮನ್ಮಹಾರಾಜರಿಗೂ ಕಾರ್ಖಾನೆಯವರು ಅರ್ಪಿಸಿದ ಹೂವಿನ ಹಾರವನ್ನು ಅವರು ಸ್ವೀಕರಿಸಿದರು.

ಅಕ್ಟೋಬರಿನಲ್ಲಿ ಶಾಸನಸಭಾಧಿವೇಶನ

ಅಕ್ಟೋಬರ್ ತಿಂಗಳು ೨ ನೇ ವಾರದಲ್ಲಿ ಮೈಸೂರು ಶಾಸನ ಸಭಾಧಿವೇಶನವು ಸೇರಬಹುದೆಂದು ಗೊತ್ತಾಗಿದೆ

ರಾಷ್ಟ್ರೀಯ ಸಾಲಕ್ಕೆ ನಿಜಾಮರಿಂದ ೧ ಲಕ್ಷ ರೂ

ಭಾರತ ರಾಷ್ಟ್ರಾಭಿವೃದ್ಧಿ ಯೋಜನೆಗಾಗಿ ಎತ್ತಲಿರುವ ಸಾಲಕ್ಕೆ ಹೈದರಾಬಾದಿನ ನಿಜಾಮರು ೧ ಲಕ್ಷ ರೂ ಗಳನ್ನು ಕೊಟ್ಟಿರುವರೆಂದು ವರದಿಯಾಗಿದೆ

ಜಾರ್ಮು ಪ್ರದೇಶಕ್ಕೆ ಬರುವವರ ಮೇಲೆ ಗುಂಡು ಹಾರಿಸಲು ಆಜ್ಞೆ

ಜಾರ್ಮು ಪ್ರದೇಶಕ್ಕೆ ಹೋಗುವವರು ಯಾರೇ ಆಗಲಿ ಕಂಡ ಬಂದರೆ ಅವರನ್ನು ಗುಂಡಿನಿಂದ ಹೊಡೆಯುವಂತೆ ಪೋರ್ಚುಗೀಸ್ ಅಧಿಕಾರಿಗಳು ಆಜ್ಞೆ ಮಾಡಿರುವರೆಂದು ಹೇಳಲಾಗಿದೆ

ಮೂಗೂರಿನಲ್ಲಿ ರಾಘವೇಂದ್ರ ಗುರುಗಳ ಉತ್ಸವ

ಮೂಗೂರಿನ ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ೧೫, ೧೬ ಮತ್ತು ೧೭ನೇ ತಾರೀಖುಗಳಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ಗಳವರ ಉತ್ಸವವು ನಡೆಯುವುದು ಅದರ ಅಂಗವಾಗಿ ೧೫ನೇ ತಾರೀಖು ಸಂಜೆ ವಿ॥ ಬಿ [illegible] ಪದ್ಮನಾಭರಾಯರಿಂದ ಸಂಗೀತವೂ ವಿ॥ [illegible] ಸ್ವಾಮಿಗಳವರ ಶಿಷ್ಯರು [illegible] ಪುಟ್ಟಸ್ವಾಮಯ್ಯನವರ ವ್ಯಾಖ್ಯಾನ [illegible] ಹರಿಕಥೆಯೂ ೧೭ ರ ಸಂಜೆ [illegible] ಎಂ ಎಸ್ [illegible] ವಿ॥ ಎ ಎ ನರಸಿಂಹಾಚಾರ್ಯರು [illegible] ರಂಗಸ್ವಾಮಿ ಅಯ್ಯಂಗಾರರ ಪಕ್ಕವಾದ್ಯದೊಡನೆ ಏರ್ಪಾಡಾಗಿದೆ

ಸತ್ಯನಾರಾಯಣ ಪೂಜೆ ಮತ್ತು ರಾಘವೇಂದ್ರ ಸ್ವಾಮಿಗಳ ಆರಾಧನೆ

ನಗರದ ಸೋಸ್ಲೆ [illegible] ಮಠದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಎಮಟ [illegible] ರಿಂದ ೧೫ ನೇ ತಾ ವರೆಗೆ ನಡೆಯುವ ಸತ್ಯನಾರಾಯಣ ಪೂಜೆ ಮತ್ತು ರಾಘವೇಂದ್ರ ಸ್ವಾಮಿಗಳ ಆರಾಧನೆಗೆ ಭಕ್ತ ಮಹಾಶಯರು [illegible] ಸಹಾಯ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಕಾರ್ಯದರ್ಶಿ ತಿಳಿಸುವರು [illegible] ಕಾರ್ಯದರ್ಶಿ ಪ್ರಾರ್ಥಿಸಿರುತ್ತಾರೆ

ಕುಂಚಿಟಿಗರ ಸಂಘದ ರಜತ ಮಹೋತ್ಸವ

ಬರುವ ದಸರಾ ಕಾಲದಲ್ಲಿ ನಗರದ ಕುಂಚಿಟಿಗರ ಸಂಘದ ರಜತ ಮಹೋತ್ಸವವನ್ನು ನಡೆಸಲು ಆಲೋಚಿಸಲಾಗಿದೆ ಆ ಸಂದರ್ಭದಲ್ಲಿ ಪ್ರಕಟಿಸಲಾಗುವ ಸ್ಮಾರಕ ಸಂಚಿಕೆಗೆ ಕುಂಚಿಟಿಗರ ಪೂರ್ವ ಚರಿತ್ರೆ ಆಚಾರ ವಿಚಾರ ಪ್ರಸಿದ್ಧ ವ್ಯಕ್ತಿಗಳ ವಿಷಯ ಗಳ ಮತ್ತು ಸಮಾಜದ ವ್ಯಕ್ತಿಗಳ ಬಗ್ಗೆ ವಿವರಗಳನ್ನು ತಿಳಿದವರು ಅವುಗಳನ್ನು ಸಂಘಕ್ಕೆ ಈ ತಿಂಗಳ ಅಂತ್ಯದೊಳಗೆ ಕಳುಹಿಸಿಕೊಡಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ನಂಜನಗೂಡು ಕರ್ನಾಟಕ ಸಂಘ

ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ಇಲ್ಲಿನ ಭಾಷಾವಾರು ಪ್ರಾಂತದ ಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ಫಲಿತಾಂಶವು ಈ ರೀತಿ ಇದೆ ಪ್ರಬಂಧ ಸ್ಪರ್ಧೆಯಲ್ಲಿ — ಪ್ರಥಮ ಬಹುಮಾನ ಶ್ರೀ ಕೆ ಸಿ ನರಸಿಂಹ ದ್ವಿತೀಯ ⑮ ಎಸ್ ಎಸ್ ಪ್ರಭು ತೃತೀಯ ಶ್ರೀ ಸಿ ವಿ ರಾ [illegible] ಬರೆಯ ಸ್ಪರ್ಧೆಯಲ್ಲಿ — ಶ್ರೀ ಬಿ ವಿ ರತ್ನ ಪ್ರಥಮರೆಂದೂ, ಶ್ರೀ ಬಿ ಕೆ ಸೌಭಾಗ್ಯ ಎರಡನೆಯ ಬಹುಮಾನ, ವಿದ್ಯಾರ್ಥಿಗಳ ವಿಭಾಗದಲ್ಲಿ ಶ್ರೀ ಸಿದ್ದಪ್ಪ ಮತ್ತು ಪ್ರಥಮ ಮತ್ತು ಶ್ರೀ ವಿಶ್ವನಾಥಶೆಟ್ಟಿ ದ್ವಿತೀಯ ಬಹುಮಾನಗಳನ್ನು ಶ್ರೀ ಕೆ ಎಸ್ [illegible] ರವರಿಗೆ ಪ್ರಬಂಧದಲ್ಲಿ ಸಮಾಧಾನದ ಬಹುಮಾನವನ್ನೂ ಕೊಡಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಗೋಷ್ಟಿಗಾನ, ೭-೩೦ ಕರ್ನಾಟಕ ಸಂಗೀತ [illegible] ೯-೦ ದೇವರ ನಾಮ [illegible] ಕರ್ನಾಟಕ ಸಂಗೀತ [illegible] ವಾದ್ಯ ಗೋಷ್ಠಿ [illegible] ಸಂಜೆ ೫-೩೦ ಮಕ್ಕಳ ಕಾರ್ಯಕ್ರಮ [illegible] ಹಿಂದಿ ಪಾಠ [illegible] ಗಮಕ ಮತ್ತು ವಚನ ಗಾನ [illegible] ವಾರ್ತೆಗಳು [illegible] ಸುದ್ದಿಗಳು [illegible] ಕನ್ನಡ ಭಾಷಣ [illegible] ಕರ್ನಾಟಕ ಸಂಗೀತ

ಉಡುಗೊರೆಗಳು, ಗ್ರೀಸ್ ಮತ್ತು ಈ [illegible] ನಿಸ್ಸೆ ಪಡೆದ ಮಿತ್ರರು, ರಾಜಕೀಯ ಸಹಕಾರ ಮತ್ತು ವಿ ಲಿಬರಿ ಸಹಾಯ [illegible] ಬಗೆ ಒಪ್ಪಂದಕ್ಕೆ ರುಜುವಾಗಿರುತ್ತದೆ ಅದು [illegible] ರಾಜಿ ಏರ್ಪಡಿಸುತ್ತಿರುವುದು

ತಿರುವಾಂಕೂರು ಮುಖಂಡರ ಖುಲಾಸೆಗೆ ಆಜ್ಞೆ

ತಿರುವಾಂಕೂರ ತಮಿಳು ನಾಡು ಕಾಂಗ್ರೆಸ್ ಸಮಿತಿಯ [illegible] ಹೊಡಿದ್ದ ಸತ್ಯಾಗ್ರಹದ ಸಂಬಂಧದಲ್ಲಿ ದಸ್ತಗಿರಿಯಾಗಿರುವ ನೇಸಮಣಿ, ಅಬ್ದುಲ್ ರಜಾಕ್, ಚಿದಂಬರಂ ಥಾ ಣ [illegible] ಮೊದಲಾದ ಮುಖಂಡರನ್ನು ಖುಲಾಸೆ ಮಾಡಬೇಕೆಂದು ಆಜ್ಞೆ ಮಾಡಿರುತ್ತಾರೆ ಅವರು ದೇವಿಕೋಳದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಜೈಲು ವಾಸ ಮಾಡುತ್ತಿದ್ದರು

ಚೀಣಾ ಮೇಲೆ ಕೂಡಲೇ ದಂಡಯಾತ್ರೆಗೆ ಸಲಹೆ

ಚೀಣಾದ ಮೇಲೆ ತಕ್ಷಣವೇ ದಂಡಯಾತ್ರೆ ನಡೆಸಬೇಕೆಂದು ರಷ್ಯದಲ್ಲಿ ಹಿಂದೆ ಅಮೆರಿಕದ ರಾಯಭಾರಿಯಾಗಿದ್ದ ವಿಲಿಯಂ ಬುಲಿಟ ರವರು ಹೇಳಿರುತ್ತಾರೆ ಆ ಯುದ್ಧಕ್ಕೆ ಅಮೆರಿಕಾ ಸೈನ್ಯಗಳನ್ನು ಎಷ್ಟು ಅಲ್ಪ ಪ್ರಮಾಣದಲ್ಲಿ ಉಪಯೋಗಿಸಬಹುದೆಂದೂ ಕೊರಿಯಾ ಮತ್ತು ರಾಷ್ಟ್ರೀಯ ಚೀಣಾ ಸೈನಿಕರೆ ಬಹುಪಾಲು ಹೋರಾಟ ನಡೆಸಬಹುದೆಂದೂ ಅವರು ಹೇಳಿರುತ್ತಾರೆ

ನವಿಯುಕ್ತ ದೋಣಿ ಮುಳುಗಿ ೪೦ ಜನರ ಮರಣ

ಕಳೆದ ಭಾನುವಾರ ಇಂದೂರ ಬಳಿ ನವಿಯುಕ್ತ [illegible] ದೋಣಿ ಮುಳುಗಿ ೪೦ ಜನರ [illegible] ರು ಸಾವಿಗೀಡಾಗಿರುತ್ತಾರೆ ದೋಣಿ [illegible] ದೇವಸ್ಥಾನಕ್ಕೆ ಹೋಗುತ್ತಿದ್ದಿತೆಂದು ಹೇಳಲಾಗಿದೆ

"ಹಿಮಮಾನವ"ನ ಶೋಧನೆ ನೆಪದಲ್ಲಿ ಅಮೆರಿಕದವರ ಗೂಢಚರ್ಯೆ

ಹಿಮಾಲಯಾ ಪ್ರಾಂತದಲ್ಲಿ ಹಿಮ ಮಾನವನನ್ನು ಹುಡುಕುವ ನೆಪದಲ್ಲಿ ಅಮೆರಿಕಾ ಮತ್ತು ಇತರ ದೇಶಗಳ ಸಾಹಸಿಗಳು ಪಡೆಗಳು ಭಾರತ ಟಿಬೆಟ್ ಗಡಿಗಳಲ್ಲಿ ಗೂಢಚರ್ಯೆ ನಡೆಸುತ್ತಿರುವರೆಂದು ರಷ್ಯದ ರೆಡ್ ಸ್ಟಾರ್ ಪತ್ರಿಕೆ ಪ್ರಸ್ತಾಪವನ್ನು ಆಪಾದನೆ ಮಾಡಿದೆ

ಸೆಂಟ್ ಫಿಲೋಮಿನಾ ಕಾಲೇಜು ಉಪಾಧ್ಯಾಯರ ಸಂಘದ ಆರಂಭೋತ್ಸವ

ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ॥ ಎ ಎಲ್ ಡಿಸೋಜರವರ ಉದ್ಘಾಟನೆ ಸೆಂಟ್ ಫಿಲೋಮಿನಾ ಕಾಲೇಜು ಉಪಾಧ್ಯಾಯರ ಸಂಘದ ಆರಂಭೋತ್ಸವವನ್ನು ನೆರವೇರಿಸಿದರು ಆ ಸಂದರ್ಭದಲ್ಲಿ ಮಾತನಾಡುತ್ತಾ ಉಪಾಧ್ಯಾಯರ ಕುಂದುಕೊರತೆಗಳನ್ನು ನಿವಾರಿಸಲು ತಾವು ಪ್ರಯತ್ನಿಸುವುದಾಗಿಯೂ ಮತ್ತು ಉಪಾಧ್ಯಾಯರು ಉನ್ನತ ಧ್ಯೇಯಗಳಿಂದ ಕೂಡಿ ವಿಶ್ವವಿದ್ಯಾಲಯದ ಶಿಕ್ಷಣ ಮಟ್ಟವನ್ನು ಕಾಪಾಡಿಕೊಂಡು ಬರಬೇಕೆಂದೂ ಅವರು ತಿಳಿಸಿದರು ಪ್ರಿನ್ಸಿಪಾಲರಾದ ರೆ॥ ಆಡಿಯೋರವರು ಅಧ್ಯಕ್ಷತೆಯನ್ನು ವಹಿಸಿದ್ದರು ಸಂಘದ ಅಧ್ಯಕ್ಷರಾದ ಪ್ರೊ॥ ವೆಂಕಟಸುಬ್ಬಯ್ಯನವರು ಸ್ವಾಗತ ಭಾಷಣ ಮಾಡಿದರು

ಕ್ರೀಡಾ ಕೇಂದ್ರದ ಆರಂಭ

ರಾಜಧಾನಿಯ ಜಯನಗರದಲ್ಲಿರುವ ಶಿಶು ಸಾಹಿತ್ಯ ಸಂಘದ ಆಶ್ರಯದಲ್ಲಿ ಇದೇ ೧೫ ನೇ ತಾ॥ ಬೆಳಿಗ್ಗೆ ೮ ಘಂಟೆಗೆ ಮಕ್ಕಳಿಗಾಗಿಯೇ ಸ್ಥಾಪಿಸಲಾಗುವ ಕ್ರೀಡಾ ಕೇಂದ್ರವೊಂದನ್ನು ತೆರೆಯಲಾಗುವುದು ಡಾ॥ ಬಿ ಆ ರಾಜ್‌ರವರು ಅಧ್ಯಕ್ಷತೆ ವಹಿಸುವರು ಸುತ್ತಮುತ್ತಲ ನಿವಾಸಿಗಳೆಲ್ಲರೂ ತಮ್ಮ ಮಕ್ಕಳನ್ನು ಕಳುಹಿಸಿ ಸಹಕರಿಸಬೇಕೆಂದು ಕೋರಲಾಗಿದೆ

ಜೈ ಹಿಂದ್ ಕ್ರಿಕೆಟ್ ಕ್ಲಬ್ ವಾರ್ಷಿಕೋತ್ಸವ

ರಾಜಧಾನಿಯ ಜೈ ಹಿಂದ್ ಕ್ರಿಕೆಟ್ ಸಂಘದವರು ಇದೇ ಭಾನುವಾರ ೧೫ನೇ ತಾ॥ ಸಂಜೆ ೫ ಗಂಟೆಗೆ ೪ ಬನುಮಯ್ಯನವರ ಪ್ರೌಢ ಶಾಲೆಯಲ್ಲಿ ಸಂಘದ ವಾರ್ಷಿಕೋತ್ಸವವನ್ನೂ ಮತ್ತು ಸ್ವಾತಂತ್ರ್ಯ ದಿನಾಚರಣೆಯನ್ನೂ ನೆರವೇರಿಸುವರು ಪೌರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅಧ್ಯಕ್ಷತೆಯನ್ನು ವಹಿಸುವರು

ಉಪಾಕರ್ಮ

ಮೈಸೂರು ೧೧

ಶ್ರೀ ನರಸಿಂಹರಾಜರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಕೆಳಗೆ ಕಂಡಂತೆ ಉಪಾಕರ್ಮದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ —

ನಾಳೆ ಬೆಳಿಗ್ಗೆ ೮ ಘಂಟೆ [illegible] ಋಗುಪಾಕರ್ಮ ಸ್ವೀಕಾರಗಳು ವಿ॥ ಶ್ರೀ॥ ವಿ ವೆಂಕಟಕೃಷ್ಣಭಟ್ಟರಿಂದ ಹೃಷ್ಣರವರಿಗೆ ಬ್ರ॥ ಶ್ರೀ॥ ಟಿ ಕೃಷ್ಣವಧಾನಿಶಾಸ್ತ್ರಿಗಳಿಂದ

೮ ಘಂಟೆಗೆ ಕೃಷ್ಣ ಯಜುರ್ವೇದ ಉಪಾಕರ್ಮ ಬ್ರ॥ ಶ್ರೀ ಬಿ ಕೃಷ್ಣಮಾಚಾರ್ಯರಿಂದ ಯಜುಃ ಉಪಾಕರ್ಮ [illegible] ಬ್ರ॥ ಶ್ರೀ॥ ಕೃಷ್ಣಘನ ಪಾಠಿಗಳಿಂದ, ವೃಷ್ಣರನ್ನು ಬ್ರ॥ ಶ್ರೀ॥ ಕೆ ನಾಗರಾಜಾಚಾರ್ಯರಿಂದ

೧೦ ಘಂಟೆಗೆ ಬೋಧಾಯನೋಪಾಕರ್ಮ ೧೧ ಘಂಟೆಗೆ ಶ್ರೀವೈಷ್ಣವರಿಗೆ ಯಜುರುಪಾಕರ್ಮ ಶ್ರೀ ಎನ್ ಅನಂತಾಚಾರ್ಯರಿಂದ

ರಾಮಾನುಜ ರಸ್ತೆಯ ೬೫ನೇ ನಂ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಬೆಳಿಗ್ಗೆ ಋಜು [illegible] ನವಿ [illegible] ವು ನಡೆಯುವುದು

ಅಭಿನವ ರಂಗನಾಥ [illegible] ದಲ್ಲಿ [illegible] ಬೆಳಿಗ್ಗೆ ೫ ಘಂಟೆಗೆ ಬ್ರ॥ ಶ್ರೀ ತಿರುನಾ [illegible] ದೀಕ್ಷಿತರ [illegible] ಶ್ರೀ ವಿಶ್ವೇಶ್ವರ ದೀಕ್ಷಿತರು [illegible] ಶ್ರೀ ರಂಗನಾಥ ಭಟ್ಟರ [illegible] ರು ಉಪಾಕರ್ಮವನ್ನು ನಡೆಸುವರು

ರಾಘವೇಂದ್ರ ಸ್ವಾಮಿಗಳವರ ಆರಾಧನೆ

ರಾಜಧಾನಿಯ [illegible] ಯ ನಗರ ಬಳಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಇದೇ ೧೫, ೧೬ ಮತ್ತು ೧೭ ನೇ ತಾರೀಕ [illegible] ಸ್ವಾಮಿಗಳವರ ಆರಾಧನೆಯು ಜರುಗುವುದು ೧೭ ನೇ ತಾರೀಕ ಬೆಳಿಗ್ಗೆ ರಥ [illegible] ನಡೆಯುವುದು

ರಾಮಾನುಜಾ ರಸ್ತೆಯಲ್ಲಿರುವ ೬೫ ನೇ ನಂಬರ ಮನೆಯಲ್ಲಿ ವೇ॥ ಬ್ರಹ್ಮ ಶ್ರೀ ಕಡೂರು ವೆಂಕಟರಾವ ಶಾಸ್ತ್ರಿಗಳವರು ೧೫, ೧೬ ಮತ್ತು ೧೭ ನೇ ತಾ॥ ಗಳಲ್ಲಿ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನೆಯನ್ನು ನಡೆಸುವರು ೧೮ನೇ ತಾರೀಕು ಸತ್ಯನಾರಾಯಣ ವ್ರತವನ್ನು ನೆರವೇರಿಸುವರು

"ಧರ್ಮವೀರ" ವಾರ ಪತ್ರಿಕೆ

ಬೆಂಗಳೂರಿನ ಶ್ರೀ ರಾಮಕೃಷ್ಣ [illegible] ಧರ್ಮವೀರ ಎಂಬ ಕನ್ನಡ ರಾಜಕೀಯ ವಾರ ಪತ್ರಿಕೆಯ [illegible] ರು ಪ್ರಕಾಶಕ ಮತ್ತು ಮುದ್ರಕರಾಗಿ ಡಿಕ್ಲೇರ್ ಮಾಡಿರುತ್ತಾರೆ

ಅಮರನಾಥದಿಂದ ಮೈಸೂರು ಯಾತ್ರಿಕರು ವಾಪಸು

ಅಮರನಾಥಕ್ಕೆ ತೆರಳಿದ್ದ ಮೈಸೂರಿನ ತಂಡದ ನೇತಾರರಾದ ಶ್ರೀ ಆರ್ ರಂಗಪ್ಪ, ಶ್ರೀ ಸಿ ನಂಜಪ್ಪ ಮತ್ತು ಇತರರು ಯಾತ್ರೆ ಮುಗಿಸಿ ವಾಪಸು ಹೊರಟು ಶೀಘ್ರದಲ್ಲೇ ನಗರಕ್ಕೆ ಬರಲಿರುತ್ತಾರೆ

ಪ್ರಜಾ ಸಮಾಜವಾದಿ ಪಕ್ಷದ ಕಛೇರಿ

ಮೈಸೂರು ಜಿಲ್ಲಾ ಪ್ರಜಾ ಸಮಾಜವಾದಿ ಪಕ್ಷದ ಕಛೇರಿಯನ್ನು ಶ್ರೀರಾಮಪೇಟೆಯಲ್ಲಿರುವ ಈಶ್ವರಿ [illegible] ಬಿಲ್ಡಿಂಗ್ ಮಹಡಿಗೆ ವರ್ಗಾಯಿಸಲಾಗಿದೆ

ಒಲಂಪಿಯಾ ಟಾಕೀಸ್

12 8-54 ರಿಂದ ಅನೇಕಾಭ 2 ನೇ ವಾರ

ನರ್ಗೀಸ್ ರಾಜ್‌ಕಪೂರ್ ವಿಜಯಲಕ್ಷ್ಮಿ ಪಾತ್ರವಹಿಸಿರುವ ಆರ್ ಕೆ ಫಿಲಂಸ್‌ರವರ

★ ಆಹ್ : AAH ★

ಚಾಮುಂಡೇಶ್ವರಿ ಟಾಕೀಸ್

12 8 54 ರಿಂದ ಅನೇಕಾಭ 5 ನೇ ವಾರ

ಪ್ರತಿ ದಿನ ಮೂರು ಆಟಗಳು

ಎ ವಿ ಎಂ ರವರ ತಮಿಳು ಚಿತ್ರ ಪೆಣ್

ಪಾತ್ರ - ವೈಜಯಂತಿಮಾಲಾ ಜೆಮಿನಿ ಗಣೇಶನ್ ಅಂಜಲಿದೇವಿ, ಎಸ್ ಬಾಲಯ್ಯ, [illegible]

ಎಲಿಮೆಂಟ್ಸ್ ಅಂಡ್ ಆಟಮ್ಸ್ ಇನ್ ಗ್ರೀಕ್ ಅಂಡ್ ಇಂಡಿಯನ್ ಥಾಟ್

ರಾಜಧಾನಿಯ ಚಾಮರಾಜ ರಸ್ತೆಯಲ್ಲಿರುವ ಮಿಯೋ ಫಾರ್ಮಸಿಯ ಡಾ॥ ಎ ಎನ್ ಕೃಷ್ಣಶಾಸ್ತ್ರಿಯವರ ರಚಿಸಿ, ಪ್ರಕಟಿಸಿರುವ ಮೇಲ್ಕಂಡ ಹೆಸರಿನ ಪುಸ್ತಕವು ನಮ್ಮ ಕೈ ಸೇರಿದೆ ಆಧುನಿಕ ಭೌತಶಾಸ್ತ್ರ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿಜ್ಞಾನದಲ್ಲಿ ವಸ್ತು ಕಣ ಮತ್ತು ಅಣುಗಳ [illegible] ವಿವರಿಸಲಾಗಿದೆ

ಆಧುನಿಕ ಭೌತ ಶಾಸ್ತ್ರಿಗಳು ವಿಜ್ಞಾನದ ಗ್ರೀಸ್ ಮತ್ತು ಭಾರತೀಯ ಅಥವಾ ಪೌರ್ವಾತ್ಯ ವಿಜ್ಞಾನಕ್ಕಿಂತ ಬೇರೆಯದಲ್ಲ ಪೌರ್ವಾತ್ಯರು ಗ್ರಂಥ ರೂಪದಲ್ಲಿ ರಚಿಸಿಲ್ಲವಾದ್ದರಿಂದ ಆದಕ್ಕಿಂತಲೂ ಪಾಶ್ಚಿಮಾತ್ಯ ವಿಜ್ಞಾನವು ಇತ್ತೀಚಿನದಾದರೂ ಬಹು ಬೇಗ ಬೆಳೆದು ಬಂದಿತು ಆಧುನಿಕ ವಿಜ್ಞಾನವೆಲ್ಲ ಪೌರ್ವಾತ್ಯ ವಿಜ್ಞಾನವನ್ನೇ ತನ್ನ ಮೂಲವಾಗಿ ಹೊಂದಿದೆ ಪಾಶ್ಚಿಮಾತ್ಯರ ಪ್ರತಿಭಾ ಶಕ್ತಿ ಹೆಚ್ಚು ವಸ್ತುಗಳಲ್ಲಿ ಪ್ರಕೃತಿಯೊಂದು ವಸ್ತುವೂ ಅಣುವನ್ನು ಹೊಂದಿದೆ ಆದರೆ ಪೌರ್ವಾತ್ಯರಾದ ಡೆಮೊಕ್ರಿಟಸ್, ಅನಕ್ಸಗೋರಸ್ ಮುಂತಾದವರ ಪ್ರಕಾರ ಭೂಮಿ ವಾಯು ನೀರು ಮತ್ತು ಬೆಂಕಿ ಎಂಬ ನಾಲ್ಕು ವಸ್ತುಗಳ ಮಾತ್ರ ಇದ್ದು ಇವುಗಳು [illegible] ವು [illegible] ಗಿಸಲ್ಪಟ್ಟ ಅಣು [illegible] ಮಾತ್ರ ಇವೆಯಲ್ಲದೆ ಇನ್ನು ಒಂದು ನಿಯಮವಾದ ಆಕಾಶವು ಇರುವುದು

ಭಾರತೀಯರ ಪ್ರಕಾರ ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶ ಎಂಬ ಐದು ವಸ್ತುಗಳು ಇವೆ ಇವು ಅತಿ ಸಣ್ಣದಾಗಿ ವಿಭಾಗಿಸಲ್ಪಟ್ಟ ಅಣು ರೂಪವನ್ನು ಹೊಂದಿವೆ ಪೃಥ್ವಿಯ ಅಣುವು ಹಳದಿ ಬಣ್ಣದಿಂದಲೂ, ನೀರಿನ ಅಣುವು ಬಿಳಿಯ ಬಣ್ಣದಿಂದಲೂ, ಅಗ್ನಿಯ ಅಣುವು ಕೆಂಪು ಬಣ್ಣದಿಂದಲೂ, ವಾಯುವಿನ ಅಣುವು ಪ್ರಕಾಶರಹಿತವಾದ ಕಪ್ಪು ಬಣ್ಣದಿಂದಲೂ, ಆಕಾಶದ ಅಣುವು ಹೊಗೆಯ ಬಣ್ಣದಿಂದಲೂ ಕೂಡಿರುತ್ತವೆ.

ಈ ಮೇಲಿನ ವಿಷಯಗಳಲ್ಲದೆ ವಸ್ತು ಮತ್ತು ಶಕ್ತಿಯ ಗುಣಗಳನ್ನೂ, ವಸ್ತುಗಳನ್ನು ನಾಶ ಮಾಡಲು ವಸ್ತು ಶಕ್ತಿ ರೂಪಕ್ಕೆ ಬದಲಿಸಲು ಸಾಧ್ಯವೇ ಎಂಬ ವಿಚಾರಗಳನ್ನೂ, ಭೌತಶಾಸ್ತ್ರದ ವಿಷಯ ವನ್ನೂ ಈ ಪುಸ್ತಕದಲ್ಲಿ ವಿವರಿಸಿದೆ ವೈಜ್ಞಾನಿಕ ಸಂಶೋಧನೆಯಲ್ಲಿ ಆಸಕ್ತಿಯುಳ್ಳವರೆಲ್ಲರೂ ಅಗತ್ಯವಾಗಿ ಓದಬೇಕಾದ ಪುಸ್ತಕ ಇದು ಇದರ ಬೆಲೆ ರೂ ೩-೮-೦

ಮೈಸೂರು ಪೇಟೆ ಧಾರಣೆ

[illegible]	ರೂ ಆಣೆ	ರೂ ೧
ಕಡಲೆಕಾಯಿ	೩ ೦ ೦	೧೯ ೧೦ ೦
ಎಳ್ಳು	೩೧ ೦ ೦	೩೩ ೪ ೦
ಹುರುಳಿ	೨೩ ೧೦ ೦	೨೬ ೧೦ ೦
ಹೆಸರು	೩೬ ೦ ೦	೪೦ ೧೦ ೦
ಕಡಲೆಬೇಳೆ	೩೨ ೧೨ ೦	೪೦ ೩ ೦
ಉದ್ದು	೪೧ ೦ ೦	೪೮ ೦ ೦
ಕಡಲೆ	೪೧ ೧೦ ೦	
ಅವರೆ	೩೧ ೧೦ ೦	
ಕುಸುಬೆ	೧೦ ೧೦ ೦	
ತಂಗಿನಕಾಯಿ ೧೦೦೦ಕ್ಕೆ	೧೦೦ ೬೦ ೦	೨೨೦ ೦ ೦

SRI GAYATHRI TALKIES

Daily 3 Shows

On 12th August 54

Warner's

Stop You're Killing Me

(In Warner Color)

With Broderick Crawford

Claire Trevor

On 13th & 14th August 54

MGMS

LILI

(In Technicolor)

With Leslie Caron Mel Ferrer

Edited, Printed and Published by A R Nagarajan at Sadhvi Press 13 Subbiah Road Mysore

ರಿಜಿಸ್ಟರ್ ನಂ 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI FRIDAY 13-8-1954 ಮೈಸೂರು ಶುಕ್ರವಾರ ೧೩-೮-೧೯೫೪ [ಸಂಚಿಕೆ : ೧೨

ಫ್ರೆಂಚ್ ಸ್ವಾಸ್ಥ್ಯಗಳ ವರ್ಗಾವಣೆ ಸೂತ್ರದ ಬಗ್ಗೆ ಒಪ್ಪಿಗೆ

ಉಪಾಕರ್ಮ

ಮೈಸೂರು ೧೩

ನಾಳೆ ಬೆಳಗ್ಗೆ ೭-೩೦ ಘಂಟೆಗೆ ಸಾಧ್ವಿ ಪತ್ರಿಕಾಲಯದಲ್ಲಿ ವೇದರತ್ನಂ ಕಟ್ಟೆಪ ಕಲವಾಡಿ ವೆಂಕಟರಾಮಾವಧಾನಿಗಳ ನೇತೃತ್ವದಲ್ಲಿ ಯಜುರುಪಾಕರ್ಮವು ಜರುಗುವುದು

ನಾಳೆ ಬೆಳಗ್ಗೆ ೯ ಗಂಟೆಗೆ ಕೃಷ್ಣರಾಜ ಮೊಹಲ್ಲಾ ಹಳೇ ಬಂಡಿಕೇರಿಯ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಋಗ್ಯಜುರ್ವೇದಿಗಳಿಗೆ ಉಪಾಕರ್ಮವು ಏರ್ಪಾಡಾಗಿದೆ.

ಕೊತ್ವಾಲ್ ರಾಮಯ್ಯನ ಬೀದಿ ೧೯೫೨ ನೇ ನಂ (ಶ್ರೀ ವಿ ಸ ಮತ್ತಿಂದ್ರ ರಾಯರವರ)ದ ಮನೆಯಲ್ಲಿ ನಾಳೆ ಬೆಳಗ್ಗೆ ೫ ರಿಂದ ೬-೩೦ ರ ವರೆವಿಗೆ ವೇ|| ನರಸಿಂಹಾಚಾರ್ಯರವರಿಂದ ಋಗ್ವೇದ ವ ತ್ತು ಯಜುರ್ವೇದಿಗಳ ಉಪಾಕರ್ಮಗಳನ್ನು ಏರ್ಪಡಿಸಿರುತ್ತೆ

ನಾಳೆ ಬೆಳಗ್ಗೆ ೯|| ಗಂಟೆಗೆ ಶ್ರೀರಾಂಪೇಟೆ ನಲ್ಲಪ್ಪನ ರಂಗನ ಬಳಿಯಿರುವ ಶ್ರೀರಾಮಮಂದಿರದಲ್ಲಿ ಋಗ್ವೇದಿಗಳಿಗೂ ರಾಮ ಮಂದಿರದ ಹತ್ತಿರ ಇರುವ ಶ್ರೀ ವೆಂಕಟಕೃಷ್ಣಯ್ಯನವರ ಗೃಹದಲ್ಲಿ ಯಜುರ್ವೇದಿಗಳಿಗೂ ಉಪಾಕರ್ಮದ ಏರ್ಪಾಡು ಮಾಡಲಾಗಿದೆ

ದೇವರಿಗೆ ಅಲಂಕಾರ

ರಾಜಧಾನಿಯ ಕೋಟೆಯೊಳಗಿರುವ ಶ್ರೀ ಕೋಡಿ ಸೋಮೇಶ್ವರ ಸ್ವಾಮಿ (ನವಗ್ರಹ) ದೇವಸ್ಥಾನದಲ್ಲಿ ಈ ದಿನ ಆದಿ ಶುಕ್ರವಾರದ ಪ್ರಯುಕ್ತ ಅಮ್ಮನವರಿಗೆ ಗಜಲಕ್ಷ್ಮೀ ಅಲಂಕಾರವೂ, ನಾಳೆ ಶ್ರಾವಣ ಶನಿವಾರದ ಪ್ರಯುಕ್ತ ನಾರಾಯಣ ಸ್ವಾಮಿಯವರಿಗೆ 'ಅಹಲ್ಯಾ ಶಾಪ ವಿಮೋಚನ ರಾಮ' ನ ಅಲಂಕಾರವೂ ಹಾಕಲ್ಪಡುತ್ತವೆ

ಸೈಕಲ್ ಕಳುವು ಮಾಡುತ್ತಿದ್ದವರಿಗೆ ಶಿಕ್ಷೆ

ಸೈಕಲ್ಲುಗಳನ್ನು ಕಳವು ಮಾಡಿ ಮಾರುತ್ತಿದ್ದರೆಂದು ವಜೀರ್ ಉರುಫ್ ಮಹಮದ್, ಪೀರ್ ಮತ್ತು ಸಾಬೂಲಾಲ್ ಉರುಫ್ ಅಬ್ದುಲ್ ಗಫಾರ್ ಎಂಬುವರ ಮೇಲೆ ಮಂಡಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು, ಅಪರಾಧಿಗಳಿಗೆ ತಲಾ ೧|| ವರ್ಷ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ ಮತ್ತು ಅವರುಗಳು ಒಂದು ವರ್ಷ ಕಾಲ ಪ್ರತಿ ದಿನ ತಮ್ಮ ವಾಸಸ್ಥಾನವನ್ನು ಪೊಲೀಸಿಂಗೆ ತಿಳಿಸಬೇಕೆಂದು ಆಜ್ಞೆ ಮಾಡಿರುತ್ತಾರೆ

ಕೃಷ್ಣಮೂರ್ತಿಪುರದಲ್ಲಿ ರಾಘವೇಂದ್ರ ಸ್ವಾಮಿಗಳವರ ಆರಾಧನೆ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಅಭಿನವ ಮಂತ್ರಾಲಯದಲ್ಲಿ [illegible], ಸೋಮವಾರ ಮತ್ತು ಮಂಗಳವಾರಗಳಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವವು ಜರುಗುವುದು ೧೫ ನೇ ತಾ|| ಸಂಜೆ ಭಜನೆ, ೧೬ ನೇ ತಾ|| ಸಂಜೆ ವಿದ್ವಾಂಸರಿಂದ ಉಪನ್ಯಾಸ ಮತ್ತು ಪಲ್ಲಕ್ಕಿ ಉತ್ಸವ ೧೭ ನೇ ತಾ|| ಬೆಳಗ್ಗೆ ಧರ್ಮೋಪದೇಶ ಸಂಜೆ ಹರಿಕಥೆ ಮುಂತಾದ ಕಾರ್ಯಕ್ರಮಗಳಿವೆ ಭಕ್ತರು ಧನಧಾನ್ಯವನ್ನು ಸಹಾಯ ಮಾಡುವಂತೆ ಕೋರಲಾಗಿದೆ

ಎಸ್. ಎಂ ಮರಿಯಪ್ಪನವರ ರಿಟ್ ಅರ್ಜಿ ವಜಾ

ಪೆರಿಯಾಪಟ್ಟಣ ಚಾಲ್ಲೂಕಿನ ಚುನಾವಣೆ ಪ್ರತಿಧ್ವನಿ

ಬೆಂಗಳೂರು ೧೩

[illegible] ಪೆರಿಯಾಪಟ್ಟಣ ತಾಲ್ಲೂಕಿನಿಂದ ನಡೆದ ಚುನಾವಣೆಗಳನ್ನು [illegible] ನ್ಯಾಯ ಮಂಡಳಿಯ [illegible] ರದ್ದುಗೊಳಿಸಿದ ಸಂಬಂಧವಾಗಿ ಅಲ್ಲಿನ ಸದಸ್ಯರಾಗಿದ್ದ ಶ್ರೀ ಎಸ್ ಎಂ ಮರಿಯಪ್ಪನವರು ಹೈಕೋರ್ಟಿಗೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ. ನ್ಯಾಯ ಮಂಡಳಿಯವರು ಶ್ರೀ ಮರಿಯಪ್ಪನವರ ಚುನಾವಣೆಯನ್ನು ರದ್ದುಗೊಳಿಸಿದ್ದರಲ್ಲದೆ ೬ ವರ್ಷ ಕಾಲ ಅವರು ಚುನಾವಣೆಗೆ ನಿಲ್ಲಲು ಅನರ್ಹರೆಂದು ಘೋಷಿಸಿದ್ದರು

ಶ್ರೀಮನ್ ನ್ಯಾಯಾಧೀಶ ಶ್ರೀ [illegible] ಮತ್ತು ಶ್ರೀ ಟಿ ಎನ್ ಮಲ್ಲಪ್ಪನವರು ತಮ್ಮ [illegible] ಚುನಾವಣಾ ಸಭಾಸದರುಗಳು ಮತ್ತು ಪ್ರಾದೇಶಿಕ ಸಭಾಸದರ ಹುದ್ದೆಗಳ ಅಧಿಕಾರದ ಅವಧಿಯನ್ನು, ಹುದ್ದೆಗೆ ಸಂಬಂಧಿಸಿದ ಷರತ್ತುಗಳನ್ನು ರಾಷ್ಟ್ರಾಧ್ಯಕ್ಷರು ಗೊತ್ತುಪಡಿಸುವುದಾಗಿದೆ, ಆದರೆ ಈ ಸಾಮಾನ್ಯ ನ್ಯಾಯ ಮಂಡಳಿಗಳ ಅಧಿಕಾರದ ಅವಧಿಯನ್ನು ಗೊತ್ತುಪಡಿಸುವ ಬಗ್ಗೆ ಅಂತಹ ಯಾವ ನಿಬಂಧನೆಗಳೂ ಇಲ್ಲವೆಂದೂ, ಆದು ಚುನಾವಣಾ ಕಮಿಷನ್ನಿನ ವ್ಯಾಪ್ತಿಗೆ ಸೇರಿರುವುದಾಗಿಯೂ ತಿಳಿಸಿರುತ್ತಾರೆ

ಈ ಚುನಾವಣೆ ಪ್ರಸಂಗದಲ್ಲಿ ಶ್ರೀ ಎಸ್ ಎಂ ಮರಿಯಪ್ಪನವರು ಶ್ರೀ ಕೆ ಎಂ [illegible] ನವರ ವಿರುದ್ಧವಾಗಿ ಸ್ಪರ್ಧಿಸಿ ಜಯಗಳಿಸಿದ್ದರು

ರಾಷ್ಟ್ರಾಧ್ಯಕ್ಷರಿಂದ ಧರ್ಮ ಶಾಲಾ ಶಂಕು ಸ್ಥಾಪನೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನಾಳೆ ಬೆಳಗ್ಗೆ ೧೦-೩೫ ಗಂಟೆಗೆ ಚನ್ನಪಟ್ಟಣ ತಾಲ್ಲೂಕು ಶ್ರೀ ಕೆಂಗಲ್ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಬೋರಮ್ಮ ಬಸವಯ್ಯನವರ ಹೆಸರಿನಲ್ಲಿ ಕಟ್ಟಿಸಲಿರುವ ಧರ್ಮಶಾಲೆಯ ಅಸ್ತಿಭಾರ ಶಿಲಾ ಸ್ಥಾಪನೆಯನ್ನು ನೆರವೇರಿಸುವರು

ಟಿಬೆಟ್ಟಿನ ಪ್ರವಾಹದಿಂದ ಅರಮನೆ ಕುಸಿದು ೭೦೦ ಮರಣ

ಟಿಬೆಟ್ಟಿನ [illegible] ನದಿ ಧಡದಲ್ಲಿರುವ ಹಿಗಟ್ಸೆಯ ಪಂಚೆನ್ ಲಾಮಾರವರ ಅರಮನೆಯು ಪ್ರವಾಹದಿಂದ ಕುಸಿದುಬಿದ್ದು ೨೦೦ ಜನರು ಸಜೀವ ಸಮಾಧಿಯಾದರೆಂದೂ, [illegible] ಬ್ಯಾರಕ್ಕಿನ ಒಳಗೆ ೫೦೦ ಸೈನಿಕರು ಕೊಚ್ಚಿಹೋದರೆಂದೂ ವರದಿಯಾಗಿದೆ.

ಜೂಜಾಟಕ್ಕಾಗಿ ದಂಡ

ಲಷ್ಕರ್ ಮೊಹಲ್ಲಾದ ಮೊಹಿಯುದ್ದೀನ್ ಮತ್ತು ಇತರ ನಾಲ್ಕುಜನ ಮೊನ್ನೆ ರಾತ್ರಿ ಜೂಜಾಡುತ್ತಿದ್ದುದಕ್ಕಾಗಿ ಅವರುಗಳಿಗೆ ತಲಾ ೧೫ ರೂ ದಂಡವನ್ನು ವಿಧಿಸಲಾಯಿತು

ನೆನ್ನೆ ರಾತ್ರಿ ಓಬಯ್ಯ ಮತ್ತು ಮೂವರು ಇತರರೂ ಈ ದಿನ ಬೆಳಗ್ಗೆ ಪುಟ್ಟಸ್ವಾಮಿ ಮತ್ತು ಗೋವಿಂದರಾಜುರವರೂ ನ್ಯೂಯಾರ್ಕ್ ಹತ್ತಿರದ ಮೇಲೆ ಜೂಜಾಡುತ್ತಿದ್ದುದನ್ನ ದೇವರಾಜ ಪೊಲೀಸರು ಪತ್ತೆ ಹಚ್ಚಿ ಮೊಕದ್ದಮೆ ಹೂಡಿರುವರಲ್ಲದೆ ಅವರುಗಳಿಂದ ರೂ ೫-೧೨-೬ ಮತ್ತು ರೂ ೬೬೦ ಅನ್ನು ವಶಪಡಿಸಿಕೊಂಡಿರುವರು

ರಾಷ್ಟ್ರಾಧ್ಯಕ್ಷರೊಡನೆ ಪಾರ್ಲಿಮೆಂಟ್ ಸದಸ್ಯರ ಭೇಟಿ

ಮೈಸೂರು ೧೩

ರಾಷ್ಟ್ರಾಧ್ಯಕ್ಷರ ದೇಹಸ್ಥಿತಿಯು ಉತ್ತಮಗೊಂಡು ಅವರು ತಮ್ಮ ಕಾರ್ಯಕ್ರಮಗಳೆಲ್ಲವನ್ನೂ ಪೂರೈಸಲಿರುವರು ಅವರಿಗೆ ತಲೆ ನೋವು ಮತ್ತು ಸ್ವಲ್ಪ ಮಟ್ಟಿಗೆ ಜ್ವರವಿದ್ದ ಕಾರಣ ಉದ್ವೇಗವೂ ಉಂಟಾಗಿತ್ತು

ಮೈಸೂರಿನ ಪಾರ್ಲಿಮೆಂಟ್ ಸದಸ್ಯರುಗಳಾದ ಶ್ರೀಗಳು ಎನ್ ರಾಚಯ್ಯ, ಕೆ ಚ ವಡೆಯರ್, ಹೆಚ್ ಸಿದ್ದನಂಜಪ್ಪ, ಬಿ ಪಿ ಒಡೆಯರ್ ಮತ್ತು ಕೊಡಗಿನ ಶ್ರೀ ಎನ್ ಸೋಮಣ್ಣನವರು ಈ ದಿನ ಬೆಳಗ್ಗೆ ೧೧-೪೫ ರಲ್ಲಿ ರಾಷ್ಟ್ರಾಧ್ಯಕ್ಷರನ್ನು ಭೇಟಿ ಮಾಡಿ ಕುಶಲ ಸಂಭಾಷಣೆ ನಡೆಸಿದರು

ಅಂಗಡಿ ಬೀಗ ಒಡೆದು ಕಳುವು ಮಾಡಿದ್ದಕ್ಕೆ ಶಿಕ್ಷೆ

ರಾಜಧಾನಿಯ ಮೋತೀಲಾಲ್ ಟಾಕೀಸ್ ಬಳಿ ಇರುವ ಅರ್ಮದ ಅಂಗಡಿಯೊಂದರ ಬೀಗ ಒಡೆದ ಹಮಾರು ೩೬೦ ರೂ ಗಳ ಮಾಲನ್ನು ಅಪಹರಿಸಿದನೆಂದು ವೆಂಕಟ್ರಮಣ ಎಂಬುವನ ಮೇಲೆ ಮಂಡಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು, ಅವನಿಗೆ ೪ ತಿಂಗಳ ಕಠಿಣ ಸಜವನ್ನು ವಿಧಿಸಿರುತ್ತಾರೆ

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾವ ಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ವರಮಹಾಲಕ್ಷ್ಮಿ ವ್ರತದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ವಿದ್ವಾನ್ ಕೃಷ್ಣಯ್ಯಂಗಾರ್ಯರಿಂದ ಶ್ರೀಮತಿ ಪರಿಣಯ ಎಂಬ ಹರಿಕಥೆಯೂ, ನಾಳೆ ಸಂಜೆ ೫ ಗಂಟೆಗೆ ವೇ|| ಬ್ರ|| ಶ್ರೀ ಅರುಕವಿ ರತ್ನಂ ಧಾರಿ ಮತ್ತು ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳವರಿಂದ ರಾಮಾಯಣ ಪುರಾಣವೂ, ೭ ಗಂಟೆಗೆ ವಿ|| ಸೀತಾರಾಮಾಚಾರ್ಯರಿಂದ ಸೀತಾ ಕಲ್ಯಾಣ ಎಂಬ ಹರಿಕಥೆಯೂ ಜರುಗುವುವು ಅಮ್ಮನವರಿಗೆ ಈ ದಿನ ಸಂಜೆ ಲಕ್ಷ್ಮಿ ಅಲಂಕಾರವನ್ನೂ, ನಾಳೆ ಸಂಜೆ ಕೋದಂಡ ರಾಮಸ್ವಾಮಿ ಅಲಂಕಾರವನ್ನೂ ಹಾಕಲಾಗುವುದು

ಫ್ರೆಂಚ್ ಸ್ವಾಸ್ಥ್ಯಗಳ ವರ್ಗಕ್ಕೆ ಸೂತ್ರದ ಬಗ್ಗೆ ಒಪ್ಪಂದ

ಫ್ರೆಂಚ್ ಭಾರತದ ಪ್ರದೇಶಗಳನ್ನು ಭಾರತ ಸರ್ಕಾರಕ್ಕೆ ವರ್ಗಾಯಿಸುವ ವಿಷಯವಾಗಿ ಕರಾರುವಾಕ್ಕಾದ ಸೂತ್ರದ ಬಗ್ಗೆ ಭಾರತ ಮತ್ತು ಫ್ರಾನ್ಸುಗಳಿಗೆ ಒಪ್ಪಂದವಾಗಿರುವುದೆಂದು ತಿಳಿದುಬಂದಿದೆ ವರ್ಗಾವಣೆ ವಿಷಯವನ್ನು ಇತ್ಯರ್ಥಗೊಳಿಸಲು ಮೂಲಭೂತವಾದ ಸಂಧಾನ ವಿಧಾನಗಳನ್ನು ಎರಡು ರಾಷ್ಟ್ರಗಳ ಸರ್ಕಾರಗಳೂ ಒಪ್ಪಿ, ತಾತ್ಕಾಲಿಕತೆಯನ್ನು ಮುಂದುವರಿಸಲು ನಿರ್ಧರಿಸಿವೆ ಶೀಘ್ರದಲ್ಲೇ ಫ್ರೆಂಚ್ ಪ್ರದೇಶಗಳ ವಾಸ್ತವಿಕ ವರ್ಗಾವಣೆಯು ನಡೆಯಲಿದೆಯೆಂದೂ ಹೇಳಲಾಗಿದೆ ಈ ದಿವಸದೊಳಗೆ ಈ ಬಗ್ಗೆ ಪ್ರಕಟಣೆಯೂ ಹೊರಡಬಹುದೆಂದು ಪುದುಚೇರಿಯ ವೃತ್ತಗಳಿಂದ ಬಂದಿರುವ ಸುದ್ದಿಯು ತಿಳಿಸಿದೆ

ಚಿಂತಾಮಣಿ ಪೌರಸಭಾ ಸದಸ್ಯರುಗಳ ರಿಟ್ ಅರ್ಜಿ

ಹೈಕೋರ್ಟಿನಲ್ಲಿ ಅಡ್ಮಿಟ್ ಆಯಿತು

ಸ್ವಂ ವ ಪ್ರೋ] ಬೆಂಗಳೂರು ೧೩

ಈ ದಿನ ಹೈಕೋರ್ಟ್ ನ್ಯಾಯಾಧೀಶರುಗಳಾದ ಶ್ರೀ ಆರ್ ವೆಂಕಟರಾಮಯ್ಯ ಮತ್ತು ಶ್ರೀ ಎನ್ ಬಾಲಕೃಷ್ಣಯ್ಯನವರುಗಳು ಚಿಂತಾಮಣಿ ಪೌರಸಭಾ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಲಾದ ಮೂವರು ಸದಸ್ಯರು ಶ್ರೀಗಳು ಎಂ ಆರ್ ನಾರಾಯಣರಾವ್, ಎನ್ ಆರ್ ಶ್ರೀನಿವಾಸಯ್ಯ ಮತ್ತು ಜಿ. ಎಸ್. ವಿ ಶಾಸ್ತ್ರಿಯವರುಗಳು ತಮ್ಮ ಅನರ್ಹತೆ ವಿರುದ್ಧವಾಗಿ ಸಲ್ಲಿಸಿದ ರಿಟ್ ಅರ್ಜಿಯನ್ನು ಈ ದಿನ ಅಡ್ಮಿಟ್ ಮಾಡಿಕೊಂಡರು

ಸದರಿ ಸದಸ್ಯರು ಪೌರಸಭೆಗೆ ಬಾಕಿ ಕೊಡಬೇಕಾಗಿತ್ತೆಂದು ಅಧ್ಯಕ್ಷರು ಅವರನ್ನು ಅನರ್ಹಗೊಳಿಸಿದ್ದುದರ ಮೇಲೆ ಅವರು ಜಿಲ್ಲಾಧಿಕಾರಿಗಳ ಬಳಿ ಅಪೀಲು ಹೋಗಿ ಅಲ್ಲಿ ಅನರ್ಹತೆಯು ರದ್ದುಗೊಳಿಸಲ್ಪಟ್ಟಿತ್ತು. ಅದರ ಮೇಲೆ ಸರ್ಕಾರದವರು ಪೌರಸಭಾಧ್ಯಕ್ಷರ ಅಪ್ಪಣೆಯ ಮೇಲೆ ಎತ್ತಿಹಿಡಿದಿದ್ದರು ಸರ್ಕಾರದ ಅಪ್ಪಣೆ ಮೇಲೆ ಈಗ ರಿಟ್ ಅರ್ಜಿಯನ್ನು ಹಾಕಲಾಗಿದೆ

ತಿರುವಾಂಕೂರು ತಮಿಳು ಕಾಂಗ್ರೆಸ್ ಡಿಕ್ಟೇಟರ್ ದಸ್ತಗಿರಿ

ತಿರುವಾಂಕೂರು ತಮಿಳರ ಕಾಂಗ್ರೆಸ್ಸಿನ ಡಿಕ್ಟೇಟರ್ ಎ ಕುಂಜನ್ನಾಡಾರ್‌ರವರು, ಹಿಂಸೆಗೆ ಪ್ರಚೋದಿಸಿ ಗಲಭೆಗಳಿಗೆ ಸಹಾಯ ಮಾಡಿದರೆಂಬ ಕಾರಣಕ್ಕಾಗಿ ಅವರನ್ನು ಬಂಧಿಸಲಾಗಿದೆ ಪುದುಕ್ಕಾಡ ಎಂಬಲ್ಲಿ ಜನರು ನೆನ್ನೆ ಅಂಚೆ ಕಛೇರಿಗೆ ನುಗ್ಗಿ ಅದನ್ನು ನಾಶಪಡಿಸಿ, ದಾಖಲೆಗಳನ್ನು ಸುಟ್ಟು, ಕಬ್ಬಿಣದ ಪೆಟ್ಟಿಗೆಯನ್ನು ಒಡೆದುಹಾಕಿರುತ್ತಾರೆ

ಸಟ್ಟಾ ಆಟಗಾರರ ಮೇಲೆ ಮೊಕದ್ದಮೆ

ಕುಂಬಾರಗೇರಿಯಲ್ಲಿ ನ್ಯೂಯಾರ್ಕ್ ಹತ್ತಿ ಸಟ್ಟಾ ಆಡುತ್ತಿದ್ದರೆಂದು ಚನ್ನಸ್ವಾಮಿ ಮತ್ತು ಇಬ್ಬರ ಮೇಲೆ ಮೊಕದ್ದಮೆ ಹೂಡಲಾಗಿದೆ

ಡ್ರಮ್ಮು ಸಿಡಿತದಿಂದ ಇಬ್ಬರು ಯುವಕರ ತಲೆ ಒಡೆಯಿತು

ಬೆಂಗಳೂರು [illegible]

ಇಲ್ಲಿನ ಮಾರ್ಕೆಟ್ ಬಳಿ ಬೊಂಬೂ ಬಜಾರ್ ಪ್ರದೇಶದಲ್ಲಿ ಒಂದು ಆಟೆ ಉಕ್ಕಿನ ಡ್ರಮ್ಮು ನೆನ್ನೆ ಬೆಳಗ್ಗೆ ಆಶ್ಚರ್ಯಕರವಾದ ರೀತಿಯಲ್ಲಿ ಸಿಡಿದ ಅದರ ಮುಚ್ಚಳವು ೩೦ ಅಡಿ ದೂರದ ಆಚೆ ಹಾರಿ ಹ ಗಡಿಯ ಎಂಬ ಯಾಂತ್ರಿಕ ಕೆಲಸಗಾರ ಮತ್ತು ನಜೀರ್ ಅಹಮದ್ ಎಂಬ ಇಂಟರ್ ಕಾಲೇಜು ವಿದ್ಯಾರ್ಥಿ ಇವರಿಬ್ಬರ ತಲೆಗಳಿಗೆ ಬಡಿದು ಮೆದುಳುಗಳ ಚೆಲ್ಲಿ ಅವರು ತಕ್ಷಣವಾಗಿ ಬಿದ್ದರೆಂದು ವರದಿಯಾಗಿದೆ ಸಿಡಿತದ ಶಬ್ದವು ವಿಪರೀತವಾಗಿದ್ದು ಹತ್ತಿರವಿದ್ದ ಜನರು ದಿಗ್ಭ್ರಮೆಗೊಂಡರು ಕಾರಣವು ತಿಳಿದುಬಂದಿಲ್ಲ ಡ್ರಮ್ಮಿನಲ್ಲಿ ಪ್ರಿಂಟ್ ವಾರ್ನಿಷ್ ಇರುತ್ತಿತ್ತು ಅದನ್ನು ಎರಡು ಹಾಳೆಯ ವೆಲ್ಡಿಂಗ್ ಷಾಪಿಗೆ ತರಲಾಗಿತ್ತು ಡ್ರಮ್ಮಿನ ಎಂಡು [illegible]

ರಾಘವೇಂದ್ರ ಸ್ವಾಮಿಗಳ ಮಹಿಮೆ

ಚಿಟ್ಟಿನಾಡಿನ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಅಳಗಪ್ಪ ಚೆಟ್ಟಿಯಾರ ರವರು ... ಬಹಳ ಹಿಂದಿನಿಂದಲೂ ... ಶ್ರೀ ರಾಘವೇಂದ್ರ ಸ್ವಾಮಿಗಳ ... ಪೂಜಿಸಲಾರಂಭಿಸಿದರು ... ಶ್ರೀ ಗುರುಗಳ ಪೀಠಾಧಿಕಾರಿಗಳಾದ ಶ್ರೀ ... ಶ್ರೀ ಗುರುಗಳಿಗೆ ಬೆಳ್ಳಿಯ ರಥವೊಂದನ್ನು ... ರಥದಲ್ಲಿ ಶ್ರೀ ಗುರುಗಳವರ ಉತ್ಸವವು ನೆರವೇರುವುದು

ರಾಷ್ಟ್ರಾಧ್ಯಕ್ಷರಿಂದ ಮತ್ತು ಪ್ರಧಾನಿಯವರ ಗ್ರಾಮ ನಿವಾಸ ಕಟ್ಟಡ

ಜಿಯಾಬಾದಿಗೆ ಹತ್ತಿರ ... ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಯವರಿಗಾಗಿ ಗ್ರಾಮ ನಿವಾಸ ಭವನಗಳನ್ನು ಕಟ್ಟಲಾಗುವುದೆಂದೂ ... ಎಕರೆ ಪ್ರದೇಶದಲ್ಲಿ ಆಧುನಿಕ ಸೌಕರ್ಯಗಳನ್ನೆಲ್ಲಾ ಕಲ್ಪಿಸಲಾಗುವುದೆಂದೂ ತಿಳಿದು ಬಂದಿದೆ

ಗೋವಾ ಪಟ್ಟಣಗಳಿಂದ ಸಾಮೂಹಿಕ ವಲಸೆ

ಗೋವಾ ಪ್ರದೇಶದಲ್ಲಿರುವ ಪಟ್ಟಣಗಳಿಂದ ... ಜನರ ... ಗ್ರಾಮಗಳಿಗೆ ಹೋಗಿರುತ್ತಾರೆಂದು ವರದಿಯಾಗಿದೆ

೧೬ ನೇ ತಾ|| ಚಿನ್ನದ ಗಣಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ಇದೇ ೧೬ ನೇ ತಾ|| ಸೋಮವಾರ ಕೋಲಾರದ ಚಿನ್ನದ ಗಣಿಗೆ ರಾಷ್ಟ್ರಾಧ್ಯಕ್ಷರು ಭೇಟಿ ಕೊಡುವರು ... ಶಿವನಸಮುದ್ರಕ್ಕೂ ಹೋಗುವರು ... ಭದ್ರಾವತಿ ಶೃಂಗೇರಿ ಮತ್ತು ... ನೋಡುವರು

HOUSE FOR SALE

Spacious bungalow "TULSI VIHAR" in Narasimha Sastry road Lakshmipuram ready for sale Rs 45 000 or near offer

Edited Printed and Published by A R Nagarajan at Sadhvi Press, D Subbiah Road Mysore

ನೀಲಗಿರಿಯಲ್ಲಿ ೨೧ ನೇ ತಾ|| ರಾಷ್ಟ್ರಾಧ್ಯಕ್ಷರ ಭೇಟಿ

ಮದ್ರಾಸು ೧೧

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಇಲ್ಲಿಗೆ ಇದೇ ೨೧ ನೇ ತಾ|| ಭೇಟಿ ಕೊಡಲಿದ್ದಾರೆ ... ಶ್ರೀ ಜಿ ಜಿ ... ಕಾರ್ಯಕ್ರಮಗಳ ... ಕಾಂಗ್ರೆಸ್ ಸಮಿತಿ ಅಧ್ಯಕ್ಷರು ... ಮುಂತಾದವರೊಡನೆ ಮಾತುಕತೆ ನಡೆಸುವರು

ಹೋಟೆಲು ಕಾರ್ಮಿಕನಿಗೆ ಎಂ ಎ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ

ಹುಬ್ಬಳ್ಳಿಯಲ್ಲಿರುವ ಹೋಟೇಲೊಂದರ ... ಕರ್ನಾಟಕ ವಿಶ್ವವಿದ್ಯಾಲಯದ ಎಂ ಎ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ಉತ್ತೀರ್ಣನಾಗಿರುತ್ತಾನೆ ... ಮಂಗಳೂರು ಜಿಲ್ಲೆಯ ... ಸ್ಕಾಲರ್ ಷಿಪ್, ಬಿ ಎ ಆನರ್ಸ್ ಗಳಲ್ಲೂ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದನು

ಲಿಪಿನನ್ನು ಮಂತ್ರಿಗಳೊಡನೆ ಎಸ್ ರಾಚಯ್ಯನವರ ಸಂಭಾಷಣೆ

... ಶ್ರೀ ಎಸ್ ರಾಚಯ್ಯನವರು ... ಮಂತ್ರಿಗಳೊಡನೆ ... ಸಂಭಾಷಣೆ ನಡೆಸಿದರು

ರಾಷ್ಟ್ರಾಧ್ಯಕ್ಷರಿಗೆ ಚಿನ್ನದ ಗಣಿ ಪೌರಸಭೆಯ ಮಾನಪತ್ರ

ಕೋಲಾರದ ಚಿನ್ನದ ಗಣಿ ಪ್ರದೇಶದ ಪೌರಸಭೆಯವರು ರಾಷ್ಟ್ರಾಧ್ಯಕ್ಷರಿಗೆ ಮಾನಪತ್ರವನ್ನು ಅರ್ಪಿಸಲು ನಿರ್ಧರಿಸಿರುತ್ತಾರೆ ...

ಆಕಾಶವಾಣಿ ನಾಳೆ ಕಾರ್ಯಕ್ರಮ

...

ನಾಟಕಗಾರರು ಬೇಕಾಗಿದ್ದಾರೆ

ಮಾಸ ಅಗರಬತ್ತಿ ಕಾರ್ಖಾನೆ, 1135 ... ಮೈಸೂರು. (... ನಲ್ಲಿ ...)

★

ಎಸ್. ಆರ್. ವಾಸು

ಸ್ಪೆಷಲ್ ಊದುಬತ್ತಿ

ರೀಟಾ ಹೇವರ್ತಳ ಗಂಡನ ಗಡೀಪಾರು

ಅಮೆರಿಕದ ಸುಪ್ರಸಿದ್ಧ ಸಿನಿಮಾ ನಟಿ ರೀಟಾ ಹೇವರ್ತಳ ... ಅಮೆರಿಕದ ವಲಸೆ ಅಧಿಕಾರಿಗಳು ... ಗಡೀಪಾರು ಮಾಡಿ ...

ರಸ ಶಾಸ್ತ್ರ ಭಾಗ ೧

ಧಾರವಾಡ ಜಿಲ್ಲೆಯ ... ಪ್ರಕಟಿಸಲಾಗಿದೆ ... ಶ್ರೀ ... ಎಂ ಮಹದೇವಶಾಸ್ತ್ರಿಯವರು ... ಆಯುರ್ವೇದ ವಿದ್ಯೆಯಲ್ಲಿ ... ಗ್ರಂಥವಿದು ಬೆಲೆ ೧ ರೂ

ಸ್ವಾತಂತ್ರ್ಯ ದಿನೋತ್ಸವ

ನರಸಿಂಹರಾಜ ಮೊಹಲ್ಲಾ ... ೧೫ ನೇ ತಾ|| ... ಸ್ವಾತಂತ್ರ್ಯ ದಿನೋತ್ಸವವನ್ನು ನೆರವೇರಿಸಲಾಗುವುದು ... ಶ್ರೀ ಎಸ್ ರಾಚಯ್ಯನವರು ಧ್ವಜಾರೋಹಣ ಮಾಡುವರು

ಉಚಿತ ಪ್ರಿಂಟಿಂಗ್ ... 111

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ

5 ವರ್ಷಕ್ಕೆ ಒಳಪಟ್ಟ ಮಕ್ಕಳ

15 8 54 ನೆ ಭಾನುವಾರ

ಸಂಜೆ ... 7 ಘಂಟೆವರೆಗೆ

ಫೋಟೋವನ್ನು ಉಚಿತವಾಗಿ ತೆಗೆಯಲಾಗುವುದು

ಶ್ರೀ ಕಾಂತ್ ಅಂಡ್ ಕೋ

ಸಯ್ಯಾಜಿರಾವ್ ರೋಡ್ ಮೈಸೂರು

(ಪ್ರಭಾ ಟಾಕೀಸ್ ಬಳಿ)

ಕೊಳ್ಳೇಗಾಲದ ಬಳಿ ೪,೦೦೦ ರೂ ದರೋಡೆ

ಕೊಳ್ಳೇಗಾಲಕ್ಕೆ ೧೫ ಮೈಲಿ ದೂರದಲ್ಲಿರುವ ... ಗುರುವಾರ ರಾತ್ರಿ ... ಯಾರೋ ದರೋಡೆ ನಡೆಸಿ ೪೦೦೦ ರೂ ಬೆಲೆ ಬಾಳುವ ವಸ್ತು ಮತ್ತು ನಗದನ್ನು ... ದೋಚಿಕೊಂಡಿರುತ್ತಾರೆ ...

ಉಪಾಧ್ಯಾಯರುಗಳ ಸಭೆ

ಕೃಷ್ಣರಾಜನಗರದ ... ಉಪಾಧ್ಯಾಯರ ಸಂಘದ ಸಭೆಯು ... ಶ್ರೀ ... ಅಧ್ಯಕ್ಷತೆಯಲ್ಲಿ ನಡೆಯಿತು ...

ಉಪನ್ಯಾಸ ಮತ್ತು ಹರಿಕಥೆ

... ಶ್ರೀ ... ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ... ಹರಿಕಥೆ ... ನಡೆಯುವುದು

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಆ
[illegible]	[illegible]	[illegible]

SREE GANESHA

TALKIES

Gala Release on 14 8-54

Universal International's

The Glenn Miller Story

(In Technicolor)

The Story of a Love that made Wonderful Music

Featuring James Stewart June Allyson Charles Drake and George Tobias

PUBLIC LIBRARY MYSORE

12th August 1954

NOTIFICATION

Applications from duly qualified candidates are invited for the following posts, to reach the undersigned on or before **31st August 1954** with copies of Certificates and Testimonials if any

No	Designation of the Appointment	Qualifications	Pay	D A
1	First Clerk	A pass in Intermediate with Senior Typing examination	Rs 45 3 60 4 100	Rs 15
2	Second Clerk	A pass in Intermediate	40 2 50 3 80	15
3	First Attender	A pass in S S L C Examination	25-1 30	12
4	Second Attender	A pass in S S L C Examination	25-1-30	12

Candidates selected should be on probation for one year and should execute service agreement to serve for at least five years

C P CHANDRA

Honorary Secretary

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

14-8-54 ನೇ ಶನಿವಾರದಿಂದ ಪ್ರತಿದಿನ 3 ಪ್ರದರ್ಶನಗಳು

★ ಸಂಸಾರಂ ★ (ತೆಲುಗು)

ಪಾತ್ರ ಎನ್ ಟಿ ರಾಮರಾವ್ ಲಕ್ಷ್ಮೀರಾಜ್ಯಂ ರೇಲಂಗಿ ಬಾಲಸರಸ್ವತಿ ಮುಂತಾದವರು

ರಿಜಿಸ್ಟ್ರೇ ನಂ 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು



ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ ೭.೩೩] SADHVI SATURDAY 14-8-1954 ಮೈಸೂರು ಶನಿವಾರ ೧೪ ೮-೧೯೫೪ [ಸಂಚಿಕೆ ೧೩

ಆಗ್ನೇಯ ಏಷ್ಯಾರಕ್ಷಣಾ ವ್ಯವಸ್ಥೆಗೆ ಸಿಂಹಳವೂ ಸೇರದು

ವಿದ್ಯೋದಯ ಕಾಲೇಜಿನ ಆರಂಭೋತ್ಸವ

ಮುಖ್ಯ ಮಂತ್ರಿ ಹನುಮಂತಯ್ಯನವರಿಂದ

ಟಿ ನರಸೀಪುರ ೧೩

ಗ್ರಾಮ ವಿದ್ಯೋದಯ ಸಂಘದವರು ಏರ್ಪಡಿಸಿರುವ ವಿದ್ಯೋದಯ ಕಾಲೇಜಿನ ಆರಂಭೋತ್ಸವವನ್ನು ಇಲ್ಲಿ ನೆನ್ನೆ ದಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆರವೇರಿಸಿದರು ಸಂಘದ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಅಗ್ರಾಸನವನ್ನು ವಹಿಸಿದ್ದರು

ಶ್ರೀ ಶ್ರೀನಿವಾಸರವರಿಂದ ಪ್ರಾರ್ಥನೆಯಾದನಂತರ ಶ್ರೀ ಟಿ ಕೆ ವೆಂಕಟಾಚಲಯ್ಯನವರು ಎಲ್ಲರನ್ನೂ ಸ್ವಾಗತಿಸಿ ಭಾಷಣ ಮಾಡಿದರು ಬೆಂಗಳೂರಿನ ಶ್ರೀ ಚಂದ್ರಶೇಖರಯ್ಯನವರಿಂದ ಭಾರತ ಪತಾಕಾವಾದನೆ ಲಿ ಅ|| ವಿ|| ಸಂಗೀತ ಶಕ್ತಿ ಬಿ ಚೌಡಯ್ಯ ಮತ್ತು ಮುಂತಾದವರಿಂದ ಗಾನ ಗೋಷ್ಠಿಯು ನಡೆಯಿತು

ಕಾರ್ಯದರ್ಶಿ ಎಂ ಸಿ ಶಿವಾನಂದ ಶರ್ಮರು ವರದಿಯನ್ನು ಓದಿ ವಿದ್ಯೋದಯ ಸಂಘದವರು ಇಲ್ಲಿ ಅತ್ಯಲ್ಪ ಪ್ರಮಾಣದಿಂದ ಆರಂಭಿಸಿದ ಈ ಶಾಲೆಯು ಇಂದು ಕಾಲೇಜಾಗಿ ಬೆಳೆದ ಬಂದಿರುವ ವಿವರಗಳನ್ನು ತಿಳಿಸಿದರು ಸರ್ಕಾರದಿಂದಲೂ ಸಾರ್ವಜನಿಕರಿಂದಲೂ ಬಂದಿರುವ ಸಹಾಯಗಳನ್ನು ಸ್ಮರಿಸಿ ಇನ್ನು ಮುಂದೆಯೂ ಸಕಲರೂ ಇದಕ್ಕೆ ನೆರವು ನೀಡಬೇಕೆಂದು ಕೋರಿದರು

ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಶಾಲೆಯ ಪುರೋಭಿವೃದ್ಧಿಗಾಗಿ ಮಾಡಿದ ಶ್ರಮೆಯನ್ನು ಶ್ಲಾಘಿಸಿದರು ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಈಗಾಗಲೇ ನಾಲ್ಕು ಕೋಟಿ ರೂ ವೆಚ್ಚ ಮಾಡುತ್ತಿರುವುದರಿಂದ ಇನ್ನೂ ಹೆಚ್ಚಾಗಿ ಖರ್ಚು ಮಾಡಲು ಸಾಧ್ಯವಿಲ್ಲವೆಂದೂ ಉದಾರಿಗಳಾದ ಮಹಾ ಜನರು ಮುಂದೆ ಬಂದು ಸಹಕರಿಸಬೇಕೆಂದೂ ತಿಳಿಸಿದರು ವಿದ್ಯೋದಯ ಕಾಲೇಜಿನ ನಿಧಿಗಾಗಿ ಏರ್ಪಟ್ಟಿದ್ದ ಆಟಗಳಿಗೆ ಸುಂಕದ ವಿನಾಯಿತಿಯನ್ನು ಕೊಡುವುದಾಗಿ ಹೇಳಿದರು ನೂತನ ವಿದ್ಯಾಭ್ಯಾಸ ಪದ್ಧತಿಗೆ ಹೊಂದಿಕೊಂಡು ಈ ಸಂಸ್ಥೆಯು ಬಹುಕಾಲ ಸೇವೆ ಸಲ್ಲಿಸಲೆಂದು ಹಾರೈಸಿದರು ವಿದ್ಯಾಭ್ಯಾಸ ಕ್ರಮದಲ್ಲಿ ದೈವ ಭಕ್ತಿ, ಧರ್ಮ ಶ್ರದ್ಧೆ ಉತ್ತಮ ನಡತೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದು ಸೂಚಿಸಿದರು

ಅಧ್ಯಕ್ಷರಾದ ಶ್ರೀ ಚೆನ್ನಬಸಪ್ಪನವರು ತಮ್ಮ ಭಾಷಣದಲ್ಲಿ ಸಾರ್ವಜನಿಕರು ಈ ಶಾಲೆಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಹೇಳಿದರು

ಶ್ರೀ ಸತ್ಯನಾರಾಯಣರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಮುಖ್ಯ ಮಂತ್ರಿಯವರು ಇಲ್ಲಿನ ಡಿಸ್ಪೆನ್ಸರಿಗೆ ಭೇಟಿಯಿತ್ತು ಅದರ ಸ್ಥಿತಿಗತಿಗಳನ್ನು ಪರಿಶೀಲಿಸಿದರು ತರುವಾಯ ಆಸ್ಪತ್ರೆ ನೀಡಬೇಕಿರುವ ಕಟ್ಟಡದಲ್ಲಿ ಗ್ರಾಮದ ಸ್ಥಿತಿ ಮತ್ತು ರಸ್ತೆ ದುಸ್ಥಿತಿಗಳನ್ನೂ ಪರಿಶೀಲಿಸಿ ಅವುಗಳ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ಸಲಹೆಗಳನ್ನಿತ್ತರ

ಆಗ್ನೇಯ ಏಷ್ಯಾ ರಕ್ಷಣಾ ವ್ಯವಸ್ಥೆಗೆ ಸಿಂಹಳವು ಸೇರುವುದಿಲ್ಲ

ಆಗ್ನೇಯ ಏಷ್ಯಾ ರಕ್ಷಣಾ ವ್ಯವಸ್ಥೆಯ ವಿಷಯವಾಗಿ ಸಮ್ಮೇಳನವೊಂದನ್ನು ಕರೆಯಲು ಪಾಶ್ಚಾತ್ಯ ರಾಷ್ಟ್ರಗಳ ಆಲೋಚನೆ ಯ ಸಂಬಂಧವಾಗಿ ಭಾರತ ಬರ್ಮಾ ಇಂಡೋನೇಷಿಯಾ ರಾಷ್ಟ್ರಗಳಿಗೆ ಕಳುಹಿಸಲಾಗಿದ್ದ ಆಹ್ವಾನವನ್ನು ಅವು ಈಗಾಗಲೇ ತಿರಸ್ಕರಿಸಿರುವುದಷ್ಟೆ? ಸಿಹ್ಮಳಕ್ಕೂ ಕಳುಹಿಸಲಾಗಿದ್ದ ಆಹ್ವಾನವನ್ನು ಅದು ಈವರೆಗೂ ಪರಿಶೀಲಿಸಿ ತಾನು ಭಾಗವಹಿಸಲು ನಿರಾಕರಿಸಿರುವುದಾಗಿ ನೆನ್ನೆ ಅಲ್ಲಿನ ವಿದೇಶಾಂಗ ಖಾತಾ ಕಛೇರಿಯು ಪ್ರಕಟನೆಯನ್ನು ಹೊರಡಿಸಿದೆ ಮೇಲ್ಕಂಡ ಸಮ್ಮೇಳನದಲ್ಲಿ ಭಾಗವಹಿಸಲು ಏಷ್ಯಾ ರಾಷ್ಟ್ರಗಳ ಪೈಕಿ ಪಾಕಿಸ್ತಾನವೊಂದು ಮಾತ್ರ ಒಪ್ಪಿರುವುದೆಂದೂ, ಬರುವ ತಿಂಗಳು ಫಿಲಿಪ್ಪೈನ್ಸಿನ ಒಂದು ಭಾಗದಲ್ಲಿ ಸಮ್ಮೇಳನವು ಸೇರಲಿರುವುದೆಂದೂ ಹೇಳಲಾಗಿದೆ

ಕಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘದ ಆರಂಭ ಭಾಷಣ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘದ ಆರಂಭ ಭಾಷಣವು ನಾಳೆ ಸಂಜೆ ೪ ಘಂಟೆಗೆ ಮಹಾರಾಜಾ ಕಾಲೇಜಿನ ಶ್ರೀ ಕೆ ವಿ ರಾಘವಾಚಾರ್ಯರಿಂದ ನಡೆಯುವುದು ಶ್ರೀ ಎ ಎಲ್ ರಾಮುಜಿ ದ್ಯಾರಾಯರು ಅಧ್ಯಕ್ಷತೆ ವಹಿಸುವರು

ಆಯುರ್ವೇದ ಕಾಲೇಜು ಪ್ರಿನ್ಸಿಪಾಲರಿಗೆ ರಜಾ

ರಾಜಧಾನಿಯ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ ದ್ವಾರಕಾನಾಥ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ದಿನದಿಂದ ೩ ತಿಂಗಳು ರಜಾ ನೀಡಲಾಗಿದೆ ಆಯುರ್ವೇದ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿರುವ ಶ್ರೀ ಎಸ್ ವೆಂಕಟನಾರಾಯಣರಾಯರು ತಮ್ಮ ಹುದ್ದೆಯೊಡನೆ ಪ್ರಿನ್ಸಿಪಾಲರ ಕೆಲಸವನ್ನೂ ನೋಡಿಕೊಳ್ಳುವರು

ರಾಘವೇಂದ್ರ ಸ್ವಾಮಿಗಳ ಆರಾಧನೆ

ನಗರದ ಚಾಮುಂಡಿಪುರದ ಟಿ ಆರ್ ರಾಮಯ್ಯ ಬ್ರಾಹ್ಮಣೋತ್ತಮರ ನಂಬರು ಮನೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ಸಂಜೆ ಪಾಳಪ್ಪು ಮತ್ತು ವಂಗಳವಾರ ಸಾಯಂಕಾಲ ಭಜನೆ ಮತ್ತು ರಾತ್ರಿ ೮ ಘಂಟೆಯಿಂದ ಸಂಗೀತಗಳು ನಡೆಯುತ್ತವೆ

ರಾಮ ಪಟ್ಟಾಭಿಷೇಕ ಮತ್ತು ಹನುಮಂತೋತ್ಸವ

ರಾಜಧಾನಿಯ ಕುರಿಗಾ ಬಜಾರ್ ಕಬೀರ್ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ಸದ್ಗುರು ಸಮರ್ಥ ಕಬೀರ್ ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ಮಹಾ ಪಟ್ಟಾಭಿಷೇಕವೂ ನಾಳಿದ್ದು ಸಂಜೆ ೬ ಗಂಟೆಗೆ ಹನುಮಂತೋತ್ಸವವೂ, ಜಗದ್ಗುರು ಸಮರ್ಥ ರಾಮದಾಸ ಸ್ವಾಮಿ ಪಾದುಕಾ ಪಲ್ಲಕ್ಕಿ ಉತ್ಸವವೂ ಮಹಾ ಸಂತರ್ಪಣೆಯೂ ನಡೆಯುತ್ತವೆ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ ಹಿಮಾಲಯ ಯಾತ್ರೆ ಮುಗಿಸಿಕೊಂಡು ಬಂದಿರುವ ಕಬೀರ್ ದಾಸರು ತೀರ್ಥ ಪ್ರಸಾದ ವಿನಿಯೋಗ ಮಾಡುವರು

ಆಗುಂಬೆಯಲ್ಲಿ ಇದುವರೆಗೆ ೨೩೦ ಅಂಗುಲ ಮಳೆ

ಭಾರತದ ಎರಡನೆ ಚಿರಾಪುಂಜಿ ಎಂದು ಹೆಸರು ಪಡೆದಿರುವ ಆಗುಂಬೆಯಲ್ಲಿ ಈ ವರ್ಷ ಇದುವರೆಗೆ ೨೩೦ ಅಂಗುಲ ಮಳೆಯಾಗಿದೆ

ಬದುಕಿರುವಾಗಲೇ ಅಂತ್ಯಕ್ರಿಯೆಯ ಯತ್ನ

ತನ್ನ ಅಂತ್ಯಕ್ರಿಯೆ ಸಿದ್ಧತೆಯನ್ನು ತಮ್ಮ ಮನೆಯವರು ನಡೆಸುತ್ತಿದ್ದುದನ್ನ ದೊಂಬಾಯಿಯಲ್ಲಿ ೮೦ ವರ್ಷದ ಒಬ್ಬ ವೃದ್ಧನು ವಾಪಸು ಬಂದಾಗ ನೋಡಿದ ವಿಚಿತ್ರ ಸುದ್ದಿಯೊಂದು ವರದಿಯಾಗಿದೆ ಕಳೆದ ಶನಿವಾರ ಆತನು ತನ್ನ ಮನೆಯಿಂದ ಅದೃಶ್ಯನಾದನೆಂದೂ ಆತನಿಗಾಗಿ ಮನೆಯವರೂ ಪೋಲೀಸರೂ ಹುಡುಕಿ ಕಡೆಗೆ ಆಸ್ಪತ್ರೆಯಲ್ಲಿ ಮಡಿದ ಒಬ್ಬ ವೃದ್ಧನ ಶವವನ್ನು ನೋಡಿ ಅದೇ ಶವ ತನದೆಂದು ಮನೆಗೆ ತಂದು ಮುಂದಿನ ಕ್ರಮ ಕೈಗೊಳ್ಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರೆಂದೂ, ಅದೇ ಸಮಯಕ್ಕೆ ವೃದ್ಧನ ಅಲ್ಲಿಗೆ ಬಂದನೆಂದೂ ಹೇಳಲಾಗಿದೆ ತಪ್ಪು ಗೊತ್ತಾದನಂತರ ಹೆಣವನ್ನು ಆಸ್ಪತ್ರೆಯ ವರಿಗೆ ವಾಪಸು ಮಾಡಲಾಯಿತು

ಸಹಾಯಕ ಮಾರಾಟ ತೆರಿಗೆ ಅಧಿಕಾರಿಗಳ ವರ್ಗ

ಮೈಸೂರು ಸಿಟಿಯ ಎರಡನೇ ಸರ್ಕಲ್ ಸಹಾಯಕ ಮಾರಾಟ ತೆರಿಗೆ ಅಧಿಕಾರಿಗಳಾದ ಶ್ರೀ ಡಿ ಆರ್ ನಂಜಯ್ಯನವರಿಗೆ ಮಾರಾಟ ತೆರಿಗೆ ಅಧಿಕಾರಿಗಳಾಗಿ ಬಡ್ತಿ ಕೊಟ್ಟು ಬೆಂಗಳೂರಿಗೆ ವರ್ಗಾಯಿಸಲಾಗಿದೆ ಮಾರಾಟ ತೆರಿಗೆ ಕಮಿಷನರ ಕಛೇರಿ ಮ್ಯಾನೇಜರ್ ಆಗಿರುವ ಶ್ರೀ ಎಸ್ ರಾಮಯ್ಯ ಶೆಟ್ಟಿಯವರಿಗೆ ಬಡ್ತಿ ಕೊಟ್ಟು ಮೈಸೂರಿಗೆ ವರ್ಗಾಯಿಸಲಾಗಿದೆ

ಮೂಗೂರಿನಲ್ಲಿ ಉಪನ್ಯಾಸ

ಟಿ ನರಸೀಪುರ ತಾಲ್ಲೂಕು ಮೂಗೂರಿನಲ್ಲಿ ನಾಳೆಯಿಂದ ೩ ದಿನಗಳ ವರೆಗೆ ನಡೆಯುವ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಅಂಗವಾಗಿ ಉಪನ್ಯಾಸಕೇಸರಿ ವೇ|| ಬ್ರ|| ಶ್ರೀ ಸೋಸಲೆ ರಾಮಾಚಾರ್ಯರಿಂದ ಬೆಳಿಗ್ಗೆ ಪುರಾಣ ಮತ್ತು ಸಂಜೆ ಉಪನ್ಯಾಸವನ್ನು ಏರ್ಪಡಿಸಲಾಗಿದೆ

ಶ್ರೀ ವೆಂಕಟೇಶ ಸಂಗೀತ ಪಾಠಶಾಲೆಯ ವಾರ್ಷಿಕೋತ್ಸವ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವೆಂಕಟೇಶ ಸಂಗೀತ ಮಹಾ ಪಾಠಶಾಲೆಯ ಪ್ರಥಮ ವಾರ್ಷಿಕೋತ್ಸವವು ನಾಳೆ ಸಂಜೆ ೫ ಘಂಟೆಗೆ ನಿವೃತ್ತ ಜಿಲ್ಲಾ ನ್ಯಾಯಾಧಿಕಾರಿಗಳಾದ ಶ್ರೀ ಯೋಗಾನರಸಿಂಹರವರ ಅಧ್ಯಕ್ಷತೆಯಲ್ಲಿ ನಡೆಯುವುದು

ಅಖಂಡ ಭಾರತ ದಿನಾಚರಣೆ

ರಾಜಧಾನಿಯ ಭಾರತೀಯ ಜನಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಪ್ರಭಾತ್ ಥಿಯೇಟರ್ ಚೌಕದಲ್ಲಿ "ಅಖಂಡ ಭಾರತ ದಿನಾಚರಣೆ ಅಂಗವಾಗಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿದೆ ಮೈಸೂರು ಪುರಸಭಾ ಸದಸ್ಯರಾದ ಡಾ|| ಬಿ ಜಿ ದಾಸ್ ರ [illegible]

ಗೋವಾ ಬಗ್ಗೆ ಬಲಪ್ರಯೋಗ ಮಾಡಲು ಭಾರತಕ್ಕೆ ಇಷ್ಟವಿಲ್ಲ

ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನವನ್ನು ನೆನ್ನೆ ದಿನ ಪ್ರಧಾನ ನೆಹರೂರವರು ಆರಂಭಗೊಳಿಸುತ್ತಾ ಮಾಡಿದ ಭಾಷಣದಲ್ಲಿ ಗೋವಾ ಬಗ್ಗೆ ಪ್ರಸ್ತಾಪಿಸಿ ಪೋರ್ಚುಗಲ್ಲು ಎಷ್ಟು ಸೈನ್ಯವನ್ನು ತಂದರೂ ಭಾರತದ ಪಡೆಗಳು ಗೋವಾವನ್ನು ಕ್ಷಣಮಾತ್ರದಲ್ಲಿ ವಶಪಡಿಸಿಕೊಳ್ಳುವಷ್ಟು ಶಕ್ತಿಯನ್ನು ಹೊಂದಿವೆಯೆಂದೂ ಆದರೆ ಅವುಗಳ ಬಲಪ್ರಯೋಗದ ಇಚ್ಛೆಯುಳ್ಳವೆಂದೂ ಮತ್ತು ಹಾಗೆ ಮಾಡುವ ಮನಸ್ಸಿಲ್ಲವೆಂದಾಗಿಯೂ ನುಡಿದವರು ಮುಂದುವರಿದು ಗೋವಾ ಚಳುವಳಿಯಲ್ಲಿ ಭಾರತೀಯರು ಸೇರ ಬೇಕೆಂಬುದನ್ನು ತಾವು ಒಪ್ಪುವುದಿಲ್ಲವೆಂದೂ ಹಾಗೆಯೇ ಅಲ್ಲಿನ ಪ್ರಜೆಗಳು ಅದಕ್ಕೆ ಸೇರುವುದನ್ನು ತಾವು ನಿಲ್ಲಿಸುವುದಿಲ್ಲವೆಂದೂ ತಿಳಿಸಿದರು

ನಂಜನಗೂಡಿನಲ್ಲಿ ಸ್ವಾತಂತ್ರ್ಯೋತ್ಸವ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಶ್ರೀ ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ಸ್ವಾತಂತ್ರ್ಯ ದಿನೋತ್ಸವವನ್ನು ಏರ್ಪಡಿಸಲಾಗಿದೆ ಮಹಾರಾಜಾ ಕಾಲೇಜಿನ ಪ್ರೊ|| ಶ್ರೀ ಎಂ ಯಾಮುನಾಚಾರ್ಯರ ಉಪನ್ಯಾಸ ಮಾಡುವರು ಗವಾಯಿ ಶ್ರೀ ಎ ಅಶ್ವತ್ಥನಾರಾಯಣರವರಿಂದ ಕುವೆಂಪುರವರ ರಾಮಾಯಣದ ಪಠಣವೂ ಶ್ರೀ ಪಿ ವಾಸುದೇವಯ್ಯನವರಿಂದ ಸಂಗೀತ ವಿನಿಯೋಗವೂ ಏರ್ಪಾಡಾಗಿವೆ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಬೆಳಿಗ್ಗೆ ಸದರಿ ವಿದ್ಯಾರ್ಥಿ ಮಂದಿರದ ಮುಂಭಾಗದಲ್ಲಿ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮವನ್ನು ಏರ್ಪಡಿಸಿರುವರು

ರಾಮಕೃಷ್ಣಾಶ್ರಮಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ಇಲ್ಲಿನ ರಾಮಕೃಷ್ಣಾಶ್ರಮ ಮತ್ತು ರಾಮಕೃಷ್ಣ ವಿದ್ಯಾರ್ಥಿ ನಿಲಯಗಳಿಗೆ ಭೇಟಿಯಿತ್ತರು ವಿದ್ಯಾರ್ಥಿಗಳಿಂದ ಪ್ರಾರ್ಥನೆಯಾದನಂತರ ಸ್ವಾಮಿ ಸಿದ್ಧೇಶ್ವರಾನಂದರು ಸ್ವಾಗತ ಭಾಷಣ ಮಾಡಿದರು ರಾಷ್ಟ್ರಾಧ್ಯಕ್ಷರು ಭಾಷಣ ಮಾಡಿ ಆಶ್ರಮ ಮತ್ತು ವಿದ್ಯಾರ್ಥಿ ನಿಲಯದ ಕೆಲಸಕಾರ್ಯಗಳ ಬಗ್ಗೆ ಮೆಚ್ಚಿಗೆಯನ್ನು ಸೂಚಿಸಿದರು ವಿದ್ಯಾರ್ಥಿಗಳು ಎಲ್ಲಕ್ಕಿಂತಲೂ ಮಿಗಿಲಾಗಿ ಒಳ್ಳೆಯ ನಡತೆಯನ್ನು ಕಲಿಯಬೇಕೆಂದು ಅವರ ಸೂಚಿಸಿದರು

ಇಂಡಿಯನ್ ಕ್ಲಬ್

ರಾಜಧಾನಿಯ ಶಾಲಿವಾಹನನಗರದ ದೇವಿದಯಲ್ಲಿರುವ ಇಂಡಿಯನ್ ಕ್ಲಬ್ಬಿನ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಾಳೆ ಬೆಳಿಗ್ಗೆ ಧ್ವಜಾರೋಹಣ ಮತ್ತು ವ್ಯಾಯಾಮ ಪ್ರದರ್ಶನಗಳೂ ಸಂಜೆ ೬ ಘಂಟೆಗೆ ಫಲಾಹಾರ ವಿತರಣೆ ದ ಶ್ರೀ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಯೂ ಏರ್ಪಾಡಾಗಿವೆ

ಸೂಚನೆ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ಸಂಪಾದಕ

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಗಳು

ಮೈಸೂರು ೧೪

ನಗರದ ಪೌರಸಭೆಯ ಆಶ್ರಯದಲ್ಲಿ ನಾಳೆ ದಿನ ಸ್ವಾತಂತ್ರ್ಯ ದಿನೋತ್ಸವವು ಜರುಗುವುದು. ಬೆಳಿಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ, ಅನಂತರ ಪೋಲೀಸರು, ಸ್ಕೌಟ್ ಗಳು ಗರ್ಲ್ ಗೈಡುಗಳ ಸೇವಾದಳದವರು ಮುಂತಾದವರಿಂದ ಧ್ವಜವಂದನೆ ನಡೆಯುವುದು. ಸಂಜೆ ೫॥ ಗಂಟೆಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಸಂಗೀತ ... ಪಾಠಶಾಲಾ ಕ್ರೀಡಾ ಪ್ರದರ್ಶನ ... ನಡೆಯುವುದು. ಸಾರ್ವಜನಿಕರು ಉತ್ಸಾಹದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

[illegible]

ಮಂತ್ರಾಲಯದ ಗುರುಗಳ ಅನುಗ್ರಹದಿಂದ ಹುಚ್ಚು ನಿವಾರಣೆ

[illegible]

ತಿರುವಾಂಕೂರು ತಮಿಳರ ಪಿಕೆಟಿಂಗ್ ನಿಲ್ಲುವುದು

[illegible]

ವಿಷ ಬೆರೆತ ಸೌತೆಕಾಯಿ ಕೊಟ್ಟು ನಗ ನಾಣ್ಯದ ಅಪಹಾರ

[illegible]

ಕಳ್ಳತನಕ್ಕಾಗಿ ಉಪಾಧ್ಯಾಯನಿಗೆ ೧ ತಿಂಗಳು ಶಿಕ್ಷೆ

[illegible]

ಆಕಾಶವಾಣಿಯಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ

[illegible]

16—8—54

[illegible]

ನಾಳೆಯಿಂದ ಗೋವಾ ವಿಮೋಚನೆ ಸತ್ಯಾಗ್ರಹ

ಗೋವಾ ವಿಮೋಚನೆಗಾಗಿ ಸತ್ಯಾಗ್ರಹವನ್ನು ನಾಳೆ ಭಾರತದ ಸ್ವಾತಂತ್ರ್ಯೋತ್ಸವದ ದಿನದಿಂದ ನಡೆಸಲು ಗೋವಾ ಕ್ರಿಯಾ ಸಮಿತಿಯವರು ನಿರ್ಧರಿಸಿರುತ್ತಾರೆ

NOW ON SHOW

MALAI KALLAN

(Tamil)

AT LAKSHMI

Central Food Technological Research Institute Mysore

Tender Notification

Sealed quotations in triplicate along with an Earnest Deposit of Rs.900/ in cash are invited from contractors with experience of Road Works for the work of semigrouting the main approaches of the Institute about 5 1/4 fgs in length with Mexphalt. The Quotations should reach the Director, Central Food Technological Research Institute, Cheluvamba Mansion, Mysore, before 5 P.M on 2nd September 1954, and all the required materials should be supplied and work completed before 31st December 1954. It would be the responsibility of the contractor to secure necessary equipment like the heat-master and steam road rollers, the Institute would however address letters to local Municipality or Public Works Department Offices to accommodate the contractor who would be finally selected.

P. S. Copies of schedule of Quantities in respect of the work may be obtained at the office during working hours.

Edited, Printed and Published by A. R. Nagarajan at Sadhvi Press, D. Subbiah Road Mysore

WITH PLEASURE WE ANNOUNCE THE NEW MODELS IN

MURPHY RADIOS

which are now in transit and shall be on display about the 16th AUGUST 1954

1 198TU A 5 Valve 2 Bands set for quality & reliability. It has as good a performance on both wavebands as many other sets double its size and the quality of reproduction is exceptional. Rs 215

2 "222"TA A 5 Valves 3 Bands Superhet tropicalised 13 to 550 meters large perspex scale externally mounted. Painted in gold black & white with decorative gold centres. Consumption 42 watts approximately. Rs 300

3 "224"TA A 5 Valves 8 BANDSPREAD Supersonic-heterodyne fully tropicalised, Fly wheel tuning variable tone control, fitted in Mahogany high standard, simple but distinctive cabinet. Average consumption of 47 watts. Rs 425

YOU ARE ADVISED TO BOOK YOUR ORDERS IN ADVANCE considering the demand for these new sets and avoid disappointment

For further particulars apply

Messrs. ABIDS, MYSORE

Authorised Dealers for Murphy Radios

STATUE SQUARE — PHONE No 473

ಪ್ರಭುದೇವಾ ಥಿಯೇಟರ್

(ಹವಾ ನಿಯಂತ್ರಿತ)

14—8—54ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು

ಸಂಸಾರಂ

ಪಾತ್ರ — ಎನ್. ಟಿ. ರಾಮ ರಾವ್,
ರೇಲಂಗಿ ಲಕ್ಷ್ಮೀರಾಜಂ,
ಬಾಲಸರಸ್ವತಿ

ರಾಜಶ್ರೀ ಫಿಲಂಸ್‌ರವರ ತೆಲುಗು ಚಿತ್ರ

ರಿಜಿಸ್ಟರ್ ನಂ. 792

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಒಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI MONDAY 16-8-1954 ಮೈಸೂರು ಸೋಮವಾರ ೧೬-೮-೧೯೫೪ [ಸಂಚಿಕೆ : ೮೪

ಗೋವಾ ವಿಮೋಚನಾ ಸತ್ಯಾಗ್ರಹ ಆರಂಭ; ೩೪ ದಸ್ತಗಿರಿ

ನಗರದಲ್ಲಿ ಸ್ವಾತಂತ್ರ್ಯೋತ್ಸವ

ಬೆಳಿಗ್ಗೆ ಧ್ವಜಾರೋಹಣ ಮತ್ತು ಸಂಜೆ ಬಹಿರಂಗ ಸಭೆ

ಮೈಸೂರು ೧೬

ಇಲ್ಲಿನ ಪೌರಸಭೆಯವರು ನೆನ್ನೆ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮವನ್ನು ಟೌನ್‌ಹಾಲ್ ಮೈದಾನದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು. ಬೆಳಿಗ್ಗೆ ೮ ಗಂಟೆಗೆ ಮೈದಾನದ ಧ್ವಜಸ್ತಂಭದ ಬಳಿ ಪೌರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು. ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಪೊಲೀಸರು, ಸ್ಕೌಟುಗಳು, ಗರ್ಲ್‌ಗೈಡುಗಳು, ಭಾರತ ಸೇವಾದಳದವರು ಮುಂತಾದವರಿಂದ ಸೆಲ್ಯೂಟ್ ಸ್ವೀಕರಿಸಿದರು. ಶ್ರೀ ಕೆ. ಪುಟ್ಟಸ್ವಾಮಿಯವರು ಭಾಷಣ ಮಾಡಿ ರಾಷ್ಟ್ರಧ್ವಜದ ಅಡಿಯಲ್ಲಿ ಭಾರತವು ತನ್ನ ಸ್ವಾತಂತ್ರ್ಯವನ್ನು ಸಾಧಿಸಿರುವುದಾಗಿಯೂ, ಗಳಿಸಿದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡುಬರಬೇಕಾದುದು ನಮ್ಮೆಲ್ಲರ ಕರ್ತವ್ಯವೆಂದೂ ತಿಳಿಸಿದರು.

ಸಂಜೆ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮೈದಾನದಲ್ಲಿ ಭಾರಿ ಬಹಿರಂಗ ಸಭೆಯು ಏರ್ಪಟ್ಟಿತ್ತು. ಶ್ರೀಮತಿ [illegible] ಅವರ ಪ್ರಾರ್ಥನೆಯಾದನಂತರ ಸ್ಕೌಟು ದಳದವರಿಂದ ಕೋಲಾಟವು ಆಯಿತು. ಶಿಶು ಸಾಹಿತ್ಯ ಸಂಘದ ಬಾಲಕರು ಹಲವು ಕ್ರೀಡೆಗಳನ್ನಾಡಿದರು.

ಮಹಾರಾಜಾ ಕಾಲೇಜಿನ ಪ್ರೊಫೆಸರ್ ಶ್ರೀ ಎಂ. ವಿ. ಕೃಷ್ಣರಾಯರು ಭಾಷಣ ಮಾಡಿ ಸ್ವಾತಂತ್ರ್ಯವು ಬಂದನಂತರ ರಾಷ್ಟ್ರದ ನಾಯಕರು ಎದುರಿಸಬೇಕಾಗಿಬಂದ ಸಮಸ್ಯೆಗಳನ್ನು ಕುರಿತು ಉಪನ್ಯಾಸ ಮಾಡಿದರು. ಭಾರತವು ಜಾತ್ಯತೀತ ರಾಜ್ಯವಾಗಿರುವುದರ ಮಹತ್ವವನ್ನು ವಿವರಿಸಿದರು. ರಾಷ್ಟ್ರವು ನೆಹರೂ, ರಾಜೇಂದ್ರ ಪ್ರಸಾದ್ ಮುಂತಾದವರ ನೇತೃತ್ವದಲ್ಲಿ ಈಗ ಅಂತರ ರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದಿರುವುದೆಂದೂ, ಯುದ್ಧಗಳಾಗದಂತೆ ತಡೆದು ಪ್ರಪಂಚದಲ್ಲಿ ಶಾಂತಿ ಸಾಧಿಸಲು ಭಾರತವು ಜಗತ್ತಿಗೆ ಹೆದ್ದಾರಿಯನ್ನು ತೋರಿಸುತ್ತಿರುವುದೆಂದೂ, ಅಂತಹ ಜವಾಬ್ದಾರಿಯನ್ನು ನಾಯಕರು ಹೊತ್ತಿರುವಾಗ ಜನತೆಯು ಅವರ ಮಾರ್ಗದರ್ಶನವನ್ನನುಸರಿಸಿ ತಮ್ಮಲ್ಲೂ ಅವರ ಗುಣಾತಿಶಯದ ಸ್ವಲ್ಪ ಭಾಗವನ್ನಾದರೂ ಅಳವಡಿಸಿಕೊಂಡರೆ ಪ್ರಜೆಗಳಿಗೆ ಶ್ರೇಯಸ್ಸೆಂದೂ ನುಡಿದರು.

ಶ್ರೀ ರಾಮತೀರ್ಥ ಎಂಬ ವಿದ್ಯಾರ್ಥಿಯು ಸ್ವಂತವಾಗಿ ರಚಿಸಿದ್ದ ಸ್ವಾತಂತ್ರ್ಯ ಪದ್ಯ ಮಾಲಿಕೆಯನ್ನು ಓದಿದರು. ಮತ್ತೊಬ್ಬ ವಿದ್ಯಾರ್ಥಿಯು ಸ್ವಾತಂತ್ರ್ಯದ ಲಾವಣಿಯನ್ನು ಹೇಳಿದನು.

ಅಧ್ಯಕ್ಷರು ಭಾಷಣ ಮಾಡಿ, ಅರಮನೆಯಲ್ಲಿ ಇಂದು ದೀಪೋತ್ಸವವು ನಡೆಯದಿರುವುದಕ್ಕಾಗಿ ವ್ಯಸನವನ್ನು ಸೂಚಿಸಿದರು. ಮೈಸೂರು ಮಹಾರಾಜರೂ ರಾಜ ಮನೆತನದವರೂ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಿದ್ದರೆ ಪ್ರಜೆಗಳಿಗೆ ಸಂತೋಷವಾಗುತ್ತಿತ್ತೆಂದು ತಿಳಿಸಿದರು.

ಭಾರತ ಸೇವಾ ದಳದ ಒಬ್ಬ ಸ್ವಯಂ ಸೇವಕನು ಸೈಕಲ್ ಸವಾರಿ ಚಮತ್ಕಾರವನ್ನು ಪ್ರದರ್ಶಿಸಿದನು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮೋಟಾರು ಸೈಕಲ್ ಅಪಘಾತದಲ್ಲಿ ಸಿ.ಪಿ.ಸಿ. ಯವರ ಪುತ್ರರ ಮರಣ

ಮೆಡಿಕಲ್ ಕಾಲೇಜು ವಿದ್ಯಾರ್ಥಿಯೊಬ್ಬರೂ ಮೃತಿ ಹೊಂದಿದರು

ಮೈಸೂರು ೧೬

ದಿವಂಗತ ಸಿ. [illegible] ಶೆಟ್ಟರ ಪುತ್ರ ೨೬ ವಯಸ್ಸಿನ [illegible] ಶೆಟ್ಟಿಯವರು ನೆನ್ನೆ ರಾತ್ರಿ ೯ ಘಂಟೆ ಸಮಯದಲ್ಲಿ ಜನ್ಮಂಬಾಡಿಯಿಂದ ವಾಪಸು ಬರುತ್ತಿದ್ದಾಗ ಬೇಗೊಳದ ಬಳಿ ರಸ್ತೆಯ ಪಕ್ಕದಲ್ಲಿದ್ದ ಪೈಪ್ ಲೈನಿಗೆ ಅವರ ಮೋಟಾರು ಸೈಕಲ್ಲು ಡಿಕ್ಕಿ ಹೊಡೆದು ಅವರು ಕೂಡಲೇ ಪ್ರಾಣ ಬಿಟ್ಟರೆಂದೂ, ಕ್ಯಾರಿಯರ್ ಮೇಲೆ ಕುಳಿತಿದ್ದ, ಯಳಂದೂರು ಅಮಲ್ದಾರ್ ಶ್ರೀ ಗೋಪಾಲಸ್ವಾಮಿ ನಾಯ್ಡುರವರ ಮಗ ಮೆಡಿಕಲ್ ಕಾಲೇಜು ವಿದ್ಯಾರ್ಥಿ ದೊರೆಸ್ವಾಮಿಯವರಿಗೆ ತೀವ್ರ ಗಾಯಗಳಾಗಿ ಅವರನ್ನು ನಗರಕ್ಕೆ ಸಾಗಿಸುತ್ತಿದ್ದಾಗ ದಾರಿಯಲ್ಲಿ ಮೃತಪಟ್ಟರೆಂದೂ ತಿಳಿದುಬಂದಿದೆ. ಮೋಟಾರು ಸೈಕಲ್ಲು ಮುರಿದು ಚೂರುಚೂರಾಯಿತೆಂದು ಗೊತ್ತಾಗಿದೆ. ಮೃತರ ಗೌರವಾರ್ಥವಾಗಿ ಈ ದಿನ ಸಿ. ಪಿ. ಸಿ. ಬಸ್ಸುಗಳನ್ನು ನಿಲ್ಲಿಸಲಾಗಿದೆ.

ದೇಶಕ್ಕೆ ರಾಷ್ಟ್ರಾಧ್ಯಕ್ಷರ ಸಂದೇಶ

ಭಾರತದ ೮ನೇ ಸ್ವಾತಂತ್ರ್ಯೋತ್ಸವದ ಸಂದರ್ಭವಾಗಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ದೇಶಕ್ಕೆ ಸಂದೇಶವನ್ನಿತ್ತು, ಪ್ರಜಾವರ್ಗದವರು ಪ್ರಗತಿ ಮತ್ತು ಏಳಿಗೆಗಾಗಿ ದುಡಿಯುತ್ತಿದ್ದಾರೆ, ರಾಷ್ಟ್ರಗಳಲ್ಲಿ ಪರಸ್ಪರ ತಿಳಿವಳಿಕೆ ಮತ್ತು ವಿಶ್ವಾಸ ಹೆಚ್ಚುವಂತೆ ಮಾಡಲು ಪ್ರಯತ್ನಿಸಲು ತಮ್ಮ ಜೀವನವನ್ನು ಮುಡಿಪು ಮಾಡಬೇಕೆಂದು ಕೋರುತ್ತಾರೆ.

ರಾಷ್ಟ್ರಾಧ್ಯಕ್ಷರಿಗೆ ಪರಕಾಲ ಮಠದ ಸ್ವಾಮಿಗಳ ಖಿಲ್ಲತ್ತು

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೊಡನೆ ಕಳೆದ ಶುಕ್ರವಾರ ಪರಕಾಲ ಮಠಕ್ಕೆ ಭೇಟಿಯಿತ್ತು, ಸ್ವಾಮಿಗಳವರನ್ನು ಭೇಟಿ ಮಾಡಿದರು. ಅವರನ್ನು ಮಠದ ಸಮಿತಿ ಕಾರ್ಯದರ್ಶಿ ಶ್ರೀ ಬಿ. ಆರ್. ಶ್ರೀನಿವಾಸನ್‌ರವರೂ, ಇತರರೂ ಸ್ವಾಗತಿಸಿದರು. ದೇವರ ದರ್ಶನ ಪಡೆದ ನಂತರ ರಾಷ್ಟ್ರಾಧ್ಯಕ್ಷರು ಶ್ರೀ ಸ್ವಾಮಿಗಳವರೊಡನೆ ಕುಶಲ ಸಂಭಾಷಣೆ ನಡೆಸಿದರು. ರಾಷ್ಟ್ರಾಧ್ಯಕ್ಷರಿಗೂ, ಮುಖ್ಯ ಮಂತ್ರಿಯವರಿಗೂ ಸ್ವಾಮಿಗಳವರು ಶಾಲು ಜೋಡಿಗಳ ಖಿಲ್ಲತ್ತು ಕೊಟ್ಟರು. ರಾಷ್ಟ್ರಾಧ್ಯಕ್ಷರ ದೇಹಾರೋಗ್ಯವು ಉತ್ತಮಗೊಂಡು ಅವರಿಂದ ರಾಷ್ಟ್ರಕ್ಕೆ ಅತಿಶಯ ಸೇವೆ ಸಲ್ಲುವಂತಾಗಲೆಂದು ಸ್ವಾಮಿಗಳವರು ಹರಸಿ ಆಶೀರ್ವದಿಸಿದರು.

ಶೃಂಗೇರಿಗೆ ೨೦ ನೇ ತಾ|| ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ೨೦ ನೇ ತಾ|| ಶೃಂಗೇರಿಗೆ ಹೋಗುವರು. ೧೯ ನೇ ತಾ|| ರಾತ್ರಿ ಮೈಸೂರಿನಿಂದ ರೈಲಿನಲ್ಲಿ ಭದ್ರಾವತಿಗೆ ಹೋಗಿ ಅಲ್ಲಿಂದ ಶೃಂಗೇರಿಯನ್ನು ತಲುಪುವರು. ಹಿರಿಯ ಜಗದ್ಗುರುಗಳಿಗೆ ಅವರು ಪ್ರಣಾಮವನ್ನು ಸಲ್ಲಿಸುವರು.

ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರಾಧ್ಯಕ್ಷರಿಂದ ಸೆಲ್ಯೂಟ್ ಸ್ವೀಕಾರ

ಬೆಂಗಳೂರು ೧೬

ನೆನ್ನೆ ಇಲ್ಲಿನ ರೇಸ್ ಕೋರ್ಸಿನಲ್ಲಿ ಸ್ವಾತಂತ್ರ್ಯೋತ್ಸವದ ಪೆರೇಡು ನಡೆಯಿತು. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಮಿಲಿಟರಿಯವರಿಂದ ಸೆಲ್ಯೂಟನ್ನು ಸ್ವೀಕರಿಸಿದರು. ಸುಮಾರು ೨ ಲಕ್ಷ ಜನರು ಈ ದೃಶ್ಯವನ್ನು ನೋಡಿದರು. ಅಧ್ಯಕ್ಷರು ತೆರೆದ ಜೀಪು ಕಾರಿನಲ್ಲಿ ರೆಸಿಡೆನ್ಸಿಯಿಂದ ರೇಸ್ ಕೋರ್ಸಿಗೆ ಬಂದು ೨೫ ನಿಮಿಷ ಕಾಲ ಪೆರೇಡನ್ನು ವೀಕ್ಷಿಸಿದರು. ಅವರೊಡನೆ ಕ್ಯಾಪ್ಟನ್ ಎ. ಎ. [illegible] ಇದ್ದರು. ನಗರ ಶಾಲಾ ಮಕ್ಕಳು ಇದ್ದ ಸ್ಥಳಕ್ಕೆ ರಾಷ್ಟ್ರಾಧ್ಯಕ್ಷರು ಒಂದು ಸಂದರ್ಶನವಿತ್ತರು. ಪೆರೇಡಿಗೆ ಮುಖ್ಯಮಂತ್ರಿಯವರು, ಇತರ ಸಚಿವರು, ಹೈಕೋರ್ಟ್ ನ್ಯಾಯಾಧೀಶರು, ಉನ್ನತಾಧಿಕಾರಿಗಳು ಬಂದಿದ್ದರು.

ರಾಷ್ಟ್ರಾಧ್ಯಕ್ಷರ ಸತ್ಕಾರ ಕೂಟ

ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಷ್ಟ್ರಾಧ್ಯಕ್ಷರು ಇಲ್ಲಿನ ಅರಮನೆಯಲ್ಲಿ ನೆನ್ನೆ ಸಂಜೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ೧೫೦೦ ಅತಿಥಿಗಳು ಬಂದಿದ್ದರು.

ಗೋವಾ ವಿಮೋಚನಾ ಸತ್ಯಾಗ್ರಹ ಆರಂಭ

೩೪ ಮಂದಿ ಬಂಧನ

ಪೋರ್ಚುಗೀಸ್ ಭಾರತದ ವಸಾಹತುಗಳಾದ ಗೋವಾ, ಡಾಮನ್ ಮತ್ತು ಡಯು ಪ್ರದೇಶಗಳ ವಿಮೋಚನೆ ಸತ್ಯಾಗ್ರಹವು ನೆನ್ನೆ ಆರಂಭವಾಯಿತು. ಗೋವಾದ ಪಡಂ ಪ್ರದೇಶಕ್ಕೆ ೪೯ ಮಂದಿ ಸತ್ಯಾಗ್ರಹಿಗಳು ಹೊರಟು ಗಡಿ ಬಳಿ ಹಾಕಿದ್ದ ಬೇಲಿಯನ್ನು ದಾಟಿದರು. ೩೪ ಜನರನ್ನು ಬಂಧಿಸಲಾಯಿತು. ಎಲ್ಲೂ ವಾಹನ ತೆರಳುವಂತೆ ಒತ್ತಾಯಪಡಿಸಲಾಗುತ್ತಿದೆ.

ಗೋವಾ-ಕಾರವಾರ ಗಡಿಯಲ್ಲಿ ಪೋರ್ಚುಗೀಸ್ ಅಧಿಕಾರಿಗಳು ೩ ಅಡಿ ಎತ್ತರದ ಕಲ್ಲಿನ ಗೋಡೆಯನ್ನು ಹಾಕಿ ಕಬ್ಬಿಣದ ಸರಳುಗಳನ್ನು ಬಿಗಿದಿದ್ದಾರೆ. ಮುಳ್ಳು ತಂತಿ ಬೇಲಿಗಳನ್ನು ಹಾಕಲಾಗಿದೆ.

ಡಾಮನ್ ಪ್ರದೇಶಕ್ಕೆ ಕೆಂಪು ಟೋಪಿ ಧರಿಸಿದ್ದ ೧೨೦೦ ಪ್ರಜಾ ಸಮಾಜವಾದಿಗಳು, ಹೋಗಲೆತ್ನಿಸಿದಾಗ ಅವರನ್ನು ಗಡಿಗೆ ಐವತ್ತು ಗಜ ದೂರದಲ್ಲಿ ಭಾರತದ ಪೊಲೀಸರು ತಡೆಗಟ್ಟಿ ಪೋರ್ಚುಗೀಸರ ಪ್ರದೇಶಕ್ಕೆ ಹೋಗದಂತೆ ಮಾಡಿದರು. ಡಾಮನ್ನಿಗೆ ಹೋಗಲು ಅವಕಾಶ ಬೇಡಿ ಸಮಾಜವಾದಿ ನಾಯಕರಾದ ಶ್ರೀ [illegible] ದೇಸಾಯಿಯವರು ನೆಹರೂರವರಿಗೆ ಮನವಿ ಮಾಡಿಕೊಂಡಿರುತ್ತಾರೆ.

ಡಮಾನಿನಲ್ಲಿರುವ [illegible] ಹಳ್ಳಿಯ ಕೋಟೆಯನ್ನು [illegible] ಸ್ವಯಂಸೇವಕರು ನೆನ್ನೆ ವಶಪಡಿಸಿಕೊಂಡರು. ಕೋಟೆಯ ರಕ್ಷಣೆಗಾಗಿ ನೇಮಿಸಲಾಗಿದ್ದ ಪೋರ್ಚುಗೀಸ್ ಪೊಲೀಸರು ಬಲಪ್ರಯೋಗ ಮಾಡಿ [illegible]

ಚಿನ್ನದ ಗಣಿಗೆ ರಾಷ್ಟ್ರಾಧ್ಯಕ್ಷರ ಪ್ರಯಾಣ

ಸ್ವಂತ ಫೋನ್] ಬೆಂಗಳೂರು ೧೬

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಈ ದಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೊಡನೆ ಕೋಲಾರದ ಚಿನ್ನದ ಗಣಿಗೆ ತೆರಳಿದರು. ಅಲ್ಲಿನ ಸ್ವಾಗತ ಸಮಿತಿ ಚೇರ್ಮನ್‌ರವರು ಡಾ|| ಪ್ರಸಾದರಿಗೆ [illegible] ಸಮರ್ಪಿಸಲಿರುವರು. ರಾತ್ರಿ ೮ ಗಂಟೆಗೆ ರಾಷ್ಟ್ರಾಧ್ಯಕ್ಷರು ಇಲ್ಲಿಗೆ ಹಿಂತಿರುಗಿ ನಾಳೆ ಶಿವನಸಮುದ್ರದ ಮೂಲಕ ಮೈಸೂರಿಗೆ ಬರುವರು. ೨೬ ನೇ ತಾ|| ರಾಜಪ್ರಮುಖರು ರಾಷ್ಟ್ರಾಧ್ಯಕ್ಷರ ಗೌರವಾರ್ಥವಾಗಿ [illegible] ಸತ್ಕಾರ ಕೂಟವನ್ನು ಏರ್ಪಡಿಸುವರು. ೨೬ ರಂದು ಸಂಜೆ ೬ ಗಂಟೆಗೆ ಬೆಂಗಳೂರಿನಲ್ಲಿ ರಾಷ್ಟ್ರಾಧ್ಯಕ್ಷರ ಮೆರವಣಿಗೆಯು ನಡೆಯುವುದು.

ನಿಜಾಮಾಬಾದಿನಲ್ಲಿ ಘರ್ಷಣೆಯಿಂದ ೧೦೦ ಜನರಿಗೆ ಗಾಯ

ಸಿಕಂದರಾಬಾದ್ ಹತ್ತಿರ ನಿಜಾಮಾಬಾದಿನಲ್ಲಿ ಮಹಾತ್ಮಾಗಾಂಧಿಯವರ ವಿಗ್ರಹದ ಬಳಿ ರಾಷ್ಟ್ರಧ್ವಜಾರೋಹಣವನ್ನು ನೆನ್ನೆ ಏರ್ಪಡಿಸ ಮಾಡುತ್ತಿದ್ದಾಗ, ಅಲ್ಲಿ ಪಾಕಿಸ್ತಾನದ ಧ್ವಜವೊಂದನ್ನು ಯಾರೋ ಹಾರಿಸಿದ ಸಂಬಂಧವಾಗಿ ನಡೆದ ಘರ್ಷಣೆಯಲ್ಲಿ ೭೦ ಜನರಿಗೆ ತೀವ್ರವಾಗಿಯೂ ಮತ್ತು ೩೦ ಮಂದಿಗೆ ಅಲ್ಪವಾಗಿಯೂ ಗಾಯಗಳಾದವು. ಒಂದು ಭಾರಿ ಹೋಟೇಲು ಸೇರಿ ಒಟ್ಟು ೨೦ ಅಂಗಡಿಗಳನ್ನು ಸುಡಲಾಗಿದೆ. ಪಾಕಿಸ್ತಾನದ ಧ್ವಜವನ್ನು ಪಿ. ಎಸ್. ಪಿ. ಯವರು ಇಳಿಸಿದನಂತರ ಭಾರತದ ಧ್ವಜಾರೋಹಣವು ಶಾಂತವಾಗಿ ನಡೆದ ಮೇಲೆ ಘರ್ಷಣೆ ಆಯಿತು. ಪೊಲೀಸರು ಲಾಠಿ ಪ್ರಹಾರ ಮಾಡಿದರು. ಅಲ್ಲಿ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ.

ಬಿನ್ನಿ ಮಿಲ್ ಕಾರ್ಮಿಕರ ಪರವಾಗಿ ರಿಟ್ ಅರ್ಜಿ

ಸ್ವಂತ ಫೋನ್] ಬೆಂಗಳೂರು ೧೬

ಇಲ್ಲಿನ ಬಿನ್ನಿ ಮಿಲ್ ಕಾರ್ಮಿಕರ ಸಂಘದವರಿಗೂ ಗಿರಣಿ ಆಡಳಿತ ವರ್ಗದವರಿಗೂ ೧೯೫೩ನೇ ಇಸವಿ ಬೋನಸ್ಸಿನ ವಿಷಯವಾಗಿ ವ್ಯಾಜ್ಯವಿದ್ದು, ಶ್ರೀ ಬಿ. ಆರ್. ರಾಮಲಿಂಗಯ್ಯನವರ ನೇತೃತ್ವದಲ್ಲಿ ಕೈಗಾರಿಕಾ ನ್ಯಾಯ ಮಂಡಲಿಯವರು ಕೆಲವು ವಿಷಯಗಳ ಬಗ್ಗೆ ತೀರ್ಪನ್ನು ಕೊಟ್ಟು [illegible]ವನ್ನು ಹಾಗೆಯೇ ಉಳಿಸಲಾಗಿತ್ತು. [illegible] ವಿವರವನ್ನು ಕುರಿತು ಆಡಳಿತ ವರ್ಗದವರು ಆಕ್ಷೇಪಿಸಿದುದರಿಂದ ಸರ್ಕಾರದವರು ತೀರ್ಮಾನವಾಗದೆ ಉಳಿದಿದ್ದ ವಿಷಯಗಳನ್ನು ಶ್ರೀ ಎಚ್. ಗೋಪಾಲ ಪಂಡಿತರವರ ನೇತೃತ್ವದಲ್ಲಿ ಬೇರೊಂದು ಕೈಗಾರಿಕಾ ನ್ಯಾಯ ಮಂಡಲಿಕ್ಕೆ ಒಪ್ಪಿಸಿದ ಸಂಬಂಧದಲ್ಲಿ ಗಿರಣಿ ಕಾರ್ಮಿಕರ ಸಂಘದವರು ಹೈಕೋರ್ಟಿನಲ್ಲಿ ಸಲ್ಲಿಸಿದ ರಿಟ್ ಅರ್ಜಿಯನ್ನು ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ. ಮೇದಪ್ಪ ಮತ್ತು ಶ್ರೀ ಬಿ. ವಾಸುದೇವಮೂರ್ತಿಯವರು ಈ ದಿನ ಅಡ್ಮಿಟ್ ಮಾಡಿಕೊಂಡು, ಪ್ರತಿವಾದಿಗಳಾದ ಬಿನ್ನಿಮಿಲ್, ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮತ್ತು ಸರ್ಕಾರಗಳಿಗೆ ನೋಟೀಸು ಕೊಟ್ಟು, ಮುಂದೆ ವಿಚಾರಣೆ ಮಾಡುತ್ತಾರೆ.

ರಾಜಾಜಿ, ರಾಮನ್ ಮತ್ತು ರಾಧಾಕೃಷ್ಣನ್‌ರವರಿಗೆ ಭಾರತ ರತ್ನ ಪ್ರಶಸ್ತಿ

ಕೃಷ್ಣಮೆನನ್, ಲಕ್ಷ್ಮಣಸ್ವಾಮಿ ಮೊದಲಿಯಾರ್, ಸುಬ್ಬುಲಕ್ಷ್ಮಿಯವರಿಗೂ

ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ಅತ್ಯುನ್ನತ ಪ್ರಶಸ್ತಿಯಾದ ಭಾರತ ರತ್ನ ಎಂಬ ಬಿರುದನ್ನು ಮದ್ರಾಸಿನ ಮಾಜಿ ಮುಖ್ಯಮಂತ್ರಿ ಸಿ. ರಾಜಗೋಪಾಲಾಚಾರಿ, ಭಾರತದ ಉಪಾಧ್ಯಕ್ಷ ಎಸ್ ರಾಧಾಕೃಷ್ಣನ್, ಮತ್ತು ವಿಖ್ಯಾತ ವಿಜ್ಞಾನಿ ಡಾ॥ ಸಿ ವಿ ರಾಮನ್‌ರವರಿಗೆ ಕೊಟ್ಟಿದ್ದಾರೆ. ಈ ಪ್ರಶಸ್ತಿಯನ್ನು ಕೊಟ್ಟಿರುವುದು ಇದೇ ಮೊದಲ ಸಲ. ಸಾಹಿತ್ಯ, ವಿಜ್ಞಾನ ಮುಂತಾದುವುಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದವರಿಗೆ ಮಾತ್ರ ಇದನ್ನು ಕೊಡಲಾಗುವುದು

ಪದ್ಮ ವಿಭೂಷಣ ಎಂಬ ಬೇರೆಂದು ಬಿರುದಿನ ಮೂರು ವರ್ಗಗಳ ಪ್ರಶಸ್ತಿಗಳನ್ನೂ ಕೂಡ ಕೊಡಲಾಗಿದೆ. ೧ ನೇ ದರ್ಜೆಯ ಬಿರುದು ಲಂಡನ್ನಿನಲ್ಲಿ ಭಾರತದ ಹೈ ಕಮಿಷನರ್ ಬಿ ಜಿ ಖೇರ್, ವಿಶ್ವ ಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ವಿ. ಕೆ. ಕೃ ಮೆನನ್, ಸುಪ್ರಸಿದ್ಧ ಚಿತ್ರಲೇಖಕ ನಂದಲಾಲ್ ಬೋಸ್, ಮತ್ತು ವಿದ್ಯಾ ಪ್ರವೀಣರಾದ ಡಾ॥ ಜಕೀರ್ ಹುಸೇನ್‌ರವರಿಗೆ ದೊರೆತಿದೆ

ಎರಡನೇ ದರ್ಜೆಯ ಪದ್ಮ ವಿಭೂಷಣ ಪ್ರಶಸ್ತಿಯು ಕೆಳಗೆ ಕಂಡವರಿಗೆ ಬಂದಿದೆ - ಡಾ॥ ಹೆಚ್ ಜೆ ಭಾಭಾ ಎಸ್ ಎಸ್ ಭಾಟ್ನಗರ್, ಕಾಂಡ್ಲಾ ರೇವು ಯೋಜನೆ ಅಭಿವೃದ್ಧಿ ಕಮಿಷನರ್ ಜಿ ಎಂ ಗಣಪತಿ ಅಯ್ಯರ್, ಡಾ॥ ಜೆ ಸಿ ಘೋಷ್, ಹಿಂದಿ ಕವಿ ಮೈಥಿಲಿ ಶರಣಗುಪ್ತ, ಭಕ್ರಾ-ನಂಗಲ್ ಯೋಜನೆ ಚೀಫ್ ಇಂಜನಿಯರ್ ಆರ್ ಕೆ ಗಪ್ತ, ಭಾರತ ರೈಲುವೆಗಳ ಚೀಫ್ ಇಂಜನಿಯರ್ ಆರ್ ಆರ್ ಹಾಂಡಾ, ಡಾ॥ ಅಮರನಾಥ ಝಾ, ಎ ಎ ಖೋಸ್ಲಾ, ಡಾ॥ ಕೆ ಎಸ್ ಕೃಷ್ಣನ್, ಮಲಯಾಳದ ಕವಿ ವಲ್ಲತೋಳ್ ನಾರಾಯಣ ಮೆನನ್, ಮದ್ರಾಸ್ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರ್ ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್, ನಿವೃತ್ತ ಆಡಿಟರ್ ಜನರಲ್ ವಿ ನರಹರಿರಾವ್, ಆಯುರ್ವೇದ ವೈದ್ಯ ಸತ್ಯನಾರಾಯಣಶಾಸ್ತ್ರಿ, ಎಂ ಎಸ್ ಸುಬ್ಬುಲಕ್ಷ್ಮಿ, ದೇವಬಂದಿನ ಮೌಲನ ಹುಸೇನ್ ಮಾದ್ನಿ, ಉರ್ದು ಕವಿ ಜೋಷ ಮಲಿಹಾಬಾದಿ, ಅ ಭಾ ಖಾದಿ ಸಮಿತಿ ಅಧ್ಯಕ್ಷ ವಿ ಎಲ್ ಮೆಹತಾ, ಮತ್ತು ಕಲ್ಕತ್ತಾ ಕಾರ್ಪೊರೇಷನ್ [illegible] ರಾಯ್. ಮೂರನೇ ವರ್ಗದ ಪದ್ಮ ವಿಭೂಷಣ ಪ್ರಶಸ್ತಿಯು ೯೮ ಜನರಿಗೆ ದೊರೆತಿದೆ. ಆ ಪೈಕಿ ಆಶಾದೇವಿ ಆರ್ಯನಾಯಕಂ, ಶ್ರೀಮತಿ ಪೆರಿನ್ ಕ್ಯಾಪ್ಟನ್, ಅಚ್ಚಮ್ಮ ಮತ್ತಾಯ್, ಶಂಕರ್ಸ್ ವೀಕ್ಲಿ ಸಂಪಾದಕ ಶಂಕರಪಿಳ್ಳೆಯವರ ಇರುವರು

ಶಿಂಷಾ ಯೋಜನೆ ವಿಸ್ತರಣೆ ವಿಷಯದ ಪರ್ಯಾಲೋಚನೆ

ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಶಿಂಷಾ ವಿದ್ಯುಚ್ಛಕ್ತಿ ಯೋಜನೆಯ ವಿಸ್ತರಣೆ ಬಗ್ಗೆ ಕೇಂದ್ರದಿಂದ ಹಣ ಸಹಾಯ ಒದಗಿಸಲು ಕಷ್ಟವಾಗುವುದಿಲ್ಲವೆಂದು ಭರವಸೆಯಿತ್ತುದನ್ನು ಗಮನಿಸಿ, ಮೈಸೂರು ಸರ್ಕಾರದವರು ೩॥ ಕೋಟಿ ರೂ ವೆಚ್ಚ ತಗಲುವ ವಿಸ್ತರಣೆ ಯೋಜನೆಯನ್ನು ಪರಿಶೀಲನೆಗೆ ತೆಗೆದುಕೊಂಡಿರುತ್ತಾರೆ. ಮೈಸೂರು ಸರ್ಕಾರದವರು ಕೇಂದ್ರದ ಸಹಾಯವನ್ನು ಕೇಳಲಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಬೇಡರ ಕಣ್ಣಪ್ಪ ಚಿತ್ರ ಪ್ರದರ್ಶನದ ಶತ ದಿನೋತ್ಸವ

ಮೈಸೂರು ೧೬

ರಾಜಧಾನಿಯ ಒಪೇರಾ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ ಕರ್ನಾಟಕ ಫಿಲಂಸ್‌ರವರ ಬೇಡರ ಕಣ್ಣಪ್ಪ ಎಂಬ ಕನ್ನಡ ಚಿತ್ರ ಪ್ರದರ್ಶನದ ಶತ ದಿನೋತ್ಸವವು ಮೊನ್ನೆ ನಡೆಯಿತು. ದರ್ಬಾರ್ ಭಕ್ಷಿಯವರಾದ ಶ್ರೀ ಹೆಚ್ ಎಲ್ ದೇವರಾಜೆ ಅರಸಿನವರು ಅಧ್ಯಕ್ಷತೆ ವಹಿಸಿದ್ದರು

ಉಪಾಹಾರವನಂತರ ಶ್ರೀ ಎ ಕೃಷ್ಣಮೂರ್ತಿರಾವ್ ಭಾಷಣ ಮಾಡಿ ಕನ್ನಡ ಚಿತ್ರವು ೧೦೦ ದಿನಗಳ ವರೆಗೆ ನಡೆದಿರುವುದು ವಿಶೇಷವೆಂದು ಹೇಳಿದರು. ಶ್ರೀ ಕ ರಾ ಸುಬ್ಬರಾಯರು ಭಾಷಣ ಮಾಡಿ ಎಂಸ್ಟೆಯವರಿಗೆ ವಂದನೆಯನ್ನು ಕೋರಿದರು. ಕರ್ನಾಟಕ ಫಿಲಂಸ್ ಡೈರೆಕ್ಟರಾದ ಶ್ರೀ ದ ವಿ ಮುನಿಗೆಸ್ತನವರು ೧೦೦ ದಿನಗಳ ವರೆಗೆ ಯಶಸ್ವಿಯಾಗಿ ಚಿತ್ರವನ್ನು ಪ್ರದರ್ಶಿಸಿದ ದೆಸ್ಸೆಗಾಗಿ ಒಪೇರಾ ಟಾಕೀಸಿನ ಪ್ರೊಪ್ರೈಟರ್ ಶ್ರೀ ಎ ಟಿ ರಾಜಂರವರಿಗೆ ಅಧ್ಯಕ್ಷರ ಮೂಲಕ ಗುರಾಣಿಯೊಂದನ್ನು ಅರ್ಪಿಸಿದರು. ಶ್ರೀ ಎ ಟಿ ರಾಜಂರವರು ಶ್ರೀ ಮುನಿಗೆಸ್ತನವರಿಗೆ ಬೆಳ್ಳಿಯ ಬಟ್ಟಲನ್ನು ಅಧ್ಯಕ್ಷರ ಮೂಲಕ ಒಪ್ಪಿಸಿದರು

ಅಧ್ಯಕ್ಷರು ಭಾಷಣ ಮಾಡಿ, ಬೇಡರ ಕಣ್ಣಪ್ಪ ಚಿತ್ರಕ್ಕೆ ಯಶಸ್ಸನ್ನು ಕೋರಿದರು

ಗಾಂಧೀ ವಿಚಾರ ಗೋಷ್ಠಿಯ ಅಧಿಕಾರ ವರ್ಗ

ರಾಜಧಾನಿಯ ಮಹಾರಾಜಾ ಕಾಲೇಜಿನ ಗಾಂಧೀ ವಿಚಾರ ಗೋಷ್ಠಿಯ ಸರ್ವ ಸದಸ್ಯರ ಸಭೆಯು ಕಳೆದ ೧೧ನೇ ತಾ॥ ನಡೆದು, ನೂತನ ವರ್ಷದ ಅಧಿಕಾರ ವರ್ಗದ ಚುನಾವಣೆಗಳಾದುವು. ಪ್ರೊ॥ ಟಿ ಎ ಪುರುಷೋತ್ತಮರವರು ಅಧ್ಯಕ್ಷರಾಗಿಯೂ ಶ್ರೀ ಎಂ ಯಾದವ ಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಹೆಚ್ ಎ ಮಹದೇವಯ್ಯ ಮತ್ತು ಸಿ ಶಿವರುದ್ರಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ. ಶ್ರೀಮತಿ ಸಿ ಪಾರ್ವತಮ್ಮ, ಶ್ರೀಗಳಾದ ಕಾಂತಿಲಾಲ್, ಕಟ್ಟೀಗೌಡರು, ಕಣ್ಣಾರಾಮುಗೌಡರು ಮತ್ತು ಬಿ ಆರ್ ವೆಂಕಟರಾಮಯ್ಯನವರು ಸದಸ್ಯರುಗಳಾಗಿರುತ್ತಾರೆ. ತಿಂಗಳಿಗೊಮ್ಮೆ ಹಳ್ಳಿಗಳಲ್ಲಿ ಸಮಾಜ ಸೇವಾ ಕಾರ್ಯವನ್ನೂ, ದಸರಾ, ಕ್ರಿಸ್ಮಸ್, ಬೇಸಿಗೆ ರಜಾಗಳಲ್ಲಿ ವಿಚಾರ ಗೋಷ್ಠಿ ಶಿಬಿರಗಳನ್ನೂ ನಡೆಸಬೇಕೆಂದು ನಿರ್ಧರಿಸಲಾಗಿದೆ

ಕಾಲೇಜು ಮನಶ್ಶಾಸ್ತ್ರ ಸಂಘದ ಅಧಿಕಾರ ವರ್ಗ

ಇಲ್ಲಿನ ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಸಂಘದ ಅಧಿಕಾರ ವರ್ಗದ ಚುನಾವಣೆಯು ಕಳೆದ ೧೨ ನೇ ತಾ॥ ನಡೆದು ಶ್ರೀ ಎಸ್ ಎಲ್ ತಿಮ್ಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಎಸ್ ಗುಂಡಯ್ಯನವರು ಕಾರ್ಯದರ್ಶಿಯಾಗಿಯೂ ಶ್ರೀ ಮುದ್ದುವೀರೇಶ್ವರಪ್ಪನವರು ಉಪಕಾರ್ಯದರ್ಶಿಯಾಗಿಯೂ ಚುನಾಯಿತರಾಗಿರುತ್ತಾರೆ

ದಸರಾ ವಸ್ತು ಪ್ರದರ್ಶನದ ಖಾಸಗಿ ಅಧಿಕಾರಿಗಳು

ರಾಜಧಾನಿಯ ದಸರಾ ವಸ್ತು ಪ್ರದರ್ಶನ ಸಮಿತಿಯ ಗೌರವ ಉಪಾಧ್ಯಕ್ಷರನ್ನಾಗಿ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರನ್ನೂ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಪಿ ಎಸ್ ಕೃಷ್ಣಯ್ಯರ್‌ರವರನ್ನೂ ನೇಮಿಸಲಾಗಿದೆ

ರಷ್ಯದೊಡನೆ ಯುದ್ಧಕ್ಕೆ ಐಸೆನ್‌ಹೋವರರ ವಿರೋಧ

ಕಮ್ಯೂನಿಸ್ಟ್ ರಾಷ್ಟ್ರಗಳೊಡನೆ ಯುದ್ಧ ನಡೆಸಬೇಕೆಂಬ ಭಾವನೆಯನ್ನು ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರ ಅಲ್ಲಗಳೆದಿರುತ್ತಾರೆ. ಕಮ್ಯೂನಿಸ್ಟರ ಆಕ್ರಮಣಕ್ಕೆ ಬಗ್ಗದಂತಹ ಸಮಾಜವನ್ನು ಸ್ವತಂತ್ರ ಜಗತ್ತು ಸೃಷ್ಟಿಸಿದರೆ ಆಗ ಯುದ್ಧವೇ ಆಗುವ ಭೀತಿಯಿರುವುದಿಲ್ಲವೆಂದು ಅವರು ತಿಳಿಸಿರುವರು. ರಷ್ಯದೊಡನೆ ರಾಜತಾಂತ್ರಿಕ ಸಂಬಂಧ ತ್ಯಾಗದ ವಿಷಯವನ್ನು ಅವರು ತಿರಸ್ಕರಿಸಿರುವರು

ಮಹಿಳಾ ಅಧ್ಯಾಪಕರ ತರಗತಿಗೆ ವಿದ್ಯಾರ್ಥಿಗಳ ಬಹಿಷ್ಕಾರ

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಬಿ ಎ ತರಗತಿಯ ಶ್ರೀ ಷೇಕ್ಸ್‌ಪಿಯರ್ ಬಗ್ಗೆ ಪಾಠವನ್ನು ಹೇಳುವ ಇಂಗ್ಲಿಷ್ ಪ್ರಾಧ್ಯಾಪಕಿ ಶ್ರೀಮತಿ ಜಿ ಪಾರ್ಥಸಾರಥಿಯವರು ಕೀಳದನವೆಂಬ ಆರೋಪದ ಮೇಲೆ ೧೫ನೇ ತಾ॥ ತರಗತಿಗೆ ೧೦ ನಿಮಿಷ ನಿಧಾನವಾಗಿ ಬಂದುದರ ಕಾರಣಕ್ಕಾಗಿ ವಿದ್ಯಾರ್ಥಿಗಳು ೧೫, ೧೬ ಮತ್ತು ೨೦ನೇ ತಾ॥ ಆ ತರಗತಿಗೆ ಹೋಗಲಿಲ್ಲವೆಂದು ವರದಿಯಾಗಿದೆ. ಇಲಾಖಾ ಚರ್ಚೆಯೊಂದನ್ನು ಮುಗಿಸಿಕೊಂಡು ಅವರು ಸ್ವಲ್ಪ ನಿಧಾನವಾಗಿ ಬಂದಾಗ ವಿದ್ಯಾರ್ಥಿಗಳು ಅಶಾಂತರಾಗಿ ಕೂಗುವುದು, ಹಾಸ್ಯ ಮಾಡುವುದು ಮುಂತಾದುವುಗಳಲ್ಲಿ ನಿರತರಾದರೆಂದೂ, ಆದರೆ ವಿದ್ಯಾರ್ಥಿನಿಯರು ಸುಮ್ಮನೆ ಕುಳಿತಿದ್ದರೆಂದೂ ಹೇಳಲಾಗಿದೆ. ಇದನ್ನು ಕಂಡು ವಿದ್ಯಾರ್ಥಿಗಳೆಲ್ಲರೂ ಹಾಜರಿ ಬಗ್ಗೆ ನಿಂತು ಉತ್ತರ ಕೊಡುವಂತೆ ಪ್ರಾಧ್ಯಾಪಕಿಯವರು ಮಾಡಿದರೆಂದೂ, ಮಹಿಳೆಯರು ಕುಳಿತೇ ಉತ್ತರವಿತ್ತರೆಂದೂ ಹೇಳಲಾಗಿದೆ. ೨೪ನೇ ತಾ॥ ಕಾಲೇಜಿನ ಪ್ರಿನ್ಸಿಪಾಲರು ವಿದ್ಯಾರ್ಥಿಗಳೊಡನೆ ಮಾತನಾಡಿದನಂತರ ಅವರುಗಳು ಮಾಮೂಲಿನಂತೆ ತರಗತಿಗಳಿಗೆ ಬರಲು ಪ್ರಾರಂಭಿಸಿದರು- ಎಂದು ಮದ್ರಾಸ್ ಶಾಸನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ವಿದ್ಯಾ ಮಂತ್ರಿ ಸುಬ್ರಹ್ಮಣ್ಯಂರವರು ತಿಳಿಸಿ, ಅಂದು ಮುಷ್ಕರ ನಡೆಯಲಿಲ್ಲವೆಂದು ಹೇಳಿರುತ್ತಾರೆ

ನವಯುಗ-ವಾರ್ಷಿಕ ಸಂಚಿಕೆ

ಲೋಕ ಸಭೆ ಸದಸ್ಯರೂ, ಕರ್ನಾಟಕ ಕಾಂಗ್ರೆಸ್ ಮುಖಂಡರೂ ಆದ ಶ್ರೀ ಟಿ ಆರ್ ನೇಸ್ವಿಯವರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಹೊರಡುತ್ತಿರುವ ನವಯುಗ ಕನ್ನಡ ದಿನಪತ್ರಿಕೆಯ ವಾರ್ಷಿಕ ಸಂಚಿಕೆಯ ಪ್ರತಿಯೊಂದನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಸಂಚಿಕೆಯ ಮುಖಪತ್ರವು ಗಾಂಧೀಜಿಯವರ ಚಿತ್ರ ಮತ್ತು ಪುಸ್ತವನ್ನು ಪೂಜೆ ಮಾಡುತ್ತಿರುವ ಸ್ತ್ರೀ ಭಂಗಿಯಲ್ಲಿರುವ ಮತ್ತು ಕೈ ರಾಟೆಯಲ್ಲಿ ನೂಲುತ್ತಿರುವ ಮೂವರು ಲಲನೆಯರ ಚಿತ್ರಗಳವೆ. ಸಂಚಿಕೆಗೆ ಪುದುಚೇರಿ ಅರವಿಂದಾಶ್ರಮದ ಮಾತೆಯು ಆಶೀರ್ವಾದ ತಂತಿಯನ್ನು ಕಳುಹಿಸಿರುತ್ತಾರೆ. ನವ ಭಾರತದ ದಾರಿದೀಪಗಳೆಂಬ ಲೇಖನದಲ್ಲಿ ಭಾರತದ ಉಜ್ವಲ ವ್ಯಕ್ತಿಗಳಾದ ರಾಜೇಂದ್ರ ಬಾಬು ಜವಹರ್‌ಲಾಲ್ ನೆಹರೂ, ರಾಧಾಕೃಷ್ಣನ್, ರಾಜಾಜಿ, ವಿಜಯಲಕ್ಷ್ಮಿ ಮುಂತಾದ ನಾಯಕರ ಬಗ್ಗೆ ವಿವರಗಳನ್ನು ಕೊಡಲಾಗಿದೆ. ಭಾರತದ ರಾಜ್ಯ ಘಟನೆಯನ್ನು ಚಿತ್ರಿಸುವ ನಕ್ಷೆ ಮುಕ್ತ ಕಣ್ಣಿಗೆ ಕಟ್ಟುವ ವ್ಯಾಂಗ್ಯ ಚಿತ್ರ ಇತ್ಯಾದಿ ಇವೆ. ಇದಲ್ಲದೆ ಇಂದಿನ ಸಮಸ್ಯೆಗಳನ್ನು ಕುರಿತು ನಾನಾ ವಿಷಯಗಳೂ ಅಡಕವಾಗಿವೆ. ಕನ್ನಡಾಭಿಮಾನಿಗಳಿಗೂ ಕರ್ನಾಟಕ ಪ್ರೇಮಿಗಳಿಗೂ ಇದೊಂದು ಕೈದೀವಿಗೆಯಾಗಿದೆ. ಬೆಲೆ ೦-೧೨-೦

ಜಗದಂಬಾ ಶಿಶುವಿಹಾರ

585 ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶು ವಿಹಾರದಲ್ಲಿ ಮಾಂಟಿಸ್ಸೋರಿ ಮತ್ತು ಕಿಂಡರ್‌ಗಾರ್ಟನ್ ವಿಧಾನದಲ್ಲಿ ಮಕ್ಕಳಿಗೆ ಮೂರನೇ ವಯಸ್ಸಿನಿಂದ ಆಟ ಪಾಟಗಳೊಡನೆ ಓದು ಬರಹವನ್ನು ಕಲಿಸಿ ೬ ನೇ ವಯಸ್ಸಿಗೆ ಮಿಡಲ್ ಫಸ್ಟ್‌ಫಾರಮ್ ತರಗತಿಗೆ ಸೇರಲು ಅರ್ಹರನ್ನಾಗಿ ಮಾಡಲಾಗುತ್ತದೆ

ಡಿ. ಕೃಷ್ಣಮೂರ್ತಿ,
ಡೈರೆಕ್ಟರ್

Edited, Printed and Published by A R Nagarajan at Sadhvi Press, D.Subbiah Road, Mysore

ದೆಹಲಿ ಕೆಂಪು ಕೋಟೆ ಮೇಲೆ ರಾಷ್ಟ್ರ ಧ್ವಜಾರೋಹಣ

ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಪ್ರಧಾನಿ ನೆಹರೂರವರು ನೆನ್ನೆ ಬೆಳಿಗ್ಗೆ ದೆಹಲಿಯಲ್ಲಿ ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜವನ್ನು ಆರೋಹಣ ಮಾಡಿದರು. ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ೧ ಲಕ್ಷಕ್ಕೂ ಹೆಚ್ಚು ಜನರು ಜೈ ಹಿಂದ್ ಘೋಷವನ್ನು ಮಾಡಿದರು. ಅದಕ್ಕೆ ಮುಂಚೆ ನೆಹರೂರವರು ರಾಜಘಾಟಿಗೆ ತೆರಳಿ ಅಲ್ಲಿ ಗಾಂಧೀಜಿಯವರ ಸಮಾಧಿಗೆ ಪುಷ್ಪಹಾರವನ್ನು ಸಮರ್ಪಿಸಿದರು

ರಾಷ್ಟ್ರಾಧ್ಯಕ್ಷರಿಂದ ಧರ್ಮಶಾಲಾ ಶಂಕು ಸ್ಥಾಪನೆ

ರಾಷ್ಟ್ರಾಧ್ಯಕ್ಷರು ಮೊನ್ನೆ ಚನ್ನಪಟ್ಟಣ ತಾಲ್ಲೂಕು ಕೆಂಗಲ್ ಹನುಮಂತರಾಯನ ಗುಡಿ ಬಳಿ ಬೋರಯ್ಯ ಬಸವಯ್ಯನವರ ಹೆಸರಿನಲ್ಲಿ ನಿರ್ಮಿಸಲಾಗಲಿರುವ ಧರ್ಮ ಶಾಲೆಯ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ರಾಷ್ಟ್ರಾಧ್ಯಕ್ಷರು ಮಾತನಾಡಿ, ಹಿಂದೆ ದೇವಾಲಯಗಳನ್ನು ಹಿಂದುಗಳೂ, ಮಸೀದಿಗಳನ್ನು ಮುಸ್ಲಿಮರೂ ಧರ್ಮಾರ್ಥವಾಗಿ ಕಟ್ಟುತ್ತಿದ್ದರೆಂದೂ, ಈಗ ಎರಡು ಧರ್ಮಗಳು ಬೇರೆ ರೂಪವನ್ನು ತಾಳುತ್ತಿರುವುವೆಂದೂ ಹೇಳಿ, ಧರ್ಮ ಶಾಲೆಗಳನ್ನು ಕಟ್ಟಿಸಿ ಹಿಂದಿನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿರುವುದಕ್ಕೆ ಸಂತೋಷವನ್ನು ಸೂಚಿಸಿದರು

ಶ್ರೀ ಎಂ ಬಿ. ಬಸವಯ್ಯನವರು ರಾಷ್ಟ್ರಾಧ್ಯಕ್ಷರಿಗೆ ಚಿನ್ನದ ತಟ್ಟೆಯೊಂದನ್ನು ಮೈಸೂರು ಗಂಧದ ಮರದ ಕರಂಡದಲ್ಲಿ ಅರ್ಪಿಸಿದರು

ಬೆಳಗೊಳದಲ್ಲಿ ಸ್ವಾತಂತ್ರ್ಯೋತ್ಸವ

ಬೆಳಗೊಳ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಂಪನಿಯ ನೌಕರರ ಕ್ಲಬ್ಬು ಮತ್ತು ಮಹಿಳಾ ಸಮಾಜದವರು ನೆನ್ನೆ ಸ್ವಾತಂತ್ರ್ಯ ದಿನಾಚರಣೆಯನ್ನು ಜನರಲ್ ಮ್ಯಾನೇಜರ್ ಶ್ರೀ ಜಿ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು

ಪುಸ್ತಕ ಭಂಡಾರಕ್ಕೆ ಉದಾರ ದಾನ

ಕೃಷ್ಣರಾಜನಗರದಲ್ಲಿರುವ ಮಹಾತ್ಮರ ಶಿಕ್ಷಣ ಸಮಿತಿ ಪುಸ್ತಕ ಭಂಡಾರದ ಅಭಿವೃದ್ಧಿಗಾಗಿ ವಿವಿಧೋದ್ದೇಶ ಸಹಕಾರ ಸಂಘಗಳ ಅಧ್ಯಕ್ಷರಾದ ಶ್ರೀ ಶ್ರೀಕಂಠಯ್ಯನವರೂ ಮತ್ತು ಸದಸ್ಯರೂ ೧೦೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ಜೂಜಾಡುತ್ತಿದ್ದುದು ಪತ್ತೆ

ರಾಜಧಾನಿಯ ದೇವರಾಜಾ ಮಾರ್ಕೆಟ್ ಬಳಿ ಮಾಂಸದ ಅಂಗಡಿ ಹಿಂಭಾಗದಲ್ಲಿ ನೆನ್ನೆ ಮಧ್ಯಾಹ್ನ ಸಿರೆಮ್ಮೋಹರಾವ್ ಮತ್ತು ೬ ಜನರು ರಾಜಸಾಲ ಜೂಜಾಡುತ್ತಿದ್ದುದನ್ನು ದೇವರಾಜಾ ಪೋಲೀಸರು ಪತ್ತೆ ಹಚ್ಚಿ ಅವರ ಬಳಿ ಇದ್ದ ರೂ. ೧೮-೫-೦ ಯನ್ನು ವಶಪಡಿಸಿಕೊಂಡು ಅವರುಗಳ ಮೇಲೆ ಮೊಕದ್ದಮೆ ಹೂಡಿರುವರು

HOUSE FOR SALE

Spacious bungalow "TULISI VIHAR" in Narayana Sastry road Lakshmipuram, ready for sale. Rs 45,000 or near offer

ಲಕ್ಷ್ಮಿ ★ ಈ ರಾತ್ರಿ ಪ್ರತಿದಿನ 3 ಆಟಗಳು
ಶಕ್ತಿರಾಜಾರವರ ತಮಿಳು ಚಿತ್ರ
ಮಲೈಕ್ಕಳ್ಳನ್

ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ನಗರದ ರಾಮಾನುಜಾ ರಸ್ತೆಯಲ್ಲಿರುವ 65 ನೇ ನಂಬರಿನ ಮುನಿಸಿಪಲ್ ಮಾದರಿ ಮನೆಯು ಮಾರಾಟಕ್ಕಿದೆ.

ವಿವರಗಳಿಗೆ ಸಾಧ್ವಿ ಪತ್ರಿಕಾಲಯದಲ್ಲಿ ವಿಚಾರಿಸಿರಿ

ರಿಜಿಸ್ಟರ್ ನಂ 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಒಂದಿನ ಪತ್ರಿಕೆ 3 ಕಾಸು

ಸಂಪುಟ : ೨೩] SADHVI . TUESDAY 17-8-1954 ಮೈಸೂರು ಮಂಗಳವಾರ ೧೭-೮-೧೯೫೪ [ಸಂಚಿಕೆ ೧೫

ಗೋವ ರೇವು ಮೇಲೆ ಪೋರ್ಚುಗಲ್ಲಿನ ಯುದ್ಧ ನೌಕೆ ಧಾಳಿ

ಗೋವಾ ರೇವಿನ ಮೇಲೆ ಪೋರ್ಚು ಗೀಸರ ಯುದ್ಧ ನೌಕೆ ಧಾಳಿ

೯೦ ಜನರ ಬಂಧನ

ಗೋವಾ ಪ್ರದೇಶದ ತಿರಿಕೋಲ್ ಎಂಬ ರೇವಿನ ಮೇಲೆ ಪೋರ್ಚುಗೀಸರ ಯುದ್ಧ ನೌಕೆಯ ಫಿರಂಗಿಗಳು ನೆನ್ನೆ ಧಾಳಿ ಮಾಡಿರುವೆಂದೂ, ಮೆಷಿನ್ ಗನ್‌ಗಳನ್ನು ಹಾರಿಸುತ್ತಾ ೧೨೫ ಮಂದಿ ಪೋರ್ಚುಗೀಸ್ ಸೈನಿಕರು ರೇವಿಗೆ ನುಗ್ಗಿದರೆಂದೂ, ವರದಿಯಾಗಿದೆ. ಮೊನ್ನೆ ತಾನೆ ಗೋವಾ ರಾಷ್ಟ್ರೀಯ ಕಾಂಗ್ರೆಸ್ಸಿನ ಸತ್ಯಾಗ್ರಹಿಗಳು ಆ ಊರನ್ನು ವಿಮೋಚನೆಗೊಳಿಸಿದ್ದರು. ಅದನ್ನು ಪುನಃ ಆಕ್ರಮಿಸಿಕೊಳ್ಳಲು ಸೈನಿಕರು ನುಗ್ಗಿರುತ್ತಾರೆ. ಯುದ್ಧ ನೌಕೆಯು ದೂರದಿಂದ ಖಾಲಿ ಷೆಲ್ಲುಗಳನ್ನು ಹಾರಿಸಿದುದರಿಂದ ನಷ್ಟವೇನೂ ಆಗಲಿಲ್ಲ.

ಕೋಟೆಯ ಮೇಲೆ ಸ್ವಯಂಸೇವಕರು ಹಾರಿಸಿದ್ದ ಭಾರತದ ಧ್ವಜವನ್ನು ಕೆಳಗಿಳಿಸಿ, ಪೋರ್ಚುಗೀಸರ ಧ್ವಜವನ್ನು ಏರಿಸಲಾಯಿತು. ೯೦ ಜನರ ಗತಿ ಏನೆಂಬುದು ತಿಳಿಯಲಿಲ್ಲ. ಸಾವಂತವಾಡಿ ಗಡಿ ಬಳಿ ಟಾರ್ಸ್ಟಂ ಕಡೆಯಿಂದಲೂ ನುಗ್ಗಿದ ೩೦ ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಲಾಗಿದೆ. ಯುದ್ಧ ನೌಕೆಯು ರೇವು ಬಳಿಯೇ ಸಂಜೆ ವರೆಗೂ ಇದ್ದುದಾಗಿ ವರದಿಯಾಗಿದೆ. ಸತ್ಯಾಗ್ರಹಿಗಳು ಕೋಟೆಗೆ ಹೋದಾಗ ಪೊಲೀಸರು ಕರೆದು ಬಂದರೆಂದೂ, ನಂತರ ಅವರನ್ನು ಗಡಿಯಲ್ಲಿದ್ದ ಭಾರತೀಯ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರೆಂದೂ ಹೇಳಲಾಗಿದೆ.

ಗೋವಾದ ಸಾಂಗ್ವೆಂ ತಾಲ್ಲೂಕಿನ ಟಾಲ್ಮಂ, ಡಾಗೇಂ ಮತ್ತು ಟಿಮೂರಿ ಎಂಬ ೩ ಹಳ್ಳಿಗಳ ವಿಮೋಚನೆಯಾಗಿದೆ. ಹಳ್ಳಿಗಳಲ್ಲಿದ್ದ ಗೌಡ ವರ್ಗದವರು ಸತ್ಯಾಗ್ರಹಿಗಳಿಗೆ ಸ್ವಾಗತ ಬಯಸಿ, ಭಾರತ ರಾಷ್ಟ್ರಧ್ವಜವನ್ನು ಹಾರಿಸಿದರು.

ಭಾರತ ಧ್ವಜಗಳನ್ನೂ, ಪೋರ್ಚುಗೀಸರಿಗೆ ವಿರೋಧ ಸೂಚಿಸುವ ಬೋರ್ಡುಗಳನ್ನೂ ಹಿಡಿದು ಗಡಿಯೊಳಗೆ ಪ್ರವೇಶಿಸಿದ ೯೦ ಜನರನ್ನು ಮೊನ್ನೆ ಬಂಧಿಸಲಾಯಿತು.

ಕಗಡೂರುರವರ ಮತ್ತು ರಾಮಯ್ಯನವರ ಉಪವಾಸವೇ!

ಮೈಸೂರು ೧೬

ಮೊನ್ನೆ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಶ್ರೀ ಕಗಡೂರು ರಾಮಚಂದ್ರರಾಯರು ಮತ್ತು ಶ್ರೀ ಎ ಎಸ್ ರಾಮಯ್ಯನವರು ೧೮ ಜನ ಪ್ರಮುಖರು ಮತ್ತು ಮೈಸೂರು ಮಂತ್ರಿಮಂಡಲಕ್ಕೆ ಮನವಿಯೊಂದನ್ನು ಸಲ್ಲಿಸಿ, ಇಲ್ಲಿನ ಪೌರಸಭೆಯವರು ರಾಜ್ಯಾಂಗವನ್ನು ಉಲ್ಲಂಘಿಸುತ್ತಿರುವುದನ್ನು ತಪ್ಪಿಸಬೇಕೆಂದೂ, ಹಾಗೆ ಮಾಡದೆ ತಮಗೆ ಪೂರ್ಣ ನಿರಾಶೆಯಾದರೆ, ಪೌರಸಭೆಯ ಮುಂದೆ ತಾವುಗಳು ಉಪವಾಸ ಪ್ರತವನ್ನು ಆಚರಿಸುವುದಾಗಿಯೂ ಹೇಳಿರುತ್ತಾರೆ.

★ಸ್ವಾತಂತ್ರ್ಯ ದಿನೋತ್ಸವದ ಶುಭಾಶಯವನ್ನು ಕೋರಿ ನಮಗೆ ಆನಂದ ಪಬ್ಲಿಕ್ ಪ್ರೆಸ್ಸಿನ ಶ್ರೀ ಎಂ ಎಸ್ ಚಂದ್ರಶೇಖರಶೆಟ್ಟಿಯವರ್, ಅನಿಲ್ಮ ದಾವಿಸ್ಟರಾದ ಶ್ರೀ ಹೆಚ್ ಎಸ್ ವೆಂಕಟರಾವ್ ಮತ್ತು ಶ್ರೀ ಎಂ ಟಿ ಅನಂತರಾಮಯ್ಯನವರು ಕಳುಹಿಸಿರುವ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸುತ್ತೇವೆ.

ಸಂಸ್ಥಾನದಿಂದ ೨೫,೦೦೦ ಟನ್ ಧಾನ್ಯಕೊಳ್ಳಲು ಕೇಂದ್ರದ ಒಪ್ಪಿಗೆ

ಬೆಂಗಳೂರು ೧೬

ಮೈಸೂರು ಸರ್ಕಾರದವರು ತಮ್ಮ ಬಳಿ ಇರುವ ೨೫ ಸಾವಿರ ಟನ್ ಹೆಚ್ಚಿನ ಧಾನ್ಯವನ್ನು ಕೊಂಡುಕೊಳ್ಳುವಂತೆ ಕೇಂದ್ರ ಸರ್ಕಾರದವರನ್ನು ಪ್ರಾರ್ಥಿಸಿದ ಸಂಬಂಧದಲ್ಲಿ ಕೇಂದ್ರದವರು ಅದಕ್ಕೆ ಒಪ್ಪಿರುವರೆಂದು ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ತಿಳಿಸಿದ್ದಾರೆ.

ಸಂಸ್ಥಾನದಲ್ಲಿರುವ ಕೇಂದ್ರ ಪೋಲೀಸ್ ಅಧಿಕಾರಿಗೆ ಪದಕ

ಬೆಂಗಳೂರಿನಲ್ಲಿರುವ ಸೆಂಟ್ರಲ್ ಡೆಪ್ಯುಟಿ ಇಂಟೆಲಿಜನ್ಸ್ (ಸಿ ಐ ಡಿ) ಅಧಿಕಾರಿ ಶ್ರೀ ಗ್ಯಾಸ್ಪರ್ ಗಿಲ್ಬರ್ಟ್ ಮಾರ್ಟಿಸ್‌ರವರಿಗೆ ರಾಷ್ಟ್ರಾಧ್ಯಕ್ಷರು ಸ್ವಾತಂತ್ರ್ಯ ದಿನೋತ್ಸವದ ಸಂಬಂಧದಲ್ಲಿ ಪೋಲೀಸ್ ಪದಕವನ್ನು ದಯಪಾಲಿಸಿರುತ್ತಾರೆ.

ಗೋವಾ ಮೇಲೆ ಸಾರ್ವಭೌಮತ್ವ ಉಳಿಸಿಕೊಳ್ಳಲು ಪ್ರಾರ್ಥನೆ

ಗೋವಾದಲ್ಲಿ ಪೋರ್ಚುಗೀಸರ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವ ಬಗ್ಗೆ ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್ನಿನಲ್ಲಿ ಸಾವಿರಾರು ಮಂದಿ ಪೋರ್ಚುಗೀಸರು ೭೦ ಚರ್ಚುಗಳು ಮತ್ತು ಕ್ರೈಸ್ತರ ಮಠಗಳಲ್ಲಿ ಕಳೆದ ಶನಿವಾರ ರಾತ್ರಿ ವಿಶೇಷ ಪೂಜೆ, ಪ್ರಾರ್ಥನೆ ಮತ್ತು ಜಾಗರಣೆಗಳನ್ನು ನಡೆಸುವ ವ್ಯವಸ್ಥೆಯಾಗಿದ್ದಿತು. ಸೆಂಟ್ ಎವಿಯರ್‌ರವರ ಅವಶೇಷದಿಂದ ಕೂಡಿದ ಪೆಟ್ಟಿಗೆಯನ್ನು ಹೊತ್ತು ಮೆರವಣಿಗೆ ನಡೆಸಲಾಯಿತೆಂದೂ ಹೇಳಲಾಗಿದೆ.

ಓಟರು ಪಟ್ಟಿಯ ಮುದ್ರಣದ ಬಗ್ಗೆ ಪಕ್ಷಪಾತವೇ?

ಓಟರುಗಳ ಪಟ್ಟಿ ಮುದ್ರಣ ಕಾರ್ಯವನ್ನು ಸರ್ಕಾರದವರು ಖಾಸಗಿ ಮುದ್ರಣಾಲಯಗಳಿಗೆ ವಹಿಸುತ್ತಿರುವರಷ್ಟೆ? ಬೇರೆ ಬೇರೆ ಜಿಲ್ಲೆಗಳ ಓಟರುಗಳ ಪಟ್ಟಿಯನ್ನೂ ಅಷ್ಟು ಹೆಚ್ಚಾಗಿ ಬೆಂಗಳೂರು ಮುದ್ರಣಾಲಯಗಳಿಗೆ ಕೊಡಲಾಗುತ್ತಿದೆ. ಈ ಸಾರಿ ಮೈಸೂರು ಜಿಲ್ಲಾ ಓಟರು ಪಟ್ಟಿಯನ್ನೂ ಮೈಸೂರು ನಗರದಲ್ಲಿರುವ ಮುದ್ರಣಾಲಯಗಳನ್ನು ಬಿಟ್ಟು ಬೆಂಗಳೂರಿನವರುಗಳಿಗೆ ಅಧಿಕಾರಿಗಳು ಕೊಡಲಿಚ್ಛಿಸಿರುವುದು ಶೋಚನೀಯ. ಅದನ್ನು ಕೂಡಲೇ ಪ್ರಯತ್ನಿಸಬೇಕು ಮತ್ತು ಮೈಸೂರು ಜಿಲ್ಲಾ ಓಟರು ಪಟ್ಟಿ ಮುದ್ರಣವು ಇಲ್ಲಿನವರಿಗೇ ದೊರೆಯುವಂತೆ ಮಾಡಬೇಕೆಂದು ಇಲ್ಲಿನ ಮುದ್ರಣಾಲಯದ ಶ್ರೀ ಕೆ ಸುಬ್ಬರಾಯರು ಪತ್ರ ಬರೆದು ಕೇಳಿರುತ್ತಾರೆ. ಈ ಬಗ್ಗೆ ರಾಜಧಾನಿಯ ಮುದ್ರಣಾಲಯಗಳ ಮಾಲೀಕರು ಮುಖ್ಯಮಂತ್ರಿಗಳಿಗೂ ಸ್ಥಾನಿಕ ಮಂತ್ರಿಯವರಿಗೂ ಪ್ರಾರ್ಥನಾ ಪತ್ರವನ್ನು ಕಳುಹಿಸಿದ್ದಾರೆ.

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ

ರಾಜಧಾನಿಯ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಮಠದಲ್ಲಿ ಶ್ರೀ ರಾಯರ ಆರಾಧನೆ ಪ್ರಯುಕ್ತ ಮೊನ್ನೆ ರಾತ್ರಿ ವಿದ್ವಾಂಸ ಆರ್. ಶ್ರೀನಿವಾಸರವರ ಗಾಯನವು ವಿ|| ಹೆಚ್ ವಿ ಕೃಷ್ಣರಾಯರ ಪಿಟೀಲು ಮತ್ತು ವಿ|| ಗೋಪಾಲರಾಯರ ಮೃದಂಗದೊಡನೆ ಸುಪ್ರಸಿದ್ಧವಾಗಿ ನಡೆಯಿತು. ಈ ರಾತ್ರಿ ೮-೩೦ಕ್ಕೆ ಅ|| ವಿ|| ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ಕಛೇರಿಯು ಏರ್ಪಾಡಾಗಿದೆ.

ರಾಜಕುಮಾರಿ ಪ್ರಭಾವತಿ ರಾಜೆಯವರ ಭಾಷಣಗಳು

ಮೈಸೂರು ೧೬

ವ್ಯಾಖ್ಯಾನ ವಾಗೀಶ್ವರಿ ರಾಜಕುಮಾರಿ ಪ್ರಭಾವತಿ ರಾಜೆಯವರು ರಾಜಧಾನಿಗೆ ಆಗಮಿಸಿ ಇದೇ ೨೧ ನೇ ತಾ|| ರವಿವಾರ "ಶ್ರೀ ಕೃಷ್ಣ ಜನ್ಮ" ಎಂಬ ವಿಷಯ ವಾಗಿ ಕೀರ್ತನ ಕಾಲಕ್ಷೇಪವನ್ನೂ, ೨೨ ನೇ ತಾ|| ಭಾನುವಾರ ಉಪನ್ಯಾಸವನ್ನೂ ಮಾಡ ಮತರಾಗಿದ್ದಾರೆ. ವಿವರಗಳನ್ನು ಮುಂದೆ ತಿಳಿಸಲಾಗುವುದು.

ಜೈಹಿಂದ್ ಕ್ರಿಕೆಟ್ ಕ್ಲಬ್ಬಿನ ವಾರ್ಷಿಕೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ಜೈಹಿಂದ್ ಕ್ರಿಕೆಟ್ ಕ್ಲಬ್ಬಿನವರು ಮೊನ್ನೆ ೩ ಬಸಪ್ಪನವರ ಪ್ರೌಢಶಾಲೆಯಲ್ಲಿ ತಮ್ಮ ಕ್ಲಬ್ಬಿನ ವಾರ್ಷಿಕೋತ್ಸವವನ್ನೂ ಮತ್ತು ಸ್ವಾತಂತ್ರ್ಯ ದಿನಾಚರಣೆಯನ್ನೂ ನೆರವೇರಿಸಿದರು. ಹಿರಿಯ ರಾಜ್ಯ ಸಭಾ ಸದಸ್ಯ ಶ್ರೀ ಟಿ ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎ ವಿ ಸುಬ್ರಹ್ಮಣ್ಯರವರಿಂದ ಪ್ರಾರ್ಥನೆಯಾದನಂತರ ಶ್ರೀ ಜಯಸಿಂಹರವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಬಿ ಸಿ ರಂಗನಾಥ ಅಯ್ಯಂಗಾರ್, ಸುಬ್ರಹ್ಮಣ್ಯ ಜೋಯಿಸ್ ಮತ್ತು ಸದಾಶಿವಯ್ಯನವರುಗಳು ಮಾತನಾಡಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ವಿ|| ವಿ ರಾಮರತ್ನಂ ಮತ್ತು ಪಾರ್ಟಿಯವರಿಂದ ಸುಶ್ರಾವ್ಯವಾದ ಗಾಯನವಾದನಂತರ ಅಧ್ಯಕ್ಷರು ಭಾಷಣ ಮಾಡಿ ಸಭೆಕ್ಕೆ ಯಶಸ್ಸನ್ನು ಕೋರಿದರು. ಶ್ರೀ ಮೂರ್ತಿ ಮತ್ತು ಪಾರ್ಟಿಯವರಿಂದ ಪಾಶ್ಚಾತ್ಯ ಶ್ರೀ ಎಂಬ ನಾಟಕದ ಅಭಿನಯವಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕೋಲಾರದ ಚಿನ್ನದ ಗಣಿಯಲ್ಲಿ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ಇದೇ ಮೊದಲಾಗಿ ಕೋಲಾರದ ಚಿನ್ನದ ಗಣಿಗಳಿಗೆ ಭೇಟಿಯಿತ್ತರು. ಚಾಂಪಿಯನ್ ಗಣಿಯಲ್ಲಿ ೧೧ ಮೈಲಿ ಆಳದ ಕೆಳಗೆ ಅವರು ಇಳಿದು ಚಿನ್ನದ ಅದಿರನ್ನು ಅಗೆಯುತ್ತಿರುವುದನ್ನು ಪರಿಶೀಲಿಸಿದರು. ನಂತರ ಚಿನ್ನವನ್ನು ಸಂಸ್ಕರಿಸಿ ಮಾಡುವ ವಿಧಾನವನ್ನು ನೋಡಿದರು. ಅವಕ್ಕೆ ಮುಂಚೆ ಊರಿನಲ್ಲಿ ರಾಷ್ಟ್ರಾಧ್ಯಕ್ಷರು ಮೆರವಣಿಗೆಯಲ್ಲಿ ಹೋದರು.

ದಿವಂಗತ ಲಕ್ಷ್ಮೀಕಾಂತಶೆಟ್ಟಿರ ಅಂತ್ಯಕ್ರಿಯೆ

ನೆನ್ನೆ ರಾತ್ರಿ ಬೇಗೂರಿನ ಬಳಿ ಮೋಟಾರು ಸೈಕಲ್ ಅಪಘಾತಕ್ಕೆ ಈಡಾದ ಲಕ್ಷ್ಮೀಕಾಂತಶೆಟ್ಟಿ ಮತ್ತು ದೇವರಾಜನಾಯ್ಡು ಎಂಬ ಯುವಕರ ಶವಗಳನ್ನು ಸುಂದರವಾಗಿ ಅಲಂಕರಿಸಿದ ಎರಡು ಲಾರಿಗಳಲ್ಲಿ ಮಲಗಿಸಿ ನೆನ್ನೆ ರಾತ್ರಿ ಮೆರವಣಿಗೆಯಲ್ಲಿ ಕೊಂಡೊಯ್ದು ಅಂತ್ಯಕ್ರಿಯೆಯನ್ನು ನಡೆಸಲಾಯಿತು. ಅನೇಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸಿ.ಪಿ.ರಂಗಪ್ಪನ ಪಠಾಣ ಹ್ಯೂಗ್ ರೋಡ್ ಹೋಗಿದ್ದರು

ಬೆಂಗಳೂರು ಮತ್ತು ಮೈಸೂರು ನಗರದ ಬಸ್ಸುಗಳ ರಾಷ್ಟ್ರೀಕರಣ

ಗೃಹ ಮಂತ್ರಿ ಸಿದ್ದವೀರಪ್ಪನವರ ವಿವರಣೆ

ಬೆಂಗಳೂರು ೧೬

ಗೃಹ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಗೋಷ್ಠಿ ನಡೆಸಿ, ಸಂಸ್ಥಾನದ ರಸ್ತೆ ಸಂಚಾರ ಸಾರಿಗೆ ಸೇವೆಯಂತೆ ಪೂರ್ಣವಾಗಿ ರಾಜ್ಯದ ಪ್ರಥಮ ದರ್ಜೆಯ ಬಸ್ ಸರ್ವೀಸ್ ಮಾಡನ್ನು ೬ ಲಕ್ಷ ರೂ ವೆಚ್ಚದಲ್ಲಿ ಸ್ಥಾಪಿಸುವ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿರುವುದಾಗಿ ತಿಳಿಸಿದರು. ೧ ಲಕ್ಷ ರೂ ವೆಚ್ಚದಲ್ಲಿ ಈಗಾಗಲೇ ಬೆಂಗಳೂರಿನಲ್ಲಿ ಒಂದು ಹ್ಯಾಂಗರನ್ನು ನಿರ್ಮಿಸಲಾಗಿರುವುದೆಂದೂ ವರ್ಕ್‌ಷಾಪಿನ ಸೌಲಭ್ಯಗಳನ್ನು ಸರ್ಕಾರದ ಎಲ್ಲಾ ವಿಭಾಗದ ಮೋಟಾರು ವಾಹನಗಳಿಗೂ ಒದಗಿಸಲಾಗುವುದೆಂದೂ ಅವರು ಹೇಳಿದರು. ೩೦ ಸಾವಿರ ರೂ ವೆಚ್ಚದಿಂದ ಬಸ್ಸುಗಳ ಬಾಡಿ ಕಟ್ಟುವ ಯಂತ್ರವನ್ನು ಸ್ಥಾಪಿಸಿ ಪ್ರತಿ ತಿಂಗಳೂ ೨ ಬಸ್ಸುಗಳನ್ನು ನಿರ್ಮಿಸಲು ಸರ್ಕಾರದವರು ಯೋಚಿಸುತ್ತಿರುವರೆಂದು ಅವರು ಹೇಳಿದರು.

ಮೈಸೂರು ಮತ್ತು ಬೆಂಗಳೂರುಗಳ ನಡುವೆ ಬಸ್ ಸಂಚಾರಕ್ಕೆ ಪೂರ್ಣ ವ್ಯವಸ್ಥೆಯಾಗಿರುವುದಾಗಿಯೂ ಅದಕ್ಕೆ ಆಂಧ್ರ ಸರ್ಕಾರದ ಅನುಮತಿಯನ್ನು ಬೇಡಿಲ್ಲವೆಂದೂ ಅವರು ಹೇಳಿದರು. ಬೆಂಗಳೂರಿಗೆ ತಮ್ಮ ಬಸ್ ಸಂಚಾರವನ್ನು ವಿಸ್ತರಿಸಲು ಅನಂತಪುರ ಜಿಲ್ಲಾಧಿಕಾರಿಗಳಿಗೆ ಸಂಸ್ಥಾನ ಸರ್ಕಾರದವರು ಅನುಮತಿ ಕೊಟ್ಟಿರುವುದು. ಗಿರಿ ಆಂಧ್ರದ ಮದನಪಲ್ಲಿ ಮೂಲಕ ತಿರುಪತಿ ಮತ್ತು ಚಿತ್ತೂರುಗಳ ನಡುವೆ ಬಸ್ ಸಂಚಾರವನ್ನು ವಿಸ್ತರಿಸುವ ಬಗ್ಗೆ ಆಂಧ್ರ ಸರ್ಕಾರದ ಮಂಜೂರಾತಿಯನ್ನು ಕೋರಲಾಗಿರುವುದೆಂದೂ ಅವರು ಹೇಳಿದರು.

ಬಸ್ ಸಂಚಾರದಿಂದ ಸರ್ಕಾರಕ್ಕೆ ಮೈಲಿಗೆ ೧ ರೂ ೧೧ ಆಣೆ ಲಾಭ ಬರುತ್ತಿರುವುದೆಂದೂ, ೫೨-೫೩ ರಲ್ಲಿ ೯೦ ಲಕ್ಷ ರೂ ಬಂಡವಾಳಕ್ಕೆ ೩೦ ಲಕ್ಷ ರೂ ಲಾಭ ದೊರಕಿರುವುದೆಂದೂ, ದಿನವೊಂದಕ್ಕೆ ೨೫೦ ಬಸ್ಸುಗಳು ಓಡುತ್ತಿರುವುವೆಂದೂ ಅವರು ತಿಳಿಸಿದರು.

ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಬಸ್ ಸಂಚಾರವನ್ನು ರಾಷ್ಟ್ರೀಕರಿಸಲಾಗುವುದೇ ಎಂದು ಕೇಳಲಾಗಿ ಈ ವಿಷಯಕ್ಕೆ ಇನ್ನೂ ಗಮನ ಕೊಡಬೇಕಾಗಿದೆ ಎಂದು ತಿಳಿಸಿದರು.

ಡ್ರೇಟೆ ಕೊಲೆ ಆಪಾದಿತನ ಖುಲಾಸೆ

ಪ್ರೆಸ್ ಪೋರ್ಟ್] ಬೆಂಗಳೂರು ೧೬

ಈ ದಿನ ಹೈಕೋರ್ಟಿನ ನ್ಯಾಯಾಧೀಶರುಗಳಾದ ಶ್ರೀಗಳು ಟಿ ಎನ್ ಮಲ್ಲಪ್ಪ ಮತ್ತು ಬಿ ವಾಸುದೇವಮೂರ್ತಿಯವರು ಸಿವಿಲ್ ಪ್ರದೇಶದ ಬಿಷಪ್ ಕಾಟನ್ ಶಾಲೆಯ ಪ್ರಿನ್ಸಿಪಾಲ್ ಎಡ್ವರ್ಡ್ ಡ್ರೇಟೆ ಎಂಬಾತನ ಕೊಲೆ ಸಂಬಂಧದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಜೋಸೆಫ್ ವಿಲಿಯಮ್ಸ್ ಸುಬ್ರಹ್ಮಣಿಯನ್ನು ಖುಲಾಸೆ ಮಾಡಿ, ಅವನಿಗೆ ಶಿಕ್ಷೆ ವಿಧಿಸಲು ಸಾಕ್ಷ್ಯವನ್ನು ರುಜುವಾತು ಇಲ್ಲವೆಂದು ತೀರ್ಪಿತ್ತರು. ಇಬ್ಬರು ನ್ಯಾಯಾಧೀಶರೂ ಪ್ರತ್ಯೇಕ ತೀರ್ಪನ್ನು ಕೊಟ್ಟು, ಒಂದೇ ತೀರ್ಮಾನಕ್ಕೆ ಬಂದಿರುತ್ತಾರೆ.

ರಾಷ್ಟ್ರಾಧ್ಯಕ್ಷರು ಮೈಸೂರಿಗೆ

ರಾಷ್ಟ್ರಾಧ್ಯಕ್ಷರು ಈ ದಿನ ಇಲ್ಲಿಂದ ಹೊರಟು ಸಂಜೆ ೬|| ಗಂಟೆಗೆ ಮೈಸೂರಿನ್ನು ತಲುಪುವರು. ಅವರು ನಾಳೆ ಬೆಳಗ್ಗೆ ರಾಜ ಪ್ರಮುಖರು ೨೦ನೇ ತಾ|| ಮೈಸೂರಿನಲ್ಲಿ ಇರುತ್ತಾರೆ ...

ಸ್ವಾತಂತ್ರ್ಯ ದಿನೋತ್ಸವ
ಮುಖ್ಯ ಮಂತ್ರಿಯವರ ಸಂದೇಶ

ಮೈಸೂರು ೧೬

[illegible]

ಪಾತ್ರೆ ಕದ್ದುದಕ್ಕಾಗಿ
೩ ತಿಂಗಳು ಸಜಾ

ಮೈಸೂರು ೧೬

[illegible]

ಓವರ್ ಲೋಡಿಗಾಗಿ ದಂಡ

[illegible]

ಜುಲ್ಮಾನೆ

[illegible]

★ [illegible]

★ [illegible]

[illegible]

[illegible]

ಸಹಾಯಾರ್ಥ ನಾಟಕದ ಉತ್ಪತ್ತಿ ಮತ್ತು ವೆಚ್ಚದ ವಿವರ

[illegible]

ದೆಹಲಿಗೆ ೧೦ ಮಂದಿ ಮೈಸೂರು ವಿದ್ಯಾರ್ಥಿಗಳು

ಬೆಂಗಳೂರು ೧೬

[illegible]

SHREE GANESHA

TALKIES

From 17-8-54 For 3 days

Universal's

AGAINST ALL FLAGS

(Technicolor)

Featuring Errol Flynn and Maureen O'Hara

From 19-8-54 For 2 days

Universal's

TUMBLE WEED

Starring Audie Murphy and Lori Nelson

Gala Release on 21-8-54

WINGS OF THE HAWK

3 D Film in Technicolor

ಜೀವ ವಿಮೆ

ಗಂಡನ ಕರ್ತವ್ಯವೂ, ಹೆಂಡತಿಯ ಹಕ್ಕೂ,
ಮಗುವಿನ ಅವಶ್ಯಕತೆಯೂ ಆಗಿದೆ

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರ್ಷಗಳ ನಂಬಿಕೆ ಸೇವೆ ಸಹಕಾರ ಸಲ್ಲಿಸಿದೆ
ಪೂರ್ಣ ಭದ್ರತೆ ಕಡಿಮೆ ವೆಚ್ಚ, ಇಡೀ ಭಾರತ
ದಲ್ಲಿ ಅತ್ಯಧಿಕ ಬೋನಸ್ಸು ಹಂಚುತ್ತಿರುವುದು! [illegible]
[illegible] ಪ್ರೀಮಿಯಂ ದರ ಸುಲಭ ಸಾಲ
ಸೌಕರ್ಯ, ತೊಡಕಿಲ್ಲದ ವಿಮಾ ಮೊಬಲಗಿನ
ಪಾವತಿ ಪ್ರಜೆಗಳ ಖಾತೆಯಲ್ಲಿ ವಿಮೆ
ಮಾಡಲು ಇಂದೇ ನಿರ್ಧರಿಸಿರಿ

ಇಲಾಖೆಗೆ ಪಾವತಿ ಮಾಡಬೇಕಾದ ಹಣವನ್ನು [illegible]
[illegible] ಸ್ವೀಕರಿಸಲಾಗುತ್ತದೆ

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು

Office of The President, District Board, Mysore

1 Sealed tenders will be received at the Office of the Chief Executive officer District Board, Mysore, at 4 P M on 26-8 54 for the works noted below

2 The Works have to be completed by the end of December 1954.

3 Tenders should be given on percentage basis, either above or below the sanctioned estimate

4 Items not provided in the sanctioned estimate will be paid on the approved schedule of rates in force, or data worked out during the execution of the works

5 Each tender must be accompanied by a treasury chellan for having credited into treasury the earnest deposit of the amount noted against each item

6 Adequate progress should be shown from the very commencement, that is from the date of agreement, failing which the earnest money will be forfeited, contract cancelled without further notice and the balance work will be carried out at his risk

7 Controlled articles required for the work will be supplied departmentally and the cost thereof will be adjusted in the bills that come for payment

8 The successful tenderer will be required to produce an income tax clearance or verification certificate before executing the work

9 The President reserves the right of accepting or rejecting the tender without assigning any reasons

10 The decision of the District Board in respect of any disputes regarding rates or other matters arising will be final

11 Plans estimates and other details connected with the work can be seen in the office on any working day during the office hours

Sl No	Name of Work	Estimate	Earnest Money
1	Constructing a High Level causeway near Harve across Hosur Hosakote Harve Road	3,500	175
2	Constructing a High Level causeway with one vent 6x3 at 4/6 5th mile of Madapura Kaliyur Road	3,200	160
3	High Level causeway near Yedakola in Megalapura-HosakoteRoad	3,000	150
4	Construction of four Hotel stalls in the Shandi Maidan at Madahalli, Nanjangud Taluk	5,150	250
5	Constructing a High level causeway at 7/6 of Gundlupet Baragi Road	4,400	220
6	High level causeway on Gorahally-Chapperahalli Road	3,400	170
7.	High level causeway in 4/8 of Attigodu-Chikka Hanasoge Road	3 900	200
8.	Masonry culvert of 2 vents R C C Dip in 6/2b Galigekere Road	3 000	150
9	Constructing a causeway across Galige kere Tank, K R Nagar Taluk	3,000	150
10.	Construction of Municipal High School at Chamarajanagar	13 000	650

M SYED MURSHELD PEER,
Chief Executive Officer
Mysore District Board.

Edited Printed and Published by A R Nagarajan at Sadhvi Press D Subbiah Road Mysore

ರಿಜಿಸ್ಟರ್ಡ್ ನಂ 792

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಂಪುಟ : ೧೩] SADHVI . WEDNESDAY 18-8-1954 ಮೈಸೂರು ಬುಧವಾರ ೧೮-೮-೧೯೫೪ [ಸಂಚಿಕೆ ೧೩

ಗೋವ ಬಗ್ಗೆ ಭಾರತ ಮತ್ತು ಪೋರ್ಚುಗಲ್ ಸಂಧಾನವೇ

ನಾರಾಯಣ ಮಹಾರಾಜರ ವಿಚಾರಣೆ

ಮೈಸೂರು ೧೮

ಹೆಂಗಸೊಬ್ಬಳಿಗೆ ವಿಷಪ್ರಾಶನ ಮಾಡಿಸಿದರೆಂದು ಹರಿಹರದ ನಾರಾಯಣ ಮಹಾರಾಜರ ಮೇಲೆ ಹೂಡಲಾಗಿರುವ ಮೊಕದ್ದಮೆಯು ಮೊನ್ನೆ ೧೭ನೆ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ವಿಚಾರಣೆಗೆ ಬಂದಿತ್ತು. ಅಪಾದಿತರು ಹಾಜರಿದ್ದರು. ಕಾನ್ಸ್ಟೇಬಲ್ ಗೋವಿಂದಯ್ಯ ಎಂಬಾತನ ಸಾಕ್ಷ್ಯವಾದನಂತರ, ಪುಟ್ಟಯ್ಯನವರ ಮಗ ಶಿಷ್ಯಗೆ ಬೋರಯ್ಯ ಎಂಬುವರ ಸಾಕ್ಷ್ಯವು ತೆಗೆದ ಕೊಳ್ಳಲ್ಪಟ್ಟಿತು. ತಾನು ಅಪಾದಿತರ ಬಳಿಗೆ ಹೋಗಿದ್ದಾಗ ಅಲ್ಲಿಗೆ ಮೃತಪಟ್ಟ ಹೆಂಗಸೂ, ಆಕೆಯ ಸಂಬಂಧಿಕರೂ ಬಂದಿದ್ದುದಾಗಿ ಸಾಕ್ಷಿಯು ತಿಳಿಸಿದರು (ನೆನ್ನೆಯೂ ವಿಚಾರಣೆಯು ಇತ್ತು) ತಾವು ಕುಕ್ಕೂಹಳ್ಳಿಯ ದಿನ್ನೆ ಮನೆಗಳನ್ನು ನೋಡಲು ಹೋದಾಗ ಅಲ್ಲಿಗೆ ಸುಬ್ಬಾಚಾರಿ ಮತ್ತು ಚನ್ನಮ್ಮನು ಬಂದಿದ್ದುದಾಗಿಯೂ ತನಗೂ ಅವರಿಗೂ ಸಂಬಂಧವಿಲ್ಲವೆಂದೂ ಸಾಕ್ಷಿಯು ತಿಳಿಸಿದರು.

ಅನಂತರ ಕ್ರೈಂ ಬ್ರಾಂಚ್ ಹೆಡ್ ಕ್ಲಾರ್ಕ್ ಶ್ರೀ ಕೆ ನಾರಾಯಣಯ್ಯಂಗಾರ್ಯರ ಸಾಕ್ಷಿ ನಾಯಿತು. ಪೊಲೀಸರು ಮಾಡಿದ ಸೀಜರ್ಯೊಂದನ್ನು, ಲಕೋಟೆಯನ್ನು ತಾವು ತೆಗೆದ ಕೊಂಡುದಾಗಿ ಅವರು ತಿಳಿಸಿದರು. ಮೊಕದ್ದಮೆಯನ್ನು ನಾಳೆಗೆ ಮುಂದುವರಿಸಲಾಗಿದೆ.

ಕಳ್ಳ ಭಟ್ಟಿ ಸಾರಾಯಿ ತಯಾರಿಸಿಟ್ಟುಕೊಂಡಿದ್ದವರಿಗೆ ಶಿಕ್ಷೆ

ರಾಜಧಾನಿಯ ಅದಕಲಾಗೀಟಕಪುರದ ನರಸಿಂಹಯ್ಯ, ಆತನ ಪತ್ನಿ ರಾಜಮ್ಮ ಮತ್ತು ಮಗ ರಾಜಯ್ಯ ಎಂಬುವರು ಕಳೆದ ೬ನೇ ತಾ॥ ಕಳ್ಳ ಭಟ್ಟಿ ಸಾರಾಯಿಯನ್ನು ತಯಾರಿಸಿ ತಮ್ಮ ವಶದಲ್ಲಿಟ್ಟುಕೊಂಡಿದ್ದರೆಂದು ಎಕ್ಸೈಸ್ ಇಲಾಖೆಯವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶ ಶ್ರೀ ಎಂ ಪಿ ಶಿವಶಂಕರಪ್ಪನವರು ನೆನ್ನೆ ತೀರ್ಪಿತ್ತು, ಮೊದಲನೇ ಅಪಾದಿತನಿಗೆ ೧ ವಾರ ಸಾದಾ ಸಜಾ ಮತ್ತು ೧೦೦ ರೂ ಜುಲ್ಮಾನೆ ತಪ್ಪಿದರೆ, ಇನ್ನೊಂದು ವಾರ ಸಾದಾ ಸಜವನ್ನೂ, ೨ ಮತ್ತು ೩ನೇ ಅಪಾದಿತರಿಗೆ ೧೦೦ ರೂ ಜುಲ್ಮಾನೆ, ತಪ್ಪಿದರೆ ೧ ವಾರ ಸಾದಾ ಸಜವನ್ನು ವಿಧಿಸಿರುತ್ತಾರೆ.

ಮಹಾರಾಜಾ ಕಾಲೇಜು ಸಂಘಗಳ ಚುನಾವಣೆ

ಮಹಾರಾಜಾ ಕಾಲೇಜಿನ ಸಮಾಜ ಶಾಸ್ತ್ರ ಸಂಘದ ಅಧಿಕಾರ ವರ್ಗದ ಚುನಾವಣೆಯು ಕಳೆದ ೧೩ನೇ ತಾ॥ ನಡೆದು ಶ್ರೀ ಜೆ ಗೋವಿಂದಸಿಂಗ್‌ರವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಪ್ರಭಾಕರಶರ್ಮ ಮತ್ತು ಶಿಂಬಸಪ್ಪನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಸಂಸ್ಕೃತ ಸಂಘದ ಅಧಿಕಾರ ವರ್ಗಕ್ಕೆ ಶ್ರೀ ವಿ ಟಿ ತಿರುನಾರಾಯಣಯ್ಯಂಗಾರ್ಯರು ಅಧ್ಯಕ್ಷರಾಗಿಯೂ ಶ್ರೀ ಕೆ ಸೀತಾರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಹನುಮಂತರಾವ್ ಮತ್ತು ಬಿ ಎಸ್ ಶಾಗರಾಜಾಚಾರರು ಕಾರ್ಯದರ್ಶಿಗಳಾಗಿಯೂ ಮತ್ತು ಮಹಿಳೆಯರ ಪ್ರತಿನಿಧಿಯಾಗಿ ಶ್ರೀಮತಿ ರತ್ನಮ್ಮಣಿಯವರೂ ಆಯ್ಕೆಯಾಗಿದ್ದಾರೆ.

ಕೋಲಾರದಲ್ಲಿ ಇನ್ನೊಂದು ದೊಡ್ಡ ಚಿನ್ನದ ಗಣಿ ?

ಹೊಸ ಚಿನ್ನದ ಗಣಿಗಳನ್ನು ತೆರೆಯಲು ಅವಕಾಶವೀಯುವ ಪ್ರಬಾದರಿ ದೇಶದಲ್ಲೇ ಅತ್ಯಂತ ದೊಡ್ಡದೆಂದ ಚಿನ್ನದ ಗಣಿಯನ್ನು ಕೋಲಾರದ ಚಿನ್ನದ ಗಣಿಯ ಬಳಿ ತೆರೆಯಬಹುದೆಂದು ಗಣಿ ಶಾಖೆಯ ಅಧ್ಯಕ್ಷ ಶ್ರೀ ಎಂ ಎ ಶ್ರೀನಿವಾಸರವರು ಮೊನ್ನೆ ಚಿನ್ನದ ಗಣಿ ಕ್ಲಬ್ಬಿನವರು ರಾಷ್ಟ್ರಾಧ್ಯಕ್ಷರಿಗೆ ಕೊಟ್ಟ ಸತ್ಕಾರಕೂಟ ಸಮಾರಂಭದಲ್ಲಿ ಸ್ವಾಗತಭಾಷಣ ಮಾಡುತ್ತಾ ತಿಳಿಸಿದರು.

ಗೋವಾ ಸಮಸ್ಯೆ ಪರಿಹಾರಕ್ಕೆ ಈಜಿಪ್ಟಿನ ಮಧ್ಯಸ್ತಿಕೆ

ಭಾರತದಲ್ಲಿರುವ ಪೋರ್ಚುಗೀಸರ ವಸಾಹತುಗಳ ಭವಿಷ್ಯವನ್ನು ಕುರಿತು ಇತ್ಯರ್ಥ ಮಾಡಲು ಭಾರತ ಮತ್ತು ಪೋರ್ಚುಗಲ್ಲುಗಳ ನಡುವೆ ಈಜಿಪ್ಟು ಮಧ್ಯಸ್ತಿಕೆ ನಡೆಸುತ್ತಿರುವುದೆಂದು ವರದಿಯಾಗಿದೆ.

ದೋಣಿ ಮುಳುಗಿ ೪೦ ಜನರ ಪ್ರಾಣ ಹಾನಿ

ಬರ್ಮಾದ ಪೆಗು ನಗರದ ಬಳಿ ಸಿಟ್ಟಾಂಗ್ ನದಿಯಲ್ಲಿ ಹೋಗುತ್ತಿದ್ದ ಮೋಟಾರು ದೋಣಿಯು ವಿಪರೀತ ಸೆಳೆತಕ್ಕೆ ಸಿಕ್ಕಿ ತಲೆಕೆಳಗಾದ ಪ್ರಯುಕ್ತ, ಅದರಲ್ಲಿದ್ದ ಹೆಂಗಸರೂ ಮಕ್ಕಳೂ ಸೇರಿ ೪೦ ಮಂದಿ ಮುಳುಗಿಹೋಗಿದ್ದಾರೆ. ಮಳೆ ಬೀಸಿದುದರಿಂದ ನದಿಯಲ್ಲಿ ವಿಪರೀತ ನೀರು ಬಂದಿತ್ತು.

ಅಧಿಕಾರಿಗಳಿಗೆ ಸತ್ಕಾರ

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿರುವ ಡಾ॥ ಅದಿಕೇಶವಲು ನಾಯ್ಡು ರವರಿಗೆ ಡೆಪ್ಯುಟಿ ಕಮಿಷನರ್ ಆಗಿರುವ ಶ್ರೀ ಬಿ ಆರ್ ನಂಜಯ್ಯನವರು ಮತ್ತು ಮಂಡ್ಯಕ್ಕೆ ವರ್ಗವಾಗಿರುವ ನಿಮ್ಮ ವರ್ಗದ ಪರೀಕ್ಷಾಧಿಕಾರಿ ಶ್ರೀ ಕೆ ಟಿ ತಿರುವೆಂಗಲಸ್ವಾಮಿಯವರುಗಳ ಗೌರವಾರ್ಥವಾಗಿ ಕಳೆದ ೧೫ನೇ ತಾ॥ ಚಾಮುಂಡಿ ಮೊಹಲ್ಲೆಯಲ್ಲಿರುವ ಅಶೋಕ ಸಾಮಾಜಿಕ ಅಭಿವೃದ್ಧಿ ಸಂಘದವರು ಶ್ರೀ ಡಿ ಲಿಂಗಯ್ಯನವರ ಶಿಶು ವಿಹಾರದಲ್ಲಿ ಮೊನ್ನೆ ಶ್ರೀ ಎಸ್ ಎಂ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಶ್ರೀಗಳಾದ ಕೆ ವಿಜಯಂ, ಬಿ ರಾಜಯ್ಯ ಮತ್ತು ಕೆ ಸಿದ್ದಯ್ಯನವರು ಅಧಿಕಾರಿಗಳ ಗುಣಾತಿಶಯಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು.

ಎಂ ಎ ಪರೀಕ್ಷೆ ಫಲಿತಾಂಶ

ಮೈಸೂರು ವಿಶ್ವ ವಿದ್ಯಾಲಯದ ಎಂ ಎ, ಎಂ ಎಸ್‌ಸಿ, ಇಂಜಿನಿಯರಿಂಗ್‌ನಲ್ಲಿ ಪದವೀಧರೋತ್ತರ ಡಿಪ್ಲೊಮಾ ಮತ್ತು ಹಿಂದಿ ಪ್ರೊಫಿಶಿಯೆನ್ಸಿ ಡಿಪ್ಲೊಮಾ ಪರೀಕ್ಷೆಗಳ ಫಲಿತಾಂಶಗಳು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ರಕಟವಾಗಲಿವೆ.

ನಗರದ ಬಾಡಿಗೆ ಹತೋಟಿ ಅಧಿಕಾರಿ

ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಡಿ. ನಾರಾಯಣ ಸಿಂಗ್‌ರವರನ್ನು ಮೈಸೂರು ನಗರದಲ್ಲಿ ಬಾಡಿಗೆ ಹತೋಟಿ ಅಧಿಕಾರಿಯಾಗಿ ನೇಮಿಸಲಾಗಿದೆ.

ಡ್ರೇಟನ್ ಕೊಲೆ ಆಪಾದಿತನ ಬಿಡುಗಡೆ

ಬೇರೆ ವ್ಯಕ್ತಿಯಿಂದ ಕೊಲೆಯಾಗಿರಬೇಕೆಂದು ನ್ಯಾಯಾಧೀಶರ ಅಭಿಪ್ರಾಯ

ಬೆಂಗಳೂರು ೧೮

ಎಡಿತ್ ಡ್ರೇಟನ್ ಎಂಬ ಆಂಗ್ಲ ಮಹಿಳೆಯನ್ನು ಕಳೆದ ವರ್ಷ ಕೊಲೆ ಮಾಡಿದ ಸಂಬಂಧದಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಜೋಸೆಫ್ ಉಬ್ರಿಸ್‌ನ ಅಪೀಲನ್ನು ನೆನ್ನೆ ಹೈಕೋರ್ಟಿನವರು ವಜಾ ಮಾಡಿ ಅಪ್ಪಣೆಯಿತ್ತ ಕೂಡಲೇ ಸಂಜೆ ೫॥ ಗೆ ಅವನನ್ನು ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಶ್ರೀ ಟಿ ಎನ್ ಮಲ್ಲಪ್ಪನವರು, ಶ್ರೀಮತಿ ಡ್ರೇಟನ್ನರ ಮನೆಯಲ್ಲಿ ದೊರೆತ ಕಾಗದದ ಚೂರಿನ ಮೇಲಿದ್ದ ಕೈ ಬೆರಳಿನ ಗುರುತು ಆಪಾದಿತನ ಬೆರಳಿನದಕ್ಕೆ ಸರಿಹೊಂದುವುದಿಲ್ಲವೆಂದು ಪ್ರವೀಣರು ಹೇಳಿರುವುದರಿಂದ ತವಗೆ ಆಪಾದಿತನ ದೋಷಿಯೆಂಬ ಬಗ್ಗೆ ತುಂಬಾ ಸಂಶಯವಿರುವುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಬಿ ವಾಸುದೇವಮೂರ್ತಿಯವರು ತಮ್ಮ ಅಪ್ಪಣೆಯಲ್ಲಿ ಮೃತಪಟ್ಟ ವಿದ್ಯಾವಂತೆ ಮತ್ತು ಪಥ್ಯೆ ನ ಹಿಳೆಯ ಘೋರ ಕೊಲೆ ಮತ್ತು ನಿಜವಾದ ಕೊಲೆಗಾರನು ಕಂಡು ಹಿಡಿಯಲ್ಪಡದೆ ಮತ್ತು ಶಿಕ್ಷೆಗೆ ಗುರಿಯಾಗದೆ ಇರುವುದು ಕಳವಳಕರವಾದ ವಿಷಯವೆಂದೂ ಆದರೆ ಕೇವಲ ಸಂಶಯವು ಪ್ರಮಾಣವಾಗಲಾರದೆಂದೂ ತಿಳಿಸಿರುತ್ತಾರೆ.

ಆಪಾದಿತನ ದಸ್ತಗಿರಿ ವಿಧಾನದ ಬಗ್ಗೆ ಅತೃಪ್ತಿಯನ್ನು ಸೂಚಿಸಿ ಆತನ ಮೇಲೆ ಹೊರಿಸಿರುವ ಕಳ್ಳತನ ದರೋಡೆ ಮತ್ತು ಕೊಲೆ ಆಪಾದನೆಗಳನ್ನು ಏನ ತಿಳಿಸಿ, ಬಹು ಅಲ್ಪ ಬೆಲೆಯ ಪದಕ, ಹದಿ ಒಂದು ರೂಪಾಯಿ ಯಾಗುವ ಫೌಂಟನ್ ಪೆನ್ ಮತ್ತು ಗಡಿಯಾರ ಇವುಗಳನ್ನು ಅಪಹರಿಸಲು ಕೊಲೆ ಮುಂತಾದ ಅಪರಾಧಗಳನ್ನು ಮಾಡಲು ಆಪಾದಿತನು ಯತ್ನಿಸಿದ್ದನೆಂದು ಹೇಳುವುದು ಅಸಂಭವವೆಂದು ಅವರು ತಿಳಿಸಿರುವರು. ಅಲಸೂರು ಕೆರೆಯಲ್ಲಿ ಸಿಕ್ಕಿತೆಂದು ಹೇಳಲಾದ ಚಾಕುವಿನ ಬಗ್ಗೆ ಪೊಲೀಸರ ಕಥೆಯನ್ನು ನ್ಯಾಯಾಧೀಶರು ತಿರಸ್ಕರಿಸಿ, ಅಂತಹ ಆಯುಧವನ್ನು ೨ ಮೈಲಿ ದೂರವಿರುವ ಕೆರೆಗೆ ಎಸೆ ಕೊಂಡೊಯ್ದನೆಂಬುದು ಅರ್ಥವಾಗಿಲ್ಲವೆಂದೂ ಮಿಸ್ ಡ್ರೇಟನ್ನರ ಮೇಲೆ ಪ್ರಯೋಗಿಸಿರುವುದು ಇನ್ನೂ ಭಾರಿಯಾದ ಆಯುಧವೆಂಬ ಸಾಕ್ಷ್ಯದಲ್ಲಿ ಕಂಡುಬಂದಿರುವುದಾಗಿಯೂ ಅಭಿಪ್ರಾಯಪಟ್ಟಿರುತ್ತಾರೆ. ಆ ದಿನ ರಾತ್ರಿ ಮನೆ ತಲೆಯಡನೆ ಬೇರೆ ವ್ಯಕ್ತಿಯು ಇದ್ದು ಅವರೇ ನಿಜವಾದ ಕೊಲೆಗಾರರೆಂದೂ, ಆಪಾದಿತನಲ್ಲವೆಂದೂ ಸ್ಪಷ್ಟಪಡಿಸಿರುತ್ತಾರೆ.

ಗಾಂಧೀಜಿಯವರ ಪ್ರತಿಮೆ

ರಾಷ್ಟ್ರಾಧ್ಯಕ್ಷರಿಂದ ಅನಾವರಣವಿಲ್ಲ

ಬೆಂಗಳೂರ ಪೌರಸಭೆಯವರು ಅಲ್ಲಿನ ಟೌನ್‌ಹಾಲ್ ಎದುರಿನಲ್ಲಿ ಮಹಾತ್ಮಾ ಗಾಂಧಿಯವರ ಕಂಚಿನ ಪ್ರತಿಮೆಯನ್ನು ರಾಷ್ಟ್ರಾಧ್ಯಕ್ಷರಿಂದ ಅನಾವರಣ ಮಾಡಿಸಬೇಕೆಂದಿದ್ದರು. ಆದರೆ ಸರ್ಕಾರದವರು ಪೌರಸಭೆಗೆ ಪತ್ರ ಬರೆದು ರಾಷ್ಟ್ರಾಧ್ಯಕ್ಷರಿಂದ ಅನಾವರಣದ ಸಮಾರಂಭವಿರುವುದಿಲ್ಲವೆಂದು ತಿಳಿಸಿದ್ದಾರೆ.

ಭಾರತದೊಡನೆ ಪೋರ್ಚುಗಲ್ಲಿನ ಮಾತುಕತೆಯೇ ?

ಪೋರ್ಚುಗಲ್ಲಿನ ವಿದೇಶಾಂಗ ಮಂತ್ರಿ ಡಾ॥ ಪೌಲೋ ಕನ್ನಾರವರು ಲಿಸ್ಬನ್ನಿನಲ್ಲಿ ಮಾತನಾಡಿ ಗೋವಾ ಸಂಬಂಧದ ಸಮಸ್ಯೆಗಳ ಬಗ್ಗೆ ಭಾರತದೊಡನೆ ಚರ್ಚಿಸಲು ಅವರ ಸರ್ಕಾರವು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಭಾರತದ ವಿಷಯವಾಗಿ ಗೋವಾದ ಪೂರ್ಣ ಸ್ವಾತಂತ್ರ್ಯವನ್ನು ಕಸಿದು ಗೋವಾದಲ್ಲಿ ಅಂತರ ರಾಷ್ಟ್ರೀಯ ರಕ್ಷಣಾ ನೆಲೆಗಳನ್ನು ನಿರ್ಮಿಸುವುದಿಲ್ಲವೆಂದು ಪೋರ್ಚುಗಲ್ಲು ಭರವಸೆ ಕೊಡುವುದಾಗಿಯೂ ಅವರು ಗೋವಾದಲ್ಲಿ ಪೋರ್ಚುಗೀಸರ ಸಾರ್ವಭೌಮತ್ವ ಮತ್ತು ಅಂತರಿಕ ಪರಿಸ್ಥಿತಿಯ ಬಗ್ಗೆ ಚರ್ಚೆಗಳನ್ನು ನಡೆಸಲು ಸಾಧ್ಯವಿಲ್ಲವೆಂದೂ ಹೇಳಿರುತ್ತಾರೆ.

ಪೋರ್ಚುಗೀಸ್ ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಎರಡು ಸರ್ಕಾರಗಳಿಗೂ ಕೂಡಲೇ ಸಂಧಾನ ನಡೆಯಬೇಕೆಂದು ಭಾರತವು ಮಾಡಿದ್ದ ಸಲಹೆಯನ್ನು ತಾವು ಒಪ್ಪಿರುವುದಾಗಿ ಪ್ರಕಟಿಸಿರುತ್ತಾರೆ. ಅಂತರ ರಾಷ್ಟ್ರೀಯ ವೀಕ್ಷಕರ ವಿಷಯದ ಕುರಿತು ಚರ್ಚಿಸುವುದಕ್ಕೆ ಮಾತ್ರ ಪೋರ್ಚುಗಲ್ಲು ಸಮ್ಮತಿಸಿದೆ.

ಪೋರ್ಚುಗೀಸ್ ಸೈನಿಕರಿಂದ ಸತ್ಯಾಗ್ರಹಿಯ ಕೊಲೆ

ಗೋವಾ ನಗರದ ಎಲ್ಲರ ವಿರೋಧನೆ ಗೋಳಿಕಲ್ಪಟ್ಟಿತ್ತ. ಕೆರಿಬೋಲ್ ರೇವನ್ನು ಪೋರ್ಚುಗೀಸ್ ಸೈನಿಕರು ಮೊನ್ನೆ ಪುನ ಆಕ್ರಮಿಸಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸುತ್ತಿದ್ದ ಒಬ್ಬ ಸತ್ಯಾಗ್ರಹಿಯನ್ನು ಗುಂಡಿನಿಂದ ಹೊಡೆದು ಕೊಂದಿರುವರೆಂದು ವರದಿಯಾಗಿದೆ. ಮತ್ತೊಬ್ಬ ಸ್ವಯಂಸೇವಕನಿಗೆ ಗಂಡಿನೇಟು ಬಿದ್ದಿದೆ. ಭಾರತದ ಧ್ವಜವನ್ನು ಕೆಳಗಿಳಿಸುವ ಪ್ರಯತ್ನ ನಡೆದಾಗ ಅವರು ಪ್ರತಿಭಟಿಸಿದರೆಂದು ಹೇಳಲಾಗಿದೆ. ರೇವಿನ ಬಳಿ ಆದಿನಗಳಿಂದ ನಿಂತಿದ್ದ ಮನವ್ವ ನೌಕೆಯು ನೆನ್ನೆ ಬೆಳಗ್ಗೆ ಅಲ್ಲಿಂದ ಹೊರಟಿತು.

ವಿಷದ ಆಹಾರ ಸೇವನೆಯಿಂದ ೮೩ ಜನರು ಆಸ್ಪತ್ರೆಗೆ

ತಿರುವಣ್ಣಾಮಲೆ ತೆನ್ನಡು ಮತದೂರ ನವಲಪುಂಡಿ ಮತ್ತು ವೇಲ್ಯೂರಪೇಟೆ ಈ ಸ್ಥಳಗಳಲ್ಲಿ ಜನರು ಮಗು ಎಂಬ ಒಂದು ವಿಧದ ಅಕ್ಕಿಯನ್ನು ತಿಂದು ನೆನ್ನೆ ಮತ್ತು ಮೊನ್ನೆ ನೋಡಿ ತುತ್ತು ಗಂಜಿಯಾಗಿ ಮಾಡಿ ತಿಂದ ಸಂಬಂಧದಲ್ಲಿ ೮೩ ಜನ ಆಸ್ಪತ್ರೆಗೆ ಸೇರಿಸಲ್ಪಟ್ಟಿರುತ್ತಾರೆ. ಅದು ರದ್ದಿ ವಿಷ ಬೆರೆತಿತ್ತೆಂದು ಹೇಳಲಾಗಿದೆ. ತಿರುವಣ್ಣಾಮಲೆಯ ಒಬ್ಬ ವರ್ತಕನಿಂದ ೩೬ ಮಟೆ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ಜನರು ಅಕ್ಕಿಯನ್ನು ಕೊಳ್ಳಬಾರದೆಂದು ಊರುಗಳಲ್ಲಿ ಟಾಂಟಾಂ ಹೊಡೆಸಲಾಗಿದೆ.

ನಗರಾಭಿವೃದ್ಧಿ ಸಮಿತಿಗೆ ಸರ್ಕಾರದಿಂದ ೮೫,೦೦೦ ರೂ

ಪ್ರಸಕ್ತ ಸಾಲಿನಲ್ಲಿ ನಗರಾಭಿವೃದ್ಧಿ ಸಮಿತಿಯ ಸಿಬ್ಬಂದಿ ಖರ್ಚು ಮತ್ತು ನಿವೇಶನ ಸಾಲವನ್ನು ಸರಿದೂಗಿಸಲು ಮೈಸೂರು ನಗರಾಭಿವೃದ್ಧಿ ಸಮಿತಿಗೆ ಸರ್ಕಾರದವರು ೮೫,೦೦೦ ರೂಗಳನ್ನು ಸಹಾಯವಾಗಿ ಕೊಟ್ಟಿರುತ್ತಾರೆ. ನಗರದಲ್ಲಿ ಅಭಿವೃದ್ಧಿ ಕಾರ್ಯ ನಡೆಸಲು ಇಲ್ಲಿನ ಪೌರಸಭೆಗೆ ೩೦ ಸಾವಿರ ರೂ ಮಂಜೂರಾಗಿದೆ. ನಾಳೆ ಬೆಳಿಗ್ಗೆ ೧೧ ಗಂಟೆಗೆ ಜಲದರ್ಶಿನಿಯಲ್ಲಿ ಮಂತ್ರಿಗಳು ಒಂದ ಸಭೆ ಸೇರಲಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೮

ಕಳೆದ ೧೫ನೇ ತಾ|| ನಗರದ ನಾನಾ ಭಾಗಗಳಲ್ಲಿ ನಡೆದ ಸ್ವಾತಂತ್ರ್ಯ ದಿನ ಆಚರಣೆಯ ವಿವರಗಳು ಈ ರೀತಿ ಇವೆ —

ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಪ್ರತಿಯೊಂದು ಕೇಂದ್ರದಲ್ಲೂ ಉತ್ಸವ ನೆರವೇರಿಸಲ್ಪಟ್ಟಿತು. ದಕ್ಷಿಣ [illegible] ಸ್ಕೂಲು ಬಳಿ [illegible] ಗಂಡಸರಿಂದ ಧ್ವಜಾರೋಹಣವು ನಡೆಯಿತು.

ಕೃಷ್ಣರಾಜ ಮೊಹಲ್ಲಾ [illegible] ಸ್ಟ್ರೀಟಿನಲ್ಲಿರುವ ಮಹಿಳಾ ಕೇಂದ್ರದ ಬಳಿ ಧ್ವಜಾರೋಹಣವು ಶ್ರೀಮತಿ ಪೊನ್ನಮ್ಮನವರಿಂದ ನೆರವೇರಿಸಲ್ಪಟ್ಟಿತು. ನಂತರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಸ್ಥಾನ [illegible] ಶ್ರೀಮತಿ ಎ ಟಿ ಲಕ್ಷ್ಮಮ್ಮನವರು ಭಾಷಣ ಮಾಡಿ [illegible] ಸ್ತ್ರೀಯರು ಉಳಿತಾಯ ಸರ್ಟಿಫಿಕೇಟನ್ನು ಕೊಂಡುಕೊಳ್ಳಬೇಕೆಂದು ತಿಳಿಸಿದರು.

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಬೆಳಿಗ್ಗೆ ಪ್ರಭಾತಫೇರಿ, ಶ್ರೀ ಕೆ ಬೌಲತ್ ರಾಯರಿಂದ ಧ್ವಜಾರೋಹಣ, ಪ್ರೊಫೆಸರ್ ಜಿ ರಾಮಕೃಷ್ಣರೆಡ್ಡಿಯವರ ಅಧ್ಯಕ್ಷತೆಯ ಸಭೆ ಮತ್ತು ಶ್ರೀ ಕ ರಾ ಸುಬ್ಬರಾಮರ ಭಾಷಣಗಳಾದುವು.

[illegible] ಶೆಡ್ ಕಾರ್ಮಿಕರ ಸಂಘದ ಆಶ್ರಯದಲ್ಲಿ ಉತ್ಸವದ ಜೊತೆಗೆ ಸಂಘದ ವಾರ್ಷಿಕೋತ್ಸವವೂ ಪೌರಸಭಾ ಕಮಿಷನರ್ ಶ್ರೀ ಎಲ್ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಕೆಲಸಗಾರರು ಮೆರವಣಿಗೆ ನಡೆಸಿದರು. ಸಭೆ ನಡೆದಾಗ ಶ್ರೀ ಎಲ್ ಲಕ್ಷ್ಮಣರಾಯರು ಭಾಷಣ ಮಾಡಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕಲರೂ ಸಹಾಯ ಮಾಡಬೇಕೆಂದು ತಿಳಿಸಿದರು. ಸಂಸ್ಥೆಗೆ ೩೦೦ ಜನ ಸದಸ್ಯರಿರುವುದನ್ನು ಕೇಳಿ ಅವರು ಸಂತೋಷವನ್ನು ಸೂಚಿಸಿದರು.

ಆದಿ ಜಾಂಬವ ಸಂಘದ ಆಶ್ರಯದಲ್ಲಿ [illegible] ಶ್ರೀ ದೊಡ್ಡರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ, ಧ್ವಜಾರೋಹಣ ಭಾಷಣಗಳಾದುವು.

ಶ್ರೀ ಗಾಯತ್ರೀ ಲಲಿತ ಕಲಾ ಸಂಘದಲ್ಲಿ ಶ್ರೀ ಎಸ್ ಎಂ. ಲಕ್ಷ್ಮೀಗೌಡರ ಅಧ್ಯಕ್ಷತೆಯಲ್ಲಿ ಮಹಾತ್ಮಜರ ವರ್ಧಂತಿ ಮತ್ತು ಸ್ವಾತಂತ್ರ್ಯ ದಿನೋತ್ಸವವು ಒಟ್ಟಿಗೆ ನಡೆದುವು.

ಚಾಮುಂಡಿಪುರದ ಸರಕಾರಿ ಶಿಕ್ಷಣ ಶಾಲೆಯಲ್ಲಿ [illegible] ಶ್ರೀ ಕೆ ಕೃಷ್ಣ[illegible] ವಿದ್ಯಾರ್ಥಿಗಳ ಮಾರ್ಚ್ ಪಾಸ್ಟಿನಲ್ಲಿ ಸೆಲ್ಯೂಟ್ ಸ್ವೀಕರಿಸಿದರು.

ಶ್ರೀರಾಂಪೇಟೆಯ [illegible] ವಿದ್ಯಾಲಯದಲ್ಲಿ ಭಾನುವಾರ ವಿದ್ಯಾರ್ಥಿಗಳು ಸ್ವಾತಂತ್ರ್ಯೋತ್ಸವವನ್ನು ನೆರವೇರಿಸಿದರು. ಧ್ವಜಾರೋಹಣ ಸಭೆ ಮುಂತಾದುವುಗಳು ಆದವು. ಶ್ರೀ ರಂಗನ [illegible] ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಸಾಹಿತ್ಯ ಸಂಘದ ಕ್ರೀಡಾ ಕೇಂದ್ರದ [illegible] ಭಾನುವಾರ [illegible] ಧ್ವಜಾರೋಹಣ ಮಾಡಿದರು. [illegible] ಅಧ್ಯಕ್ಷತೆ [illegible]

ಸಟ್ಟಾ ಜೂಜಿಗಾಗಿ ಮೊಕದ್ದಮೆ

ಸಟ್ಟಾ ಜೂಜು ಆಡುತ್ತಿದ್ದರೆಂದು ಮಂಡಿ ಮೊಹಲ್ಲೆಯ [illegible] ಮತ್ತು ಇನ್ನಿಬ್ಬರ ಮೇಲೆ [illegible] ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ

ರಾಘವೇಂದ್ರ ಗುರುಗಳ ಮಹಿಮೆ

ಒಬ್ಬರಿಗೆ ಹೊಟ್ಟೆ ನೋವು ಗುಣ, ಮತ್ತೊಬ್ಬರಿಗೆ ದರ್ಶನ

ಚಾಮರಾಜನಗರದ [illegible] ಶ್ರೀ ಕೆ ದಾಸ[illegible]ರವರ ಪತ್ರವೊಂದನ್ನು ಬರೆದ, ಕಳೆದ ೪ ೫ ವರ್ಷಗಳಿಂದ ತಾವು ಹೊಟ್ಟೆ ನೋವಿನಿಂದ ತುಂಬಾ ಕಷ್ಟದ [illegible] ಅನೇಕ ಇಂಗ್ಲೀಷ್ ವ[illegible] ವೈದ್ಯರುಗಳಿಂದ ಔಷಧಿ ತೆಗೆದುಕೊಂಡರೂ ಗುಣವಾಗದೆ ಮೈಸೂರ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗಿದ್ದಲ್ಲಿ ಎಕ್ಸರೇ [illegible] ಇದರಲ್ಲಿ ಕಂಡು ಬಂದ [illegible] ಇಂಜಕ್ಷನ್ ಮತ್ತು ೬ ತಿಂಗಳ ಔಷಧಿಯನ್ನು ತೆಗೆದುಕೊಳ್ಳುವಂತೆ ವೈದ್ಯರು ತಿಳಿಸಿದರೆಂದೂ, ಒಂದು ದಿನ ಒಬ್ಬ ವೃದ್ಧ ಬ್ರಾಹ್ಮಣನು ತನ್ನ ಸ್ಥಿತಿ ನೋಡಿ ಶ್ರೀ ರಾಘವೇಂದ್ರ ಗುರುಗಳ ಮಹಿಮೆಯನ್ನು ತಿಳಿಸಿ ಎರಡು ಮಂತ್ರಗಳನ್ನು ಉಪದೇಶಿಸಿದನೆಂದೂ ಅಂದಿನಿಂದಲೂ ತಾವು ಮಂತ್ರ [illegible] ಸೇವೆ ಮಾಡಲು ಉಪಕ್ರಮಿಸಿದರು. ಈ ಹೊಟ್ಟೆ ನೋವು ವಾಸಿಯಾಗಿ ಈಗ ಯಾವ ಬಾಧೆಯೂ ಇಲ್ಲವೆಂದೂ ತಿಳಿಸಿರುತ್ತಾರೆ.

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಪ್ರೊಫೆಸರ್ ಶ್ರೀ ಡಿ ಕೆ ಭೀಮಸೇನರಾಯರು ಕುಟುಂಬ ಸಮೇತ ಕಳೆದ ತಿಂಗಳು ೧೫ನೇ ತಾ|| ಮಂತ್ರಾಲಯಕ್ಕೆ ಹೋಗಿ ಗುರುಗಳ ಸೇವೆ ಮಾಡಿದರು. [illegible] ನಂತರ ಬೆಳಿಗ್ಗೆ [illegible] ಗಂಟೆಗೆ ಕ್ಷೀರಾಭಿಷೇಕ ಮತ್ತು ಮಹಾಮಂಗಳಾರತಿಯಾದನಂತರ [illegible] ಸೇವೆ [illegible] ಆಜಾನುಬಾಹುವೂ ಆದ ಶ್ರೀ ಗುರುಗಳ ವೃಂದಾವನವನ್ನು ಭೇದಿಸಿ ಪ್ರತ್ಯಕ್ಷವಾಗಿ ಬಂದು [illegible] ಆ ಕಾಂತಿಯಿಂದ ಆತನು ಕಣ್ಣು ಕೋರೈಸಿತು ಕಣ್ಣು ಮುಚ್ಚಿ ತೆರೆಯುವುದರೊಳಗೆ ಗುರುಗಳು ಅದೃಶ್ಯರಾದರು ಎಂಬ ಸಂಗತಿಯನ್ನು ಮೈಸೂರು ರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು ತಿಳಿಸಿರುತ್ತಾರೆ

ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ

ನಂಜನಗೂಡು ಟೆಕ್ಸ್‌ಟೈಲ್ ಮಿಲ್ಲಿನ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಬಿ ಕೆ ಮೂರ್ತಿಯವರ ಪುತ್ರ ಶ್ರೀ ಬಿ ಎಂ ವಿಶ್ವನಾಥರವರು ಮ್ಯಾಂಚೆಸ್ಟರಿನಲ್ಲಿ ಟೆಕ್ಸ್‌ಟೈಲ್ ಟೆಕ್ನಾಲಜಿಯ ಉಚ್ಚ ಶಿಕ್ಷಣ ಪಡೆಯುವ [illegible] ನಿನ್ನೆ [illegible] ಘಂಟೆಗೆ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಅವರು ಹಿಂಹಳದಿಂದ ಹಡಗಿನಲ್ಲಿ ಇಂಗ್ಲೆಂಡಿಗೆ ತೆರಳುವರು. ಅವರ ಇಷ್ಟ ಮಿತ್ರರನೇಕರು ರಾಜಧಾನಿಯ ರೈಲ್ವೆ ಸ್ಟೇಷನ್ನಿನಲ್ಲಿ ಅವರನ್ನು ಬೀಳ್ಕೊಟ್ಟರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕನ್ನಡ ವಾರ್ತೆ [illegible] ಎಲ್ ತಿಮ್ಮಯ್ಯ ಸಂಗೀತ ಮಧ್ಯಾಹ್ನ [illegible] ಮತ್ತು [illegible] ಲಘು ಸಂಗೀತ ಸಂಜೆ [illegible] ಮತ್ತು [illegible] ವಾರ್ತೆ [illegible] ಹಿಂದಿ ಪಾಠ [illegible] ಎಲ್ ತಿಮ್ಮಯ್ಯ ಸಂಗೀತ [illegible] ಹಿಂದಿ ಭಜನೆ [illegible] ಸಂಗೀತ [illegible] ಎಲ್ ದಿನೇಶ [illegible] ಭಾಷಣ [illegible] ಮತ್ತು ಮುಖ್ಯ [illegible]

ಲಾ ಪ್ರೋಸ್‌ನಲ್ಲಿ ವಿಮಾನ ಮುರಿದು ೪೭ ಜನರ ಮರಣ

ಇಂಡೋಚೈನಾದ ಲಾ ಪ್ರೋಸ್ ರಾಜ್ಯದಲ್ಲಿ ಒಂದು ಕಡೆ ವಿಯಟ್ನಾಂ ವಿಮಾನವೊಂದು [illegible] ಇದ್ದವರಲ್ಲಿದ್ದ ೪೭ ಮಂದಿ ಮೃತಪಟ್ಟರೆಂದು [illegible] ವಿಯಟ್ನಾಂ ಸೈನಿಕ [illegible] ವಕ್ತಾರ [illegible] ತಿಳಿಸಿತು

ಸಂಸ್ಥಾನದ ಪಶು ವೈದ್ಯ ಇಲಾಖಾಧಿಕಾರಿಗಳ ರಜೆ

ಪೋಲೆಂಡ ಮತ್ತು [illegible] ಮತ್ತು [illegible] ಜನರು [illegible] ಸಂಸ್ಥಾನದ ಪಶು ವೈದ್ಯ ಇಲಾಖಾಧಿಕಾರಿಗಳಾದ ಡಾ|| ಪಿ ಎಂ ನಾರಾಯಣಸ್ವಾಮಿ ನಾಯ್ಡುರವರನ್ನು ನೇಮಿಸಲಾಗಿದೆ

ಸ್ತ್ರೀಯರ ಉಳಿತಾಯ ಯೋಜನೆಗಾಗಿ ೧೧೦ ಸಾವಿರ ರೂ.

ಮಹಿಳೆಯರ ಉಳಿತಾಯ ಯೋಜನೆ [illegible] ಸಂಗ್ರಹಣೆ ಕಾರ್ಯದರ್ಶಿನಿಯರಾದ ಶ್ರೀಮತಿ ಎ ಟಿ ಲಕ್ಷ್ಮಮ್ಮ ಮತ್ತು ಶ್ರೀಮತಿ [illegible] ಜನಸೇವಕರುಗಳು ಇದೇ ಮಾಹೆಯಂದ ಮೂರು ತಿಂಗಳ ಕಾಲ ರಾಜಧಾನಿಯಲ್ಲಿ ಮಹಿಳಾ ಸಮ್ಮೇಳನದ ಪರವಾಗಿ ರಾಷ್ಟ್ರೀಯ ಉಳಿತಾಯದ ಸರ್ಟಿಫಿಕೇಟುಗಳನ್ನು ಕೊಳ್ಳುವ ಬಗ್ಗೆ ಪ್ರಚಾರ ನಡೆಸುವರೆಂದು ಗೊತ್ತಾಗಿದೆ. ಅವರುಗಳು ಈ ಬಗೆಗೆ ಹತ್ತು ಸಾವಿರ ರೂ ಗಳನ್ನು ಶೇಖರಿಸಿರುವರು. ಪ್ರಚಾರ ಕಾರ್ಯದ ಅಂಗವಾಗಿ ಶ್ರೀಮತಿ [illegible] ಶ್ರೀಮತಿ [illegible] ರಾಜಧಾನಿಯಲ್ಲಿನ ಸ್ತ್ರೀಯರ [illegible] ಭಾಷಣ ಮಾಡುವರು

ಅಂಚೆ ಇಲಾಖೆ ಕಛೇರಿಯಲ್ಲಿ ಸ್ವಾತಂತ್ರ್ಯೋತ್ಸವ

ರಾಜಧಾನಿಯ ಅಂಚೆ, ತಂತಿ ಮತ್ತು ಆರ್ ಎಂ ಎಸ್ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಕಳೆದ [illegible] ಸ್ವಾತಂತ್ರ್ಯ ದಿನೋತ್ಸವವು ನಡೆಯಿತು. ಬೆಳಿಗ್ಗೆ ಶ್ರೀ ಎಲ್ ಎಸ್ [illegible]ರವರು ಧ್ವಜಾರೋಹಣ ಮಾಡಿದನಂತರ ಉಪಾಹಾರ ಮತ್ತು ಕ್ರೀಡೆಗಳು ನಡೆದುವು. ಸಂಜೆ [illegible] ಸಭೆಯು ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ [illegible] ಭರತರಾಜ ಸಿಂಗರ ಅಧ್ಯಕ್ಷತೆಯಲ್ಲಿ [illegible] ಸಂಘದ ಕಾರ್ಯದರ್ಶಿ [illegible] ಶ್ರೀ [illegible] ಅವರಿಂದ [illegible] ಗೀತೆಗಳಲ್ಲಿ [illegible] ಸಿದವರಿಗೆ ಅಧ್ಯಕ್ಷರು ಬಹುಮಾನವನ್ನು ಹಂಚಿದರು. [illegible] ಭಾಷಣ ಮಾಡಿ, ಸ್ವಾತಂತ್ರ್ಯ ದಿನೋತ್ಸವದ ಮಹತ್ವವನ್ನು ವಿವರಿಸಿದರು. [illegible] ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸ್ವಾತಂತ್ರ್ಯ ದಿನಾಚರಣೆ

ಚಾಮರಾಜನಗರ ೧೬

ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ನೆನ್ನೆ ಸ್ವಾತಂತ್ರ್ಯ ದಿನೋತ್ಸವವನ್ನು ನೆರವೇರಿಸಿದರು. ಬೆಳಿಗ್ಗೆ ೭ ಗಂಟೆಗೆ ಪ್ರಭಾತಫೇರಿ ನಡೆಯಿತು. ನಂತರ ಸಮಿತಿ ಅಧ್ಯಕ್ಷರಾದ ಶ್ರೀ ಪುಟ್ಟನಂಜಪ್ಪನವರು ರಾಷ್ಟ್ರಧ್ವಜಾರೋಹಣ ಮಾಡಿದರು. ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ಕುರಿತು ಅವರು ವಿವರ ತಿಳಿಸಿದರು. ಶ್ರೀ ಬಿ ಎಲ್ ನಂಜುಂಡಶೆಟ್ಟರು ಸಿಹಿ ತಿಂಡಿ ವಿನಿಯೋಗಿಸಿದರು

ಉರಿಯುತ್ತಿದ್ದ ವಿಮಾನದಿಂದ ಧುಮುಕಿ ೩೭ ಜನರ ಪಾರು

ಬ್ರಿಟನ್ನಿನ ಹ್ಯಾಂಪ್‌ಶೈರಿನ ವಿಮಾನ[illegible]ದಲ್ಲಿ ಭಾನುವಾರ ವಿಮಾನವೊಂದು ಮುರಿದು ಬಿದ್ದು ಸಿಡಿದನಂತರ ಅದಕ್ಕೆ ಜ್ವಾಲೆಯು ಆವರಿಸಿತು. ವಿಮಾನವು ಬಿದ್ದ ರಭಸಕ್ಕೆ ಬಾಗಿಲು ತೆರೆಯಿತೆಂದೂ ಒಳಗಿದ್ದ ೩೭ ಜನರು ಹೊರಕ್ಕೆ ಹಾರಿ ಪಾರಾದರೆಂದೂ ವರದಿಯಾಗಿದೆ

ಹುಲ್ಲಹಳ್ಳಿಯಲ್ಲಿ ಸ್ವಾತಂತ್ರ್ಯೋತ್ಸವ

ಹುಲ್ಲಹಳ್ಳಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ೧೫ನೇ ತಾ|| ದಿನಾಚರಣೆಯು ನೆರವೇರಿತು. ಶ್ರೀ ಮತ್ತು ಸಹೋದರರಿಂದ ದೇವತಾ ಪ್ರಾರ್ಥನೆ, ಶ್ರೀ ಹೆಚ್ ಎಂ ನಾಗಪ್ಪನವರಿಂದ ರಾಷ್ಟ್ರ ಧ್ವಜಾರೋಹಣ ಮತ್ತು ಡಾ|| ರಾಮಚಂದ್ರರವರಿಂದ ಭಾಷಣವು ನಡೆದುವು. ಶ್ರೀ ಹೆಚ್ ಎಂ ವಲ್ಲಭಾಚಾರ್ಯರ ಸಂಗೀತವೂ ಜರುಗಿತು. ನಂತರ ಸಂಘದ ಚುನಾವಣೆ ನಡೆದು, ಶ್ರೀ ಹೆಚ್. ಎಂ. ನಾಗಪ್ಪನವರು ಅಧ್ಯಕ್ಷರಾಗಿಯೂ ಶ್ರೀ ಹೆಚ್ ಎಂ ಪುಟ್ಟಸ್ವಾಮಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ವಿ ನಾಗಪ್ಪನವರು ಕಾರ್ಯದರ್ಶಿಯಾಗಿಯೂ, ಶ್ರೀ ಹೆಚ್ ಎಸ್ ದಾಸಪ್ಪನವರು ಉಪ ಕಾರ್ಯದರ್ಶಿಯಾಗಿಯೂ ಶ್ರೀ ಹೆಚ್ ಟಿ ಪುಟ್ಟಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು

ರಾಜೂರವರ ವಾರ ಪತ್ರಿಕೆ

ಶ್ರೀ ಎಲ್ ಎಸ್ ರಾಜೂರವರು ಕರೆಂಟ್ ಪಾಲಿಟಿಕ್ಸ್ ಮತ್ತು ರಿವ್ಯೂಸ್ ಎಂಬ ಆಂಗ್ಲ ವಾರ ಪತ್ರಿಕೆಯನ್ನು ಕಳೆದ ಭಾನುವಾರ ಹೊರಡಿಸಿರುತ್ತಾರೆ ಅವರೇ ಅದರ ಸಂಪಾದಕರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ			ರೂ ಆ		
ಕಡಲೇಕಾಯಿ	[illegible]			[illegible]		
ಎಳ್ಳು	[illegible]			[illegible]		
ಹುರುಳಿ	[illegible]			[illegible]		
ಹೆಸರು	[illegible]			[illegible]		
ಹಲಸಂದೆ	[illegible]			[illegible]		
ಉದ್ದು	[illegible]			[illegible]		
ತೊಗರಿ	[illegible]					
ಧನಿಯ	[illegible]					
ಮೆಣಸಿನಕಾಯಿ	[illegible]			[illegible]		
ಹೊಗೆಸೊಪ್ಪು	[illegible]					
ಮೆಂತ್ಯ	[illegible]					
ತೆಂಗಿನಕಾಯಿ ೧,೦೦೦	[illegible]			[illegible]		

ಒಲಂಪಿಯಾ ★ ಅಮೋಘ ಪ್ರಾರಂಭ 19—8—54 ರಿಂದ ಪ್ರತಿ ದಿನ ಮೂರು ಆಟಗಳು

ಎಂ ಪಿ ಪ್ರೊಡಕ್ಷನ್ಸ್‌ರವರ [illegible] ಹಿಂದಿ ಚಿತ್ರ

★ ಬಾಬಲ :: BABLA ★

ತಾರಾಗಣ — [illegible]

ಸಂಗೀತ [illegible] — ನಿರ್ದೇಶನ [illegible]

ಶ್ರೀ ಕನ್ನಿಕಾಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಹನುಮಂತರಾವ್ ರಸ್ತೆ ಮೈಸೂರು

ಪ್ರಕಟಣೆ

ನಮ್ಮಲ್ಲಿ ಫಿಕ್ಸೆಡ್ ಡಿಪಾಜಿಟ್ ದರವನ್ನು ಈ ಕೆಳಗೆ ಕಂಡಂತೆ ಏರಿಸಲಾಗಿದೆ

1/2 ವರ್ಷಕ್ಕೆ	—	ಶೇ|| 3	4 ವರ್ಷಕ್ಕೆ	—	ಶೇ|| 4
1 ”	—	” 3 1/4	5	—	4 1/2
2	—	” 3 1/2	6 ”	—	4 3/4
3 ”	—	” 3 3/4	7 ”	—	” 5

ಧರ್ಮದ ಡಿಪಾಜಿಟ್ಟುಗಳಿಗೆ ಮೇಲ್ಕಂಡ ದರಕ್ಕಿಂತ ಶೇ|| 1/4 ಜಾಸ್ತಿ ಬಡ್ಡಿ ಕೊಡಲಾಗುತ್ತೆ ಮೇಲ್ಕಂಡ ಸೊಸೈಟಿಯ ಮೆಂಬರುಗಳೂ ಮತ್ತು ಸಾರ್ವಜನಿಕರೂ ಈ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ

ಪ್ರಭಾ ❋ ಅಮೋಘ ಪ್ರಾರಂಭ 19—8—54 ರಿಂದ ಪ್ರತಿ ದಿನ ಮೂರು ಆಟಗಳು

[illegible] ಪ್ರೊಡಕ್ಷನ್ಸ್‌ರವರ [illegible] ಹಿಂದಿ ಚಿತ್ರ ★ ಭಾಯ್ ಸಾಹೆಬ್

[illegible]

ಬೆಳಗಿನ ಪ್ರದರ್ಶನ 20-8-54 ರಿಂದ 3 ದಿವಸಗಳು

[illegible] ಹಿಂದಿ ಚಿತ್ರ ★ ಪ್ರತಾಪ್ ಷಾ ★

[illegible]

Edited Printed and Published by A R Nagarajan at Sadhvi [illegible] D Subbiah Road Mysore

ರಿಜಿಸ್ಟರ್ಡ್ ನಂ. 792

ಬಿಡಿ ಪ್ರತಿ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ ೩೩] SADHVI . THURSDAY 19-8-1954 ಮೈಸೂರು : ಗುರುವಾರ ೧೯-೮-೧೯೫೪ : [ಸಂಚಿಕೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪೋರ್ಚುಗೀಸರ ಸಂಧಾನ ಷರತ್ತಿಗೆ ಭಾರತದ ಅಸಮ್ಮತಿ

ಹೈಕೋರ್ಟಿಗೂ ಸರ್ಕಾರಕ್ಕೂ ಘರ್ಷಣೆಯಿಲ್ಲ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಮೈಸೂರು ೧೮

ಸಂಸ್ಥಾನದ ಸರ್ಕಾರಕ್ಕೂ ಮತ್ತು ಹೈಕೋರ್ಟಿಗೂ ಯಾವ ತರಹೆಯ ತಿಕ್ಕಾಟವೂ ಇಲ್ಲವೆಂದು ಮುಖ್ಯ ಮಂತ್ರಿಗಳು ಇಂದಿನ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಕೆಲವು ದಿನಗಳ ಹಿಂದೆ ಸ್ವಲ್ಪ ಭಿನ್ನಾಭಿಪ್ರಾಯಗಳು ಇದ್ದುವು. ಅವೂ ಸಹ ರಾಜ್ಯಾಂಗದ ನಿಯಮಗಳ ಬಗ್ಗೆ ಬೇರೆ ಬೇರೆ ಅಭಿಪ್ರಾಯ ಹೊಂದಿದ್ದುದರಿಂದ ಉಂಟಾದ ದು. ವನ್ನು ನೌಕರುಗಳ ನೇಮಕದ ಬಗ್ಗೆ ರಾಜ್ಯಾಂಗದ ೩೦೯ ನೇ ನಿಬಂಧನೆಗನುಸಾರವಾಗಿ ನಿಯಮಾವಳಿಗಳನ್ನು ಮಾಡುವ ಅಧಿಕಾರವು ರಾಜಪ್ರಮುಖರಿಗೆ ಇರುವುದೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದರು. ಈ ಅಧಿಕಾರವು ಬಹಳ ದಿನಗಳಿಂದಲೂ ತಮಗೇ ಇರುವುದಾಗಿ ಹೈಕೋರ್ಟಿನವರು ಹೇಳುತ್ತಿದ್ದರು. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಮುನ್ಸೀಫರುಗಳ ಪರೀಕ್ಷೆ ನಡೆಸಿ ಆಯ್ಕೆ ಮಾಡಬಹುದೆಂದು ಸರ್ಕಾರದವರು ಅಭಿಪ್ರಾಯ ಹೊಂದಿದ್ದರು. ಈಗ ಈ ವಿಷಯವು ಇತ್ಯರ್ಥವಾಗಿರುತ್ತದೆ.

ಆದರೆ ಕೆಲವು ಜನರು ರಾಜಕೀಯ ಉದ್ದೇಶಗಳಿಂದ ಈ ಭಿನ್ನಾಭಿಪ್ರಾಯಗಳನ್ನು ಘರ್ಷಣೆಗಳೆಂದು ಕರೆದು ವಿಪರೀತಾರ್ಥವನ್ನು ಕಲ್ಪಿಸುವುದಕ್ಕಾಗಿ ನಾನು ವಿಷಾದಿಸುತ್ತೇನೆ. ಅವರು ಆ ರೀತಿ ಮಾಡುವುದು ದೇಶಾಭಿಮಾನದ ಲಕ್ಷಣವೇನಲ್ಲ ಎಂಬುದಾಗಿ ಅವರು ನುಡಿದರು.

ಮುಂದುವರಿದು, ಈ ಭಿನ್ನಾಭಿಪ್ರಾಯಗಳು ಒಂದು ನ್ಯಾಯಮಂಡಲದಲ್ಲಿನ ಇಬ್ಬರು ನ್ಯಾಯಾಧೀಶರಲ್ಲಿ ಉಂಟಾಗಬಹುದಾದ ಅಭಿಪ್ರಾಯ ಭೇದದ ರೀತಿಯವು ಎಂದೂ, ಅವುಗಳನ್ನು ಕಲಹವೆಂದು ಪರಿಗಣಿಸುವುದು ಸರಿಯಲ್ಲವೆಂದೂ ಹೇಳಿದರು.

ವಿದ್ಯಾರ್ಥಿಗಳಿಗೆ ಬಹುಮಾನ

ಮೈಸೂರಿನ ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದು, ೧೯೫೪ನೇ ಪಬ್ಲಿಕ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಬ್ರಾಹ್ಮಣೇತರ ಕ್ಷತ್ರಿಯ ವಿದ್ಯಾರ್ಥಿಗಳಿಗೆ ಶ್ರೀ ಕೃಷ್ಣ ಜಯಂತಿಯ ಸಮಾರಂಭದಲ್ಲಿ ಬಹುಮಾನ ವಿನಿಯೋಗ ಮಾಡಲಾಗುವುದು. ೨೦ ನೇ ತಾರೀಖು ಶುಕ್ರವಾರ ಸಂಜೆಯೊಳಗೆ ಅವರು ತಮ್ಮ ಹೆಸರು ಮತ್ತು ಓದುತ್ತಿರುವ ತರಗತಿಗಳನ್ನು ದಿವಾನರ ರಸ್ತೆಯಲ್ಲಿರುವ ಬ್ರಾಹ್ಮಣೇತರ ಕ್ಷತ್ರಿಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯವರಾದ ಶ್ರೀ ಎಸ್ ರಾಮೋಜಿರಾಯರಿಗೆ ತಿಳಿಸಬೇಕಾಗಿ ಕೋರಿದೆ.

ಸಂಸ್ಥಾನದ ಶಿಕ್ಷಣ ಇಲಾಖಾ ಡೈರೆಕ್ಟರರ ಅಧ್ಯಕ್ಷತೆಯಲ್ಲಿ ೧೫ ಜನ ಸದಸ್ಯರುಳ್ಳ ಪಠ್ಯ ಪುಸ್ತಕ ಬೋರ್ಡನ್ನು ೩ ವರ್ಷದ ಅವಧಿಗೆ ಈಗಿನ ಸಮಿತಿಗಳಿಗೆ ಬದಲಾಗಿ ಸರ್ಕಾರದವರು ರಚಿಸಿರುತ್ತಾರೆ. ವಿದ್ಯಾ ಇಲಾಖೆಯ ಮುಖ್ಯ ಉಪ ಡೈರೆಕ್ಟರರು ಬೋರ್ಡಿನ ಕಾರ್ಯದರ್ಶಿಗಳಾಗಿರುವರು.

ವಿದ್ಯಾ ಇಲಾಖೆಯ ಡೈರೆಕ್ಟರು ಸರ್ಕಾರಕ್ಕೆ ಸಲಹೆ ಮಾಡಿ, ಈಗಿರುವ ವಿವಿಧ ಸಮಿತಿಗಳ ಬದಲು ಒಂದು ಹೈ ಪವರ್ ಸಮಿತಿಯನ್ನು ನೇಮಿಸುವುದು ಒಳ್ಳೆಯದೆಂದು ತಿಳಿಸಿದ್ದರು. ಬಹು ಸಮಿತಿಗಳ ರಚನೆ ಪದ್ಧತಿಯಿಂದ ಅನೇಕ ತೊಂದರೆಗಳು ಉದ್ಭವವಾಗುತ್ತವೆಂದು ಡೈರೆಕ್ಟರರ ಅಭಿಪ್ರಾಯಪಟ್ಟಿದ್ದರು.

ಗೋಧಿ ಮತ್ತು ಇತರ ಧಾನ್ಯಗಳ ರೇಷನ್ ಕಾರ್ಡಿನ ರದ್ದು

ಗೋಧಿ ಮತ್ತು ಇತರ ಧಾನ್ಯಗಳ ಹಂಚಿಕೆ ಒಗ್ಗೆ ರೇಷನ್ ಕಾರ್ಡ್ ಪದ್ಧತಿಯನ್ನು ಕೂಡಲೇ ನಿಲ್ಲಿಸಬೇಕೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ. ಯಾವುದೇ ಧಾನ್ಯವಾಗಲಿ ಮತ್ತು ಸಕ್ಕರೆಯ ನ್ಯಾಗಲಿ ಎಷ್ಟು ಬೇಕಾದರೂ ನ್ಯಾಯ ಬೆಲೆ ಡಿಪೋಗಳಲ್ಲಿ ನಿರ್ಬಂಧವಿಲ್ಲದೆ ಕೊಳ್ಳಬಹುದೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ.

ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಬಳ ಹೆಚ್ಚುವುದೇ?

ಸಂಸ್ಥಾನಗಳಲ್ಲಿರುವ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ವೇತನದ ಮಟ್ಟವು ಬಹಳ ಅತೃಪ್ತಿಕರವಾಗಿರುವುದೆಂದು ಕೇಂದ್ರ ಸರ್ಕಾರದವರ ಸಂಸ್ಥಾನ ಸರ್ಕಾರಗಳಿಗೆ ತಿಳಿಸಿರುತ್ತಾರೆ. ಸಂಬಳ ಹೆಚ್ಚಿಸಲು ತಾವು ಯಾವ ರೀತಿಯಲ್ಲಿ ಸಹಾಯ ಮಾಡಬಹುದೆಂಬ ವಿಷಯವನ್ನು ಭಾರತ ಸರ್ಕಾರದವರು ಆಲೋಚಿಸುತ್ತಿರುವರೆಂದು ಹೇಳಲಾಗಿದೆ.

ಬೊಂಬಾಯಿಯಲ್ಲಿ ಗೋಹತ್ಯಾ ವಿರೋಧ ಸತ್ಯಾಗ್ರಹಿಗಳ ಬಂಧನ

ಬೊಂಬಾಯಿಯ ಗೋಹತ್ಯಾ ವಿರೋಧ ಸಮಿತಿಯು ನೆನ್ನೆ ಇಲ್ಲಿ ಸತ್ಯಾಗ್ರಹವನ್ನು ಆರಂಭಿಸಿತು. ... ಜನ ಸತ್ಯಾಗ್ರಹಿಗಳು ಪೌರಸಭೆಯ ಕಸಾಯಿಖಾನೆಗೆ ಹೋಗಲು ನಿರ್ಬಂಧವಿದ್ದರೂ ಅತಿಕ್ರಮ ಪ್ರವೇಶ ಮಾಡಿದುದಕ್ಕಾಗಿ ಬಂಧಿಸಲ್ಪಟ್ಟರು.

ಜೋಳ ಕದ್ದು ಮಾರುತ್ತಿದ್ದ-ವ್ಯಕ್ತಿಗಳಿಬ್ಬರಿಗೆ ೧ ತಿಂಗಳು ಸಜಾ

ನಂಜನಗೂಡಿನ ಬಳಿ ಚಿಕ್ಕವೀರ ರಂಗ ಎಂಬುವರಿಗೆ ಸೇರಿದ ಹೊಲದಲ್ಲಿ ಕಳೆದ ೧೫ನೇ ತಾ|| ಚಾಮರಾಜನಗರ ತಾಲ್ಲೂಕು ... ಮತ್ತು ಬಸವೇಗೌಡ ಎಂಬುವರು ... ಜೋಳವನ್ನು ಕದ್ದು ನಗರದಲ್ಲಿ ಮಾರುತ್ತಿದ್ದ ಆಪಾದನೆ ಮೇಲೆ ... ಪೋಲೀಸರು ಅವರಿಬ್ಬರ ಮೇಲೆ ... ಹೂಡಿದ್ದ ... ಕದ್ದಿರುವುದು ... ರುಜುವಾದುದರಿಂದ ಅವರುಗಳಿಗೆ ಒಂದು ತಿಂಗಳು ... ಶಿಕ್ಷೆ ... ವಿಧಿಸಿದರು.

ದಕ್ಷಿಣ ಕನ್ನಡಕ್ಕೂ ಮತ್ತು ಮೈಸೂರಿಗೂ ಮಧುರ ಬಾಂಧವ್ಯ

ಮುಖ್ಯ ಮಂತ್ರಿ ಕೆ. ಹನುಮಂತಯ್ಯನವರ ಭಾಷಣ

ಮೈಸೂರು ೨೪

ನೆನ್ನೆ ಸಂಜೆ ದಾಸಪ್ರಕಾಶ ಹೋಟೆಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಸಂಘದ ಆರಂಭ ಭಾಷಣವನ್ನು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಾಡಿದರು. ಸಂಘದ ಅಧ್ಯಕ್ಷರಾದ ಪ್ರೊ|| ಕೆ. ನಾರಾಯಣರಾಯರು ಅಗ್ರಾಸನವನ್ನು ವಹಿಸಿದ್ದರು.

ಶ್ರೀಮತಿ ವತ್ಸಲಾರವರ ಪ್ರಾರ್ಥನೆಯಾದ ಮೇಲೆ ಕಾರ್ಯದರ್ಶಿ ಶ್ರೀ ಭಾಸ್ಕರ ಶೆಟ್ಟರು ಸ್ವಾಗತ ಭಾಷಣ ಮಾಡಿ ದಕ್ಷಿಣ ಕನ್ನಡ ಜಿಲ್ಲೆಗೂ, ಮೈಸೂರಿಗೂ ಇರುವ ನಿಕಟವಾದ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧಗಳನ್ನು ಪ್ರಸ್ತಾಪಿಸಿ ಅವು ಇನ್ನೂ ಇತೋಧಿಕವಾಗಿ ಬೆಳೆದು ಬರಲೆಂದು ಹಾರೈಸಿದರು. ಶ್ರೀ ನಾಗಪ್ಪಾಚಾರ್ಯರಿಂದ ವೀಣಾ ವಾದನವು ನಡೆಯಿತು.

ಮುಖ್ಯ ಮಂತ್ರಿಗಳು ಭಾಷಣ ಮಾಡಿ, ದಕ್ಷಿಣ ಕನ್ನಡ ಜಿಲ್ಲೆಯು ಹೇಗೆ ಸೌಂದರ್ಯಯುತವಾಗಿದೆಯೋ ಹಾಗೆಯೇ ಅಲ್ಲಿನ ಜನರೂ ಸಹ ಸ್ವಭಾವಸ್ತುತಿಗಳಾಗಿರುವರೆಂದು ಬಣ್ಣಿಸಿ, ನೈಸರ್ಗಿಕ ಸಂಪತ್ತಿನಿಂದ ಕೂಡಿರುವದೆಂದೂ, ಆ ಜಿಲ್ಲೆಯು ಎಷ್ಟು ಕಾಲ ಮದ್ರಾಸ್ ಪ್ರಾಂತ್ಯದಲ್ಲಿರುವುದೋ ಹೇಳುವುದಕ್ಕಾಗುವುದಿಲ್ಲವೆಂದೂ ತಿಳಿಸಿ, ಸಂಸ್ಥಾನ ಪುನರ್ರಚನಾ ಸಮಿತಿಯು ಈ ಬಗ್ಗೆ ಹೇಗೆ ತೀರ್ಮಾನಿಸಿದರೂ, ಈಗಿನಂತೆ ಮೈಸೂರಿಗೂ ಮತ್ತು ಆ ಜಿಲ್ಲೆಗೂ ನಡುವೆ ಬಂದಿರುವ ಮಧುರ ಬಾಂಧವ್ಯವು ಮುಂದುವರಿಯಲೆಂದು ಹಾರೈಸಿದರು.

ಶ್ರೀ ಸ್ಟೀಫನ್ಸ್ ಮತ್ತು [illegible]ರವರಿಂದ ಸಂಗೀತವಾದಮೇಲೆ ಅಧ್ಯಕ್ಷರ ಭಾಷಣ ನಡೆಯಿತು. ಶ್ರೀ ಬಸಪ್ಪಶೆಟ್ಟರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಶಾರದಾ ವಿಲಾಸ ಲಾ ಕಾಲೇಜು ಸಂಘದ ಆರಂಭ ಭಾಷಣ

ರಾಜಧಾನಿಯ ಶಾರದಾ ವಿಲಾಸ ಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಾಳೆ ಸಾಯಂಕಾಲ ೫ ಘಂಟೆಗೆ ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಮಾಡಲಿರುವರು. ವೈಸ್ ಛಾನ್ಸಲರ್ ಶ್ರೀ ವಿ ಎಲ್ ಡಿಸೋಜಾರವರು ಅಧ್ಯಕ್ಷತೆ ವಹಿಸುವರು. ಸಂಘದ ಅಧಿಕಾರ ವರ್ಗಕ್ಕೆ ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿಯವರು ಅಧ್ಯಕ್ಷರಾಗಿಯೂ ಶ್ರೀ ಆನಂದತೀರ್ಥರವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುತ್ತಾರೆ.

ಅರುಣ ಪತ್ರಿಕೆ ಕಾರ್ಯಾಲಯದ ವರ್ಗಾವಣೆ

ರಾಜಧಾನಿಯಲ್ಲಿ ಪ್ರಕಟವಾಗುತ್ತಲಿರುವ ಅರುಣ ಪತ್ರಿಕೆಯ ಕಾರ್ಯಾಲಯವನ್ನು ನೂರಡಿ ರಸ್ತೆಯ ಈಗಿನ ಸ್ಥಳದಿಂದ ಅದೇ ಬೀದಿಯ [illegible] ಪೌರಸಭಾ ಮಳಿಗೆಯೊಂದಕ್ಕೆ ವರ್ಗಾಯಿಸಿದ ಸಂಬಂಧದಲ್ಲಿ ನೆನ್ನೆ ಸಮಾರಂಭವೊಂದು ನಡೆಯಿತು. ನಗರದ ಪತ್ರಿಕೋದ್ಯೋಗಿಗಳಲ್ಲದೆ, ಪೌರಸಭಾಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿ, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣ ಮುಂತಾದ ಇತರರೂ ಬಂದಿದ್ದರು. ಪತ್ರಿಕೆಯ ಸಂಪಾದಕರಾದ ಶ್ರೀ ಜೆಚ್ ಕೆ ಕುಮಾರಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿದರು. [illegible] ನಡೆದನಂತರ ಅತಿಥಿ[illegible]

ಕೃಷ್ಣ ಜಯಂತಿ ಸಂಗೀತ

ರಾಜಧಾನಿಯ [illegible] ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜಯಂತಿ ಉತ್ಸವದ ಅಂಗವಾಗಿ ನಾಳೆ ಮಧ್ಯಾಹ್ನ ೪ ಗಂಟೆಗೆ ಶ್ರೀ ಎ ಸೇತೂರಾಮಾಚಾರ್ಯರ ಹರಿಕಥೆಯೂ ಮತ್ತು ೭ ಗಂಟೆಗೆ ಶ್ರೀಮತಿ ರತ್ನಮ್ಮ ಕೃಷ್ಣಮೂರ್ತಿಯವರ ಸಂಗೀತವೂ ನಡೆಯುವುವು.

ನೆಹರೂರವರನ್ನು ನೋಡಲು ೧,೩೦೦ ಮೈಲಿ ಕಾಲ್ನಡಿಗೆ

ಹೈದರಾಬಾದು ಸಂಸ್ಥಾನದ [illegible] ನೌಕರರ ಕಷ್ಟಗಳನ್ನು ನೆಹರೂರವರಲ್ಲಿ ನಿವೇದಿಸಿಕೊಳ್ಳಲು [illegible] ಎಂಬ ಇಲಾಖಾ ನೌಕರನು ೧,೩೦೦ ಮೈಲಿ ದೂರ ನಡೆದು ದೆಹಲಿಯನ್ನು ತಲುಪಿರುತ್ತಾನೆ. ಅವನು ನೆಹರೂರವರನ್ನು ನೋಡಲು [illegible] ಹೋಟೆಲಿನಲ್ಲಿರುವುದು ಮಾರನೇ [illegible] ಅವನು ಈ ವರೆಗೆ ೬,೦೦೦ ಮೈಲಿಗಳನ್ನು ನಡೆದಿರುತ್ತಾನೆ. ಕಳೆದ [illegible] ನೆಹರೂರವರ ದರ್ಶನವಾಗಲಿಲ್ಲ. ಹೈದರಾಬಾದು ದಿವಾನಿ ನೌಕರರುಗಳ ಸಂಬಳದ ಮೊತ್ತ ಮತ್ತು ಭತ್ಯದ ರದ್ದಿನ ವಿರುದ್ಧವಾಗಿ [illegible] ಚಳುವಳಿ ನಡೆಸಲಾಗುತ್ತಿರುವುದೆಂದು ಹೇಳಲಾಗಿದೆ. ೧೯೫೩ರಲ್ಲಿ ೧೧ ದಿನಗಳ ಕಾಲ ಮುಷ್ಕರವನ್ನು ನಡೆಸಿದ್ದ ದಾಗಿಯೂ ಗೊತ್ತಾಗಿದೆ.

ಗೋವಧೆ ನಿರೋಧಕ್ಕಾಗಿ ಪುನಃ ಉಪವಾಸ

ಅಖಿಲ ಭಾರತ ಗೋವಧಾ ನಿರೋಧ ಚಳುವಳಿಯ ನಾಯಕರಾದ ಸ್ವಾಮಿ ರಾಮಚಂದ್ರ ಶರ್ಮ ವೀರರು ಆಗಸ್ಟ್ ೩೧ ರಿಂದ ಪುನಃ ಗೋವಧೆ ನಿರೋಧಕ್ಕಾಗಿ ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ. ಅವರು [illegible] ದಿನಗಳ ಉಪವಾಸ ಮಾಡಿ, ಆಚಾರ್ಯ ವಿನೋಬಾ ಭಾವೆಯವರ ಕೋರಿಕೆ ಮೇಲೆ ನಿಲ್ಲಿಸಿದ್ದರು.

ಫುಟ್ ಬಾಲ್ ಮತ್ತು ವಾಲಿಬಾಲ್ ಪಂದ್ಯ

ರಾಜಧಾನಿಯ [illegible] ಶ್ರೀ ಚಾಮುಂಡೇಶ್ವರಿ ವಿದ್ಯಾರ್ಥಿ ನಿಲಯದ ಟೀಮಿನವರು ನೆನ್ನೆ ನಂಜನಗೂಡಿನಲ್ಲಿ [illegible] ವಿದ್ಯಾರ್ಥಿ ನಿಲಯದವರೊಡನೆ ವಾಲಿಬಾಲ್ ಪಂದ್ಯವನ್ನು ಆಡಿ ಜಯಗಳಿಸಿದರು. ಅಲ್ಲದೆ [illegible] ಹಾಸ್ಟಲಿನವರೊಡನೆ ಆಡಿದ ಫುಟ್ ಬಾಲ್ ಪಂದ್ಯದಲ್ಲಿ ಉಭಯರೂ ಒಂದೊಂದು ಗೋಲು ಹೊಡೆದು ಆಟವು ಸಮವಾಯಿತು. [illegible] ಕಬ್ಬಳ್ಳಿ ವಿದ್ಯಾರ್ಥಿ ನಿಲಯದವರ ಮೇಲೆ ಮೈಸೂರು ಟೀಮಿನವರು ಫುಟ್ ಬಾಲ್ ಪಂದ್ಯವನ್ನು ಆಡಿ ಎರಡು ಕಡೆಯವರೂ ಒಂದೊಂದು ಗೋಲನ್ನು ಮಾಡಿದರು.

ಜಿಲ್ಲಾ ಸೇವಾದಳ ಸಮಿತಿ ಸಭೆ

ಭಾರತ ಸೇವಾ ದಳದ ಮೈಸೂರು ಜಿಲ್ಲಾ ಸಮಿತಿಯ ಸಭೆಯು ಇದೇ ತಾ|| ೨೮ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ನಂಜನಗೂಡಿನಲ್ಲಿರುವ ಕಬ್ಬಳ್ಳಿ ಜವನಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ಸೇರುವುದು.

ವಿವಾಹ ಮಹೋತ್ಸವ

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯ ಸ್ಟೋರ್ ಕೀಪರಾದ ಶ್ರೀ ಟಿ ಎಸ್ ರಂಗಣ್ಣನವರ ಪುತ್ರಿ ಚಿ|| ಸೌ|| ವಿಶಾಲಾಕ್ಷಿಯನ್ನು ಮಂಡ್ಯ ಜಿಲ್ಲಾ ಬೇರಾಳದ ಪೋಸ್ಟ್ ಮಾಸ್ಟರ್ ಶ್ರೀ ಮಹದೇವಯ್ಯನವರ ಪುತ್ರ ಶ್ರೀ ಬಿ ಎಂ. ರಾಮಣ್ಣರವರಿಗೆ ಕೊಟ್ಟು ವಿವಾಹವನ್ನು ನೆನ್ನೆ ರಾಜಧಾನಿಯಲ್ಲಿ ನೆರವೇರಿಸಲಾಯಿತು.

ನಂಜನಗೂಡು ತಾಲ್ಲೂಕು ತಗಡೂರಿನ ಶ್ರೀ ಎಂ ಡಿ [illegible]ರಾಯರ ಪುತ್ರಿ ಕುಮಾರಿ ಸೌ|| ಸೀತಾಲಕ್ಷ್ಮಮ್ಮನವರನ್ನು ಶ್ರೀ ಸಿ ಸುಬ್ಬರಾಯರ ಮಗ ಶ್ರೀ ಸಿ. ಎಸ್. ಗಿರಿವಾಸರವರಿಗೆ ಕೊಟ್ಟು ನೆನ್ನೆ ತಗಡೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ವೈದ್ಯ ವಿದ್ಯಾಭ್ಯಾಸಕ್ಕಾಗಿ ಪಂಚ ವಾರ್ಷಿಕ ಯೋಜನೆ ಅಗತ್ಯ

ಮೆಡಿಕಲ್ ಕೌನ್ಸಿಲ್ ಅಧ್ಯಕ್ಷರ ಭಾಷಣ

ಮೈಸೂರು ೨೪

ಇಲ್ಲಿನ ಮೆಡಿಕಲ್ ಕಾಲೇಜಿನ ಸಂಘದ ಸಂತೋಷ ಸಮಾರಂಭದಲ್ಲಿ ಕಳೆದ ಶನಿವಾರ ಭಾರತದ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷರಾದ ಡಾ|| ಬಿ ಎಸ್ ಪಟೇಲರು ಅಗ್ರಾಸನವನ್ನು ವಹಿಸಿ ಭಾಷಣ ಮಾಡಿ, ದೇಶದಲ್ಲಿ ವೈದ್ಯ ವಿದ್ಯಾಭ್ಯಾಸದ ಮಾರ್ಗವು ಉತ್ತಮಪಡಿಸಬೇಕೆಂದೂ, ಅದಕ್ಕಾಗಿ ಪಂಚ ವಾರ್ಷಿಕ ಯೋಜನೆಯನ್ನು ಏರ್ಪಡಿಸಬೇಕೆಂದೂ ಹೇಳಿದರು. ಮೈಸೂರು ಮೆಡಿಕಲ್ ಕಾಲೇಜಿನ [illegible] ಕಡಿಮೆ ಸಂಬಳವಿರುವುದೆಂದು ಅವರು ಹೇಳಿದರು. [illegible] ವಿದ್ಯಾರ್ಥಿಗಳು ಕೇವಲ ೫೫೦ ರೋಗಿಗಳನ್ನು ಮಾತ್ರ ನೋಡಿಕೊಳ್ಳಲು ಇಲ್ಲಿ ಅವಕಾಶವಿರುವುದೆಂದೂ, ಇತರ ಕಡೆಗಳಲ್ಲಿ ಒಬ್ಬ ವಿದ್ಯಾರ್ಥಿಯು ಐದು ರೋಗಿಗಳನ್ನು ನೋಡಿಕೊಳ್ಳುವನೆಂದೂ ಈ ವಿಷಯವನ್ನು ಕುರಿತು ತಾವು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೊಡನೆ ಮಾತನಾಡಿ ಅವರಿಂದ ತೃಪ್ತಿ ಭರವಸೆ ಹೊಂದಿರುವುದಾಗಿಯೂ ಹೇಳಿದರು. ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಅದರಿಂದ ಅವರುಗಳ ಬಾಂಧವ್ಯವು ಉತ್ತಮಗೊಳ್ಳುವುದೆಂದು ತಿಳಿಸಿದರು. ದೇಶಕ್ಕೆ ಈಗ ೫ ಲಕ್ಷ ವೈದ್ಯರ ಆವಶ್ಯಕತೆಯು ಉಂಟಾಗಿರುವುದೆಂದು ಹೇಳಿದರು.

ಕರ್ನಲ್ ಪೋಪ್ ರವರು ಭಾಷಣ ಮಾಡಿ ಮೈಸೂರು ವೈದ್ಯರ ಕಡಿಮೆ ಸಂಬಳದ ವಿಷಯವನ್ನು ಕೌನ್ಸಿಲಿನವರು ವಿಚಾರಿಸುವರಾಗಿ ಭರವಸೆಯಿತ್ತರು.

ಮೊದಲು ಪ್ರಿನ್ಸಿಪಾಲರಾದ ಡಾ|| ವೈ ಅಪ್ಪಾಜಿರಾಯರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ನಾಗರಾಜಗೌಡರು ವರದಿಯನ್ನೊಪ್ಪಿಸಿದರು. ನಂತರ ಕರ್ನಲ್ ಪೋಪ್ ರವರು ಬಹುಮಾನ ವಿನಿಯೋಗ ಮಾಡಿದರು. ಎರಡು ನಾಟಕಗಳ ಅಭಿನಯ ಮತ್ತು ಶ್ರೀ [illegible]ರವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸ್ಕೌಟ್ ಮತ್ತು ಗೈಡುಗಳ ರ್ಯಾಲಿ

ರಾಜಧಾನಿಯ ಹಾರ್ಡಿಂಜ್ [illegible] ೨೫ನೇ ತಾ|| ಕೃಷ್ಣರಾಜನಗರ [illegible] ಸ್ಕೌಟು ಮತ್ತು ಗೈಡುಗಳ ರ್ಯಾಲಿಯು ನಡೆಯಿತು. [illegible] ಶಾಲೆಗಳವರು ಭಾಗವಹಿಸಿದ್ದರು. ಹಾರ್ಡಿಂಜ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಜಿ ಕುರುವಿಲ್ಲಾರವರು ಅಧ್ಯಕ್ಷತೆ ವಹಿಸಿದ್ದರು. ಧ್ವಜಾರೋಹಣದಿಂದ ಕಾರ್ಯಕ್ರಮವು ಆರಂಭವಾಯಿತು. ಶ್ರೀ ಎಸ್ ಸುಬ್ರಹ್ಮಣ್ಯರವರಿಂದ ಸ್ವಾಗತ ಭಾಷಣವಾದನಂತರ ಶ್ರೀ ಅಗರಂ ರಂಗಯ್ಯನವರು ರ್ಯಾಲಿಗೆ ಸೇರಿದ್ದವರನ್ನು ಉದ್ದೇಶಿಸಿ ಭಾಷಣ ಮಾಡಿದರು. ರ್ಯಾಲಿ ಸಂಚಾಲಕರಾದ ಶ್ರೀ ಹೆಚ್. ಎಸ್ ವೆಂಕಟರಾಯರು ಸ್ಕೌಟು ಸಂಸ್ಥೆಯ ಆವಶ್ಯಕತೆಯನ್ನು ವಿವರಿಸಿದರು. ಕಲಾಕೌಶಲ್ಯಗಳ ಪ್ರದರ್ಶನ ಮತ್ತು ಸಂಚಾಲಕ ಶ್ರೀ ಜಿ ಶ್ರೀನಿವಾಸಯ್ಯಂಗಾರ್ಯರಿಂದ ವಂದನಾರ್ಪಣೆಯನಂತರ ಸ್ಕೌಟ್ ದಿನ್ನದ ಪ್ರಾರಂಭೋತ್ಸವವನ್ನು ಅಧ್ಯಕ್ಷರು ನೆರವೇರಿಸಿದರು. ಆನಂತರ ಸ್ಕೌಟುಗಳ ಮೆರವಣಿಗೆಯು ನಡೆಯಿತು.

ಬಿ. ಎಸ್. ವೆಂಕಟೇಶ!

ಶೀನೆಲ್ಲದಪುದು [illegible] ಮನೆಗೆ ಬಾ. ನಿನ್ನ ತಾಯಿ [illegible] ದುಃಖಿಸುತ್ತಿದ್ದಾಳೆ [illegible] ನಿನ್ನ ದೇವರಿಗೆ ಪೂಜೆ ಇದೆ ಕೂಡಲೆ ಬರುವಿಯಾ ?

ಬಿ. ಎಸ್ ಸುಬ್ಬರಾವ್

Edited, Printed and Published by A R Nagarajan at Sadhvi Press, D.Subbiah Road, Mysore

ಮಾರ್ಮುಗೋವಾ ರೇವಿನಲ್ಲಿ ಕೆಲಸ ನಿಂತಿದೆ

ಮಾರ್ಮುಗೋವಾದಿಂದ ಭಾರತೀಯ ಕೂಲಿಗಾರರನ್ನು ಹೊರಕ್ಕೆ ಕಳುಹಿಸುತ್ತಿರುವುದು ಮತ್ತು ಅವರ ಗಳ ವಲಸೆಯ ಪರಿಣಾಮವಾಗಿ ಒಂದು ವಾರದಿಂದ ರೇವಿನಲ್ಲಿ ಸಾಮಾನುಗಳನ್ನು ಎತ್ತಿ ಇಳಿಸುವ ಕಾರ್ಯವು ನಿಂತುಹೋಗಿರುತ್ತದೆ. [illegible] ಪರಿಶೀಲಿಸು[illegible] ಸರ್ಕಾರದವರ [illegible] ಸ್ಥಳಗಳಿಂದ ಕೆಲಸವನ್ನು ಮಾಡಿಸುತ್ತಿರುವರು. [illegible] ಮಾನಗಳನ್ನು ಎತ್ತಿ ಇಳಿಸಲಾಗುತ್ತಿತ್ತು. ೩,೦೦೦ ಕಾರ್ಮಿಕರು ಕೆಲಸ ಮಾಡುತ್ತಿದ್ದರು.

ಮೂರು ವಾರಗಳಲ್ಲಿ ೪ ಮಕ್ಕಳ ಜನನ

ಅಮೇರಿಕದ 'ಡಿಟ್ರಾಯಿಟ್' ನಗರದ ಬಾಯ್ಸ್ ಬ್ಯಾಕ್ಸ್ ಟರ್ ಎಂಬ ಮಹಿಳೆಯು [illegible] ಮಕ್ಕಳಿಗೆ ಜನ್ಮವಿತ್ತ ಮೂರು ವಾರಗಳ [illegible] ಗಂಡು [illegible] ಹಡೆದಿರುತ್ತಾಳೆ. [illegible] ವೈದ್ಯರು ಹೇಳುತ್ತಾರೆ [illegible] ಜನನವು ೧೭,೦೦೦ಕ್ಕೆ ಒಂದರಂತೆ ಆಗುತ್ತದೆ [illegible] ಹಿಂದೆ ಕೇಳಿಯೇ ಇಲ್ಲವೆಂದೂ [illegible] ದಿದ್ದಾರೆ [illegible] ಸೇರಿ, ಒಟ್ಟು ೬ ಮಕ್ಕಳಿರುವರು.

ಒಲಂಪಿಯಾ ಟಾಕೀಸ್

26 8-54ರಿಂದ [illegible] ಪ್ರಾರಂ[illegible]

ಪ್ರಜ್ವಲಿತ ಸನ್ನಿವೇಶಗಳನ್ನೊಳಗೊಂಡ ಸಾಹಸಮಯ ಹಿಂದಿ ಚಿತ್ರ

ಷಾ ಪಿಕ್ಚರ್ಸ್ ರವರ

ನೂರ್ ಮಹಲ್

ಪಾತ್ರ - ಶಕೀಲಾ, [illegible], ನೂರ್, ಡಬ್ಲ್ಯು. ಎಂ. ಖಾನ್

THE MYSORE CHEMICALS AND FERTILISERS, LTD, MYSORE

NOTICE is hereby given to the Shareholders of the Mysore Chemicals and Fertilisers, Ltd Mysore, that

(1) Sri J. Ramakantha Rao a Shareholder of the Company has notified his intention to nominate Sri H. V Srikantiah B A, LL B, B Com., A.C.A Chartered Accountant, Mysore as an Auditor of the Company for the year 1954-55 at the Annual General Meeting of the Company to be held on Saturday the 4th September 1954

(2) Sri M S Ganesa Iyer, Shareholder of the Company has notified his intention to nominate Messrs D S Subramanya and Co., Chartered Accountants, Bangalore, as Auditor of the Company for the year 1954-55 either jointly with the Retiring Auditors or in place of any one of the Retiring Auditors, at the Annual General Meeting of the Company to be held on the 4th September 1954

C. M KEMPANNA
Secretary.

ರಿಜಿಸ್ಟ್ರೇಷನ್ ನಂ 793

ಗೌರಿ ಹಬ್ಬಕ್ಕೆ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು ಕೊಲಿಷ್
ರಬುಂವಾರಿ ಸೀರೆಗಳು
ಬಂದಿವೆ
M. V. ಭೋಜಯ್ಯ
ಬಿ ಎ ಸಂಡ್ಲ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಒಂದು ಪ್ರತಿ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ ೧೩] SADHVI . WEDNESDAY 25-8-1954 ಮೈಸೂರು . ಬುಧವಾರ ೨೫-೮-೧೯೫೪ [ಸಂಚಿಕೆ ೨೩

ಟಿಬೆಟ್ಟಿನಲ್ಲಿ ದಂಗೆ : ಚೀಣಾ ಸೈನಿಕರಿಂದ ಅನೇಕರ ಕೊಲೆ

ಪೋರ್ಚುಗೀಸರ ಬಂದೂಕಗಳಿಗೆ ಭಾರತ ಹೆದರುವುದಿಲ್ಲ

ಪೋರ್ಚುಗೀಸರ ಪ್ರದೇಶದ ಬಳಿ ಭಾರತ ಸರ್ಕಾರದವರು ಸೈನ್ಯಗಳನ್ನು ಇಟ್ಟಿಲ್ಲವೆಂದೂ, ಮುಂದೆಯೂ ಇಡುವುದಿಲ್ಲವೆಂದೂ, ಆ ಪ್ರದೇಶದಿಂದ ಭಾರತದ ಭದ್ರತೆಗೆ, ಮಿಲಿಟರಿ ದೃಷ್ಟಿಯಿಂದ ಅಪಾಯವೇನೂ ಒದಗುವುದಿಲ್ಲವೆಂಬುದೇ ಭಾರತ ಸರ್ಕಾರದ ಭಾವನೆಯೆಂದೂ ಪ್ರಧಾನಿ ನೆಹರೂರವರು ಹೇಳಿರುತ್ತಾರೆ

ಬ್ರೆಜಿಲ್ ಅಧ್ಯಕ್ಷರ ಆತ್ಮಹತ್ಯೆ

ದಕ್ಷಿಣ ಅಮೆರಿಕದಲ್ಲಿರುವ ಬ್ರೆಜಿಲ್ ರಾಜ್ಯದ ಅಧ್ಯಕ್ಷ ಗೆಟುಲಿಯೊ ವಾರ್ಗಾಸ್‌ರವರು ತಮ್ಮ ಎದೆಗೆ ಗುಂಡಿಟ್ಟು ಹೊಡೆದುಕೊಂಡು ಮೃತಪಟ್ಟಿರುತ್ತಾರೆ ತಾವು ಸತ್ತಮೇಲೆ ಅಧ್ಯಕ್ಷ ಸ್ಥಾನ ಬಿಡುವುದಾಗಿ ಅವರು ತಿಳಿಸಿದ್ದರು ಆ ಸುದ್ದಿಗೆ ರಾಜೀನಾಮೆ ಕೊಡುತ್ತಾರೆ ಅವರ ಮೇಲೆ ಬಹಳವಾಗಿ ಒತ್ತಾಯ ತರಲಾಗಿತ್ತು. ಅಲ್ಲಿನ ಮಂತ್ರಿಮಂಡಲದ ಸದಸ್ಯರೆಲ್ಲರೂ ರಾಜೀನಾಮೆ ಸಲ್ಲಿಸಿರುತ್ತಾರೆ ಅಧ್ಯಕ್ಷ ವಾರ್ಗಾಸ್‌ರವರು ಮಡಿದನಂತರ ಅವರ ಸ್ವಂತ ಊರಾದ ಪೋರ್ಟೊ ಲಿವೆಗ್ರಿ ಎಂಬಲ್ಲಿ ಭಾರಿ ಗಲಭೆ ನಡೆದಿದೆ ದಾಗಿಯೂ, ಪ್ರದರ್ಶನಕಾರರು ಎರಡು ವೃತ್ತಪತ್ರಿಕಾ ಕಛೇರಿಗಳನ್ನು ಸುಟ್ಟುಹಾಕಿದರೆಂದೂ, ಪೋಲೀಸರು ಗುಂಡು ಹಾರಿಸಲಾಗಿ ಅನೇಕರು ಮಡಿದರೆಂದೂ ವರದಿಯಾಗಿದೆ ಬ್ರೆಜಿಲ್ಲಿಗೆ ಹೊಸ ಅಧ್ಯಕ್ಷರು ಆರಿಸಲ್ಪಟ್ಟಿರುತ್ತಾರೆ.

ಸಿ. ವಿ. ರಾಮನ್ನರಿಂದ ಹೊಸ ಸಂಶೋಧನೆ

ಜಿಪ್ಸಂ ಎಂಬ ಒಂದು ಬಗೆಯ ಕಲ್ಲು ಕಲ್ಲಿನ ಹೊಸ ವಸ್ತುವನ್ನು ಭಾರತ ರತ್ನ ಸಿ ವಿ ರಾಮನ್‌ರವರು ಕಂಡುಹಿಡಿದಿರುತ್ತಾರೆ ಅದು ಬೆಳ್ಳಗೆ ಇದ್ದು, ಒಳಗಡೆ ಕಾಣುವ ಹಾಗಿದೆ ಒಳಗಡೆ ನೋಡಿದರೆ ದೀಪವೊಂದು ಇದ್ದಂತೆಯೂ ಅದರ ಸುತ್ತಲೂ ವೃತ್ತಾಕಾರವಿರುವುದಾಗಿಯೂ ಭಾಸವಾಗುತ್ತದೆ. ಅಲುಗಾಡಿಸಿದರೆ ಆ ವೃತ್ತಗಳು ಕಾಣಬರುತ್ತವೆ. ಅದಕ್ಕೆ ಫ್ಯಾಕ್ಯುಲರ್ ಜಿಪ್ಸಂ ಎಂದು ಅವರು ಹೆಸರು ಕೊಟ್ಟಿರುತ್ತಾರೆ

ಮಂಡಿ ಮೊಹಲ್ಲಾ ಹಳೇ ವಿದ್ಯಾರ್ಥಿಗಳ ದಿ ನಾ ಚ ರ ಣೆ

ಮಂಡಿ ಮೊಹಲ್ಲಾ ಹಳೇ ವಿದ್ಯಾರ್ಥಿಗಳ ದಿನಾಚರಣೆಯು ನಾಳೆ ದೊಡ್ಡ ವಕ್ಕಲಗೇರಿಯಲ್ಲಿ ನಡೆಯುವುದು. ಶ್ರೀ ಬಿ ಅನಂತರಾಮರವರು ಅಧ್ಯಕ್ಷತೆ ವಹಿಸುವರು ಶ್ರೀಮತಿ ವಿ. ಗೋಪಾಲಸ್ವಾಮಿಯವರು ಬಹುಮಾನ ವಿನಿಯೋಗ ಮಾಡುವರು

ಹೊಸ ಚಲನ ಚಿತ್ರ ತಯಾರಿಕಾ ಸಂಸ್ಥೆ

ರಾಜಧಾನಿಯ ನಾಗಸಂದ್ರ ರಸ್ತೆಯ ಮಾಡೆಲ್ ಹೌಸಿನಲ್ಲಿ ಶಿವಾಜಿ ಪ್ರೊಡಕ್ಷನ್ಸ್ ಎಂಬ ನೂತನ ಚಲನ ಚಿತ್ರ ತಯಾರಿಕಾ ಸಂಸ್ಥೆಯು ನಿನ್ನೆ ಆರಂಭವಾಯಿತು ಸಂಸ್ಥೆಯವರು "ಎಂಗೆ ಮನಿದನ್" ಎಂಬ ಚಿತ್ರವನ್ನು ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ತಯಾರಿಸುವರು

ಟಿಬೆಟ್ ದಂಗೆಯಲ್ಲಿ ಚೀಣಾ ಸೈನಿಕರಿಂದ ಅನೇಕರ ಕೊಲೆ

ಆಗಸ್ಟ್ ೧೨ರಂದು ಟಿಬೆಟ್ಟಿನಲ್ಲಿ ಚೀಣಾ ಅಧಿಕಾರಿಗಳ ವಿರುದ್ಧವಾಗಿ ದಂಗೆ ನಡೆದು,ಅದನ್ನ ಚೀಣಿ ಸೈನಿಕರು ಅಡಗಿಸಿ ಅನೇಕರನ್ನು ಕೊಲೆ ಮಾಡಿರುವರೆಂದ ವರದಿಯಾಗಿದೆ ೧೨ ಸಾವಿರ ವ್ಯವಸಾಯಗಾರರು ತೆರಿಗೆಗಳನ್ನು ಇಳಿಸಬೇಕೆಂದು ಪ್ರದರ್ಶನ ನಡೆಸಿದುದಾಗಿ ಹೇಳಲಾಗಿದೆ

೨೨ ಸಾವಿರ ಚದರ ಮೈಲಿಯಲ್ಲಿ ಪ್ರವಾಹದ ನೀರು

ಅಸ್ಸಾಂ, ಪಶ್ಚಿಮ ಬಂಗಾಳ, ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಬ್ರಹ್ಮಪುತ್ರ ಗಂಗಾ ಮತ್ತು ಇತರ ನದಿಗಳ ಪ್ರವಾಹದ ನೀರು ನುಗ್ಗಿದ ಪ್ರಕಾರ ಅಸ್ಸಾಂ ಮತ್ತು ಬಿಹಾರಿನ ೨೨ ಸಾವಿರ ಚದರ ಮೈಲಿ ಪ್ರದೇಶದಲ್ಲಿ ನೀರು ನಿಂತಿದೆ ಪೀಡಿತರಾದವರಿಗೆ ಸಕಲ ಸಹಾಯವ ನ್ನೂ ಕೇಂದ್ರ ಸರ್ಕಾರದವರೂ, ಪ್ರಾಂತ್ಯ ಸರ್ಕಾರದವರೂ ಒದಗಿಸ ತ್ತಲಿದ್ದಾರೆ ೫೬ ಜನರು ಮೃತಪಟ್ಟಿರುವರೆಂದೂ, ಆಸ್ತಿಗಳಿಗೆ ವಿಪರೀತ ನಷ್ಟವಾಗಿರುವುದೆಂದೂ ಕೇಂದ್ರ ಗೃಹ ಮಂತ್ರಿ ಕಟ್ಜೂರವರು ಹೇಳಿರುತ್ತಾರೆ.

ರೈಲ್ವೆ ನೌಕರಿಗೆ ಕೇಂಬ್ರಿಜ್ ಪ್ರಶಸ್ತಿಯನ್ನಂಗೀಕರಿಸುವುದಿಲ್ಲ

ಭಾರತದ ರೈಲ್ವೆಗಳ ಮೆಕ್ಯಾನಿಕಲ್ ಇಂಜನಿಯರಿಂಗ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಶಾಖೆ ಅಪ್ರೆಂಟೈಸುಗಳ ಕೆಲಸಕ್ಕಾಗಿ ಬರುವ ಅರ್ಜಿದಾರರು ಕೇಂಬ್ರಿಜ್ ಶಾಲಾ ಸರ್ಟಿಫಿಕೇಟನ್ನಾಗಲಿ ಲಂಡನ್ ಮೆಟ್ರಿಕ್ಯುಲೇಷನ್ ಸರ್ಟಿಫಿಕೇಟನ್ನಾಗಲಿ ಹೊಂದಿದ್ದರೆ ಅದನ್ನು ಮನ್ನಿಸುವುದಿಲ್ಲವೆಂದು ಕೇಂದ್ರದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ತಿಳಿಸಿರುತ್ತಾರೆ ೨ ವರ್ಷಗಳ ನಂತರ ಈ ನಿರ್ಧಾರವು ಜಾರಿಗೆ ಬರುವುದು

ಮಹಿಳಾ ಬೀಡಿ ಕೆಲಸಗಾರರ ಸತ್ಯಾಗ್ರಹ

ರಾಜಧಾನಿಯ ದಿವಾನ್ಸ್ ರೋಡ್ ರಸ್ತೆಯಲ್ಲಿರುವ ಮೈಸೂರು ಬೀಡಿ ಕಾರ್ಖಾನೆಯಲ್ಲಿ ಸಾಕಾದಷ್ಟು ಕೆಲಸ ಕೊಡುತ್ತಿಲ್ಲವೆಂದು ೧೧೨ ಮಂದಿ ಮಹಿಳಾ ಮುಸ್ಲಿಂ ಕೆಲಸಗಾರರು ಕಳೆದ ಸೋಮವಾರದಿಂದ ಕಾರ್ಖಾನೆ ಬಳಿ ಸತ್ಯಾಗ್ರಹ ನಡೆಸುತ್ತಿರುವರೆಂದು ವರದಿಯಾಗಿದೆ.

ಆಸ್ಪತ್ರೆಗಳ ಹೊಸ ಕಾರ್ಯದರ್ಶಿ

ರಾಜಧಾನಿಯಲ್ಲಿರುವ ಆಸ್ಪತ್ರೆಗಳ ಕಾರ್ಯದರ್ಶಿಯಾಗಿ ರಜಾ ಮೇಲಿರುವ ಶ್ರೀ ಎಂ. ಎ ಹನುಮಂತಯ್ಯನವರನ್ನು ನೇಮಿಸಲಾಗಿದೆ ರಜಾ ಮೇಲಿರುವ ಅಮಲ್ದಾರ್ ಶ್ರೀ ಎಲ್. ಕಲ್ಲಯ್ಯನವರನ್ನು ರೆವಿನ್ಯೂ ಇಲಾಖೆಗೆ ವಾಪಸು ಕಳುಹಲಾಗಿದೆ

ಗೋ ವಧನದ ನಿವಾರಣೆಗಾಗಿ ೧ ಲಕ್ಷ ರೂ ಬ .

ಬೆಂಗಳೂರಿನ ಜೈನ ಮಾರ್ವಾಡಿ ಸಂಘದವರು ಅಲ್ಲಿ ಗೋವಧನದ ನಿವಾರಣೆಗಾಗಿ ೧ ಲಕ್ಷ ರೂ ಹಣ್ಣು ಉದಾರವಾಗಿ ಕೊಟ್ಟಿರುತ್ತಾರೆ ಗೋವಧನದಲ್ಲಿ ಕರೆಯುವ ದನಗಳು ಮತ್ತು ಇತರ ವನಕರುಗಳನ್ನು ಇಟ್ಟು ಸಾಕಲಾಗುವುದು

ಬೆಂಗಳೂರಿನಲ್ಲಿ ರಾಷ್ಟ್ರಾಧ್ಯಕ್ಷರು

ಸ್ವಂ.ಸು ತಂತಿ] ಬೆಂಗಳೂರು ೨೪

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಈ ಬೆಳಗ್ಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರೊಡನೆ ಭದ್ರಾವತಿಯಿಂದ ಇಲ್ಲಿಗೆ ಆಗಮಿಸಿದರು ಅವರನ್ನು ರೈಲ್ವೆ ನಿಲ್ದಾಣದಲ್ಲಿ ಮೇಯರ್, ಕಮೀಷನರ್, ಕ್ರೀಡಾ ಕಾರ್ಯದರ್ಶಿ ಶ್ರೀ ಪುಟ್ಟರಂಗಸ್ವಾಮಿ ಮುಂತಾದವರು ಸ್ವಾಗತಿಸಿದರು

ನಾಳೆ ದಿನ ರಾಷ್ಟ್ರಾಧ್ಯಕ್ಷರ ಮೆರವಣಿಗೆಗಾಗಿ ಎಲ್ಲಾ ವಿಪಾಡುಗಳೂ ಆಗಿವೆ ಇಲ್ಲಿನ ವಿದ್ಯಾಸಂಸ್ಥೆಗಳಿಗೆ ನಾಳೆ ದಿನ ಪೂರ್ತಿ ರಜಾ ಕೊಡಲಾಗಿದೆ ಕೋರ್ಟುಗಳಲ್ಲಿ ಮಧ್ಯಾಹ್ನದ ಮೇಲೆ ಕೆಲಸ ನಡೆಯುವುದು

ವಿವಾಹದ ಸಮಯದಲ್ಲಿ ವಧುವಿನ ಒಡವೆವಸ್ತ್ರಗಳ ಅಪಹಾರ

ಬೆಂಗಳೂರಿನ ಶಂಕರ ಮಠದಲ್ಲಿ ಮೊನ್ನೆ ಬಡ ಕುಂಬಾರದವರು ವಿವಾಹವನ್ನು ಏರ್ಪಡಿಸಿದ್ದಾಗ ಒಬ್ಬ ಕಳ್ಳನು ಮುಂಜಾನೆ ಕಿಟಕಿಯ ಕಬ್ಬಿಣದ ಸರಳುಗಳನ್ನು ಬಗ್ಗಿಸಿ, ಒಳಗೆ ನುಗ್ಗಿ ವಧುವಿನ ಮಾಂಗಲ್ಯ, ಇತರ ಒಡವೆಗಳು ಮತ್ತು ಹೊಸ ಸೀರೆಗಳನ್ನು ಅಪಹರಿಸಿದುದಾಗಿ ವರದಿಯಾಗಿದೆ ಸುಮಾರು ೧,೫೦೦ ರೂ.ಬೆಲೆಯ ಪದಾರ್ಥಗಳು ಕಳೆದುಹೋಗಿವೆ ಈ ಕಳ್ಳತನದಿಂದ ವಿವಾಹವೇ ನಿಂತು ಹೋಗಬೇಕಾಗಿತ್ತು. ಹಲವು ಸ್ನೇಹಿತರ ಔದಾರ್ಯದಿಂದ ವಿವಾಹವು ನಡೆಯಿತು. ಪೋಲೀಸರಿಗೆ ಕಳ್ಳತನದ ಬಗ್ಗೆ ದೂರು ಕೊಡಲಾಗಿದೆ

ಗೋವಾಕ್ಕೆ ಹೋಗುವವರಿಗೆ ಎಚ್ಚರಿಕೆ

ಭಾರತದಲ್ಲಿರುವ ಗೋವಾ ಪ್ರಜೆಗಳೂ, ಭಾರತೀಯರೂ ಪೋರ್ಚುಗೀಸರ ವಸಾಹತುಗಳಿಗೆ ಹೋಗಬೇಕಾದರೆ ಪೂರ್ವಭಾವಿಯಾಗಿ ಇಲ್ಲಿರುವ ಪೋರ್ಚುಗೀಸ್ ಉಪ ರಾಯಭಾರಿಗಳಿಂದ ರಹದಾರಿಗಳನ್ನು ಪಡೆಯಬೇಕೆಂದೂ, ಮೈಸೂರು ಸಂಸ್ಥಾನದಿಂದ ಅಲ್ಲಿಗೆ ಹೋಗುವವರು ಶ್ರೇಷ್ಠ ಕಾರ್ಯದರ್ಶಿಯವರಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರ ಮೂಲಕ ತಮ್ಮ ಫೋಟೋಗಳು ಮತ್ತು ೨ ರೂ ರುಸುಮಿನೊಡನೆ ಅರ್ಜಿಗಳನ್ನು ಬರೆದುಕೊಳ್ಳಬೇಕೆಂದೂ ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ

ಶೃಂಗೇರಿಯಲ್ಲಿ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನಿನ್ನೆ ಶೃಂಗೇರಿಗೆ ಭೇಟಿಯಿತ್ತರು ಅವರನ್ನು ಮಠದ ಮರ್ಯಾದೆಗಳೊಡನೆ ಸ್ವಾಗತಿಸಲಾಯಿತು. ಶಾರದಾ ಮತ್ತು ವಿದ್ಯಾ ಶಂಕರರ ದರ್ಶನವನ್ನು ಅವರು ಪಡೆದರು ಸಂಸ್ಕೃತ ಪಾಠಶಾಲೆಗೂ ರಾಷ್ಟ್ರಾಧ್ಯಕ್ಷರು ಭೇಟಿ ಕೊಟ್ಟರು

೧೬ ನಿಮಿಷ ಹೃದಯ ಕ್ರಿಯೆ ನಿಂತು ಪುನಃ ಆಡತೊಡಗಿತು

ಲಂಡನ್ನಿನಲ್ಲಿ ೪೮ ವರ್ಷದ ಮಹಿಳೆ ಎಲಿಜಬೆತ್ ಬೌಂಡ್ಸ್‌ರವರ ಹೃದಯ ಕ್ರಿಯೆಯು ಕಳೆದ ಸೋಮವಾರ ನಿಂತು ೧೬ ನಿಮಿಷಗಳನಂತರ ಪುನಃ ಆಡತೊಡಗಿತು. ಆಕೆಯು ಮಡಿಯುವಾಗ ಮೊದಲು ವರದಿಯಾಗಿತ್ತು ಈಗ ಆಕೆಯು ಚೇತರಿಸಿಕೊಂಡಿದ್ದಾಳೆ.

ಕೇಂದ್ರ ಸರ್ಕಾರಕ್ಕೆ ಬಾಬುರೆಡ್ಡಿಯವರ ಮನವಿ

ಮೈಸೂರು ಸರ್ಕಾರದಿಂದ ವಿವರಣೆಗಾಗಿ ಸೂಚನೆ

ಸ್ವಂ ಸು ತಂತಿ] ಬೆಂಗಳೂರು ೨೪

ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾದ ಶ್ರೀ ಎನ್ ವಿ. ಬಾಬುರೆಡ್ಡಿಯವರು ಕೇಂದ್ರ ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಿರುತ್ತಾರೆ ಅದರಲ್ಲಿರುವ ಹಲವು ಅಂಶಗಳ ಮೇಲೆ ಮೈಸೂರು ಸರ್ಕಾರದ ವಿವರಣೆ ಬೇಕೆಂದು ಕೇಂದ್ರದವರು ಕೋರಿರುವರೆಂದು ಹೇಳಲಾಗಿದೆ

ಶ್ರೀ ಬಾಬುರೆಡ್ಡಿಯವರು ವೈದ್ಯಕೀಯ ಕಾರಣಗಳಿಗಾಗಿ ತಮಗೆ ಇನ್ನೂ ನಾಲ್ಕು ತಿಂಗಳು ರಜ ಬೇಕೆಂದು ಬೇಡಿರುವರೆಂದೂ, ಅದು ಸಂಸ್ಥಾನದ ವೈದ್ಯ ಸಮಿತಿಯವರ ಪರಿಶೀಲನೆಯಲ್ಲಿದೆಯೆಂದೂ ತಿಳಿದುಬಂದಿದೆ.

ಪಟಾಕಿ ಕಾರ್ಖಾನೆ ಸಿಡಿತದಲ್ಲಿ ೧೪ ಮಂದಿ ಮರಣ

ಬೊಂಬಾಯಿಯ ಅಂಧೇರಿ ಪ್ರದೇಶದಲ್ಲಿರುವ ಪಟಾಕಿ ಕಾರ್ಖಾನೆಯಲ್ಲಿ ನೆನ್ನೆ ಸಿಡಿತವುಂಟಾಗಿ ೧೪ ಜನರು ಮಡಿದು, ೧೫ ಮಂದಿಗೆ ಗಾಯವಾಯಿತು ಕಾರ್ಖಾನೆಯ ಅರ್ಧ ಭಾಗವು ಸಿಡಿದು ಉರಿದುಹೋಯಿತು ಗಾಯಗೊಂಡವರಲ್ಲಿ ೯ ಜನರು ಸುಟ್ಟುಹೋಗಿರುತ್ತಾರೆ ಮೂವರನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಗೆ ಒಯ್ಯಲಾಗಿದೆ ಮೂರು ಗಂಟೆ ಸಮಯದಲ್ಲಿ ಒಬ್ಬ ಕಾರ್ಮಿಕನು ಹತ್ತಿಸಿದ ಬೀಡಿಯೊಂದನ್ನು ಹಿಡಿದು ಒಳಕ್ಕೆ ಹೋದಾಗ ಅವನನ್ನು ವಾಚ್ಮನ್ನನು ತಡೆಯಲು ಕಾರ್ಮಿಕನು ಅವನನ್ನು ತಳ್ಳಿದನೆಂದೂ, ಆಗ ಸಿಡಿತವುಂಟಾಯಿತೆಂದೂ ಹೇಳಲಾಗಿದೆ ೧೦,೦೦೦ ರೂ ನಷ್ಟ ನಷ್ಟವಾಗಿದೆ. ಅಲ್ಲಿ ದೀಪಾವಳಿ ಹಬ್ಬಕ್ಕಾಗಿ ಪಟಾಕಿಗಳನ್ನು ತಯಾರಿಸಲಾಗುತ್ತಿತ್ತು

ದಿಬ್ರುಗಢಕ್ಕೆ ಬ್ರಹ್ಮಪುತ್ರಾ ನದಿ ನುಗ್ಗಿತು

೫೦ ಸಾವಿರ ಪ್ರಜಾ ಸಂಖ್ಯೆಯುಳ್ಳ ದಿಬ್ರುಗಢಕ್ಕೆ ಬ್ರಹ್ಮಪುತ್ರಾ ನದಿಯ ಪ್ರವಾಹದ ನೀರು ನುಗ್ಗಿ, ಊರಿನ ಅರ್ಧ ಭಾಗವು ಮುಳುಗಿಹೋಗಿದೆ ೫ ರಿಂದ ೧೦ ಅಡಿ ವರೆಗೂ ನೀರು ನಿಂತು ಸುಮಾರು ೨೫,೦೦೦ ಜನರು ನಿರಾಶ್ರಿತರಾಗಿರುತ್ತಾರೆ ಸರ್ಕಾರಿ ಕಛೇರಿಗಳು ಜಾರಿಯಾಗಿವೆ. ಅಂಗಡಿಗಳೆಲ್ಲಾ ಬಹುತೇಕವಾಗಿ ಮುಚ್ಚಲ್ಪಟ್ಟಿವೆ ರಸ್ತೆಗಳಲ್ಲಿ ದೋಣಿಗಳನ್ನು ಬಿಟ್ಟುಕೊಂಡು ಸಂತ್ರಸ್ತ ಜನರನ್ನು ಸಾಗಿಸಲಾಗುತ್ತಿದೆ

ಹೆಂಡತಿಯನ್ನು ಕೊಲೆ ಮಾಡಿ ನದಿಗೆ ಹಾಕಿದ ಪ್ರಸಂಗ

ಟಿ ನರಸೀಪುರ ತಾಲ್ಲೂಕಿನ ಕಂಪಯ್ಯನ ಹುಂಡಿಯ ಒಬ್ಬನು ತನ್ನ ಹೆಂಡತಿಯನ್ನು ಕಳೆದ ಗುರುವಾರ ಕೊಲೆ ಮಾಡಿ ಆಕೆಯ ಕೈಕಾಲು ಕಟ್ಟಿ ಕಾವೇರಿ ನದಿಗೆ ಹಾಕಿದುದಾಗಿ ವರದಿಯಾಗಿದೆ ಆಕೆಯನ್ನು ತೌರುಮನೆಗೆ ಕರೆದುಕೊಂಡುಹೋಗುವುದಾಗಿ ೭ ಧಾಯಿ ಆ ಕೃತ್ಯವನ್ನು ನಡೆಸಿದನೆಂದು ಹೇಳಲಾಗಿದೆ. ಶವವು ದೊರಕಿದೆ

ಭಾರತ ಸುಂಕದ ಕಛೇರಿ ಮೇಲೆ ಪೋರ್ಚುಗೀಸರ ಗುಂಡು

ರತ್ನಗಿರಿ ಬಳಿ ಪೋರ್ಚುಗೀಸ ಪ್ರದೇಶದ ಗಡಿ ಹತ್ತಿರ ಇರುವ ಭಾರತದ ಸುಂಕದ ಕಛೇರಿ ಮೇಲೆ ಇಬ್ಬರು ಪೋರ್ಚುಗೀಸ್ ಅಧಿಕಾರಿಗಳು ಕಳೆದ ೧೮ ನೇ ತಾ॥ ಗುಂಡು ಹಾರಿಸಿದರೆಂದು ವರದಿಯಾಗಿದೆ. ಅವರಿಗೆ ಭಾರತದ ಎಲ್ಲೆಯೊಳಗೆ ಬಂದು [illegible] ಹಾರಿಸಿದರೆಂದೂ, ಚೌಕಿಯಲ್ಲಿ ಒಬ್ಬನೆ [illegible] ದೂ, ಅವನು ಗುಂಡಿನೇಟಿನಿಂದ ತಪ್ಪಿಸಿಕೊಂಡು ಹತ್ತಿರದಲ್ಲಿದ್ದ ಪೋಲೀಸ್ [illegible] ಗೆ [illegible] ಗಿ, ಬಳಿಕ ಪೋಲೀಸರು ಬಂದಾಗ ಪೋರ್ಚುಗೀಸ್ ಅಧಿಕಾರಿಗಳು ಪರಾರಿಯಾದರೆಂದೂ ಹೇಳಲಾಗಿದೆ.

ರಾಷ್ಟ್ರೀಯ ಯೋಜನಾ ಸಾಲಕ್ಕೆ ೧೩೦ ಕೋಟಿ ರೂ.

ಕಳೆದ ೧೪ ನೇ ತಾ॥ ವರೆಗೆ ಭಾರತದ ರಾಷ್ಟ್ರೀಯ ಯೋಜನೆ ಸಾಲಕ್ಕಾಗಿ ೧೩೯ ಕೋಟಿ ೭೨ ಲಕ್ಷ ರೂ. ಚಂದಾ ಬಂದಿರುವುದೆಂದು ಗೊತ್ತಾಗಿದೆ.

ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಾಷ್ಟ್ರಭಾಷಾ, ಪ್ರವೀಣ್, ರಾಷ್ಟ್ರಭಾಷಾ ವಿಶಾರದ್ ಮತ್ತು ಪ್ರವೇಶಿಕಾ ಪರೀಕ್ಷೆಗಳು ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಜರುಗಲಿವೆ. [illegible] ನೇ ತಾ॥ ಶನಿವಾರದಿಂದಲೂ, ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಶಾರದಾ ವಿಲಾಸ ಹೈಸ್ಕೂಲಿನಲ್ಲಿ [illegible] ನೇ ತಾರೀಕು ಭಾನುವಾರದಿಂದಲೂ ಪ್ರಾರಂಭವಾಗುವುವು. ಪ್ರವೇಶ ಪತ್ರಗಳನ್ನು ಮತ್ತು ಇತರ ವಿವರಗಳನ್ನು ಚಾಮುಂಡಿ [illegible] ದಲ್ಲಿರುವ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಪಡೆಯಬಹುದೆಂದು ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಜ್ಯೋತಿಷ್ಯರಿಗೆ ರಾಷ್ಟ್ರಾಧ್ಯಕ್ಷರಿಂದ ೧೦೦ ರೂ ಬಹುಮಾನ

ಕಳೆದ [illegible] ನೇ ತಾ॥ ನಗರದಲ್ಲಿ ರಾಷ್ಟ್ರಾಧ್ಯಕ್ಷರ ಮೆರವಣಿಗೆ ನಡೆದಾಗ ಗಾಂಧಿ ಸ್ತ್ರಾವದ ಬಳಿ ಅವರಿಗೆ ಟಿ ನರಸೀಪುರ ತಾಲ್ಲೂಕಿನ ಜ್ಯೋತಿಷ್ಯ ಶಾಸ್ತ್ರಜ್ಞರಾದ ಶ್ರೀ ಶಿವಕುಮಾರಸ್ವಾಮಿಯವರು ರಾಷ್ಟ್ರಾಧ್ಯಕ್ಷರ ಜಾತಕ ಕುಂಡಲಿ ಮತ್ತು ಅದರ ಫಲಗಳನ್ನು ಕುರಿತು ಬರೆದ ಪತ್ರವೊಂದನ್ನು ಅರ್ಪಿಸಿದ್ದರಷ್ಟೆ. ಅವರನ್ನು ಅಲಿಕ ಮಹಲಿಗೆ ಎರಡು ಸಾರಿ ಬರಮಾಡಿಕೊಳ್ಳಲಾಗಿತ್ತು. ಅವರು ಹೇಳುವ ವಿಷಯಗಳನ್ನು ರಾಷ್ಟ್ರಾಧ್ಯಕ್ಷರು ತಮ್ಮ ಕುಂಡಲಿಯೊಡನೆ ಹೋಲಿಸಿದಾಗ ಅನೇಕ ಸರಿಬಂದುವು. ಜ್ಯೋತಿಷ್ಯರಿಗೆ ನೂರು ರೂಪಾಯಿಗಳನ್ನೂ, ಪ್ರಶಸ್ತಿ ಪತ್ರವೊಂದನ್ನೂ ರಾಷ್ಟ್ರಾಧ್ಯಕ್ಷರು ಕೊಟ್ಟಿರುತ್ತಾರೆ.

ಗುಡ್ಡ ಬಿರಿದು ಪ್ರವಾಹ ಉಕ್ಕಿದ ಪ್ರಸಂಗ

ಕೊಟ್ಟಾಯಂ ಪ್ರಾಂತ್ಯದ ವೈಲಿ ದೂರದ [illegible] ಉದಯನೂರಿನಲ್ಲಿ ಗುಡ್ಡವೊಂದು ಬಿರಿದು ಅದರಿಂದ ಪ್ರವಾಹವು ಉಕ್ಕಿದ ಪರಿಣಾಮವಾಗಿ ಒಬ್ಬ ವೃದ್ಧನ ಪತ್ತೆಯಿಲ್ಲದೆ, [illegible] ನೂರಾರು ಜನರು ಕೊಚ್ಚಿಹೋಗಿ ಬಹು ಜನರು ನಿರಾಶ್ರಿತರಾಗಿರುವರೆಂದು ವರದಿಯಾಗಿದೆ. ಭತ್ತದ ಪೈರುಗಳನ್ನು ನೀರು ನುಗ್ಗಿ ಹಾಳುಮಾಡಿದೆ. ಕಳೆದ ಶನಿವಾರ ಮಧ್ಯಾಹ್ನ ೪ ಗಂಟೆಗೆ [illegible] ಪ್ರದೇಶದಲ್ಲಿ ವಿಮಾನದ ಶಬ್ದದಂತಹ ಧ್ವನಿಯು ಕೇಳಿಬಂತೆಂದೂ, ಕೂಡಲೇ ಗುಡ್ಡದ ಕಡೆಯಿಂದ ನೀರು ಧಾರಾಕಾರವಾಗಿ ಹರಿಯಿತೆಂದೂ ಹೇಳಲಾಗಿದೆ. ಅಲ್ಲಿದ್ದ ಜನರು ಸಣ್ಣ ಭೂಕಂಪದ ಅನುಭವವನ್ನೂ ಪಡೆದರೆಂದು ಗೊತ್ತಾಗಿದೆ. ಒಬ್ಬ ಬಾಲಕನನ್ನು ಬಹು ಅಕ್ಷಯ [illegible] ಯಲ್ಲಿ ಬದುಕಿಸಲಾಯಿತು. ಅಪಾರವಾದಷ್ಟು ಭತ್ತ ನಾಶವಾಗಿದೆ.

ಪಠ್ಯ ಪುಸ್ತಕ ಸಮಿತಿ ಸದಸ್ಯರುಗಳು

ಸರ್ಕಾರದವರು ಪಠ್ಯ ಪುಸ್ತಕಗಳನ್ನು ಗೊತ್ತುಪಡಿಸುವ ಒಂದು ಸಮಿತಿಯನ್ನು ರಚಿಸಿದ್ದು ಅದರಲ್ಲಿ ಶ್ರೀಗಳಾದ ಟಿ ಸಿಂಗಾರವೇಲು ಮುದಲಿಯಾರ್, ಎಂ ಶಿ ಗೋಪಾಲಸ್ವಾಮಿ, ಕೆ ಪಟ್ಟಾಭಿರಾಮನ್, ಮೈಸೂರು ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರು, ವಿಶ್ವವಿದ್ಯಾಲಯದ ಕನ್ನಡ ಪ್ರೊಫೆಸರುಗಳು, ಮಹಾರಾಜಾ ಕಾಲೇಜಿನ ಇತಿಹಾಸದ ಪ್ರೊಫೆಸರ್, ವಿಶ್ವವಿದ್ಯಾಲಯದ ಸೀನಿಯರ್ ಇಂಗ್ಲಿಷ್ ಪ್ರೊಫೆಸರ್ ಬೆಂಗಳೂರಿನ ಕೆ ಸಂಪದ್ಗಿರಿರಾವ್, ಇಬ್ಬರು ಸೀನಿಯರ್ ಹೆಡ್ಮಾಸ್ತರುಗಳು, ಒಬ್ಬ ಸೀನಿಯರ್ ಹೆಡ್ಮಿಸ್ಟ್ರೆಸ್ ಮತ್ತು ಎಸ್ [illegible] ನವರುಗಳು ಸದಸ್ಯರಾಗಿರುವರು.

ವ್ಯಾಯಾಮ ಶಾಲೆಯ ವಾರ್ಷಿಕೋತ್ಸವ

ನಂಜನಗೂಡಿನ ಗುಂಡ್ಲು ಅಗ್ರಹಾರದ ಶ್ರೀ ಮಾರುತಿ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಶಾಲೆಯ ಆವರಣದಲ್ಲಿ ಭಿಷಗ್ರತ್ನ ಬಿ. ವಿ ಪಂಡಿತರ ಅಧ್ಯಕ್ಷತೆಯಲ್ಲಿ ನಡೆಯುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಕ್ಕೆ ದಿಲ್ಲಿ [illegible] ೭ ೩೦ ರಿಂದ [illegible] ಸಂಗೀತ ಮಧ್ಯಾಹ್ನ ೧ ೪೦ ಮತ್ತು ೧ ೫೦ ರ [illegible] ಗಳು [illegible] ಸಂಗೀತ ಸಂಜೆ ೫ ೪೦ ಮತ್ತು [illegible] ರಾತ್ರಿ [illegible] ಪರಿಶಾರಾಯಣ, ಭಾರತ [illegible] ೬-೫೦ ರ [illegible] ಗಳು ೭ ೪೦ ಇಂದಿರಾ [illegible] ೮ ೪೦ ಕೃಷ್ಣಸ್ವಾಮಿಯ ರಾಗ [illegible] ಅಸ್ಪೃಶ್ಯತೆ, ಸಾಮಾಜಿಕ ಅಧ್ಯಯನ, ವಿ [illegible] ನವರ ಇಂಗ್ಲೀಷ್ ಭಾಷಣ [illegible] ರಾತ್ರಿ [illegible] ಗೀತೆಗಳು.

ಕೈಗೆ ಬೇಡಿ ಹಾಕಿಕೊಂಡು ಯುವತಿಯರ ಮೆರವಣಿಗೆ

ಲಂಡನ್ನಿನ ಸ್ಟ್ರಾಂಡ್ ಸ್ಕ್ವೇರ್ ನ ಸ್ಟೇಟ್ಸ್ ದ್ವೀಪದ ಜನರಲ್ಲಿ ೫೦೦ ಮಂದಿ ಕಳೆದ ೨೨ ನೇ ತಾ॥ ರಾತ್ರಿ ಬಾವುಟಗಳನ್ನು ಹಿಡಿದು ಗ್ರೀಕ್ ದೇಶದ ಘೋಷಣೆಗಳನ್ನು ಮಾಡುತ್ತಾ ಮೆರವಣಿಗೆ ಹೋದರು. ಅದರ ಮುಂಭಾಗದಲ್ಲಿ ೬೦ ಮಂದಿ ಯುವತಿಯರು ಕೈಗೆ ಕಬ್ಬಿಣದ ಬೇಡಿಗಳನ್ನು ಹಾಕಿಕೊಂಡಿದ್ದರು. ಸೈಪ್ರಸ್ಸಿನಂ [illegible] ಪಿಸಿದಲ್ಲೂ ಅದೇ ದಿನ [illegible] ವಾಯಿತು.

ಕೃಷ್ಣಜಯಂತಿ ಸಂಗೀತ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಬಳಿ ಇರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ಕೃಷ್ಣಜಯಂತಿ ಉತ್ಸವದ ಅಂಗವಾಗಿ ಮಧ್ಯಾಹ್ನ ೪ ಗಂಟೆಗೆ ಶ್ರೀ ಬಿ ಎಂ ಷಣ್ಮುಖಸ್ವಾಮಯ್ಯ ಮತ್ತು ಸಂಜೆ ೭ ಗಂಟೆಗೆ ವಿ॥ ಟಿ ಪುಟ್ಟಸ್ವಾಮಯ್ಯನವರ ಸಂಗೀತವು ಏರ್ಪಾಡಾಗಿದೆ.

ಶನಿ ದೇವರ ಉತ್ಸವ

ಚಾಮರಾಜನಗರದಲ್ಲಿ ಏಳು ದೊಡ್ಡ ಅರಸಿನವರ ತೋಟದ ಶ್ರೀ ಅಂಜನೇಯಸ್ವಾಮಿ ದೇವಸ್ಥಾನದಲ್ಲಿ ಇದೇ ೨೮ ನೇ ತಾ॥ ಶನಿವಾರ ಬೆಳಿಗ್ಗೆ ೧೦ ೩೦ ಕ್ಕೆ ಆರ್ಯ ನವ ನಾಟ್ಯ ಕ್ಷತ್ರಿಯ ಮಂಡಲಿಯವರು ಶನಿ ಮಹಾಸ್ವಾಮಿಗೆ ಅಭಿಷೇಕ, ಪಾರಾಯಣ ಪುರಾಣ ಶ್ರವಣ ಮುಂತಾದುವುಗಳನ್ನು, ರಾತ್ರಿ ೭ ಕ್ಕೆ ಪಲ್ಲಕ್ಕಿ ಉತ್ಸವವನ್ನೂ ಏರ್ಪಡಿಸಿರುತ್ತಾರೆ. ಈ ಸಂಬಂಧವಾಗಿ ವಿ॥ ವಿ ಎ ನಾರಾಯಣಸ್ವಾಮಿ ಮತ್ತು ಲಂಬೋದರಮೂರ್ತಿ ವಿ॥ ಟಿ ಎಸ್ ಸುಬ್ಬಯ್ಯನವರ ಹಾರ್ಮೋನಿಯಂ, ದಿಂಡಿಗಲ್ ವಿ॥ ಡಿ ವಿ ರಂಗಸ್ವಾಮಿ ಮತ್ತು ಕೊಯಮತ್ತೂರು ವಿ॥ ಸಿ ಎ ವಿನಾಯಕ್ಷಿ [illegible] ನವರ ಡೋಲಕ್, ಮತ್ತು ಬೆಂಗಳೂರಿನ ವಿ॥ ಎ ಪಿಚ್ಚುಮುತ್ತು ಮತ್ತು ಬೆಂಗಳೂರಿನ ವಿ॥ ಷಣ್ಮುಖಸ್ವಾಮಿ [illegible] ನವರ ಡೋಲು ಶನಿ ಕಛೇರಿ ಏರ್ಪಾಡಾಗಿದೆ. ಆಸ್ತಿಕ ಮಹನೀಯರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ. ಗೆ
ಕಡಲೆಕಾಯಿ	೮ ೨ ೦	೯ ೮ ೦
ಎಳ್ಳು	೪೪ ೨ ೦	೫೩ ೧೪ ೦
ಹರಳು ಬೀಜ	೨೫ ೧೩ ೦	
ಹುರುಳಿ	೨೨ ೬ ೦	೨೬ ೦ ೦
ಹೆಸರು	೪೫ ೦ ೦	
ಕಡಲೆಬೇಳೆ	೨೯ ೮ ೦	೪೦ ೨ ೦
ಉದ್ದು	೫೩ ೦ ೦	೫೬ ೧೨ ೦
ತೊಗರಿ	೨೫ ೧೨ ೦	
ಧನಿಯಾ	೨೧ ೦ ೦	೨೮ ೨ ೦
ಮೆಣಸಿನಕಾಯಿ	೧೦ ೪ ೦	೧೧ ೭ ೮
ಬೆಲ್ಲ	೯ ೦ ೦	
ಕೊಬ್ಬರಿ	೬ ೨ ೦	೬ ೫ ೦
ತೆಂಗಿನಕಾಯಿ ೧,೦೦೦	೧೧೮ ೮ ೦	೨೫೫ ೦ ೦

ಕಲ್ಕತ್ತಾದಲ್ಲಿ ೨೨ ಜನರ ಬಂಧನ

ಕಲ್ಕತ್ತಾದ ಕಸಾಯಿಖಾನೆ ಮುಂದೆ ಗೋವಧಾ ನಿರೋಧ ಸತ್ಯಾಗ್ರಹ ನಡೆಸಿದ ೧೧ ಜನರನ್ನೂ, ಸರ್ಕಾರಿ ಕಛೇರಿ ಬಳಿ ೧೧ ಸತ್ಯಾಗ್ರಹಿಗಳನ್ನೂ ಬಂಧಿಸಲಾಗಿದೆ.

ವಿಶ್ವವಾಣಿ ಕಛೇರಿಯ ವರ್ಗ

ರಾಜಧಾನಿಯ ವಿಶ್ವವಾಣಿ ದಿನ ಪತ್ರಿಕೆ ಮತ್ತು ವೈಶ್ಯ ಪತ್ರಿಕೆ ಕಛೇರಿಗಳನ್ನು ನಾರಾಯಣರಾವ್ [illegible] ಜಯದೇವ [illegible] ವರ್ಗಾಯಿಸಿದ ಸಂಬಂಧವಲ್ಲ [illegible] ಸಂತೋಷ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಮತ್ತು ಇತರರು ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು.

ತಾಲ್ಲೂಕು ರೇಂಜು ಉಪಾಧ್ಯಾಯರ ಸಭೆ

ಮೈಸೂರು ತಾಲ್ಲೂಕು ರೇಂಜು ಉಪಾಧ್ಯಾಯರುಗಳ ಸಭೆಯು ಕಳೆದ ರವಿವಾರ ಟ್ರೈನಿಂಗ್ ಕಾಲೇಜಿನಲ್ಲಿ ನಡೆಯಿತು. ದೇವಲಾಪುರದ ಮಿಡಲ್ ಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶ್ರೀನಿವಾಸಮೂರ್ತಿಯವರಿಂದ ದೇವತಾ ಪ್ರಾರ್ಥನೆ ಮತ್ತು ಶ್ರೀ ಎಂ ಎಸ್ ನಾರಾಯಣರಾಯರಿಂದ ಸ್ವಾಗತ ಭಾಷಣವಾದನಂತರ ವಿದ್ಯಾಭ್ಯಾಸದ ಸುಧಾರಣೆಯಲ್ಲಿ ಉಪಾಧ್ಯಾಯರ ಕರ್ತವ್ಯವನ್ನು ಕುರಿತು ಅಧ್ಯಕ್ಷರು ಭಾಷಣ ಮಾಡಿದರು. ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

SREE GANESHA
TALKIES
From 26-8-54 • For 2 days
Universal International's
DEPORTED
TO-DAY LAST DAY
WINGS OF THE HAWK
3-D Picture

ಪ್ರಭಾ ★ ಅಮೋಘ ಪ್ರಾರಂಭ 26—8—54 ರಿಂದ
ಪ್ರತಿ ದಿನ 3 ಆಟಗಳು
[illegible]
✱ ನೂರ್ ಜಹಾನ್ ✱
[illegible] – ಆಜಮೀಘುರ್, ಶಕೂರ್ [illegible], ಸ್ವದೇಶ್ [illegible] ಮತ್ತು [illegible]
ಬೆಳಗಿನ ಪ್ರದರ್ಶನ 27 8-54 ರಿಂದ 3 ದಿನಗಳು
[illegible], ಶಕೂರ್ [illegible], [illegible]
[illegible] ★ [illegible] ★

Edited, Printed and Published by A R Nagarajan at Sadhvi Press, D.Subbiah Road, Mysore

ANNOUNCEMENT
We have shifted to our new premises near the new Statue Circle, Mysore, from Monday, the 23rd August, 1954
The continued patronage from all our customers is earnestly solicited.
SHEENIVASA STORES,
MYSORE

ಒಲಂಪಿಯಾ ಟಾಕೀಸ್ ★ 26-8-54ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಪ್ರಜ್ವಲಿತ ಸನ್ನಿವೇಶಗಳನ್ನೊಳಗೊಂಡ ಸಾಹಸಮಯ ಹಿಂದಿ ಚಿತ್ರ
ಷಾ ಪಿಕ್ಚರ್ಸ್‌ರವರ ★ ನೂರ್ ಮಹಲ್ ★
ಪಾತ್ರ - ಶಕೀಲಾ, ಜಿಲ್ಲಿಕ್, ನಸೀರ್, ಡಬ್ಲ್ಯು. ಎಂ. ಖಾನ್

MYSORE GOVERNMENT SILK WEAVING FACTORY
MYSORE
Announce
THEIR GRAND "GOWRI" REDUCTIONS
From 9 per cent to 75 per cent
For their SECONDS
Please Hurry up and visit —
1) Factory Show-rooms at Mysore
2) The Mysore Arts & Crafts Depot, Mahatma Gandhi Road Bangalore
A P RAO
General Manager,
Govt Silk Weaving Factory Mysore

ನಂಬಿಕೆಗೆ ಅರ್ಹತೆ!
ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ
ನೀವು ಏನೇನು ಗುಣಗಳನ್ನು
ಅಪೇಕ್ಷಿಸುವಿರೋ ಅವೆಲ್ಲಾ
ಮೈಸೂರು ಸ್ಯಾಂಡಲ್
ಸೋಪಿನಲ್ಲಿ
ಇರುವುವೆಂದು ಖಚಿತವಾಗಿ ಹೇಳುತ್ತೇವೆ
—: ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ :—
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು
ಮಂಬರು ಪಿ, ಎಸ್, ಬಿ, ಎಂ, ಎ,

ಟೆಲಿಫೋನ್ ನಂ 792

ಗೌರಿ ಹಬ್ಬಕ್ಕೆ
ನವೀನ ಮಾದರಿಯ [illegible]
ಸೀರೆಗಳು ಮತ್ತು ಸೂರಿನ
[illegible] ಸೀರೆಗಳು
ಬಂದಿವೆ
M. V. ಭೋಜಯ್ಯ
[illegible]
ಮೈಸೂರು ಫೋನ್ [illegible]

ಬಿಡಿ ಪ್ರತಿ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೮೩] SADHVI . THURSDAY 26-8-1954 ಮೈಸೂರು : ಗುರುವಾರ ೨೬-೮-೧೯೫೪ [ಸಂಚಿಕೆ : ೨೩

ಡಯೂ ಸತ್ಯಾಗ್ರಹಿಗಳ ಮೇಲೆ ಪೋಲೀಸರ ಗುಂಡು

ಮಹಾತ್ಮ ಗಾಂಧಿಯವರ ಆರ್ಥಿಕ ನೀತಿಯ ಆದರ್ಶ

ಡಾ॥ ಪುರುಷೋತ್ತಮ್‌ರವರ ಭಾಷಣ

ಮೈಸೂರು ೨೫

ಮಹಾರಾಜಾ ಕಾಲೇಜಿನ ಅರ್ಥ ಶಾಸ್ತ್ರ ಸಂಘದ ಆರಂಭ ಭಾಷಣವನ್ನು ನೆನ್ನೆ ಪ್ರಿನ್ಸಿಪಾಲರಾದ ಡಾ॥ ಟಿ ಎ ಪುರುಷೋತ್ತಮ್‌ರವರು ಮಾಡಿ ಮಹಾತ್ಮಾ ಗಾಂಧಿಯವರ ಆರ್ಥಿಕ ನೀತಿಯ ಆದರ್ಶವನ್ನು ಹೃದಯಂಗಮವಾಗಿ ವಿವರಿಸಿದರು. ದೇಶ ಪ್ರೇಮ, ದ [illegible] ಧನದ ನಿಜವಾದ ಸ್ಥಾನ, ಯಂತ್ರದ ಉಪಯೋಗ ಮತ್ತು ನೈತಿಕ ಜೀವನದ ಹಿರಿಮೆ ಈ ನಾಲ್ಕು ಅಂಶಗಳ ಆಧಾರದ ಮೇಲೆ ಅವರು ಗಾಂಧೀಜಿಯವರ ಆರ್ಥಿಕ ನೀತಿಯನ್ನು ಏಕದ [illegible] ದೊಡ್ಡ ದೊಡ್ಡ [illegible] ನೀತಿಗಳು ಅವರ ಕಾಲದಲ್ಲಿಯೇ [illegible] ವಾಗಿ ಅಂಗೀಕರಿಸಲ್ಪಡದೆ ಅವುಗಳ ನಿಜವಾದ ಬೆಲೆಯು ಅನೇಕ ಶತಮಾನಗಳ ನಂತರ [illegible] ತಿಳಿಯುವುದೆಂದು ಅವರು ಹೇಳಿ, ಮಹಾತ್ಮ ಗಾಂಧಿಯವರ ತತ್ವಗಳ ಬೆಲೆಯನ್ನು ಮಾನವ ಸಮಾಜವು ಅರಿಯಲು ಇನ್ನೂ [illegible] ಶತಮಾನಗಳಾಗಬಹುದೆಂದು ನುಡಿದರು.

ನಿಷ್ಕಾಮ ಕರ್ಮವು ಮಾನವನ ಅತ್ಯುನ್ನತ [illegible] ಸಾಧನೆಯೆಂದು ಭಗವದ್ಗೀತೆಯಲ್ಲಿ [illegible] ಮಹಾತ್ಮ ಗಾಂಧಿಯವರು ದೇಶ ಪ್ರೇಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಶ್ರಮ ಪಡದೆ ಭೋಗವನ್ನು ಅನುಭವಿಸುವವರು ಚೋರರೆಂಬುದು ಗಾಂಧೀಜಿಯ [illegible] ಕಲ್ಪನೆ. ಆದ್ದರಿಂದ ಪ್ರತಿಯೊಬ್ಬರೂ [illegible] ದುಡಿದು ಜೀವನ ಮಾಡಬೇಕು.

ಎರಡನೆಯದಾಗಿ, ಧನ ಸಂಗ್ರಹಕ್ಕೆ ಗಾಂಧೀಜಿಯವರು ವಿರೋಧವಾಗಿರಲಿಲ್ಲ. ಆದರೆ ಬಂಡವಾಳಶಾಹಿಯನ್ನು ವಿರೋಧಿಸುತ್ತಿದ್ದರು. [illegible] ಉದ್ಯಮಗಳಿಗೂ ಮೂಲಧನವು ಅಗತ್ಯ [illegible] ವೆಂಬುದನ್ನು ಅವರು ಅರಿತಿದ್ದರು. ಆದರೆ ಮನುಷ್ಯನನ್ನು ಗುಲಾಮನನ್ನಾಗಿ ಮಾಡುವ [illegible] ನೀತಿಯನ್ನು ಅವರು ಪ್ರತಿಭಟಿಸುತ್ತಿದ್ದರು. ನ್ಯಾಯವಾದ ಮಾರ್ಗದಿಂದ ಅಗತ್ಯ [illegible] ಧನವನ್ನು ಸಂಪಾದಿಸಿ ಅದನ್ನು [illegible] ಉಪಯೋಗ ಮಾಡಬೇಕೆಂಬುದೇ ಅವರ [illegible]

ಯಂತ್ರಗಳ ವಿಷಯದಲ್ಲಿಯೂ ಗಾಂಧೀಜಿಯವರ ಅಭಿಪ್ರಾಯವು ಸ್ಪಷ್ಟವಾಗಿದ್ದಿತು. [illegible] ಜನಗಳ ಜೀವನಕ್ಕೆ ಅಪಾಯಕಾರಿಯಾದ ಯಾಂತ್ರಿಕ ಉದ್ಯಮವು [illegible] ಯಿಂದ ಕೂಡಿರುವುದಾಗಿ ಅವರು [illegible] ಯಂತ್ರಗಳಿಗೆ ಸಮಾಜದಲ್ಲಿ ಒಂದು [illegible] ಮಿತವಾದ ಸ್ಥಾನವಿರುತ್ತದೆ. ಎಲ್ಲಾ [illegible] ಗಳನ್ನೂ ಪರಿತ್ಯಜಿಸಕೂಡದು. ಆದರೆ [illegible] ಮನುಷ್ಯನು ಅಡಿಯಾಳಾಗಲು [illegible] ವುದು ಸರಿಯಲ್ಲ. ಯಂತ್ರವು [illegible] ಸೇವಕನಂತಿರಬೇಕು. ಇದೇ ಗಾಂಧೀಜಿಯವರ ಅಭಿಮತ.

[illegible] ಕ್ಕಿಂತಲೂ ಮಿಗಿಲಾಗಿ ನೈತಿಕ ಜೀವನವನ್ನು [illegible]

ಲಾ ಕಾಲೇಜು ಸಂಘದ ಆರಂಭೋತ್ಸವ

ಮೈಸೂರು ೨೫

[illegible] ವಿಶಾರದ ಲಾ ಕಾಲೇಜು ಸಂಘದ ಆರಂಭೋತ್ಸವವನ್ನು ನೆನ್ನೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೆರವೇರಿಸಿದರು. ಕುಮಾರಿ ಲಕ್ಷ್ಮಿಯವರಿಂದ ಪ್ರಾರ್ಥನೆಯಾದನಂತರ ಕಾಲೇಜಿನ ಪ್ರಿನ್ಸಿಪಾಲರವರಾದ ಶ್ರೀ ಎಸ್ ವೆಂಕಟಸತ್ಯನವರು ಸ್ವಾಗತ ಭಾಷಣ ಮಾಡಿದರು. [illegible] ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಟಿ ವೆಂಕಟರಮಣಯ್ಯನವರು ಪರಿಚಯ ಭಾಷಣ ಮಾಡಿದರು.

ಭಾರತದ ನೂತನ ರಾಜ್ಯಾಂಗ ರಚನೆಯಲ್ಲಿ ಶಾಸನಗಳ ವ್ಯಾಪ್ತಿಯು [illegible] ಮೇಲೆ ಹರಡಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ನ್ಯಾಯವಾದಿಗಳ ಅವಶ್ಯಕತೆಯು ಬೇಕಾಗಬಹುದಾಗಿರುವುದರಿಂದ ಸಾರ್ವಜನಿಕರಿಗೆ ಶಾಸನಗಳ ಪರಿಚಯವು [illegible] ಅಗತ್ಯವೆಂದು ವಿದ್ಯಾ ಮಂತ್ರಿಗಳು ತಮ್ಮ ಭಾಷಣದಲ್ಲಿ ನುಡಿದರು.

ನ್ಯಾಯಾಂಗದಲ್ಲಿ ಹೊಸಹೊಸ ಸಂಶೋಧನೆಗಳನ್ನು ನಡೆಸುವುದು ಅಗತ್ಯವೆಂದು ಅಧ್ಯಕ್ಷತೆ ವಹಿಸಿದ್ದ ಉಪ ಸ್ವಾನಪತಿ ಪ್ರೊಫೆಸರ್ ಎ ಎಲ್. [illegible] ರವರು ಹೇಳಿದರು.

ಸಂಘದ ಅಧ್ಯಕ್ಷರಾದ ಶ್ರೀ ಎಂ ಮಲ್ಲಿಕಾರ್ಜುನ ಸ್ವಾಮಿಗಳವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

○ ಶೃಂಗೇರಿ ಮಠದವರು ನಡೆಸುತ್ತಿರುವ ಸಂಸ್ಕೃತ ಪಾಠಶಾಲೆಗೆ ರಾಷ್ಟ್ರಾಧ್ಯಕ್ಷರು ೧,೦೦೦ ರೂ. ಗಳನ್ನು ಕೊಟ್ಟಿರುತ್ತಾರೆ.

[illegible] ರು, ಅನ್ಯಾಯ, ದಬ್ಬಾಳಿಕೆ ಮತ್ತು ವಂಚನೆಗಳಿಂದ ಬರುವ ಧನವು ಪಾತಕಕರವಾದದ್ದೆಂದು ಅವರು ಭಾವಿಸಿದ್ದರು. ಮನಸ್ಸನ್ನು ದೇವರ ಕಡೆ [illegible] ಸಕಲ ವ್ಯವಹಾರಗಳೂ ನಡೆಸಬೇಕೆಂಬುದು ಅವರ ಧ್ಯೇಯವಾಗಿತ್ತು. ಆದುದರಿಂದಲೇ ನಮ್ಮ ಅರ್ಥ ನೀತಿಯು ಸತ್ಯ ಮತ್ತು ಧರ್ಮಗಳ ಆಧಾರದ ಮೇಲೆಯೇ ರಚಿತವಾಗಬೇಕೆಂದು ಅವರು ಬೋಧಿಸುತ್ತಿದ್ದರು-ಎಂಬುದಾಗಿ ಡಾ॥ ಪುರುಷೋತ್ತಮ್‌ರವರು ಹೇಳಿ ಉನ್ನತ ಆದರ್ಶಗಳ ಕಡೆಗೆ ನಡೆಯಲು ಮಾನವ ಸಮಾಜವು ಪ್ರಯತ್ನಿಸಬೇಕೆಂದು ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ ರಾಮಕೃಷ್ಣ ದೀಕ್ಷಿತರವರು ಮಹಾತ್ಮಾ ಗಾಂಧಿಯವರ ಅರ್ಥನೀತಿಯ ವೈಶಿಷ್ಟ್ಯಗಳನ್ನು ವಿವರಿಸಿದರು.

ಪ್ರಾರಂಭದಲ್ಲಿ ಪ್ರಾರ್ಥನೆಯೂ, ಉಪಾಧ್ಯಕ್ಷರಾದ ಶ್ರೀ ಬಿ ಚನ್ನಪ್ಪನವರ ಸ್ವಾಗತ ಭಾಷಣವೂ, ಕುಮಾರಿಗಳಾದ [illegible] ಮತ್ತು [illegible] ರವರ ಗಾಯನವೂ [illegible] ಗೀತೆಗಳೂ ನಡೆದುವು. ಕಾರ್ಯದರ್ಶಿಗಳಾದ ಶ್ರೀ ಧರ್ಮರಾಜ್‌ರವರಿಂದ ಧನ್ಯವಾದ [illegible]

ರೈಲ್ವೆ ನೌಕರರ ಪ್ರದರ್ಶನ

ಟೌನ್‌ಹಾಲಿನಲ್ಲಿ ಬಹಿರಂಗ ಸಭೆ

ಮೈಸೂರು ೨೫

ನಗರದ ರೈಲ್ವೆ ಕೆಲಸಗಾರರು ನೆನ್ನೆ ಪ್ರತಿಭಟನಾ ದಿನವನ್ನು ಆಚರಿಸಿದರು. ಸಂಜೆ [illegible] ಗಳನ್ನು ಧರಿಸಿ [illegible] ಸುಮಾರು ೨,೦೦೦ ಕಾರ್ಮಿಕರು ಟೌನ್‌ಹಾಲಿಗೆ ಮೆರವಣಿಗೆಯಲ್ಲಿ ಬಂದರು. ಶ್ರೀ ಹೆಚ್ ಬಿ [illegible] ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ದಕ್ಷಿಣ ರೈಲ್ವೆ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ ಟಿ ವಿ ಆನಂದನ್, ಪ್ರಧಾನ ಕಾರ್ಯದರ್ಶಿ, [illegible] ಎಸ್ [illegible] ಸ್ವಾಮಿ [illegible], [illegible] ಶ್ರೀಕಂಠಯ್ಯ [illegible] ರವರು ಭಾಷಣ ಮಾಡಿದರು. ನೌಕರರು ಹಲವು ವರ್ಷಗಳಿಂದ ಮುಂದಿಟ್ಟಿದ್ದ ಬೇಡಿಕೆಗಳನ್ನು ಕೂಡಲೇ ಅಧಿಕಾರಿಗಳು ಈಡೇರಿಸಬೇಕೆಂದು [illegible] ಅಂಗೀಕರಿಸಲಾಯಿತು. ನೌಕರರಿಗೆ [illegible], ಮೈಸೂರು [illegible] ಮತ್ತು ನಗರಗಳ [illegible] ವ್ಯವಸ್ಥೆ ಮತ್ತು ರಾತ್ರಿ [illegible] ಬೇಡಿಕೆಗಳನ್ನು ಅಧಿಕಾರಿಗಳು [illegible]

ಕಳ್ಳಭಟ್ಟಿ ಸಾರಾಯಿ ಮಾರಾಟಗಾರರಿಗೆ ೨೦೦ ರೂ ದಂಡ, ೮ ದಿನ ಸಜಾ

[illegible] ಜಿಲ್ಲೆಯ ಮಾದನಹಳ್ಳಿಯಿಂದ [illegible] ಬಂದಿದ್ದ [illegible] ಕಳ್ಳಭಟ್ಟಿ ಸಾರಾಯಿಯನ್ನು [illegible] ಬಂದುದು ಪತ್ತೆಯಾಗಿ [illegible] ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ಅವರಿಗೆ ೮ ದಿನ ಸಜಾ ಮತ್ತು ೨೦೦ ರೂ ದಂಡ, ತಪ್ಪಿದರೆ ೧೫ ದಿನ ಸಜಾ ವಿಧಿಸಿದರು.

ಶೃಂಗೇರಿ ಸ್ವಾಮಿಗಳವರೊಡನೆ ರಾಷ್ಟ್ರಾಧ್ಯಕ್ಷರ ಸಂಭಾಷಣೆ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನೆನ್ನೆ ಶೃಂಗೇರಿಯಲ್ಲಿ ಶ್ರೀಮಚ್ಛಂಕರಾಚಾರ್ಯ [illegible] ಶ್ರೀ ಶ್ರೀ ಚಂದ್ರಶೇಖರ ಭಾರತಿಗಳು ಮತ್ತು [illegible] ಸ್ವಾಮಿಗಳೊಡನೆ [illegible] ಸಂಸ್ಕೃತದಲ್ಲಿ [illegible] ಸಂಭಾಷಣೆ ನಡೆಸಿದರು. ಅದರಿಂದ ತಮಗೆ ಶಾಂತಿ ಸಂತೋಷವಾಯಿತೆಂದು ರಾಷ್ಟ್ರಾಧ್ಯಕ್ಷರು ನುಡಿದರು. ನರಸಿಂಹ ವನಕ್ಕೆ ಭೇಟಿಯಿತ್ತು, ಅಲ್ಲಿನ ದೃಶ್ಯವನ್ನು ನೋಡಿ ಆನಂದಿಸಿದರು. ರಾಷ್ಟ್ರಾಧ್ಯಕ್ಷರಿಗೆ ಹಿರಿಯ ಸ್ವಾಮಿಗಳವರು ಒಂದು ಶಾಲು, [illegible] ಪೀತಾಂಬರ [illegible] ಹಿರಿಯ ಮತ್ತು ಕಿರಿಯ ಸ್ವಾಮಿಗಳವರ ಫೋಟೋ ಮತ್ತು [illegible] ಶಾರದಾಂಬೆ ಚಿತ್ರಪಟವನ್ನೂ ಕೊಟ್ಟರು. [illegible] ರಾಷ್ಟ್ರಾಧ್ಯಕ್ಷರ [illegible] ಪರಿವಾರದವರಿಗೂ, ಮುಖ್ಯ ಮಂತ್ರಿ ಮತ್ತು ವಿದ್ಯಾ ಮಂತ್ರಿಗಳಿಗೂ ಶಾಲುಗಳನ್ನು ಕೊಟ್ಟು ಸನ್ಮಾನಿಸಲಾಯಿತು.

ರೈಲು ಇಂಜನ್ನು ನದಿಗೆ ಉರುಳಿ ೫ ಜನರ ಮರಣ

ಪಶ್ಚಿಮ ಬಂಗಾಳದ ಜಲಪೈಗುರಿ ಜಿಲ್ಲೆಯ [illegible] ಪ್ರವಾಹ [illegible] ಪರಿಶೀಲನೆಗಾಗಿ ಸೋಮವಾರ [illegible] ಚಿಕ್ಕ ರೈಲು ಇಂಜನ್ನು [illegible]

ಬೆಂಗಳೂರಿನಲ್ಲಿ ರಾಷ್ಟ್ರಾಧ್ಯಕ್ಷರ ವೈಭವದ ಮೆರವಣಿಗೆ

೪ ಲಕ್ಷ ಜನ ಸಂದಣಿಯಿಂದ ದರ್ಶನ, ಸಂಸ್ಥೆಗಳಿಂದ ನಿಧಿ ಅರ್ಪಣೆ

ಪ್ರಂ ಸು ಕಂತಿ] ಬೆಂಗಳೂರು ೨೫

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಈ ಬೆಳಿಗ್ಗೆ [illegible] ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ ಮತ್ತು ಎ ಡಿ ಸಿ [illegible] ನಗರದ ನಾನಾ ರಸ್ತೆಗಳಲ್ಲಿ ಒಟ್ಟು ೧೦ ಮೈಲಿಯ ದೂರ [illegible] ಗೌನರರ ತೆರೆದ [illegible] ಮೆರವಣಿಗೆ ಹೋದರು. ೪ ಲಕ್ಷ ಜನರು ರಸ್ತೆಗಳಲ್ಲಿ ಸೇರಿ ಅವರನ್ನು ನೋಡಿದರು. [illegible] ಪೋಲೀಸರು, ಅರಮನೆ [illegible] ಗಾರ್ಡುಗಳು ಮೊಟಾರಿನ ಮುಂಭಾಗದಲ್ಲೂ, ಹಿಂಭಾಗದಲ್ಲೂ ಇದ್ದರು. ಮಂತ್ರಿಗಳು, ಪೋಲೀಸು ಮುಖ್ಯಾಧಿಕಾರಿ, [illegible] ವಿಶೇಷ [illegible] ಮುಂದಾದವರು ಹಿಂದುಗಡೆ ಹೋದರು. [illegible] ಬಾವುಟಗಳನ್ನೂ, [illegible] ಗಳನ್ನೂ ಕಟ್ಟಲಾಗಿತ್ತು. ರಾಷ್ಟ್ರಾಧ್ಯಕ್ಷರಿಗೆ ಅನೇಕ [illegible] ಗಳನ್ನು ಅರ್ಪಿಸಲಾಯಿತು. [illegible] ರು ೫೦೦ [illegible] ಸಂಘದವರು ೧೦೦೦ ಮತ್ತು [illegible] ಬ್ಯಾಂಕಿನವರು ೧೫೦ ರೂ ನಿಧಿಗಳನ್ನು ಅಧ್ಯಕ್ಷರಿಗೆ ಅರ್ಪಿಸಿದರು.

ಮೆರವಣಿಗೆಯು ೩ ಗಂಟೆ ೧೦ ನಿಮಿಷ ಕಾಲ ಹಿಡಿಯಿತು. ಅಧ್ಯಕ್ಷರು [illegible] ಅರಮನೆಯೊಳಗೆ ಹೋಗುವ ಮುಂಚೆ [illegible] ನಿಮಿಷ ವಿಶ್ರಮಿಸಿಕೊಂಡರು. ಮೆರವಣಿಗೆ ಏರ್ಪಾಡು ಸುವ್ಯವಸ್ಥಿತವಾಗಿತ್ತು. ರಾಷ್ಟ್ರಾಧ್ಯಕ್ಷರು ಮಂತ್ರಿಗಳೊಡನೆ ಮಧ್ಯಾಹ್ನದ ಊಟವನ್ನು ಮಾಡಿದರು. ೫೦ ಮಂದಿ ಅತಿಥಿಗಳು ಭಾಗವಹಿಸಿದ್ದರು. ಈ ರಾತ್ರಿ, ಅವರು ಮದ್ರಾಸು ಮೂಲಕ ದೆಹಲಿಗೆ ತೆರಳುವರು.

ಈ ರಾತ್ರಿ ೯॥ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ಮೆರವಣಿಗೆ ವಿವರಗಳ ಪ್ರಸಾರವಿದೆ.

ಡಯೂ ಸತ್ಯಾಗ್ರಹಿಗಳ ಮೇಲೆ ಪೋರ್ಚುಗೀಸರ ಗುಂಡು

ಡಯೂ ಪ್ರದೇಶವನ್ನು ಅಹಮದ್‌ಪುರ-ಮಾಂಡ್ವಿ ಗಡಿ ಸುಂಕದ ಕಛೇರಿ "[illegible] ಭಾರತ" ದ ಕಡೆಯಿಂದ ಒಳಹೊಕ್ಕ ಡಯೂ ವಿಮೋಚನಾ ಚಳುವಳಿಗೆ ಸೇರಿದ ೯ ಜನ ಸತ್ಯಾಗ್ರಹಿಗಳ ಮೇಲೆ ಪೋರ್ಚುಗೀಸ್ ಮಿಲಿಟರಿ ಪೋಲೀಸರು ನೆನ್ನೆ ೩ ರೌಂಡ್ ಗುಂಡು ಹಾರಿಸಿದರು. ಆದರೆ ಯಾರಿಗೂ ಗಾಯವಾಗಲಿಲ್ಲ. ಮಂತರ ಪೋಲೀಸರೂ ಅಲ್ಲಿಗೆ ಬಂದು ಗುಂಡು ಹಾರಿಸಿ, ಅವರುಗಳನ್ನು ಬಂಧಿಸಿದರು. ಅವರಲ್ಲದೆ ೨೦ ಜನರಿದ್ದ ಬೇರೆ ಸತ್ಯಾಗ್ರಹಿಗಳ ತಂಡವೊಂದನ್ನೂ, ೨೦೦ ಜನರಿದ್ದ ಬೇರೊಂದು ತಂಡವನ್ನೂ ಸೌರಾಷ್ಟ್ರ ಪೋಲೀಸರು ಗಡಿ ಬಳಿ [illegible] ಎಂಬುದನ್ನು ಪರಿಶೀಲಿಸಲು ತಡೆದರು. ಬಂಧನಕ್ಕೊಳಗಾದವರನ್ನು ಪೋರ್ಚುಗೀಸ್ ಪೋಲೀಸರು ಕಾಲಿನಿಂದ ಒದೆದು ಬಂದೂಕಗಳಿಂದ ಹೊಡೆದುದಾಗಿಯೂ ವರದಿಯಾಗಿದೆ.

○ [illegible]

ಅಕ್ರಮ ಬಳಕೆ ಮತ್ತು ತೂಕಕ್ಕಾಗಿ ದಂಡ

ಮೈಸೂರು ೨

ರಾಜಧಾನಿಯ ಒಂಟಿಕೊಪ್ಪಲಿನ ದಿನಸಿ ಅಂಗಡಿ ವರ್ತಕರಾದ ಶ್ರೀ ವೆಂಕಟಸ್ವಾಮಿ ಶೆಟ್ಟರು ಸರ್ಕಾರದಿಂದ ಸಂದರಾ ದೆಹರ ತೂಕದ ಬಟ್ಟುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರೆಂದು ಅವರಿಗೆ ೧೦ ರೂ ದಂಡ [illegible] ದರೆ ೪ ದಿನ ಸಾದಾ [illegible] ಮುದ್ರೆ ಇಲ್ಲದೆ ಇದ್ದ [illegible] ಕ್ಕೆ ೩೪ದ ದಕ್ಕಾಗಿ [illegible] ೪ ದಿನ ಸಾದಾ ಸಜ [illegible] ನ್ಯಾಯಾಧೀಶರು ವಿಧಿಸಿದ್ದಾರೆ.

ಓವರ್ ಲೋಡ್ ಮಾಡಿದುದಕ್ಕೆ ೪೦ ರೂ ದಂಡ

ಎಂ ವೈ ೫೮೭ ಎಸ್ಸ್ ನಂಬರಿನ ಲಾರಿಯಲ್ಲಿ ಕಳೆದ [illegible] ನರನ್ನು ಕೂಡಿ ಸುದಕ್ಕಾಗಿಯೂ [illegible] ಇದರ ತೋರಿಸದಿದ್ದುದಕ್ಕಾಗಿಯೂ ಡ್ರೈವರ್ ಮಹಮದ್ ಉಮ್ಮರ್ ಎಂಬುವರ [illegible] ಫಿಕ್ ಪೋಲೀಸರು ಹೂಡಿದ ಮೊಕದ್ದಮೆಯಲ್ಲಿ ಅಪಾದಿತನಿಗೆ ನಗರದ ಗನ್ ನ್ಯಾಯಾಧೀಶರು ೪೦ ರೂ ದಂಡ, ತಪ್ಪಿದರೆ ೪ ದಿನದ ಸಾದಾ ಸಜಾವನ್ನು ನೆನ್ನೆ ವಿಧಿಸಿದರು.

ಲಷ್ಕರ್ ಮೊಹಲ್ಲೆಯ [illegible] ನರು ವ್ಯಭಿಚಾರಕ್ಕೆ [illegible] ದ್ದರಿಂದ ಅವರಿಗೆ ೩೦ ರೂ ದಂಡವನ್ನು ವಿಧಿಸಲಾಗಿದೆ.

ಉನ್ನತ ಶಿಕ್ಷಣಕ್ಕಾಗಿ ಅಮೇರಿಕಕ್ಕೆ ಡಾ|| ಅನಂತರಾಯರ ಪ್ರಯಾಣ

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ನಿವೃತ್ತ ಜಿಲ್ಲಾ ಸರ್ಜನ್ ವೈದ್ಯ [illegible] ಎಸ್ ಕೃಷ್ಣಮೂರ್ತಿಯವರ ಪುತ್ರ [illegible] ಲಿ ಜನ [illegible] ಸ್ವಾಧ್ಯಾಪಕರೂ ಆದ ಡಾ|| ಎಸ್ ಕೆ ಅನಂತರಾಯರು ಅಮೇರಿಕದ [illegible] ವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕಾಗಿ ನೆನ್ನೆ ಬೊಂಬಾಯಿನಿಂದ [illegible] ಅಮೇರಿಕಕ್ಕೆ ಪ್ರಯಾಣ ಮಾಡಿದರು. ಅವರಿಗೆ ಫೆಲ್ಲೋಷಿಪ್ [illegible] ವೇತನವು ದೊರೆತಿದೆ.

ಅಯ್ಯನಾರ್ ಸಂಗೀತಕಲಾ ಶಾಲಾ ವಾರ್ಷಿಕೋತ್ಸವ

[illegible] ಶ್ರೀ ಅಯ್ಯನಾರ್ ಸಂಗೀತ [illegible] ಸಂಗೀತ ಸಭೆ [illegible] ಅಧ್ಯಕ್ಷತೆಯಲ್ಲಿ ಜರುಗುವುದು.

ಯಕ್ಷಗಾನ ಶನಿ ಮಹಾತ್ಮೆ ಮತ್ತು ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಮಹಾರಾಷ್ಟ್ರ ಶ್ರೀ ರಾಮ ಮಂದಿರದಲ್ಲಿ ಇಂದು ಮಧ್ಯಾಹ್ನ ೪ ಗಂಟೆಗೆ ಶ್ರೀ [illegible] ಗಳವರಿಂದ ಯಕ್ಷಗಾನ ಶನಿ ಮಹಾತ್ಮೆಯೂ, ಶ್ರೀ ಎಂ [illegible] ಹರಣ್ಣಯ್ಯನವರಿಂದ ವ್ಯಾಖ್ಯಾನವೂ ನಡೆಯುವುದು. [illegible] ನೇ ತಾ|| ಸಂಜೆ ೬ ಗಂಟೆಗೆ ಶ್ರೀ ಎಂ ಎಲ್. [illegible] ದಾಸರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯು ಏರ್ಪಾಡಾಗಿದೆ.

ಕೃಷ್ಣಜಯಂತಿ ಕಾರ್ಯಕ್ರಮ

ರಾಜಧಾನಿಯ ಚಲುವಾಂಬಾ ಆಸ್ಪತ್ರೆ ಬಳಿ ಇರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಶ್ರೀ ಕೃಷ್ಣ ಜಯಂತಿ ಪ್ರಯುಕ್ತ ನಾಳೆ ಮಧ್ಯಾಹ್ನ ೪ ಗಂಟೆಗೆ ಶ್ರೀ [illegible] ಅವರಿಂದ ಕೃಷ್ಣ [illegible] ಎಂಬ ಹರಿಕಥೆಯೂ, ಸಂಜೆ ೭ ಗಂಟೆಗೆ [illegible] ವೇಣು ವಾದನವೂ ನಡೆಯುವುವು.

ಕೆಂಗಲು ಮತ್ತೂರಿನಲ್ಲಿ ಜಯತೀರ್ಥಾಚಾರ್ಯರಿಂದ ಭಾಗವತ ಸಪ್ತಾಹ

[illegible] ಜಯತೀರ್ಥಾಚಾರ್ಯರು ಕೆಂಗಲು ಮತ್ತೂರಿನಲ್ಲಿ [illegible] ಭಾಗವತ ಸಪ್ತಾಹವನ್ನು ನಡೆಸುತ್ತಿದ್ದಾರೆ.

ಡಚ್ ವಿಮಾನ ಮುರಿದು ಬಿತ್ತು

ನ್ಯೂಯಾರ್ಕಿನಿಂದ [illegible] ನಗರಕ್ಕೆ ಹೊರಟಿದ್ದ ಡಚ್ ವಿಮಾನವೊಂದು [illegible] ಸಮುದ್ರದ ಮೇಲೆ [illegible] ದುಬಿತ್ತೆಂದೂ ಒಟ್ಟು ಹುಡುಗನ [illegible] ದೇಹ [illegible] ಮಾಡಿದ್ದಾರೆ [illegible] ಒಟ್ಟು [illegible] ಪ್ರಯಾಣಿಕರಿದ್ದರು [illegible] ಬಿದ್ದ [illegible] ಜನ [illegible]

[illegible] ಯಲ್ಲಿ ಮಸ್ತಕಾಭಿಷೇಕ

[illegible] ಕ್ಷೇತ್ರದ ಶ್ರೀ ಗೋಮಟೇಶ್ವರ ಸ್ವಾಮಿಯ ಮಹಾ ಮಸ್ತಕಾಭಿಷೇಕವು ಬರುವ ತಿಂಗಳು [illegible] ತಾ|| ವಿಜೃಂಭಣೆಯಿಂದ ನಡೆಯುವುದು. ಸಕಲರೂ ಬರಬೇಕೆಂದು ಜೈನ ಮಂಡಲಿಯವರು ಕೋರಿರುತ್ತಾರೆ.

ದಾದಿಯರು ಸೇರಬೇಕಾದ ವಯಸ್ಸು

ದಾದಿಯರ [illegible] ಹದ್ದಿಗೆ [illegible] ವಯಸ್ಸಿಗೆ [illegible] ಗೊತ್ತುಪಡಿಸಿದ್ದಾರೆ.

ಹಿಂದಿ ಪ್ರವೇಶ ಪತ್ರಗಳ ಹಂಚಿಕೆ

ಮೈಸೂರು ಹಿಂದಿ ಪ್ರಚಾರ ಸಭೆಯ [illegible] ಕೇಂದ್ರದ ವಿದ್ಯಾರ್ಥಿ [illegible] ನೆನ್ನೆ ಸಂಜೆ [illegible] ಹೈಸ್ಕೂಲಿನ [illegible] ಎಚ್ ಅನಂತರಾಮ [illegible] ಪೂಜೆಯನ್ನು ನೆರವೇರಿಸಿದರು. ಶ್ರೀ [illegible] ಶ್ರೀ ಡಿ ರವೀಂದ್ರನಾಥರ [illegible] ಶ್ರೀ ಎಂ ಎಸ್ [illegible] ಮೃದಂಗವೂ ಮತ್ತು ಶ್ರೀ [illegible] ಲಕ್ಷ್ಮೀನಾರಾಯಣರ [illegible] ಹಿಂದೀ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳು ಹಂಚಲ್ಪಟ್ಟವು. [illegible] ವಂದನೆಗಳನ್ನು ಸಮರ್ಪಿಸಿದರು.

ವಿವಾಹ ಮಹೋತ್ಸವ

ರಾಜಧಾನಿಯ ಶ್ರೀ [illegible] ಕುಮಾರ ಡಾ|| [illegible] ಸುಬ್ರಹ್ಮಣ್ಯ [illegible] ಚಿರಂಜೀವಿ [illegible] ಶ್ರೀ ಚಾಮುಂಡಿ [illegible] ಶ್ರೀ ಗೋವಿಂದರಾಯರಿಗೆ [illegible] ವಿವಾಹವನ್ನು ನೆರವೇರಿಸಿದರು.

ಅಶೋಕಪುರಂ ನಾಳೆ ಕಾರ್ಯಕ್ರಮ

[illegible] ಕೃಷ್ಣ [illegible] ಭಾಷಣ [illegible] ಸಂಗೀತ ಇತ್ಯಾದಿ

[illegible] ಶ್ರೀ ಪ್ರಸನ್ನ [illegible] ಮಂದಿರ ಮೈಸೂರು

ಅಮೋಘ ಸಂಗೀತ ಕಛೇರಿ

27 8 54 ಶುಕ್ರವಾರ ಸಂಜೆ 6 ಗಂಟೆಗೆ ಕುಮಾರಿ ಎಸ್ ಲೀಲಾ ಮತ್ತು

,, ಎಸ್ ಮೀನಾಕ್ಷಿ — ಹಾಡುಗಾರಿಕೆ

,, ಎಸ್ ವೇದವಲ್ಲಿ ಪಿಟೀಲು

ವಿದ್ವಾನ್ ಎ ವಿ [illegible] ಮೃದಂಗ

[illegible] ಪ್ರವೇಶ [illegible]

[illegible] ಅಧ್ಯಕ್ಷರು

ಮಂಡ್ಯದಲ್ಲಿ ಕಂಟ್ರಾಕ್ಟರರ ಪತ್ನಿಯ ಮೇಲೆ ದರೋಡೆ

ಮಂಡ್ಯದ [illegible] ಕಂಟ್ರಾಕ್ಟರ್ ಶ್ರೀ [illegible] ಮನೆಗೆ ನೆನ್ನೆ ರಾತ್ರಿ [illegible] ನುಗ್ಗಿ ಅವರ ಪತ್ನಿಯವರ ಮೈ ಮೇಲಿದ್ದ [illegible] ದರೋಡೆ ಮಾಡಿ [illegible] ಪರದಿಯಾಗಿದೆ [illegible] ಕಂಟ್ರಾಕ್ಟರರು [illegible] ಅವರ ಮೇಲೆ ಕೈ ಮಾ[illegible] ಎಡ ಮತ್ತು ಚೆನ್ನಿನ [illegible] ಗೊತ್ತಾಗಿದೆ [illegible] ಕಳೆದು ಹೋಗಿತ್ತು [illegible] ಬಿದ್ದಿತ್ತ [illegible] ಪ್ರವೇಶ ಮಾಡಿದ [illegible]

ಅಲ್ಲದೆ ಬೇರೆಂದು [illegible] ಇನ್ನೊಂದ [illegible] ಪ್ರಸಂಗಗಳು ಅದೇ ರಾತ್ರಿ ನಡೆದಿವೆ.

ಶಾರದಾ ಪೂಜೆ

[illegible] ರಾಜಧಾನಿಯ [illegible] ಹಿಂದಿ [illegible] ಶಾರದಾ ಪೂಜೆಯನ್ನು ನೆರವೇರಿಸಲಾಯಿತು. ಮೈಸೂರು [illegible] ಹಿಂದಿ ಸಂಘಟಕರಾದ ಶ್ರೀ ಪಿ ವೆಂಕಟ [illegible] ಅಧ್ಯಕ್ಷತೆ ವಹಿಸಿದ್ದರು. [illegible] ಪಿ ವೆಂಕಟಕೃಷ್ಣಯ್ಯನವರಿಂದ [illegible] ಭಾಷಣ [illegible] ಶ್ರೀ ಕೃಷ್ಣಮೂರ್ತಿಯವರ ಸಂಗೀತವು ನಡೆಯಿತು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಉಪಾಧ್ಯಾಯರ ನಿವೃತ್ತಿ ವಯಸ್ಸಿನ ನಿರ್ಧಾರ

ಸಂಸ್ಥಾನ ಸರ್ಕಾರದ ವಿದ್ಯಾ ಸಂಸ್ಥೆಗಳಲ್ಲಿ [illegible] ಉಪಾಧ್ಯಾಯರು [illegible] ವರ್ಷಕ್ಕೆ ನಿವೃತ್ತರಾಗಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ತರಬೇತು ಹೊಂದದೆ [illegible] ಅದೇ ವಯಸ್ಸಿನಲ್ಲಿ ನಿವೃತ್ತರಾಗುವರು. ಗೊತ್ತಾದ ಮಟ್ಟಕ್ಕೆ ಇಲ್ಲದಿರುವ [illegible] ದಕ್ಷರಾಗಿಲ್ಲದ ಉಪಾಧ್ಯಾಯರು ೫೫ಕ್ಕೆ ನಿವೃತ್ತರಾಗುತ್ತಾರೆ.

ಲಕ್ಷ್ಮಿ ★ 26—8—54 ರಿಂದ
ಜನಭರಿತ 3ನೇ ವಾರ
ಪ್ರತಿ ದಿನ 3 ಆಟಗಳ
ಸಕ್ಷಂಜಾರರವರ ತಮಿಳು ಚಿತ್ರ
* ಮಲೈಕ್ಕಳ್ಳ *
ಪಾತ್ರ ಎಂ ಜಿ ರಾಮಚಂದ್ರ
ಮತ್ತು ಪಿ ಭಾನುಮತಿ

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರು ತಾಲ್ಲೂಕಿನ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ [illegible] ಸ್ಥಾಪಿತವಾದ ಯಳಂದೂರು ವಿದ್ಯಾರ್ಥಿ ನಿಧಿಯು [illegible] ವರ್ಷದ [illegible] ವಿದ್ಯಾರ್ಥಿಗಳಿಗೆ [illegible] ಸಹಾಯ [illegible] ಕೊಡಲಾಗಿದೆ. [illegible] ವಿದ್ಯಾರ್ಥಿಗಳ ನಿಧಿಯ ಅಭಿವೃದ್ಧಿಗಾಗಿ ನೆರವು ನೀಡಬೇಕೆಂದು ಸಮಿತಿಯವರು ಕೋರಿದ್ದಾರೆ. [illegible] ವಿದ್ಯಾರ್ಥಿ ನಿಧಿಗೆ [illegible] ಮಂಜೂರು ಮಾಡಿರುತ್ತಾರೆ.

ಸವಿ [illegible] ಅಧಿವೇಶನವು ಬರುವ ತಿಂಗಳು [illegible] ನೇ ತಾ|| ಭಾನುವಾರ ಬೆಳಿಗ್ಗೆ [illegible] ಗಂಟೆಗೆ ಯಳಂದೂರಿನಲ್ಲಿ ಶ್ರೀಮಂತ ಜಹಗೀರುದಾರರ ಬಂಗಲೆಯಲ್ಲಿ ನಡೆಯುವುದೆಂದೂ, ಸದಸ್ಯರುಗಳೆಲ್ಲರೂ ದಯಮಾಡಿಸಬೇಕೆಂದೂ ಕಾರ್ಯದರ್ಶಿಗಳು ಕೋರಿರುತ್ತಾರೆ.

ಮಥುರಾದಲ್ಲಿ ೧೬೪ ಜನರ ಬಂಧನ

ಉತ್ತರ ಪ್ರದೇಶದ ಮಥುರಾದಲ್ಲಿ ಶ್ರೀಕೃಷ್ಣನು ಹುಟ್ಟಿದನೆಂದು ಹೇಳುವ ಪ್ರದೇಶದಲ್ಲಿ ನಿರ್ಮಿಸಬೇಕೆಂದಿರುವ ದೇವಾಲಯದ ಕೃಷ್ಣ ವಿಗ್ರಹವನ್ನು ಒಡೆದುಹಾಕಿದ ಸಂಬಂಧವಾಗಿ ಎರಡು ಕೋಮು ಗಳಿಗೆ ಘರ್ಷಣೆ ನಡೆದು [illegible] ನರಿಗೆ ಗಾಯವಾಯಿತು. ೧೬೪ ಜನರನ್ನು ದಸ್ತಗಿರಿ ಮಾಡಲಾಗಿದೆ. ಆ ಸ್ಥಳದಲ್ಲಿ ಜನರಿಗೆ ವಿವಿಧ ಶಿಕ್ಷೆಯನ್ನು ವಿಧಿಸಲಾಗಿದೆ.

SREE GANESHA
TALKIES
From 26-8 54 For 2 days
DEPORTED
Starring — Jeff Chandler
Marta Toren

From 28—8 54
THE PARADINE CASE
With — Gregory Peck & Charles Laughton

ಚಾಮುಂಡೇಶ್ವರಿ
ಟಾಕೀಸ್
27 8 54 ರಿಂದ ಅಮೋಘ 8 ನೇ ವಾರ
ಯಶಸ್ವಿಯಾದ 50ನೇ ದಿನ
ಎ ವಿ ಎಂ ರವರ ತಮಿಳು ಚಿತ್ರ * ಪೆಣ್
ಪಾತ್ರ ವೈಜಯಂತಿಮಾಲಾ ಜಾಮಿನಿ [illegible] ಅಂಜಲೀದೇವಿ, ಎಸ್ ಬಾಲಯ್ಯ, ನಾಗಯ್ಯ

ಮಾಧವ ಮಂದಿರ
ಗಣೇಶ್ವರ ಚೌಕ ಅಂಚಮ್ಮನ ಗುಡಿ ರಸ್ತೆ, ಮೈಸೂರು
ಶುಚಿ ಮತ್ತು ರುಚಿಕರವಾದ ಉಪಾಹಾರವನ್ನು ಮನಮೆಚ್ಚುವಂತೆ ತಯಾರಿಸಲು ಏರ್ಪಡಿಸಿದೆ
ಬೆಣ್ಣೆ ಕಾಯಿಸಿದ ತುಪ್ಪದಿಂದ ತಯಾರಿಸಿದ ಕೇಸರಿ ಭಾತು, ಸ್ಪೆಷಲ್ ಮಂಗಳೂರು ದೋಸೆ, ಸೆಟ್ ದೋಸೆ, ಮಸಾಲೆ ಇಡ್ಲಿ, ಸ್ಪೆಷಲ್ ಚಟ್ನಿ, ಮಸಾಲೆ ಪಲ್ಯ, ಹಾಗು ವಿಶೇಷ ಅಕರ್ಷಣೆಯು.
ಪ್ರತಿ ಸೋಮವಾರ ಮತ್ತು ಶುಕ್ರವಾರ ಬೆಳಿಗ್ಗೆ ನಮ್ಮ ಸ್ಪೆಷಲ್ ಬಿಸಿಬೇಳೆ ಭಾತನ್ನು ರುಚಿ ನೋಡಲು ಮರೆಯಬೇಡಿ ಅಲ್ಲದೆ ಡಿಸರ್ಟ್ [illegible]
ಬೆಣ್ಣೆ ಮತ್ತು ಬೆಣ್ಣೆ ಕಾಯಿಸಿದ ತುಪ್ಪವನ್ನು ಇಡಲಾಗಿದೆ
ವಿಶೇಷವಾದ ರೀತಿಯಲ್ಲಿ ' ಎ ಒನ್ ' ಕಾಫಿಯನ್ನು ತಯಾರಿಸಲು ಏರ್ಪಡಿಸಿದೆ

Edited Printed and Published by A. R. Nagaraja at Sadhvi Press [illegible] Mysore

ರಿಜಿಸ್ಟರ್ಡ್ ನಂ. 794

ಸಾಧ್ವಿ

ಸಂಪುಟ : ೧೪] SADHVI FRIDAY 27-8-1954 ಮೈಸೂರು ಶುಕ್ರವಾರ ೨೭-೮-೧೯೫೪ [ಸಂಚಿಕೆ : ೨೪

ಗೌರಿ ಹಬ್ಬಕ್ಕಾಗಿ
ಇದೇ 29ನೇ ತಾ|| ಭಾನುವಾರ ವ್ಯಾಪಾರವಿರುತ್ತದೆ
ನವೀನ ಮಾದರಿಯ ರೇಷ್ಮೆ ಸೀರೆಗಳು ಮತ್ತು ನೂಲಿನ ರವುಕೆಯ ಸೀರೆಗಳು ಬಂದಿವೆ
M. V ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು ಮೈಸೂರು ಫೋನ್ 446

ಗೌರಿ ಹಬ್ಬಕ್ಕಾಗಿ
ಇದೇ 29ನೇ ತಾ|| ಭಾನುವಾರ ವ್ಯಾಪಾರವಿರುತ್ತದೆ
ಕಾಂಜೀವರಂ ಧರ್ಮಾವರಂ ಮತ್ತು ಮೈಸೂರು ಸಿಲ್ಕ್ ಸೀರೆಗಳು ಬಂದಿರುತ್ತವೆ
ರಾಮ ವಿಲಾಸ್,
ಜವಳಿ ಅಂಗಡಿ ಮೈಸೂರು

ಗಂಗೆ-ಬ್ರಹ್ಮಪುತ್ರ ಪ್ರವಾಹದಿಂದ ೨ ಕೋಟಿ ಜನಕ್ಕೆ ಹಾನಿ

ಪ್ರೊ|| ಎಲ್ ಶ್ರೀಕಂಠಯ್ಯನವರ ರಾಜೀನಾಮೆ ಅಂಗೀಕಾರ

ಮೈಸೂರು ೨೬

ವಿಶ್ವವಿದ್ಯಾಲಯದವರು ತಮಗೆ ಅಭಿಪ್ರಾಯ ಸ್ವಾತಂತ್ರ್ಯವನ್ನು ಕೊಟ್ಟಿಲ್ಲವೆಂಬ ಕಾರಣಕ್ಕಾಗಿ ರಾಜ್ಯಶಾಸ್ತ್ರದ ಪ್ರೊಫೆಸರ್ ಎಲ್ ಶ್ರೀಕಂಠಯ್ಯನವರು ಕಳೆದ ವರ್ಷ ಮೇ ತಿಂಗಳಿನಲ್ಲಿ ಇತ್ತಿದ್ದ ರಾಜೀನಾಮೆಯನ್ನು ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ಅಂಗೀಕರಿಸಿದ್ದರು. ತೀರ್ಮಾನಕ್ಕಾಗಿ ಸರ್ಕಾರಕ್ಕೆ ಕಳುಹಿಸಿದ್ದರು. ಕಳೆದ ವಾರ ನಡೆದ ಮಂತ್ರಿಮಂಡಲದ ಸಭೆಯಲ್ಲಿ ರಾಜೀನಾಮೆಯು ಅಂಗೀಕರಿಸಲ್ಪಟ್ಟು ಪ್ರೊ|| ಶ್ರೀಕಂಠಯ್ಯನವರು ಅ|| ಪ್ರೊ|| ಜಿ ಎಸ್ ಹಾಲಪ್ಪನವರಿಗೆ ಅಧಿಕಾರವನ್ನು ವಹಿಸಿಕೊಡುವಂತೆ ಆಜ್ಞೆಯಾಗಿದೆ. ಅವರು ಬರುವ ೧ನೇ ತಾ|| ತಮ್ಮ ಅಧಿಕಾರವನ್ನು ವಹಿಸಿಕೊಡುವರೆಂದು ತಿಳಿದುಬಂದಿದೆ.

ಬೆಂಗಳೂರಿಗೆ ಆಕಾಶವಾಣಿ ವರ್ಗದ ವಿಷಯ

ಬೆಂಗಳೂರಿನಲ್ಲಿ ಪ್ರಸಾರ ಕೇಂದ್ರವನ್ನು ಸ್ಥಾಪಿಸಿ ಆರಂಭಿಸಿದನಂತರ ಮೈಸೂರಿನ ರೇಡಿಯೋವನ್ನು ಅಲ್ಲಿಗೆ ವರ್ಗಾಯಿಸಲಾಗುವುದೆಂದು ಕೇಂದ್ರ ವಾರ್ತಾ ಇಲಾಖೆ ಮಂತ್ರಿ ಬಿ ವಿ ಕೇಸ್ಕರ್‌ರವರು ಹೇಳುತ್ತಾರೆ. [illegible]

ಆಜಾದ್ ಕಾಶ್ಮೀರದಲ್ಲಿ ದಂಗೆಯಾಗುವ ಸೂಚನೆ

[illegible]

ಬ್ಯಾಂಕು ನೌಕರರುಗಳಿಂದ ನೇರ ಕಾರ್ಯಾಚರಣೆಯೇ?

[illegible]

ಸಂಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರ ಕೃತಜ್ಞತೆ

ಬೆಂಗಳೂರು ೨೬

ರಾಷ್ಟ್ರಾಧ್ಯಕ್ಷರು ನೆನ್ನೆ ರಾತ್ರಿ ಮದ್ರಾಸು ಮಾರ್ಗವಾಗಿ ದೆಹಲಿಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದರು. ಅದಕ್ಕೆ ಮುಂಚೆ ಅವರು ಸಂಸ್ಥಾನಕ್ಕೆ ಸಂದೇಶವೊಂದನ್ನಿತ್ತು ಇಲ್ಲಿ ಇದ್ದ ದಿನಗಳಲ್ಲಿ [illegible] ಬೆಂಗಳೂರು, ಮೈಸೂರು [illegible] ಮತ್ತು ಕೃತಜ್ಞತಾಪೂರ್ವಕ [illegible] ಸಂತೋಷಪ್ರದ ಮತ್ತು [illegible] ಶ್ರೀ ಮಹಾರಾಜರ, ಸಂಸ್ಥಾನದ [illegible] ಸಾಮಾನ್ಯ ಪ್ರಜೆಗಳೂ [illegible] ಕೃತಜ್ಞತೆ [illegible]

ತುಮಕೂರು ಬಾಲಕಿಯರ ಶಾಲೆಯಲ್ಲಿ ಭೂತ ಚೇಷ್ಟೆ?

[illegible]

ಜಿ ಎಸ್ ಟೊಬ್ಯಾಕೊ ಕಾರ್ಖಾನೆ ಬೀಡಿ ಕಾರ್ಮಿಕರ ಮುಷ್ಕರ

[illegible]

ಪಂಚ ವಾರ್ಷಿಕ ಯೋಜನೆ ಬಗ್ಗೆ ಕೇಂದ್ರದೊಡನೆ ಮಾತುಕತೆ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ ವಾ ಪ್ರ] ಬೆಂಗಳೂರು ೨೬

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ಕರೆದು ಪತ್ರಿಕಾ ಪ್ರತಿನಿಧಿಗಳು ಮಾಡಿದ ಪ್ರಶ್ನೆಗಳಿಗೆ ಉತ್ತರವಿತ್ತರು. ಬೆಂಗಳೂರು ರೇಸ್ ಕ್ಲಬ್ಬಿನ [illegible] ಅವರು ಮಾಡಿದರು.

ಪಂಚ ವಾರ್ಷಿಕ ಯೋಜನೆಯನ್ನು ಕುರಿತು ಕೇಂದ್ರ ಸರ್ಕಾರದೊಡನೆ [illegible] ದೆಹಲಿಯಲ್ಲಿ ಮಾತುಕತೆ ನಡೆಸುವುದಾಗಿ ತಿಳಿಸಿದರು.

ಕ್ರೀಟ್ ಕೊಳೆ ಬಗ್ಗೆ ಪುನರ್ವಸತಿ ವಿಷಯ

[illegible]

೨ ಕೋಟಿ ಜನರಿಗೆ ಪ್ರವಾಹದಿಂದ ಅಪಾರ ನಷ್ಟ

[illegible] ಗಂಗಾ ಬ್ರಹ್ಮಪುತ್ರಾ [illegible] ೧೦೦೦ ಮೈಲಿ ಪ್ರದೇಶದಲ್ಲಿ [illegible] ಪ್ರವಾಹವು [illegible] ೨ ಕೋಟಿಗೂ ಹೆಚ್ಚು [illegible] ವರದಿಯಾಗಿದೆ. [illegible] ಪೂರ್ವ ಪಾಕಿಸ್ತಾನದ ಹಲವು ಭಾಗಗಳಿಗೂ ಪ್ರವಾಹದಿಂದ ತೊಂದರೆಯಾಗಿದೆ. [illegible] ಹಿಮಾಲಯದಲ್ಲಿ [illegible] ಇದಕ್ಕೆ ಕಾರಣ [illegible] ಅನೇಕ ಕೋಟಿ ರೂಗಳಷ್ಟಾಗುವುದೆಂದೂ [illegible] ಜನರ ಪ್ರಾಣಹಾನಿಯಾಗಿಲ್ಲವೆಂದೂ ಹೇಳಲಾಗಿದೆ. ಉತ್ತರ ಬಂಗಾಳದಲ್ಲಿ ಆಗಿರುವ ನಷ್ಟವನ್ನು ಕೇಂದ್ರ ವ್ಯವಸಾಯ ಮಂತ್ರಿ ಕಿದ್ವಾಯಿಯವರು ವಿಮಾನದ ಮೂಲಕ ಪರಿಶೀಲಿಸುವರು.

ಹರಿಕಥೆ

[illegible]

ಎಸ್ ವಿ. ರಾಮಮೂರ್ತಿಯವರಿಂದ ಘಟಿಕೋತ್ಸವ ಭಾಷಣ

ಸ್ವಂ ವಾ ಪ್ರ] ಬೆಂಗಳೂರು ೨೬

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣವನ್ನು ಕೇಂದ್ರ ಯೋಜನಾ ಸಲಹೆಗಾರರಾದ ಎಸ್ ವಿ ರಾಮಮೂರ್ತಿಯವರು ಅಕ್ಟೋಬರ್ [illegible] ನೇ ತಾ|| ಮಾಡುವರು.

ಮೆಡಿಕಲ್ ಕಾಲೇಜಿನಲ್ಲಿ ಸ್ಥಾನ ದೊರೆಯದಿದ್ದಕ್ಕೆ ವಿದ್ಯಾರ್ಥಿಯು ರಿಟ್ ಅರ್ಜಿ

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸ್ಥಾನ [illegible] ಬಗ್ಗೆ ವಿದ್ಯಾರ್ಥಿ [illegible] ಹೈಕೋರ್ಟಿಗೆ ರಿಟ್ ಅರ್ಜಿಯನ್ನು ಹಾಕಿರುತ್ತಾರೆ.

ಸಿಂಹಳದ ೫ ಸಾವಿರ ಭಾರತೀಯರಿಗೆ ಉಚ್ಚಾಟನೆ

ರಹದಾರಿ ಅವಧಿಯು ಮುಗಿದ ೨೫,೦೦೦ ಭಾರತೀಯ [illegible] ೫,೦೦೦ ಜನರ ಮೊದಲನೆ ತಂಡವು ಸಿಂಹಳವನ್ನು ನವೆಂಬರ್ ೩೦ ನೇ ತಾ|| ನೊಳಗೆ ಬಿಡುವಂತೆ ಈ ತಿಂಗಳು ಅಪ್ಪಣೆ [illegible] ಕೊಡಲಾಗುವುದೆಂದು ವರದಿಯಾಗಿದೆ.

ಹೆಂಡತಿಯನ್ನು ಒತ್ತೆಯಿಟ್ಟು ಜೂಜಾಡಿ ಸೋತ ಪ್ರಸಂಗ

[illegible]

ಪರಸ್ಪರ ಸುಖ ಬಾಳ್ವೆಗೆ ಅವಕಾಶ ತಪ್ಪಿದರೆ ಯುದ್ಧ

[illegible]

ನಗರದಲ್ಲಿ ಸೌತ್ ಭಾರತದ ವಿದ್ಯಾ ಮಂತ್ರಿಗಳು

[illegible]

ಸತತವಾದ ಶ್ರಮದಿಂದ ನಿರುದ್ಯೋಗದ ನಿವಾರಣೆ ಸಾಧ್ಯ

ವಿದ್ಯಾ ಮಂತ್ರಿಯವರ ರೇಡಿಯೋ ಭಾಷಣ

ಮೈಸೂರು ೨೬

ವಿದ್ಯಾ ಮಂತ್ರಿಯವರಾದ ಶ್ರೀ ಎ ಜಿ ರಾಮಚಂದ್ರರಾಯರು ನೆನ್ನೆ ಇಲ್ಲಿನ ರೇಡಿಯೋ ನಿಲಯದಲ್ಲಿ ಭಾಷಣ ಮಾಡಿ ಸರಿಯಾದ ಉದ್ಯೋಗ ಕಲ್ಪನೆ ಮತ್ತು ಯೋಗ್ಯತೆಗೆ ತಕ್ಕ ... ಈ ವಿಷಯ ಮಾಡಲು ... ವಿಲ್ಲವೆಂದೂ ... ಜ್ಜೈಲು ಖಾನೆಗಳಲ್ಲೂ ಪೂರ್ಣ ಉದ್ಯೋಗ ದೊರೆಯಬಹುದೆಂದೂ ಹೇಳಿದರು ... ದರಿಂದ ಉಂಟಾಗುವ ಸಕ್ಕಲ ... ರಿಣಾಮವೇ ಬೇಕಾಗಿರುವುದೆಂದ ಅವರು ಅಭಿಪ್ರಾಯಪಟ್ಟರು

ಯೋಗಕ್ಷೇಮ ರಾಷ್ಟ್ರವನ್ನಾಗಿ ಪರಿವರ್ತನ ಪ್ರಯತ್ನದಲ್ಲಿರುವ ಸ್ವತಂತ್ರ ... ವ್ಯಕ್ತಿ ಸರಲರಿಗೂ ಉದ್ಯೋಗ ಕಲ್ಪಿಸಲು ... ದೇದೂ, ಹಣಕಾಸಿನ ದಂಡವನ್ನು ... ರಿಂದ ಅದನ್ನು ಸಾಧಿಸಲಾಗುವುದಿಲ್ಲವೆಂದ ದೇಶದ ಸಂಪತ್ತಿನ ಪೂರ್ಣ ಉತ್ಪತ್ತಿಗೆ ... ವ್ಯವಸ್ಥೆ ಮಾಡುವುದರಿಂದ ... ಪೂರ್ಣ ಉದ್ಯೋಗವನ್ನು ಪಡೆದ ... ಅದನ್ನು ಸಾಧಿಸಬಹುದು ... ಗುಡಿ ಮತ್ತು ... ಭಾರತವು ತನ್ನ ಆರ್ಥಿಕ ಅಭಿವೃದ್ಧಿಗಾಗಿ ೨,೨೦೦ ಕೋಟಿ ರೂ ಗಳನ್ನು ಒದಗಿಸುವುದೆಂದೂ ಮೈಸೂರು ಸಂಸ್ಥಾನದಲ್ಲಿ ... ಕೋಟಿ ರೂ ಗಳನ್ನು ಕೊಡಲಾಗುವುದೆಂದೂ ಅವರು ತಿಳಿಸಿದರು

ಉಪನ್ಯಾಸ

ರಾಜಧಾನಿಯ ಹಾರ್ಡಿಂಜ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೊನ್ನೆ ಸಾರ್ವಜನಿಕ ಆರೋಗ್ಯ ... ಚಿಕಿತ್ಸಾ ವಿಭಾಗದ ... ಶ್ರೀಮತಿ ... ಅವರು "ಆರೋಗ್ಯ ಮತ್ತು ಅದರ ರಕ್ಷಣೆ" ಎಂಬ ... ವಿದ್ಯಾರ್ಥಿಗಳನ್ನುದ್ದೇಶಿಸಿ ... ಷಣ ಮಾಡಿದರು

ನಾರಾಯಣ ಮಹಾರಾಜರ ವಿಚಾರಣೆ

ಹರಿಹರದ ನಾರಾಯಣ ಮಹಾರಾಜರ ಮೇಲೆ ಹೂಡಲಾಗಿರುವ ಮೊಕದ್ದಮೆ ... ನೇ ನಗರ ನ್ಯಾಯಾಧಿಪರ ... ವಿಚಾರಣೆಗೆ ಬಂದಿತ್ತು ... ಪ್ರಾಸಿಕ್ಯೂಟರವರು ಸಾಕ್ಷ್ಯವನ್ನು ... ನ ವ್ಯತಿರೇಕದ ಪರೀಕ್ಷೆ ನಡೆಸಿದರಾಯಿತು, ಅದರ ಅಂಟಿಂಟ್ಸ್‌ಗಳನ್ನು ... ಪರಿ ಶ್ರಕರಿಗೆ ... ದರು. ಆಕೆಗೆ ... ಅಭಿಪ್ರಾಯಪಟ್ಟರು ... ಸೆಪ್ಟೆಂಬರ್ ... ನೇ ತಾರೀಖಿಗೆ ಮುಂದುವರಿಸಲಾಯಿತು

ಕೃಷ್ಣ ಜಯಂತಿ ಸಂಗೀತ ಮತ್ತು ವೀಣಾ ವಾದನ

ರಾಜಧಾನಿಯ ... ಆಗ್ರಹಾರದ ... ಶ್ರೀ ಪ್ರಸನ್ನ ವೆಂಕಟ ... ಸ್ವಾಮಿಯವರ ದೇವಾಲಯದಲ್ಲಿ ಶ್ರೀಕೃಷ್ಣ ಜಯಂತಿ ಪ್ರಯುಕ್ತ ನಿನ್ನೆ ಮಧ್ಯಾಹ್ನ ... ಗಂಟೆಗೆ ಶ್ರೀ ಎಸ್ ವಿ ... ವೀಣಾ ವಾದನ ಮತ್ತು ... ಗಂಟೆಗೆ ... ಪದ್ಮನಾಭರಾವ್ ರಿಂದ ಸಂಗೀತವು ನಡೆ ... ದಿದೆ

ಅಮೆರಿಕದ ಸೈನ್ಯಕ್ಕೆ ಭಾರತದ ಕಲ್ಲಿದ್ದಿಲು

ದಕ್ಷಿಣ ... ಯದಲ್ಲಿ ಕಾರ್ಯಾಚರಣೆ ... ಸಲುವಾಗಿ ... ಟನ್ ಕಲ್ಲಿದ್ದಿಲನ್ನು ... ಪಶ್ಚಿಮ ಬಂಗಾಳದ ... ಕಲ್ಲಿದ್ದಿಲು ... ಪ್ಪಂದ ಮಾಡಿಕೊಂಡಿದೆ ...

ಅಸ್ಸಾಂ ಪ್ರವಾಹದಿಂದ ೨ ಲಕ್ಷ ಜನರಿಗೆ ನಷ್ಟ

ಅಸ್ಸಾಂ ಪ್ರಾಂತದ ದಿಬ್ರುಗಢ ಸಬ ಡಿವಿಜನ್ನಿನ ... ಪ್ರದೇಶಗಳಲ್ಲಿರುವ ೨ ಲಕ್ಷ ಜನರಿಗೆ ... ಉಕ್ಕಿದ ಪ್ರವಾಹದಿಂದ ... ವಾದಿಯಾಗಿದೆ ... ಪ್ರದೇಶದಲ್ಲಿ ... ಈ ವರ್ಷದಲ್ಲಿ ... ನೇ ಆವರ್ತಿ ಬಂದಿರುವ ಪ್ರವಾಹ ... ಉತ್ಪತ್ತಿಯಾದರೆ ... ಕೊಟ್ಟಿಲ್ಲ ... ಪ್ರದೇಶದಲ್ಲಿ ... ಅಸ್ಸಾಂ ... ಭಾರತದಿಂದ ಪ್ರತ್ಯೇಕಿಸಲ್ಪಟ್ಟಿದೆ ...

ಬಾಗಲಕೋಟೆಯಲ್ಲಿ ಇಬ್ಬರು ಕಾರ್ಮಿಕರ ದುರಂತ

ಬಾಗಲಕೋಟೆಯ ಸಿಮೆಂಟ್ ಕಾರ್ಖಾನೆಯಲ್ಲಿ ಒಂದು ... ಕುಸಿದ ಒಳಗೆ ... ಇಬ್ಬರು ಕಾರ್ಮಿಕರ ವ್ಯವಸಪಟ್ಟಿರುತ್ತಾರೆ

ಭಾರತದಲ್ಲಿ ವರ್ಷಕ್ಕೆ ೩ ಕೋಟಿ ಟನ್ ಭತ್ತದ ಬೆಳೆ

ಭಾರತದಲ್ಲಿ ವರ್ಷಕ್ಕೆ ೩ ಕೋಟಿ ೧೦ ಲಕ್ಷ ಟನ್ ಭತ್ತವು ಬೆಳೆಯುವುದೆಂದು ಅಂದಾಜು ಮಾಡಲಾಗಿದೆ

ಕೇರಳ ಸರ್ಕಾರಕ್ಕೆ ಹೈಕೋರ್ಟಿನ ನೋಟೀಸು

ತಿರುವಾಂಕೂರು ತಮಿಳು ಕಾಂಗ್ರೆಸ್ ನ ... ಮುಖಂಡರನ್ನು ಬಂಧಿಸಿದ ಬಗ್ಗೆ ... ಹೈಕೋರ್ಟಿನವರು ಸರ್ಕಾರಕ್ಕೆ ನೋಟೀಸು ಕೊಟ್ಟು ... ಬಂಧನವನ್ನು ... ಪ್ರಕರಣಕ್ಕೆ ಕಾರಣ ತೋರಿಸಬೇಕೆಂದು ಸೂಚಿಸಿದ್ದಾರೆ ... ತಾ॥ ... ಕೇಸು ವಿಚಾರಣೆ ಇದೆ

ಹಿಂದಿ ಪ್ರಶಸ್ತಿ ಪತ್ರ ಇಲ್ಲದ ನೌಕರರಿಗೆ ಬಡ್ತಿ ಇಲ್ಲ

ಈ ತಿಂಗಳು ... ದಿನ ... ಹಿಂದಿಯಲ್ಲಿ ಪ್ರಶಸ್ತಿ ಪತ್ರ ... ನೌಕರರಿಗೆ ... ಬಡ್ತಿ ... ಕೊಡಲಾಗುವುದಿಲ್ಲವೆಂದು ... ಪ್ರಕಟಿಸಿದ್ದಾರೆ

ಷೋಲಾಪುರದಲ್ಲಿ ೭ ಜನರಿಗೆ ಚೂರಿ ಇರಿತ

ಷೋಲಾಪುರದಲ್ಲಿ ವೈಯಕ್ತಿಕ ದ್ವೇಷದ ಪರಿಣಾಮವಾಗಿ ೭ ಜನರಿಗೆ ಚೂರಿ ಇರಿತ ... ಇಬ್ಬರಿಗೆ ತೀವ್ರ ಪೆಟ್ಟು ಬಿದ್ದು ಆಸ್ಪತ್ರೆಗೆ ಕಳುಹಲಾಗಿದೆ. ಇಬ್ಬರನ್ನು ಬಂಧಿಸಿ ... ಗಳು ನಡೆದ ಪ್ರದೇಶದಲ್ಲಿ ಪೋಲೀಸರು ಗಸ್ತು ತಿರುಗುತ್ತಿರುವರು

ಸರ್ವೀಸ್ ಬಸ್ಸಿನ ಮೇಲೆ ಧಾಳಿಯೇ?

ಮೈಸೂರಿನ ... ಕಂಪೆನಿಗೆ ಸೇರಿದ ... ಮೋಟಾರು ಸರ್ವೀಸ್ ಬಸ್ಸೊಂದು ... ನಗರಕ್ಕೆ ... ಬರುತ್ತಿದ್ದಾಗ ... ದಾರಿಯಲ್ಲಿ ... ಬಸ್ಸು ನಿಲ್ಲಿಸುವಂತೆ ಕೈ ತೋರಿಸಲು ಅದನ್ನು ನಿಲ್ಲಿಸಿದಾಗ ... ಗಂಟೆ ... ಡ್ರೈವರ್ ಮತ್ತು ಕಂಡಕ್ಟರುಗಳ ಮೇಲೆ ಧಾಳಿ ಮಾಡಿ ಅವರನ್ನು ದೊಣ್ಣೆಗಳಿಂದ ಹೊಡೆದರೆಂದು ವರದಿಯಾಗಿದೆ. ಬಸ್ಸು ನಿಲ್ಲಿಸುವಂತೆ ಕೈ ತೋರಿಸಿದವನು ಅದೇ ದಿನ ಬೆಳಿಗ್ಗೆ ಬಸ್ಸಿನಲ್ಲಿ ... ಪ್ರಯಾಣ ಮಾಡಿದ್ದನೆಂದೂ, ಚಾರ್ಜಿನ ವಿಷಯದಲ್ಲಿ ... ಕಂಡಕ್ಟರನೊಡನೆ ಜಗಳವಾಡಿ ... ಹೇಳಲಾಗಿದೆ ... ಬಸ್ಸಿನ ... ಗಳು ...

ಶಿವಮೊಗ್ಗ ಜಿಲ್ಲೆಯಲ್ಲಿ ಪೋಲೀಸರ ದೌರ್ಜನ್ಯವೇ?

ಸಂಸ್ಥಾನದ ಪ್ರಜಾ ಸಮಾಜ ವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರ ... ಕಾರ್ಯದರ್ಶಿಯ ... ಶಾಸನ ಸಭಾ ಸದಸ್ಯರುಗಳ ಸಭೆಯು ... ಶ್ರೀ ಎಸ್ ... ಅಧ್ಯಕ್ಷತೆಯಲ್ಲಿ ನಡೆದು ... ತಾ॥ ... ನೇ ... ನೇಮಿಸುವಂತೆ ಸೂಚಿಸಲಾಯಿತು ... ಶಿವಮೊಗ್ಗ ಜಿಲ್ಲೆಯ ... ಗ್ರಾಮದಲ್ಲಿ ... ಮೇಲೆ ಪೋಲೀಸರು ನಡೆಸಿರುವ ದೌರ್ಜನ್ಯಗಳ ವಿಚಾರಣೆ ... ದ ... ಕ್ರಮ ... ವಿಚಾರಣೆ ನಡೆಸಬೇಕೆಂದು ಸೂಚಿಸಲಾಯಿತು

ಹೈಕೋರ್ಟ್ ನ್ಯಾಯಾಧೀಶರಿಗೆ ರಜಾ ಇಲ್ಲ

ಸೆಪ್ಟೆಂಬರ್ ... ತಿಂಗಳ ... ರಜಾ ಬೇಕೆಂದು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎ ಬಾಲಕೃಷ್ಣಯ್ಯನವರು ... ಅರ್ಜಿ ಕೊಟ್ಟಿದ್ದರು ... ಸರ್ಕಾರದ ... ಮುಖ್ಯ ಕಾರ್ಯದರ್ಶಿಯವರು ... ರಜಾ ಕೊಡಲು ಆಗುವುದಿಲ್ಲವೆಂದು ... ತಿಳಿಸಿದ್ದಾರೆ ... ನವೆಂಬರ್ ... ತಾರೀಖು ... ಶ್ರೀ ಬಾಲಕೃಷ್ಣಯ್ಯನವರ ಅಧಿಕಾರಾವಧಿಯು ಮುಗಿಯುವುದು

ಬಾಬು ರೆಡ್ಡಿಯವರಿಗೆ ೬ ತಿಂಗಳ ರಜಾ

... ಶ್ರೀ ಎ ವಿ ಬಾಬು ರೆಡ್ಡಿಯವರಿಗೆ ೬ ತಿಂಗಳ ರಜಾ ದೊರೆತಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಂಗೀತ ... ಎಂ ಎಸ್ ... ಮಧ್ಯಾಹ್ನ ... ಸಂಜೆ ... ಎಂ ಎಸ್ ... ಕೋಕಿಲ ... ಎಸ್ ... ದ್ವಂದ್ವ ... ರೇಡಿಯೋ ... ಪ್ರಸಾರ

ಮೈಸೂರಿನ ಪೇಟೆ ಧಾರಣೆ

ಪದಾರ್ಥ	ಹಿಂದಿನ ಧಾರಣೆ			ಈಗಿನ ಧಾರಣೆ		
ಕಡಲೇಕಾಯಿ	೩	೦	೦	೪	೩	೦
ಎಳ್ಳು	೩೪	೩	೦	೫೨	೧೨	೦
ಹುರುಳಿ	೨	೪	೦	೨೪	೨	೦
ಹೆಸರು	೩೭	೨	೦	೪೦	೨	೦
ಹಲಸಂದೆ	೩೯	೧೦	೦	೩೯	೧೦	೦
ಉದ್ದು	೪೯	೦	೦			
ತೊಗರಿ	೨೭	೬	೦			
ಧನಿಯ	೨೩	೪	೦			
ಹುಣಸೇಹಣ್ಣು	೭	೧೩	೦	೭	೧೧	೦

SRI GAYATHRI
TALKIES
To Day — Last Day
Appointment In Honduras
From 28 8 54 For 3 days
Warners in Glorious Technicolor
THE CRIMSON PIRATE
With Burt Lancaster

ಟಿಕೆಟ್ಟಿಲ್ಲದ ಪ್ರಯಾಣಿಕರ ದಸ್ತಗಿರಿಗಾಗಿ ರೈಲಿಗೆ ಕಲ್ಲೆಸೆತ

ರೈಲಿನಲ್ಲಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದರೆಂದು ವಿದ್ಯಾರ್ಥಿಗಳ ... ೧೦೦ ... ದಸ್ತಗಿರಿ ಮಾಡಿದ್ದಕ್ಕಾಗಿ ... ಬಾದೆಮಿ ಎಂಬಲ್ಲಿ ... ಮಾಡಿಸಲಾಗಿ, ಅದನ್ನು ಪ್ರತಿಭಟಿಸಲು ನೂರು ವಿದ್ಯಾರ್ಥಿಗಳು ರೈಲಿನ ಮೇಲೆ ಕಲ್ಲುಗಳನ್ನು ... ದು ವರದಿಯಾಗಿದೆ ಅಲ್ಲದೆ ... ಹಳಿಗಳ ಮೇಲೆ ... ರೈಲು ನಿಲ್ಲುವಂತೆ ಮಾಡಿದರು ಪೋಲೀಸರು ... ಹಾಗೂ ಪಾಧ್ಯಾಯರು ... ಬಂದು ಪರಿಸ್ಥಿತಿಯನ್ನು ಶಾಂತಗೊಳಿಸಿದರು ಈ ಕಾರಣಕ್ಕಾಗಿ ರೈಲು ... ಗೆ ಬರುವುದು ... ಗಂಟೆ ತಡವಾಯಿತು

ಗೋವಧೆ ನಿರೋಧ ಚಳುವಳಿಗಾಗಿ ಶಾಸನಸಭಾ ಸದಸ್ಯರ ದಸ್ತಗಿರಿ

ಕಲ್ಕತ್ತದ ಕಸಾಯಿ ಖಾನೆಯೊಂದರಲ್ಲಿ ಗೋವಧಾ ನಿರೋಧ ಸತ್ಯಾಗ್ರಹ ನಡೆಸಿದ ಮುಖ್ಯ ಪ್ರದೇಶದ ಶಾಸನಸಭಾ ಸದಸ್ಯ ... ಉಪಾಧ್ಯಾಯರ ... ಇತರ ... ಜನ ಸತ್ಯಾಗ್ರಹಿಗಳೊಡನೆ ದಸ್ತಗಿರಿಯಾಗಿರುತ್ತಾರೆ

ಬಿಹಾರ್ ಪ್ರವಾಹ ಪೀಡಿತರಿಗೆ ಶೃಂಗೇರಿ ಜಗದ್ಗುರುಗಳ ನೆರವು

ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ... ಭಾರತೀ ಸ್ವಾಮಿಗಳವರು ಬಿಹಾರ್ ಪ್ರವಾಹ ಪೀಡಿತರ ಸಹಾಯಕ್ಕಾಗಿ ೧,೧೧೧ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ರಷ್ಯಾ ಬಳಿ ೫೦೦ ಸಬ್ ಮೆರೀನುಗಳು

ಇನ್ನೆರಡು ಅಥವಾ ಮೂರು ವರ್ಷಗಳಲ್ಲಿ ರಷ್ಯವು ೫೦೦ ಸಬ್‌ಮೆರೀನುಗಳನ್ನು ಹೊಂದಲಿರುವುದೆಂದು ಬ್ರಿಟಿಷ್ ನೌಕಾ ಇಲಾಖೆಯ ... ದಾಖಲೆಯ ಪ್ರಕಾರ ಗೊತ್ತಾಗಿದೆ ೪,೦೦೦ ... ವಿಮಾನಗಳನ್ನು ರಷ್ಯವು ಹೊಂದಿರುವುದಲ್ಲದೆ ಅದೇ ವೇಳೆಗೆ ೩೦ ಕ್ರೂಸರ್‌ಗಳು ೧೫೦ ಡಿಸ್ಟ್ರಾಯರ್‌ಗಳು ೫೦೦ ಮೋಟಾರ್ ಟಾರ್ಪೆಡೋ ದೋಣಿಗಳು, ೧೦೦೦ ಮೈನ್ ಸ್ವೀಪರುಗಳನ್ನು ರಷ್ಯವು ಹೊಂದಲಿದೆ

ದಕ್ಷಿಣ ಅಮೆರಿಕದಲ್ಲಿ ಕೃಷ್ಣಮೆನನ್ನರ ಪ್ರವಾಸ

ಪ್ರಧಾನಿ ನೆಹರೂರವರ ಅಪೇಕ್ಷೆಯು ಪ್ರಕಾರ ವಿಶ್ವ ಸಂಸ್ಥೆಯಲ್ಲಿ ಭಾರತದ ನಿಯೋಗದ ನಾಯಕರಾದ ಶ್ರೀ ವಿ ಕೆ ಕೃಷ್ಣಮೆನನ್ನರು ದಕ್ಷಿಣ ಅಮೆರಿಕಾ ರಾಜ್ಯಗಳಲ್ಲಿ ಸೌಹಾರ್ದ ಪ್ರವಾಸವನ್ನು ಕೈಗೊಳ್ಳುವರು. ಅವರು ಅರ್ಜೆಂಟೈನಾ ಮತ್ತು ಬ್ರೆಜಿಲ್‌ಗಳಿಗೂ ಹೋಗಲಿರುವರು

ರಾಜಕಮಲ್ ಟಾಕೀಸ್
ಮೈಸೂರು
27-8-54 ರಿಂದ : ಅನೋಖಾ ಪ್ಯಾರ್ : ಪ್ರತಿ ದಿನ 3 ಆಟಗಳು
ಮಾಡರ್ನ್ ಥಿಯೇಟರ್‌ರವರ ಅದ್ಭುತ ಚಿತ್ರ
ಮಂಗಳ ಗೌರಿ
ಭೂಮಿಕೆ : ಹರಿಣಿ ಇಂದುಮತಿ ಮತ್ತು ಬಾಲಕೃಷ್ಣ

ಪ್ರಭು ದೇವಾ ಥಿಯೇಟರ್
(ಪ್ರಭಾ ಟಾಕೀಸ್)
29-8-54ನೇ ಭಾನುವಾರದಿಂದ : ಪ್ರತಿ ದಿನ 3 ಆಟಗಳು
ಜೆಮಿನಿಯವರ ತಮಿಳು ಚಿತ್ರ ✱ ಭಕ್ತ ನಂದನಾರ್ ✱
ಪಾತ್ರ : ದಂಡಪಾಣಿ ದೇಶಿಗರ್, ಶೆರಗಲತ್ತೂರ್ ಶ್ಯಾಮ, ಎಲ್ ನಾರಾಯಣರಾವ್
ಸ್ವಾಮಿನಾಥನ್, ಸುಂದರಿಬಾಯಿ

Printed ... by ... A F Nagarajan Sainsbury Press D ... Road, Mysore

ಗೌರಿ ಹಬ್ಬಕ್ಕಾಗಿ
ಇದೇ 29ನೇ ತಾ|| ಭಾನುವಾರ ವ್ಯಾಪಾರವಿರುತ್ತದೆ
ನವೀನ ಮಾದರಿಯ ರೇಷ್ಮೆ ಸೀರೆಗಳು ಮತ್ತು ನೂಲಿನ ರುಮಾಲು ಸೀರೆಗಳು ಬಂದಿವೆ
M. V. ಭೋಜಯ್ಯ
[illegible]
ಮೈಸೂರು ಫೋನ್ 446

ರಿಜಿಸ್ಟರ್ಡ್ ನಂ 79

ಸಾಧ್ವಿ

ಗೌರಿ ಹಬ್ಬಕ್ಕಾಗಿ
ಇದೇ 29ನೇ ತಾ|| ಭಾನುವಾರ ವ್ಯಾಪಾರವಿರುತ್ತದೆ
★
ಕಾಂಜೀವರಂ ಧರ್ಮಾವರಂ ಮತ್ತು ಮೈಸೂರು ಸಿಲ್ಕ್ ಸೀರೆಗಳು ಬಂದಿರುತ್ತವೆ
★
ರಾಮ ವಿಲಾಸ್,
ಜವಳಿ ಅಂಗಡಿ
[illegible] ಮೈಸೂರು

ಈ ದಿನ ಪತ್ರಿಕೆ 3 ಕಾಸು

ಸಂಪುಟ ೧೩] SADHVI SATURDAY 28-8-1954 ಮೈಸೂರು ಶನಿವಾರ ೨೮-೮-೧೯೫೪ [ಸಂಚಿಕೆ ೩೫

ರಾಜಧಾನಿಯಲ್ಲಿ ೧,೭೦೦ ಬೀಡಿ ಕಾರ್ಮಿಕರ ಮುಷ್ಕರ

ಕುಕ್ಕರಹಳ್ಳಿ ಕೆರೆಗೆ ಬಿದ್ದು ಗರ್ಭಿಣಿ ಹೆಂಗಸಿನ ಆತ್ಮಹತ್ಯೆ

ಮೈಸೂರು ೨೮

ನೆನ್ನೆ ಸಂಜೆ ೬ ಘಂಟೆ ಸಮಯದಲ್ಲಿ [illegible] ವರ್ಷದ ಗರ್ಭಿಣಿ [illegible] ಕುಕ್ಕರಹಳ್ಳಿ ಕೆರೆಗೆ ಹಾರಿದಳೆಂದೂ ಅಲ್ಲಿಯೇ [illegible] ಹೋಗುತ್ತಿದ್ದ ವಿದ್ಯಾರ್ಥಿಗಳು [illegible] ಆಯುರ್ವೇದ ಕಾಲೇಜಿನ [illegible] ತೋಟದ ಕೆಲಸಗಾರರು [illegible] ಹೊರಗೆ ತೆಗೆದರೆಂದೂ ಆ ವೇಳೆಗೆ ಅವಳು ಮೃತಪಟ್ಟಿದ್ದಳೆಂದು ವರದಿಯಾಗಿದೆ. ಅವಳ ಕೈಯಲ್ಲಿ [illegible] ಚಿನ್ನದ [illegible] ಬಳೆಗಳು ಇದ್ದುವೆಂದೂ, ಓಲೆ ಮತ್ತು ಮೂಗು ಬಟ್ಟುಗಳ [illegible] ಧರಿಸಿದ್ದಳೆಂದೂ ತಿಳಿದು ಬಂದಿದೆ. [illegible] ಯಾರೆಂಬುದು ಗೊತ್ತಾಗಿಲ್ಲ. ಈ ಬಗ್ಗೆ [illegible] ಪೋಲಿಸರು ತನಿಖೆ ನಡೆಸುತ್ತಿದ್ದಾರೆ.

ಮೆಡಿಕಲ್ ಕಾಲೇಜಿನ ಅ|| ಪ್ರೊಫೆಸರರ ವರ್ಗಾವರ್ಗಿ

[illegible] ಶ್ರೀ ಜಿ. [illegible] ರವರು [illegible] ಮೈಸೂರು ಮೆಡಿಕಲ್ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ [illegible] ಶ್ರೀ ಬಿ. ಎಸ್. ವೆಂಕಟಸುಬ್ಬಣ್ಣನವರ [illegible] ಶ್ರೀ ಎಂ. [illegible] ಬೆಂಗಳೂರಿಗೆ ವರ್ಗಾಯಿಸಲಾಗಿದೆ.

ರಾಜಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ ರದ್ದು

ಬರುವ [illegible] ನೇ ತಾ|| ನಿಂದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು [illegible] ಕೈಗೊಳ್ಳಬೇಕಾಗಿದ್ದ ಪ್ರವಾಸವನ್ನು ರದ್ದು [illegible] ಸಾರ್ವಜನಿಕ ಕಾರ್ಯಕ್ರಮಗಳನ್ನು [illegible] ನಿರ್ಧರಿಸಿರುತ್ತಾರೆ.

[illegible]ಯ ಚೀನಾ ದ್ವೀಪಗಳ ಮೇಲೆ ಕೆಂಪು ಚೀನಾದ ಧಾಳಿ

[illegible]

ಡಾ|| ಲೋಹಿಯಾರವರ ಬಿಡುಗಡೆ

ಎರಡು ಸಹಸ್ರ ಸತ್ಯಾಗ್ರಹಿಗಳ [illegible]

ಪ್ರಜಾ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ [illegible] ಡಾ|| ರಾಮ ಮನೋಹರ ಲೋಹಿಯಾ [illegible] ಹೈಕೋರ್ಟಿನ [illegible] ನೆನ್ನೆ ಬಿಡುಗಡೆ ಮಾಡಲಾಯಿತು. [illegible] ಹೈಕೋರ್ಟಿಗೆ [illegible] ಕಾರ್ಪಸ್ ಅರ್ಜಿಯನ್ನು [illegible]

ಉತ್ತರ ಪ್ರದೇಶ [illegible]

[illegible]

ಬೊಂಬಾಯಿಯಲ್ಲಿ ರೈಲ್ವೆ ಕಾರ್ಮಿಕರ ಪ್ರದರ್ಶನ

ಬೊಂಬಾಯಿಯಲ್ಲಿ ನೆನ್ನೆ [illegible]

ನಿವೃತ್ತ ನೌಕರರ ನಿರಾಶಾಭಾವ ಬಗ್ಗೆ ಮುಖ್ಯ ಮಂತ್ರಿಗಳ [illegible]

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ [illegible]

ಸರ್ವೋದಯ ದಿನದಿಂದ ವಿದ್ಯಾಭ್ಯಾಸ ಸುಧಾರಣೆ ಆರಂಭ

ಮುಖ್ಯ ಮಂತ್ರಿಯವರ ವಿವರಣೆ

ಬೆಂಗಳೂರು ೨೮

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ, ವಿದ್ಯಾಭ್ಯಾಸ [illegible] ಸರ್ವೋದಯ ದಿನದಿಂದ [illegible]

[illegible]

ಗುಲ್ಬರ್ಗದ ಗುಡಿ ಮೇಲೆ ಪಾಕಿಸ್ತಾನ ಧ್ವಜದ ಬಗ್ಗೆ ಗಲಭೆ

ಹೈದ್ರಾಬಾದಿನ ಗುಲ್ಬರ್ಗ ನಗರದ [illegible]

[illegible]

ಸೀರ್, ಯೂನಿಯನ್ ಮತ್ತು ಗಫಾರ್ ಬೀಡಿ ಕಾರ್ಖಾನೆ ಬಂದ್

ಒಟ್ಟು ೪ ಕಾರ್ಖಾನೆಗಳಲ್ಲಿ ಮುಷ್ಕರ

ಮೈಸೂರು ೨೮

ನಗರದ ಸೀರ್, ಯೂನಿಯನ್ ಮತ್ತು ಗಫಾರ್ [illegible] ಬೀಡಿ ಕಾರ್ಖಾನೆಗಳನ್ನು [illegible]

[illegible]

ಶ್ಯಾನುಭೋಗರ ಕೊಲೆ

[illegible] ತಾಲ್ಲೂಕಿನ [illegible] ಶ್ಯಾನುಭೋಗ [illegible]

ಮಂತ್ರಿಗಳೊಡನೆ ೫೦ ಮಂದಿ ವೈದ್ಯ ವಿದ್ಯಾರ್ಥಿಗಳ ಭೇಟಿ

ಬೆಂಗಳೂರು [illegible]

ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯ [illegible]

ಸಹಕಾರ ಸಂಘಗಳ ನಿವೃತ್ತ ರಿಜಿಸ್ಟ್ರಾರ್ ರಂಗಸ್ವಾಮಿಯವರ ನಿಧನ

[illegible]

ಅಯ್ಯನಾರ್ ಕಲಾ ಶಾಲೆಯ ವಾರ್ಷಿಕೋತ್ಸವ

ಮೈಸೂರು ಆ

ರಾಜಧಾನಿಯ ಬಿಡಾರಂ ಕೃಷ್ಣಪ್ಪನವರ ಶ್ರೀ ರಾಮ ಮಂದಿರದಲ್ಲಿರುವ ಅಯ್ಯನಾರ್ ಕಲಾ ಶಾಲೆಯ ... ನೇ ವಾರ್ಷಿಕೋತ್ಸವವು ... [illegible]

ವಿಚಾರಣೆ ಸಮಯದಲ್ಲಿ ಆಪಾದಿತನ ಹಾಜರಾತಿ ಪ್ರಶ್ನೆ

ಮೈಸೂರು ಮೊಕದ್ದಮೆಯಲ್ಲಿ ಹೈಕೋರ್ಟಿನ ಆಜ್ಞೆ

ಬೆಂಗಳೂರು ಆ

ಮೊನ್ನೆ ಹೈಕೋರ್ಟಿನಲ್ಲಿ ನ್ಯಾಯಾಧೀಶರಾದ ... [illegible]

ವರದಕ್ಷಿಣೆ ವಿರೋಧವಾಗಿ ಆಂಧ್ರದಲ್ಲಿ ಶಾಸನವಿಲ್ಲ

ವರದಕ್ಷಿಣೆ ಪಡೆಯುವುದು ಮತ್ತು ಅದರ ಮೇಲೆ ... [illegible]

ಆರಂಭ ಭಾಷಣ

[illegible]

ಕೃಷ್ಣಜಯಂತಿ ಸಂಗೀತ

[illegible]

ಶನಿ ಮಹಾತ್ಮೆ ಕಥೆ

[illegible]

ನೇಣು ಹಾಕಿಕೊಂಡು ಯುವಕನ ಮರಣ

[illegible]

ರಷ್ಯದೊಡನೆ ಅಮೇರಿಕದ ವ್ಯಾಪಾರ

[illegible]

ಪೂರ್ವ ಪಾಕಿಸ್ತಾನಕ್ಕೆ ಭಾರತದ ಔದಾರ್ಯ

[illegible]

ಪೂರ್ವ ಬಂಗಾಳದಲ್ಲಿ ಮೊಂದೆಯೂ ಗೌರ್ನರ್ ಆಳ್ವಿಕೆ

[illegible]

ಪದವೀಧರ ಪುಂಡನಿಂದ ಬೆದರಿಕೆ ಪತ್ರ

[illegible]

ಅಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಪ್ರವಾಹದ ಪ್ರದೇಶದಲ್ಲಿ ನೀರಿಗೆ ಬರ

[illegible]

ಮಹಾರಾಜಾ ಕಾಲೇಜು ಭೂಗೋಳ ಶಾಸ್ತ್ರ ಸಂಘದ ಚುನಾವಣೆ

[illegible]

ಅಂಬಾ ಪೂಜೆ

[illegible]

ಸಂಗೀತ ಕಛೇರಿ

[illegible]

ಮೈಸೂರು ಪೇಟೆ ಧಾರಣೆ

ವಸ್ತು	ರೂ ಆ ಪೈ	ರೂ ಆ ಪೈ
ಕಡಲೇಕಾಯಿ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆ	[illegible]	[illegible]
ಉದ್ದು	[illegible]	
ತೊಗರಿ	[illegible]	
ಧನಿಯ	[illegible]	[illegible]
ಅವರೆ	[illegible]	
ಹುಣಸೆಬೀಜ	[illegible]	[illegible]
ಹುಣಸೆಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧,೧೦೦	[illegible]	[illegible]

1954 July Edn. *185 Pages*

A GUIDE TO ACCOUNTS

Hr. & Lr. Exams and

MYSORE EDUCATIONAL SERVICE PROFICIENCY EXAMN.

(Hr & Lr Grades – 1st Paper)

Copies can be had from

RAMACHANDRA BOOK DEPOT, Mysore

AND

STANDARD BOOK DEPOT,

Avenue Road Bangalore.

ಪ್ರಭುದೇವಾ ಥಿಯೇಟರ್

(ಟಾಕೀಸ್)

29-8-54ನೇ ಭಾನುವಾರದಿಂದ ಪ್ರತಿ ದಿನ 3 ಆಟಗಳು

ಜೆಮಿನಿಯವರ ತಮಿಳು ಚಿತ್ರ

ಭಕ್ತ ನಂದನಾರ್

ಪಾತ್ರ:- ... ಸುಂದರಾಂಬಾಯಿ

ರಿಜಿಸ್ಟ್ರೇ ನಂ 792

ಗೌರಿ ಹಬ್ಬಕ್ಕಾಗಿ
ಇದೇ 29ನೇ ತಾ|| ಭಾನುವಾರ
ವ್ಯಾಪಾರವಿರುತ್ತದೆ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು ನೂಲಿನ
ರವುಂಬಾರಿ ಸೀರೆಗಳು
ಬಂದಿವೆ
M. V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಬಿಡಿ ಪತ್ರಿಕೆ ೯ ಕಾಸು

ಚಂದಾ ದರ
ಮೂರು ತಿಂಗಳಿಗೆ ಎಂಟಾಣೆ
ಆರು ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI : SUNDAY 29-8-1954 ಮೈಸೂರು · ಭಾನುವಾರ ೨೯-೮-೧೯೫೪ [ಸಂಚಿಕೆ : ೨೬

ಭಾರತದೊಡನೆ ಸಂಧಾನಕ್ಕೆ ಫ್ರೆಂಚ್ ರಾಷ್ಟ್ರ ಸಭೆ ಒಪ್ಪಿಗೆ

ಉತ್ತಮ ರೇಷ್ಮೆ ತಯಾರಿಕೆಗಾಗಿ ವ್ಯವಸ್ಥೆ

ಗೃಹ ಮಂತ್ರಿ ಸಿದ್ದವೀರಪ್ಪನವರಿಂದ ರೇಷ್ಮೆ ಹುಳು ಹತೋಟಿ ಯೋಜನೆ ಆರಂಭ

ಬೆಂಗಳೂರು ೨೮

ತುಮಕೂರು ಜಿಲ್ಲೆಯ ಕುಣಿಗಲಿನಲ್ಲಿ ನೆನ್ನೆ ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ರೇಷ್ಮೆ ಗೂಡ ಗಳ ಹ ಚಿಕೆಯ ಹತೋಟಿಗೆ ಸಂಬಂಧಿಸಿದ ಕಾನೂನನ್ನು ಜಾರಿಗೆ ತರುವ ಯೋಜನೆಯೊಂದನ್ನು ಆರಂಭಗೊಳಿಸಿದರು

ಅವರು ಭಾಷಣ ಮಾಡಿ ಹತೋಟಿ ಕಾನೂನು ೨ ವರ್ಷಗಳ ಹಿಂದೆಯೇ ಮಾಡಲಾಯಿತೆಂದೂ, ಅದು ಹೊಸ ಮಾದರಿಯದಾದ್ದರಿಂದ ಅದಿಗೆ ತರಲು ಪೂರ್ವ ಸಿದ್ಧತೆಗಳಾಗಬೇಕಾಯಿತೆಂದೂ ತಿಳಿಸಿ, ರೇಷ್ಮೆ ಕೈಗಾರಿಕೆಯಲ್ಲಿ ಈಗಿನ ಪರಿಸ್ಥಿತಿಗೆ ಅನುಸರಿಸಿ ಪರಸ್ಪರ ಪೈಪೋಟಿ ನಿಲ್ಲಿಸಲು ಕಾನೂನು ಮಾಡಲಾಯಿತೆಂದು ನುಡಿದರು ಕಡಿಮೆ ದರ್ಜೆಯ ಗೂಡುಗಳ ತಯಾರಿಕೆಯಿಂದ ಕೀಳು ದರ್ಜೆ ರೇಷ್ಮೆ ಉತ್ಪತ್ತಿಯಾಗ ವುದೆಂದೂ, ಅದರಿಂದ ಉದ್ಯಮ ಗಾರರಿಗೆ ಬಹಳ ನಷ್ಟವೆಂದೂ ಅದನ್ನು ತಪ್ಪಿಸಲು ಉತ್ತಮ ಗೂಡುಗಳನ್ನು ಉತ್ಪತ್ತಿ ಮಾಡಬೇಕಾದ ಕೆಲಸವು ಅತಿ ಮುಖ್ಯವೆಂದೂ ಮಂತ್ರಿಗಳು ನುಡಿದರು ರೋಗವಿಲ್ಲದ ರೇಷ್ಮೆ ಹುಳಗಳನ್ನು ಸರ್ಕಾರದವರು ಹಂಚುವ ವ್ಯವಸ್ಥೆ ಮಾಡಲಾಗಿದೆಯೆಂದು ಅವರು ಹೇಳಿದರು ಉತ್ತಮ ಗೂಡುಗಳ ತಯಾರಿಕೆಗಾಗಿ ೧೧ ಜನ ರೈತರಿಗೆ ಸಚಿವರು ಬಹುಮಾನಗಳನ್ನು ಕೊಟ್ಟರು

ಕೇಂದ್ರದಿಂದ ೨|| ಕೋಟಿ ರೂ ಸಾಲಕ್ಕಾಗಿ ಬೇಡಿಕೆ

೧೯೫೪-೫೫ ರಲ್ಲಿ ಪಂಚ ವಾರ್ಷಿಕ ಯೋಜನೆಯ ಕೆಲಸಕಾರ್ಯಗಳನ್ನು ಮುಂದುವರಿಸಲು ೨|| ಕೋಟಿ ರೂ ಸಾಲವನ್ನು ಕೊಡ ಬೇಕೆಂದು ಮೈಸೂರು ಸರ್ಕಾರದವರು ಕೇಂದ್ರದವರನ್ನು ಪ್ರಾರ್ಥಿಸಿರುವರೆಂದು ವರದಿಯಾಗಿದೆ ಈ ವರ್ಷದಲ್ಲಿ ಕೈಗೊಳ್ಳುವ ಕೆಲಸಗಳ ಅಂದಾಜು ವೆಚ್ಚವು ೧೦|| ಕೋಟಿ ರೂ. ಆಗುವುದೆಂದೂ ಹೇಳಲಾಗಿದೆ

ಸರ್ಕಾರಿ ಬಸ್ಸುಗಳಲ್ಲೇ ನೌಕರರ ಸಂಚಾರ

ಮೋಟಾರು ಕಾರುಗಳನ್ನು ಹೊಂದದೆ ಇರುವ ಸರ್ಕಾರದ ಎಲ್ಲಾ ಗೆಜೆಟೆಡ್ ಅಧಿಕಾರಿಗಳೂ, ನಾನ್ ಗೆಜೆಟೆಡ್ ನೌಕರರೂ ರೈಲು ಸಂಚಾರವಿಲ್ಲದ ಸ್ಥಳಗಳ ಪ್ರವಾಸ ಮಾಡುವಾಗ ಸರ್ಕಾರಿ ಬಸ್ಸುಗಳಲ್ಲೇ ಹೋಗಬೇಕೆಂದು ವಿಧಾಯಕ ನಿಯಮ ನಿಬಂಧನೆಯನ್ನು ಸರ್ವೀಸ್ ರೂಲ್ಸಿಗೆ ಸೇರಿಸಲಾಗಿದೆ

ಸ್ಥಳೀಯ ಸಂಸ್ಥೆಗಳ ಭವಿಷ್ಯದ ವರದಿ

ಡಿ ಎಚ್ ಚಂದ್ರಶೇಖರಯ್ಯ ಸಮಿತಿಯವರು ಸ್ಥಳೀಯ ಸಂಸ್ಥೆಗಳ ಭವಿಷ್ಯವನ್ನು ಕುರಿತು ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ ಜಿಲ್ಲಾ ಮತ್ತು ತಾಲ್ಲೂಕು ಬೋರ್ಡುಗಳ ಸ್ಥಾಪನೆಯಾಗಬೇಕೆಂದು ಅವರು ಶಿಫಾರಸು ಮಾಡಿರುವರೆಂದೂ, ಸಮಿತಿ ಸದಸ್ಯರಾದ ಶ್ರೀ ಜಿ ಎಂ ಇಮಾಂರವರು ಮಾತ್ರ ಎ[illegible] ವರದಿಯಾಗಿದೆ

೩೦೦ ಮಂದಿ ಗಣಿ ಕೆಲಸಗಾರರ ಪ್ರದರ್ಶನ

ಮೈಸೂರು ೨೮

ಕಡಕೊಳದ ಬಳಿ ಇರುವ ಸೋಪ್‌ಸ್ಟೋನ್ ಗಣಿಯ ಸುಮಾರು ೩೦೦ ಮಂದಿ ಕಾರ್ಮಿಕರು ಮುಖಂಡರಾದ ಶ್ರೀ ಎಸ್ ಕೆ ಪಣ್ಣನವರ ನೇತೃತ್ವದಲ್ಲಿ ನೆನ್ನೆ ನಗರದ ನಾನಾ ಬೀದಿಗಳಲ್ಲಿ ಮೆರವಣಿಗೆ ಹೋಗಿ, ಅಸಿಸ್ಟೆಂಟ್ ಲೇಬರ್ ಕಮಿಷನರ್ ಮತ್ತು ಕಾರ್ಖಾನೆ ಇನ್ಸ್‌ಪೆಕ್ಟರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು ಕನಿಷ್ಠ ಸಂಬಳ ನಿಗದಿ ಮಾಡುವ-ಪೀಸ್ ರೇಟ್ ಮಜೂರಿಯನ್ನು ಕಾವು ಒಪ್ಪುವುದಿಲ್ಲವೆಂದೂ ಕಾರ್ಮಿಕರು ಅರಿಕೆ ಮಾಡಿದರು ಟೌನ್‌ಹಾಲ್ ಮೈದಾನದಲ್ಲಿ ಸಭೆಯೊಂದು ನಡೆಯಿತು ಶ್ರೀ ಪಣ್ಣ ಮುಕ್ತಿತರು ಭಾಷಣ ಮಾಡಿ, ಮಹಿಳಾ ಕಾರ್ಮಿಕರಿಗೆ ಕೊಡಲಾಗ ತ್ತಿರುವ ದಿನಗೂಲಿ ಅರು ಆಣೆಯಷ್ಟು ಪೀಸ್ ವರ್ಕಿಗಾಗಿ ಗಂಡಸರು ಒಪ್ಪಿದರೆ ಅದರಿಂದ ಅವರ ಸಂಬಳವು ಅರ್ಧಕ್ಕೆ ಕಡಿಮೆಯಾಗ ವುದೆಂದು ತಿಳಿಸಿ, ಹೆಂಗಸರು ಮತ್ತು ಗಂಡಸರಿಗೆ ಸಮಾನ ಕೂಲಿಯಂತೆ ಮಜೂರಿಯನ್ನು ಕೊಡಬೇಕೆಂದು ಒತ್ತಾಯ ಪಡಿಸಿದರು

ಭಾವಿಯಲ್ಲಿ ಶಿಶುವಿನ ಜನನ

ಸೇಲಂ ನಗರಕ್ಕೆ ಸಮೀಪದಲ್ಲಿರುವ ಅನ್ನದಾನಪಟ್ಟಿ ಹಳ್ಳಿಯ ಮುನಿಸ್ವಾಮಿ ಎಂಬಾತನ ಪತ್ನಿ ೨೭ ವರ್ಷ ವಯಸ್ಸಿನ ವೀರಮ್ಮಾಳ್ ಎಂಬುವಳು ಪ್ರಸವ ವೇದನೆಯನ್ನು ತಾಳಲಾರದೆ ಕಳೆದ ಗುರುವಾರ ಭಾವಿಗೆ ಬಿದ್ದಳೆಂದೂ, ಅಲ್ಲಿ ಆಕೆಗೆ ಪ್ರಸವವಾಯಿತೆಂದೂ ವರದಿಯಾಗಿದೆ ಅಗ್ನಿ ಶಾಮಕ ದಳದವರು ಕೂಡಲೇ ಬಂದು ತಾಯಿ ಮತ್ತು ಮಗುವನ್ನು ರಕ್ಷಿಸಿ, ಮೇಲಕ್ಕೆ ತಂದು ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಿರುತ್ತಾರೆ

ಮೊರಾಕೊ ಮಾಜಿ ಸುಲ್ತಾನರಿಗೆ ಪುನಃ ಸಿಂಹಾಸನ ಇಲ್ಲ

ಮೊರಾಕೊವಿನ ಪದಚ್ಯುತ ಸುಲ್ತಾನ್ ಸಿದ್ದಿ ಮಹಮದ್ ಯೂಸೂಫರವರಿಗೆ ಪುನಃ ಸಿಂಹಾಸನವನ್ನು ಕೊಡುವ ಪ್ರಶ್ನೆಯೇ ಇಲ್ಲವೆಂದು ಫ್ರೆಂಚ್ ಪ್ರಧಾನಿ ಮೆಂಡೆಸ್ ಫ್ರಾನ್ಸ್‌ರವರು ಹೇಳಿರುತ್ತಾರೆ. ಅವರನ್ನು ಕಳೆದ ವರ್ಷ ಇದೇ ತಿಂಗಳಲ್ಲಿ ಪದಚ್ಯುತಿಗೊಳಿಸಲಾಗಿತ್ತು

ಶ್ರೀಕಂಠೇಶ್ವರಸ್ವಾಮಿ ದೇವಾಲಯದ ವಾರ್ಷಿಕೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯದ ವಾರ್ಷಿಕೋತ್ಸವವನ್ನು ನಾಳೆ ರಾತ್ರಿ ೮ ಗಂಟೆಗೆ ಏರ್ಪಡಿಸಲಾಗಿದೆ ಶ್ರೀ ಸಿ ಕೃಷ್ಣಯ್ಯಂಗಾರ್ಯರಿಂದ ಭಾರತ ವಾಚನ, ಶ್ರೀ ಎಸ್. ಡಿ ನಾರಾಯಣಶಾಸ್ತ್ರಿಯವರಿಂದ ಉಪನ್ಯಾಸ ಮತ್ತು ಸಂಗೀತ ರತ್ನ ಟಿ ಚೌಡಯ್ಯನವರಿಂದ ಸಂಗೀತ ಇವು ನಡೆಯುವುವು

ಆಂಜಾ ಪೂಜೆ

ನಂಜನಗೂಡಿನ ಬಜಾರಿನಲ್ಲಿರುವ ಶ್ರೀ ಬಲಭೀಮ ವ್ಯಾಯಾಮ ಶಾಲೆಯಲ್ಲಿ ನಾಳೆ [illegible] ಜರುಗಿದೆ

ಭಾರತದೊಡನೆ ಸಂಧಾನಕ್ಕೆ ಫ್ರೆಂಚ್ ಶಾಸನ ಸಭೆ ಸೂಚನೆ

ಭಾರತದಲ್ಲಿರುವ ಫ್ರೆಂಚರ ಸ್ವಾಸ್ತ್ಯಗಳ ವಿಷಯವಾಗಿ ಭಾರತದೊಡನೆ ಸಂಧಾನವನ್ನು ಮುಂದುವರಿಸುವಂತೆ ನೆನ್ನೆ ಫ್ರಾನ್ಸಿನ ರಾಷ್ಟ್ರೀಯ ಸಭೆಯು ಸೂಚಿಸಿರುತ್ತದೆ ವಸಾಹತುಗಳಲ್ಲಿರುವ ಫ್ರೆಂಚ್ ಜನರ ಮತ್ತು ಅಲ್ಲಿನ ಆರ್ಥಿಕ ಮತ್ತು ಸಾಂಸ್ಕೃತಿಕ ಹಿತಗಳನ್ನು ರಕ್ಷಿಸುವ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಂಧಾನ ನಡೆಸುವಂತೆ ಸಭೆಯು ತಿಳಿಸಿರುತ್ತದೆ ಒಬ್ಬಿಬ್ಬರು ಸದಸ್ಯರು ವಸಾಹತುಗಳನ್ನು ಭಾರತಕ್ಕೆ ಒಪ್ಪಿಸಬೇಕೆಂದು ಅಭಿಪ್ರಾಯಪಟ್ಟರು.

ಶೃಂಗೇರಿಗೆ ಹೈದರಾಬಾದು ಮುಖ್ಯ ಮಂತ್ರಿಯವರ ಭೇಟಿ

ಹೈದರಾಬಾದಿನ ಮುಖ್ಯ ಮಂತ್ರಿಯವರಾದ ಬಿ ರಾಮಕೃಷ್ಣರಾಯರು ಕಳೆದ ಗುರುವಾರ ಸಂಸಾರ ಸಮೇತರಾಗಿ ಶೃಂಗೇರಿಗೆ ಭೇಟಿಯಿತ್ತರು ಅವರು ಹಿರಿಯ ಮತ್ತು ಕಿರಿಯ ಸ್ವಾಮಿಗಳವರನ್ನು ಸಂದರ್ಶಿಸುವರು ೪ ದಿನಗಳವರೆಗೆ ಅಲ್ಲಿದ್ದು ಅನಂತರ ಉಡುಪಿಗೆ ಹೋಗುವರು ಮೈಸೂರಿಗೂ ಅವರು ಬರುವ ನಿರೀಕ್ಷೆಯಿದೆ

ರಾಷ್ಟ್ರಾಧ್ಯಕ್ಷರಿಂದ ಬಿಕನೀರ್ ರಾಜರ ಪ್ರತಿಮೆ ಅನಾವರಣ

ರಾಜಸ್ಥಾನದಲ್ಲಿ ಪ್ರವಾಸವನ್ನು ಕೈಕೊಂಡು ಜೈಪುರ ನಗರ, ರಾಷ್ಟ್ರಾಧ್ಯಕ್ಷರು ಬರುವ ಗುರುವಾರ ಬಿಕನೀರಿಗೆ ತೆರಳಿ ಅಲ್ಲಿನ ದಿವಂಗತ ಮಹಾರಾಜರ ಪ್ರತಿಮೆಯನ್ನು ಅನಾವರಣ ಮಾಡುವರು

ಕಲ್ಕತ್ತದ ೧೧,೦೦೦ ಬಂದರು ಕೆಲಸಗಾರರ ಮುಷ್ಕರ

ನೌಕರ ಮತ್ತು ಕೆಲಸಗಾರರ ನಡತೆಯ ಬಗ್ಗೆ ನಿಬಂಧನೆಗಳನ್ನು ಬದಲಾವಣೆ ಮಾಡುವ ಪ್ರಯತ್ನವನ್ನು ಪ್ರತಿಭಟಿಸುವುದಕ್ಕಾಗಿ ಮೊನ್ನೆ ಕಲ್ಕತ್ತಾ ರೇವಿನ ೧೧ ಸಾವಿರ ಕಾರ್ಮಿಕರು ಹಠಾತ್ತನೆ ಮುಷ್ಕರ ಹೂಡಿದರು ರೇವು ಕಮಿಷನರುಗಳ ಆಡಳಿತ ಸಮಿತಿಗೆ ಇಬ್ಬರು ಕಾರ್ಮಿಕ ಪ್ರತಿನಿಧಿಗಳನ್ನು ನಾಮಕರಣ ಮಾಡುವುದಕ್ಕೆ ಅವರು ವಿರೋಧಿಸಿರುತ್ತಾರೆ ಸಮಿತಿಯ ಅಧ್ಯಕ್ಷರು ಮುಷ್ಕರಗಾರರ ಪ್ರತಿನಿಧಿಗಳೊಡನೆ ಸಂಭಾಷಣೆ ನಡೆಸಲು ಒಪ್ಪಿರುತ್ತಾರೆ

ಕುಕ್ಕರಹಳ್ಳಿ ಕೆರೆಯಲ್ಲಿ ಬಿದ್ದ ಮಹಿಳೆ

ಮೊನ್ನೆ ಕುಕ್ಕರಹಳ್ಳಿ ಕೆರೆಯಲ್ಲಿ ಬಿದ್ದು ಸತ್ತು ಹೋಗಿದ ಮಹಿಳೆಯು ಚಾಮುಂಡಿಪುರದಲ್ಲಿರುವ ಶ್ರೀ ರಾಮುಲಾಲ್ ಎಂಬುವರ ಪತ್ನಿ ವಿಠಲಾಬಾಯಿ ಉರುಫ್ ಕೃಷ್ಣಾಬಾಯಿಯೆಂದೂ, ಸಂಸಾರದಲ್ಲಿ ಜಿಗುಪ್ಸೆಗೊಂಡು ಆಕೆಯು ಈ ರೀತಿ ಮಾಡಿಕೊಂಡುದಾಗಿಯೂ ತಿಳಿದು ಬಂದಿದೆ

○ ಅಮೆರಿಕನ ಒಂದು ಬಾಂಬರ್ ವಿಮಾನವು ನೆನ್ನೆ ಅಪಘಾತಕ್ಕೀಡಾಗಿ ಚಾಲಕ ವರ್ಗದ ೨೪ ಮಂದಿ ಮೃತಪಟ್ಟಿರುತ್ತಾರೆ. ವಿಮಾನವಸ್ಥ [illegible]

ತಿರುವಾಂಕೂರು ಸರ್ಕಾರಿ ಬಸ್ಸು ಕಾರ್ಮಿಕರ ಮುಷ್ಕರ

ಕಾರ್ಮಿಕರ ಸಂಘದ ಸ್ಥಾಪನೆ ಹಕ್ಕು, ಬೋನಸ್ಸು, ಸಂಬಳದ ಪುನರ್ವಿಮರ್ಶೆ ಮತ್ತು ಹಂಗಾಮಿ ಕೆಲಸಗಾರರಿಗೆ ಖಾಯಂ ಮಾಡುವುದು, ಇವೇ ಮುಂತಾದ ಹಲವು ಬೇಡಿಕೆಗಳನ್ನು ಮಂಡಿಸಿರುವ ತಿರುವಾಂಕೂರು-ಕೊಚ್ಚಿ ಸರ್ಕಾರದ ಬಸ್ಸು ಸರ್ವೀಸ್ಸಿನ ಕೆಲಸಗಾರರು ಮೊನ್ನೆ ಮಧ್ಯ ರಾತ್ರಿಯಿಂದ ಮುಷ್ಕರ ಹೂಡಿರುತ್ತಾರೆ ಮುಷ್ಕರವು ಯಶಸ್ವಿಯಾಗಿಲ್ಲವೆಂದೂ, ಒಟ್ಟು ೩,೭೦೦ ಕೆಲಸಗಾರರ ಪೈಕಿ ಶೇಕಡ ೭೦ ಮಂದಿ ಕೆಲಸಕ್ಕೆ ಹಿಂತಿರುಗಿರುವರೆಂದೂ ಹೇಳಲಾಗಿದೆ ಪಿಕೆಟಿಂಗ್, ಪೋಲೀಸರ ಮೇಲೆ ಕಲ್ಲು ಬೀರುವುದು ಮುಂತಾದುವನ್ನು ನಡೆಸಿದ ಪ್ರದರ್ಶನಕಾರರ ಮೇಲೆ ಲಥಿ-ಪ್ರಹಾರ ಮಾಡಲಾಯಿತು ೭೦ ಮಂದಿ ದಸ್ತಗಿರಿಯಾಗಿರುತ್ತಾರೆ ಬಸ್ಸು ಸಂಚಾರವು ಕ್ರಮಪ್ರಕಾರ ನಡೆಯುತ್ತಿದೆ

ಪ್ರವಾಹ ಪೀಡಿತ ಪ್ರದೇಶದಲ್ಲಿ ನೆಹರೂರವರ ವಿಮಾನ ಪ್ರವಾಸ

ಉತ್ತರ ಬಿಹಾರ್ ಮುತ್ತು ಇತರ ಕಡೆಗಳಲ್ಲಿ ಪ್ರವಾಹದ ಪರಿಸ್ಥಿತಿಯನ್ನು ಕುರಿತು ಪರಿಶೀಲನೆ ನಡೆಸಲು ಪ್ರಧಾನಿ ನೆಹರೂರವರು ಸೆಪ್ಟೆಂಬರ್ ಆದಿ ಭಾಗದಲ್ಲಿ ವಿಮಾನದಲ್ಲಿ ಪ್ರವಾಸ ಹೂಡುವರು ಬಿಹಾರ್, ಅಸ್ಸಾಂ ಮತ್ತು ಪೂರ್ವ ಪಾಕಿಸ್ತಾನದಲ್ಲಿ ಪರಿಸ್ಥಿತಿಯು ಇನ್ನೂ ಕೆಟ್ಟದ್ದೆಂದೂ ಹೇಳಲಾಗಿದೆ ಕೋಸಿ ನದಿಯಲ್ಲಿ ದಿನಕ್ಕೆ ೨|| ಲಕ್ಷಕ್ಕೂ ಹೆಚ್ಚು ಕ್ಯೂಸೆಕ್ಸಿಗೂ ಹೆಚ್ಚು ನೀರು ನುಗ್ಗುತ್ತಿದೆಯೆಂದು ಗೊತ್ತಾಗಿದೆ ಜಲಪೈಗುರಿ ಬಳಿ ನಗ್ರಕಟ ಎಂಬಲ್ಲಿ ಜಲಧಾಕಾ ಮತ್ತು ದಹಕ ನದಿಗಳಲ್ಲಿ ೧೩೫ ಜನರು ಕೊಚ್ಚಿ ಹೋಗಿರುವರೆಂದು ಪಶ್ಚಿಮ ಬಂಗಾಳ ಸರ್ಕಾರವು ತಿಳಿಸಿರುತ್ತದೆ

ಮೋಸಕ್ಕಾಗಿ ೩ ತಿಂಗಳು ಜೈಲು ವಾಸದ ಶಿಕ್ಷೆ

ಶ್ರೀರಂಗಪಟ್ಟಣ ೨೮

ಮೈಸೂರಿನ ಚಾಮುಂಡಿಪುರದ ಶ್ರೀನಿವಾಸ ಡಿ. ಎಚ್ ನಾರಾಯಣರಾವ್, ಉರುಫ್ ಸೋಮಸುಂದರಂ ಎಂಬಾತನಿಗೆ ಇಲ್ಲಿನ ನ್ಯಾಯಾಧೀಶರಾದ ಶ್ರೀ ರಾಜಶೇಖರ ಸ್ವಾಮಿಯವರು ೩ ತಿಂಗಳು ಕಠಿಣ ಶಿಕ್ಷೆ ವಿಧಿಸಿರುತ್ತಾರೆ ತಾನು ವಿದ್ಯಾಇಲಾಖೆಯ ಇನ್ಸ್‌ಪೆಕ್ಟರೆಂದು ಹೇಳಿಕೊಂಡು ಹಳ್ಳಿಗಳ ಗ್ರಾಮ ಪಂಚಾಯತಿ ಅಧ್ಯಕ್ಷರುಗಳಿಗೆ ಅವನು ೧೦೦ ರೂ ವರೆಗೆ ಮೋಸ ಮಾಡಿದ್ದನೆಂದು ಹೇಳಲಾಗಿದೆ

ಲಕ್ಷ್ಮೀಕಾಂತರವರ ಅಂತ್ಯ ವಿಧಿ

ಕಳೆದ ೧೫ನೇ ತಾ|| ಮೃತಪಟ್ಟ ಶ್ರೀ ಟಿ ಎ ಲಕ್ಷ್ಮೀಕಾಂತರವರ ಸಮಾಗಂತದ ಅಂತ್ಯ ವಿಧಿಯು ಈ ಬೆಳಿಗ್ಗೆ ಪಶ್ಚಿಮವಾಹಿನಿಯಲ್ಲಿ ಜರುಗಿತು ಸ್ವರ್ಗದ ಬಂಧು ಮಿತ್ರರನೇಕರು ಭಾಗವಹಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅಂತ್ಯ ಗೌರವ ಸಲ್ಲಿಸಿದರು

○ ೫೪-೫೫ ನೇ ಸಾಲಿನಲ್ಲಿ ಭಾರತದಲ್ಲಿ [illegible]

ವಾರ ಭವಿಷ್ಯ

೨೯-೮-೫೪ ರಿಂದ ೪-೯-೫೪ ರ ವರೆಗೆ

ಮೇಷ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ. ಪ್ರವಾಸ ಸುಖಕರ. ತಾ|| ೩೦, ೩೧ ಅತಿಸ್ತ್ರಮ್ಮಾಗಿ ವಿಶ್ರಾಂತಿ ಇರದು.

ವೃಷಭ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತುಂಬಾ ಕೆಡುವುದು. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಅಥವಾ ಅಪಮಾನ. ಅನ್ಯ ಜನರೊಡನೆ ವೃಥಾ ವಾದವಿವಾದ. ಪ್ರವಾಸ ವಿಘ್ನಕಾರಕ, ನೀರಿನಿಂದ ಅಪಘಾತ. ಪತ್ನಿಯ ಆರೋಗ್ಯ ಉತ್ತಮ. ತಾ|| ೧, ೨ ಅಗ್ನಿ ಭಯ, ಕಲಹ, ಶೋಕ ವಾರ್ತೆ.

ಮಿಥುನ— ಆರೋಗ್ಯ ಉತ್ತಮ. ಆರ್ಥಿಕ ಮತ್ತು ಮಾನಸಿಕ ಸ್ಥಿತಿ ಕೆಡುವುದು. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಮತ್ತು ಅಪಯಶ. ಕೈಗೊಂಡ ಕಾರ್ಯದಲ್ಲಿ ವಿಘ್ನ. ಪ್ರವಾಸದಲ್ಲಿ ಅಡ್ಡಿ ಕಷ್ಟ, ಅಪಘಾತಗಳಲ್ಲಿ ಹಾನಿ. ವ್ಯವಸಾಯದಲ್ಲಿ ವ್ಯತ್ಯಯ. ಮೇಲಧಿಕಾರಿಯಿಂದ ತೊಂದರೆ. ತಾ|| ೩೦, ೩೧ ವಿಯೋಗ ಶೋಕ, ಹಾನಿ.

ಕರ್ಕ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಪ್ರಗತಿ ಮತ್ತು ಲಾಭ. ಕೈಗೊಂಡ ಕಾರ್ಯ ಸುಗಮ. ಪ್ರವಾಸ ಮತ್ತು ತೀರ್ಥಕ್ಷೇತ್ರ ಸಂದರ್ಶನ ಯೋಗ. ಕೋರ್ಟು ಕಾರ್ಯದಲ್ಲಿ ಜಯ. ಆಪ್ತ ಸ್ತ್ರೀಯ ಸ್ನೇಹದಿಂದ ಧನ ಲಾಭ. ತಾ|| ೩೦, ೩೧ ಪ್ರವಾಸದ ತೊಂದರೆ.

ಸಿಂಹ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ. ಕೈಗೊಂಡ ಕಾರ್ಯ ಸುಗಮ. ಪ್ರವಾಸ ಸುಖಕರ. ಸಂತತಿಗೆ ಕ್ಲೇಶ. ಮಿತ್ರ ಸಹಾಯ. ತಾ|| ೨, ೩ ಸಜ್ಜನರ ಸಹವಾಸ, ಧಾರ್ಮಿಕ ಕಾರ್ಯ.

ಕನ್ಯಾ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತುಂಬಾ ಕೆಡುವುದು. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಮತ್ತು ಅಪಯಶ. ಕೈಗೊಂಡ ಪ್ರತಿ ಕಾರ್ಯದಲ್ಲೂ ವಿಘ್ನ. ವ್ಯವಸಾಯದಲ್ಲಿ ವ್ಯತ್ಯಯ. ಪ್ರವಾಸ ವಿಘ್ನಕಾರಕ. ತಾ|| ೧, ೨ ಹಣದ ಚಿಂತೆ ನಿವಾರಣೆ.

ತುಲಾ— ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ. ಕೈಗೊಂಡ ಕಾರ್ಯ ಸುಗಮ. ಪ್ರವಾಸ ಸುಖಕರ. ವ್ಯವಸಾಯದಲ್ಲಿ ಪ್ರಗತಿ. ತಾ|| ೩೦, ೩೧ ಖರ್ಚು ಹೆಚ್ಚು, ಮಾನಸಿಕ ವ್ಯಥೆ.

ವೃಶ್ಚಿಕ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರವಿಲ್ಲ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಕೆಲಕಾರ್ಯದಲ್ಲಿ ವಿಘ್ನ. ಪ್ರವಾಸದಲ್ಲಿ ಅಡ್ಡಿ. ಹಣದ ಕೊರತೆ ವಿಶೇಷ. ತಾ|| ೧, ೨ ಅಮೂಲ್ಯ ವಸ್ತುವಿನ ಅಪಹಾರ ಸಂಭವ, ಜಾಗರೂಕತೆ.

ಧನುಸ್ಸು— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಚೆನ್ನಾಗಿರುವುದಿಲ್ಲ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಕೈಗೊಂಡ ಕಾರ್ಯ ಸುಗಮ. ಪ್ರವಾಸ ವಿಘ್ನಕಾರಕ, ಕಾರ್ಯವಿಘ್ನ. ತಾ|| ೧, ೨ ವಿಘ್ನ ನಾಶ, ಹಣದ ಸಹಾಯ.

ಮಕರ— ಆರ್ಥಿಕ, ಮಾನಸಿಕ ಸ್ಥಿತಿ ತುಂಬಾ ಕೆಡುವುದು. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಕೈಗೊಂಡ ಕಾರ್ಯ ನೆರವೇರುವುದು ಕಷ್ಟ. ಪ್ರವಾಸ ವಿಘ್ನಕರ. ಸಟ್ಟಾ ವ್ಯವಹಾರಗಳಲ್ಲಿ ಹಾನಿ. ಅಮೂಲ್ಯ ವಸ್ತುವಿನ ಅಪಹಾರ. ಕೈವಶಕ್ಕೆ ಚಿಂತೆ. ತಾ|| ೩೦, ೩೧ ಧನಿಕ ಮಿತ್ರನಿಂದ ಸಹಾಯ, ಬಹುಮಾನದಿಂದ ಲಾಭ.

ಕುಂಭ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ. ಕೈಗೊಂಡ [illegible] ಪ್ರವಾಸ, ದಾನಧರ್ಮ, [illegible] ತಾ|| ೩೦, ೩೧ ವ್ಯ[illegible]

ರಾಷ್ಟ್ರ ಧ್ವಜವನ್ನು ಹಾರಿಸುವ ಬಗ್ಗೆ ನಿಬಂಧನೆ

ರಾಷ್ಟ್ರ ಧ್ವಜವನ್ನು ಹಾರಿಸುವ ಬಗ್ಗೆ ಭಾರತ ಸರ್ಕಾರದವರು ಹಲವು ಹೊಸ ನಿಬಂಧನೆಗಳನ್ನು ಮಾಡಿರುತ್ತಾರೆ. ಅದರ ಪ್ರಕಾರ, ಸಾಧಾರಣವಾಗಿ ಹೈಕೋರ್ಟು, ಅಂದರೆ ಕಛೇರಿ ಕಮಿಷನರುಗಳ ಮತ್ತು ಕಲೆಕ್ಟರುಗಳ ಕಛೇರಿ, ಜೈಲು, ಜಿಲ್ಲಾ ಬೋರ್ಡು ಮತ್ತು ಪೌರಸಭೆಗಳ ಮೇಲೆ ರಾಷ್ಟ್ರ ಧ್ವಜವನ್ನು ಪ್ರದರ್ಶಿಸಬಹುದು. ನರೇಂದ್ರ, ರಾಷ್ಟ್ರಪತಿಗಳು, ಕೇಂದ್ರ ಮತ್ತು ಪ್ರಾಂತ ಮಂತ್ರಿಗಳು, ಕೇಂದ್ರದ ರಾಜ್ಯ ಮಂತ್ರಿಗಳು, ಉಪ ಮಂತ್ರಿ ಮತ್ತು ಶಾಸನ ಸಭೆಗಳ ಅಧ್ಯಕ್ಷರು, ರಾಜ್ಯ ಸಭೆ ಮತ್ತು ಲೋಕ ಸಭಾ ಧ್ಯಕ್ಷರುಗಳು, ಚೀಫ್ ಕಮಿಷನರುಗಳು, ಪ್ರಾದೇಶಿಕ ಕಮಿಷನರುಗಳು ಮತ್ತು ಜಿಲ್ಲಾಧಿಕಾರಿಗಳ ಕಟ್ಟಡಗಳ ಮೇಲೆ ಮಾತ್ರ ಹಾರಿಸಬೇಕು. ಗಡಿ ಭಾಗದಲ್ಲಿ ಧ್ವಜವು ಹಾರಬೇಕಾದ ಪ್ರವಾಸದಲ್ಲಿರುವಾಗ ರಾಷ್ಟ್ರಾಧ್ಯಕ್ಷರು, ಪ್ರಧಾನ ಮಂತ್ರಿಗಳು ಹೊರಡುವ ವಾಹನಗಳ ಧ್ವಜಗಳ ವಿಷಯವನ್ನು ಪ್ರತ್ಯೇಕವಾಗಿ ತಿಳಿಸಲಾಗಿದೆ.

ಗೋವಾಕ್ಕೆ ಸತ್ಯಾಗ್ರಹಿಯಾಗಿ ಹೋಗಲು ನೆಹರೂ ಅಪೇಕ್ಷೆ

ಗೋವಾಕ್ಕೆ ಧ್ವಜವೊಂದನ್ನು ಹಿಡಿದು ಹೋಗಬೇಕೆಂದು ತಮಗೆ ಅನ್ನಿಸುವುದಾಗಿಯೂ, ಅಲ್ಲಿಗೆ ಹೋಗುವ ಜನರನ್ನು ತಡೆಯಬಾರದೆಂದೇ ತಮ್ಮ ಅಪೇಕ್ಷೆಯೆಂದೂ, ಆದರೆ ಆ ತರ ರಾಷ್ಟ್ರೀಯ ಸಂಘದ ವಿಷಯದಲ್ಲಿ ಸರಿಯಾದ ಮಾರ್ಗದಲ್ಲಿ ವರ್ತಿಸಬೇಕಾಗಿರುವುದರಿಂದ ತಾವು ಹಾಗೆ ಮಾಡುವುದಿಲ್ಲವೆಂದು ನೆಹರೂರವರು ರಾಜ್ಯ ಸಭೆಯಲ್ಲಿ ತಿಳಿಸಿದ್ದಾರೆ.

ಹೋಟೆಲು ತಿಂಡಿಗಳ ತಯಾರಿ ಬಗ್ಗೆ ಇದ್ದ ಸಂಸ್ಕಾರ ಬಂಧನ

ಯಶವಂತಪುರಕ್ಕೆ ಒಂದಿರುವ ಉತ್ತರ ಪ್ರದೇಶದವನೆಂದು ಹೇಳಲಾದ ಸಂಸಾರವೊಂದರ ಜನರನ್ನು ಹೋಟೆಲು ತಿಂಡಿ ತಯಾರಿ ಸಂಬಂಧದಲ್ಲಿ ಪೊಲೀಸ್ ಪೊಲೀಸರು ವಶಕ್ಕೆ ಮಾಡಿದರು. ತಿಂಡಿಗಳನ್ನು ಕೆಡಿಸುತ್ತಿದ್ದಾಗ ಪೊಲೀಸರು ಗೃಹವನ್ನು ಪ್ರವೇಶಿಸಿ ಅವುಗಳನ್ನೂ, ಮಂತ್ರೋಪಕರಣಗಳನ್ನೂ ವಶಪಡಿಸಿಕೊಂಡರು.

ಯುವಕನ ಆತ್ಮಹತ್ಯೆ

ರಾಜಧಾನಿಯ ಚಾಮುಂಡಿಪುರದ ಸಿವಿಲ್ ಬ್ಲಾಕಿನ ನಿವಾಸಿ ನರಸಿಂಹಮೂರ್ತಿ ಎಂಬ ಯುವಕನು, ಕೃಷ್ಣನ್ ಎಂಬುವವರ ಪತ್ನಿಯ ಅತಿ ರಾಗ ಹೊಂದಿ ಆಕೆಯು ಪ್ರತಿಯಾಗಿ ಅವನಿಗೆ ಒಲಿಯದಿದ್ದುದರಿಂದ ಕಾರಣ ಕ್ಕಾಗಿ ಜಿಗುಪ್ಸೆಗೊಂಡ ಬೆಂಕಿ ವಿಷವನ್ನು ಸೇವಿಸಿದನೆಂದೂ, ಕೃಷ್ಣರಾಜ ಆಸ್ಪತ್ರೆಯಲ್ಲಿ ಅವನು ಮೃತಪಟ್ಟನೆಂದೂ ವರದಿಯಾಗಿದೆ. ತನ್ನ ಅಂತ್ಯವನ್ನು ಕುರಿತು ಕಾರಣ ಸೂಚಿಸುವ ಪತ್ರವೊಂದು ಅವನ ಬಳಿ ಇತ್ತು.

ಹರಿಕಥೆ ಮತ್ತು ವೀಣೆ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಬಳಿ ಇರುವ ಶ್ರೀ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ ಕೃಷ್ಣ ಜಯಂತಿ ಪ್ರಯುಕ್ತ ನಾಳೆ ಮಧ್ಯಾಹ್ನ ೪ ಗಂಟೆಗೆ ವಿ|| ನೀಲಕಂಠ ಮಾಧವದಾಸರಿಂದ ಭಕ್ತ ಕುಚೇಲ ಎಂಬ ಹರಿಕಥೆಯೂ, ಸಂಜೆ ೭ ಗಂಟೆಗೆ ಅ|| ವಿ|| ಆರ್. ಎನ್. ದೊರೆಸ್ವಾಮಿಯವರಿಂದ ವೀಣಾ ವಾದನವೂ ಏರ್ಪಾಡಾಗಿವೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೨೦ ಪಿ. ಎಸ್. ವೆಂಕಟಸ್ವಾಮಿ ನಾಗಸ್ವರ. ಮಧ್ಯಾಹ್ನ ೧-೫೦ ಮತ್ತು ೧-೫೦ ರೆಕಾರ್ಡುಗಳು. ೩ ಎಂ. ಎಚ್. ಅಂಜನಪ್ಪ ಸಂಗೀತ. ಸಂಜೆ ೫-೩೦ ಪಿ. ಮುನಿವೆಂಕಟಪ್ಪ ಹಾರ್ಮೊನಿಯಂ. ೬ ಗಾನ ವಿಹಾರ. ೬-೧೫ ಶಿವಪ್ರಸಾದ್ ಕುಳ್ಳಿ ರಾಮಾಯಣ ವಾಚನ. ೭-೩ ಎಂ. ಎಚ್. ಅಂಜನಪ್ಪ ಸಂಗೀತ. ೭-೩೦ ಭಾರತದ ಭಕ್ತ ಗೀತೆ. ೮ ವಿ. ದೇಶಿಕಾಚಾರ್ ಕೊಳಲು. ೯-೧೫ ಎಂ. ಎಸ್. ಪಾರ್ಥಸಾರಥಿ ಕ್ರೀಡಾ ವಿಮರ್ಶೆ. ೯-೫೦ ಎಸ್. ರಾಮಚಂದ್ರ ಸಂಗೀತ.

ವ್ಯಾಪಾರ, ಉದ್ಯೋಗದಲ್ಲಿ ತೊಂದರೆ

ಮೀನ— ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ. ಪ್ರವಾಸ ಸು[illegible] ಖರ್ಚು ಹೆಚ್ಚು ವಿಶ್ರಾಂತಿ ಇಲ್ಲ.

ಗೋವಾವನ್ನು ಕೊಳ್ಳಲು ಅಂಬೇಡ್ಕರರ ಸಲಹೆ

ಗೋವಾವನ್ನು ಪೋರ್ಚುಗೀಸರಿಂದ ಕೊಂಡುಕೊಳ್ಳಬೇಕೆಂದೂ, ಇಲ್ಲವಾದರೆ ಎರವಲಾಗಿ ಪಡೆಯಬೇಕೆಂದೂ ಡಾ|| ಅಂಬೇಡ್ಕರರು ಸಲಹೆ ಮಾಡಿರುತ್ತಾರೆ. ಹಿಂದೆ ಬ್ರಿಟಿಷರು ಭಾರತವನ್ನು ಬಿಟ್ಟುಹೋದ ರೀತಿಯಲ್ಲಿ ನಿಶ್ಶಬ್ದವಾಗಿ ಪೋರ್ಚುಗೀಸರಿಂದ ಗೋವಾವನ್ನು ಕೈವಶಕ್ಕೆ ಪಡೆಯಲು ಏರ್ಪಾಡು ಮಾಡುತ್ತಿದ್ದ ವಿಷಯವನ್ನು ನೆಹರೂರವರು ಹೊರಗೆಡಹಿ, ಪೋರ್ಚುಗೀಸರ ಸಾರ್ವಭೌಮಾಧಿಕಾರಕ್ಕೆ ಪವಿತ್ರತೆಯನ್ನು ಕಲ್ಪಿಸಿರುತ್ತಾರೆ.

ವಾಲಿ ಬಾಲ್ ಪಂದ್ಯ

ರಾಜಧಾನಿಯ ಚಾಮರಾಜಪುರದಲ್ಲಿರುವ ಶ್ರೀ ಚಾಮುಂಡೇಶ್ವರಿ ವಿದ್ಯಾರ್ಥಿ ನಿಲಯದ ಟೀಮಿನವರು, ಕಳೆದ ೨೧ನೆ ತಾ|| ಮಾಂಬಳ್ಳಿ ಟೀಮಿನೊಡನೆ ವಾಲಿಬಾಲ್ ಪಂದ್ಯವನ್ನು ಆಡಿ ಜಯ ಗಳಿಸಿದರು. ೨೭ನೇ ತಾ|| ಎರಡು ಟೀಮುಗಳಿಗೂ ಏರ್ಪಾಡಾಗಿದ್ದ ಪುನಃ ಮಾಂಬಳ್ಳಿಯವರು ಸೋತರು.

ರಾಷ್ಟ್ರಾಧ್ಯಕ್ಷರಿಂದ ಬಹುಮಾನಿತರಾದ ಜ್ಯೋತಿಷ್ಯರು

ರಾಷ್ಟ್ರಾಧ್ಯಕ್ಷರು ನಗರಕ್ಕೆ ಆಗಮಿಸಿದ ಕಾಲ ನೂತನದಿಂದ ಗೊತ್ತುಮಾಡಿ, ಅವರ ಜಾತಕ ಕುಂಡಲಿಯನ್ನೂ, ಫಲಗಳನ್ನೂ ಬರೆದು ಒಪ್ಪಿಸಿ ಅವರಿಂದ ಬಹುಮಾನಿತರಾದ ಜ್ಯೋತಿಷ್ಯರ ಹೆಸರು ಶ್ರೀ ಶಿವದೇವಪ್ಪಸ್ವಾಮಿ ಎಂದು ತಿಳಿಸಲಾಗಿದೆ. ನಮ್ಮ ಪತ್ರಿಕೆಯಲ್ಲಿ ಶ್ರೀ ಶಿವಕುಮಾರಸ್ವಾಮಿ ಎಂದು ಬರೆಯಲಾಗಿತ್ತು.

ಲಕ್ಷ್ಮಿ ★ ಈ ರಾತ್ರಿ
ಸಕ್ಸೆಸ್ ಸಾರದ ತಮಿಳು ಚಿತ್ರ
ಮಲೈಕ್ಕಳ್ಳನ್
ದಿನವೂ 3 ಆಟಗಳು

ಪ್ರಭಾ ★ 3-9-54 ರಿಂದ :: ಅಪೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ವಿಶ್ವ ವಿಖ್ಯಾತ ನಿ ಶಾಂತಾರಾಂರವರ ★ ಸುಭಾ-ಕ-ತಾರ ★
[illegible]

ಉತ್ತಮವಾದ ರವೆ ತಯಾರಿಕೆಗೆ ಹೊಸ ವಿಧಾನ

ಮೆದುವಾದ ಗೋಧಿಯಿಂದ ಉತ್ತಮವಾದ ರವೆಯನ್ನು ತಯಾರಿಸಲು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದವರು ಹೊಸ ವಿಧಾನವನ್ನು ಕಂಡುಹಿಡಿದಿರುತ್ತಾರೆ. ೩೦ ಅಂಶದ ಸೆಂಟಿಗ್ರೇಡಿನ ಉಷ್ಣಾಂಶವಿರುವ ಬಿಸಿ ನೀರಿನಲ್ಲಿ ಅರ್ಧ ಗಂಟೆ ಕಾಲ ಗೋಧಿಯನ್ನು ನೆನೆಸಿ, ನಂತರ ಅದರ ಮೇಲೆ ಅರ್ಧ ಗಂಟೆ ಕಾಲ ಹಬೆಯನ್ನು ಬಿಟ್ಟು ಅರ್ಧ ಬೇಯಿಸಿ ಒಣಗಿಸಿದ ಮೇಲೆ ಬೀಸಿದರೆ ನಿಸ್ಸೊಳಿಕಾರವಂತಹ ಪದಾರ್ಥವು ದೊರೆಯುವುದೆಂದೂ, ಪ್ರತಿ ಮನೆಯಲ್ಲೂ ಅದನ್ನು ತಯಾರಿಸಬಹುದೆಂದೂ ಹೇಳಲಾಗಿದೆ. ಅದರಿಂದ ನಾನಾ ವಿಧವಾದ ಸಿಹಿ ಮತ್ತು ಖಾರದ ಪದಾರ್ಥಗಳನ್ನು ಮಾಡಬಹುದೆಂದೂ ಗೊತ್ತಾಗಿದೆ.

ಜೇಬುಗಳ್ಳನ ದಸ್ತಗಿರಿ

ಕೃಷ್ಣರಾಜನಗರ ತಾಲ್ಲೂಕಿನ ಮಿರ್ಲೆ ಗ್ರಾಮದ ಚಿಕ್ಕಯ್ಯ ಎಂಬ ವೃದ್ಧನೊಬ್ಬನ ಜೇಬಿನಿಂದ ೬೫ ರೂ ಗಳನ್ನು ಚಿಕ್ಕ ಕಾಳು ಎಂಬ ೧೭ ವರ್ಷದ ಹುಡುಗನು ಕಳವು ಮಾಡುತ್ತಿದ್ದಾಗ ದೇವರಾಜ ಪೊಲೀಸರಿಂದ ಬಂಧಿಸಲ್ಪಟ್ಟನು. ಅವನಿಗೆ ಹಿಂದೆ ೩-೪ ಸಾರಿ ಶಿಕ್ಷೆಯಾಗಿದೆ.

ರಾಜಕಮಲ್ ಟಾಕೀಸ್
ಮೈಸೂರು
27-8-54 ರಿಂದ : ಅಪೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಮಾಡರ್ನ್ ಥಿಯೇಟರ್ಸ್‌ರವರ ಕನ್ನಡ ಚಿತ್ರ
ಮಂಗಳ ಗೌರಿ
ಭೂಮಿಕೆ :- ಹರಿಣಿ, ಇಂದುಶೇಖರ್ ಮತ್ತು ಬಾಲಕೃಷ್ಣ

ಮಾಧವ ಮಂದಿರ
ಗಣೇಶ್ವರನ ಚೌಕ, ಚಾಮುಂಡಿ ರಸ್ತೆ, ಮೈಸೂರು
ರುಚಿ ಮತ್ತು ರುಚಿಕರವಾದ ಉಪಾಹಾರವನ್ನು ಮನೆಮೆಚ್ಚುವಂತೆ ತಯಾರಿಸಲು ಏರ್ಪಡಿಸಿದೆ
ಬೆಣ್ಣೆ ಕಾಯಿಸಿದ ತುಪ್ಪದಿಂದ ತಯಾರಿಸಿದ ಕೇಸರಿ ಭಾತು, ಸ್ಪೆಷಲ್ ತೆಂಗಾಯಿ ದೋಸೆ, ಸೆಟ್ ದೋಸೆ, ಮಸಾಲೆ ಇಡ್ಲಿ, ಸ್ಪೆಷಲ್ ಚಿಟ್ಟು, ಮಸಾಲೆ ವಡೆ, ಸಾಗು ವಿಶೇಷ ಆಕರ್ಷಣೆಯು.
ಪ್ರತಿ ಸೋಮವಾರ ಮತ್ತು ಶುಕ್ರವಾರ ಬೆಳಿಗ್ಗೆ ನಮ್ಮ ಸ್ಪೆಷಲ್ ಬಿಸಿಬೇಳೆ ಭಾತನ್ನು ರುಚಿ ನೋಡಲು ಮರೆಯಬೇಡಿ. ಅಲ್ಲದೆ ಹಸನಾದ ಬೆಣ್ಣೆ ಮತ್ತು ಬೆಣ್ಣೆ ಕಾಯಿಸಿದ ತುಪ್ಪವನ್ನು ಇಡಲಾಗಿದೆ.
ವಿಶೇಷವಾದ ರೀತಿಯಲ್ಲಿ ' ಏ ಒನ್ ' ಕಾಫಿಯನ್ನು ತಯಾರಿಸಲು ಏರ್ಪಡಿಸಿದೆ

MYSORE GOVERNMENT SILK WEAVING FACTORY
MYSORE
Announce
THEIR GRAND "GOWRI" REDUCTIONS
From 9 per cent to 75 per cent
For their SECONDS
Please Hurry up and visit :—
1) Factory Show-rooms at Mysore:
2) The Mysore Arts & Crafts Depot, Mahatma Gandhi Road, Bangalore
A. P. RAO
General Manager,
Govt. Silk Weaving Factory, Mysore

[illegible] Nagarajan at Sadhvi Press, [illegible] Road, Mysore.

ರಿಜಿಸ್ಟರ್ ನಂ. 792

ಗೌರಿ ಹಬ್ಬಕ್ಕಾಗಿ
ನವೀನ ಮಾದರಿಯ ರೇಷ್ಮೆ
ಸೀರೆಗಳು ಮತ್ತು ಸೂಟಿಂಗ್
ರಟಾಂಬಾರಿ ಸೀರೆಗಳು
ಬಂದಿವೆ
M. V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು :: ಫೋನ್ 446

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI : MONDAY 30-8-1954 ಮೈಸೂರು : ಸೋಮವಾರ ೩೦-೮-೧೯೫೪ [ಸಂಚಿಕೆ : ೨೩

ಉತ್ತರ ಬಿಹಾರಿನ ಪ್ರವಾಹದಿಂದ ೩೦ ಕೋಟಿ ರೂ. ನಷ್ಟ

ಪ್ರವಾಹದಿಂದ ೩೦ ಕೋಟಿ ರೂ. ನಷ್ಟ

ಉತ್ತರ ಬಿಹಾರಿನಲ್ಲಿ ಇತ್ತೀಚೆಗೆ ಉಂಟಾದ ಪ್ರವಾಹದಲ್ಲಿ ೮೦ ಲಕ್ಷ ಜನರು ತೊಂದರೆಗೆ ಸಿಕ್ಕಿರುವರೆಂದೂ, ೩೦ ಕೋಟಿ ರೂ ಗಿಂತ ಹೆಚ್ಚು ಆಸ್ತಿ ನಷ್ಟವಾಗಿರುವುದೆಂದೂ ಕೇಂದ್ರ ವ್ಯವಸಾಯ ಮಂತ್ರಿ ರಫಿ ಅಹಮದ್ ಕಿದ್ವಾಯಿಯವರು ಹೇಳಿರುತ್ತಾರೆ. ಅಲ್ಲಿನ ನದಿಗಳು ೧೨,೦೦೦ ಮೈಲಿ ಪ್ರದೇಶದಲ್ಲಿ ಶೇ|| ೬೦ ರಿಂದ ೮೦ ರ ವರೆಗೆ ಫಸಲನ್ನು ಕೊಚ್ಚಿ ಹಾಕಿವೆ. ೮೦ ಲಕ್ಷ ಬಡ ನಿವಾಸಿಗಳು ಆಹಾರಕ್ಕಾಗಿ ಸರ್ಕಾರದ ಪರಿಹಾರ ಕೇಂದ್ರಗಳಿಗೆ ಹೋಗುತ್ತಿರುವರು, ಗೋಷಾ ಹೆಂಗಸರು ಮುಸುಕನ್ನು ತೆಗೆದು ಉಚಿತ ಆಹಾರಕ್ಕಾಗಿ ಧಾವಿಸುತ್ತಿರುವರು. ಪಶ್ಚಿಮ ಬಂಗಾಳದಲ್ಲಿ ೧೧೪೭, ಬಿಹಾರಿನಲ್ಲಿ ೨೫ ಮತ್ತು ಅಸ್ಸಾಮಿನಲ್ಲಿ ೭೮ ಜನರು ಮೃತಿ ಹೊಂದಿದ್ದಾರೆ.

ತಿರುವಾಂಕೂರಿನಲ್ಲಿ ಭಯೋತ್ಪಾದಕ ರಾಜ್ಯಭಾರವೆಂದು ದೂರು

ತಿರುವಾಂಕೂರು-ಕೊಚ್ಚಿ ಸರ್ಕಾರದವರು ಭಯೋತ್ಪಾದಕ ರಾಜ್ಯಭಾರ ನಡೆಸುತ್ತಿರುವರೆಂದೂ, ಪ್ರಧಾನಿ ನೆಹರೂರವರು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಬೇಕೆಂದೂ ತಿರುವಾಂಕೂರಿನ ತಮಿಳರ ಕಾಂಗ್ರೆಸ್ಸಿನ ಅಧ್ಯಕ್ಷ ಪಿ. ರಾಮಸ್ವಾಮಿನಾಯ್ಡುರವರು ನೆಹರೂರವರಿಗೆ ಅರಿಕೆ ಮಾಡಿಕೊಂಡಿರುತ್ತಾರೆ. ಇವರೂ ಮತ್ತು ತಮಿಳು ಕಾಂಗ್ರೆಸ್ ಮುಖಂಡರಾದ ಅಬ್ದುಲ್ ರಜಾಕ್‌ರವರೂ ನೆಹರೂರವರನ್ನು ಭೇಟಿ ಮಾಡಿ ತಿರುವಾಂಕೂರು ಪರಿಸ್ಥಿತಿಯನ್ನು ವಿವರಿಸಿದರು. ಅಲ್ಲಿ ಪಕ್ಷಪಾತ ರಹಿತರಾದ ಜನರಿರುವ ನ್ಯಾಯಮಂಡಲದಿಂದ ಬಹಿರಂಗ ವಿಚಾರಣೆಯಾಗಬೇಕೆಂದು ರಜಾಕ್‌ರವರು ತಿಳಿಸಿರುತ್ತಾರೆ.

ಬಿರುಗಾಳಿಯಲ್ಲಿ ಸಮುದ್ರವನ್ನು ಈಜುವ ಪಂಥ

ಹಾಂಕಾಂಗ್ ಬಳಿ ನೆನ್ನೆ ಭಾರಿ ಬಿರುಗಾಳಿಯೆದ್ದು ಸಮುದ್ರವು ಅಲ್ಲೋಲಕಲ್ಲೋಲವಾಗಿದ್ದಾಗ ಕಡಲಿನಲ್ಲಿ ಈಜುವುದಾಗಿ ಪಂಥ ಕಟ್ಟಿದ ಸ್ಕಾಟ್ಲೆಂಡಿನ ೨೩ ವರ್ಷದ ನಾವಿಕನೊಬ್ಬನು ಬಿರುಗಾಳಿಯು ಅತ್ಯಂತ ರಭಸವಾಗಿದ್ದಾಗ ದಡದಿಂದ ಹಾರಿ ೨೦೦ ಗಜ ಈಜಿದನೆಂದು ವರದಿಯಾಗಿದೆ. ೧೦೦ ಡಾಲರ್ ಹಣವನ್ನು ಅವನು ಗೆದ್ದಿರುತ್ತಾನೆ. ಈಜಲು ಅವನಿಗೆ ೧೮ ನಿಮಿಷ ಹಿಡಿಯಿತು. ಬಿರುಸಿನ ಸಮುದ್ರದ ಅಲೆಗಳನ್ನಲ್ಲದೆ ತೇಲುತ್ತಿದ್ದ ಮರದ ತುಂಡುಗಳು ಮುಂತಾದ ಅಡ್ಡಿಗಳನ್ನೂ ಅವನು ಎದುರಿಸಬೇಕಾಯಿತೆಂದು ಹೇಳಲಾಗಿದೆ.

ಹೆಚ್. ಎಂ. ಚನ್ನಬಸಪ್ಪನವರ ಆರೋಗ್ಯ ಉತ್ತಮ

ಕಳೆದ ೧೫ ದಿನಗಳ ಹಿಂದೆ ಟೈಫಾಯ್ಡ್ ಜ್ವರಾಯಿಲೆಗಾಗಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಪೂರ್ಣವಾಗಿ ಗುಣ ಹೊಂದಿ ಆಸ್ಪತ್ರೆಯಿಂದ ನೆನ್ನೆ ಮನೆಗೆ ತೆರಳಿದರು.

ಕೈ ಮಗ್ಗದ ಕೈಗಾರಿಕೆಗಾಗಿ ಸಂಸ್ಥಾನಕ್ಕೆ ೨ ಲಕ್ಷ ರೂ.

ಬೆಂಗಳೂರು ೩೦

ಸಂಸ್ಥಾನದಲ್ಲಿ ಕೈ ಮಗ್ಗ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರದವರು ೨೮ ಲಕ್ಷ ರೂ. ಸಹಾಯ ಮತ್ತು ಸಾಲವನ್ನು ಕೊಟ್ಟಿರುತ್ತಾರೆ. ಮೈಸೂರು ಸಂಸ್ಥಾನದಲ್ಲಿ ನೂಲಿನ ಸಹಕಾರ ಸಂಘಗಳನ್ನು ಉತ್ಪತ್ತಿ ಮತ್ತು ಮಾರಾಟ ಸಂಘಗಳಾಗಿ ಪರಿವರ್ತಿಸಲು ೧|| ಲಕ್ಷ ರೂ. ಸಾಲ ಮತ್ತು ಅದಕ್ಕಾಗಿ ಹೆಚ್ಚು ಯಂತ್ರೋಪಕರಣಗಳನ್ನು ಕೊಳ್ಳಲು ೨೨|| ಸಾವಿರ ರೂ. ಸಹಾಯ ಕೊಡಲಾಗಿದೆ. ಊಟಕ್ಕೆ ಉಪಯೋಗಿಸುವಂತಹ ಎಣ್ಣೆಯಿಂದ ಸಾಬೂನು ತಯಾರಿಸಲು ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಸಮಿತಿಗೆ ೬,೨೦೦ ರೂ. ಸಹಾಯವನ್ನು ಕೊಡಲಾಗಿದೆ.

ಪರ್ಷಿಯ ಸೈನ್ಯ ಮತ್ತು ಪೊಲೀಸು ದಳದಲ್ಲಿ ೨೫೦ ಮಂದಿ ಬಂಧನ

ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ಕಮ್ಯೂನಿಸ್ಟ್ ದಸ್ತಗಿರಿಗಳಾಗುತ್ತಿರುವುದು ಕೈರೊ ರೇಡಿಯೊವು ತಿಳಿಸಿರುತ್ತದೆ. ಅಲ್ಲಿನ ಪೊಲೀಸು ಮತ್ತು ಸೈನ್ಯಗಳಲ್ಲಿ ಸರ್ಕಾರದ ವಿರುದ್ಧವಾಗಿ ಮಾಡುತ್ತಿರುವ ಪಿತೂರಿಯನ್ನು ಮಟ್ಟ ಹಾಕಲು ಪರ್ಷಿಯ ಸರ್ಕಾರದವರು ೨೫೦ ಜನರನ್ನು ಬಂಧಿಸಿರುವರೆಂದು ಹೇಳಲಾಗಿದೆ.

ಗಣಪತಿ ಉತ್ಸವ ಮತ್ತು ಉಪನ್ಯಾಸ

ರಾಜಧಾನಿಯ ಶ್ರೀ ವೆ. ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳಿದ್ದಿನಿಂದ ಬರುವ ತಿಂಗಳು ೨೧ ನೇ ತಾ|| ಪೂರ್ತಾ ನಿತ್ಯವೂ ಸಂಜೆ ೬ ಗಂಟೆಗೆ ಶ್ರೀ ವಿದ್ಯಾ ಗಣಪತಿ ಮಂಗಳಾರತಿ ಉತ್ಸವದ ಅಂಗವಾಗಿ ನಾನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ೧ನೇ ತಾ|| ಬ್ರಹ್ಮಶ್ರೀ ಹೆಚ್. ನಾರಾಯಣ ಜೋಯಿಸರು ಸ್ಯಮಂತಕೋಪಾಖ್ಯಾನದ ಪ್ರವಚನ ಮಾಡುವರು.

ಮಾಧವರಾವ್ ಸರ್ಕಲಿನಲ್ಲಿರುವ ಶಾಂತಾ ನ್ಯೂಸ್ ಪೇಪರ್ ಅಂಗಡಿಯಲ್ಲಿ ನಾಳಿದ್ದು ಸಂಜೆ ೭ ಗಂಟೆಗೆ ಗಣಪತಿ ಮಂಗಳಾರತಿಯನ್ನು ಏರ್ಪಡಿಸಲಾಗಿದೆ.

ನಗರದಲ್ಲಿ ಪೊಲೀಸ್ ಅಧಿಕಾರಿಗಳ ಗಸ್ತು

ನಗರದ ಅನೇಕ ಕಡೆಗಳಲ್ಲಿ ಕಳ್ಳತನಗಳಾಗುತ್ತಿರುವುದನ್ನು ತಪ್ಪಿಸಿ ಜನರಲ್ಲಿ ಭಯವನ್ನು ಹೋಗಲಾಡಿಸುವಸಲುವಾಗಿ ಜಿಲ್ಲಾ ಪೊಲೀಸು ಅಧಿಕಾರಿಗಳು ಮತ್ತು ನಗರದ ಅ|| ಸೂಪರಿಂಟೆಂಡೆಂಟ್‌ರವರು ನಗರದಲ್ಲಿ ನೆನ್ನೆ ರಾತ್ರಿ ಮತ್ತು ಈ ದಿನ ಗಸ್ತು ತಿರುಗಿ, ಕಳ್ಳತನಗಳನ್ನು ತಪ್ಪಿಸುವ ಬಗ್ಗೆ ಸೂಕ್ತ ಎಚ್ಚರಿಕೆ ಕ್ರಮ ಕೈಗೊಂಡಿರುತ್ತಾರೆ. ನಗರದ ಹೊರ ಭಾಗಗಳಲ್ಲಿ ರಿಸರ್ವ್ ಕಾನ್ಸ್ಟೇಬಲ್ಲುಗಳ ಪಹರೆ ಹಾಕಲಾಗಿದೆ. ಶಸ್ತ್ರ ಸಜ್ಜಿತ ಪೋಲೀಸಿನ ವಿಶೇಷ ಪಡೆಯು ನಗರದಲ್ಲಿ ಸಂಚರಿಸುವಂತೆ ಏರ್ಪಾಡು ಮಾಡ...

ಭಾರತಕ್ಕೆ ಪಾಕಿಸ್ತಾನದ ಪ್ರತಿಭಟನೆ

ಭಾರತದ ರೇಡಿಯೊಗಳು ಮತ್ತು ಪತ್ರಿಕೆಗಳು ಪಾಕಿಸ್ತಾನದ ಮೇಲೆ ದ್ವೇಷ ಕಾರುವ ರೀತಿಯಲ್ಲಿ ಪ್ರಚಾರ ಮಾಡುತ್ತಿರುವುವೆಂದು ಭಾರತ ಸರ್ಕಾರಕ್ಕೆ ಪಾಕಿಸ್ತಾನವು ಪ್ರತಿಭಟನೆಯನ್ನು ಸೂಚಿಸಿರುವುದಾಗಿ ಅಲ್ಲಿನ ವಿದೇಶಾಂಗ ಮಂತ್ರಿ ಜಫರುಲ್ಲಾಖಾನರು ತಿಳಿಸಿರುತ್ತಾರೆ.

ಅಮೆರಿಕದಿಂದ ಫಾರ್ಮೊಸಾ ದ್ವೀಪದ ರಕ್ಷಣೆ

ದೂರ ಪೂರ್ವದಲ್ಲಿ ಅಮೆರಿಕದ ವಿಮಾನ ಬಲವನ್ನು ಪುನರ್ವ್ಯವಸ್ಥೆಗೊಳಿಸುವ ಅಂಗವಾಗಿ ಅಮೆರಿಕಾ ಜೆಟ್ ವಿಮಾನಗಳನ್ನು ಫಾರ್ಮೊಸಾ ದ್ವೀಪದಲ್ಲಿಡಲಾಗುವುದೆಂದು ವರದಿಯಾಗಿದೆ. ದ್ವೀಪದ ಜಲಸಂಧಿಯ ಬಳಿ ಜೆಟ್ ವಿಮಾನಗಳ ರಕ್ಷಣಾ ಕೋಟೆಯನ್ನೇ ನಿರ್ಮಿಸಲಾಗುವುದೆಂದೂ ಹೇಳಲಾಗುತ್ತಿದೆ. ಕಮ್ಯೂನಿಸ್ಟ್ ಚೀಣರು ಫಾರ್ಮೊಸಾ ಮೇಲೆ ಧಾಳಿ ಮಾಡುವ ಭೀತಿಯಿರುವುದರಿಂದ ರಕ್ಷಣೆಗಾಗಿ ಈ ಏರ್ಪಾಡೆಂದು ಹೇಳಲಾಗಿದೆ.

ವಾಯುವ್ಯ ಭಾರತಕ್ಕೊಂದು ಭಾರಿ ರೇಡಿಯೊ ಕೇಂದ್ರ

ಪಂಜಾಬು, ಪೆಪ್ಸು ಸಂಸ್ಥಾನಗಳ ಸಹಿತ ಮತ್ತು ಹಿಮಾಚಲ ಪ್ರದೇಶ ಪ್ರಾಂತಗಳಿಗಾಗಿ ನಿನ್ನೆಯಿಂದ ಜಲಂಧರಿನಲ್ಲಿ ೫೦ ಕಿಲೋವಾಟಿನ ಟ್ರಾನ್ಸ್‌ಮಿಟರ್ ರೇಡಿಯೊ ಕೇಂದ್ರವನ್ನು ಆರಂಭಗೊಳಿಸಲಾಯಿತು. ಮೂರು ಪ್ರಾಂತಗಳ ಮುಖ್ಯ ಮಂತ್ರಿಗಳೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಕೇಂದ್ರ ವಾರ್ತಾ ಮಂತ್ರಿ ಬಿ. ವಿ. ಕೇಸ್ಕರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಪಟ್ಟಾಭಿಷೇಕೋತ್ಸವ

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ಸಂಬಂಧವಾಗಿ ೧೮ ನೇ ವಾರ್ಷಿಕ ಸಂತೋಷ ಸಮಾರಂಭವನ್ನು ಅರಮನೆ ಅಧಿಕಾರಿಗಳು ಮತ್ತು ನೌಕರರು ಸೆಪ್ಟೆಂಬರ್ ೮ ನೇ ತಾ|| ಬೆಳಿಗ್ಗೆ ೭ ಗಂಟೆಗೆ ಜಗನ್ಮೋಹನ ಭವನದಲ್ಲಿ ಏರ್ಪಡಿಸಿರುವರು. ಮಹಾರಾಜರ ಮಿಲಿಟರಿ ಸೆಕ್ರೆಟರಿಯವರಾದ ಕರ್ನಲ್ ಸರ್ದಾರ್ ಡಿ. ಮದನಗೋಪಾಲರಾಜ ಅರಸು ಅಧ್ಯಕ್ಷತೆ ವಹಿಸುವರು.

ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಯವರ ಪ್ರಾಮಾಣಿಕತೆ

ಮೈಸೂರು ಸಿಟಿ ಸಹಕಾರಿ [illegible] ರಸ್ತೆಯಲ್ಲಿರುವ ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಯವರಿಗೆ ಕಪ್ಪು ಬಟ್ಟೆಗಳನ್ನು ಶುಭ್ರ ಮಾಡಲು ಕೊಟ್ಟಿದ್ದಾಗಿಯೂ, ಆ ಪೈಕಿ ಅಂಗಿಯೊಂದರಲ್ಲಿ ಮರೆತು ಬೆಲೆಬಾಳುವ ಚಿನ್ನದ [illegible] ಗಟ್ಟಿಯೊಂದನ್ನು ಇಟ್ಟಿದ್ದಾಗಿಯೂ, ಲಾಂಡ್ರಿಯವರು ಅದನ್ನು ಮಾಲೀಕರಿಗೆ ವಾಪಸು ಕೊಟ್ಟಿದ್ದಾಗಿಯೂ ಸಿಟಿ [illegible] ಡಾ|| ಡಿ. ಶ್ರೀನಿವಾಸಮೂರ್ತಿಯವರು ತಿಳಿಸಿ, ಲಾಂಡ್ರಿಯವರ ತತ್ಪರತೆ ಮತ್ತು ಪ್ರಾಮಾಣಿಕತೆಯನ್ನು ಪ್ರಶಂಸಿಸಿರುವುದಲ್ಲದೆ ಅವರ ಉದ್ಯಮಕ್ಕೆ ಯಶಸ್ಸನ್ನು ಕೋರಿರುತ್ತಾರೆ.

○ ನಗರದ ಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ ಸ್ಟೇಟ್ಸ್ ಸ್ಪೋರ್ಟ್ಸ್ ವರ್ಕ್ಸ್ ಅಂಗಡಿಯ ಬಾಗಿಲ ಬೀಗವನ್ನು ನೆನ್ನೆ ರಾತ್ರಿ ಯಾರೋ ಮುರಿದು ಸುಮಾರು ೨೦೦ ರೂ ಬೆಲೆ ಬಾಳುವ ವಸ್ತುಗಳನ್ನು ಅಪಹರಿಸಿರುತ್ತಾರೆ.

ಫ್ರೆಂಚ್ ಯುದ್ಧ ಬಂದಿಗಳ ಬಗ್ಗೆ ಕಾತರ

ಇಂಡೋಚೀನಾ ಯುದ್ಧದಲ್ಲಿ ಪತ್ತೆಯಿಲ್ಲದಾದ ಸಹಸ್ರ ಗಟ್ಟಲೆ ಫ್ರೆಂಚ್ ಸೈನಿಕರ ಬಗ್ಗೆ ಫ್ರೆಂಚ್ ಅಧಿಕಾರಿಯೊಬ್ಬರು ಬಹಳ ಆತಂಕವನ್ನು ವ್ಯಕ್ತಪಡಿಸಿರುತ್ತಾರೆ. ಅವರೆಲ್ಲಾ ವಿಯಟ್ಮಿನ್ನರ ಸೆರೆಯಾಳುಗಳಾಗಿದ್ದರೆಂದು ನಂಬಲಾಗಿತ್ತು. ೪೦,೧೭೨ ಮಂದಿ ಫ್ರೆಂಚ್ ಸಿಪಾಯಿಗಳು ಪತ್ತೆಯಿಲ್ಲವೆಂದು ೮ ವರ್ಷಗಳ ಯುದ್ಧದಲ್ಲಿ ಲೆಕ್ಕ ಹಾಕಲಾಗಿತ್ತು. ವಿಯಟ್ಮಿನ್ನರು ೯,೧೫೮ ಬಂದಿಯನ್ನು ವಾಪಸು ಮಾಡುವುದಾಗಿ ಹೇಳಿ ೨,೭೧೮ ಜನರನ್ನು [illegible] ಮಾಡಿರುವರೆಂದೂ, ಫ್ರೆಂಚರು ೨೦,೬೧೬ ವಿಯಟ್ಮಿನ್ನರನ್ನು ಬಿಡುಗಡೆ ಮಾಡಿರುವರೆಂದೂ ಹೇಳಲಾಗಿದೆ.

ಒಂದಾಣೆ ಬಾಕಿಗಾಗಿ ಪ್ರಾಣಾಪಾಯದ ಪೆಟ್ಟು

ಕಡೂರಿನ ರೈಲ್ವೆ ನಿಲ್ದಾಣದ ಬಳಿ ಹಲವರು ಕಳೆದ ಬುಧವಾರ ಹುಣಸೇಬೀಜದ ಆಟವಾಡುತ್ತಿದ್ದರೆಂದೂ, ಮುನಿಸ್ವಾಮಿ ಎಂಬುವನು ಸೋತು ಒಂದು ಆಣೆ ಬಾಕಿಯನ್ನು ಕೊಡದೆ ಇದ್ದುದರಿಂದ ಗೆದ್ದ ಮುಲ್ಲಿ (ಮುಲ್ಲಿಕ್) ಎಂಬುವನಿಗೂ, ಅವನಿಗೂ ಜಗಳವಾಗಿ ಮುಲ್ಲಿಯು ಮುನಿಸ್ವಾಮಿಯ ಮರ್ಮಸ್ಥಾನಕ್ಕೆ ಒದೆಯಲು ಅವನು ಪ್ರಜ್ಞೆ ತಪ್ಪಿ ಬಿದ್ದನೆಂದೂ, ಅವನನ್ನು ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ. ಅವನ ಮರಣದ ಪೂರ್ವ ಹೇಳಿಕೆಯನ್ನು ತೆಗೆದುಕೊಳ್ಳಲಾಗಿದೆ. ಮುಲ್ಲಿಯನ್ನು ದಸ್ತಗಿರಿ ಮಾಡಲಾಗಿದೆ.

ವಿಚಿತ್ರ ಮಗುವಿನ ಜನನ

ತಿರುನಲ್ವೇಲಿ ಬಳಿ ಸನ್ಯಾಸಿ ಗ್ರಾಮ ಎಂಬಲ್ಲಿ ಒಬ್ಬ ಹೆಂಗಸು ಹೆತ್ತಿರುವ ಮಗುವಿಗೆ ಎದೆ ಭಾಗದಲ್ಲಿ ತೆಂಗಿನಕಾಯಿ ಆಕಾರದ ಮುದ್ದೆಯೊಂದು ಬೆಳೆದಿದೆ. ಅದು ಮತ್ತೊಂದು ಮಗುವಿನ ಗರ್ಭವಾಗಿರಬೇಕೆಂದು ನಂಬಲಾಗಿದೆ. ಅದನ್ನು ಮಗುವಿನ ಶರೀರದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವೆಂದು ವೈದ್ಯರು ಹೇಳಿರುತ್ತಾರೆ. ಮಗುವು ಆರೋಗ್ಯವಾಗಿದೆ.

ಪ್ರವಾಹ ಪೀಡಿತರ ರಕ್ಷಣೆಗೆ ಭಾರಿ ವಿಮಾನ ಪಡೆ

ಬಿಹಾರಿನಲ್ಲಿ ಪ್ರವಾಹ ಪೀಡಿತರನ್ನು ರಕ್ಷಿಸಲು ಮತ್ತು ಅವರಿಗೆ ಪರಿಹಾರ ಒದಗಿಸಲು ಅಲ್ಲಿನ ಸರ್ಕಾರದವರು ವಿಮಾನಗಳ ಭಾರಿ ತಂಡವೊಂದನ್ನು ನಿಯೋಜಿಸಿರುತ್ತಾರೆ. ಅಸ್ಸಾಮಿನ ಒಂದು ನದಿಯಲ್ಲಿ ಎರಡು ದೋಣಿ ಅಪಘಾತಗಳಾಗಿ ೧೨ ಜನರೂ, ಮತ್ತೊಂದು ಕಡೆ ದೋಣಿಗಳ ಡಿಕ್ಕಿಯಿಂದ ೯ ಮಂದಿಯೂ, ಇನ್ನೊಂದು ಸ್ಥಳದಲ್ಲಿ ೬ ಜನರೂ ಮುಳುಗಿರುತ್ತಾರೆ. ಹಿಮಾಲಯದ ತಪ್ಪಲಿನಲ್ಲಿರುವ ಅನೇಕ ಅಪೂರ್ವ ಪ್ರಾಣಿಗಳು ಮಳೆ ಮತ್ತು ಪ್ರವಾಹಗಳಿಂದ ನಾಶವಾಗುತ್ತಿವೆಯೆಂದು ಹೇಳಲಾಗಿದೆ. ಪೂರ್ವ ಬಂಗಾಳದ ಅತ್ಯಂತ ಭಾರಿ ಸೆಣಬಿನ ಕೇಂದ್ರವಾದ ನೇತ್ರಕೋಣಕ್ಕೆ [illegible] ನುಗ್ಗಿದೆ.

ತಾಲ್ಲೂಕು ಮತ್ತು ಜಿಲ್ಲಾ ಬೋರ್ಡುಗಳ ರಚನೆ ಮತ್ತು ಅಧಿಕಾರ

ಪರಿಶೀಲನಾ ಸಮಿತಿಯ ವರದಿ

ಬೆಂಗಳೂರು ೨೯

ಜಿಲ್ಲಾ ಬೋರ್ಡುಗಳನ್ನು ಉಳಿಸಿಕೊಂಡು, ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ಶ್ರೀ ಡಿ ಎಚ್ ಚಂದ್ರಶೇಖರಯ್ಯ ಸಮಿತಿಯವರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಹಿಂದೆ ಗ್ರಾಮಾಂತರದ ಅಭಿವೃದ್ಧಿಗೆ ಜಿಲ್ಲಾ ಬೋರ್ಡ್ ವಿಶೇಷ ಕಾರ್ಯಕ್ರಮ ... ಕೈಗೊಳ್ಳಬೇಕು ... ನಡೆಸಲೂ ... ಕೆಲಸಗಳಿಗೆ ... ಅವರ ... ಜಿಲ್ಲಾ ಬೋರ್ಡುಗಳು ... ಬೇಕೆಂದು ಹೇಳಿರುತ್ತಾರೆ.

ತಾಲ್ಲೂಕು ಬೋರ್ಡುಗಳ ... ಜನರಿಗೆ ... ೩೦ ವರ್ಷಗಳ ಹಿಂದೆ ... ಬೋರ್ಡುಗಳು ಈಗ ಅಗತ್ಯ ... ತಾಲ್ಲೂಕಿನ ಅಭಿವೃದ್ಧಿ ... ಜಿಲ್ಲಾ ಬೋರ್ಡುಗಳ ... ಸಮಿತಿಯವರು ತಿಳಿಸಿದ್ದಾರೆ.

೫೦ ಸಾವಿರ ಪ್ರಜಾ ಸಂಖ್ಯೆ ... ಕಿಲೋಮೀಟರ್ ... ಪ್ರದೇಶ ... ಲಕ್ಷ ... ಹಣ ... ಹಚ್ಚಿರುವ ಸ್ಥಳಗಳಲ್ಲಿ ... ತಾಲ್ಲೂಕು ಬೋರ್ಡುಗಳನ್ನು ... ನಿಮ್ನ ವರ್ಗದವರಿಗೆ ಸಂಖ್ಯಾನುಗುಣವಾಗಿ ಸ್ಥಾನಗಳನ್ನು ಏರ್ಪಡಿಸಲು ಮಾಡಬೇಕೆಂದು ... ಚುನಾವಣೆಗಳಾಗಿ, ಉಳಿದ ಸ್ಥಾನಗಳಿಗೆ ಗ್ರಾಮ ಪಂಚಾಯತಿ ಮತ್ತು ಟೌನ್ ಬೋರ್ಡ್ ಸಭೆಗಳಿಂದ ಆರಿಸಿ ಮಾಡಬೇಕೆಂದೂ ಸೂಚಿಸಲಾಗಿದೆ.

ತಾಲ್ಲೂಕು ಅಮಲ್ದಾರರು ಈ ಬೋರ್ಡುಗಳ ಕಾರ್ಯದರ್ಶಿಗಳಾಗುವರು. ಆರೋಗ್ಯ ಇನ್ಸ್ಪೆಕ್ಟರು ... ಬೋರ್ಡುಗಳ ...

ಜಿಲ್ಲಾ ಬೋರ್ಡುಗಳಿಗೆ ... ಪ್ರಜಾ ಸಂಖ್ಯೆಯಿರುವ ತಾಲ್ಲೂಕಿನಿಂದ ... ಸಾವಿರದಿಂದ ... ಲಕ್ಷದವರೆಗೆ ... ಸ್ಥಾನಗಳಿರಬೇಕೆಂದೂ ... ವರ್ಗದವರಿಗೆ ಸಂಖ್ಯಾನುಗುಣವಾಗಿ ಪ್ರಾತಿನಿಧ್ಯವಿರಬೇಕೆಂದೂ, ಪ್ರತಿ ತಾಲ್ಲೂಕು ಬೋರ್ಡು ತನ್ನ ಸದಸ್ಯರ ಪೈಕಿ ಜಿಲ್ಲಾ ಬೋರ್ಡಿಗೆ ... ಕಳುಹಿಸಬೇಕೆಂದೂ ಮಹಿಳೆಯರು ಮತ್ತು ಇತರ ... ಹಿತಗಳಿಗಾಗಿ ಸ್ಥಾನಗಳಿರಬೇಕೆಂದೂ ಇಲಾಖೆಗಳ ಮುಖ್ಯಾಧಿಕಾರಿಗಳೂ ಜಿಲ್ಲಾ ... ಅಧಿಕಾರಿಗಳೂ ಸಭೆಗೆ ಬರಬಹುದೆಂದೂ ತಿಳಿಸಲಾಗಿದೆ.

ಕೊಯ್ನಾ ಯೋಜನೆಯ ಅಂಗೀಕಾರ

ಬೊಂಬಾಯಿ ಸಂಸ್ಥಾನದ ೩೩ ಕೋಟಿ ರೂ ವೆಚ್ಚದಲ್ಲಿ ... ಲಕ್ಷ ಕಿಲೋವಾಟು ಉತ್ಪಾದನೆಯಾಗುವ ಕೊಯ್ನಾ ವಿದ್ಯುಚ್ಛಕ್ತಿ ಯೋಜನೆಯನ್ನು ಭಾರತ ಸರ್ಕಾರದವರು ಮಂಜೂರು ಮಾಡಿರುತ್ತಾರೆ ... ಕೆಲಸವು ... ತಿಂಗಳಿಂದ ಆರಂಭವಾಗಲಿದೆ.

ವೀಣೆ ಮತ್ತು ಹರಿಕಥೆ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಬಳಿ ಇರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಕೃಷ್ಣ ಜಯಂತಿ ಪ್ರಯುಕ್ತ ನಾಳೆ ಮಧ್ಯಾಹ್ನ ... ಗಂಟೆಗೆ ವಿ|| ಡಿ ರಾಜೇಂದ್ರರವರ ವೀಣೆ ಮತ್ತು ಸಂಜೆ ... ಗಂಟೆಗೆ ವಿ ಎಸ್ ಕೃಷ್ಣಯ್ಯಂಗಾರ್ಯರ ಹರಿಕಥೆ ... ನಡೆಯುವುದು ... ಬೆಂಗ್ಳೂರು ...

ಅಂತರ ಸಂಸ್ಥಾನ ಮಾರಾಟ ತೆರಿಗೆ ರದ್ದಿಗೆ ಪ್ರಯತ್ನ

ಬೆಂಗಳೂರು ೨೯

ಮದ್ರಾಸ್ ಹೈದರಾಬಾದು ಮತ್ತು ತಿರುವಾಂಕೂರ್ ಸರ್ಕಾರಗಳಿಗೆ ... ಒರಿದು ಅಂತರ ಸಂಸ್ಥಾನೀಯ ಮಾರಾಟ ತೆರಿಗೆ ವಿಧಾನವನ್ನು ರದ್ದು ಗೊಳಿಸಲು ಯುಕ್ತವಾದುದು ... ಸಂಸ್ಥಾನದ ... ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಹೇಳಿದ್ದಾರೆ.

ವಿರಾಮ ವೇತನದ ಬಟವಾಡೆ ಬಗ್ಗೆ ಅಧಿಕಾರಿಗಳ ಸಭೆ

ನಿವೃತ್ತ ನೌಕರರ ವಿರಾಮ ವೇತನದ ಬಟವಾಡೆ ವಿಷಯವನ್ನು ... ಇತ್ಯರ್ಥಗೊಳಿಸಲು ಮತ್ತು ಈ ಬಗ್ಗೆ ಸೂಕ್ತ ವಿಧಾನವನ್ನು ... ಸಲು ... ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ... ಅಧಿಕಾರಿಗಳ ... ಸಭೆ ... ಇತರ ಅಧಿಕಾರಿಗಳ ... ನಡೆಯಿತು ... ಸಭೆ ... ಯಾವ ಅರ್ಜಿಯೂ ... ಇಲ್ಲವೆಂದು ... ಗೊತ್ತಾಯಿತು.

ಕೈರೊ ಘರ್ಷಣೆಯಲ್ಲಿ ೩೦ ಮಂದಿಗೆ ಗಾಯ

ಈಜಿಪ್ಟಿನ ರಾಜಧಾನಿ ಕೈರೋ ನಗರದಲ್ಲಿ ಪೊಲೀಸರಿಗೂ ಮುಸ್ಲಿಂ ಸಹೋದರರ ಸಂಸ್ಥೆಯವರಿಗೂ ನಡೆದ ಘರ್ಷಣೆಯಲ್ಲಿ ೩೦ ಮಂದಿಗೆ ಗಾಯವಾಗಿದೆ ... ಬಂಧಿಸಲಾಗಿದೆ ... ವಿರೋಧಿ ... ಸಂಸ್ಥೆಯ ... ಘರ್ಷಣೆಯಾಯಿತು.

ಫ್ರೆಂಚ್ ಪ್ರಧಾನಿಯೊಡನೆ ಕೃಷ್ಣಮೆನನ್ ಭೇಟಿ

ಭಾರತದ ಪ್ರತಿನಿಧಿಯೂ ವಿಶ್ವಸಂಸ್ಥೆಯ ... ಭಾರತದಲ್ಲಿರುವ ಫ್ರೆಂಚ್ ವಸಾಹತುಗಳ ಭವಿಷ್ಯವನ್ನು ಕುರಿತು ಸಪ್ಟೆಂಬರ್ ... ಫ್ರೆಂಚ್ ಪ್ರಧಾನಿ ಮೆಂಡೆಜ್ ಫ್ರಾನ್ಸರವರೊಡನೆ ಅತಿ ಮುಖ್ಯವಾದ ಮಾತುಕತೆ ... ನಡೆಸಲಿರುವರೆಂದು ವರದಿಯಾಗಿದೆ.

ಜಪಾನಿನಲ್ಲಿ ದಿನಕ್ಕೆ ೫೮ ಜನರ ಆತ್ಮಹತ್ಯೆ

ಜಪಾನಿನಲ್ಲಿ ದಿನಕ್ಕೆ ಸರಾಸರಿ ೫೮ ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವರೆಂದು ಹೇಳಲಾಗಿದೆ. ಕಳೆದ ಜನವರಿಯಿಂದ ಮೇ ತಿಂಗಳು ಅಂತ್ಯದವರೆಗೆ ... ಆತ್ಮಹತ್ಯೆ ಪ್ರಸಂಗಗಳು ನಡೆದಿವೆ ... ದಿನಕ್ಕೆ ... ಸರಾಸರಿ ಆಗುತ್ತಿವೆ.

ಬೇಕಾಗಿರುತ್ತೆ

ಗುಂಡ್ಲುಪೇಟೆಯಲ್ಲಿ ಹೊಸದಾಗಿ ಪ್ರಾರಂಭಿಸುವ ಶಿಶುವಿಹಾರಕ್ಕೆ ಅನುಭವಸ್ಥರಾದ ಓವ ನರ್ಸರಿ ಶಿಕ್ಷಣ (Nursery Training) ವನ್ನು ಪಡೆದಿರುವ ಉಪಾಧ್ಯಾಯಿನಿಯು ಮಾಹೆಯಾನ ೩೫-೦-೦ ರೂ ಸಂಬಳದ ಮೇಲೆ ಬೇಕಾಗಿರುತ್ತೆ. ಇಷ್ಟ ಉಳ್ಳವರು 10 9 54 ರ ಒಳಗೆ ತಮ್ಮ ವಯಸ್ಸು ವಿದ್ಯಾರ್ಹತೆ ಅನುಭವ ಇವುಗಳನ್ನೊಳಗೊಂಡ ಅರ್ಜಿಯನ್ನು ಬರೆದುಕೊಳ್ಳಬಹುದು. ಚುನಾಯಿತರಾದ ಅರ್ಜಿದಾರರು ಕೆಲಸದ ಮೇಲೆ ಹಾಜರಾಗುವುದಕ್ಕೆ ... ತಮ್ಮ ಸ್ವಂತ ಖರ್ಚಿನಲ್ಲಿ ಪ್ರತಿಷ್ಠಿತರವರನ್ನು ಇಂಟರ್‌ವ್ಯೂ ಮಾಡಬೇಕಾಗುತ್ತೆ ... ಬರುವ ಅರ್ಜಿಗಳನ್ನು ಗಮನಿಸಲಾಗುವುದಿಲ್ಲ.

ಎ ರಂಗರಾವ್, ಸೆಕ್ರೆಟರಿ, ಶಿಶುವಿಹಾರ ಗುಂಡ್ಲುಪೇಟೆ

ಮುಖಕ್ಕೆ ಕಪ್ಪು ಬಳಿದವರಿಂದ ಕಳ್ಳತನ

ಮೈಸೂರು ೨೦

ಮೊನ್ನೆ ರಾತ್ರಿ ಇಲ್ಲಿನ ಲದ ರಸ್ತೆಯಲ್ಲಿರುವ ಮಹಾರಾಣಿ ಕಾಲೇಜು ಫ್ರಾಕ್ಟರಿ ಆಂಡ್ ಬಾಯಿಲರ್ಸ್ ಇನ್ಸ್ಪೆಕ್ಟರ್ ಕಛೇರಿ ಮತ್ತು ಶ್ರೀ ರಾಮಸ್ವಾಮಿಯವರ ಮನೆಯಲ್ಲಿ ಕಳ್ಳತನದ ಪ್ರಯತ್ನವು ನಡೆಯಿತೆಂದು ವರದಿಯಾಗಿದೆ. ಮಧ್ಯ ರಾತ್ರಿಯಲ್ಲಿ ಕಳ್ಳರ ಗುಂಪೊಂದು ಮಹಾರಾಣಿ ಕಾಲೇಜಿನ ಬಾಗಿಲಿನ ಬೀಗವನ್ನು ಒಡೆದು ಒಳಕ್ಕೆ ನುಗ್ಗಲು ಪ್ರಯತ್ನಪಟ್ಟಿತು. ಅದು ಸಾಗದೆಹೋಗಿ, ಬಾಗಿಲಿನ ಗಾಜುಗಳನ್ನು ಒಡೆದರೆಂದೂ ಹತ್ತಿರದಲ್ಲಿ ಮಲಗಿದ್ದ ಕಾಲೇಜಿನ ಆಳುಗಳು ಎಚ್ಚರಗೊಳ್ಳಲು ಕಳ್ಳರು ಪರಾರಿಯಾದರೆಂದೂ, ಅದಾದನಂತರ ಫ್ರಾಕ್ಟರೀಸ್ ಮತ್ತು ಬಾಯಿಲರ್ಸ್ ಇನ್ಸ್ಪೆಕ್ಟರ್ ಕಛೇರಿ ಬೀಗ ಮುರಿದು ಒಳಕ್ಕೆ ನುಗ್ಗಿ ಮೇಜಿನ ಬಗ್ಗೆ ನಗದು ಪೆಟ್ಟಿಗೆಯನ್ನು ಕೀಳುವ ಪ್ರಯತ್ನ ನಡೆದಾಗ ಒಳಗಡೆ ಮಲಗಿದ್ದ ಕಛೇರಿಯ ಶ್ರೀ ಪ್ರಹ್ಲಾದರಾಯರು ಕಳ್ಳನೊಬ್ಬನ ಕೈಯಿಂದ ಬೀಸಿದಾಗ ಅವನು ಪರಾರಿಯಾದನೆಂದೂ, ಪಕ್ಕದ ಕೊಠಡಿಯಲ್ಲಿ ಟೈಪ್‌ರೈಟರು ಮತ್ತಿತರ ಸಾಮಾನುಗಳನ್ನು ಕದಿಯಲೆತ್ನಿಸ್ತ ... ಓಡಿಹೋಗಿರೆಂದೂ ಹೇಳಲಾಗಿದೆ. ಕಳ್ಳರು ಮುಖಕ್ಕೆ ಕಪ್ಪು ಬಳಿದುಕೊಂಡು ಕೆಂಪು ಬಣ್ಣದ ಲಂಗೋಟಿಯನ್ನು ಮಾತ್ರ ಹಾಕಿಕೊಂಡಿದ್ದರೆಂದು ತಿಳಿದುಬಂದಿದೆ. ಇದಾದ ಸ್ವಲ್ಪ ಹೊತ್ತಿನಲ್ಲಿ ಅದೇ ರಸ್ತೆಯಲ್ಲಿ ಶ್ರೀ ರಾಮಸ್ವಾಮಿಯವರ ಮನೆಯಲ್ಲಿ ಕೂಡಾ ಕಳವಾಯಿತು. ಸಂಬಂಧವಾದ ಗಳು ಕಳುವಾಗಿವೆ. ಪೊಲೀಸರು ತನಿಖೆ ನಡೆಸುತ್ತಿರುವರು.

ಗುಡಿ ಪೂಜೆ ಬಗ್ಗೆ ವ್ಯಾಜ್ಯದಲ್ಲಿ ಪ್ರತಿಬಂಧಕಾಜ್ಞೆ

ಹೊನ್ನಾಳಿ ತಾಲ್ಲೂಕಿನ ಅರಬಗಟ್ಟ ಹಳ್ಳಿಯ ಬಸವಣ್ಣದೇವರ ಗುಡಿಯಲ್ಲಿ ಪೂಜೆ ಮತ್ತು ಅಧಿಷ್ಠಾನದ ಹಕ್ಕಿನ ಬಗ್ಗೆ ಆ ಊರಿನ ಎರಡು ಗುಂಪುಗಳಲ್ಲಿ ವ್ಯಾಜ್ಯವಾದುದರಿಂದ, ಶಾಂತಿ ಭಂಗವಾಗುವುದೆಂದು ಅಮಲ್ದಾರ್-ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಮಧ್ಯಾಹ್ನ ... ಸಂಗೀತ ... ಸಂಜೆ ... ವಾರ್ತೆಗಳು ... ಸಂಗೀತ ... ರಾತ್ರಿ ... ಲಕ್ಷಣ ಗೀತೆ, ಸುಲಲಿತ ... ಪ್ರಬಂಧ ... [illegible]

ರಾಷ್ಟ್ರೀಯ ಚೀನರ ದ್ವೀಪದ ರಕ್ಷಣೆಗೆ ಅಮೇರಿಕಾ ಹೋಗುವುದಿಲ್ಲ

ಕಮ್ಯೂನಿಸ್ಟ್ ಚೀನವು ಫಾರ್ಮೋಸ ವಶದ ರಾಷ್ಟ್ರೀಯ ಚೀನರ ದ್ವೀಪವೊಂದರ ಮೇಲೆ ಆಕ್ರಮಣವನ್ನು ನಡೆಸಿದರೆ ಅದರ ರಕ್ಷಣೆಗೆ ಅಮೇರಿಕಾ ಯುದ್ಧ ಹಡಗುಗಳು ಕಾರ್ಯಾಚರಣೆ ನಡೆಸುವುದಿಲ್ಲವೆಂದು ಅಮೇರಿಕದ ನೌಕಾ ಇಲಾಖಾಧಿಕಾರಿಗಳು ತಿಳಿಸಿರುತ್ತಾರೆ. ದ್ವೀಪದಲ್ಲಿರುವ ೫೦ ಸಾವಿರ ರಾಷ್ಟ್ರೀಯರು ಆಕ್ರಮಣವನ್ನು ಎದುರಿಸಲು ಶಕ್ತರಾಗಿರುವರೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಪ್ರವಾಹ ಪೀಡಿತರಿಗೆ ವಿಮಾನದ ಮೂಲಕ ಆಹಾರ

ಪಶ್ಚಿಮ ಬಂಗಾಳದ ಜಲಪೈಗುರಿ ಪ್ರದೇಶದಲ್ಲಿರುವ ಪ್ರವಾಹ ಪೀಡಿತ ಜನರಿಗೆ ಸರ್ಕಾರದವರು ಆಹಾರದ ಪ್ಯಾಕೆಟ್ಟುಗಳನ್ನು ವಿಮಾನದ ಮೂಲಕ ಒದಗಿಸುತ್ತಿರುವರು. ಬಂಗಾಳಾ ಹಳ್ಳಿಗರ ಒಂದು ವಾರದ ಪ್ರವಾಹದಲ್ಲಿ ... ಕೋಟಿ ರೂ ನಷ್ಟ ಹೊಂದಿರುವರೆಂದು ಹೇಳಲಾಗಿದೆ.

ಆಯುರ್ವೇದದ ಕಾಲೇಜಿನಲ್ಲಿ ಫ್ರೆಂಚ್ ವಿಷಯ

ರಾಜಧಾನಿಯ ನಿವಾಸಿಗಳಾದ ಶ್ರೀ ಬಿ ವಿ ಶ್ರೀನಿವಾಸರವರು ಇಲ್ಲಿನ ಆಯುರ್ವೇದದ ಕಾಲೇಜಿನ ಪ್ರಿನ್ಸಿಪಾಲರಿಗೆ ಬರೆದಿರುವ ಪತ್ರದಲ್ಲಿ ಫ್ರೆಂಚ್ ಪುಸ್ತಕಗಳನ್ನು ಪಡೆಯಲು ಕಳೆದ ವರ್ಷ ಉತ್ತೀರ್ಣರಾದವರು ಮಾತ್ರ ಅರ್ಜಿ ಹಾಕಿಕೊಳ್ಳಬೇಕೆಂದು ಪ್ರಿನ್ಸಿಪಾಲರು ಪ್ರಕಟಿಸಿರುವುದರಿಂದ ಒಂದು ಅಥವಾ ಎರಡು ವಿಷಯಗಳಲ್ಲಿ ಫೇಲಾದವರಿಗೆ ತೊಂದರೆಯಾಗುತ್ತದೆಂದೂ, ವಿದ್ಯಾರ್ಥಿನಿಯರಿಗೂ ತುಂಬಾ ಅನ್ಯಾಯವಾಗುವುದೆಂದೂ, ಸೆಪ್ಟೆಂಬರ್ ಪರೀಕ್ಷೆಯ ಫಲಿತಾಂಶವನ್ನು ತಿಳಿದುಕೊಂಡು ನಂತರ ಅಂತಹವರ ವಿಷಯವನ್ನು ತೀರ್ಮಾನಿಸಬಹುದೆಂದೂ ತಿಳಿಸಿರುತ್ತಾರೆ.

SREE GANESHA

TALKIES

From 31-8-54 For 2 days

Festival's Grand ATTRACTION

Alexander Korda's

THE FOUR FEATHERS

(In Technicolor)

The Most Exciting Romantic Picturesque Film

Starring—Ralph Richardson, John Clements & June Duprez

FROM 2—9 1954

THAT DANGEROUS AGE

Featuring—Myrna Loy and Richard Greene

ಮೈಸೂರು ದಸರಾ ವಸ್ತು ಪ್ರದರ್ಶನ 1954

(ತಾ|| 27—9—54 ರಿಂದ ತಾ|| 14—10—54 ರ ವರೆಗೆ)

ಈ ಸಲ ದಸರಾ ಮೆರವಣಿಗೆಯು ನಡೆಯುವುದರಿಂದ ವಸ್ತು ಪ್ರದರ್ಶನವು ವಿಶೇಷ ಆಕರ್ಷಕವಾಗಿರುವುದು

★

ಸ್ಟಾಲುಗಳಿಗೆ ಅರ್ಜಿ ಕಳುಹಿಸಲು ತಾ|| 10—9—1954 ರ ವರೆಗೆ ಕಾಲಾವಕಾಶ ಹೆಚ್ಚಿಸಲಾಗಿದೆ

ಇನ್ನು ಕೆಲವು ಸ್ಟಾಲುಗಳು ಮಾತ್ರ ಉಳಿದಿವೆ ಕೂಡಲೇ ನಿಮ್ಮ ಸ್ಟಾಲುಗಳನ್ನು ಮೀಸಲಾಗಿರಿಸಿ

★

ಇತರ ವಿವರಗಳಿಗೆ ಕಾರ್ಯದರ್ಶಿ, ಮೈಸೂರು ದಸರಾ ವಸ್ತು ಪ್ರದರ್ಶನ, ಸಮಿತಿ, ಮೈಸೂರು ಇವರಿಗೆ ಬರೆಯಿರಿ

ಮೈಸೂರು
ತಾ|| 29 8 54

ವಿ ಎಸ್ ಕೃಷ್ಣಯ್ಯಂಗಾರ್,
ಪ್ರಧಾನ ಕಾರ್ಯದರ್ಶಿ,
ವಸ್ತು ಪ್ರದರ್ಶನ ಸಮಿತಿ, ಮೈಸೂರು

Edited, Printed and Published by A R Nagarajan at Sadhvi Press D S ...

ರಿಜಿಸ್ಟ್ರೀ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
—
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI TUESDAY 31-8-1954 ಮೈಸೂರು ಮಂಗಳವಾರ ೩೧-೮-೧೯೫೪ [ಸಂಚಿಕೆ : ೨೦

ಕೇಂದ್ರ ಕಾರ್ಮಿಕ ಮಂತ್ರಿ ವಿ. ವಿ. ಗಿರಿಯವರ ರಾಜೀನಾಮೆ

ಫಿಲೋಮಿನಾ ಕಾಲೇಜು ವಿದ್ಯಾರ್ಥಿಗಳಿಂದ ದೇಹಶ್ರಮದ ಅಭ್ಯಾಸ

ಬೆಂಗಳೂರು ೩೧

ಸಂಸ್ಥಾನ ಸರ್ಕಾರದವರು ಜಾರಿಗೆ ತರಲಿರುವ ವಿದ್ಯಾಭ್ಯಾಸದ ಹೊಸ ಧೋರಣೆಗೆ ಸಂಬಂಧಿಸಿದಂತೆ ದೇಹಶ್ರಮದ ಅಭ್ಯಾಸವನ್ನು ಹೊಂದಲು ರಾಜಧಾನಿಯಲ್ಲಿರುವ ಸೆಂಟ್ ಫಿಲೋಮಿನಾ ಕಾಲೇಜು ವಿದ್ಯಾರ್ಥಿಗಳು ಮುಂದೆ ಬಂದಿರುತ್ತಾರೆಂದು ಸರ್ಕಾರದ ಪ್ರಕಟಣೆಯಿಂದ ತಿಳಿಸಿರುತ್ತದೆ ಶ್ರಮ ಪಡುವ ವಿದ್ಯಾರ್ಥಿಗಳಿಗೆ ಕೆಲಸಕ್ಕೆ ತಕ್ಕಷ್ಟು ಹಣ ಅಥವಾ ಧಾನ್ಯವನ್ನು ಕೊಡಲಾಗುವುದು ಕಾಲೇಜು ಹಿಂಭಾಗದಲ್ಲಿರುವ ಹಳೇ ಮೈಸೂರು ರಸ್ತೆಗೆ ಸಿಮೆಂಟ್ ಹಾಕುವ ಸಂಬಂಧದಲ್ಲಿ ವಿದ್ಯಾರ್ಥಿಗಳು ಸಹಾಯ ಮಾಡುವರು

ಪ್ರವಾಹದಲ್ಲಿ ನೊಂದವರಿಗಾಗಿ ವಿದೇಶಗಳಿಂದ ಸಹಾಯ

ಈಶಾನ್ಯ ಭಾರತದಲ್ಲೂ, ಪೂರ್ವ ಪಾಕಿಸ್ತಾನದಲ್ಲೂ ಇತ್ತೀಚೆಗೆ ಉಂಟಾಗಿರುವ ಪ್ರವಾಹದಲ್ಲಿ ನೊಂದ ಅನೇಕರಿಗೆ ಪರಿಹಾರವನ್ನೀಗ ವಿದೇಶಗಳಿಂದ ಸಹಾಯವು ಬರುತ್ತಿದೆ ಭಾರತಕ್ಕೆ ರಷ್ಯವು ೧ ಲಕ್ಷ ರೂ ಸಹಾಯ ನೀಡಲಿದೆ ಬ್ರಿಟಿಷ್ ಸರ್ಕಾರದವರು ನೇಪಾಳ ಭಾರತ ಮತ್ತು ಪೂರ್ವ ಪಾಕಿಸ್ತಾನಗಳಿಗೆ ೧೩ ಲಕ್ಷ ರೂ ಸಹಾಯವನ್ನು ಒದಗಿಸಿರುತ್ತಾರೆ ಬರ್ಮಾ ಸರ್ಕಾರದವರು ಭಾರತಕ್ಕೆ ೨೦೦ ಟನ್ ಅಕ್ಕಿಯನ್ನು ಕೊಡಲು ಮುಂದೆ ಬಂದಿರುತ್ತಾರೆ ವಾಷಿಂಗ್ಟನ್ನಿನ ಕ್ಯಾಥೊಲಿಕ್ ಸಂಘದವರು ೧½ ಲಕ್ಷ ರೂ ಬೆಲೆಯ ೪೦೦ ಬ್ಯಾರಲ್ ಹಾಲನ್ನು ಕೊಟ್ಟಿರುತ್ತಾರೆ

ಶೃಂಗೇರಿಗೆ ನೆಹರೂ ಭೇಟಿ ?

ಶೃಂಗೇರಿಗೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಭೇಟಿ ಕೊಟ್ಟಾಗ ಹಿರಿಯ ಸ್ವಾಮಿಗಳೊಡನೆ ಮಾತನಾಡುತ್ತಾ ನವೆಂಬರ್ ತಿಂಗಳಲ್ಲಿ ಪ್ರಧಾನಿ ನೆಹರೂರವರು ಶೃಂಗೇರಿಗೆ ಭೇಟಿ ಕೊಡುವಂತೆ ತಾವು ಅವರಿಗೆ ತಿಳಿಸುವುದಾಗಿ ಹೇಳಿದರೆಂದು ಗೊತ್ತಾಗಿದೆ ಪ್ರಧಾನಿ ನೆಹರೂರವರು ನವೆಂಬರಿನಲ್ಲಿ ಕರ್ನಾಟಕದ ಪ್ರವಾಸ ಕೈಗೊಳ್ಳುವರೆಂದು ಹೇಳಲಾಗಿದೆ

ಗಣಪತಿ ಉತ್ಸವ

ರಾಜಧಾನಿಯ ಉತ್ತರ ಕರ್ನಾಟಕ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೪ ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ಶ್ರೀ ಗಣೇಶನ ಹಬ್ಬವನ್ನು ಆಚರಿಸಲಾಗುವುದು ಮಹಾರಾಜಾ ಕಾಲೇಜಿನ ಶ್ರೀ ಎಂ ಯಾಮುನಾಚಾರ್ಯರು ಭಾರತೀಯ ಸಂಸ್ಕೃತಿಯ ವಿಷಯವಾಗಿ ಭಾಷಣ ಮಾಡುವರು ಶ್ರೀ [illegible]ಡಿಯವರು ಅಧ್ಯಕ್ಷತೆ ವಹಿಸುವರು.

ಸರಸ್ವತೀ ಶಿಶುವಿಹಾರದ ಆರಂಭೋತ್ಸವ

ರಾಜಧಾನಿಯ ಸರಸ್ವತೀಪುರದ ಸರಸ್ವತಿ ಭಂಡಾರದ ಆಶ್ರಯದಲ್ಲಿ ನಡೆಯಲಿರುವ ಸರಸ್ವತಿ ಶಿಶುವಿಹಾರದ ಆರಂಭೋತ್ಸವವನ್ನು ನಾಳೆ ಬೆಳಿಗ್ಗೆ ೯|| ಗಂಟೆಗೆ ಪೌರಸಭಾಧ್ಯಕ್ಷ ಶ್ರೀ ಪುಟ್ಟಸ್ವಾಮಿಯವರು ನೆರವೇರಿಸುವರು

ಧಾರ್ಮಿಕ ಭಿಕ್ಷೆಯ ನಿಷೇಧಕ್ಕಾಗಿ ಸಲಹೆ

ಬೆಂಗಳೂರು ೩೧

ಮತ ಧರ್ಮ ಪದ್ಧತಿಯನ್ನನುಸರಿಸಿ ಜನರಿಗೆ ಆಹಾರ ಧಾನ್ಯ ಬಟ್ಟೆ ಮತ್ತು ದುಡ್ಡನ್ನು ಧಾರ್ಮಿಕ ಭಿಕ್ಷುಗಳಿಗೆ ಕೊಡುತ್ತಿರುವ ಸಂಪ್ರದಾಯವನ್ನು ದುರುಪಯೋಗಪಡಿಸಿಕೊಂಡು ದೃಢಕಾಯರಾದವರು ಸಾಧು ಅಥವಾ ಫಕೀರರ ವೇಷ ಧರಿಸಿ ಯಾಚನೆ ಮಾಡುವುದನ್ನು ಕಾನೂನು ಮೂಲಕ ನಿಷೇಧಿಸುವಂತೆ ಸರ್ಕಾರಕ್ಕೆ ಸಮಿತಿಯೊಂದು ಶಿಫಾರಸು ಮಾಡಿರುತ್ತದೆ ಈ ಬಗ್ಗೆ ನಿಷೇಧ ಹಾಕುವುದಲ್ಲದೆ, ವಿದ್ಯಾರ್ಜನೆಗಾಗಿ ಯಾಚನೆಗೆ ಹೋಗುವ ಬಡ ವಿದ್ಯಾರ್ಥಿಗಳ ಬಗ್ಗೆಯೂ ಕನಿಕರ ತೋರಬಾರದೆಂದೂ ಸಮಿತಿಯು ತಿಳಿಸಿದೆ

೭ನೇ ತಾರೀಕಿನಿಂದ ಗೋವಾ ಸಂಧಾನಕ್ಕೆ ಪೋರ್ಚುಗಲ್ ಸಲಹೆ

ಭಾರತದಲ್ಲಿರುವ ಪೋರ್ಚುಗೀಸ್ ವಸಾಹತುಗಳ ಗಡಿಯನ್ನು ಉಲ್ಲಂಘನೆ ಮಾಡಿರುವ ಆಪಾದನೆಗಳನ್ನು ಕುರಿತು ಮಾತುಕತೆಗಳನ್ನು ಇದೇ ಸೆಪ್ಟೆಂಬರ್ ೭ ನೇ ತಾ|| ನಿಂದ ನಡೆಸಬಹುದೆಂದು ಪೋರ್ಚುಗೀಸ್ ಸರ್ಕಾರದವರು ಭಾರತದ ವಿದೇಶಾಂಗ ಇಲಾಖೆಗೆ ಸೂಚಿಸಿರುತ್ತಾರೆ ಪೋರ್ಚುಗೀಸರ ಸಾರ್ವಭೌಮತ್ವವನ್ನು ರಕ್ಷಿಸುವ ದೃಷ್ಟಿಯಿಂದ, ಎರಡೂ ದೇಶಗಳಿಗೆ ಒಪ್ಪುವಂತೆ ಪರಸ್ಪರ ಸಂಬಂಧಕ್ಕೆ ಸಂಬಂಧಿಸಿದ ಪ್ರಶ್ನೆಯನ್ನೂ ಸಹ ಚರ್ಚಿಸಬಹುದೆಂದೂ ಪೋರ್ಚುಗೀಸರು ತಿಳಿಸಿರುತ್ತಾರೆ

ಲಲಿತ ಕಲೆಗೆ ಕೇಂದ್ರ ಸರ್ಕಾರದ ಸಹಾಯ

ನಾಟಕ, ನೃತ್ಯ ಮತ್ತು ಸಂಗೀತಗಳನ್ನು ಏರ್ಪಡಿಸುವ ಸಂಸ್ಥೆ ಮತ್ತು ವ್ಯಕ್ತಿಗಳು ಕೇಂದ್ರ ಸರ್ಕಾರದ ಹಣ ಸಹಾಯ ಪಡೆಯಲು ಅಕ್ಟೋಬರ್ ೭ ನೇ ತಾ|| ವರೆಗೆ ಅರ್ಜಿ ಹಾಕಿಕೊಳ್ಳಬಹುದೆಂದು ಸೂಚಿಸಲಾಗಿದೆ

ಗೋವಾಕ್ಕೆ ಹೆಚ್ಚಿನ ಸೈನ್ಯ

ಪೋರ್ಚುಗೀಸರಿಗೆ ಸೇರಿದ ಗೋವಾಕ್ಕೆ ಹೆಚ್ಚು ಸೈನ್ಯಗಳನ್ನು ಕಳುಹಿಸಲಾಗಿರುವುದೆಂದೂ ಅವು ಗೋವಾದಲ್ಲಿ ಇಳಿದಿರುವುದಾಗಿಯೂ ಪೋರ್ಚುಗಲ್ಲಿನ ರಕ್ಷಣಾ ಇಲಾಖೆಯು ಪ್ರಕಟಿಸಿದೆ

ನಿದ್ರಿಸುತ್ತಿದ್ದಾಗ ಕತ್ತಿನ ಸರದ ಕಳುವು

ರಾಜಧಾನಿಯ ಒಂಟಿಕೊಪ್ಪಲಿನ ಗೋಕುಲದಲ್ಲಿರುವ ರೇಷ್ಮೆಯ ಇಂಜಿನಿಯರ್ ಶ್ರೀ ಸಿ ಕೆ ನರಸಿಂಹಮೂರ್ತಿಯವರ ಮನೆಯಲ್ಲಿ ಮೊನ್ನೆ ರಾತ್ರಿ ಅವರು, ಅವರ ಪತ್ನಿ ಮತ್ತು ಮಗು ಮಲಗಿದ್ದಾಗ ಯಾರೋ ಬಾಗಿಲನ್ನು ಬಲವಾಗಿ ತಳ್ಳಿ ಒಳಗಡೆ ಪ್ರವೇಶಿಸಿ ಹೆಂಗಸಿನ ಕತ್ತಿನಲ್ಲಿದ್ದ ಬಂಗಾರದ ಸರವನ್ನು ಕಿತ್ತುಹಾಕಿ ಕೈಗೆ ಸಿಕ್ಕಿದ ಚೂರನ್ನು ತೆಗೆದುಕೊಂಡು ಹೋಗಿರುವುದಾಗಿ ವರದಿಯಾಗಿದೆ ಕೊಠಡಿಗೆ ಕಳ್ಳನು ಪ್ರವೇಶಿಸಿದಾಗ ಮನೆಯಾತನಿಗೆ ಎಚ್ಚರವಾಗಲು ಅವನು ಮುಖವನ್ನು ಒತ್ತಿ ಹಿಡಿದು ಕತ್ತಿಗೆ ಕೈ ಹಾಕಿದನೆಂದು ಹೇಳಲಾಗಿದೆ ಬೆರಳಿಗೆ ಸ್ವಲ್ಪ ಗಾಯವಾಗಿದೆ ಪೊಲೀಸರು ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುತ್ತಾರೆ

ಕೇಂದ್ರ ಕಾರ್ಮಿಕ ಮಂತ್ರಿ ವಿ.ವಿ. ಗಿರಿಯವರ ರಾಜೀನಾಮೆ

ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖಾ ಮಂತ್ರಿ ವಿ ವಿ ಗಿರಿಯವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ ಬ್ಯಾಂಕು ವ್ಯಾಜ್ಯದಲ್ಲಿ ಕಾರ್ಮಿಕ ಅಪೆಲೇಟ್ ನ್ಯಾಯಮಂಡಲದ ತೀರ್ಪನ್ನು ಕೇಂದ್ರ ಸರ್ಕಾರದವರು ಬದಲಾಯಿಸಿದ ಸಂಬಂಧವಾಗಿ ಅವರಿಗೂ, ಕೇಂದ್ರ ಮಂತ್ರಿ ಮಂಡಲಕ್ಕೂ ಭಿನ್ನಾಭಿಪ್ರಾಯ ಬಂದು ಅದರ ಮೇಲೆ ಅವರು ರಾಜೀನಾಮೆ ಕೊಟ್ಟಿರುವರು ಕೇಂದ್ರ ಸರ್ಕಾರದ ಕಾರ್ಮಿಕ ನೀತಿಯ ಬಗ್ಗೆ ಮುಖ್ಯವಾದ ವಿಷಯಗಳಲ್ಲಿ ಅವರಿಗೂ ಇತರ ಮಂತ್ರಿಗಳಿಗೂ ಭಿನ್ನಾಭಿಪ್ರಾಯವು ಮೊದಲಿನಿಂದಲೂ ಇತ್ತು ಕೈಗಾರಿಕಾ ಸಂಬಂಧದ ಮಸೂದೆಯನ್ನು ಶಾಸನ ಮಾಡಲು ನಿರ್ಧರಿಸುತ್ತಿರುವುದಕ್ಕೂ ಗಿರಿಯವರ ಆಕ್ಷೇಪಣೆಯಿತ್ತು

ನ್ಯಾಯಮಂಡಲದ ತೀರ್ಪಿನ ಬದಲಾವಣೆ ವಿಷಯವನ್ನು ಕುರಿತು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಲೋಕಸಭೆಯಲ್ಲಿ ಇಂದು ಮಾತನಾಡಿ, ಒಂದು ವರ್ಷದ ನಂತರ ಪರಿಸ್ಥಿತಿಯ ವ್ಯತ್ಯಾಸವಾದರೆ ಈಗ ಮಾಡಿರುವ ಬದಲಾವಣೆ ಬಗ್ಗೆ ಬೇರೆ ನಿರ್ಧಾರವನ್ನು ಕೈಗೊಳ್ಳಬಹುದೆಂದು ಆಶ್ವಾಸನೆಯಿತ್ತರು ಹಲವು ಬ್ಯಾಂಕ್ ಗಳು ಈ ತೀರ್ಪಿನ ಅಂಶಗಳನ್ನು ಜಾರಿಗೆ ತರಲು ಸಾಧ್ಯವಿದ್ದರೂ ಇತರ ಅದೇ ವರ್ಗದ ಮತ್ತು ಇನ್ನೂ ಚಿಕ್ಕ ಸಂಸ್ಥೆಗಳಲ್ಲಿ ಅವನ್ನು ಜಾರಿಗೆ ಕೊಡಲು ಸಾಧ್ಯವಿಲ್ಲವೆಂದು ಹಣಕಾಸಿನ ಮಂತ್ರಿಯು ನುಡಿದಿರುತ್ತಾರೆ

ಸೂಚನೆ

ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಭದ್ರತಾಸಮಿತಿಗೆ ಕಾಶ್ಮೀರ ಪ್ರಶ್ನೆ ಒಪ್ಪಿಸಲು ಪಾಕಿಸ್ತಾನದ ನಿರ್ಧಾರ

ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ಪುನಃ ಒಪ್ಪಿಸಲು ಪಾಕಿಸ್ತಾನ ಸರ್ಕಾರದವರು ನಿರ್ಧರಿಸಿರುವರೆಂದೂ, ಸಾರ್ವಜನಿಕ ಅಭಿಪ್ರಾಯವನ್ನು ಮನ್ನಿಸಿ ಹಾಗೆ ಮಾಡಲಾಗುವುದೆಂದೂ ತಿಳಿದುಬಂದಿದೆ

ಗುಲ್ಬರ್ಗಾ ಘರ್ಷಣೆಯಲ್ಲಿ ೩೦ ಜನರ ಬಂಧನ

ಗುಲ್ಬರ್ಗದ ಗಣಪತಿ ದೇವಾಲಯದ ಮೇಲೆ ಪಾಕಿಸ್ತಾನ ಧ್ವಜವು ಹಾರಾಡುತ್ತಿದ್ದ ಸಂಬಂಧದಲ್ಲಿ ಆದ ಘರ್ಷಣೆ ಅಂಗವಾಗಿ ಇದುವರೆಗೆ ೩೦ ಜನರು ಬಂಧಿತರಾಗಿರುವರು ಅಲ್ಲಿ ನೆನ್ನೆಯೂ ಸಹ ಸಂಜೆಯಿಂದ ಈ ಬೆಳಿಗ್ಗೆ ವರೆಗೆ ಕರ್ಫ್ಯೂವನ್ನು ವಿಧಿಸಲಾಗಿತ್ತು

ಆಗರ-ಮಾಂಬಳ್ಳಿ, ಪೌರಸಭೆ ಅಧ್ಯಕ್ಷರು

ಶ್ರೀ ಬಿ ಚಿಕ್ಕಣ್ಣಸ್ವಾಮಿಯವರು ಯಳಂದೂರು ತಾಲ್ಲೂಕು ಆಗರ-ಮಾಂಬಳ್ಳಿ ಪೌರಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ

ಪೂನಾ ಘಟಿಕೋತ್ಸವದಲ್ಲಿ ಮಿರ್ಜಾರವರ ಭಾಷಣ

ಸ್ವಂ ಸು ತಂತಿ] ಬೆಂಗಳೂರು ೩೧

ಬರುವ ತಿಂಗಳು ೩ನೇ ತಾರೀಕು ಪೂನಾ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದ ಭಾಷಣವನ್ನು ಸಂಸ್ಥಾನದ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಮಾಡುವರು

○ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರು ಬರುವ ತಿಂಗಳು ನಾಲ್ಕನೇ ತಾರೀಕು ಸಂಸಾರ ಸಮೇತ ಇಲ್ಲಿಗೆ ಆಗಮಿಸಿ ಕೆಲವು ಕಾಲ ಬಿಡಾರ ಮಾಡುವರು

○ ವಿಶ್ವವಿದ್ಯಾಲಯದ ಮಾಜಿ ವೈಸ್ ಛಾನ್ಸೆಲರಾದ ಶ್ರೀ ಕಸ್ತೂರಿರಂಗಚೆಟ್ಟಿಯವರು ಕಳೆದ ಜೂನ್ ತಿಂಗಳು ೧೮ ನೇ ತಾರೀಕು ಇಲ್ಲಿನ ಹಿಮಾಯತುಲ್ಲಾ ಖಾನ್ ಎಂಬುವರ ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತುಮಾಡಿ ಕೊಂಡು ಹೋಗುತ್ತಿದ್ದಾಗ ಆತನು ನಿಂದನೆಯ ಮಾತುಗಳನ್ನಾಡಿದ ಬಗ್ಗೆ ಶ್ರೀ ಚೆಟ್ಟಿಯವರು ಪೊಲೀಸರಿಗೆ ದೂರು ಕೊಟ್ಟು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು ನೆನ್ನೆ ಈ ಬಗ್ಗೆ ವಿಚಾರಣೆ ನಡೆದು ಶ್ರೀ ಕಸ್ತೂರಿರಂಗ ಚೆಟ್ಟಿಯವರು ಸಾಕ್ಷ್ಯ ನುಡಿದರು

ಇರಿತದಿಂದ ಮೇಸ್ತ್ರಿಯ ಮರಣ

ಮದುರೆ ಮಿಲ್ಲಿನ ನೂಲುವ ಶಾಖೆಯಲ್ಲಿ ಮೇಸ್ತ್ರಿಯಾಗಿರುವ ರಾಜುಪಿಳ್ಳೆ ಎಂಬಾತನನ್ನು ಕೂಲಿಯವನೊಬ್ಬನು ಇರಿದ ಪರಿಣಾಮವಾಗಿ ಮೇಸ್ತ್ರಿಯು ಮೃತಪಟ್ಟಿರುತ್ತಾನೆ ಮತ್ತೊಬ್ಬ ಮೇಸ್ತ್ರಿಯ ಮುಖದ ಮೇಲೂ ಆತನು ಗಾಯ ಮಾಡಿರುವನೆಂದು ಹೇಳಲಾಗಿದೆ ಹಂತಕನು ಪರಾರಿಯಾಗಿರುತ್ತಾನೆ ಕೆಲಸದಲ್ಲಿ ಅಲಕ್ಷ್ಯ ತೋರಿಸಲಾಗಿದೆಯೆಂದು ಕಾರ್ಮಿಕನಿಗೆ ಮೇಸ್ತ್ರಿಯು ಎಚ್ಚರಿಕೆಯಿತ್ತ ಪರಿಣಾಮವಾಗಿ ಆತನು ಈ ಕೃತ್ಯ ನಡೆಸಿದನೆಂದು ಗೊತ್ತಾಗಿದೆ

ಉಪಾಧ್ಯಾಯರ ಕಾಲೇಜಿನ ಸಂಘದ ಆರಂಭ ಭಾಷಣ

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಸಂಘದ ಆರಂಭ ಭಾಷಣವನ್ನು ವೈಸ್ ಛಾನ್ಸೆಲರಾದ ಶ್ರೀ ವಿ ಎಲ್ ಡಿಸೋಜಾರವರು ನಾಳೆ ಸಂಜೆ ೫|| ಗಂಟೆಗೆ ಕಾಲೇಜಿನಲ್ಲಿ ಮಾಡುವರು ಸಂ|| ರ|| ಟಿ ಚೌಡಯ್ಯನವರ ಪಿಟೀಲು ಏರ್ಪಾಡಾಗಿದೆ ಶ್ರೀ ಎ. ಸಿ ದೇವೇಗೌಡರು ಅಧ್ಯಕ್ಷತೆ ವಹಿಸುವರು

ಮಹಿಳೆ ನಡತೆ ಬಗ್ಗೆ ಸಂಶಯಪಟ್ಟು ಕತ್ತರಿ ಪ್ರಹಾರ ನಡೆಸಿದ ಆಪಾದನೆ

ಕೃಷ್ಣರಾಜಪೇಟೆ ನಿವಾಸಿ ಮಹಮದ್ ಗೌಸ್ ಎಂಬಾತನ ೧೮ ವರ್ಷದ ಪತ್ನಿ ಫಾತಿಮಾ ಎಂಬುವಳ ನಡತೆಯು ಸರಿಯಾಗಿಲ್ಲವೆಂದು ಗಂಡನೂ, ಅಬ್ದುಲ್ ಖಾದರ್ ಮತ್ತು ಅಬ್ದುಲ್ ರಷೀದ್ ಎಂಬುವರೂ ಆಕೆಯ ಮರ್ಮಸ್ಥಾನಕ್ಕೆ [illegible] ಗಾಯ ಪಡಿಸಿದರೆಂಬ ಆಪಾದನೆ ಸಂಬಂಧವಾಗಿ ಅವರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ

ಪುರಸಭೆಯಲ್ಲಿ ವಿರೋಧ ಪಕ್ಷದವರ ಸಭಾ ಪರಿತ್ಯಾಗ

ಕಿವಿನಸ್ಸು ಅಧಿಕಾರಿಗಳಿಗೆ ಹೆಚ್ಚಿನ ಸಂಭಾವನೆ ಕೊಡಲು ಪ್ರತಿಭಟನೆ

ಮೈಸೂರು ...

[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

2—9—54

[illegible]

ಭಾರತಕ್ಕೆ ಕಾಂಬೋಡಿಯಾ ದೊರೆ ಭೇಟಿ

[illegible]

ಮೈಸೂರು ಪೇಟೆ ಧಾರಣೆ

[illegible]

ರಣಜಿತ್ ★ 1-9-54 ನೇ ಬುಧವಾರದಿಂದ ಪ್ರಾರಂಭ
ದಿನವಹಿ ಮೂರು ಆಟಗಳು
ಸೊಹ್ರಾಬ್ ಮೋದಿಯವರ
ವಾರಿಸ್ ★ WARIS
ಸಂಗೀತ- ಅನಿಲ್ ಬಿಸ್ವಾಸ್
[illegible]

ಗರೂಡ ಸದಾಶಿವರಾಯರ ನಿಧನ

[illegible]

CITY MUNICIPAL OFFICES MYSORE

Dated 19th August 1954

NOTIFICATION

Sealed tenders are invited for supply of the below mentioned articles required for the Depressed Class Amelioration work from intending suppliers upto 4 P M on Friday the 10th September 1954 Each tender should be accompanied with a chellan for having deposited a sum of Rs 200 in the Municipal Engineer's office as earnest money for this supply The tender will be received by the Municipal Engineer or his authorised deputy and opened by him on Saturday the 11th September 1954 between 11 A M and 12 noon in presence of such of those tenderers who may be present The tenders may be only for supply of tiles, or for wooden articles or for both The supply of articles should be made at the premises of the Municipal Office and the rates quoted should be inclusive of all the rates and charges that are proposed to be levied by the intending supplier and the supplies should be completed within 15 days from the date of issue of supply order The articles to be supplied should be in strict conformity with the specification and quality and should be got certified before delivery by the departmental staff to be deputed for this purpose by the Municipal Engineer

PARTICULARS OF ARTICLES REQUIRED

1 Jungle Wood rafters made out of any one of the following varieties of wood — Mathi Nandi, Honne, Halasu, Bevu Bilavara Tholasalu Ganda gudda 2 1/2 " x 4 section in lengths of 8 to 12' 1,000 Cft

2 Do reapers in the section 2 x1 lengths being in multiples of 7 1/2 (seven and a half feet) 40,000 Rft

3 Mangalore pattern 1st class roofing flat tiles as per standard size and quality 50,000 Nos

4 Ridge tiles to suit the above roofing tiles 2,500 Nos

Acceptance or rejection of tenders will fully rest with the undersigned who does not bind himself to assign any reason thereof and who also reserves the right to split up the quantities of supply amongst the several tenderers or to reduce or enhance the quantity of the materials approximately estimated as the requirement For further particulars if any required, the Municipal Engineer may be addressed with required value of postal stamps for a reply

(Sd) N LAKSHMANA RAU
Municipal Commissioner

Edited, Printed and Published by A R Nagarajan at Sadhvi Press, D Subbiah Road Mysore